# ಸಂಪೂರ್ಣ ಶಿಷ್ಯತ್ವದ ಸುವಾರ್ತೆ

## 48 – ಪಾಠಗಳ ಕೋರ್ಸ್

## ಹಂತ 1-3

**ಆಂಡ್ರೂ ವ಼ಾಮಕ್**

ಮತ್ತು

**ಡೂಣ್ ಡಬ್ಲ್ಯೂ. ಕ್ರೊ**

Copyright © 2012, Andrew Wommack
Permission is granted to duplicate or reproduce
for discipleship purposes on the condition that
it is distributed free of charge.

Andrew Wommack Ministries
P.O. Box 3333
Colorado Springs, CO 80934-3333
www.awmi.net

The Complete Discipleship Evangelism
48-Lesson Course © 2012
Level 1 (16 Lessons)

Copyright © 2012, Andrew Wommack
Permission is granted to duplicate or reproduce for discipleship purposes on the condition that it is distributed free of charge.

Andrew Wommack Ministries Inc.
P.O. Box 3333, Colorado Springs, CO 80934-3333
www.awmi.net

Title in Kannada: ಸಂಪೂರ್ಣ ಶಿಷ್ಯತ್ವದ ಸುವಾರ್ತೆ – ಹಂತ 1

© 2020 Andrew Wommack Ministries India
info@awmindia.net www.awmindia.net

Item Code: KA 417-1/3

Published and sold by Charis Initiatives Pvt. Ltd.

# ಸಂಪೂರ್ಣ ಶಿಷ್ಯತ್ವದ ಸುವಾರ್ತೆ

# 48 ಪಾಠಗಳ ಕೋರ್ಸ್ ಅನುಕ್ರಮಣಿಕೆ

## ಹಂತ 1


| | |
|---|---|
| 1. ನಿತ್ಯಜೀವ | 5 |
| 2. ಕೃಪೆಯಿಂದ ರಕ್ಷಣೆ | 11 |
| 3. ಕೃಪೆಯಿಂದ ನೀತಿ | 19 |
| 4. ದೇವರೊಂದಿಗೆ ಸಂಬಂಧ | 25 |
| 5. ದೇವರ ಸ್ವಭಾವ | 33 |
| 6. ಪಶ್ಚಾತ್ತಾಪ | 40 |
| 7. ಸಮರ್ಪಣೆ | 49 |
| 8. ನೀರಿನ ದೀಕ್ಷಾಸ್ನಾನ | 56 |
| 9. ಕ್ರಿಸ್ತನಲ್ಲಿ ಗುರುತಿಸಿಕೊಳ್ಳುವುದು – ಭಾಗ 1 | 62 |
| 10. ಕ್ರಿಸ್ತನಲ್ಲಿ ಗುರುತಿಸಿಕೊಳ್ಳುವುದು – ಭಾಗ 2 | 69 |
| 11. ಯಾವ ಕ್ರೈಸ್ತನಾದರೂ ಪಾಪ ಮಾಡಿದಾಗ ಏನು ಸಂಭವಿಸುತ್ತದೆ | 75 |
| 12. ದೇವರ ವಾಕ್ಯದ ಪ್ರಾಮಾಣಿಕತೆ | 81 |
| 13. ದೇವರು ಅಪರಾಧಿಯಲ್ಲ | 88 |
| 14. ಆತ್ಮಭರಿತ ಜೀವನದ ಬಲ | 95 |
| 15. ಪವಿತ್ರಾತ್ಮನನ್ನು ಪಡೆಯುವುದು ಹೇಗೆ | 102 |
| 16. ಅನ್ಯಭಾಷೆಯಲ್ಲಿ ಮಾತನಾಡುವುದರ ಪ್ರಯೋಜನಗಳು | 109 |

# ಸಂಪೂರ್ಣ ಶಿಷ್ಯತ್ವದ ಸುವಾರ್ತೆ

## ಹಂತ 1

## ಪಾಠ 1

# ನಿತ್ಯಜೀವ

***ಆಂಡ್ರೂ ವ್ಹಾಮಕ್***

ಯೋಹಾನ 3:16 ಅತ್ಯಂತ ಚಿರಪರಿಚಿತವಾಗಿರುವ ವಾಕ್ಯಗಳಲ್ಲಿ ಒಂದು. ತಮ್ಮ ಚಿಕ್ಕ ವಯಸ್ಸಿನಿಂದಲೇ ಪ್ರತಿಯೊಬ್ಬರೂ ತಿಳಿದಿರುವಂತಹ ವಚನ ಇದೆಂಬಂತೆ ಕಾಣುತ್ತದೆಯಾದರೂ ಇದನ್ನು ನಿಜವಾಗಿಯೂ ಅಪಾರ್ಥಮಾಡಿಕೊಳ್ಳಲಾಗಿದೆ ಮತ್ತು ತಪ್ಪಾಗಿ ಅಳವಡಿಸಿಕೊಳ್ಳಲಾಗಿದೆ ಎಂದು ನಾನು ನಂಬುತ್ತೇನೆ. ಯೋಹಾನ 3:16 ಹೇಳುತ್ತದೆ, *"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು."*

ಸಾಂಪ್ರದಾಯಿಕವಾಗಿ ನೋಡಿದಲ್ಲಿ, ನಾವು ನಾಶವಾಗಬಾರದೆಂಬ ಕಾರಣದಿಂದ ಯೇಸು ಬಂದು, ನಮ್ಮ ಪಾಪಗಳಿಗಾಗಿ ಪ್ರಾಣವನ್ನು ಕೊಟ್ಟನು ಎಂದು ಬೋಧಿಸಲು ಈ ವಚನವನ್ನು ಉಪಯೋಗಿಸಲಾಗುತ್ತದೆ. ಈ ಸತ್ಯಕ್ಕೆ ಸಮಾನವಾಗಿ, ನಾವು ನಿತ್ಯಜೀವವನ್ನು ಹೊಂದಬೇಕೆಂಬ ನಿಜವಾದ ಉದ್ದೇಶದಿಂದಲೇ ಯೇಸು ಈ ಲೋಕಕ್ಕೆ ಬಂದು ಪ್ರಾಣಕೊಟ್ಟನು ಎಂದು ಈ ವಚನವು ಹೇಳುತ್ತಿದೆ. ನಾವು ನಿತ್ಯಜೀವಕ್ಕೆ ಸೇರದಂತೆ ನಮ್ಮ ಪಾಪಗಳು ನಮಗೆ ಅಡ್ಡಗೋಡೆಯಾಗಿತ್ತು. ನಮ್ಮ ಪಾಪಗಳಿಗಾಗಿ ಯೇಸು ಸತ್ತನು ಎಂಬುದು ಸತ್ಯ, ಮತ್ತು ನಾವು ಯೇಸುವಿನಲ್ಲಿ ನಂಬಿಕೆ ಇಡುವುದಾದರೆ ನಾವು ನಾಶವಾಗುವುದಿಲ್ಲ ಎನ್ನುವುದೂ ಸತ್ಯ, ಆದರೆ ಸತ್ಯವೇದದಲ್ಲಿ ಇದಕ್ಕಿಂತಲೂ ಮಿಗಿಲಾದ ಸಂಗತಿಯಿದೆ. ಸುವಾರ್ತೆಯ ನಿಜವಾದ ಸಂದೇಶವೆಂದರೆ, ದೇವರು ನಿಮಗೆ ನಿತ್ಯಜೀವವನ್ನು ನೀಡಲು ಬಯಸುತ್ತಾನೆ. ಈಗ ನಾನದನ್ನು ನಿಮಗೆ ವಿವರಿಸುತ್ತೇನೆ.

ಯೇಸುವನ್ನು ಶಿಲುಬೆಗೇರಿಸುವ ಹಿಂದಿನ ರಾತ್ರಿ, ಯೇಸು ಪ್ರಾರ್ಥಿಸುತ್ತಾ, ಹೀಗೆ ಹೇಳಿದನು, *"ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ, ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನು ತಿಳಿಯುವುದೇ ನಿತ್ಯಜೀವವು"* (ಯೋಹಾನ 17:3)

ನಿತ್ಯಜೀವವೆಂದರೆ ಒಬ್ಬನೇ ಸತ್ಯದೇವರಾಗಿರುವ ತಂದೆಯನ್ನು ತಿಳಿದುಕೊಳ್ಳುವುದು ಮತ್ತು ಆತನು ಕಳುಹಿಸಿಕೊಟ್ಟ ಯೇಸುವನ್ನು ತಿಳಿದುಕೊಳ್ಳುವುದು ಎಂದು ಇದು ತಿಳಿಸುತ್ತದೆ. ಅದೇ ನಿತ್ಯಜೀವವಾಗಿದೆ. ನಿತ್ಯಜೀವವೆಂದರೆ ಶಾಶ್ವತವಾಗಿ ಜೀವಿಸುವುದು ಎಂದು ಅನೇಕರು ಆಲೋಚಿಸುತ್ತಾರೆ. ಪ್ರತಿಯೊಬ್ಬ ಮನುಷ್ಯನು ಶಾಶ್ವತವಾಗಿ

ಜೀವಿಸುವನು. ಒಬ್ಬ ವ್ಯಕ್ತಿಯು ಸತ್ತಾಗ, ಅಂತವರು ಇನ್ನು ಮುಂದೆ ಅಸ್ತಿತ್ವದಲ್ಲಿ ಇರುವುದಿಲ್ಲ ಎನ್ನುವುದು ತಪ್ಪು ತಿಳುವಳಿಕೆಯಾಗಿದೆ. ಆತ್ಮ ಮತ್ತು ಪ್ರಾಣವು ದೇವರ ಬಳಿಗೆ ಹಿಂತಿರುಗುತ್ತವೆ. ಶರೀರವು ಸಮಾಧಿಯಲ್ಲಿ ಕೊಳೆಯುತ್ತದೆ. ಸತ್ಯವೇನೆಂದರೆ, ಲೋಕದ ಮೇಲೆ ಜೀವಿಸಿದ ಮನುಷ್ಯರೆಲ್ಲರೂ ಆತ್ಮೀಕ ರೂಪದಲ್ಲಿ ಜೀವಿಸುವುದನ್ನು ಮುಂದುವರೆಸುತ್ತಾರೆ. ಆದುದರಿಂದ, ನಿತ್ಯಜೀವ ಎಂದರೆ ಪ್ರತಿಯೊಬ್ಬರೂ ಶಾಶ್ವತವಾಗಿ ಜೀವಿಸುತ್ತಾರೆ ಎಂದು ಹೇಳುವುದು ಸಂಪೂರ್ಣ ಸತ್ಯವಲ್ಲ - ಎಲ್ಲರೂ ಶಾಶ್ವತವಾಗಿ ಜೀವಿಸುತ್ತಾರೆ. ದೇವರೊಂದಿಗೆ ನಿತ್ಯಜೀವವನ್ನು ಅನುಭವಿಸುವುದು ಎಲ್ಲರಿಗೂ ಕೊಡಲ್ಪಟ್ಟಿಲ್ಲ ಎನ್ನುವುದನ್ನು ಈ ವಚನವು ಬಹಳ ಸ್ಪಷ್ಟವಾಗಿ ತಿಳಿಸುತ್ತದೆ.

ಕೆಲವರು ಹೀಗನ್ನಬಹುದು, "ನರಕದಲ್ಲಿ ಶಾಶ್ವತವಾಗಿ ಇರುವಂತೆ, ಪರಲೋಕದಲ್ಲಿಯೂ ಶಾಶ್ವತವಾಗಿ ಜೀವಿಸುವುದೇ ನಿತ್ಯಜೀವ." ಆದರೆ ನಿತ್ಯಜೀವವೆನ್ನುವುದು ಯೇಸುವು ಯೋಹಾನ 17:3ರಲ್ಲಿ ಹೇಳಿರುವುದು ಮಾತ್ರವೇ ಆಗಿದೆ – ಅಂದರೆ ದೇವರನ್ನು ಹಾಗೂ ಯೇಸು ಕ್ರಿಸ್ತನನ್ನು ತಿಳಿದುಕೊಳ್ಳುವುದು. ಇದು ಬುದ್ಧಿಗೆ ತಿಳಿದಿರುವುದಕ್ಕಿಂತಲೂ ಮಿಗಿಲಾದದ್ದಾಗಿದೆ. ಈ ವಾಕ್ಯಭಾಗಗಳಲ್ಲಿ "ತಿಳಿಯುವುದು/ತಿಳಿದುಕೊಳ್ಳುವುದು" ಎಂದು ಉಪಯೋಗಿಸಿರುವ ಪದವು ನೀವು ಹೊಂದಬಹುದಾದ ಅತಿನಿಕಟವಾದ, ವೈಯಕ್ತಿಕ ಸಂಬಂಧದ ಕುರಿತಾಗಿ ವರ್ಣಿಸುತ್ತಿದೆ.

ಅದೆಷ್ಟೇ ಶ್ರೇಷ್ಠವೆನಿಸಿದರೂ ಸಹ, ರಕ್ಷಣೆಯ ನಿಜವಾದ ಉದ್ದೇಶವು ಪರಲೋಕದಲ್ಲಿ ಶಾಶ್ವತವಾಗಿ ಜೀವಿಸುವುದಲ್ಲ. ರಕ್ಷಣೆಯ ನಿಜವಾದ ಉದ್ದೇಶವೆಂದರೆ - ದೇವರಾದ ಕರ್ತನೊಂದಿಗೆ ನಿಕಟತೆಯನ್ನು ಹೊಂದಿಕೊಳ್ಳುವುದು, ಒಂದು ವೈಯಕ್ತಿಕ ಸಂಬಂಧವನ್ನು ಹೊಂದಿರುವುದು ಆಗಿದೆ. ತಮ್ಮ ಪಾಪಗಳನ್ನು ಕ್ಷಮಿಸಿಬಿಡುವಂತೆ ದೇವರ ಬಳಿ ಮೊರೆಯಿಟ್ಟ ಅನೇಕಾನೇಕ ಜನರು ಇರುವರು, ಆದರೆ ಅವರೆಂದೂ ದೇವರೊಂದಿಗೆ ನಿಕಟವಾಗಿರುವುದನ್ನು ಗುರಿಯಾಗಿಸಿಕೊಂಡಿರಲಿಲ್ಲ.

ರಕ್ಷಣೆಯ ನಿಜವಾದ ಉದ್ದೇಶವನ್ನು ವಿವರಿಸದಿರುವುದರಿಂದ ನಾವು ಸುವಾರ್ತೆಗೆ ಅಪಕಾರ ಮಾಡುತ್ತಿದ್ದೇವೆ. ಸುವಾರ್ತೆಯು ಕೇವಲ ಆಧ್ಯಾತ್ಮಿಕ ಸಂಗತಿಗಳೊಂದಿಗೆ ವ್ಯವಹರಿಸುವಂತಹುದು, ಇದು ನಮಗೆ ಭವಿಷ್ಯದ ನಿತ್ಯಜೀವದಲ್ಲಿ ಮಾತ್ರ ಪ್ರಯೋಜನವನ್ನು ನೀಡುತ್ತದೆ, ಎಂಬುದಾಗಿ ಮಾತ್ರ ತಿಳಿಸುವುದರಿಂದ ನಾವು ಜನರಿಗೆ ಸಹಾಯ ಮಾಡಿದಂತಾಗುವುದಿಲ್ಲ. ಇಂದು ಭೂಮಿಯಲ್ಲಿ ನರಕಯಾತನೆಯನ್ನು ಅನುಭವಿಸುತ್ತಿರುವಂತಹ ಜನರು ಜೀವಿಸುತ್ತಿರುವರು. ಅನೇಕರು ಖಿನ್ನತೆಯಲ್ಲಿ, ಬಡತನದಲ್ಲಿ ಜೀವಿಸುತ್ತಿರುವರು, ಘರ್ಷಣೆ, ತಿರಸ್ಕಾರ, ನೋವು ಮತ್ತು ಮುರಿದುಬಿದ್ದ ಮದುವೆಗಳಿಂದಾಗುವ ಯಾತನೆಯನ್ನು ಅನುಭವಿಸುತ್ತಿರುವರು. ಜನರು ಹೇಗೋ ದಿನದೂಡಲು ಪ್ರಯತ್ನಿಸುತ್ತಿರುವರು. ಅವರು ಸಮಸ್ಯೆಗಳ ಸಾಗರದಲ್ಲಿ ಮುಳುಗಿಹೋಗದಂತೆ ಒದ್ದಾಡುತ್ತಾ ಜೀವಿಸಲು ಪ್ರಯತ್ನಿಸುತ್ತಿರುವರು. ರಕ್ಷಣೆಯು ಭವಿಷ್ಯತ್ತಿಗೆ ಸಂಬಂಧಿಸಿದ ವ್ಯವಹಾರವಾಗಿದೆ ಎಂದು ತಿಳಿಯುವ ಕಾರಣ ಅನೇಕರು

ರಕ್ಷಿಸಲ್ಪಡುವ ತಮ್ಮ ನಿರ್ಧಾರವನ್ನು ಮುಂದೂಡುತ್ತಾರೆ, ಏಕೆಂದರೆ ಅವರು ಹೇಗಾದರೂ ಈದಿನವನ್ನು ದೂಡಬೇಕು ಎಂಬ ಪ್ರಯತ್ನದಲ್ಲಿ ಮಗ್ನರಾಗಿ ಬಿಡುತ್ತಾರೆ.

ಸತ್ಯವೇನೆಂದರೆ ಯೇಸುವು ಬಂದದ್ದು, ನಮ್ಮ ನಿತ್ಯತ್ವದ ಗತಿಯನ್ನು ಬದಲಿಸಿ, ನಾವು ನರಕದಲ್ಲಿ ಶಿಕ್ಷೆಯನ್ನೂ ಶಾಪವನ್ನೂ ಅನುಭವಿಸುವ ಸ್ಥಿತಿಗೆ ಬದಲಾಗಿ, ಪರಲೋಕದಲ್ಲಿ ಶಾಶ್ವತವಾಗಿ ಆಶೀರ್ವಾದ ಹೊಂದಿದವರಾಗಿ ಜೀವಿಸುವಂತೆ ಮಾಡಲು, ಮಾತ್ರವಲ್ಲದೆ, ನಮ್ಮನ್ನು ಇಂದಿನ ದುಷ್ಟ ಯುಗದೊಳಗಿಂದ (ಗಲಾತ್ಯ 1:4) ಬಿಡುಗಡೆ ಮಾಡಲು ಸಹ ಬಂದವನಾಗಿದ್ದಾನೆ. ಯೇಸುವು ನಿಮಗೆ ಇಂದು ತಂದೆಯಾದ ದೇವರೊಂದಿಗೆ ನಿಕಟತೆಯನ್ನು ಮತ್ತು ವೈಯಕ್ತಿಕವಾದ ಸಂಬಂಧವನ್ನು ನೀಡಲು ಬಂದನು.

ತನ್ನೊಂದಿಗಿನ ನಿಕಟವಾದ, ವೈಯಕ್ತಿಕ ಸಂಬಂಧವನ್ನು ನಿಮಗೆ ಹಿಂದಕ್ಕೆ ನೀಡುವುದಕ್ಕಾಗಿ ಯೇಸು ಬಂದನು. ಯೇಸು ನಿಮ್ಮನ್ನು ಪ್ರೀತಿಸುತ್ತಾನೆ. ಯೇಸು ನಿಮ್ಮನ್ನು ವ್ಯಕ್ತಿಗತವಾಗಿ ತಿಳಿದುಕೊಳ್ಳಲು ಬಯಸುತ್ತಾನೆ. ನೀವು ಇನ್ನಿತರ ಮೂಲದಿಂದ ಹೊಂದುವುದಕ್ಕಿಂತಲೂ ಶ್ರೇಷ್ಠವಾದ ಗುಣಮಟ್ಟದ ಜೀವಿತವನ್ನು ನಿಮಗೆ ನೀಡಬೇಕೆಂದು ಯೇಸುವು ಬಯಸುತ್ತಾನೆ.

ಯೇಸು ಯೋಹಾನ 10:10 ರಲ್ಲಿ ಹೀಗೆ ಹೇಳಿರುವನು: *"ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು."* ದೇವರು ನಿಮಗೆ ನಿತ್ಯಜೀವವನ್ನು ನೀಡಲು ಬಯಸುತ್ತಾನೆ. ದೇವರು ನಿಮಗೆ ಸಮೃದ್ಧಿಯಾದ ಜೀವವನ್ನು ನೀಡಬೇಕೆಂದು ಬಯಸುತ್ತಾನೆ, ಮತ್ತು ಇಂದು ನಿಮಗೆ ಅದರ ಅಗತ್ಯವಿದೆ- ಅದು ನಿಮಗೆ ಬೇಕೇ ಬೇಕು ಎಂದು ನಾನು ನಂಬುತ್ತೇನೆ. ಕ್ರಿಸ್ತನು ನಮ್ಮ ಪಾಪಗಳನ್ನು ಕ್ಷಮಿಸುವುದಕ್ಕೆ ಮಾತ್ರವೇ ಸಾಯಲಿಲ್ಲ, ನಿಮ್ಮನ್ನು ತನಗೆ ಹತ್ತಿರವಾಗಿ ತರುವುದಕ್ಕಾಗಿಯೂ ತನ್ನ ಪ್ರಾಣವನ್ನು ನೀಡಿದನು. ನಿಮಗೆ ಕರ್ತನು ತಿಳಿದಿಲ್ಲವಾದರೆ, ಆ ಉದ್ದೇಶಕ್ಕಾಗಿಯೇ ನೀವು ಆತನನ್ನು ತಿಳಿದುಕೊಳ್ಳುವ ಅಗತ್ಯವಿದೆ. ನೀವು ಈಗಾಗಲೇ ತಿರುಗಿ ಹುಟ್ಟಿರುವುದಾದರೆ, ನಿಮ್ಮ ಪಾಪಗಳು ಕ್ಷಮಿಸಲ್ಪಡುವುದಕ್ಕಿಂತ ಮುಂದೆ ಹೋಗಬೇಕಾಗಿದೆ ಮತ್ತು ತಂದೆಯೊಂದಿಗೆ ನಿತ್ಯಜೀವದಲ್ಲಿ ಪ್ರವೇಶಿಸಬೇಕಾದ ಅಗತ್ಯವಿದೆ.

## ನಿತ್ಯಜೀವದ ಕುರಿತಾದ ಸತ್ಯಾಂಶಗಳು

1. ಸುವಾರ್ತೆಯ ಉದ್ದೇಶವೇ ನಿತ್ಯಜೀವವಾಗಿದೆ. (ಯೋಹಾನ 3:16)

2. ನಿತ್ಯಜೀವ ಎಂದರೆ ದೇವರನ್ನು ತಿಳಿದುಕೊಳ್ಳುವುದಾಗಿದೆ. (ಯೋಹಾನ 17:3)

3. ದೇವರನ್ನು ತಿಳಿದುಕೊಳ್ಳುವುದು ಅಂದರೆ ಒಂದು ನಿಕಟವಾದ ಸಂಬಂಧವಾಗಿದೆ. (1 ಕೊರಿಂಥ 6:16–17)

4. ನಿತ್ಯಜೀವವು ಈಗಲೇ ಲಭ್ಯವಿದೆ. (1 ಯೋಹಾನ 5:12)

5. ದೇವರು ನಿಮ್ಮೊಂದಿಗೆ ಒಂದು ವೈಯಕ್ತಿಕವಾದ ಸಂಬಂಧವನ್ನು ಹೊಂದಲು ಬಯಸುತ್ತಾನೆ. (ಪ್ರಕಟನೆ 3:20)

## ಶಿಷ್ಯತ್ವದ ಪ್ರಶ್ನೆಗಳು

## ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ವಾಕ್ಯಗಳು

1. ಯೋಹಾನ 3:16ನ್ನು ಓದಿರಿ. ದೇವರು ಯೇಸುವನ್ನು ಈ ಲೋಕಕ್ಕೆ ಕಳುಹಿಸಿದುದರ ಉದ್ದೇಶವೇನಾಗಿತ್ತು?

**ಯೋಹಾನ 3:16 –** *"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು."*

2. ಸತ್ಯವೇದಕ್ಕನುಗುಣವಾಗಿ ಉಪಯೋಗಿಸಿರುವ "ತಿಳಿದುಕೊಳ್ಳುವುದು" ಎಂಬ ಪದವು ಒಬ್ಬ ವ್ಯಕ್ತಿಯೊಂದಿಗೆ ಒಂದು ನಿಕಟವಾದ, ವೈಯಕ್ತಿಕ ಸಂಬಂಧವನ್ನು ಹೊಂದುವುದಾಗಿದೆ (ಆದಿಕಾಂಡ 4:1). ಯೋಹಾ 17:3ನ್ನು ಓದಿರಿ. ಈ ವಚನದ ಪ್ರಕಾರದ ನಿತ್ಯಜೀವ/ಶಾಶ್ವತವಾದ ಜೀವ ಅಂದರೆ ಏನು?

**ಆದಿಕಾಂಡ 4:1 –** *"ಆ ಪುರುಷನು ತನ್ನ ಹೆಂಡತಿಯಾದ ಹವ್ವಳನ್ನು ಕೂಡಲು ಆಕೆ ಗರ್ಭಿಣಿಯಾಗಿ ಕಾಯಿನನನ್ನು ಹೆತ್ತು – ಯೆಹೋವನ ಅನುಗ್ರಹದಿಂದ ಗಂಡುಮಗುವನ್ನು ಪಡೆದಿದ್ದೇನೆ ಎಂದು ಹೇಳಿದಳು."*

**ಯೋಹಾನ 17:3 –** *"ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನು ತಿಳಿಯುವುದೇ ನಿತ್ಯಜೀವವು."*

3. 1 ಯೋಹಾನ 5:11–12ನ್ನು ಓದಿರಿ. ಈ ವಚನಗಳ ಪ್ರಕಾರ ನಿತ್ಯಜೀವವು ಯಾವಾಗ ಪ್ರಾರಂಭವಾಗುತ್ತದೆ?

**1 ಯೋಹಾನ 5:11–12 –** *"ಆ ಸಾಕ್ಷಿ ಯಾವದೆಂದರೆ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ.*

*ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ."*

4. ಯೋಹಾನ 10:10 ಓದಿರಿ. ಯಾವ ವಿಧವಾದ ಜೀವವನ್ನು ನೀಡಲು ಯೇಸು ಬಂದನು?

**ಯೋಹಾನ 10:10 –** *"ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು."*

5. ಒಂದು ಸಮೃದ್ಧಿಯಾದ ಜೀವದ ಗುಣಮಟ್ಟ ಅಥವಾ ಗುಣಲಕ್ಷಣಗಳ ಕುರಿತಾಗಿ ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿ.

6. ದೇವರು ತನ್ನ ಮಗನನ್ನು ಲೋಕದ ಪಾಪಗಳಿಗಾಗಿ ಪ್ರಾಣವನ್ನು ಅರ್ಪಿಸಿ, ಇದರಿಂದಾಗಿ ನಂಬುವ ನಮಗೆ ನಿತ್ಯಜೀವವನ್ನು ನೀಡುವುದಕ್ಕಾಗಿ ಆತನನ್ನು ಲೋಕಕ್ಕೆ ಕಳುಹಿಸಿದನು ಎಂದು ನೀವು ನಂಬುವಿರೇ?

7. ನಿತ್ಯಜೀವವೆಂಬುದು ಸಮಯದ ಅವಧಿ (ನಿತ್ಯತ್ವ) ಮಾತ್ರವೇ ಅಲ್ಲ ಆದರೆ ಇದು ಜೀವದ ಗುಣಮಟ್ಟ ಮತ್ತು ಪ್ರಮಾಣವೂ ಆಗಿದೆ ಎಂಬುದು ನಿಮಗೆ ಸ್ಪಷ್ಟವಾಗಿದೆಯೇ?

## ಉತ್ತರಗಳು

1. ಯೋಹಾನ 3:16 ನ್ನು ಓದಿರಿ. ದೇವರು ಯೇಸುವನ್ನು ಈ ಲೋಕಕ್ಕೆ ಕಳುಹಿಸಿದುದರ ಉದ್ದೇಶವೇನಾಗಿತ್ತು?

**ಲೋಕವನ್ನು ರಕ್ಷಿಸುವುದು, ಯೇಸುವಿನ ಮೇಲೆ ನಂಬಿಕೆ ಇಡುವ ಎಲ್ಲರ ಪಾಪದ ಶಿಕ್ಷೆಯನ್ನು ತೆಗೆದುಹಾಕಿ ಅವರಿಗೆ ನಿತ್ಯಜೀವವನ್ನು ನೀಡುವುದು ಆಗಿತ್ತು.**

2. ಸತ್ಯವೇದಕ್ಕನುಗುಣವಾಗಿ ಉಪಯೋಗಿಸಿರುವ "ತಿಳಿದುಕೊಳ್ಳುವುದು" ಎಂಬ ಪದವು ಒಬ್ಬ ವ್ಯಕ್ತಿಯೊಂದಿಗೆ ಒಂದು ನಿಕಟವಾದ, ವೈಯಕ್ತಿಕ ಸಂಬಂಧವನ್ನು ಹೊಂದುವುದು (ಆದಿಕಾಂಡ 4:1) ಎನ್ನುವ ಅರ್ಥ ಕೊಡುತ್ತದೆ. ಯೋಹಾ 17:3ನ್ನು ಓದಿರಿ. ಈ ವಚನದ ಪ್ರಕಾರ ನಿತ್ಯಜೀವ/ಶಾಶ್ವತವಾದ ಜೀವ ಎಂದರೆ ಏನು?

**ನಿತ್ಯಜೀವ ಎಂದರೆ ದೇವರನ್ನು ಮತ್ತು ಯೇಸು ಕ್ರಿಸ್ತನನ್ನು ತಿಳಿದುಕೊಳ್ಳುವುದು (ಶಾರೀರಿಕವಾಗಿ ಅಲ್ಲ ಆದರೆ ಆತ್ಮೀಕವಾಗಿ) ಎನ್ನುವ ಅರ್ಥ ಬರುತ್ತದೆ.**

3. 1 ಯೋಹಾನ 5:11–12ನ್ನು ಓದಿರಿ. ಈ ವಚನಗಳ ಪ್ರಕಾರ ನಿತ್ಯಜೀವವು ಯಾವಾಗ ಪ್ರಾರಂಭವಾಗುತ್ತದೆ?

**ನಮ್ಮ ಜೀವಿತದೊಳಗೆ ಮಗನನ್ನು (ಯೇಸು ಕ್ರಿಸ್ತನನ್ನು) ಸ್ವೀಕರಿಸಿದಾಗ.**

4. ಯೋಹಾನ 10:10 ಓದಿರಿ. ಯಾವ ವಿಧವಾದ ಜೀವವನ್ನು ನೀಡಲು ಯೇಸು ಬಂದನು?

**ಸಮೃದ್ಧಿಕರವಾದ ಜೀವ.**

5. ಒಂದು ಸಮೃದ್ಧಿಯಾದ ಜೀವ ಎಂಬುದರ ಗುಣಮಟ್ಟ ಅಥವಾ ಗುಣಲಕ್ಷಣಗಳ ಕುರಿತಾಗಿ ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿ.

**ಕಳ್ಳನು ಏನು ಮಾಡುವುದಕ್ಕೆ ಬರುತ್ತಾನೆ ಎಂದು ಯೇಸು ಹೇಳಿರುವನೋ ಅದಕ್ಕೆ ವಿರುದ್ಧವಾಗಿರುವಂತದ್ದು ಸಮೃದ್ಧಿಕರವಾದ ಜೀವವಾಗಿದೆ.**

6. ದೇವರು ತನ್ನ ಮಗನನ್ನು ಲೋಕದ ಪಾಪಗಳಿಗಾಗಿ ಪ್ರಾಣವನ್ನು ಅರ್ಪಿಸಲಿಕ್ಕಾಗಿ, ಇದರಿಂದಾಗಿ ನಂಬುವ ನಮಗೆ ನಿತ್ಯಜೀವವನ್ನು ನೀಡುವುದಕ್ಕಾಗಿ ಆತನನ್ನು ಲೋಕಕ್ಕೆ ಕಳುಹಿಸಿದನು ಎಂದು ನೀವು ನಂಬುವಿರೇ?

**ಹೌದು.**

7. ನಿತ್ಯಜೀವವೆಂಬುದು ಸಮಯದ ಅವಧಿ (ನಿತ್ಯತ್ವ) ಮಾತ್ರವೇ ಅಲ್ಲ ಆದರೆ ಇದು ಜೀವದ ಗುಣಮಟ್ಟ ಮತ್ತು ಪ್ರಮಾಣವೂ ಆಗಿದೆ ಎಂಬುದು ನಿಮಗೆ ಸ್ಪಷ್ಟವಾಗಿದೆಯೇ?

**ಹೌದು.**

ಪಾಠ 2

# ಕೃಪೆಯಿಂದ ರಕ್ಷಣೆ

*ಡ್ವೂಣ್ ಕ್ರೊ*

ಆತ್ಮೀಕ ಸತ್ಯಗಳನ್ನು ವಿವರಿಸುವಂತಹ ಸಾಮ್ಯಗಳನ್ನು, ಕಥೆಗಳನ್ನು ಯೇಸು ಅನೇಕ ಬಾರಿ ಉಪಯೋಗಿಸಿದನು. ಲೂಕ 18:9–14 ಹೀಗೆ ಪ್ರಾರಂಭವಾಗುತ್ತದೆ, *"ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸವಿಟ್ಟುಕೊಂಡು ಉಳಿದವರನ್ನು ಉದಾಸೀನಮಾಡುವಂಥ ಕೆಲವರಿಗೆ ಒಂದು ಸಾಮ್ಯವನ್ನು ಹೇಳಿದನು."* ಯೇಸು ಕೆಲವು ನಿರ್ಧಿಷ್ಟವಾದ ಜನರನ್ನು ಇಲ್ಲಿ ಉದ್ದೇಶಿಸಿ ಹೇಳುತ್ತಿದ್ದನು: ಅಂದರೆ ಈ ಜನರು ತಮ್ಮನ್ನೇ ತಾವು ನೀತಿವಂತರೆಂದು ಭರವಸೆ ಇಟ್ಟು, ಇದರಿಂದ ಬೇರೆಯವರನ್ನು ಉದಾಸೀನಮಾಡಿ, ಕೀಳಾಗಿ ಭಾವಿಸುತ್ತಿದ್ದರು. ತಾವು ಮಾಡುವಂತಹ ಸಂಗತಿಗಳಲ್ಲಿ ಭರವಸೆ ಇಡುವಂತಹ ಈ ಜನರ ಕುರಿತಾಗಿ ಯೇಸು ಈ ಸಾಮ್ಯವನ್ನು ಹೇಳಿದನು. ನಾವು ಅವರನ್ನು ಸ್ವ–ನೀತಿವಂತರು ಎಂದು ಕರೆಯಬಹುದು, ಇಲ್ಲಿ ಯೇಸು "ನಿನಗಿಂತ ನಾನೇ ಉತ್ತಮನು!" ಎಂದು ಹೇಳುತ್ತಾ ಬೇರೆಯವರನ್ನು ಉದಾಸೀನ ಮಾಡುವಂತವರ ಕುರಿತಾಗಿಯೇ ತಿಳಿಸುತ್ತಿರುವನು.

10ನೇ ವಚನದಲ್ಲಿ ಯೇಸು ಹೇಳುತ್ತಾನೆ, *"ಪ್ರಾರ್ಥನೆ ಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು; ಒಬ್ಬನು ಫರಿಸಾಯನು, ಒಬ್ಬನು ಸುಂಕದವನು."* ಇದನ್ನು ನಾವು ಇಂದಿನ ಆಧುನಿಕ ಭಾಷೆಯಲ್ಲಿ ಹೇಳುವುದಾದರೆ, ಅವರು ಪ್ರಾರ್ಥನೆ ಮಾಡಲು ಸಭೆಗೆ ಹೋದರು, ಅವರಲ್ಲಿ ಒಬ್ಬನು ಫರಿಸಾಯನಾಗಿದ್ದನು. ಫರಿಸಾಯರು ಬಹಳ ಧಾರ್ಮಿಕ ವ್ಯಕ್ತಿಗಳಾಗಿದ್ದರು. ಈ ಪದದ ನಿಜವಾದ ಅರ್ಥವು "ಪ್ರತ್ಯೇಕಿಸಲ್ಪಟ್ಟವರು" ಎಂಬುದಾಗಿದೆ, ಇವರು ಬಹಳ ಧಾರ್ಮಿಕ ಸ್ವಭಾವದವರಾಗಿದ್ದು, ಇವರು "ನನ್ನನ್ನು ಅಪವಿತ್ರಗೊಳಿಸಬೇಡ! ನನ್ನ ಹತ್ತಿರಕ್ಕೆ ಬರಬೇಡ. ನಾನು ಬೇರೆಯವರಂತೆ ಅಲ್ಲ! ನಾನು ಎಲ್ಲರಿಗಿಂತಲೂ ಉತ್ತಮನು!" ಎಂದು ಹೇಳುತ್ತಾರೆ. ಯೇಸು ಹೇಳಿದಂತಹ ಮತ್ತೊಬ್ಬ ವ್ಯಕ್ತಿ ಸುಂಕದವನು. ಸುಂಕದವರು ಸುಂಕವನ್ನು ವಸೂಲಿ ಮಾಡುವವರಾಗಿದ್ದರು ಮತ್ತು ಇವರು ಬಹಳ ದುಷ್ಟರು, ಮೋಸ ಮಾಡುವ, ವಂಚಿಸುವ ಪಾಪಿಗಳು ಎಂದು ಹೆಸರುಗೊಂಡಿದ್ದರು. ಯಾವುದೇ ರೀತಿಯಾದರೂ ಸುಂಕವನ್ನು ವಸೂಲಿ ಮಾಡುತ್ತಿದ್ದರು, ಬಹಳ ಹಣವನ್ನು ತಮ್ಮ ಜೇಬಿಗಿಳಿಸಿ ಕೊಳ್ಳುತ್ತಿದ್ದರು ಮತ್ತು ಇದರಲ್ಲಿ ಸ್ವಲ್ಪಭಾಗವನ್ನು ರೋಮ್ ಆಡಳಿತಕ್ಕೆ ನೀಡುತ್ತಿದ್ದರು. ಹಾಗಾಗಿ ಬೇರೆಯವರಿಂದ ಇವರನ್ನು ಒಳ್ಳೆಯವರು ಎಂಬಂತೆ ಯಾರೂ ದೃಷ್ಟಿಸುತ್ತಿರಲಿಲ್ಲ.

ಕಥೆಯು 11ನೇ ವಚನದಲ್ಲಿ ಹೀಗೆ ಮುಂದುವರೆಯುತ್ತದೆ, *"ಫರಿಸಾಯನು ನಿಂತುಕೊಂಡು ಪ್ರಾರ್ಥಿಸುವಾಗ ತನ್ನೊಳಗೆ - ದೇವರೇ, ಸುಲುಕೊಳ್ಳುವವರೂ ಅನ್ಯಾಯಗಾರರೂ ಹಾದರ ಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ"* ಅಂದನು. ಇದನ್ನು ನೀವು ಗಮನಿಸಬೇಕೆಂದು ಬಯಸುತ್ತೇನೆ. ಆತನು ಯಾರಿಗೆ ಪ್ರಾರ್ಥಿಸುತ್ತಿದ್ದನು? ಅವನು "ದೇವರೇ" ಎಂದು ಹೇಳುತ್ತಾ ಸರಿಯಾದ ಪದಗಳನ್ನು ಉಪಯೋಗಿಸುತ್ತಿದ್ದರೂ ಸಹ, ನಿಜವಾಗಿಯೂ ಅವನು ತನ್ನಷ್ಟಕ್ಕೆ ತಾನು ಪ್ರಾರ್ಥನೆ ಮಾಡುತ್ತಿದ್ದನು. ಆದರೆ ದೇವರು ಅವನ ಪ್ರಾರ್ಥನೆಯನ್ನು ಒಪ್ಪಿಕೊಳ್ಳಲಿಲ್ಲ, ಇದು ಏಕೆ ಎಂಬುದನ್ನು ನಾವು ಅನಂತರ ನೋಡಿಕೊಳ್ಳೋಣ. ಅವನು ಹೀಗೆ ಪ್ರಾರ್ಥಿಸಿದ್ದನ್ನು ಗಮನಿಸಿ, "ದೇವರೇ, ನಾನು ಬೇರೆ ಮನುಷ್ಯರಂತೆ ಅಲ್ಲ, ಅದಕ್ಕಾಗಿ ಸ್ತೋತ್ರ ಮಾಡುತ್ತೇನೆ." ಧಾರ್ಮಿಕ ವ್ಯಕ್ತಿಯಾಗಿದ್ದ ಈ ಫರಿಸಾಯನು, *"ನಾನು ಉಳಿದ ಜನರಂತೆ ಅಲ್ಲ. ನಾನು ಪಾಪಿಯಲ್ಲ. ಸುಲುಕೊಳ್ಳುವವರೂ, ಅನ್ಯಾಯಗಾರರೂ ಹಾದರ ಮಾಡುವವರಂತೆಯೂ ಅಲ್ಲ. ಈ ಸುಂಕದವನಂತೆಯೂ ಅಲ್ಲ"* ಅಂದನು. ಇಲ್ಲಿ ಇವನು ಬೇರೆಯವರನ್ನು ಉದಾಸೀನ ಮಾಡುವುದು, ಕೀಳಾಗಿ ಭಾವಿಸುವುದನ್ನು ನೋಡುವಿರಿ ಏಕೆಂದರೆ ಅವರೆಲ್ಲರಿಗಿಂತಲೂ ತಾನು ಉತ್ತಮನು ಎಂದು ಭಾವಿಸಿದ್ದನು.

12ನೇ ವಚನದಲ್ಲಿ, ಫರಿಸಾಯನು *"ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತೇನೆ; ನಾನು ಸಂಪಾದಿಸುವ ಎಲ್ಲದರಲ್ಲಿಯೂ ಹತ್ತರಲ್ಲೊಂದು ಪಾಲು ಕೊಡುತ್ತೇನೆ"* ಅಂದನು. "ನಾನು ಮಾಡುವುದನ್ನು ಗಮನಿಸುತ್ತಿರುವೆಯಾ?" ಎನ್ನುವ ಮನೋಭಾವ ಅವನದು. ಉಪವಾಸ ಎಂದರೆ ಏನೆಂದು ನಿಮಗೆ ಗೊತ್ತೇ? ವಾಸ್ತವದಲ್ಲಿ, ಊಟಮಾಡದೆ ಇರುವುದು ಎನ್ನುವ ಅರ್ಥ ಕೊಡುತ್ತದೆ. ಅವನು ಸಭೆಗೆ ಹಣವನ್ನೂ ಸಹ ನೀಡಿದನು. ಇವನು "ನನ್ನ ಬಗ್ಗೆ ಚಿಂತಿಸಬೇಡಿ! ನಾನು ಒಳ್ಳೆಯ ಜೀವನವನ್ನು ನಡೆಸುತ್ತಿರುವೆನು! ನಾನು ದಾನ ನೀಡುವೆನು! ನಾನು ಸಭೆಗೆ ಹಣವನ್ನು ನೀಡುವೆನು!" ಎಂದು ಹೇಳುವ ಜನರಲ್ಲಿ ಒಬ್ಬನಾಗಿದ್ದನು.

ಅನಂತರ ಸುಂಕದವನ ಕುರಿತು ನಾವು 13ನೇ ವಚನದಲ್ಲಿ ನೋಡುತ್ತೇವೆ: *"ಆದರೆ ಆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ - ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು."* ಅವನು ಎಲ್ಲಿದ್ದನು ಎಂಬುದನ್ನು ಗಮನಿಸಿ: *"ದೂರದಲ್ಲಿ ನಿಂತು".* ಅವನು ಸಭೆಯೊಳಗೂ ಸಹ ಹೋಗಿರಲಿಲ್ಲ. ಅವನಿಗೆ ತನ್ನ ಜೀವನದ ಕುರಿತಾಗಿ ಮತ್ತು ತಾನು ಮಾಡಿದ ಕ್ರಿಯೆಗಳ ಕುರಿತಾಗಿ ಬಹಳ ನಾಚಿಕೆಯಾಗಿತ್ತು. ಆದುದರಿಂದ ಅವನು ದೂರದಲ್ಲಿ ನಿಂತು, ಆಕಾಶದ ಕಡೆಗೆ ಕಣ್ಣೆತ್ತಿ ನೋಡದೆ ಇದ್ದನು, ಆದರೆ ತನ್ನ ಎದೆಯನ್ನು ಬಡಿದುಕೊಳ್ಳುತ್ತಿದ್ದನು. ಹಳೇ ಒಡಂಬಡಿಕೆಯಲ್ಲಿ ಎದೆಯನ್ನು ಬಡಿದುಕೊಳ್ಳುವುದು ಎಂದು ಹೇಳುವಾಗ, ಅನೇಕ ಬಾರಿ ಅವರು ತಮ್ಮ ಬಟ್ಟೆಗಳನ್ನು ಸಹ ಹರಿದುಕೊಳ್ಳುತ್ತಿದ್ದರು, ಇದು "ದೇವರೇ ನಾನು ಮಾಡಿದ ತಪ್ಪಿಗಾಗಿ ನನ್ನನ್ನು ಕ್ಷಮಿಸು!"

ಎಂದು ಹೇಳುವ ವಿಧಾನವಾಗಿತ್ತು. ಇದು ಪಶ್ಚಾತ್ತಾಪದ ಗುರುತಾಗಿದ್ದು, ಜಜ್ಜಲ್ಪಟ್ಟ ಹೃದಯವಾಗಿತ್ತು ಮತ್ತು ಮುರಿದ ಆತ್ಮವಾಗಿತ್ತು, ಇದನ್ನು ದೇವರು ನಿರಾಕರಿಸುತ್ತಿರಲಿಲ್ಲ. ಪಾಪಿಯಾಗಿದ್ದ ಈ ಸುಂಕದವನು, ದೇವರಿಗೆ ಕೂಗಿ ಹೇಳುತ್ತಾ ಹೀಗೆ ಪ್ರಾರ್ಥಿಸಿದನು "ದೇವರೇ ಪಾಪಿಯಾದ ನನ್ನನ್ನು ಕರುಣಿಸು."

14ನೇ ವಚವು ಹೀಗೆ ಹೇಳುತ್ತದೆ, *"ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು. ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಅಂದನು."* ಸುಂಕದವನು ದೇವರ ಮುಂದೆ ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ, ದೇವರೊಂದಿಗೆ ಸರಿಯಾಗಿ ಇರುವವನಾಗಿ, ದೇವರಿಂದ ಕ್ಷಮಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು. ಅವನನ್ನು ಏಕೆ ಕ್ಷಮಿಸಲಾಯಿತು? ಇವನು ದೇವರ ಮುಂದೆ ನೀತಿವಂತನಾಗಿ ತನ್ನ ಮನೆಗೆ ಹೋದನು, ಆದರೆ ಫರಿಸಾಯನಿಗೆ ಹಾಗಾಗಲಿಲ್ಲ, ಏಕೆ? ಏಕೆಂದರೆ ಫರಿಸಾಯನು, "ನಾನು ಉಳಿದವರಿಗಿಂತ ಉತ್ತಮನು! ನಾನು ಪಾಪಿಯಲ್ಲ! ನಾನು ಬೇರೆ ಮನುಷ್ಯರಂತಲ್ಲ" ಎಂದು ತನ್ನನ್ನು ತಾನು ಹೆಚ್ಚಿಸಿಕೊಂಡನು, ಆದರೆ ಸುಂಕದವನು ತನಗೆ ದೇವರ ಮುಂದೆ ನಿಂತುಕೊಳ್ಳಲು ಸಾಧ್ಯವಿಲ್ಲ, ದೇವರಿಗೆ ಕೊಡಲು ತನ್ನಲ್ಲಿ ಏನೂ ಇಲ್ಲ ಎಂಬುದನ್ನು ತಿಳಿದಿದ್ದನು. ಅವನು ಒಬ್ಬ ಪಾಪಿಯಾಗಿದ್ದನು. ಯೇಸು ನೀತಿವಂತರನ್ನು ರಕ್ಷಿಸುವುದಕ್ಕಲ್ಲ, ಆದರೆ ಪಾಪಿಗಳನ್ನು ರಕ್ಷಿಸುವುದಕ್ಕೆ ಬಂದನು ಎಂದು ಸತ್ಯವೇದವು ಹೇಳುತ್ತದೆ ಹಾಗೂ ನಾವೆಲ್ಲರೂ ಪಾಪ ಮಾಡಿರುವೆವು ಮತ್ತು ದೇವರ ಮಹಿಮೆಯನ್ನು ಕಳೆದುಕೊಂಡಿರುವೆವು. ಈ ಸುಂಕದವನು ತನ್ನನ್ನು ತಗ್ಗಿಸಿಕೊಂಡು, ಕ್ಷಮಾಪಣೆಯನ್ನು ಪಡೆದುಕೊಂಡನು.

ನಾವು ಕೃಪೆಯಿಂದ ದೊರಕುವ ರಕ್ಷಣೆಯು ಕುರಿತು ಮಾತನಾಡುತ್ತಿರುವೆವು. ಕೃಪೆ ಎನ್ನುವುದು ಬಹಳ ಅದ್ಭುತವಾದ ಪದವಾಗಿದೆ ಮತ್ತು ಇದರ ಅರ್ಥದ ಕುರಿತಾಗಿ ನಾನು ನಿಮಗೆ ಒಂದು ಒಪ್ಪತಕ್ಕ ಅರ್ಥವಿವರಣೆಯನ್ನು ನೀಡಲಿರುವೆನು, ಆದರೆ ಕೃಪೆ ಅನ್ನುವುದು ಇದಕ್ಕಿಂತಲೂ ಮಿಗಿಲಾದುದಾಗಿದೆ. ಹೊಸ ಒಡಂಬಡಿಕೆಯನ್ನು ಬರೆಯಲ್ಪಟ್ಟಿರುವ ಗ್ರೀಕ್ ಭಾಷೆಯಲ್ಲಿ, ಕೃಪೆಯನ್ನು 'ಕ್ಯಾರಿಸ್' ಎಂದು ಹೇಳಲಾಗಿದೆ. ಕೃಪೆಗೆ ಹೀಗೆ ಅರ್ಥ ನೀಡಬಹುದು - ಅರ್ಹತೆ ಇಲ್ಲದ ಜನರಿಗೆ, ಅವರು ಗಳಿಸದೆ ಇದ್ದರೂ ಕೊಡಲಾದ ದೇವರ ಉಚಿತವಾದ, ಯೋಗ್ಯತೆಗೆ ಮೀರಿದ ದೇವರ ದಯೆ. ಈ ಸುಂಕದವನಿಗೆ ದೇವರ ಬಳಿ ಯಾವುದೇ ಯೋಗ್ಯತೆ ಇರಲಿಲ್ಲ, ಆದರೆ ಅವನು ದೇವರ ದಯೆಯನ್ನು ಪಡೆದನು ಏಕೆಂದರೆ ಅವನು ತನ್ನನ್ನು ತಾನು ತಗ್ಗಿಸಿಕೊಂಡನು. ಗ್ರೀಕ್ ಭಾಷೆಯಲ್ಲಿ ಮತ್ತೊಂದು ಪದವಿದೆ, ಅದು 'ಕ್ಯಾರಿಸ್ಮ' ಎಂಬುದಾಗಿದೆ. ಇದಕ್ಕೆ ದೇವರ ಕೃಪೆಯ ಒಂದು ನಿರ್ದಿಷ್ಟವಾದ ತೋರ್ಪಡುವಿಕೆ ಅಥವಾ ಅದರ ರೂಪ ಎನ್ನುವ

ಅರ್ಥವಿದ್ದು ಈ ಸುಂಕದವನು ನೀತಿವಂತನೆಂದು ನಿರ್ಣಯಿಸಲ್ಪಟ್ಟನು, ದೇವರ ಮುಂದೆ ನಿಲ್ಲಲು ಅರ್ಹನಾದವನು ಎನ್ನುವ ವರವನ್ನು ಪಡೆದನು.

ರೋಮ 5:17 ಹೇಳುತ್ತದೆ, *"ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ."* ನನಗೆ ಮತ್ತು ನಿಮಗೆ ದೇವರ ಮುಂದೆ ಸರಿಯಾಗಿ ನಿಲ್ಲುವುದು ಎಂಬುದನ್ನು ದೇವರು ಒಂದು ವರವಾಗಿ ನೀಡುವನು ಮತ್ತು ನಮ್ಮ ವಾಕ್ಯಭಾಗದ ಪ್ರಕಾರ, ಸುಂಕದವನು ನೀತಿಯೆಂಬ ವರವನ್ನು ಪಡೆದನು, ಇದು ಯೇಸು ಕ್ರಿಸ್ತನ ಮೂಲಕ ಮಾತ್ರ ಬರುವಂತಹ ನೀತಿಯ ವರವಾಗಿದೆ. ಸತ್ಯವೇದವು ಯೋಹಾನ 1:17ರಲ್ಲಿ ಹೇಳುತ್ತದೆ, *"ಧರ್ಮಶಾಸ್ತ್ರವು ಮೋಶೆಯ ಮುಖಾಂತರ ಕೊಡಲ್ಪಟ್ಟಿತು; ಕೃಪೆಯೂ ಸತ್ಯವೂ ಯೇಸು ಕ್ರಿಸ್ತನ ಮುಖಾಂತರ ಬಂದವು."* ಈ ಕೃಪೆಯನ್ನು ಕೇವಲ ಒಂದು ವಿಧವಾದ ವ್ಯಕ್ತಿಗೆ ಮಾತ್ರ ನೀಡಲಾಗುವುದು - ತಮ್ಮನ್ನು ತಾವು ತಗ್ಗಿಸಿಕೊಳ್ಳುವವರು ಮತ್ತು ದೇವರ ಮುಂದೆ ನಿಲ್ಲಲು ತಮಗೆ ಯೋಗ್ಯತೆ ಇಲ್ಲವೆಂದು ದೇವರ ಕರುಣೆಗಾಗಿ ಮೊರೆಯಿಡುವಂತಹರು. ಇಂತಹ ಜನರು ದೇವರ ಕರುಣೆಯನ್ನು ಮತ್ತು ಕ್ಷಮಾಪಣೆಯನ್ನು ಹೊಂದಿಕೊಳ್ಳುವರು.

## ಶಿಷ್ಯತ್ವದ ಪ್ರಶ್ನೆಗಳು

## ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ವಾಕ್ಯಗಳು

1. ಲೂಕ 18:9ನ್ನು ಓದಿರಿ. ಸಾಮ್ಯ ಎಂದರೆ ಏನು?

**ಲೂಕ 18:9–12 –** *"ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸವಿಟ್ಟುಕೊಂಡು ಉಳಿದವರನ್ನು ಉದಾಸೀನಮಾಡುವಂಥ ಕೆಲವರಿಗೆ ಒಂದು ಸಾಮ್ಯವನ್ನು ಹೇಳಿದನು. [10] ಅದೇನಂದರೆ – ಪ್ರಾರ್ಥನೆ ಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು; ಒಬ್ಬನು ಫರಿಸಾಯನು, ಒಬ್ಬನು ಸುಂಕದವನು. [11] ಫರಿಸಾಯನು ನಿಂತುಕೊಂಡು ಪ್ರಾರ್ಥಿಸುವಾಗ ತನ್ನೊಳಗೆ - ದೇವರೇ, ಸುಲುಕೊಳ್ಳುವವರೂ ಅನ್ಯಾಯಗಾರರೂ ಹಾದರ ಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಆದದರಿಂದ ನಿನಗೆ ಸ್ತೋತ್ರಮಾಡುತ್ತೇನೆ. [12] ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತೇನೆ; ನಾನು ಸಂಪಾದಿಸುವ ಎಲ್ಲಾದರಲ್ಲಿಯೂ ಹತ್ತರಲ್ಲೊಂದು ಪಾಲುಕೊಡುತ್ತೇನೆ ಅಂದುಕೊಂಡನು.*

2. ಲೂಕ 18:9ನ್ನು ಓದಿರಿ. ಈ ಸಾಮ್ಯವನ್ನು ಯೇಸು ಯಾರ ಕುರಿತಾಗಿ ಉದ್ದೇಶಿಸಿ ಹೇಳಿರುವನು?

3. ಲೂಕ 18:9ನ್ನು ಓದಿರಿ (ವಚನದ ಕೊನೆಯ ಭಾಗ). ಸ್ವ–ನೀತಿಯ ಜನರು ಬೇರೆಯವರ ಕುರಿತಾಗಿ ಯಾವಾಗಲೂ ಒಂದು ವ್ಯತ್ಯಾಸವಾದ ಮನೋಭಾವನೆಯನ್ನು ಹೊಂದಿರುತ್ತಾರೆ. ಲೂಕ 18:9ರ ಪ್ರಕಾರ, ಆ ಮನೋಭಾವನೆ ಯಾವುದು?

1) ಇವರು ಬೇರೆಯವರನ್ನು ಇಷ್ಟಪಡುತ್ತಾರೆ.

2) ಇವರು ಬೇರೆಯವರನ್ನು ಉದಾಸೀನ ಮಾಡುತ್ತಾರೆ ಅಥವಾ ಕೀಳಾಗಿ ಕಾಣುತ್ತಾರೆ.

3) ಇವರು ಬೇರೆಯವರನ್ನು ಪ್ರೀತಿಸುತ್ತಾರೆ.

4. ಲೂಕ 18:10ನ್ನು ಓದಿರಿ. ಜನರು ಪ್ರಾರ್ಥಿಸುವುದಕ್ಕೆ ಹೋದರು; ಆಧುನಿಕ ಭಾಷೆಯಲ್ಲಿ, ಇವರು ಪ್ರಾರ್ಥನೆ ಮಾಡಲು ಎಲ್ಲಿಗೆ ಹೋದರು?

5. ಲೂಕ 18:10ನ್ನು ಓದಿರಿ. ಈ ಇಬ್ಬರು ಯಾರಾಗಿದ್ದರು?

6. ಲೂಕ 18:11ನ್ನು ಓದಿರಿ. ಫರಿಸಾಯನ ಪ್ರಾರ್ಥನೆ ಏನಾಗಿತ್ತು?

7. ಲೂಕ 18:12ನ್ನು ಓದಿರಿ. ಉಪವಾಸ ಅಂದರೆ ಏನು?

8. ಲೂಕ 18:12ನ್ನು ಓದಿರಿ. ಹತ್ತರಲ್ಲೊಂದು ಪಾಲು ಕೊಡುವುದು ಅಂದರೆ ಏನು?

9. ಲೂಕ 18:13ನ್ನು ಓದಿರಿ. ಸುಂಕದವನು ಎಲ್ಲಿ ನಿಂತಿದ್ದನು? ಏಕೆ?

**ಲೂಕ 18:13–14**- *ಆದರೆ ಆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ – ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು. [14] ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಅಂದನು.*

10. ಲೂಕ 18:13ನ್ನು ಓದಿರಿ. ಸುಂಕದವನು ತನ್ನ ತಲೆಯನ್ನು ತಗ್ಗಿಸಿ ಮೇಲಕ್ಕೆ ನೋಡಲಿಲ್ಲ, ಏಕೆ?

11. ಲೂಕ 18:13ನ್ನು ಓದಿರಿ. ಈ ಸುಂಕದವನ ಪ್ರಾರ್ಥನೆ ಏನಾಗಿತ್ತು?

12. ಲೂಕ 18:14ನ್ನು ಓದಿರಿ. ಇವರಿಬ್ಬರಲ್ಲಿ ಯಾವ ವ್ಯಕ್ತಿ ತನ್ನ ಮನೆಗೆ ಹೋಗುವಾಗ ದೇವರ ಮುಂದೆ ನೀತಿವಂತನೆಂದು ನಿರ್ಣಯಿಸಲ್ಪಟ್ಟನು?

13. ಲೂಕ 18:14ನ್ನು ಓದಿರಿ. ಸುಂಕದವನು ನೀತಿವಂತನೆಂದು ನಿರ್ಣಯಿಸಲ್ಪಟ್ಟನು ಆದರೆ ಫರಿಸಾಯನಿಗೆ ಹಾಗಾಗಲಿಲ್ಲ, ಏಕೆ?

14. ಲೂಕ 18:14ನ್ನು ಓದಿರಿ. ಈ ಸುಂಕದವನನ್ನು ದೇವರು ಕ್ಷಮಿಸಿದನೇ?

15. ರೋಮ 10:13ನ್ನು ಓದಿರಿ. ನೀವು ಈಗಲೇ ಮೊಣಕಾಲೂರಿ, ನಿಮ್ಮ ಹೃದಯದಿಂದ "ದೇವರೇ ಪಾಪಿಯಾದ ನನ್ನನ್ನು ಕರುಣಿಸು" ಎಂದು ಮೊರೆಯಿಡುವುದಾದರೆ, ದೇವರು ಸುಂಕದವನನ್ನು ಕ್ಷಮಿಸಿದಂತೆ ನಿಮ್ಮನ್ನು ಕ್ಷಮಿಸುವನೆಂದು ಭಾವಿಸುವಿರಾ?

**ರೋಮ 10:13-** *ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ಬರೆದದೆ.*

**1 ಯೋಹಾನ 1:8–9 –** *ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ. [9] ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು.*

## ಉತ್ತರಗಳು

1. ಲೂಕ 18:9ನ್ನು ಓದಿರಿ. ಸಾಮ್ಯ ಎಂದರೆ ಏನು?

**ಆತ್ಮೀಕವಾದ ಸತ್ಯವನ್ನು ತಿಳಿಸುವಂತಹ ಕಥೆಯೇ ಸತ್ಯವೇದಕ್ಕನುಗುಣವಾದ ಸಾಮ್ಯವಾಗಿದೆ**

2. ಲೂಕ 18:9ನ್ನು ಓದಿರಿ. ಈ ಸಾಮ್ಯವನ್ನು ಯೇಸು ಯಾರ ಕುರಿತಾಗಿ ಉದ್ದೇಶಿಸಿ ಹೇಳಿರುವನು?

**ತಾವು ನೀತಿವಂತರೆಂದು ತಮ್ಮಲ್ಲೇ ಭರವಸೆ ಇಟ್ಟವರ ಕುರಿತಾಗಿ; ಇದರಿಂದ ಅವರು ಸ್ವ–ನೀತಿವಂತರಾಗಿದ್ದರು**

3. ಲೂಕ 18:9ನ್ನು (ವಚನದ ಕೊನೆಯ ಭಾಗ) ಓದಿರಿ. ಸ್ವ–ನೀತಿವಂತಿಕೆಯುಳ್ಳ ಜನರು ಬೇರೆಯವರ ಕುರಿತಾಗಿ ಯಾವಾಗಲೂ ಒಂದು ವ್ಯತ್ಯಾಸವಾದ

ಮನೋಭಾವನೆಯನ್ನು ಹೊಂದಿರುತ್ತಾರೆ. ಲೂಕ 18:9ರ ಪ್ರಕಾರ, ಆ ಮನೋಭಾವನೆ ಯಾವುದು?

**ಇವರು ಬೇರೆಯವರನ್ನು ಉದಾಸೀನ ಮಾಡುತ್ತಾರೆ ಅಥವಾ ಕೀಳಾಗಿ ಕಾಣುತ್ತಾರೆ**

4. ಲೂಕ 18:10ನ್ನು ಓದಿರಿ. ಜನರು ಪ್ರಾರ್ಥಿಸುವುದಕ್ಕೆ ಹೋದರು; ಆಧುನಿಕ ಭಾಷೆಯಲ್ಲಿ, ಇವರು ಪ್ರಾರ್ಥನೆ ಮಾಡಲು ಎಲ್ಲಿಗೆ ಹೋದರು?

**ಸಭೆಗೆ ಅಥವ ಚರ್ಚಿಗೆ ಹೋದರು**

5. ಲೂಕ 18:10. ಈ ಜನರು ಯಾರಾಗಿದ್ದರು?

**ಫರಿಸಾಯನು ಮತ್ತು ಸುಂಕದವನು**

6. ಲೂಕ 18:11ನ್ನು ಓದಿರಿ. ಫರಿಸಾಯನ ಪ್ರಾರ್ಥನೆ ಏನಾಗಿತ್ತು?

**ದೇವರೇ, ಸುಲುಕೊಳ್ಳುವವರೂ ಅನ್ಯಾಯಗಾರರೂ ಹಾದರ ಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ.**

7. ಲೂಕ 18:12ನ್ನು ಓದಿರಿ. ಉಪವಾಸ ಅಂದರೆ ಏನು?

**ಆಹಾರವಿಲ್ಲದೆ ಇರುವುದು**

8. ಲೂಕ 18:12ನ್ನು ಓದಿರಿ. ದಶಮ ಭಾಗ ಕೊಡುವುದು ಅಂದರೆ ಏನು?

**ಸಂಪಾದನೆಯ ಹತ್ತರಲ್ಲೊಂದು ಭಾಗವನ್ನು ನೀಡುವುದು**

9. ಲೂಕ 18:13ನ್ನು ಓದಿರಿ. ಸುಂಕದವನು ಎಲ್ಲಿ ನಿಂತಿದ್ದನು? ಏಕೆ?

**ದೂರದಲ್ಲಿ**

10. ಲೂಕ 18:13ನ್ನು ಓದಿರಿ. ಸುಂಕದವನು ತನ್ನ ತಲೆಯನ್ನು ತಗ್ಗಿಸಿ ಮೇಲಕ್ಕೆ ನೋಡಲಿಲ್ಲ, ಏಕೆ?

**ನಾಚಿಕೆಗೊಳಗಾಗಿದ್ದನು**

ನೀವು ಎಂದಾದರೂ ತಪ್ಪು ಮಾಡಿದ್ದು, ಬೇರೆಯವರ ಮುಖವನ್ನು ನೋಡಲಾಗದೆ ಇರುವಂತಹುದನ್ನು ನೀವು ಮಾಡಿರುವಿರೇ?

11. ಲೂಕ 18:13ನ್ನು ಓದಿರಿ. ಈ ಸುಂಕದವನ ಪ್ರಾರ್ಥನೆ ಏನಾಗಿತ್ತು?

**ದೇವರೇ, ಪಾಪಿಯಾದ ನನ್ನನ್ನು ಕರುಣಿಸು!**

12. ಲೂಕ 18:14ನ್ನು ಓದಿರಿ. ಇವರಿಬ್ಬರಲ್ಲಿ ಯಾವ ವ್ಯಕ್ತಿ ತನ್ನ ಮನೆಗೆ ಹೋಗುವಾಗ ದೇವರ ಮುಂದೆ ನೀತಿವಂತನೆಂದು ನಿರ್ಣಯಿಸಲ್ಪಟ್ಟನು?

**ಸುಂಕದವನು**

13. ಲೂಕ 18:14ನ್ನು ಓದಿರಿ. ಸುಂಕದವನು ನೀತಿವಂತನೆಂದು ನಿರ್ಣಯಿಸಲ್ಪಟ್ಟನು ಆದರೆ ಫರಿಸಾಯನಲ್ಲ, ಏಕೆ?

**ಏಕೆಂದರೆ ಸುಂಕದವನು ತನ್ನನ್ನು ದೇವರ ಮುಂದೆ ತಗ್ಗಿಸಿಕೊಂಡನು. ಆದರೆ ಫರಿಸಾಯನು ಗರ್ವದಿಂದ ಕೂಡಿದವನಾಗಿದ್ದನು; ತನಗೆ ಒಬ್ಬ ರಕ್ಷಕನ ಅಗತ್ಯವಿದೆ ಎಂಬುದನ್ನು ಅವನು ಆಲೋಚಿಸಲಿಲ್ಲ.**

14. ಲೂಕ 18:14ನ್ನು ಓದಿರಿ. ಈ ಸುಂಕದವನನ್ನು ದೇವರು ಕ್ಷಮಿಸಿದನೇ?

**ಹೌದು**

15. ರೋಮ 10:13ನ್ನು ಓದಿರಿ. ನೀವು ಈಗಲೇ ಮೊಣಕಾಲೂರಿ, ನಿಮ್ಮ ಹೃದಯದಿಂದ "ದೇವರೇ ಪಾಪಿಯಾದ ನನ್ನನ್ನು ಕರುಣಿಸು" ಎಂದು ಮೊರೆಯಿಡುವುದಾದರೆ, ದೇವರು ಸುಂಕದವನನ್ನು ಕ್ಷಮಿಸಿದಂತೆ ನಿಮ್ಮನ್ನು ಕ್ಷಮಿಸುವನೆಂದು ಭಾವಿಸುವಿರೇ?

**ಹೌದು, ದೇವರು ನನ್ನನ್ನು ಕ್ಷಮಿಸಿ, ನನ್ನ ಎಲ್ಲಾ ಅನೀತಿಯಿಂದ ನನ್ನನ್ನು ಶುದ್ಧೀಕರಿಸುವನು.**

1 ಯೋಹಾನ 1:8–9ನ್ನು ನೋಡಿರಿ.

ಪಾಠ 3

# ಕೃಪೆಯಿಂದ ನೀತಿ

***ಡ್ರೂಣ್ ಕ್ರೊ***

ಇಂದು ನಾವು ಕೃಪೆಯಿಂದ ರಕ್ಷಣೆ ಎಂಬ ವಿಷಯದ ಕುರಿತಾಗಿ ತಿಳಿದುಕೊಳ್ಳೋಣ. ರೋಮ 3:21–23 ಹೇಳುತ್ತದೆ, *"ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರ ನಿಯಮಗಳಿಲ್ಲದೆ ಪ್ರಕಟವಾಗಿದೆ. ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ. ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚುಕಡಿಮೆ ಏನೂ ಇಲ್ಲ. ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ."*

ಈ ವಾಕ್ಯವು ಹೀಗೆ ಹೇಳುವುದನ್ನು ಗಮನಿಸಿ, *"ಧರ್ಮಶಾಸ್ತ್ರನಿಯಮಗಳಿಲ್ಲದ ನೀತಿಯು ಪ್ರಕಟವಾಗಿದೆ."* ಒಮ್ಮೆ ನಾನು ಒಬ್ಬ ವ್ಯಕ್ತಿಯನ್ನು ಹೀಗೆ ಕೇಳಿದೆ, "ನೀವು ಪರಲೋಕಕ್ಕೆ ಹೋಗಬೇಕೆಂದು ಬಯಸುವುದಾದರೆ ಏನು ಮಾಡಬೇಕೆಂದು ಆಲೋಚಿಸುವಿರಿ?" ಆಗ ಆ ವ್ಯಕ್ತಿಯು, ಇದಕ್ಕಾಗಿ ತಾನು ಹತ್ತು ಆಜ್ಞೆಗಳನ್ನು ಅನುಸರಿಸಬೇಕು, ತನ್ನ ಹೆಂಡತಿಗೆ ನಂಬಿಗಸ್ತನಾಗಿರಬೇಕು, ನೈತಿಕವಾದ ಜೀವನ ನಡೆಸಬೇಕು ಹಾಗೂ ಇನ್ನೂ ಅನೇಕ ಸಂಗತಿಗಳ ಕುರಿತಾಗಿ ತಿಳಿಸಿದನು. ಆಗ ನಾನು, "ನೀವು ಪರಲೋಕಕ್ಕೆ ಹೋಗಲು, ದೇವರ ಸಮ್ಮುಖದಲ್ಲಿರಲು ಅಥವಾ ಆತನ ರಾಜ್ಯದಲ್ಲಿರಲು ನೀವು ಏನು ಮಾಡಬೇಕೆಂದು ನಿಮಗೆ ತಿಳಿದಿದೆಯೇ? ನೀವು ದೇವರ ನೀತಿಗೆ ಸಮಾನವಾದ ನೀತಿಯನ್ನು ಹೊಂದಿರಬೇಕು" ಎಂದು ತಿಳಿಸಿದೆ. ಆಗ ಅವರು "ಕ್ಷಮಿಸಿ, ದೇವರ ನೀತಿಗೆ ಸಮಾನವಾದ ನೀತಿವಂತಿಕೆಯನ್ನು ಯಾರೂ ಹೊಂದಲು ಸಾಧ್ಯವಿಲ್ಲ. ಒಬ್ಬನೇ ವ್ಯಕ್ತಿಯು ಅಂತಹ ನೀತಿವಂತಿಕೆಯನ್ನು ಹೊಂದಿದ್ದನು. ಅದು ಯೇಸು ಕ್ರಿಸ್ತನು ಮಾತ್ರ!" ಎಂದು ಹೇಳಿದರು. ಆಗ ನಾನು "ಅದುವೇ ವಿಷಯ! ನೀವು ಸರಿಯಾಗಿ ಹೇಳಿದಿರಿ! ಬಹಿರಂಗವಾಗಿಯಾಗಲೀ ಅಥವಾ ಅಂತರಂಗದಲ್ಲಾಗಲೀ, ನಮ್ಮಲ್ಲಿ ಯಾರೊಬ್ಬರೂ ಧರ್ಮಶಾಸ್ತ್ರವನ್ನಾಗಲೀ ಅಥವಾ ಆಜ್ಞೆಗಳನ್ನಾಗಲೀ ಎಂದೂ ಅನುಸರಿಸಲು ಸಾಧ್ಯವಾಗಿಲ್ಲ, ಆದರೆ ದೇವರ ಮುಂದೆ ಅಂಗೀಕರಿಸಲ್ಪಡಲು ಆತನಿಗೆ ಸಮಾನವಾದ ನೀತಿಯನ್ನು ನಾವು ಹೊಂದಿಕೊಳ್ಳುವ ಅಗತ್ಯವಿದೆ" ಎಂದು ತಿಳಿಸಿದೆನು.

ಇದನ್ನೇ ಬಹು ಸ್ಪಷ್ಟವಾಗಿ 21–22ನೇ ವಚನಗಳಲ್ಲಿ ಹೇಳಲಾಗಿದೆ, *"ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರ ನಿಯಮಗಳಿಲ್ಲದೆ ಪ್ರಕಟವಾಗಿದೆ. ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು."* ನಿಮಗೆ ಮತ್ತು ನನಗೆ ದೇವರು ಅನುಗ್ರಹಿಸುವ ನೀತಿಯು "ಯೇಸು ಕ್ರಿಸ್ತನನ್ನು ನಂಬುವುದರ ಮೂಲಕ" ಬರುವ ನೀತಿಯಾಗಿದೆ ಮತ್ತು ಇದನ್ನು ನಂಬುವದರಿಂದ ನಂಬುವವರೆಲ್ಲರಿಗೆ ದೊರಕುತ್ತದೆ. ಎರಡು ವಿಧವಾದ ನೀತಿವಂತಿಕೆಗಳಿವೆ - ಮನುಷ್ಯನ ನೀತಿವಂತಿಕೆ ಮತ್ತು ದೇವರ ನೀತಿವಂತಿಕೆ. ಮನುಷ್ಯನ ನೀತಿವಂತಿಕೆಯೆಂದರೆ, ಅವರು ತೋರಿಸುವ ಬಹು ಉತ್ತಮವಾದ ನಡವಳಿಕೆ ಮತ್ತು ಅವರು ಮಾಡುವ ಸತ್ಕಾರ್ಯಗಳು, ಆದರೆ ಇವು ನಿಮ್ಮನ್ನು ದೇವರ ಮುಂದೆ ಮೆಚ್ಚತಕ್ಕವರನ್ನಾಗಿ ಮಾಡಲು ಸಾಧ್ಯವಿಲ್ಲ. ದೇವರ ನೀತಿವಂತಿಕೆಗೆ ಸಮಾನವಾದದ್ದು ನಿಮಗೆ ಅಗತ್ಯವಿದೆ, ಹಾಗೂ ಆತನು ಇದನ್ನು ನಿಮಗೆ ಅನುಗ್ರಹಿಸುತ್ತಿರುವನು - ಅದು ಧರ್ಮಶಾಸ್ತ್ರವಿಲ್ಲದ ದೇವರ ನೀತಿಯಾಗಿದೆ.

ಈ ವಾಕ್ಯಭಾಗವು, ಧರ್ಮಶಾಸ್ತ್ರ ನಿಯಮಗಳಿಲ್ಲದೆಯೆ ದೇವರು ತನ್ನ ಸ್ವಂತ ನೀತಿಯನ್ನು ಅನುಗ್ರಹಿಸುತ್ತಿರುವನು ಎಂದು ಹೇಳುತ್ತಿದೆ ಎಂಬುದಕ್ಕೆ ಗ್ರೀಕ್ ಭಾಷೆಯ ವ್ಯಾಕರಣದಲ್ಲಿ ನಿರ್ದಿಷ್ಟ ಪದಗಳಿಲ್ಲ. ಧರ್ಮಶಾಸ್ತ್ರಕ್ಕನುಸಾರವಾದ ನೀತಿಯೆಂದರೆ, ಕ್ರಿಯೆಯಿಂದ ಗಳಿಸಿದ ಮತ್ತು ಸಾಧಿಸಲಾದ ನೀತಿಯಾಗಿದ್ದು, ಇದರಿಂದ ದೇವರ ಮುಂದೆ ಮೆಚ್ಚಿಗೆಯನ್ನು ಪಡೆಯಬಹುದು ಎಂಬುದಾಗಿದೆ. ಇಂದಿನ ಲೋಕದ ಎಲ್ಲಾ ಧರ್ಮಗಳು, ನೀವು ದೇವರ ಮುಂದೆ ಅಂಗೀಕಾರವನ್ನು ಪಡೆಯಬೇಕಾದರೆ ನೀವು ಮಾಡಬೇಕು, ಸಂಪಾದಿಸಬೇಕು ಮತ್ತು ಸಾಧಿಸಬೇಕು ಎಂದು ಆಲೋಚಿಸುತ್ತದೆ. "ಸುವಾರ್ತೆ" ಎಂಬ ಪದವು "ಶುಭ ಸಂದೇಶ" ಎಂಬ ಅರ್ಥವನ್ನು ಹೊಂದಿದೆ ಮತ್ತು ಸುವಾರ್ತೆಯ ಶುಭ ಸಂದೇಶವೇನೆಂದರೆ, ಯೇಸು ಕ್ರಿಸ್ತನು ಒದಗಿಸಿರುವವುಗಳಲ್ಲಿ – ನಮ್ಮ ಪಾಪಗಳಿಗಾಗಿ ಆತನು ಶಿಲುಬೆಯ ಮೇಲೆ ತನ್ನ ಪ್ರಾಣಕೊಟ್ಟು ಧರ್ಮಶಾಸ್ತ್ರಕ್ಕೆ ಸಮಾನವಾದ ನೀತಿಯನ್ನು ನಮಗೆ ಕೊಡುವನು ಎಂದು ನಂಬುವವರೆಲ್ಲರಿಗೂ ದೇವರು ತನ್ನ ನೀತಿಯನ್ನು ಮತ್ತು ಅಂಗೀಕಾರವನ್ನು ಅನುಗ್ರಹಿಸಿರುವನು. ಧರ್ಮಶಾಸ್ತ್ರವನ್ನು ಹೊರತುಪಡಿಸಿ ನಾವು ಏನನ್ನೂ ಮಾಡದೆಯೇ, ಸಂಪಾದಿಸದೆಯೇ ಮತ್ತು ಸಾಧನೆ ಮಾಡದೆಯೇ ಪಡೆದುಕೊಂಡಿರುವ ದೇವರ ನೀತಿ ಇದಾಗಿದೆ; ಮತ್ತು ಇದು ಯೇಸು ಕ್ರಿಸ್ತನಲ್ಲಿರುವ ನಂಬಿಕೆಯ ಮೂಲಕ ಬರುವಂತಹುದಾಗಿದೆ.

22ನೇ ವಚನದಲ್ಲಿರುವ ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು ಎಂಬ ಮಾತನ್ನು ಗಮನಿಸಿ. ದೇವರು ತನ್ನ ನೀತಿಯನ್ನು ಪ್ರತಿಯೊಬ್ಬರಿಗೂ ಏಕೆ ಅನುಗ್ರಹಿಸುತ್ತಿರುವನು? *"ಹೆಚ್ಚುಕಡಿಮೆ ಏನೂ ಇಲ್ಲ. ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ."* ನೀವು ಪಾಪ ಮಾಡಿರುವಿರಿ, ನಾನು ಪಾಪ

ಮಾಡಿರುವೆನು ಮತ್ತು ನಾವೆಲ್ಲರೂ ದೇವರ ಮಟ್ಟವನ್ನು ಅಥವಾ ಪರಿಪೂರ್ಣತೆಯನ್ನು ಕಳೆದುಕೊಂಡವರಾಗಿದ್ದೆವು. ನಮ್ಮ ಪಾಪದ ನಿಮಿತ್ತವಾಗಿ, ನಮಗೆ ಅಗತ್ಯವಿರುವ ಅತಿದೊಡ್ಡ ಸಂಗತಿಯೆಂದರೆ ಅಂಗೀಕಾರ, ಸರಿಯಾದ ಸಂಬಂಧ, ಮತ್ತು ದೇವರ ಜೊತೆ ಸರಿಯಾಗಿರುವದು...ಇದನ್ನು ದೇವರು ಧರ್ಮಶಾಸ್ತ್ರದ ಮೂಲಕವಲ್ಲ ಬದಲಾಗಿ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ನೀಡಿರುವನು. ನಿಮ್ಮ ಕೆಲಸದಿಂದ, ನಿಮ್ಮ ಪ್ರಯತ್ನದಿಂದ, ನಿಮ್ಮ ಸಂಪಾದನೆಯಿಂದ, ಅಥವಾ ನಿಮ್ಮ ಪರಿಶ್ರಮದ ಸಾಧನೆಯಿಂದ ದೇವರ ನೀತಿಯು ದೊರಕುವುದಿಲ್ಲ; ಇದು ಕರ್ತನಾದ ಯೇಸು ಕ್ರಿಸ್ತನ ಮೇಲಿನ ನಂಬಿಕೆ, ಅವಲಂಬನೆ ಮತ್ತು ಭರವಸೆಯ ಮೂಲಕ ಬರುವಂತಹುದಾಗಿದೆ.

ಅಬ್ರಹಾಮನು (ಯೆಹೂದ್ಯರ ಮೂಲಪಿತೃ) ಹೇಗೆ ರಕ್ಷಿಸಲ್ಪಟ್ಟನು? ಸತ್ಯವೇದವು ಹೇಳುತ್ತದೆ ಅವನು ದೇವರಲ್ಲಿ ನಂಬಿಕೆ ಇಟ್ಟನು - ದೇವರು ತನಗೆ ಕೊಟ್ಟ ವಾಗ್ದಾನವನ್ನು ಅವನು ನಂಬಿದನು - ಆಗ ಅವನ ಲೆಕ್ಕಕ್ಕೆ ನೀತಿಯನ್ನು ಅನುಗ್ರಹಿಸಲಾಯಿತು. ಅಬ್ರಹಾಮನು ನಂಬಿದ್ದರಿಂದ ದೇವರ ಮುಂದೆ ನೀತಿವಂತನೆಂದು ನಿರ್ಣಯಿಸಲ್ಪಟ್ಟನು ಎಂಬ ಸತ್ಯವು ಆತನಿಗೆ ಮಾತ್ರ ಸೇರಿದ್ದಾಗಿರಲಿಲ್ಲ. ನಾವು ರೋಮ 3:21–22ರಲ್ಲಿ ಒಬ್ಬ ವ್ಯಕ್ತಿಯು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವರು ಎಂದು ಓದುತ್ತೇವೆ. ಕ್ರಿಸ್ತನು ಶಿಲುಬೆಯಲ್ಲಿ ನಮ್ಮ ಪಾಪಕ್ಕಾಗಿ ತನ್ನ ರಕ್ತವನ್ನು ಸುರಿಸಿ ಬೆಲೆ ತೆತ್ತ ನಿಮಿತ್ತ, ಕ್ರಿಸ್ತನ ಮೇಲೆ ನಂಬಿಕೆ ಇಡುವ ಎಲ್ಲರ ಲೆಕ್ಕಕ್ಕೆ ನೀತಿಯನ್ನು (ದೇವರ ಮುಂದೆ ಸರಿಯಾಗಿ ನಿಲ್ಲುವುದು) ನೀಡಲಾಗುತ್ತದೆ.

ರೋಮ 5:17 ಹೇಳುತ್ತದೆ, *"ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ."* ದೇವರು ನಿಮಗೆ ನೀತಿ ಎಂಬ ವರವನ್ನು ನೀಡುತ್ತಿರುವನು, ಅದು ಆತನ ಮುಂದೆ ನಿಲ್ಲುವಂತಹ ವರವಾಗಿದೆ. ಒಂದು ವರವನ್ನು (gift) ಕೊಡುವವರು ಅದಕ್ಕೆ ಬೆಲೆ ತೆರಬೇಕಾಗುತ್ತದೆ ಆದರೆ ಅದನ್ನು ಪಡೆಯುವ ವ್ಯಕ್ತಿಗೆ ಯಾವುದೇ ಖರ್ಚು ಬೀಳುವುದಿಲ್ಲ. ಒಂದುವೇಳೆ ನೀವು ನನಗೊಂದು ಉಡುಗೊರೆಯನ್ನು ಕೊಟ್ಟು, ಅದರ ಹಣವನ್ನು ನನ್ನ ಬಳಿ ಕೇಳಿದರೆ, ಆಗ ಅದು ಉಡುಗೊರೆ ಅಥವಾ gift ಆಗಿರುವುದಿಲ್ಲ, ಆದರೆ ನೀವು ಬೆಲೆ ಕೊಟ್ಟಿರಿ. ನಿಮಗೆ ಮತ್ತು ನನಗೆ ದೇವರು ನೀತಿಯನ್ನು ಒಂದು ವರವಾಗಿ (gift) ಲಭ್ಯವಾಗುವಂತೆ ಮಾಡಿದನು. ನೀತಿಯ ಈ ವರವು, ಬಿಡುಗಡೆ ಮತ್ತು ದೇವರ ಮುಂದೆ ನೀತಿವಂತರಾಗಿ ನಿಲ್ಲುವ ಅರ್ಹತೆಯು ಯೇಸು ಕ್ರಿಸ್ತನಲ್ಲಿರುವ ನಂಬಿಕೆಯ ಮೂಲಕ ದೊರಕುವಂತಹುದಾಗಿದೆ.

## ಶಿಷ್ಯತ್ವದ ಪ್ರಶ್ನೆಗಳು

## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ತೀತ 3:5ನ್ನು ಓದಿರಿ. ನಮಗೆ ಬೇಕಾಗಿರುವ ನೀತಿಯು ನಾವೇ ಉತ್ಪತ್ತಿ ಮಾಡಲು ಸಾಧ್ಯವಾಗುವಂತ ನೀತಿಯಾಗಿದೆಯೇ?

**ತೀತ 3:5 –** *ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟು ಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು.*

2. 2 ಕೊರಿಂಥ 5:21 ನ್ನು ಓದಿರಿ. ನಮಗೆ ಯಾವ ವಿಧವಾದ ನೀತಿಯ ಅಗತ್ಯವಾಗಿದೆ?

**2 ಕೊರಿಂಥ 5:21 –** *ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು*

3. ರೋಮ 3:22 ನ್ನು ಓದಿರಿ. ಈ ನೀತಿಯನ್ನು ನಾವು ಹೇಗೆ ಪಡೆಯಲು ಸಾಧ್ಯವಿದೆ?

**ರೋಮ 3:22 –** *ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚುಕಡಿಮೆ ಏನೂ ಇಲ್ಲ.*

4. ಫಿಲಿಪ್ಪ 3:9 ನ್ನು ಓದಿರಿ. ಧರ್ಮಶಾಸ್ತ್ರದ ನೀತಿ ಎಂತಹುದಾಗಿದೆ?

**ಫಿಲಿಪ್ಪಿ 3:9 –** *ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು ನೇಮನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನಾಶ್ರಯಿಸದೆ ಕ್ರಿಸ್ತನನ್ನು ನಂಬುವದರಿಂದ ದೊರಕುವಂಥ ಅಂದರೆ ಕ್ರಿಸ್ತನ ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವಂಥ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳಬೇಕೆಂಬದೇ.*

5. ಗಲಾತ್ಯ 2:21 ನ್ನು ಓದಿರಿ. ನಾವು ದೇವರ ಕೃಪೆಯನ್ನು ಹೇಗೆ ನಿರರ್ಥಕಪಡಿಸಬಹುದಾಗಿದೆ?

**ಗಲಾತ್ಯ 2:21** – *ನಾನು ದೇವರ ಕೃಪೆಯನ್ನು ನಿರರ್ಥಕಮಾಡುವದಿಲ್ಲ, ಕರ್ಮಮಾರ್ಗದಿಂದ ನೀತಿಯುಂಟಾಗುವದಾದರೆ ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲ.*

6. ರೋಮ 5:17ನ್ನು ಓದಿರಿ. ದೇವರ ನೀತಿಯನ್ನು ಯಾವ ರೂಪದಲ್ಲಿ ಪಡೆಯಬಹುದಾಗಿದೆ?

**ರೋಮ 5:17** - *ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.*

## ಉತ್ತರಗಳು

1. ತೀತ 3:5ನ್ನು ಓದಿರಿ. ನಮಗೆ ಬೇಕಾಗಿರುವ ನೀತಿಯು ನಾವು ಉತ್ಪತ್ತಿ ಮಾಡಲಾಗುವಂತಹ ನೀತಿಯಾಗಿದೆಯೇ?

**ಇಲ್ಲ**

2. 2 ಕೊರಿಂಥ 5:21ನ್ನು ಓದಿರಿ. ಯಾವ ವಿಧವಾದ ನೀತಿ ನಮಗೆ ಅಗತ್ಯವಾಗಿದೆ?

**ದೇವರ ನೀತಿ (ಕ್ರಿಸ್ತನ ಮೂಲಕ ಬರುವಂತಹುದು)**

3. ರೋಮ 3:22ನ್ನು ಓದಿರಿ. ಈ ನೀತಿಯನ್ನು ನಾವು ಹೇಗೆ ಪಡೆಯಬಲ್ಲೆವು?

**ಯೇಸು ಕ್ರಿಸ್ತನ ಮೇಲಣ ನಂಬಿಕೆಯ ಮೂಲಕ**

4. ಫಿಲಿಪ್ಪ 3:9ನ್ನು ಓದಿರಿ. ಧರ್ಮಶಾಸ್ತ್ರದ ನೀತಿ ಎಂತಹದಾಗಿದೆ?

**ನನಗೆ ಸಂಬಂಧಪಟ್ಟ ನೀತಿಯಾಗಿದೆ – ಅಂದರೆ ನಾನು ಮಾಡಬಲ್ಲಂತಹ ಕ್ರಿಯೆಯ ನೀತಿ**

5. ಗಲಾತ್ಯ 2:21ನ್ನು ಓದಿರಿ. ನಾವು ದೇವರ ಕೃಪೆಯನ್ನು ಹೇಗೆ ತಡೆಯಬಹುದಾಗಿದೆ?

***ಕ್ರಿಸ್ತನನ್ನು ಮತ್ತು ನಮ್ಮ ರಕ್ಷಣೆಗಾಗಿ ಆತನ ಮರಣದಲ್ಲಿ ಭರವಸೆ ಇಡುವುದರ ಬದಲು ನಮ್ಮ ಸ್ವಂತ ಸತ್ಕಾರ್ಯಗಳಿಂದ ರಕ್ಷಿಸಲ್ಪಡುವಂತೆ ಪ್ರಯತ್ನಿಸುವುದರಿಂದ ನಾವು ದೇವರ ಕೃಪೆಯನ್ನು ತಡೆಯುತ್ತೇವೆ.***

6. ರೋಮ 5:17ನ್ನು ಓದಿರಿ. ದೇವರ ನೀತಿಯನ್ನು ಯಾವ ರೂಪದಲ್ಲಿ ಪಡೆಯಬಹುದಾಗಿದೆ?

**ವರವಾಗಿ (ರುಜಿಣ) ಪಡೆಯಬಹುದಾಗಿದೆ**

## ಪಾಠ 4

# ದೇವರೊಂದಿಗೆ ಸಂಬಂಧ

*ಆಂಡ್ರೂ ವ಼ಾಮಕ್*

ಸಂಬಂಧದ ಕುರಿತಾದ ಅನೇಕ ಮುಖ್ಯವಾದ ವಿಷಯಗಳಲ್ಲಿ, ನಾವು ಯಾವ ವ್ಯಕ್ತಿಯೊಂದಿಗೆ ಸಂಬಂಧವನ್ನು ಹೊಂದುತ್ತಿದ್ದೇವೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಕೂಡ ಒಂದು ಹಾಗೂ ಇದು ದೇವರ ವಿಷಯದಲ್ಲಿಯೂ ಅನ್ವಯಿಸುವಂತಹ ವಿಷಯವಾಗಿದೆ. ಆತನೊಂದಿಗೆ ಒಂದು ಅತ್ಯುತ್ತಮವಾದ ಸಂಬಂಧವನ್ನು ಹೊಂದಿಕೊಳ್ಳಲು ದೇವರ ಮೂಲ ಸ್ವಭಾವ ಮತ್ತು ಗುಣವನ್ನು ಅರ್ಥಮಾಡಿಕೊಳ್ಳಬೇಕಾದ ಅಗತ್ಯವಿದೆ. ಅನೇಕರು ದೇವರೊಂದಿಗೆ ಒಂದು ಸಕಾರಾತ್ಮಕವಾದ ಸಂಬಂಧವನ್ನು ಹೊಂದಲಾರದ್ದಕ್ಕೆ ಅವರು ಆತನ ಸ್ವಭಾವ ಮತ್ತು ಗುಣವನ್ನು ಅರ್ಥಮಾಡಿಕೊಳ್ಳದಿರುವುದು ಕೂಡ ಒಂದು ಕಾರಣವಾಗಿರಬಹುದು. ಏದೇನ್ ತೋಟದಲ್ಲಿ ಸರ್ಪವು ಆದಾಮ ಮತ್ತು ಹವ್ವರನ್ನು ಶೋಧಿಸಿದ ಸಮಯದಲ್ಲಿ ಇದೇ ರೀತಿಯಾಗಿ ಸಂಭವಿಸಿತು. ಅವರು ಶೋಧನೆಯೊಳಗೆ ಹೊಕ್ಕರು, ದೇವರಿಗೆ ಅವಿಧೇಯರಾದರು ಮತ್ತು ಇಡೀ ಮಾನವಕುಲವನ್ನು ಪಾಪದೊಳಗೆ ಮುಳುಗಿಸಿದರು. ಅವರಿಗೆ ದೇವರ ಸ್ವಭಾವದ ಕುರಿತಾಗಿ ಇದ್ದ ತಿಳುವಳಿಕೆಯ ಕೊರತೆಯು ಶೋಧನೆಯ ಒಂದು ಭಾಗವೇ ಆಗಿತ್ತು.

ಅನೇಕರಿಗೆ ಆದಿಕಾಂಡ 3:1–5ರ ಕಥೆಯು ಚಿರಪರಿಚಿತವಾಗಿದೆ: *"ಯೆಹೋವದೇವರು ಉಂಟುಮಾಡಿದ ಎಲ್ಲಾ ಭೂಜಂತುಗಳಲ್ಲಿ ಸರ್ಪವು ಯುಕ್ತಿಯುಳ್ಳದ್ದಾಗಿತ್ತು. ಅದು ಸ್ತ್ರೀಯ ಬಳಿಗೆ ಬಂದು – ಏನವ್ವಾ, ತೋಟದಲ್ಲಿರುವ ಯಾವ ಮರದ ಹಣ್ಣನ್ನೂ ನೀವು ತಿನ್ನಬಾರದೆಂದು ದೇವರು ಅಪ್ಪಣೆಕೊಟ್ಟಿರುವುದು ನಿಜವೋ ಎಂದು ಕೇಳಲು ಸ್ತ್ರೀಯು – ತೋಟದಲ್ಲಿರುವ ಮರಗಳ ಹಣ್ಣುಗಳನ್ನು ನಾವು ತಿನ್ನಬಹುದು; ಆದರೆ ತೋಟದ ಮಧ್ಯದಲ್ಲಿರುವ ಈ ಮರದ ಫಲದ ವಿಷಯವಾಗಿ – ಇದನ್ನು ತಿನ್ನಲೂ ಕೂಡದು, ಮುಟ್ಟಲೂ ಕೂಡದು; ತಿಂದರೆ ಸಾಯುವಿರಿ ಎಂದು ದೇವರು ಹೇಳಿದ್ದಾನೆ ಅಂದಳು. ಆಗ ಸರ್ಪವು ಸ್ತ್ರೀಗೆ – ನೀವು ಹೇಗೂ ಸಾಯುವದಿಲ್ಲ; ನೀವು ಇದರ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು ತೆರೆಯುವವು; ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ; ಇದು ದೇವರಿಗೆ ಚೆನ್ನಾಗಿ ಗೊತ್ತುಂಟು ಅಂದಿತು."*

ದೇವರು ನಿಜವಾಗಿಯೂ ಒಳ್ಳೆಯ ದೇವರಲ್ಲ ಎಂದು ಸೈತಾನನು ಇಲ್ಲಿ ಕುತಂತ್ರದಿಂದ – ದೇವರು ಆದಾಮ ಮತ್ತು ಹವ್ವರಿಂದ ಯಾವುದೋ ಸಂಗತಿಯನ್ನು ಮುಚ್ಚಿಡಲು ಬಯಸುತ್ತಿದ್ದಾನೆ...ಅವರು ತಮ್ಮ ಸಂಪೂರ್ಣ ಸಾಮರ್ಥ್ಯದ ಮಟ್ಟವನ್ನು ಮುಟ್ಟುವುದು ಅವನಿಗೆ ಇಷ್ಟವಿಲ್ಲ...ಅವರು ತನ್ನಂತೆಯೇ ಆಗಬಾರದೆನ್ನುವುದು ಅವನ ಇರಾದೆ... ಮತ್ತು ಅವರಿಗೆ ತಡೆಯೊಡ್ಡುವ ಮತ್ತು ಅವರನ್ನು ನೋಯಿಸಬೇಕೆನ್ನುವ ಕಾರಣದಿಂದ ಒಳ್ಳೇದರ ಮತ್ತು ಕೆಟ್ಟದರ ಅರುಹನ್ನು ಉಂಟುಮಾಡುವ ಮರದ ಹಣ್ಣನ್ನು ತಿನ್ನಬಾರದೆಂಬ ನಿಯಮವನ್ನು ವಿಧಿಸಿದ್ದಾನೆ – ಎಂದು ಹೇಳುತ್ತಿರುವನು. ಒಂದರ್ಥದಲ್ಲಿ, ದೇವರು ಅವರಿಗೆ ಅತ್ಯುತ್ತಮವಾದದ್ದನ್ನು ನೀಡಲಿಲ್ಲ ಎಂದು ಹೇಳುವ ಮೂಲಕ, ಇಲ್ಲಿ ಸೈತಾನನು ನೇರವಾಗಿ ದೇವರ ಸ್ವಭಾವ ಮತ್ತು ಗುಣಕ್ಕೆ ವಿರುದ್ಧವಾಗಿ ನಿಂತು ಆತನನ್ನು ಕಳಂಕಗೊಳಿಸಲು ಬಂದನು. ಇದೇ ಸಂಗತಿಯು ಇಂದು ಜನರಿಗೆ ಸಂಭವಿಸುತ್ತಿದೆ. ಸೈತಾನನು ಅವರಿಗೆ, "ನೀನು ದೇವರನ್ನು ಹಿಂಬಾಲಿಸಿಕೊಂಡಿದ್ದು, ಆತನ ವಾಕ್ಯಕ್ಕೆ ವಿರೋಧವಾಗಿರುವ ಈ ಎಲ್ಲಾ ಸಂಗತಿಗಳನ್ನು ಅನುಭವಿಸದೆ ಹೋದಲ್ಲಿ, ನೀನು ಖಂಡಿತವಾಗಿಯೂ ನಿಜವಾದ ಸಂತೋಷವನ್ನು ಹೊಂದಲಾರೆ. ನಿನ್ನ ಜೀವನವು ಬಹಳ ಬೇಸರದಿಂದ ಕೂಡಿರುತ್ತದೆ...ಬದುಕಿ ಸತ್ತಂತೆ ಇರುತ್ತದೆ" ಎಂದು ಹೇಳುತ್ತಾನೆ. ಆದರೆ ದುಃಖಕರವಾದ ಸಂಗತಿಯೇನೆಂದರೆ, ಜನರು ಮಾದಕವಸ್ತುಗಳ ಸೇವನೆ, ಮದ್ಯಪಾನ, ಲೈಂಗಿಕತೆ, ತಿರುಗಿ ಬೀಳುವುದು, ಸ್ವಾರ್ಥದ ಬಯಕೆಗಳು, ಉದ್ಯೋಗದಲ್ಲಿ ಸಫಲತೆ ಮತ್ತು ಇನ್ನಿತರ ಸಂಗತಿಗಳನ್ನು ಪ್ರಯತ್ನಿಸಿ, ಅವು ಯಶಸ್ವಿಯಾಗದ ನಂತರ ಇದು ಸತ್ಯವಲ್ಲ ಎಂಬುದನ್ನು ಅನುಭವದಿಂದ ತಿಳಿದುಕೊಳ್ಳುತ್ತಾರೆ. ಇದನ್ನು ಅವರು ಗ್ರಹಿಸುವಷ್ಟರಲ್ಲಿ, ಅವರು ಈಗಾಗಲೇ ತಮ್ಮ ಜೀವನಗಳನ್ನು, ತಮ್ಮ ಕುಟುಂಬಗಳನ್ನು ಮತ್ತು ತಮ್ಮ ಆರೋಗ್ಯವನ್ನು ನಾಶಪಡಿಸಿಕೊಂಡಿರುತ್ತಾರೆ.

ನಿಜವಾಗಿಯೂ ದೇವರು ಒಳ್ಳೆಯವನೇ ಆಗಿದ್ದಾನೆ ಮತ್ತು ನಮ್ಮ ವಿಷಯದಲ್ಲಿ ಆತನ ಚಿತ್ತವು ಒಳ್ಳೆಯದೇ ಆಗಿರುತ್ತದೆ. ಆದರೆ ಏದೇನ್ ತೋಟದಲ್ಲಿ ಆದಾಮ ಮತ್ತು ಹವ್ವರ ವಿರುದ್ಧವಾಗಿ ಬಂದಂತಹ ಅದೇ ಶೋಧನೆಗಳನ್ನು ಇಂದು ಸೈತಾನನು ನಮ್ಮ ಮೇಲೆ ಉಪಯೋಗಿಸುತ್ತಾನೆ, ಅಂದರೆ ದೇವರು ಒಳ್ಳೆಯವನಲ್ಲ ಎಂಬುದೇ ಅವನ ಮೂಲ ಮಂತ್ರ.. ಸತ್ಯವೇದದ ಕುರಿತಾಗಿ ಅಲ್ಪಜ್ಞಾನವುಳ್ಳವರು ಇದನ್ನು ಬಹುಬೇಗನೇ ಅಂಗೀಕರಿಸುತ್ತಾರೆ ಏಕೆಂದರೆ ದೇವರು ಜನರನ್ನು ಬಹು ಕಠಿಣವಾಗಿ, ಕ್ರೂರವಾಗಿ ದಂಡಿಸಿದ ಘಟನೆಗಳು ಸತ್ಯವೇದದಲ್ಲಿವೆ. ಅರಣ್ಯಕಾಂಡ 15:32–36ರಲ್ಲಿ ಒಬ್ಬ ವ್ಯಕ್ತಿಯು ಸಬ್ಬತ್ ದಿನದಲ್ಲಿ ಕಟ್ಟಿಗೆಯನ್ನು ಕೂಡಿಸುತ್ತಿದುದರಿಂದ, ಅವನು ಸಬ್ಬತ್ ದಿನವನ್ನು ಲಕ್ಷಿಸಲಿಲ್ಲವೆಂದು ಅವನನ್ನು ಕಲ್ಲೆಸೆದು ಕೊಲ್ಲಲಾಯಿತು. ಇದು ಕಠಿಣವಾಗಿ ಕಂಡುಬರುತ್ತದೆ, ಆದರೆ ಇಂತಹ ಶಿಕ್ಷೆಗಳ ಹಿಂದೆ ಒಂದು ಉದ್ದೇಶವಿತ್ತು, ಆದರೆ ವಾಕ್ಯಗಳನ್ನು ಹಗುರವಾಗಿ ಓದುವಂತಹ ಜನರಿಗೆ ಇದರ ಸ್ಪಷ್ಟತೆಯ ಅರಿವಾಗುವುದಿಲ್ಲ. ಗಮನವಿಟ್ಟು ಅಧ್ಯಯನ ಮಾಡುವುದರಿಂದ ಪೌಲನು ರೋಮ 7:13ರಲ್ಲಿ ಹೇಳುವಂತೆ ನಾವು ಮಾಡಿದ ಪಾಪವು ಕೇವಲ ಪಾಪಸ್ವರೂಪವೇ ಆಗಿದೆ ಎಂಬುದನ್ನು ತಿಳಿದುಕೊಳ್ಳುವುದಂತೆ ಹಳೇ

ಒಡಂಬಡಿಕೆಯ ಧರ್ಮಶಾಸ್ತ್ರವು ಪ್ರಕಟಪಡಿಸುತ್ತದೆ. ತಮ್ಮ ಅಪರಾಧಗಳು ಎಷ್ಟು ಮಾರಕ ಸ್ವರೂಪವಾಗಿದ್ದವು ಮತ್ತು ಇದರಿಂದ ಅವರು ದೇವರಿಗೆ ವಿರುದ್ಧವಾಗಿ ದ್ರೋಹ ಮಾಡಿರುವವರು ಎಂಬುದನ್ನು ಜನರು ಗ್ರಹಿಸುತ್ತಿರಲಿಲ್ಲವಾದ್ದರಿಂದ, ಧರ್ಮಶಾಸ್ತ್ರದ ನಿಯಮಗಳು ಪಾಪದ ಅರಿವನ್ನು ಉಂಟುಮಾಡುವ ಉದ್ದೇಶವನ್ನು ಒಳಗೊಂಡಿತ್ತು. ಆದರೆ ಅವರು ತಮ್ಮಲ್ಲಿಯೇ ಹೋಲಿಕೆ ಮಾಡುವ ಮತ್ತು ಬೇರೆಯವರು ಮಾಡುತ್ತಿರುವ ಸಂಗತಿಗಳಿಂದ ತಮ್ಮ ಕ್ರಿಯೆಗಳನ್ನು ಅಳತೆ ಮಾಡುವ ತಪ್ಪನ್ನು ಮಾಡಿದರು.

ಯಾರಾದರೂ ಪಾಪ ಮಾಡಿಯೂ ಸಾಯದಂತೆ ಉಳಿದರೆ, ಆಗ ಅವರು ಈ ಪಾಪವು ಅಂತಹ ಕೆಟ್ಟದ್ದೇನಲ್ಲ ಎಂದು ಭಾವಿಸುತ್ತಾ, ತಮ್ಮ ನೈತಿಕಮಟ್ಟಗಳನ್ನು ಇನ್ನೂ ಕೆಳಗಿಳಿಸಿಕೊಳ್ಳುತ್ತಿದ್ದರು. ಅವರು ಸರಿ ಮತ್ತು ತಪ್ಪುಗಳ ನಡುವಿನ ನೈಜ ದೃಷ್ಟಿಕೋನವನ್ನು ಕಳೆದುಕೊಂಡಿದ್ದರು. ಹಾಗಾಗಿ ದೇವರು ಮನುಷ್ಯನನ್ನು ಪುನಃ ಸರಿಯಾದ ಮಟ್ಟಕ್ಕೆ ತರಬೇಕಾಗಿತ್ತು. ಸರಿಯಾಗಿ ಜೀವಿಸುವುದರ ಸೂಕ್ತ ಮಟ್ಟಕ್ಕೆ ತರುವುದರಿಂದ ಅವರು ಸೈತಾನನನ್ನು ಮತ್ತು ಅವನ ಶೋಧನೆಗಳನ್ನು ನಿರಾಕರಿಸುವುದು ಮಾತ್ರವಲ್ಲದೆ ತಪ್ಪಾದ ಆಯ್ಕೆಗಳನ್ನು ಮಾಡುವುದರ ಅಂತಿಮ ಫಲಿತಾಂಶವು ಏನಾಗಿರುತ್ತದೆ ಎಂಬುದನ್ನು ಗ್ರಹಿಸುವಂತೆ ಮಾಡಲು ಆತನು ಬಯಸಿದನು. ಹೀಗೆ ಮಾಡಿದಾಗ, ತಾನು ನೀಡಿರುವ ಧರ್ಮಶಾಸ್ತ್ರದ ಕಾರ್ಯರೂಪವನ್ನು ಅವರ ಮೇಲೆ ಹೇರಬೇಕಾಯಿತು.

ದೇವರು, "ನೀವು ಈ ಎಲ್ಲಾ ಸಂಗತಿಗಳನ್ನು ಮಾಡುವ ತನಕ, ನಾನು ನಿಮ್ಮನ್ನು ಅಂಗೀಕರಿಸಲಾರೆ ಅಥವಾ ನಿಮ್ಮನ್ನು ಪ್ರೀತಿಸಲಾರೆ" ಎಂದು ಹೇಳುವ ಉದ್ದೇಶಕ್ಕಾಗಿ ಹಳೇ ಒಡಂಬಡಿಕೆಯ ನಿಯಮಗಳನ್ನು ನೀಡಲಿಲ್ಲ. ಇದು ಆತನ ಸ್ವಭಾವವಲ್ಲ ಅಥವಾ ಗುಣವೂ ಅಲ್ಲ. ಬದಲಾಗಿ, ಸರಿ ಮತ್ತು ತಪ್ಪುಗಳ ಗ್ರಹಿಕೆಯನ್ನು ಜನರಲ್ಲಿ ತೀವ್ರಗೊಳಿಸಿ, ಇದರಿಂದ ತಮಗೊಬ್ಬ ರಕ್ಷಕನ ಅಗತ್ಯವಿದೆ ಎಂಬ ಸತ್ಯಾಂಶವನ್ನು ಅವರು ತಿಳಿದುಕೊಳ್ಳಲೆಂದು ಅವುಗಳನ್ನು ನೀಡಿದನು. ಇಲ್ಲುಂಟಾದ ಸಮಸ್ಯೆಯೇನೆಂದರೆ, ದೇವರು ತಮ್ಮನ್ನು ಪ್ರೀತಿಸಬೇಕಾದಲ್ಲಿ ತಾವು ಪರಿಪೂರ್ಣರಾಗಿರಬೇಕೆಂದು ನಿರೀಕ್ಷಿಸುತ್ತಾನೆ ಎಂದು ಜನರು ಭಾವಿಸಲಾರಂಭಿಸಿದರು, ಇದರಿಂದ ತಮ್ಮ ಕ್ರಿಯೆಗಳಿಗೆ ಸಮಾನವಾಗಿ ಆತನ ಪ್ರೀತಿಯು ಇದೆ ಎಂಬ ಮನೋಭಾವನೆ ಅವರಲ್ಲಿ ಮೂಡಿತು. ತಾವು ಎಲ್ಲವನ್ನೂ ಸರಿಯಾಗಿ ಮಾಡಲು ಪ್ರಯತ್ನಿಸುವ ತನಕ, ದೇವರು ತಮ್ಮನ್ನು ಅಂಗೀಕರಿಸುವುದಿಲ್ಲ ಎಂದು ಭಾವಿಸುವಂತಾಗಿದೆ ಆದರೆ ಸತ್ಯವೇದದಲ್ಲಿರುವ ಸಂದೇಶ ಇದಲ್ಲ.

ದೇವರ ಹೃದಯವು ಮಾನವಕುಲವನ್ನು ತನ್ನೊಂದಿಗೆ ಸಂಧಾನಪಡಿಸಿಕೊಳ್ಳಲು ಬಯಸುತ್ತಿದೆಯೇ ಹೊರತು ಅವರಿಗೆ ತೀರ್ಪು ಮಾಡುವುದಕ್ಕಾಗಿ ಅಲ್ಲ...ಅವರ ಮೇಲೆ ಪಾಪವನ್ನು ಹೊರಿಸುವುದಕ್ಕಾಗಿ ಅಲ್ಲ...ಅವರ ಪಾಪಗಳನ್ನು ಅವರ ವಿರುದ್ಧವಾಗಿ ಇಡುವುದಕ್ಕಾಗಿಯೂ ಅಲ್ಲ. ಸತ್ಯವೇದದಲ್ಲಿರುವ ಜನರ ವಿಷಯದಲ್ಲಿ ದೇವರ ಹೃದಯ ಇದೇ ಆಗಿತ್ತು ಮತ್ತು ಇಂದು ನಿಮಗಾಗಿಯೂ ಆತನ ಹೃದಯವು ಇದನ್ನೇ ಹೇಳುತ್ತಿದೆ. "ದೇವರು ಪ್ರೀತಿಸ್ವರೂಪಿ" (1 ಯೋಹಾನ 4:8) ಎಂಬ ದೇವರ ನಿಜವಾದ ಹೃದಯದ

ಕುರಿತಾಗಿ ನೀವು ಅರ್ಥಮಾಡಿಕೊಳ್ಳಬೇಕು. ಆತನಿಂದ ನಿಮ್ಮನ್ನು ಬೇರ್ಪಡಿಸುವಂತಹ ಪಾಪಗಳನ್ನು ಮತ್ತು ಯಾವುದೇ ಸಂಗತಿಯನ್ನು ಆತನು ತೆಗೆದುಹಾಕಲು ಬಯಸುತ್ತಾನೆ. ಇದನ್ನು ಆತನು ಈಗಾಗಲೇ ಯೇಸುವಿನ ಮೂಲಕ ಮಾಡಿರುವನು ಮತ್ತು ಇಂದು ಆತನು ನಿಮ್ಮ ಕ್ರಿಯೆಗಳ ಆಧಾರದ ಮೇಲೆಯಲ್ಲ ಆದರೆ ಯೇಸು ನಿಮ್ಮ ಪಾಪಗಳನ್ನು ಹೊತ್ತುಕೊಂಡನು ಎಂಬ ನಂಬಿಕೆ ಮತ್ತು ಅಂಗೀಕಾರದ ಆಧಾರದ ಮೇರೆಗೆ ನಿಮಗೆ ಸಂಬಂಧವನ್ನು ನೀಡಲು ಬಯಸುತ್ತಿರುವನು. ನಿಮ್ಮ ಜೀವನದಲ್ಲಿನ ಸೋಲುವಿಕೆಗಳ ನಡುವೆಯೂ ಸಹ ನೀವು ಇಂದು ದೇವರೊಂದಿಗೆ ಸಂಬಂಧವನ್ನು ಪಡೆದುಕೊಳ್ಳಬಹುದು. ನೀವು ಕರ್ತನಾದ ಯೇಸು ಕ್ರಿಸ್ತನಲ್ಲಿ ನಿಮ್ಮ ನಂಬಿಕೆಯನ್ನು ಇಡಬೇಕೆಂಬುದೇ ಆತನು ಬಯಕೆಯಾಗಿದೆ.

## ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಆದಿಕಾಂಡ 3:1 ನ್ನು ಓದಿರಿ. ಸೈತಾನನು ಹವ್ವಳಿಗೆ ಕೇಳಿದ ಪ್ರಶ್ನೆ ಯಾವುದು?

**ಆದಿಕಾಂಡ 3:1** - *ಯೆಹೋವ ದೇವರು ಉಂಟು ಮಾಡಿದ ಎಲ್ಲಾ ಭೂಜಂತುಗಳಲ್ಲಿ ಸರ್ಪವು ಯುಕ್ತಿಯುಳ್ಳದ್ದಾಗಿತ್ತು. ಅದು ಸ್ತ್ರೀಯ ಬಳಿಗೆ ಬಂದು - ಏನವ್ವಾ, ತೋಟದಲ್ಲಿರುವ ಯಾವ ಮರದ ಹಣ್ಣನ್ನೂ ನೀವು ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವದು ನಿಜವೋ? ಎಂದು ಕೇಳಿತು...*

2. ಆದಿಕಾಂಡ 2:17 ಮತ್ತು 3:3 ನ್ನು ಓದಿರಿ. ದೇವರು ಆದಾಮನಿಗೆ ಹೇಳಿದ ಮಾತುಗಳಿಗೆ ಹವ್ವಳು ಯಾವ ಪದ ಅಥವಾ ಪದಗಳನ್ನು ಸೇರಿಸಿ ಹೇಳಿದಳು?

**ಆದಿಕಾಂಡ 2:17** - *ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು.*

**ಆದಿಕಾಂಡ 3:3** - *ಆದರೆ ತೋಟದ ಮಧ್ಯದಲ್ಲಿರುವ ಈ ಮರದ ಫಲದ ವಿಷಯವಾಗಿ - ಇದನ್ನು ತಿನ್ನಲೂ ಕೂಡದು, ಮುಟ್ಟಲೂ ಕೂಡದು; ತಿಂದರೆ ಸಾಯುವಿರಿ ಎಂದು ಹೇಳಿದ್ದಾನೆ ಅಂದಳು.*

3. ಆದಿಕಾಂಡ 3:6 ನ್ನು ಓದಿರಿ. ದೇವರ ವಾಕ್ಯದ ಕುರಿತಾಗಿ ಸೈತಾನನು ಹವ್ವಳ ಮನಸ್ಸಿನಲ್ಲಿ ಸಂದೇಹವನ್ನು ನಿಧಾನವಾಗಿ ತುಂಬಲು ಯಶಸ್ವಿಯಾದಾಗ, ಈ ವಚನದಲ್ಲಿ ಆಕೆ ಏನು ಮಾಡಿದಳು?

**ಆದಿಕಾಂಡ 3:6 –** *ಆಗ ಸ್ತ್ರೀಯು - ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದು ಅದನ್ನು ತೆಗೆದುಕೊಂಡು ತಿಂದಳು. ಸಂಗಡ ಇದ್ದ ಗಂಡನಿಗೂ ಕೊಡಲು ಅವನೂ ತಿಂದನು.*

4. ಆದಿಕಾಂಡ 3:9–10ನ್ನು ಓದಿರಿ. ಆದಾಮ ಮತ್ತು ಹವ್ವಳು ಪಾಪ ಮಾಡಿದ ನಂತರ, ದೇವರು ಆಗಲೂ ಸಹ ಅವರೊಂದಿಗೆ ಸಂಭಾಷಣೆಯನ್ನು ಮಾಡಿದನೇ ಮತ್ತು ಅವರೊಂದಿಗೆ ಒಂದು ಸಂಬಂಧವನ್ನು ಹೊಂದುವುದನ್ನು ಮುಂದುವರೆಸಿದನೇ?

**ಆದಿಕಾಂಡ 3:9–10** - *ಯೆಹೋವ ದೇವರು ಮನುಷ್ಯನನ್ನು – ನೀನು ಎಲ್ಲಿರುತ್ತಿ ಎಂದು ಕೂಗಿ ಕೇಳಲು ಅವನು – ನೀನು ತೋಟದಲ್ಲಿ ಸಂಚರಿಸುವ ಸಪ್ಪಳವನ್ನು ನಾನು ಕೇಳಿ ಬೆತ್ತಲೆಯಾಗಿದ್ದೇನಲ್ಲಾ ಎಂದು ಹೆದರಿ ಅಡಗಿಕೊಂಡೆನು ಅಂದನು.*

5. ಆದಿಕಾಂಡ 3:22–24ನ್ನು ಓದಿರಿ. ದೇವರು ಆದಾಮ ಮತ್ತು ಹವ್ವಳನ್ನು ತೋಟದಿಂದ ಏಕೆ ಓಡಿಸಿದನು?

**ಆದಿಕಾಂಡ 3:22–24-** *ಮತ್ತು ಯೆಹೋವ ದೇವರು - ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ, ಇದರಿಂದ ಇವನು ಕೈಚಾಚಿ ಜೀವವೃಕ್ಷದ ಫಲವನ್ನು ಸಹ ತೆಗೆದು ತಿಂದು ಶಾಶ್ವತವಾಗಿ ಬದುಕುವವನಾಗಬಾರದು ಅಂದುಕೊಂಡು [23]ಅವನು ಉತ್ಪತ್ತಿಯಾದ ಭೂಮಿಯನ್ನೇ ವ್ಯವಸಾಯ ಮಾಡುವದಕ್ಕಾಗಿ ಅವನನ್ನು ಏದೆನ್ ತೋಟದಿಂದ ಹೊರಡಿಸಿಬಿಟ್ಟನು. [24]ಅದಲ್ಲದೆ ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುವದಕ್ಕೆ ಆತನು ಏದೆನ್ ವನದ ಪೂರ್ವದಿಕ್ಕಿನಲ್ಲಿ ಕೆರೂಬಿಯರನ್ನೂ, ಧಗಧಗನೆ ಪ್ರಜ್ವಲಿಸುತ್ತಾ ಸುತ್ತುವ ಕತ್ತಿಯನ್ನೂ, ಇರಿಸಿದನು.*

6. ಇದು ದೇವರ ಶಿಕ್ಷೆಯ ಬದಲಾಗಿ ಆತನ ಕರುಣೆ ಎಂದು ನಿಮಗೆ ಕಾಣುವುದೋ?

7. ರೋಮ 5:17ನ್ನು ಓದಿರಿ. ನಾವು ದೇವರ ಸಮೃದ್ಧಿಯಾದ ಕೃಪೆ ಮತ್ತು ನೀತಿಯನ್ನು ವರವಾಗಿ ಪಡೆಯಲು ಹೇಗೆ ಸಾಧ್ಯವಾಗುತ್ತದೆ?

1) ಇದನ್ನು ಕೊಂಡುಕೊಳ್ಳುವುದರಿಂದ
2) ಸಂಪಾದನೆ ಮಾಡುವುದರಿಂದ
3) ಪಡೆಯುವುದರಿಂದ

**ರೋಮಾಪುರದವರಿಗೆ 5:17** - *ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ, ನೀತಿಯೆಂಬ ವರವನ್ನೂ, ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.*

8. ರೋಮ 6:23 ನ್ನು ಓದಿರಿ. ನಾವು ಪಾಪ ಮಾಡಿದಾಗ ವಾಸ್ತವದಲ್ಲಿ ನಾವು ಯಾವುದಕ್ಕೆ ಅರ್ಹರಾಗಿದ್ದೇವೆ?

**ರೋಮಾಪುರದವರಿಗೆ 6:23** - *ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ.*

9. ಇದರ ಬದಲಾಗಿ ಕೃಪೆಯ ನಿಮಿತ್ತ ದೇವರು ನಮಗೆ ಏನನ್ನು ನೀಡುವನು?

10. ರೋಮ 10:3ನ್ನು ಓದಿರಿ. ನಾವು ದೇವರ ಮುಂದೆ ನಮ್ಮ ಸ್ವನೀತಿಯನ್ನು ಸ್ಥಾಪಿಸಲು ಪ್ರಯತ್ನಿಸುವುದಾದರೆ, ನಾವು ಏನು ಮಾಡುವುದರಲ್ಲಿ ಸೋಲುತ್ತೇವೆ?

**ರೋಮ 10:3** – *ಅವರು ದೇವರಿಂದ ದೊರಕುವ ನೀತಿಯನ್ನರಿಯದೆ ಸ್ವನೀತಿಯನ್ನೇ ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಾ ಇದ್ದದರಿಂದ ದೇವರ ನೀತಿಗೆ ಅಧೀನರಾಗಲಿಲ್ಲ.*

11. 1 ಯೋಹಾನ 1:9 ಮತ್ತು ರೋಮ 4:3 ಓದಿರಿ. ನಾವು ದೇವರಲ್ಲಿ ಮಾತ್ರ ನಂಬಿಕೆ ಇಡುವುದಾದರೆ ಆತನ ವಿರುದ್ಧವಾಗಿ ಮಾಡಿರುವ ನಮ್ಮ ಎಲ್ಲಾ ಪಾಪಗಳನ್ನು ಮತ್ತು ದ್ರೋಹಗಳನ್ನು ಏನು ಮಾಡುವೆನೆಂದು ದೇವರು ವಾಗ್ದಾನ ಮಾಡಿರುವನು?

**1 ಯೋಹಾನ 1:9** – *ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು.*

**ರೋಮ 4:3** - *ಇದರ ವಿಷಯದಲ್ಲಿ ಶಾಸ್ತ್ರವು ಹೇಳುವದನ್ನು ಆಲೋಚಿಸಿರಿ. ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು ಎಂದು ಹೇಳುತ್ತದೆ.*

12. ಇದು ದೇವರ ಗುಣಲಕ್ಷಣದ ಕುರಿತಾಗಿ ನಿಮಗೆ ಏನು ಹೇಳುತ್ತದೆ?

## ಉತ್ತರಗಳು

1. ಆದಿಕಾಂಡ 3:1ನ್ನು ಓದಿರಿ. ಸೈತಾನನು ಹವ್ವಳಿಗೆ ಕೇಳಿದ ಪ್ರಶ್ನೆ ಯಾವುದು?

**“ಏನವ್ವಾ, ತೋಟದಲ್ಲಿರುವ ಯಾವ ಮರದ ಹಣ್ಣನ್ನೂ ನೀವು ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವದು ನಿಜವೋ?”**

2. ಆದಿಕಾಂಡ 2:17 ಮತ್ತು 3:3ನ್ನು ಓದಿರಿ. ದೇವರು ಆದಾಮನಿಗೆ ನಿಜವಾಗಿಯೂ ಹೇಳಿದ ಮಾತುಗಳಿಗೆ ಹವ್ವಳು ಯಾವ ಪದ ಅಥವಾ ಪದಗಳನ್ನು ಸೇರಿಸಿ ಹೇಳಿದಳು?

**ಅದನ್ನು ಮುಟ್ಟಲೂ ಬಾರದು**

3. ಆದಿಕಾಂಡ 3:6ನ್ನು ಓದಿರಿ. ಸೈತಾನನು ನಿಧಾನವಾಗಿ ದೇವರ ವಾಕ್ಯದ ಕುರಿತಾಗಿ ಹವ್ವಳ ಮನಸ್ಸಿನಲ್ಲಿ ಸಂದೇಹವನ್ನು ತುಂಬಲು ಯಶಸ್ವಿಯಾದಾಗ, ಈ ವಚನದಲ್ಲಿ ಆಕೆ ಏನು ಮಾಡಿದಳು?

**ಅದನ್ನು ತೆಗೆದುಕೊಂಡು ತಿಂದಳು**

4. ಆದಿಕಾಂಡ 3:9–10ನ್ನು ಓದಿರಿ. ಆದಾಮ ಮತ್ತು ಹವ್ವಳು ಪಾಪ ಮಾಡಿದ ನಂತರ, ದೇವರು ಆಗಲೂ ಸಹ ಅವರೊಂದಿಗೆ ಸಂಭಾಷಣೆಯನ್ನು ಮಾಡಿದನೇ ಮತ್ತು ಅವರೊಂದಿಗೆ ಒಂದು ಸಂಬಂಧವನ್ನು ಹೊಂದುವುದನ್ನು ಮುಂದುವರೆಸಿದನೇ?

**ಹೌದು**

5. ಆದಿಕಾಂಡ 3:22–24ನ್ನು ಓದಿರಿ. ದೇವರು ಆದಾಮ ಮತ್ತು ಹವ್ವಳನ್ನು ತೋಟದಿಂದ ಏಕೆ ಓಡಿಸಿದನು?

**ಅವರು ಜೀವವೃಕ್ಷದ ಹಣ್ಣನ್ನು ತಿಂದು ಪಾಪದಲ್ಲಿಯೇ ಶಾಶ್ವತವಾಗಿ ಜೀವಿಸಬಾರದು ಎನ್ನುವ ಕಾರಣದಿಂದಾಗಿ**

6. ಇದು ದೇವರು ಕೊಟ್ಟ ಶಿಕ್ಷೆಯಲ್ಲ ಬದಲಾಗಿ ಆತನ ಕರುಣೆಯಾಗಿದೆ ಎಂದು ನಿಮಗೆ ಕಾಣುವುದೇ?

**ಹೌದು**

7. ರೋಮ 5:17ನ್ನು ಓದಿರಿ. ನಾವು ದೇವರ ಸಮೃದ್ಧಿಯಾದ ಕೃಪೆ ಮತ್ತು ನೀತಿಯ ವರವನ್ನು ಹೇಗೆ ಪಡೆಯಲು ಸಾಧ್ಯ?

**3) ಇದನ್ನು ಸ್ವೀಕರಿಸುವುದರಿಂದ**

8. ರೋಮ 6:23ನ್ನು ಓದಿರಿ.  ನಾವು ಪಾಪ ಮಾಡಿದಾಗ ನಿಜವಾಗಿಯೂ ನಾವು ಯಾವುದಕ್ಕೆ ಅರ್ಹರಾಗಿದ್ದೇವೆ?

**ಮರಣ**

9. ಇದರ ಬದಲಾಗಿ ಕೃಪೆಯ ನಿಮಿತ್ತ ದೇವರು ನಮಗೆ ಏನನ್ನು ನೀಡುವನು?

**ಯೇಸುವಿನಲ್ಲಿ ನಿತ್ಯಜೀವ**

10. ರೋಮ 10:3 ನ್ನು ಓದಿರಿ. ನಾವು ದೇವರ ಮುಂದೆ ನಮ್ಮ ಸ್ವನೀತಿಯನ್ನು ಸ್ಥಾಪಿಸಲು ಪ್ರಯತ್ನಿಸುವುದಾದರೆ, ನಾವು ಏನು ಮಾಡುವುದರಲ್ಲಿ ಸೋಲುತ್ತೇವೆ?

**ಯೇಸುವೇ ನಮ್ಮ ನೀತಿಯೆಂದು ಆತನಿಗೆ ಅಧೀನರಾಗುವುದರಲ್ಲಿ ಸೋಲುತ್ತೇವೆ**

11. 1 ಯೋಹಾನ 1:9  ಮತ್ತು ರೋಮ 4:3 ಓದಿರಿ.  ನಾವು ದೇವರಲ್ಲಿ ಮಾತ್ರ ನಂಬಿಕೆ ಇಡುವುದಾದರೆ ಆತನ ವಿರುದ್ಧವಾಗಿ ಮಾಡಿರುವ ನಮ್ಮ ಎಲ್ಲಾ ಪಾಪಗಳನ್ನು ಮತ್ತು ದ್ರೋಹಗಳನ್ನು ಏನು ಮಾಡುವೆನೆಂದು ದೇವರು ವಾಗ್ದಾನ ಮಾಡಿರುವನು?

**ಅವುಗಳನ್ನು ಅಳಿಸಿಬಿಡುತ್ತಾನೆ, ಮರೆಯುತ್ತಾನೆ ಮತ್ತು ಕ್ಷಮಿಸುತ್ತಾನೆ**

12. ಇದು ನಿಮಗೆ ದೇವರ ಗುಣಲಕ್ಷಣದ ಕುರಿತಾಗಿ ಏನು ಹೇಳುತ್ತದೆ?

**ಆತನು ಕರುಣೆಯುಳ್ಳವನು ಮತ್ತು ಪ್ರೀತಿಯುಳ್ಳವನು**

## ಪಾಠ 5

# ದೇವರ ಸ್ವಭಾವ

*ಆಂಡ್ರೂ ವ಼ಾಮಕ್*

ಕರ್ತನೊಂದಿಗೆ ಒಂದು ಸಕಾರಾತ್ಮಕವಾದ ಸಂಬಂಧವನ್ನು ಹೊಂದಿಕೊಳ್ಳುವುದಕ್ಕಾಗಿ, ನಾವು ಆತನ ಸ್ವಭಾವವನ್ನು ಮತ್ತು ಆತನ ನಿಜವಾದ ಗುಣವನ್ನು ತಿಳಿದುಕೊಳ್ಳುವುದು ಬಹು ಅವಶ್ಯ. ನಮ್ಮ ಪಾಪಗಳ ನಿಮಿತ್ತ ಆತನು ಕೋಪಗೊಂಡಿರುವನೇ, ಅಥವಾ ನಾವು ಒಳ್ಳೆಯದನ್ನು ನಡೆಸದ ಹೊರತಾಗಿಯೂ ನಮಗೆ ತನ್ನ ಜೀವವನ್ನು ಮತ್ತು ಆಶೀರ್ವಾದವನ್ನು ನೀಡಲು ಬಯಸುವಂತಹ ಕರುಣೆಯುಳ್ಳ ದೇವರಾಗಿರುವನೇ? ವಾಸ್ತವದಲ್ಲಿ, ದೇವರವಾಕ್ಯವು ಆತನ ಕುರಿತು ಎರಡು ವಿಭಿನ್ನವಾದ ದೃಷ್ಟಿಕೋನವನ್ನು ನೀಡುತ್ತದೆ, ಅಂದರೆ ಆತನು ಬದಲಾಗಿದ್ದಾನೆ ಅಥವಾ ವ್ಯತ್ಯಾಸವಾಗಿ ಏನನ್ನೋ ಮಾಡಿದ್ದಾನೆ ಎಂದರ್ಥವಲ್ಲ. ಸತ್ಯವೇದದ ಪರಿಭಾಷೆಯಲ್ಲಿ, ದೇವರು "ಮನುಷ್ಯರ ಪಾಪಗಳನ್ನು ಅವರ ವಿರುದ್ಧವಾಗಿಯೇ ಇಟ್ಟಿರುವನು" ಎಂದು ಹೇಳಲಾಗುತ್ತಿದ್ದಂತ ಒಂದು ಕಾಲವಿತ್ತು.

ಮಕ್ಕಳನ್ನು ಬೆಳೆಸುವ ರೀತಿಗೆ ಇದನ್ನು ಹೋಲಿಸಬಹುದು. ಮಕ್ಕಳು ಬಹಳ ಚಿಕ್ಕವರಾಗಿರುವಾಗ, ಅವರೊಂದಿಗೆ ವಿವೇಚಿಸಲು ಸಾಧ್ಯವಿಲ್ಲ, ಅವರು ಏಕೆ ಸರಿಯಾಗಿ ವರ್ತಿಸಬೇಕು ಎಂಬುದನ್ನು ತಿಳಿಸಲು ಸಾಧ್ಯವಾಗುವುದಿಲ್ಲ ಅಥವಾ ತಮ್ಮ ಸಹೋದರರು ಅಥವಾ ಸಹೋದರಿಯರ ಬಳಿ ಆಟಿಕೆಗಳನ್ನು ಕಿತ್ತುಕೊಳ್ಳುವ ಸ್ವಾರ್ಥಿಗಳಾಗಿರಬಾರದು ಎಂಬುದನ್ನು ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಅವರಿಗೆ ನಿಯಮಗಳನ್ನು ತಿಳಿಸಲಾಗುತ್ತದೆ, ಇವುಗಳನ್ನು ಮೀರಿ ನಡೆದರೆ ಅವರಿಗೆ ಶಿಕ್ಷೆಯಾಗುತ್ತದೆ. ಮಕ್ಕಳಿಗೆ ದೇವರ ಮತ್ತು ಸೈತಾನನ ಕುರಿತಾಗಿ ತಿಳಿಯದಿರುವಾಗಲೂ, ಅಥವಾ ತಾವು ಸ್ವಾರ್ಥವಾಗಿ ನಡೆಯುವಾಗ ಸೈತಾನನಿಗೆ ಅವಕಾಶವನ್ನು ನೀಡುತ್ತಿರುವೆವೆಂದು ತಿಳಿಯದಿರುವಾಗಲೂ ಸಹ, ಅವರ ಮೇಲೆ ನಿಯಮಗಳನ್ನು ವಿಧಿಸಲಾಗುತ್ತದೆ. ಇದರ ಮುಖ್ಯಾಂಶಗಳನ್ನು ಅವರು ಅರ್ಥಮಾಡಿಕೊಳ್ಳದೆ ಇರಬಹುದು, ಆದರೆ ತಾವು ಪುನಃ ತಪ್ಪು ಮಾಡುವುದಾದರೆ, ತಮಗೆ ಶಿಕ್ಷೆಯುಂಟು ಎನ್ನುವುದನ್ನು ಅರ್ಥಮಾಡಿಕೊಳ್ಳುತ್ತಾರೆ.

ಒಂದರ್ಥದಲ್ಲಿ, ಹಳೇ ಒಡಂಬಡಿಕೆಯಲ್ಲಿ ಕರ್ತನು ಇದನ್ನೇ ಮಾಡಿದನು. ಜನರು ಹೊಸದಾಗಿ ಹುಟ್ಟುವುದಕ್ಕಿಂತ ಮೊದಲು, ಹೊಸ ಒಡಂಬಡಿಕೆಯಲ್ಲಿ ಈಗ

ನಮಗಿರುವ ಆಧ್ಯಾತ್ಮಿಕ ಗ್ರಹಿಕೆಯು ಅವರಿಗೆ ಇರಲಿಲ್ಲ, ಹಾಗಾಗಿ ದೇವರು ಅವರಿಗೆ ನಿಯಮಗಳನ್ನು/ಆಜ್ಞೆಗಳನ್ನು ನೀಡಿ, ಅವುಗಳನ್ನು ಶಿಕ್ಷಾವಿಧಾನದೊಂದಿಗೆ ವಿಧಿಸಿದ್ದನು. ಕೆಲವೊಮ್ಮೆ ಅವರನ್ನು ಪಾಪ ಮಾಡದಂತೆ ತಡೆಯಲು ಮರಣದ ಶಿಕ್ಷೆಯನ್ನೂ ವಿಧಿಸಲಾಗುತ್ತಿತ್ತು. ಪಾಪದ ಮೂಲಕ ಸೈತಾನನು ಜನರನ್ನು ನಾಶಪಡಿಸುತ್ತಿದ್ದುದರಿಂದ, ಪಾಪದ ಮೇಲೆ ತಡೆಗಳನ್ನು ವಿಧಿಸಬೇಕಾಗಿತ್ತು ಮತ್ತು ಅವುಗಳನ್ನು ಪಾಲಿಸುವಂತೆ ಶಿಕ್ಷೆಯ ಒತ್ತಡವನ್ನು ನೇಮಿಸಬೇಕಾಗಿತ್ತು. ಇದರಿಂದ, ನಮ್ಮ ಪಾಪಗಳ ನಿಮಿತ್ತವಾಗಿ ದೇವರು ನಮ್ಮನ್ನು ಪ್ರೀತಿಸುವುದಿಲ್ಲ ಎಂಬ ತಪ್ಪಾದ ಗ್ರಹಿಕೆಯು ಉಳಿದುಕೊಂಡಾಗ್ಯೂ, ದೇವರ ವಾಕ್ಯವು ಈ ರೀತಿಯಾಗಿ ಬೋಧಿಸುವುದಿಲ್ಲ. ರೋಮ 5:13 ಹೇಳುತ್ತದೆ, "ಧರ್ಮಶಾಸ್ತ್ರ ಉಂಟಾಗುವುದಕ್ಕೆ ಮುಂಚೆಯೆ ಪಾಪವು ಲೋಕದಲ್ಲಿತ್ತು; ಆದರೆ ಧರ್ಮಶಾಸ್ತ್ರವಿಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವದಿಲ್ಲ." "ಧರ್ಮಶಾಸ್ತವು ಉಂಟಾಗುವುದಕ್ಕೆ ಮುಂಚೆಯೇ" ಅಂದರೆ, ದೇವರು ಮೋಶೆಗೆ ದಶಾಜ್ಞೆಗಳನ್ನು ನೀಡಿದ ಕಾಲಕ್ಕಿಂತ ಮೊದಲೇ, ಮತ್ತು ಯೆಹೂದ್ಯ ದೇಶಕ್ಕೆ ಅನ್ವಯಿಸುವಂತಹ ಇನ್ನಿತರ ಆಚಾರಗಳ ನಿಯಮಗಳನ್ನು ನೀಡುವುದಕ್ಕಿಂತಲೂ ಮುಂಚೆಯೇ ಎಂಬುದು ಇದರ ಅರ್ಥವಾಗಿದೆ. ಆ ಕಾಲದ ತನಕ, ಲೋಕದಲ್ಲಿ ಪಾಪವಿತ್ತು ಆದರೆ ಅದನ್ನು ಆರೋಪಿಸಲಾಗಿರಲಿಲ್ಲ. "ಲೆಕ್ಕ" ಎನ್ನುವುದು ದಾಖಲಿಸುವಂತಹ ವಿಧಾನವಾಗಿದೆ; ಉದಾಹರಣೆಗೆ, ನೀವು ಒಂದು ಅಂಗಡಿಗೆ ವಸ್ತುವನ್ನು ಕೊಂಡುಕೊಳ್ಳಲು ಹೋಗಿ, ಆ ವಸ್ತುವನ್ನು ನಿಮ್ಮ ಪಟ್ಟಿಗೆ ಸೇರಿಸು ಎಂದು ಹೇಳುವಿರಿ. ಇದನ್ನು ನಿಮ್ಮ ಪಟ್ಟಿಗೆ ಸೇರಿಸಿದಾಗ, ಇದನ್ನು ದಾಖಲು ಮಾಡುತ್ತಾರೆ ಮತ್ತು ನಿಮ್ಮ ಖಾತೆಯಿಂದ ಹಣವನ್ನು ಪಡೆಯುತ್ತಾರೆ ಹಾಗೂ ನಿಮ್ಮ ಈ ಖರೀದಿಯನ್ನು ನಿಮ್ಮ ಲೆಕ್ಕಕ್ಕೆ ಹೊರಿಸಲಾಗುತ್ತದೆ. ನಿಮ್ಮ ಲೆಕ್ಕಕ್ಕೆ ಹಾಕದಿದ್ದರೆ, ಅವರು ಇದನ್ನು ನಿಮ್ಮ ಹೆಸರಿನಲ್ಲಿ ದಾಖಲು ಮಾಡಿಲ್ಲ ಮತ್ತು ಈ ಕಾರಣದಿಂದ ಅದನ್ನು ನಿಮ್ಮಿಂದ ವಸೂಲಿ ಮಾಡಲು ಸಾಧ್ಯವಿಲ್ಲ ಎನ್ನುವ ಅರ್ಥ ಬರುತ್ತದೆ.

ಈ ವಚನವು ಹೇಳುತ್ತಿರುವುದೇನೆಂದರೆ, ದಶಾಜ್ಞೆಗಳು ಬರುವ ತನಕ, ಜನರ ವಿರುದ್ಧವಾಗಿ ಪಾಪವು ಲೆಕ್ಕಿಸಲ್ಪಡುತ್ತಿರಲಿಲ್ಲ. ಇದು ನಿಜವಾಗಿಯೂ ಆಶ್ಚರ್ಯಚಕಿತವಾದ ಹೇಳಿಕೆಯಾಗಿದೆ. ಆದಿಕಾಂಡ 3 ಮತ್ತು 4ನ್ನು ನೋಡಿರಿ. ಆದಾಮ ಮತ್ತು ಹವ್ವಳು ದೇವರ ವಿರುದ್ಧವಾಗಿ ಪಾಪ ಮಾಡಿದಾಗ, ದೇವರು ಪರಿಶುದ್ಧನೂ ಮನುಷ್ಯನು ಪಾಪಿಯೂ ಆಗಿದ್ದುದರಿಂದ, ಪಾಪದಿಂದ ಕೂಡಿದ ಮನುಕುಲದೊಂದಿಗೆ ದೇವರಿಗೆ ಯಾವ ಸಂಬಂಧವೂ ಇಲ್ಲ ಎಂದು ಅನೇಕರು ಭಾವಿಸಿದ್ದಾರೆ. ಹಾಗಾಗಿ ದೇವರು ಅವರನ್ನು ತನ್ನ ಸನ್ನಿಧಾನದಿಂದ ತೆಗೆದುಹಾಕುವುದಕ್ಕಾಗಿ ತೋಟದಿಂದ ಹೊರಗಟ್ಟಿದನು ಏಕೆಂದರೆ ಪರಿಶುದ್ಧನಾದ ದೇವರಿಗೆ ಅಪವಿತ್ರನಾದ ಮನುಷ್ಯನೊಂದಿಗೆ ಯಾವ ಸಂಬಂಧವನ್ನೂ ಏರ್ಪಡಿಸಿಕೊಳ್ಳಲಾಗುವುದಿಲ್ಲ ಎಂದು ಅವರು ಭಾವಿಸುತ್ತಾರೆ. ಅಲ್ಲದೆ ನೀವು ಒಳ್ಳೆಯ ಕ್ರಿಯೆಗಳಿಂದ ನಿಮ್ಮನ್ನು ತೊಳೆದುಕೊಳ್ಳದಿದ್ದರೆ, ಪುನಃ ದೇವರು ನಿಮ್ಮೊಂದಿಗೆ ಸಂಬಂಧವನ್ನು ಹೊಂದಿಕೊಳ್ಳಲು ಸಾಧ್ಯವಿಲ್ಲ ಎಂದೂ ಸಹ ಅವರು ಆಲೋಚಿಸುತ್ತಾರೆ. ಆದರೆ ಯೇಸು ಹೇಳಿದ ಸಂದೇಶಕ್ಕೆ ಇದು ವಿರುದ್ಧವಾಗಿದೆ. ರೋಮ

5:8 ಹೇಳುತ್ತದೆ, "ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ." ಹಾಗಾಗಿ ನಿಮ್ಮನ್ನು ಶುದ್ಧೀಕರಿಸಿಕೊಂಡ ಅನಂತರವಲ್ಲ, ಆದರೆ ನೀವು ಪಾಪದಲ್ಲಿ ಜೀವಿಸುತ್ತಿರುವಾಗಲೇ ದೇವರು ತನ್ನ ಪ್ರೀತಿಯನ್ನು ನಿಮಗಾಗಿ ವಿಸ್ತರಿಸಿರುವನು ಎಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ. ನಿಮ್ಮ ಯಥಾಸ್ಥಿತಿಯಲ್ಲಿಯೇ ದೇವರು ನಿಮ್ಮನ್ನು ಪ್ರೀತಿಸುತ್ತಾನೆ ಎನ್ನುವುದು ನಿಮ್ಮ ಜೀವಿತವನ್ನೇ ಬದಲಾಯಿಸುವಂತಹ ಸುವಾರ್ತೆಯ ಶ್ರೇಷ್ಠವಾದ ಸತ್ಯಗಳಲ್ಲಿ ಒಂದಾಗಿದೆ. ಆತನು ನಿಮ್ಮನ್ನು ಎಷ್ಟು ಅಧಿಕವಾಗಿ ಪ್ರೀತಿಸುವನೆಂದರೆ ನೀವು ಆತನ ಪ್ರೀತಿಯನ್ನು ಸ್ವೀಕರಿಸುವುದಾದಲ್ಲಿ, ನೀವಿರುವ ಸದ್ಯದ ಸ್ಥಿತಿಯಲ್ಲಿಯೇ ಇರಲು ಬಯಸುವುದಿಲ್ಲ. ನೀವು ಮಾರ್ಪಡುವಿರಿ, ಆದರೆ ಆತನ ಪ್ರೀತಿಯನ್ನು ಪಡೆಯುವುದಕ್ಕಾಗಿ ಅಲ್ಲ ಬದಲಾಗಿ ಆತನ ಪ್ರೀತಿಯ ನಿಮಿತ್ತ ಮಾರ್ಪಾಡನ್ನು ಹೊಂದುವಿರಿ.

ಆದಿಕಾಂಡ 4ರಲ್ಲಿ ದೇವರು ಮನುಷ್ಯನೊಂದಿಗೆ ಇನ್ನೂ ಅನ್ಯೋನ್ಯತೆಯಲ್ಲಿರುವುದನ್ನು, ಅಂದರೆ ಆದಾಮ ಮತ್ತು ಹವ್ವರು ಪಾಪ ಮಾಡಿದ ನಂತರವೂ ಅವರೊಂದಿಗೆ ಮಾತನಾಡುತ್ತಿರುವುದನ್ನು ನೀವು ನೋಡಬಹುದು. ಆತನು ಕಾಯಿನ ಮತ್ತು ಹೇಬೇಲನೊಂದಿಗೆ ಮಾತನಾಡಿದನು ಹಾಗೂ ಅವರು ಆತನಿಗೆ ಯಜ್ಞಗಳನ್ನು ಸಮರ್ಪಿಸುವುದಕ್ಕೆ ಬಂದಾಗ, ಆತನು ಅವರೊಂದಿಗೆ ಅವರಿಗೆ ಕೇಳಿಸುವಂತಹ ಧ್ವನಿಯಿಂದ ಮಾತನಾಡಿದನು. ಅವರು ನೀಡಿದ ಪ್ರತ್ಯುತ್ತರದಿಂದ, ದೇವರ ಸ್ವರವು ಅವರಿಗೆ ಚಿರಪರಿಚಿತವಾಗಿತ್ತು ಹಾಗೂ ಈ ಧ್ವನಿಯು ಅವರಲ್ಲಿ ಯಾವುದೇ ತೆರನಾದ ಗಾಭರಿಯನ್ನುಂಟು ಮಾಡಲಿಲ್ಲ ಎನ್ನುವುದನ್ನು ನಾವು ನೋಡಬಹುದು. ಕಾಯಿನನು ತನ್ನ ತಮ್ಮನಾದ ಹೇಬೆಲನನ್ನು ಕೊಂದು ಲೋಕದಲ್ಲಿ ಮೊದಲ ಕೊಲೆಗಾರನಾದಾಗ, ಪರಲೋಕದಿಂದ ದೇವರು ದೊಡ್ಡ ಧ್ವನಿಯಲ್ಲಿ "ನಿನ್ನ ತಮ್ಮನಾದ ಹೇಬೆಲನು ಎಲ್ಲಿ?" ಎಂದು ಕೇಳಿದನು. ಕಾಯಿನನು ತಾನು ತಪ್ಪನ್ನೆಸಗಿರುವೆನೆಂಬ ಅಳುಕಿಲ್ಲದೆ ಸುಳ್ಳು ಹೇಳಿದನು. ಒಬ್ಬ ವ್ಯಕ್ತಿಯು ದೇವರ ಸ್ವರವನ್ನು ಕೇಳಿಸಿಕೊಳ್ಳುವ ರೂಢಿಗೆ ಬಿದ್ದರೆ ಅದನ್ನು ಉದಾಸೀನತೆಯಿಂದ ಕಾಣುವ ಮತ್ತು ಅಗೌರವದಿಂದ ನಡೆದುಕೊಳ್ಳುವ ಸಾಧ್ಯತೆಯಿದೆ ಎನ್ನುವುದನ್ನು ಇದು ತೋರಿಸುತ್ತದೆ. ಅಂದರೆ ದೇವರು ಆಗಲೂ ಸಹ ಮನುಕುಲದೊಂದಿಗೆ ಅನ್ಯೋನ್ಯತೆಯನ್ನು ಹೊಂದಿದ್ದನು ಹಾಗೂ ಸಾಮಾನ್ಯವಾಗಿ ಎಲ್ಲರೂ ನಂಬುವ ಪ್ರಕಾರ ದೇವರು ಅನ್ಯೋನ್ಯತೆಯನ್ನು ತೊಡೆದು ಹಾಕಿರಲಿಲ್ಲ ಎಂಬುದನ್ನು ಇದು ಹೇಳುತ್ತದೆ. ಆತನು ಮನುಷ್ಯನ ಪಾಪವನ್ನು ಲೆಕ್ಕಕ್ಕೆ ತಂದಿರಲಿಲ್ಲ. ಹಾಗಾದರೆ ಇದು, ದೇವರು ಮನುಷ್ಯರ ಪಾಪಗಳನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ ಎಂಬರ್ಥವೇ ಅಥವಾ ಅವರು ಮಾಡಿದ್ದು ತಪ್ಪಲ್ಲ ಎಂದು ದೇವರು ಭಾವಿಸಿದನೇ? ಹಾಗಲ್ಲ, ಈ ಕಾರಣದಿಂದಾಗಿಯೇ ದೇವರು ಧರ್ಮಶಾಸ್ತ್ರವನ್ನು ನೀಡಿದನು. ಮನುಷ್ಯನನ್ನು ಪುನಃ ಸೂಕ್ತವಾದ ಮಟ್ಟಕ್ಕೆ ಮೇಲೆತ್ತುವುದಕ್ಕಾಗಿ ದೇವರು ಧರ್ಮಶಾಸ್ತ್ರವನ್ನು ನೀಡಬೇಕಾಯಿತು. ಇದರಿಂದ, ಮನುಷ್ಯನಿಗೆ ಒಬ್ಬ ರಕ್ಷಕನ ಅಗತ್ಯವಿದೆ, ಅವನು ತನ್ನನ್ನು ತಗ್ಗಿಸಿಕೊಂಡು

ಕ್ಷಮಾಪಣೆಯನ್ನು ಒಂದು ವರವಾಗಿ ಪಡೆಯಬೇಕೆಂಬುದನ್ನು ದೇವರು ಅವನಿಗೆ ತೋರಿಸುವುದು ಅಗತ್ಯವಾಗಿತ್ತು. ದುಃಖದ ವಿಷಯವೆಂದರೆ, ನೀವು ಧರ್ಮಶಾಸ್ತ್ರವನ್ನು ಅನುಸರಿಸಲೇಬೇಕೆಂದು ಮತ್ತು ಇದರಿಂದ ನೀವು ಕ್ಷಮಾಪಣೆಯನ್ನು ಹಾಗೂ ಅಂಗೀಕಾರವನ್ನು ಹೊಂದಬೇಕು ಅದನ್ನು ಕೊಡಲಾಗಿದೆ ಎನ್ನುವ ಮೋಸವನ್ನು ಧಾರ್ಮಿಕತೆಯು ಬೋಧಿಸುತ್ತ ಈ ಎಲ್ಲಾ ಸಂಗತಿಗಳನ್ನು ತನ್ನ ನಿಯಂತ್ರಣದಲ್ಲಿ ತೆಗೆದುಕೊಂಡುಬಿಟ್ಟಿದೆ. ಅದು ತಪ್ಪು! ಹಳೇ ಒಡಂಬಡಿಕೆಯು ನಿಮ್ಮ ಪಾಪಗಳನ್ನು ದೊಡ್ಡದಾಗಿ ಬಿಂಬಿಸಿದಾಗ ನೀವಾಗಿಯೇ ನಿಮ್ಮನ್ನು ರಕ್ಷಿಸಿಕೊಳ್ಳಲಾರಿರಿ ಎನ್ನುವ ಹತಾಶೆಗೆ ಒಳಗಾಗಿ, "ದೇವರೇ, ಇದೇ ನಿನ್ನ ಪರಿಶುದ್ಧತೆಯ ಮಟ್ಟವಾಗಿದ್ದಲ್ಲಿ, ನಾನಿದನ್ನು ಮಾಡಲು ಸಾಧ್ಯವಿಲ್ಲ. ನನ್ನನ್ನು ಕ್ಷಮಿಸು, ನನ್ನ ಮೇಲೆ ಕರುಣೆ ತೋರಿಸು" ಎಂದು ಹೇಳಬೇಕು ಎನ್ನುವುದೇ ಅದರ ಉದ್ದೇಶವಾಗಿರುತ್ತದೆ. ದೇವರು ಪ್ರೀತಿಸ್ವರೂಪಿಯಾಗಿದ್ದಾನೆ ಮತ್ತು ಅದು ಆತನ ಪರಿಪೂರ್ಣ ಸ್ವಭಾವವಾಗಿದೆ.

## ಶಿಷ್ಯತ್ವದ ಪ್ರಶ್ನೆಗಳು

## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ರೋಮ 5:13 ನ್ನು ಓದಿರಿ. "ಲೆಕ್ಕಕ್ಕೆ ಹಾಕುವುದು" ಎಂಬುದರ ಅರ್ಥವೇನು?

**ರೋಮ 5:13** - *ಧರ್ಮಶಾಸ್ತ್ರವು ಉಂಟಾಗುವದಕ್ಕೆ ಮುಂಚೆಯೇ ಪಾಪವು ಲೋಕದಲ್ಲಿತ್ತು; ಆದರೆ ಧರ್ಮಶಾಸ್ತ್ರವಿಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವುದಿಲ್ಲ.*

2. ರೋಮ 7:7ನ್ನು ಓದಿರಿ. ಧರ್ಮಶಾಸ್ತ್ರದ ಉದ್ದೇಶವೇನಾಗಿತ್ತು?

**ರೋಮ 7:7 –** *ಹಾಗಾದರೆ ಏನು ಹೇಳೋಣ? ಧರ್ಮಶಾಸ್ತ್ರವು ಪಾಪಸ್ವರೂಪವೋ? ಎಂದಿಗೂ ಅಲ್ಲ. ಧರ್ಮಶಾಸ್ತ್ರದಿಂದಲೇ ಹೊರತು ಪಾಪವೆಂಬದು ಏನೋ ನನಗೆ ಗೊತ್ತಾಗುತ್ತಿರಲಿಲ್ಲ. ದೃಷ್ಟಾಂತವಾಗಿ, ಆಶಿಸಬಾರದೆಂದು ಧರ್ಮಶಾಸ್ತ್ರವು ಹೇಳದಿದ್ದರೆ ದುರಾಶೆಯಂದರೆ ಏನೋ ನನಗೆ ತಿಳಿಯುತ್ತಿದ್ದಿಲ್ಲ.*

3. ಗಲಾತ್ಯ 3:24 ನ್ನು ಓದಿರಿ. ಈ ವಚನದ ಪ್ರಕಾರ, ಧರ್ಮಶಾಸ್ತ್ರದ ಉದ್ದೇಶವೇನಾಗಿತ್ತು?

**ಗಲಾತ್ಯ 3:24 –** *ಹೀಗಿರಲಾಗಿ ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ; ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುವುದಕ್ಕಾಗಿ ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ.*

4. ಯೋಹಾನ 8:1–11ನ್ನು ಓದಿರಿ. ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀಯೊಂದಿಗೆ ಯೇಸು ಹೇಗೆ ವ್ಯವಹರಿಸಿದನು?

**ಯೋಹಾನ 8:1–11** - *ಯೇಸು ಎಣ್ಣೇಮರಗಳ ಗುಡ್ಡಕ್ಕೆ ಹೋದನು. [2]ಬೆಳಿಗ್ಗೆ ಆತನು ತಿರಿಗಿ ದೇವಾಲಯಕ್ಕೆ ಬಂದಾಗ [3]ಜನರೆಲ್ಲರು ಆತನ ಬಳಿಗೆ ಬಂದರು; ಆತನು ಕೂತುಕೊಂಡು ಅವರಿಗೆ ಉಪದೇಶಮಾಡುತ್ತಿರುವಲ್ಲಿ ಶಾಸ್ತ್ರಿಗಳೂ ಫರಿಸಾಯರೂ ವ್ಯಭಿಚಾರದಲ್ಲಿ ಸಿಕ್ಕಿದ ಒಬ್ಬ ಹೆಂಗಸನ್ನು ಆತನ ಬಳಿಗೆ ತಂದು ಆಕೆಯನ್ನು ನಡುವೆ ನಿಲ್ಲಿಸಿ – [4]ಬೋಧಕನೇ, ಈ ಹೆಂಗಸು ವ್ಯಭಿಚಾರ [5]ಮಾಡುತ್ತಿರುವಾಗಲೇ ಕೈಗೆ ಸಿಕ್ಕಿದಳು. ಇಂಥವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಶೆಯು ಧರ್ಮಶಾಸ್ತ್ರದಲ್ಲಿ ನಮಗೆ ಅಪ್ಪಣೆಕೊಟ್ಟಿದ್ದಾನೆ; ಈಕೆಯ ವಿಷಯದಲ್ಲಿ ನೀನು ಏನು ಹೇಳುತ್ತೀ ಎಂದು ಆತನನ್ನು ಕೇಳಿದರು. [6]ಆತನ ಮೇಲೆ ತಪ್ಪುಹೊರಿಸುವದಕ್ಕೆ ಏನಾದರೂ ಒಂದು ನಿಮಿತ್ತ ಬೇಕಾಗಿದ್ದದರಿಂದ ಈತನು ಏನನ್ನುತ್ತಾನೋ ನೋಡೋಣ ಎಂದು ಹಾಗೆ ಕೇಳಿದರು. ಆದರೆ ಯೇಸು ಬೊಗ್ಗಿಕೊಂಡು ಬೆರಳಿನಿಂದ ನೆಲದ ಮೇಲೆ ಬರೆಯುತ್ತಾ ಇದ್ದನು. [7] ಅವರು ಆತನನ್ನು ಬಿಡದೆ ಕೇಳುತ್ತಿರುವಾಗ ಆತನು ನೆಟ್ಟಗೆ ಕೂತುಕೊಂಡು ಅವರಿಗೆ– ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ ಎಂದು ಹೇಳಿ [8]ತಿರಿಗಿ ಬೊಗ್ಗಿಕೊಂಡು ನೆಲದ ಮೇಲೆ ಬರೆಯುತ್ತಾ ಇದ್ದನು. [9]ಆ ಮಾತನ್ನು ಕೇಳಿ ತಾವೇ ಪಾಪಿಗಳೆಂದು ಮನಸ್ಸಿನಲ್ಲಿ ತಿಳುಕೊಂಡು ಹಿರಿಯರು ಮೊದಲುಗೊಂಡು ಕಿರಿಯರವರೆಗೂ ಒಬ್ಬರ ಹಿಂದೊಬ್ಬರು ಹೊರಗೆ ಹೋದರು; ಯೇಸು ಒಬ್ಬನೇ ಉಳಿದನು, ಮತ್ತು ನಡುವೆ ನಿಂತಿದ್ದ ಹೆಂಗಸು ಅಲ್ಲೇ ಇದ್ದಳು. [10] ಯೇಸು ನೆಟ್ಟಗೆ ಕೂತುಕೊಂಡು ಆ ಸ್ತ್ರೀಯನ್ನೇ ಹೊರತು ಯಾರನ್ನೂ ನೋಡದೆ ಆಕೆಗೆ – ನಿನಗೆ ಯಾರೂ ಶಿಕ್ಷೆಯನ್ನು ವಿಧಿಸಲಿಲ್ಲವೋ? ಅಂದನು. ಯಾರೂ ವಿಧಿಸಲಿಲ್ಲ, ಸ್ವಾಮೀ, ಅಂದಳು. [11]ಯೇಸು ಆಕೆಗೆ – ನಾನೂ ನಿನಗೆ ಶಿಕ್ಷೆ ವಿಧಿಸುವುದಿಲ್ಲ; ಹೋಗು, ಇನ್ನು ಮೇಲೆ ಪಾಪಮಾಡಬೇಡ ಎಂದು ಹೇಳಿದನು.*

5. ಯೇಸುವಿನ ಮಾತುಗಳು ಮತ್ತು ಕ್ರಿಯೆಗಳು ದೇವರ ನಿಜ ಸ್ವಭಾವವನ್ನು ಪ್ರತಿಬಿಂಬಿಸುತ್ತದೆಯೇ? ಯೋಹಾನ 3:34 ನ್ನು ನೋಡಿ.

**ಯೋಹಾನ 3:34** – *ಹೇಗಂದರೆ ದೇವರು ಯಾರನ್ನು ಕಳುಹಿಸಿದ್ದಾನೋ ಆತನಿಗೆ ಆತ್ಮವರವನ್ನು ಅಳತೆ ಮಾಡದೆ ಅನುಗ್ರಹಿಸುವದರಿಂದ ಆತನು ದೇವರ ಮಾತುಗಳನ್ನೇ ಆಡುತ್ತಾನೆ.*

6. 1 ಯೋಹಾನ 4:8 ನ್ನು ಓದಿರಿ. ಈ ವಚನದ ಪ್ರಕಾರ, ದೇವರ ನಿಜವಾದ ಸ್ವಭಾವ ಏನಾಗಿದೆ?

**1 ಯೋಹಾನ 4:8** – *ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕಂದರೆ ದೇವರು ಪ್ರೀತಿಸ್ವರೂಪಿಯು.*

7. ರೋಮ 5:6ನ್ನು ಓದಿರಿ. ನಾವು ಏನಾಗಿದ್ದಾಗ ದೇವರ ಪ್ರೀತಿಯು ನಮಗೆ ದೊರಕುವಂತಾಗಿತ್ತು?

**ರೋಮ 5:6 –** *ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು.*

8. ರೋಮ 5:8 ನ್ನು ಓದಿರಿ. ನಾವು ಏನಾಗಿದ್ದಾಗ ದೇವರುನಮ್ಮನ್ನು ಪ್ರೀತಿಸಿದನು?

**ರೋಮ 5:8** - *ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ.*

9. ರೋಮ 5:10 ನ್ನು ಓದಿರಿ. ನಾವು ಏನಾಗಿದ್ದಾಗ ದೇವರು ನಮ್ಮನ್ನು ಪ್ರೀತಿಸಿದನು?

**ರೋಮ 5:10** - *ದೇವರಿಗೆ ವೈರಿಗಳಾಗಿದ್ದಾಗ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿರಲಾಗಿ ಆತನ ಕೂಡ ಸಮಾಧಾನವಾದ ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಾಗುವದು ಮತ್ತೂ ನಿಶ್ಚಯವಲ್ಲವೇ.*

10. ನಿಮ್ಮ ಪಾಪಗಳಿಗಾಗಿ ಯೇಸುವಿನ ತ್ಯಾಗವು ಬೆಲೆ ನೀಡಿದೆ ಎಂಬುದರಲ್ಲಿ ಭರವಸೆ ಇಟ್ಟು, ನಿಮ್ಮನ್ನು ಕ್ಷಮಿಸುವಂತೆ ಹಾಗೂ ನಿಮ್ಮ ರಕ್ಷಕನೂ, ಕರ್ತನೂ ಆಗಿರುವಂತೆ ಯೇಸು ಕ್ರಿಸ್ತನಲ್ಲಿ ನೀವು ಪ್ರಾರ್ಥಿಸಿದರೆ, ಆಗ ದೇವರು ತನ್ನ ಕರುಣೆಯ ಮತ್ತು ಕೃಪೆಯ ನೈಜಸ್ವಭಾವವನ್ನು ನಿಮಗೆ ತೋರ್ಪಡಿಸುವನೇ?

## ಉತ್ತರಗಳು

1. ರೋಮ 5:13 ನ್ನು ಓದಿರಿ. "ಲೆಕ್ಕಕ್ಕೆ ಬರುವುದು/ಹೊರಿಸು" ಎಂಬುದರ ಅರ್ಥವೇನು?

**ಒಬ್ಬ ವ್ಯಕ್ತಿಯ ಲೆಕ್ಕಕ್ಕೆ ಹಾಕುವುದು**

2. ರೋಮ 7:7ನ್ನು ಓದಿರಿ. ಧರ್ಮಶಾಸ್ತ್ರದ ಉದ್ದೇಶವೇನಾಗಿತ್ತು?

**ಪಾಪವನ್ನು ತಿಳಿಯಪಡಿಸುವುದು**

3. ಗಲಾತ್ಯ 3:24ನ್ನು ಓದಿರಿ. ಈ ವಚನದ ಪ್ರಕಾರ, ಧರ್ಮಶಾಸ್ತ್ರದ ಉದ್ದೇಶವೇನಾಗಿತ್ತು?

**ಮಾನವಕುಲಕ್ಕೆ ರಕ್ಷಕನಾದ ಯೇಸು ಕ್ರಿಸ್ತನ ಅಗತ್ಯವಿದೆ ಎಂದು ತೋರಿಸುವುದು**

4. ಯೋಹಾನ 8:1–11 ನ್ನು ಓದಿರಿ. ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಸ್ತ್ರೀಯೊಂದಿಗೆ ಯೇಸು ಹೇಗೆ ವ್ಯವಹರಿಸಿದನು?

**ಕರುಣೆ ಮತ್ತು ಕೃಪೆಯಿಂದ ಕೂಡಿದವನಾಗಿ**

5. ಯೇಸುವಿನ ಮಾತುಗಳು ಮತ್ತು ಕ್ರಿಯೆಗಳು ದೇವರ ನಿಜ ಸ್ವಭಾವವನ್ನು ಪ್ರತಿಬಿಂಬಿಸುತ್ತದೆಯೇ? ಯೋಹಾನ 3:34ನ್ನು ನೋಡಿ.

**ಹೌದು**

6. 1 ಯೋಹಾನ 4:8ನ್ನು ಓದಿರಿ. ಈ ವಚನದ ಪ್ರಕಾರ, ದೇವರ ನಿಜವಾದ ಸ್ವಭಾವ ಏನಾಗಿದೆ?

**ಪ್ರೀತಿ**

7. ರೋಮ 5:6ನ್ನು ಓದಿರಿ. ನಾವು ಏನಾಗಿದ್ದಾಗ ದೇವರ ಪ್ರೀತಿಯು ನಮಗೆ ನೇಮಿತವಾಗಿತ್ತು?

**ನಾವು ಅಶಕ್ತರಾಗಿದ್ದಾಗಲೇ, ಅಂದರೆ ನಿಸ್ಸಹಾಯಕರು ಹಾಗೂ ಭಕ್ತಿಹೀನರಾಗಿರುವಾಗ**

8. ರೋಮ 5:8ನ್ನು ಓದಿರಿ. ನಾವು ಏನಾಗಿದ್ದಾಗ ದೇವರು ನಮ್ಮನ್ನು ಪ್ರೀತಿಸಿದನು?

**ಪಾಪಿಗಳು**

9. ರೋಮ 5:10ನ್ನು ಓದಿರಿ. ನಾವು ಏನಾಗಿದ್ದಾಗ ದೇವರು ನಮ್ಮನ್ನು ಪ್ರೀತಿಸಿದನು?

**ವೈರಿಗಳು**

10. ನಿಮ್ಮ ಪಾಪಗಳಿಗಾಗಿ ಯೇಸುವಿನ ತ್ಯಾಗವು ಬೆಲೆಯನ್ನು ನೀಡಿದೆ ಎಂಬುದರಲ್ಲಿ ಭರವಸೆ ಇಟ್ಟು, ನಿಮ್ಮನ್ನು ಕ್ಷಮಿಸುವಂತೆ ಹಾಗೂ ನಿಮ್ಮ ರಕ್ಷಕನೂ, ಕರ್ತನೂ ಆಗಿರುವಂತೆ ಯೇಸು ಕ್ರಿಸ್ತನಲ್ಲಿ ನೀವು ಪ್ರಾರ್ಥಿಸಿದರೆ, ಆಗ ದೇವರು ತನ್ನ ಕರುಣೆಯ ಮತ್ತು ಕೃಪೆಯ ನೈಜಸ್ವಭಾವನ್ನು ನಿಮಗೆ ತೋರ್ಪಡಿಸುವನೇ?

**ಹೌದು**

ಪಾಠ 6

# ಪಶ್ಚಾತ್ತಾಪ

***ಜೋಣ್ ಕ್ರೊ***

ಕೆಲವರಿಗೆ ಪಶ್ಚಾತ್ತಾಪ ಅಂದರೆ ಏನು ಎನ್ನುವುದನ್ನು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾರೆ. ಪಶ್ಚಾತ್ತಾಪವು ಪರಿಪೂರ್ಣತೆಯಲ್ಲ, ಆದರೆ ಮಾರ್ಗವನ್ನು ಬದಲಾಯಿಸಿಕೊಳ್ಳುವುದು. ನಾವು ತಪ್ಪಿಹೋದ ಮಗ ಅಥವಾ ಕಳೆದುಹೋದ ಮಗನ ಕುರಿತಾಗಿ ಮಾತನಾಡಲಿದ್ದೇವೆ. ಒಬ್ಬ ವ್ಯಕ್ತಿಯು ಪಶ್ಚಾತ್ತಾಪ ಪಡುವುದು ಎಂದರೆ ಅರ್ಥವೇನು ಎಂಬುದನ್ನು ಸೂಕ್ತವಾಗಿ ವಿವರಿಸುವ ಒಂದು ಕಥೆಯನ್ನು ಯೇಸು ಹೇಳುತ್ತಿರುವನು. ಲೂಕ 15:11–12 ರಲ್ಲಿ ಯೇಸು ಹೇಳಿದನು, *"ಇನ್ನೂ ಆತನು ಹೇಳಿದ್ದೇನೆಂದರೆ - ಒಬ್ಬಾನೊಬ್ಬ ಮನುಷ್ಯನಿಗೆ ಇಬ್ಬರು ಮಕ್ಕಳಿದ್ದರು. ಅವರಲ್ಲಿ ಕಿರಿಯವನು ತಂದೆಗೆ - ಅಪ್ಪಾ, ಆಸ್ತಿಯಲ್ಲಿ ನನಗೆ ಬರತಕ್ಕ ಪಾಲನ್ನು ಕೊಡು ಎಂದು ಕೇಳಿಕೊಳ್ಳಲು ತಂದೆಯು ಬದುಕನ್ನು ಅವರಿಗೆ ಹಂಚಿಕೊಟ್ಟನು."*

ಕಿರಿಯ ಮಗನು ತನ್ನ ತಂದೆಯು ಸಾಯುವುದಕ್ಕಿಂದ ಮೊದಲೇ ತನ್ನ ಪಾಲನ್ನು ಪಡೆಯಲು ಬಯಸುತ್ತಿದ್ದನು, ಇದು ಸಾಧಾರಣ ಸಂಗತಿಯಲ್ಲ ಆದರೂ ಅವನ ತಂದೆಯು ಅವನ ಕೋರಿಕೆಯನ್ನು ಅಂಗೀಕರಿಸಿ, ತನ್ನ ಮಕ್ಕಳಿಗೆ ಅವರವರ ಪಾಲನ್ನು ಹಂಚಿದನು. 13ನೇ ವಚನವು ಹೇಳುತ್ತದೆ, *"ಸ್ವಲ್ಪ ದಿವಸದ ಮೇಲೆ ಆ ಕಿರೀಮಗನು ಎಲ್ಲಾ ಕೂಡಿಸಿಕೊಂಡು ದೂರದೇಶಕ್ಕೆ ಹೊರಟುಹೋಗಿ ಅಲ್ಲಿ ಪಟಿಂಗನಾಗಿ ಬದುಕಿ ತನ್ನ ಆಸ್ತಿಯನ್ನು ಸೂರೆಮಾಡಿಬಿಟ್ಟನು."* ಕಿರಿಯ ಮಗನು ತನ್ನ ಆಸ್ತಿಯ ಪಾಲನ್ನು, ತನ್ನ ಭಾಗದ ಸ್ವಾಸ್ಥ್ಯವನ್ನು ತೆಗೆದುಕೊಂಡು, ದೂರ ದೇಶಕ್ಕೆ ಹೋಗಿ, ತನ್ನ ಆಸ್ತಿಯನ್ನು ಸೂರೆಮಾಡಿಬಿಟ್ಟನು. ಮತ್ತೊಂದು ಭಾಷಾಂತರವು, "ಮೋಜಿನ ಕೂಟಗಳಲ್ಲಿ ಮತ್ತು ವೇಶ್ಯೆಯರಲ್ಲಿ ಅವನು ತನ್ನ ಹಣವನ್ನು ಸೂರೆಮಾಡಿದನು" ಎಂದು ಹೇಳುತ್ತದೆ.

14–15ನೇ ವಾಕ್ಯಗಳು, *"ಹೀಗೆ ಅವನು ಎಲ್ಲಾ ಹಾಳುಮಾಡಿಕೊಂಡಮೇಲೆ ಆ ದೇಶದಲ್ಲೆಲ್ಲಾ ಘೋರವಾದ ಬರ ಬಂದು ಏನೂ ಗತಿಯಿಲ್ಲದವನಾದನು. ಆಗ ಅವನು ಹೋಗಿ ಆ ದೇಶದ ನಿವಾಸಿಗಳೊಳಗೆ ಒಬ್ಬನಲ್ಲಿ ಸೇರಿಕೊಂಡನು; ಆ ಮನುಷ್ಯನು ಹಂದಿಗಳನ್ನು ಮೇಯಿಸುವುದಕ್ಕೆ ಅವನನ್ನು ತನ್ನ ಹೊಲಗಳಿಗೆ ಕಳುಹಿಸಿದನು."* 16ನೇ ವಚನವು ಹೇಳುತ್ತದೆ, *"ಹೀಗಿರಲಾಗಿ ಅವನು ಹಂದಿ ತಿನ್ನುತ್ತಿದ್ದ ಕಾಯಿಗಳನ್ನಾದರೂ*

*ತಿಂದು ಹಸಿವನ್ನು ತೀರಿಸಿಕೊಳ್ಳಬೇಕೆಂದು ಆಶೆಪಟ್ಟನು; ಆದರೂ ಯಾರೂ ಅವನಿಗೆ ಕೊಡಲಿಲ್ಲ."* ಊಟವಿಲ್ಲದೆ ಆ ಪರಿಸ್ಥಿತಿಯಲ್ಲಿ, ಅವನು ಬಹಳವಾಗಿ ಹಸಿದು "ನನಗೆ ಹಂದಿಗೆ ಹಾಕುವ ಆಹಾರವಾದರೂ ಅಥವಾ ಏನನ್ನಾದರೂ ತಿನ್ನಲಿಕ್ಕೆ ನೀಡಿ" ಎಂದು ಕೇಳಿದನು. ಆದರೆ ಯಾರೂ ಅವನಿಗೆ ಯಾವ ಆಹಾರವನ್ನೂ ನೀಡಲಿಲ್ಲ. ಅವನು ತನ್ನ ಎಲ್ಲಾ ಆಸ್ತಿಯನ್ನು ದುಂದುವೆಚ್ಚದಿಂದ ಕಳೆದುಕೊಂಡಿದ್ದನು. 17ನೇ ವಚನವು ಹೀಗೆ ಮುಂದುವರೆಯುತ್ತದೆ, *"ಆಗ ಅವನಿಗೆ ಬುದ್ಧಿ ಬಂದು ಅವನು – ನನ್ನ ತಂದೆಯ ಬಳಿಯಲ್ಲಿ ಎಷ್ಟೋ ಮಂದಿ ಕೂಲಿಯಾಳುಗಳಿಗೆ ಬೇಕಾದಷ್ಟು ಆಹಾರವದೆ; ನಾನಾದರೋ ಇಲ್ಲಿ ಹಸಿವಿನಿಂದ ಸಾಯುತ್ತೇನೆ!"* ಅಂದನು. ಮತ್ತೊಂದು ಭಾಷಾಂತರವು, "ಅವನು ತನ್ನ ತಪ್ಪನ್ನು ಅರಿತುಕೊಂಡಾಗ" ಎಂದು ಹೇಳುತ್ತದೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ, ಇವನ ತಂದೆಯ ಬಳಿಯಲ್ಲಿದ್ದ ಕೂಲಿಯಾಳುಗಳಿಗೆ ಸಾಕಷ್ಟು ಆಹಾರವಿತ್ತು, ಆದರೆ ಇವನು ಹಸಿವೆಯಿಂದ ಸಾಯುತ್ತಲಿದ್ದನು.

ಇವನು ಒಂದು ನಿರ್ಧಾರವನ್ನು ಮಾಡಿದನು – ಅಂದರೆ ಪಶ್ಚಾತ್ತಾಪಪಟ್ಟನು. ಪಶ್ಚಾತ್ತಾಪವೆಂದರೆ ಮನಸ್ಸಿನ ಬದಲಾವಣೆ, ಹೃದಯದ ಬದಲಾವಣೆಯಾಗಿದ್ದು ಒಬ್ಬ ವ್ಯಕ್ತಿಯು ತಿರುಗಿಕೊಂಡು, ಒಂದು ಹೊಸ ದಿಕ್ಕಿನಲ್ಲಿ ಚಲಿಸುವುದು ಎಂಬರ್ಥವನ್ನು ನೀಡುತ್ತದೆ. 18–19 ನೇ ವಚನಗಳಲ್ಲಿ ಮಗನು ಹೀಗನ್ನುತ್ತಾನೆ, *"ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗಿ ಅವನಿಗೆ – ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು ಎಂದು ಹೇಳುವೆನು ಅಂದುಕೊಂಡು ಎದ್ದು ತನ್ನ ತಂದೆಯ ಕಡೆಗೆ ಬಂದನು."* "ನನ್ನನ್ನು ಗುಲಾಮನಾಗಿ ಮಾಡಿಕೋ ಅಪ್ಪಾ. ನಾನು ನಿನ್ನ ವಿರುದ್ಧವಾಗಿ ಪಾಪಮಾಡಿರುವೆ, ನಿನ್ನ ಆಸ್ತಿಯನ್ನು ದುಂದುವೆಚ್ಚ ಮಾಡಿರುವೆ, ಹಾಗೂ ದೇವರ ವಿರುದ್ಧವಾಗಿ ಪಾಪ ಮಾಡಿರುವೆ. ನನ್ನನ್ನು ಗುಲಾಮನಾಗಿ ಮಾಡಿಕೋ." ನಂತರ ಅವನು ಎದ್ದು ತನ್ನ ತಂದೆಯ ಬಳಿಗೆ ಹೋದನು. ಪಶ್ಚಾತ್ತಾಪವೆಂಬುದು, ಮನೋಭಾವನೆಯ ಬದಲಾವಣೆಗಿಂತಲೂ, ಮನಸ್ಸಿನ ಬದಲಾವಣೆಗಿಂತಲೂ ಮತ್ತು ಹೃದಯದ ಬದಲಾವಣೆಗಿಂತಲೂ ಮಿಗಿಲಾದುದಾಗಿದೆ; ಇದು ಒಬ್ಬ ವ್ಯಕ್ತಿಯು ನಂಬಿರುವುದನ್ನು ಕ್ರಿಯೆಯಲ್ಲಿ ಮಾಡುವಂತೆ ನಡೆಸುತ್ತದೆ, ಆ ವ್ಯಕ್ತಿಯು ತಿರುಗಿಕೊಳ್ಳುವಂತೆ ಮತ್ತು ಒಂದು ಹೊಸ ದಿಕ್ಕಿನಲ್ಲಿ ಹೋಗುವಂತೆ ಅವನನ್ನು ನಡೆಸುತ್ತದೆ. ನಾವೆಲ್ಲರೂ ದೇವರಿಂದ, ಅಂದರೆ ನಮ್ಮ ತಂದೆಯಿಂದ, ನಮ್ಮ ಮನೆಯಾಗಿರುವ ಪರಲೋಕದಿಂದ ತಿರುಗಿಕೊಂಡವರಾಗಿದ್ದೆವು ಅಥವಾ ದೂರವಾಗಿದ್ದೆವು. ಸತ್ಯವೇದವು ಯೆಶಾಯ 53:6 ರಲ್ಲಿ ಹೀಗೆ ಹೇಳುತ್ತದೆ, *"ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು"* ಆದರೆ ದೇವರು ತನ್ನ ಕರುಣೆಯ ನಿಮಿತ್ತ ನಮ್ಮ ಪಾಪಗಳನ್ನು ಯೇಸುವಿನ ಮೇಲೆ ಹಾಕಿದನು.

20–24 ರಲ್ಲಿ ಕಥೆಯು ಹೀಗೆ ಮುಂದುವರೆಯುತ್ತದೆ, "ಎದ್ದು ತನ್ನ ತಂದೆಯ ಕಡೆಗೆ ಬಂದನು." ಒಂದು ರಾತ್ರಿ, ಈ ಕಥೆಯನ್ನು ಮೊದಲ ಬಾರಿ ಕೇಳುತ್ತಿದ್ದ ವ್ಯಕ್ತಿಗೆ ನಾನು ಇದನ್ನು ಹೇಳುವಾಗ, ಆ ವ್ಯಕ್ತಿ ಇದನ್ನು ಕೇಳಿ ಕಿರಿಯ ಮಗನ ತಂದೆಯು, "ಮಗನೇ, ನೀನು ಏನು ಮಾಡಿರುವೆಯೆಂದು ನೋಡು. ನನ್ನ ಜೀವಿತದಲ್ಲಿ ನಾನು ಸಂಪಾದಿಸಿದ್ದ ಎಲ್ಲಾ ಆಸ್ತಿಯನ್ನು ನೀನು ವ್ಯರ್ಥಗೊಳಿಸಿರುವೆ. ಹಾಗಾಗಿ ನನ್ನ ಆಳುಗಳಲ್ಲಿ ನೀನೂ ಒಬ್ಬನಾಗಿರು" ಎಂದು ಹೇಳುತ್ತಾನೆ ಎಂದು ಭಾವಿಸಿದ್ದನು. ಯಾಕಂದರೆ ಲೋಕದಲ್ಲಿರುವ ತಂದೆಯಂದಿರು ಬಹುಶಃ ಬಹಳ ಕೋಪಗೊಂಡು, ಇಂತಹ ಮನೋಭಾವನೆಯನ್ನು ಹೊಂದಿರುತ್ತಾರೆ, ಆದರೆ ಈ ವಾಕ್ಯದಲ್ಲಿರುವ ತಂದೆಯ ಮನೋಭಾವನೆಯನ್ನು ಇಲ್ಲಿ ಗಮನಿಸಿ: *"ಅವನು ಇನ್ನೂ ದೂರದಲ್ಲಿರುವಾಗ ಅವನ ತಂದೆಯು ಅವನನ್ನು ಕಂಡು ಕನಿಕರಪಟ್ಟು ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಬಹಳವಾಗಿ ಮುದ್ದಿಟ್ಟನು. ಆದರೂ ಮಗನು ಅವನಿಗೆ – ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ ಎಂದು ಹೇಳಲು ತಂದೆಯು ತನ್ನ ಆಳುಗಳಿಗೆ – ಶ್ರೇಷ್ಠವಾದ ನಿಲುವಂಗಿಯನ್ನು ತಟ್ಟನೆ ತಂದು ಇವನಿಗೆ ತೊಡಿಸಿರಿ; ಇವನ ಕೈಗೆ ಉಂಗುರುವನ್ನು ಇಡಿರಿ; ಕಾಲಿಗೆ ಜೋಡು ಮೆಡಿಸಿರಿ; ಕೊಬ್ಬಿಸಿದ ಆ ಕರುವನ್ನು ತಂದು ಕೊಯ್ಯಿರಿ; ಹಬ್ಬ ಮಾಡೋಣ, ಉಲ್ಲಾಸ ಪಡೋಣ. ಈ ನನ್ನ ಮಗನು ಸತ್ತವನಾಗಿದ್ದನು, ತಿರಿಗಿ ಬದುಕಿ ಬಂದನು; ಪೋಲಿಹೋಗಿದ್ದನು, ಸಿಕ್ಕಿದನು ಎಂದು ಹೇಳಿದನು. ಆಗ ಅವರು ಉಲ್ಲಾಸಪಡುವದಕ್ಕೆ ತೊಡಗಿದರು."*

ಒಮ್ಮೆ ಇದನ್ನು ನಾನು ಒಬ್ಬ ವ್ಯಕ್ತಿಗೆ ಹೇಳಿದಾಗ, ಆ ವ್ಯಕ್ತಿಯು, "ಇಲ್ಲಿ ಯೇಸು ಏನು ಹೇಳುತ್ತಿರುವನು ಎಂಬುದನ್ನು ನಾನು ಕಾಣುತ್ತಿರುವೆ. ನಾನು ಕರುಣೆಗಾಗಿ ಪರಲೋಕದ ತಂದೆಯ ಕಡೆಗೆ ತಿರುಗಿಕೊಂಡು, 'ತಂದೆಯೇ, ನಾನು ನಿನ್ನ ವಿರುದ್ಧವಾಗಿ ಪಾಪ ಮಾಡಿರುವೆ, ನಿನ್ನ ಮಗನಾಗಿರಲು ನಾನು ಯೋಗ್ಯನಲ್ಲ' ಎಂದು ಹೇಳಿದರೆ ಆತನು ನನ್ನನ್ನು ಅಂಗೀಕರಿಸುವನು" ಎಂದನು. ನಮ್ಮ ಪರಲೋಕದ ತಂದೆಗೆ ಕರುಣೆಯುಂಟು, ಮತ್ತು ಆತನು ನಿಮ್ಮನ್ನು ಒಬ್ಬ ಕೂಲಿಯಾಳಾಗಿ ಮಾಡುವುದಿಲ್ಲ. ದೇವರು ಪುನ:ನಿಮ್ಮನ್ನು ತನ್ನ ಮಗನ ಸ್ಥಾನಕ್ಕೆ ಸ್ಥಾಪಿಸುತ್ತಾನೆ. ದೇವರು ಕಾಯುತ್ತಿದ್ದಾನೆ. ನೀವು ಆತನಿಗೆ ಬೆನ್ನುಹಾಕಿದ್ದೀರಾ? ನಿಮ್ಮ ತಂದೆಯೂ ದೇವರೂ ಆಗಿರುವಾತನ ಕಡೆಗೆ, ನಿಮ್ಮ ಮನೆಯಾಗಿರುವ ಪರಲೋಕದ ಕಡೆಗೆ ನೀವು ಇಂದೇ ಏಕೆ ತಿರುಗಬಾರದು?

# ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಪಶ್ಚಾತ್ತಾಪ ಎಂಬುದಕ್ಕೆ ಅರ್ಥವನ್ನು ತಿಳಿಸಿ.

2. ಲೂಕ 13:1–5 ನ್ನು ಓದಿರಿ. ಒಬ್ಬ ವ್ಯಕ್ತಿಯು ನಾಶವಾಗದಿರುವಂತೆ ಏನನ್ನು ಮಾಡಲೇಬೇಕಾಗಿದೆ?

**ಲೂಕ 13:1–5** – *ಅದೇ ಸಮಯದಲ್ಲಿ ಕೆಲವರು ಆತನ ಹತ್ತಿರದಲ್ಲಿದ್ದು – ಪಿಲಾತನು ಗಲಿಲಾಯದವರ ರಕ್ತವನ್ನು ಅವರು ಕೊಟ್ಟ ಬಲಿಗಳ ಸಂಗಡ ಬೆರಸಿದನೆಂದು ಆತನಿಗೆ ತಿಳಿಸಿದರು. [2] ಅದಕ್ಕೆ ಆತನು ಅವರಿಗೆ – ಆ ಗಲಿಲಾಯದವರು ಅಂಥ ಕೊಲೆಯನ್ನು ಅನುಭವಿಸಿದ್ದರಿಂದ ಅವರನ್ನು ಎಲ್ಲಾ ಗಲಿಲಾಯದವರಿಗಿಂತ ಪಾಪಿಷ್ಠರೆಂದು ಭಾವಿಸುತ್ತೀರೋ? [3] ಹಾಗೆ ಭಾವಿಸಕೂಡದೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ. ಇಲ್ಲವೆ ಸಿಲೊವಾಮಿನಲ್ಲಿ ಬುರುಜುಬಿದ್ದು ಸತ್ತ ಆ [4] ಹದಿನೆಂಟು ಮಂದಿಯು ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಮನುಷ್ಯರಿಗಿಂತಲೂ ಅಪರಾಧಿಗಳೆಂದು ಭಾವಿಸುತ್ತೀರೋ? [5] ಹಾಗಲ್ಲವೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಅವರಂತೆ ಹಾಳಾಗಿಹೋಗುವಿರಿ ಎಂದುಹೇಳಿದನು.*

3. 2 ಪೇತ್ರ 3:9 ನ್ನು ಓದಿರಿ. ಎಲ್ಲಾ ಜನರಿಗಾಗಿ ದೇವರಿಗೆ ಇರುವ ಬಯಕೆ ಏನಾಗಿದೆ?

**2 ಪೇತ್ರ 3:9** – *ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ.*

4. ಲೂಕ 16:19–31 ನ್ನು ಓದಿರಿ. ಲೂಕ 16:28ರಲ್ಲಿ, ಸತ್ತವರಲ್ಲಿ ಯಾರಾದರು ಹೋಗಿ ತನ್ನ ಸಹೋದರರೊಂದಿಗೆ ಮಾತನಾಡಬೇಕು ಎಂದು ಐಶ್ವರ್ಯವಂತನು ಏಕೆ ಬಯಸಿದನು?

**ಲೂಕ16:19–31** – *ಐಶ್ವರ್ಯವಂತನಾದ ಒಬ್ಬ ಮನುಷ್ಯನಿದ್ದನು. ಅವನು ಸಕಲಾತಿ ನಯವಾದ ನಾರುಮಡಿ ಮುಂತಾದ ವಸ್ತ್ರಗಳನ್ನು ಧರಿಸಿಕೊಂಡು ಪ್ರತಿದಿನವೂ ವೈಭವದೊಡನೆ ಸುಖಸಂತೋಷಪಡುತ್ತಿದ್ದನು. [20]ಅವನ ಮನೇ ಬಾಗಿಲಲ್ಲಿ ಲಾಜರನೆಂಬ ಒಬ್ಬ ಭಿಕ್ಷುಗಾರನು ಬಿದ್ದುಕೊಂಡಿದ್ದನು. [21]ಇವನು ಮೈತುಂಬಾ ಹುಣ್ಣೆದ್ದವನು; ಐಶ್ವರ್ಯವಂತನ ಮೇಜಿನಿಂದ ಬಿದ್ದ ಎಂಜಲನ್ನು ತಿಂದು ಹಸಿವು ತೀರಿಸಿಕೊಳ್ಳಬೇಕೆಂದಿದ್ದನು; ಇಷ್ಟು ಮಾತ್ರವಲ್ಲದೆ ನಾಯಿಗಳು ಸಹ ಬಂದು ಅವನ ಹುಣ್ಣುಗಳನ್ನು ನೆಕ್ಕುವವು. [22]ಹೀಗಿರುವಲ್ಲಿ ಸ್ವಲ್ಪ ಕಾಲದ ಮೇಲೆ ಆ ಭಿಕ್ಷುಗಾರನು ಸತ್ತನು; ದೇವದೂತರು ಅವನನ್ನು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು. ಆ ಐಶ್ವರ್ಯವಂತನು ಸಹ ಸತ್ತನು; ಅವನಿಗೆ ಉತ್ತರಕ್ರಿಯೆಗಳು ಆದವು. [23] ಅವನು ಪಾತಾಳದೊಳಗೆ ಯಾತನೆಪಡುತ್ತಾ ಇರುವಲ್ಲಿ ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನೂ ಇವನ ಎದೆಗೆ ಒರಗಿಕೊಂಡಿದ್ದ ಲಾಜರನನ್ನೂ[24]ನೋಡಿ– ತಂದೆಯೇ, ಅಬ್ರಹಾಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ; ಈ ಉರಿಯಲ್ಲಿ ಸಂಕಟಪಡುತ್ತೇನೆ ಎಂದು ಕೂಗಿ ಹೇಳಿದನು. [25]ಆದರೆ ಅಬ್ರಹಾಮನು– ಕಂದಾ, ನೀನು ಆಶಿಸಿದ ಸುಖವನ್ನು ನಿನ್ನ ಜೀವಮಾನದಲ್ಲಿ ಹೊಂದಿದಿ; ಹಾಗೆಯೇ ಲಾಜರನು ಕಷ್ಟವನ್ನು ಹೊಂದಿದನು ಎಂಬದನ್ನು ನೆನಪಿಗೆ ತಂದುಕೋ. ಈಗಲಾದರೋ ಇಲ್ಲಿ ಇವನಿಗೆ ಸಮಾಧಾನ, ಆದರೆ ನಿನಗೆ ಸಂಕಟ, [26]ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ; ಆದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ ಹೋಗಬೇಕೆಂದಿರುವವರು ಹೋಗಲಾರರು; ಮತ್ತು ಆ ಕಡೆಯಿಂದ ನಮ್ಮ ಬಳಿಗೆ ಯಾರೂ ದಾಟುವದಕ್ಕಾಗದು ಅಂದನು. [27]ಆಗ ಅವನು– ಅಪ್ಪಾ, ಹಾಗಾದರೆ ಲಾಜರನನ್ನು ನನ್ನ ತಂದೆಯ ಮನೆಗೆ ಕಳುಹಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. [28]ನನಗೆ ಐದು ಮಂದಿ ಅಣ್ಣತಮ್ಮಂದಿರಿದ್ದಾರೆ; ಅವರು ಸಹ ಈ ಯಾತನೆಯ ಸ್ಥಳಕ್ಕೆ ಬಂದಾರು; ಬಾರದಂತೆ ಅವನು ತಾನು ಕಂಡದ್ದನ್ನು ಅವರಿಗೆ ಚೆನ್ನಾಗಿ ಹೇಳಲಿ ಅಂದನು. [29]ಆದರೆ ಅಬ್ರಹಾಮನು – ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ ಅವರಲ್ಲಿ ಅವೆ; ಅವುಗಳನ್ನು ಕೇಳಲಿ [30]ಅನ್ನಲು ಅವನು – ತಂದೆಯೇ, ಅಬ್ರಹಾಮನೇ ಹಾಗಲ್ಲ; ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೆ ಹೋದರೆ ಅವರು ದೇವರ ಕಡೆಗೆ ತಿರುಗಿಕೊಳ್ಳುವರು ಅಂದನು.[31] ಅಬ್ರಹಾಮನು ಅವನಿಗೆ – ಅವರು ಮೋಶೆಯ ಮಾತನ್ನೂ ಪ್ರವಾದಿಗಳ ಮಾತನ್ನೂ ಕೇಳದಿದ್ದರೆ ಸತ್ತುಹೋಗಿದ್ದವನೊಬ್ಬನು ಜೀವಿತನಾಗಿ ಎದ್ದರೂ ಅವರು ಒಪ್ಪುವದಿಲ್ಲ ಎಂದು ಹೇಳಿದನು.*

5. ಲೂಕ 16:30 ನ್ನು ಓದಿರಿ. ಈ ಯಾತನೆಯ ಸ್ಥಳಕ್ಕೆ (ನರಕ) ಹೋಗುವುದನ್ನು ತಡೆಯುವುದಕ್ಕಾಗಿ ಈ ಸಹೋದರರು ಏನು ಮಾಡಬೇಕು?

6. ಅ.ಕೃ. 26:18 ನ್ನು ಓದಿರಿ. ಇಲ್ಲಿ ಅಸ್ಪಷ್ಟವೆನಿಸಿದರೂ ಸಹ, ಈ ವಚನವು ಪಶ್ಚಾತ್ತಾಪದ ಕುರಿತಾಗಿ ಮಾತನಾಡುತ್ತಿದೆ. ಪಶ್ಚಾತ್ತಾಪ ಪಡುವವರಿಗೆ ಏನು ಸಂಭವಿಸುತ್ತದೆ?

**ಅ.ಕೃ. 26:18** – *ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು ನನ್ನಲ್ಲಿ ನಂಬಿಕೆಯಿಡುವದರಿಂದ ಪಾಪಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕೆಂದು ಅವರ ಬಳಿಗೆ ನಾನು ನಿನ್ನನ್ನು ಕಳುಹಿಸುತ್ತೇನೆ ಅಂದನು.*

7. ಅ.ಕೃ. 26:20 ನ್ನು ಓದಿರಿ. ಈ ವಾಕ್ಯದ ಕಡೆಯ ಭಾಗದಲ್ಲಿ, ಅನ್ಯಜನರು ಮಾಡಬೇಕಾಗಿರುವ ಮೂರು ಸಂಗತಿಗಳನ್ನು ತಿಳಿಸಲಾಗಿದೆ. ಈ ಮೂರು ಸಂಗತಿಗಳು ಯಾವುವು?

**ಅ.ಕೃ. 26:20** – *ಮೊದಲು ದಮಸ್ಕದವರಿಗೆ, ಆ ಮೇಲೆ ಯೆರೂಸಲೇಮಿನಲ್ಲಿಯೂ ಯೂದಾಯದ ಎಲ್ಲಾ ಸೀಮೆಯಲ್ಲಿಯೂ ಇರುವವರಿಗೆ ಮತ್ತು ಅನ್ಯಜನರಿಗೆ ಸಹ–ನೀವು ದೇವರ ಕಡೆಗೆ ತಿರುಗಿಕೊಳ್ಳಬೇಕೆಂತಲೂ ಮಾನಸಾಂತರಕ್ಕೆ ಯೋಗ್ಯವಾದ ಕೃತ್ಯಗಳನ್ನು ಮಾಡಬೇಕೆಂತಲೂ ಸಾರಿದನು.*

8. ಮತ್ತಾಯ 7:21–23 ನ್ನು ಓದಿರಿ. ಈ ಜನರು ದೇವರ ಚಿತ್ತದ ಬದಲಾಗಿ ಏನನ್ನು ಅಭ್ಯಾಸ ಮಾಡುತ್ತಿರುವರು ಎಂದು ಯೇಸು ಹೇಳುತ್ತಿರುವನು?

**ಮತ್ತಾಯ 7:21–23** – *ನನ್ನನ್ನು ಸ್ವಾಮಿ, ಸ್ವಾಮಿ ಅನ್ನುವವರೆಲ್ಲರೂ ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು. [22] ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. [23] ಆಗ ನಾನು ಅವರಿಗೆ – ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿ ನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು.*

9. ಇದು ನಿಜವಾದ ಪಶ್ಚಾತ್ತಾಪದ ಪ್ರಾಮುಖ್ಯತೆಯ ಬಗ್ಗೆ ಹಾಗೂ ತುಟಿಗಳಿಂದ ದೇವರ ಸೇವೆ ಮಾಡುವುದರ ಕುರಿತಾಗಿ ಏನನ್ನು ತೋರಿಸುತ್ತಿದೆ?

10. ಯೆಶಾಯ 55:7 ನ್ನು ಓದಿರಿ. ದುಷ್ಟರು ಏನು ಮಾಡುತ್ತಾರೆ?

**ಯೆಶಾಯ 55:7** – *ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ, ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ; ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ, ಆತನು ಅವನನ್ನು ಕರುಣಿಸುವನು; ನಮ್ಮ ದೇವರನ್ನು ಆಶ್ರಯಿಸಲಿ, ಆತನು ಮಹಾ ಕೃಪೆಯಿಂದ ಕ್ಷಮಿಸುವನು.*

11. ಅನೀತಿವಂತರು ಮಾಡುವ ಎರಡು ಸಂಗತಿಗಳು ಯಾವುವು?

12. ಮೇಲೆ ಹೇಳಿರುವ ಸಂಗತಿಗಳನ್ನು ನಡೆಸುವಂತಹ ವ್ಯಕ್ತಿಗೆ ದೇವರು ಏನು ಮಾಡುವನು?

13. ಲೂಕ 15:7 ನ್ನು ಓದಿರಿ. ಒಬ್ಬ ಪಾಪಿಯು ಪಶ್ಚಾತ್ತಾಪ ಪಟ್ಟಾಗ ಪರಲೋಕದ ಪ್ರತಿಕ್ರಿಯೆ ಹೇಗಿರುತ್ತದೆ?

**ಲೂಕ 15:7** – *ಅದರಂತೆ ದೇವರಕಡೆಗೆ ತಿರುಗಿಕೊಳ್ಳುವದಕ್ಕೆ ಅವಶ್ಯವಿಲ್ಲದ ತೊಂಭತ್ತೊಂಭತ್ತು ಮಂದಿ ನೀತಿವಂತರಿಗಿಂತ ದೇವರ ಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುವದೆಂದು ನಿಮಗೆ ಹೇಳುತ್ತೇನೆ.*

14. ಅ.ಕೃ. 3:19 ನ್ನು ಓದಿರಿ. ನೀವು ಪಶ್ಚಾತ್ತಾಪಪಟ್ಟು, ಮಾನಸಾಂತರ ಹೊಂದಿದರೆ, ನಿಮ್ಮ ಪಾಪಗಳು ಏನಾಗುತ್ತವೆ?

**ಅ.ಕೃ. 3:19** – *ಆದದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಅತನ ಕಡೆಗೆ ತಿರುಗಿಕೊಳ್ಳಿರಿ. ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿಕಾಲಗಳು ಒದಗುತ್ತವೆ.*

## ಉತ್ತರಗಳು

1. ಪಶ್ಚಾತ್ತಾಪ ಎಂಬುದಕ್ಕೆ ಅರ್ಥವನ್ನು ತಿಳಿಸಿ.

**1) ಇದು ಒಂದು ನೂತನ ಸಮರ್ಪಣೆಯ "ಕಡೆಗೆ ತಿರುಗಿಕೊಳ್ಳುವುದು"**
**2) ಇದು ಮನಸ್ಸಿನ ಮಾರ್ಪಡುವಿಕೆಯಾಗಿದೆ**
**3) ಒಬ್ಬ ವ್ಯಕ್ತಿಯು ತನ್ನ ಹೃದಯವನ್ನು ಮಾರ್ಪಡಿಸುವ ಕಾರಣದಿಂದ ತನ್ನ ಹಳೆಯ ಮಾರ್ಗಗಳನ್ನು ತ್ಯಜಿಸಿ ದೇವರ ಮಾರ್ಗಗಳ ಕಡೆಗೆ ತಿರುಗಿಕೊಳ್ಳುವುದೇ ಆಗಿದೆ**

**4) ಮಾರ್ಗದ ದಿಕ್ಕಿನ ಬದಲಾವಣೆ, ಪರಿಪೂರ್ಣತೆಯಲ್ಲ**

**5) ದಿಕ್ಕನ್ನು ಬದಲಾಯಿಸಲು ಮಾಡುವ ನಿರ್ಧಾರ**

**6) ಹಳೆಯ ಮಾರ್ಗಗಳನ್ನು ಬಿಟ್ಟು ತಿರುಗಿಕೊಂಡು ಪೂರ್ಣವಾಗಿ ದೇವರಿಗೆ ಮತ್ತು ಆತನ ಮಾರ್ಗಗಳಿಗೆ ಸಮರ್ಪಿಸಿಕೊಳ್ಳುವುದು**

**7) ಯೇಸು ಕ್ರಿಸ್ತನ ಮೂಲಕ ಒಬ್ಬ ವ್ಯಕ್ತಿಯು ದೇವರ ಕಡೆಗೆ ತಿರುಗಿಕೊಳ್ಳುವುದು**

2. ಲೂಕ 13:1–5ನ್ನು ಓದಿರಿ. ಒಬ್ಬ ವ್ಯಕ್ತಿಯು ನಾಶವಾಗದಿರುವಂತೆ ಏನನ್ನು ಮಾಡಲೇಬೇಕಾಗಿದೆ?

**ಪಶ್ಚಾತ್ತಾಪ ಪಡಬೇಕು**

3. 2 ಪೇತ್ರ 3:9ನ್ನು ಓದಿರಿ. ಎಲ್ಲಾ ಜನರಿಗಾಗಿ ದೇವರ ಬಯಕೆ ಏನಾಗಿದೆ?

**ಎಲ್ಲರೂ ಪಶ್ಚಾತ್ತಾಪಕ್ಕೆ ನಡಿಸಲ್ಪಡಬೇಕು**

4. ಲೂಕ 16:19–31ನ್ನು ಓದಿರಿ. ಲೂಕ 16:28ರಲ್ಲಿ, ಸತ್ತವರಲ್ಲಿ ಯಾರಾದರು ಹೋಗಿ, ತನ್ನ ಸಹೋದರರೊಂದಿಗೆ ಮಾತನಾಡಬೇಕು ಎಂದು ಐಶ್ವರ್ಯವಂತನು ಏಕೆ ಬಯಸಿದನು?

**ಅವರು ಯಾತನೆಯ ಸ್ಥಳಕ್ಕೆ ಬರದಂತೆ ತಡೆಯುವ ಸಲುವಾಗಿ**

5. ಲೂಕ 16:30ನ್ನು ಓದಿರಿ. ಈ ಯಾತನೆಯ ಸ್ಥಳಕ್ಕೆ (ನರಕ) ಹೋಗುವುದನ್ನು ತಡೆಯುವುದಕ್ಕಾಗಿ ಈ ಸಹೋದರರು ಏನು ಮಾಡಬೇಕು?

**ಅವರು ಪಶ್ಚಾತ್ತಾಪ ಪಡಲೇಬೇಕು**

6. ಅ.ಕೃ. 26:1–8ನ್ನು ಓದಿರಿ. ಇದು ನಿರ್ದಿಷ್ಟವಾಗಿ ಹೇಳಲ್ಪಡದಿದ್ದರೂ ಸಹ, ಈ ವಚನವು ಪಶ್ಚಾತ್ತಾಪದ ಕುರಿತಾಗಿ ಮಾತನಾಡುತ್ತಿದೆ. ಪಶ್ಚಾತ್ತಾಪ ಪಡುವವರಿಗೆ ಏನು ಸಂಭವಿಸುತ್ತದೆ?

**1) ಅವರ ಕಣ್ಣುಗಳು ತೆರೆಯಲ್ಪಡುವವು**
**2) ಕತ್ತಲೆಯಿಂದ ಬೆಳಕಿಗೆ ತಿರುಗುವರು**
**3) ಸೈತಾನನ ಅಧಿಕಾರದಿಂದ ದೇವರ ಕಡೆಗೆ ತಿರುಗುವರು**
**4) ಪಾಪಗಳ ಕ್ಷಮಾಪಣೆಯನ್ನು ಹೊಂದುವರು**
**5) ಸ್ವಾಸ್ಥ್ಯವನ್ನು ಪಡೆಯುವರು**

7. ಅ.ಕೃ. 26:20ನ್ನು ಓದಿರಿ. ಈ ವಾಕ್ಯದ ಕಡೆಯ ಭಾಗದಲ್ಲಿ, ಅನ್ಯಜನರು ಮಾಡಬೇಕಾಗಿರುವ ಮೂರು ಸಂಗತಿಗಳನ್ನು ತಿಳಿಸಲಾಗಿದೆ. ಆ ಮೂರು ಸಂಗತಿಗಳು ಯಾವುವು?

**1) ಪಶ್ಚಾತ್ತಪ ಪಡುವುದು**

**2) ದೇವರ ಕಡೆಗೆ ತಿರುಗಿಕೊಳ್ಳುವುದು**

**3) ತಮ್ಮ ಕೃತ್ಯಗಳಿಂದ ಪಶ್ಚಾತ್ತಾಪವನ್ನು ರುಜುಪಡಿಸುವುದು**

8. ಮತ್ತಾಯ 7:21–23ನ್ನು ಓದಿರಿ. ಈ ಜನರು ದೇವರ ಚಿತ್ತದ ಬದಲಾಗಿ ಏನನ್ನು ಅಭ್ಯಾಸ ಮಾಡುತ್ತಿರುವರು ಎಂದು ಯೇಸು ಹೇಳುತ್ತಿರುವನು?

**ಅಧರ್ಮವನ್ನು ಅಥವಾ ಧರ್ಮವನ್ನು ಮೀರಿ ನಡೆಯುವುದನ್ನು**

9. ನಿಜವಾದ ಪಶ್ಚಾತ್ತಾಪದ ಪ್ರಾಮುಖ್ಯತೆ ಹಾಗೂ ತುಟಿಗಳಿಂದ ದೇವರ ಸೇವೆ ಮಾಡುವುದರ ಕುರಿತಾಗಿ ಇದು ನಿಮಗೆ ಏನನ್ನು ತೋರಿಸುತ್ತಿದೆ?

**ರಕ್ಷಣೆ ಎಂಬುದು ತುಟಿಗಳಿಂದ ಮಾತ್ರವಲ್ಲ ಹೃದಯದಿಂದ ಬರುವುದಾಗಿದೆ**

10. ಯೆಶಾಯ 55:7ನ್ನು ಓದಿರಿ. ದುಷ್ಟರು ಏನು ಮಾಡಬೇಕಾಗಿದೆ?

**ತಮ್ಮ ಮಾರ್ಗವನ್ನು ತ್ಯಜಿಸಬೇಕು**

11. ಅನೀತಿವಂತರು ಯಾವ ಎರಡು ಸಂಗತಿಗಳನ್ನು ಮಾಡುವರು?

**ತಮ್ಮ ದುರಾಲೋಚನೆಗಳನ್ನು ತ್ಯಜಿಸಿ, ದೇವರ ಕಡೆಗೆ ತಿರುಗಿಕೊಳ್ಳುವರು**

12. ಮೇಲೆ ಹೇಳಿರುವ ಸಂಗತಿಗಳನ್ನು ನಡೆಸುವಂತಹ ವ್ಯಕ್ತಿಗೆ ದೇವರು ಏನು ಮಾಡುವನು?

**ಕರುಣೆ ಮತ್ತು ಕ್ಷಮಾಪಣೆಯನ್ನು ಸಮೃದ್ಧಿಯಾಗಿ ನೀಡುವನು**

13. ಲೂಕ 15:7ನ್ನು ಓದಿರಿ. ಒಬ್ಬ ಪಾಪಿಯು ಪಶ್ಚಾತ್ತಾಪ ಪಟ್ಟಾಗ ಪರಲೋಕದ ಪ್ರತಿಕ್ರಿಯೆ ಹೇಗಿರುತ್ತದೆ?

**ಪರಲೋಕದಲ್ಲಿ ಮಹಾಸಂತೋಷವುಂಟಾಗುವದು**

14. ಅ.ಕೃ. 3:19ನ್ನು ಓದಿರಿ. ನೀವು ಪಶ್ಚಾತ್ತಾಪಪಟ್ಟು, ಮಾನಸಾಂತರ ಹೊಂದಿದರೆ, ನಿಮ್ಮ ಪಾಪಗಳು ಏನಾಗುತ್ತವೆ?

**ನನ್ನ ಪಾಪಗಳು ಅಳಿಸಿಹೋಗುತ್ತವೆ**

ಪಾಠ 7

# ಸಮರ್ಪಣೆ

***ಡ್ವೂಣ್ ಕ್ರೊ***

**ಲೂಕ 14:25–26 – *"ಬಹು ಜನರು ಗುಂಪುಗುಂಪಾಗಿ ಯೇಸುವಿನ ಸಂಗಡ ಹೋಗುತ್ತಾ ಇರಲು ಆತನು ತಿರುಗಿಕೊಂಡು ಅವರಿಗೆ ಹೇಳಿದ್ದೇನೆಂದರೆ – ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣ ತಮ್ಮಂದಿರು ಅಕ್ಕತಂಗಿಯರು ಇವರನ್ನೂ, ತನ್ನ ಪ್ರಾಣವನ್ನು ಸಹ ಹಗೆಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು."***

*"ಬಹು ಜನರು ಗುಂಪುಗುಂಪಾಗಿ ಯೇಸುವಿನ ಸಂಗಡ ಹೋಗುತ್ತಾ ಇರಲು ಆತನು ತಿರುಗಿಕೊಂಡು ಅವರಿಗೆ ಹೇಳಿದ್ದೇನೆಂದರೆ"* (ಲೂಕ 14:25). ಯೇಸುವಿನ ಸೇವೆಯ ಈ ಸಮಯದಲ್ಲಿ, ಬಹು ಜನರು ಗುಂಪುಗುಂಪಾಗಿ ಯೇಸುವನ್ನು ಹಿಂಬಾಲಿಸುತ್ತಿದ್ದರು. ಇದನ್ನು ಆಂಗ್ಲ ಭಾಷೆಯ ಭಾಷಾಂತರವು ತಿಳಿಸುವುದಿಲ್ಲ, ಆದರೆ ಗ್ರೀಕ್ ಭಾಷೆಯ ವ್ಯಾಕರಣದಲ್ಲಿ ಇದು ಅಪರಿಪೂರ್ಣವಾದ ಕಾಲವನ್ನು ಸೂಚಿಸುತ್ತದೆ. ಇದರರ್ಥ ಆ ಸಮಯದಲ್ಲಿ ಬಹು ಜನರ ಗುಂಪುಗಳು ಯೇಸುವನ್ನು ಪುನಃ ಪುನಃ, ಸತತವಾಗಿ ಹಿಂಬಾಲಿಸುತ್ತಲೇ ಇದ್ದರು. ಬಹುಶಃ ಇದು ಆತನ ಅದ್ಭುತಗಳ ನಿಮಿತ್ತವಿರಬಹುದು ಅಥವಾ ಆತನು ಅವರಿಗೆ ಆಹಾರವನ್ನು ಒದಗಿಸಿದ್ದಕ್ಕಾಗಿ ಇರಬಹುದು, ನಮಗೆ ನಿಖರವಾದ ಕಾರಣ ತಿಳಿದಿಲ್ಲ, ಆದರೆ ಬಹು ಗುಂಪಿನ ಜನರು ಆತನನ್ನು ಹಿಂಬಾಲಿಸುತ್ತಿದ್ದರು. ಈ ಸಮಯದಲ್ಲಿಯೇ ಯೇಸು ತಿರುಗಿಕೊಂಡು ಉದ್ದೇಶಪೂರ್ವಕಾಗಿಯೇ ಹೇಳಿದಂತಹ ಮಾತುಗಳು ಅಲ್ಲಿದ್ದ ಅನೇಕರು ಆತನನ್ನು ಬಿಟ್ಟು ತಿರುಗಿಕೊಂಡು, ಆತನನ್ನು ಹಿಂಬಾಲಿಸದಂತೆ ಮಾಡಿರುವಂತೆ ಕಂಡುಬರುತ್ತದೆ.

*"ಯಾವನಾದರೂ ನನ್ನ ಬಳಿಗೆ ಬಂದು* [ಅಂದರೆ ನನ್ನೊಂದಿಗೆ ಬರುವುದಕ್ಕೆ, ನನ್ನ ಜೊತೆ ಇರುವುದಕ್ಕೆ, ನನ್ನನ್ನು ಹಿಂಬಾಲಿಸಲು ಬಯಸುವುದಾದರೆ, ಅವರು ಮಾಡಬೇಕಾಗಿರುವುದೇನೆಂದರೆ], *ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣ ತಮ್ಮಂದಿರು ಅಕ್ಕತಂಗಿಯರು ಇವರನ್ನೂ, ತನ್ನ ಪ್ರಾಣವನ್ನು ಸಹ ಹಗೆಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು"* (ಲೂಕ 14:26). ನಾನು ಆ ವಾಕ್ಯವನ್ನು ನೋಡಿದಾಗ, ಕರ್ತನೇ ನೀನು ಈ ಅರ್ಥದಲ್ಲಿ ಹೇಳಲು ಸಾಧ್ಯವಿಲ್ಲ. ಹಗೆ ಮಾಡುವುದು ಎಂದರೆ ಅರ್ಥವೇನು? ಬಹುಶಃ ಇದು ಬಹಳ ಪ್ರೀತಿಸಬಾರದು ಅಥವಾ ಅದರ

ಹಾಗೆ ಅರ್ಥ ನೀಡುವಂತಹುದಾಗಿರಬೇಕು ಎಂದು ಆಲೋಚಿಸಿದೆ. ನಾನು ಅಧ್ಯಯನ ಮಾಡಲು ಪ್ರಾರಂಭಿಸಿದಾಗ, ಆ ಪದದ ಅರ್ಥ ನಿಜವಾಗಿಯೂ "ಹಗೆ" ಎಂಬುದಾಗಿ ಎಂದು ಕಂಡುಹಿಡಿದೆ.

ಯೇಸುವು, ಒಂದು ಅಂಶವನ್ನು ಒತ್ತಿ ಹೇಳಲು ಸಾಧ್ಯವಾದಷ್ಟೂ ಬಲವಾದ ಪದವನ್ನು ಉಪಯೋಗಿಸಿದನು. ನೀವು ನಿಮ್ಮ ತಂದೆ, ನಿಮ್ಮ ತಾಯಿ, ನಿಮ್ಮ ಸಹೋದರಿ, ನಿಮ್ಮ ಸಹೋದರ, ನಿಮ್ಮ ಸ್ವಂತ ಪ್ರಾಣವನ್ನೂ ಸಹ ಹಗೆ ಮಾಡದ ಹೊರತು, ನೀವು ನನ್ನ ಶಿಷ್ಯರಾಗಲು ಸಾಧ್ಯವಿಲ್ಲ. ನಾನು ನಿಮ್ಮನ್ನು ಒಂದು ವಿಷಯ ಕೇಳಲು ಬಯಸುತ್ತೇನೆ: ಈ ಲೋಕದಲ್ಲಿ ನಿಮಗೆ ಸದಾ ಅತಿ ನಿಕಟವಾಗಿರುವ ಸಂಬಂಧ ಯಾವುದಾಗಿದೆ? ನಿಮ್ಮ ತಾಯಿ ಮತ್ತು ತಂದೆ ಅಥವಾ ನಿಮ್ಮ ಗಂಡ/ಹೆಂಡತಿ ಮತ್ತು ಮಕ್ಕಳೋ? ಒಂದುವೇಳೆ ನಿಮ್ಮ ಪತ್ನಿಯು ನಿಮ್ಮ ವಿರುದ್ಧವಾಗಿ ತಿರುಗಿ, ನಿಮಗೆ ವಿಚ್ಛೇದನ ನೀಡಿದರೆ ಏನಾಗುತ್ತದೆ? ಅಥವಾ ನಿಮ್ಮ ತಂದೆ ತಾಯಿಗಳು ಸತ್ತುಹೋದಲ್ಲಿ ನಿಮ್ಮೊಂದಿಗೆ ಯಾರು ಇರುತ್ತಾರೆ? ನಿಮ್ಮ ಸಹೋದರರು ಮತ್ತು ಸಹೋದರಿಯರಿರಬಹುದು. ಯೇಸು ಹೇಳಿದನು, ನೀವು ಇವರನ್ನು ಹಗೆ ಮಾಡದಿದ್ದರೆ, ನನ್ನ ಶಿಷ್ಯರಾಗಲು ಸಾಧ್ಯವಿಲ್ಲ. ಆತನು ಹೇಳುತ್ತಿರುವುದು ಏನು?

ಯಾವಕಾಲಕ್ಕೂ ನಮಗೆ ಅತಿನಿಕಟವಾಗಿರುವ ಸಂಬಂಧಗಳ ಕುರಿತಾಗಿ ಯೇಸು ಮಾತನಾಡುತ್ತಿರುವನು. ನಿಮ್ಮಿಂದ ಆತನು ಒಂದು ಸಮರ್ಪಣೆಯನ್ನು ಕೇಳುತ್ತಿರುವನು, ಆತನೇ ಪ್ರಾಮುಖ್ಯನಾಗಿರುವಂತಹ ಸಮರ್ಪಣೆ. ನಿಮ್ಮ ಜೀವನದಲ್ಲಿ ಆತನೇ ಮೊದಲಿಗನಾಗಿರಬೇಕೆಂದು ಬಯಸುತ್ತಾನೆ. ಭೂಲೋಕದಲ್ಲಿ ನಿಮಗಿರುವ ಅತಿನಿಕಟ ಸಂಬಂಧಗಳೊಂದಿಗೆ ತನ್ನ ಸಂಬಂಧವನ್ನು ಹೋಲಿಸುವವನಾಗಿದ್ದಾನೆ. "ಹಗೆ" ಎನ್ನುವುದು ರೂಪಕಾಲಂಕಾರವಾಗಿದೆ, ಇದು ಹೋಲಿಕೆಯ ಒಂದು ಪದವಾಗಿದೆ ಮತ್ತು ಯೇಸು ಹೇಳುತ್ತಿರುವುದೇನೆಂದರೆ, "ನಿನ್ನೊಂದಿಗಿನ ನನ್ನ ಸಂಬಂಧವು ಬಹಳ ಪ್ರಾಮುಖ್ಯವಾಗಿರುವುದರಿಂದ, ಇದು ಲೋಕದ ಎಲ್ಲಾ ಸಂಗತಿಗಳಿಗಿಂತಲೂ ಉನ್ನತವಾಗಿರಬೇಕೆಂದು ನಾನು ಬಯಸುತ್ತೇನೆ." ನಿಮ್ಮ ಹೆಂಡತಿಗಿಂತಲೂ, ನಿಮ್ಮ ಮಕ್ಕಳಿಗಿಂತಲೂ, ನಿಮ್ಮ ತಾಯಿಗಿಂತಲೂ, ನಿಮ್ಮ ತಂದೆಗಿಂತಲೂ, ಅಥವಾ ನಿಮ್ಮ ಸಹೋದರಿಯರು ಹಾಗೂ ಸಹೋದರರಿಗಿಂತಲೂ ಅಧಿಕವಾಗಿ ನೀವು ಪ್ರೀತಿಸುವ ಒಬ್ಬ ವ್ಯಕ್ತಿಯಿರುವನು. ಆವರು ಯಾರೆಂದು ನಿಮಗೆ ಗೊತ್ತೇ? ಇದು ದೇವರಲ್ಲ. . . ಇದು ನೀವೇ. ನಿಮಗಿರುವ ಅತಿನಿಕಟ ಸಂಬಂಧಗಳಿಗಿಂತಲೂ ಅಧಿಕವಾಗಿ ನಿಮ್ಮನ್ನು ನೀವು ಪ್ರೀತಿಸುವಿರಿ.

ದಾಂಪತ್ಯ ಜೀವಿತಗಳು ಮುರಿಯಲ್ಪಡುತ್ತಿವೆ, ಏಕೆ? ಜನರು ಏಕೆ ವಿವಾಹ ವಿಚ್ಛೇದನವನ್ನು ನೀಡುತ್ತಾರೆ? ಏಕೆಂದರೆ ಅವರು ತಮ್ಮ ಗಂಡ/ಹೆಂಡತಿಯನ್ನು ಪ್ರೀತಿಸುವುದಕ್ಕಿಂತ ಅಧಿಕವಾಗಿ ತಮ್ಮನ್ನು ತಾವು ಪ್ರೀತಿಸುತ್ತಾರೆ. "ನಾನು ಬಯಸುವ ಹಾಗೆ ನೀನು ಇದನ್ನು ಮಾಡುತ್ತಿಲ್ಲ, ಹಾಗಾಗಿ ನಾವಿಬ್ಬರೂ ಒಟ್ಟಿಗೆ ಇರಲು ಸಾಧ್ಯವಿಲ್ಲ."

ಒಂದು ಸಂಬಂಧವು ಮೊದಲ ಸ್ಥಾನದಲ್ಲಿಯೂ ಎಲ್ಲವುಗಳ ಮೇಲೆಯೂ– ಅಂದರೆ ನಿಮ್ಮ ಸ್ವಕೇಂದ್ರಿತ ಜೀವನಕ್ಕೂ ಮಿಗಿಲಾಗಿ ಇರಬೇಕೆಂದು ಯೇಸು ಹೇಳುತ್ತಿರುವನು. ಇದು ನಿಜವಾದ ಶಿಷ್ಯತ್ವವಾಗಿದೆ. ಆತನು ಮೌಲ್ಯವಿಲ್ಲದ ಶಿಷ್ಯತ್ವದ ಕುರಿತಾಗಿ ಮಾತನಾಡುತ್ತಿಲ್ಲ. ನಾವು ಆತನನ್ನು ಹಿಂಬಾಲಿಸಬೇಕೆಂದು ಆತನು ಹೇಳುತ್ತಿರುವನು. ನಮ್ಮ ಜೀವಿತಗಳಲ್ಲಿ ಆತನೇ ಮೊಟ್ಟಮೊದಲನೆಯವನಾಗಿರಬೇಕೆಂದು ಹೇಳುತ್ತಿರುವನು.

## ಶಿಷ್ಯತ್ವದ ಪ್ರಶ್ನೆಗಳು

## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಲೂಕ 9:57–62 ನ್ನು ಓದಿರಿ. ಕ್ರಿಸ್ತನನ್ನು ಹಿಂಬಾಲಿಸುವದಕ್ಕಿರುವ ಸಮರ್ಪಣೆಯ ಮಟ್ಟದ ಕುರಿತಾಗಿ ಈ ವಾಕ್ಯಭಾಗವು ಏನನ್ನು ಬೋಧಿಸುತ್ತಿದೆ?

**ಲೂಕ 9:57–62** – *ಅವರು ದಾರಿಯಲ್ಲಿ ಹೋಗುತ್ತಿರುವಾಗ ಯಾವನೋ ಒಬ್ಬನು ಯೇಸುವಿಗೆ – ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆ ಎಂದು ಹೇಳಲು [58] ಆತನು ಅವನಿಗೆ – ನರಿಗಳಿಗೆ ಗುದ್ದುಗಳವೆ, ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳವೆ; ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ ಎಂದು ಹೇಳಿದನು. [59] ಆತನು ಮತ್ತೊಬ್ಬನಿಗೆ – ನನ್ನನ್ನು ಹಿಂಬಾಲಿಸು ಎಂದು ಹೇಳಲು ಅವನು – ಸ್ವಾಮೀ, ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರಕ್ರಿಯೆಗಳನ್ನು ಮಾಡಿ ಬರುವಂತೆ ನನಗೆ ಅಪ್ಪಣೆಯಾಗಬೇಕು ಅಂದನು. [60] ಆದರೆ ಆತನು ಅವನಿಗೆ – ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರಕ್ರಿಯೆಗಳನ್ನು ಮಾಡಲಿ, ನೀನಂತೂ ಹೋಗಿ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು ಎಂದು ಹೇಳಿದನು. [61] ಇನ್ನೊಬ್ಬನು ಸಹ – ಸ್ವಾಮೀ, ನಿನ್ನನ್ನು ಹಿಂಬಾಲಿಸುತ್ತೇನೆ; ಆದರೆ ಮೊದಲು ನನ್ನ ಮನೆಯವರಿಗೆ ಹೇಳಿ ಬರುವದಕ್ಕೆ ನನಗೆ ಅಪ್ಪಣೆಯಾಗಬೇಕು ಅಂದನು. [62] ಯೇಸು ಅವನಿಗೆ – ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು ಹೇಳಿದನು.*

2. ಲೂಕ 8:13–14 ನ್ನು ಓದಿರಿ. ಕೆಲವು ಜನರು ಕ್ರೈಸ್ತ ನಂಬಿಕೆಯನ್ನು ಬಿಟ್ಟು ಏಕೆ ಬೀಳುವರು, ತಿರುಗಿಕೊಳ್ಳುವರು?

**ಲೂಕ 8:13–14** – *ಕೆಲವರು ವಾಕ್ಯವನ್ನು ಕೇಳಿದಾಗಲೇ ಅದನ್ನು ಸಂತೋಷದಿಂದ ಅಂಗೀಕರಿಸುತ್ತಾರೆ; ಇವರಿಗೆ ಬೇರಿಲ್ಲದ ಕಾರಣ ಸ್ವಲ್ಪಕಾಲ ಮಾತ್ರವೇ ನಂಬಿಕೊಂಡಿದ್ದು ಶೋಧನೆಯ ಕಾಲದಲ್ಲಿ ಬಿದ್ದು ಹೋಗುತ್ತಾರೆ; ಇವರೇ ಬಂಡೆಯ ನೆಲವಾಗಿರುವವರು. [14] ಕೆಲವರು ವಾಕ್ಯವನ್ನು ಕೇಳಿದ ಮೇಲೆ ಬರಬರುತ್ತಾ ಈ ಜೀವಮಾನದಲ್ಲಿ ಆಗುವ ಚಿಂತೆ ಐಶ್ವರ್ಯಭೋಗಗಳಿಂದ ಅಡಗಿಸಲ್ಪಟ್ಟು ಫಲವನ್ನು ಮಾಗಿಸುವದಿಲ್ಲ; ಇವರೇ ಮುಳ್ಳುಗಿಡಗಳಲ್ಲಿ ಬೀಜಬಿದ್ದ ನೆಲವಾಗಿರುವವರು.*

3. ಯೆಹೆಜ್ಕೇಲ 16:8 ನ್ನು ಓದಿರಿ. ದೇವರು ಜನರೊಂದಿಗಿರುವ ತನ್ನ ಸಂಬಂಧವನ್ನು ವರ್ಣಿಸಲು ವಿವಾಹದ ಉದಾಹರಣೆಯನ್ನು ಉಪಯೋಗಿಸುತ್ತಾನೆ. ಈ ಸಂಬಂಧದಲ್ಲಿ ಒಬ್ಬ ವ್ಯಕ್ತಿಯು ಯಾರ ಆಸ್ತಿಯಾಗಿರುತ್ತಾರೆ?

**ಯೆಹೆಜ್ಕೇಲ 16:8** – *ನಾನು ಹಾದುಹೋಗುತ್ತಾ ನಿನ್ನನ್ನು ನೋಡಲು ಇಗೋ, ನೀನು ಮದುವೆಗೆ ಸಿದ್ಧಳಾಗಿದ್ದಿ; ಆಗ ನಾನು ನನ್ನ ಹೊದಿಕೆಯ ನೆರಿಗೆಯನ್ನು ನಿನ್ನ ಮೇಲೆ ಹಾಕಿ ನಿನ್ನ ಮಾನವನ್ನು ಕಾಪಾಡಿದೆನು; ಇದಲ್ಲದೆ ನಾನು ನಿನಗೆ ಮಾತುಕೊಟ್ಟು ಒಡಂಬಡಿಕೆ ಮಾಡಿಕೊಂಡದರಿಂದ ನೀನು ನನ್ನವಳಾದಿ; ಇದು ಕರ್ತನಾದ ಯೆಹೋವನ ನುಡಿ.*

4. 1 ಕೊರಿಂಥ 6:19 ನ್ನು ಓದಿರಿ. ನೀವು ಯಾರಿಗೆ ಸೇರಿದವರಾಗಿರುವಿರಿ?

**1 ಕೊರಿಂಥ 6:19–20** – *ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಯೆಂಬದು ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ.*

5. 1 ಕೊರಿಂಥ 6:20 ನ್ನು ಓದಿರಿ. ನಿಮ್ಮ ದೇಹ ಮತ್ತು ನಿಮ್ಮ ಆತ್ಮವು ಯಾರಿಗೆ ಸೇರಿದುದಾಗಿದೆ?

6. ಯಾಕೋಬ 4:4 ನ್ನು ಓದಿರಿ. ನೀವು ದೇವರ ವಿರುದ್ಧವಾಗಿ ಆತ್ಮೀಕ ವ್ಯಭಿಚಾರವನ್ನು ಮಾಡಲು ಸಾಧ್ಯವೇ?

**ಯಾಕೋಬ 4:4** – *ವ್ಯಭಿಚಾರಿಗಳು ನೀವು; ಇಹಲೋಕಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ.*

7. ದೇವರ ದೃಷ್ಟಿಯಲ್ಲಿ ಆತ್ಮೀಕ ವ್ಯಭಿಚಾರವು ಏನನ್ನು ಒಳಗೊಂಡಿರುತ್ತದೆ? ರೋಮ 1:25 ನ್ನು ನೋಡಿರಿ.

**ರೋಮ 1:25** – *ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿ ವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು. ಸೃಷ್ಟಿಕರ್ತನೊಬ್ಬನೇ ನಿರಂತರ ಸ್ತುತಿ ಹೊಂದತಕ್ಕವನು. ಆಮೆನ್.*

8. ಯೋಹಾನ 2:23–25 ನ್ನು ಓದಿರಿ. ಈ ವಾಕ್ಯಗಳಿಂದ ಸಮರ್ಪಣೆ ಮತ್ತು ನಂಬಿಕೆಯ ಬಗ್ಗೆ ನಾವು ಏನನ್ನು ಕಲಿಯಬಹುದು?

**ಯೋಹಾನ 2:23–25** – *ಆತನು ಪಸ್ಕಹಬ್ಬದ ಜಾತ್ರೆಯಲ್ಲಿ ಯೆರೂಸಲೇಮಿನೊಳಗೆ ಇದ್ದಾಗ ಬಹು ಜನರು ಆತನು ಮಾಡಿದ ಸೂಚಕ ಕಾರ್ಯಗಳನ್ನು ನೋಡಿ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರು. ಆದರೆ ಯೇಸು ಎಲ್ಲರನ್ನೂ ಬಲ್ಲವನಾದ್ದರಿಂದ ಅವರಿಗೆ ವಶವಾಗಲಿಲ್ಲ. ಆತನು ಪ್ರತಿ ಮನುಷ್ಯನ ಅಂತರ್ಯವನ್ನು ತಿಳಿದವನಾದ ಕಾರಣ ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿ ಕೊಡಬೇಕಾದ ಅವಶ್ಯವಿರಲಿಲ್ಲ.*

9. ಲೂಕ 14:28–30 ನ್ನು ಓದಿರಿ. ಯೇಸುವನ್ನು ಹಿಂಬಾಲಿಸುವುದಕ್ಕೆ ತೆರಬೇಕಾದ ಬೆಲೆಯನ್ನು ನೀವು ಪರಿಗಣಿಸಿರುವಿರಾ? ನೀವು ಆತನನ್ನು ಹಿಂಬಾಲಿಸಲು ಬಯಸುವಿರಾ?

**ಲೂಕ 14:28–30** – *ನಿಮ್ಮಲ್ಲಿ ಯಾವನಾದರೂ ಬುರುಜನ್ನು ಕಟ್ಟಿಸಬೇಕೆಂದು ಆಲೋಚಿಸಿದರೆ ಅವನು ಮೊದಲು ಕೂತುಕೊಂಡು – ಅದಕ್ಕೆ ಎಷ್ಟು ಖರ್ಚು ಹಿಡಿದೀತು, ಅದನ್ನು ತೀರಿಸುವದಕ್ಕೆ ಸಾಕಾಗುವಷ್ಟು ಹಣ ನನ್ನಲ್ಲಿ ಉಂಟೋ ಎಂದು ಲೆಕ್ಕಮಾಡುವದಿಲ್ಲವೇ? ಹೀಗೆ ಲೆಕ್ಕ ಮಾಡದೆ ಅದಕ್ಕೆ ಅಸ್ತಿವಾರ ಹಾಕಿದ ಮೇಲೆ ಆ ಕೆಲಸವನ್ನು ಪೂರೈಸಲಾರದೆ ಹೋದರೆ ನೋಡುವವರೆಲ್ಲರು – ಈ ಮನುಷ್ಯನು ಕಟ್ಟಿಸುವದಕ್ಕಂತೂ ತೊಡಗಿದನು, ಕೆಲಸ ಪೂರೈಸಲಾರದೆ ಹೋದನು ಎಂದು ಹಾಸ್ಯ ಮಾಡುವರು.*

## ಉತ್ತರಗಳು

1. ಲೂಕ 9:57–62ನ್ನು ಓದಿರಿ. ಈ ವಾಕ್ಯಭಾಗವು, ಕ್ರಿಸ್ತನನ್ನು ಹಿಂಬಾಲಿಸಲು ಯಾವ ಮಟ್ಟದ ಸಮರ್ಪಣೆಯ ಅಗತ್ಯವಿದೆ ಎಂದು ಬೋಧಿಸುತ್ತಿದೆ?

**ಸಂಪೂರ್ಣ ಸಮರ್ಪಣೆ**

2. ಲೂಕ 8:13–14ನ್ನು ಓದಿರಿ. ಕೆಲವು ಜನರು ಕ್ರೈಸ್ತ ನಂಬಿಕೆಯನ್ನು ಬಿಟ್ಟು ಹೋಗಲು ಕಾರಣವೇನು?

**ಅವರೆಂದೂ ದೇವರ ವಾಕ್ಯದಲ್ಲಿ ಆಳವಾಗಿ ಬೇರೂರಲಿಲ್ಲ. ಲೋಕದ ಚಿಂತೆ, ಐಶ್ವರ್ಯ ಮತ್ತು ಭೋಗಗಳು ಅವರನ್ನು ದೂರಕ್ಕೆ ಎಳೆದೊಯ್ದವು**

3. ಯೆಹೆಜ್ಕೇಲ 16:8ನ್ನು ಓದಿರಿ. ದೇವರು ಜನರೊಂದಿಗಿರುವ ತನ್ನ ಸಂಬಂಧವನ್ನು ವರ್ಣಿಸಲು ವಿವಾಹದ ಉದಾಹರಣೆಯನ್ನು ಉಪಯೋಗಿಸುತ್ತಾನೆ. ಈ ಸಂಬಂಧದಲ್ಲಿ ಒಬ್ಬ ವ್ಯಕ್ತಿಯು ಯಾರ ಆಸ್ತಿಯಾಗಿರುತ್ತಾನೆ?

**ದೇವರ ಆಸ್ತಿ**

4. 1 ಕೊರಿಂಥ 6:19ನ್ನು ಓದಿರಿ. ನೀವು ಯಾರಿಗೆ ಸೇರಿದವರಾಗಿರುವಿರಿ?

**ದೇವರಿಗೆ**

5. 1 ಕೊರಿಂಥ 6:20ನ್ನು ಓದಿರಿ. ನಿಮ್ಮ ದೇಹ ಮತ್ತು ನಿಮ್ಮ ಆತ್ಮವು ಯಾರಿಗೆ ಸೇರಿದುದಾಗಿದೆ?

**ದೇವರಿಗೆ**

6. ಯಾಕೋಬ 4:4ನ್ನು ಓದಿರಿ. ನೀವು ದೇವರ ವಿರುದ್ಧವಾಗಿ ಆತ್ಮೀಕ ವ್ಯಭಿಚಾರವನ್ನು ಮಾಡಲು ಸಾಧ್ಯವೇ?

**ಹೌದು**

7. ದೇವರ ದೃಷ್ಟಿಯಲ್ಲಿ ಆತ್ಮೀಕ ವ್ಯಭಿಚಾರವು ಏನನ್ನು ನೇಮಿಸುತ್ತದೆ?

**ದೇವರನ್ನು ಬಿಟ್ಟು ವಿಗ್ರಹಗಳ ಕಡೆ ತಿರುಗಿರುವ ಒಂದು ಹೃದಯವಾಗಿದೆ. (ಅಂದರೆ ನೀವು ದೇವರಿಗಿಂತ ಮಿಗಿಲಾಗಿ ಪ್ರಾಮುಖ್ಯತೆ ಕೊಡುವ ಸಂಗತಿಗಳು)**

ರೋಮ 1:25 ನ್ನು ನೋಡಿರಿ.

8. ಯೋಹಾನ 2:23–25ನ್ನು ಓದಿರಿ. ಈ ವಾಕ್ಯಗಳಿಂದ ಸಮರ್ಪಣೆ ಮತ್ತು ನಂಬಿಕೆಯ ಬಗ್ಗೆ ನಾವು ಏನನ್ನು ಕಲಿಯಬಹುದು?

**ಯೇಸು ನಮ್ಮ ಪೂರ್ಣ ಹೃದಯವನ್ನು ಬಯಸುತ್ತಾನೆ ಎನ್ನುವುದನ್ನು (ಸಂಪೂರ್ಣವಾದ ಸಮರ್ಪಣೆ)**

9. ಲೂಕ 14:28–30ನ್ನು ಓದಿರಿ.

ಯೇಸುವನ್ನು ಹಿಂಬಾಲಿಸುವುದಕ್ಕಿರುವ ಲೆಕ್ಕವನ್ನು ನೀವು ಪರಿಗಣಿಸಿರುವಿರೇ?
ನೀವು ಆತನನ್ನು ಹಿಂಬಾಲಿಸಲು ಬಯಸುವಿರೇ?

## ಪಾಠ 8

# ನೀರಿನ ದೀಕ್ಷಾಸ್ನಾನ

### *ಡ್ವೂಣ್ ಕ್ರೊ*

**ಪ್ರಶ್ನೆ:** "ಒಬ್ಬರು ಪರಲೋಕಕ್ಕೆ ಹೋಗಬೇಕಾದರೆ ದೀಕ್ಷಾಸ್ನಾನದ ಅಗತ್ಯವಿದೆ ಎಂಬುದರ ಬಗ್ಗೆ ನಾನು ತಿಳಿದುಕೊಳ್ಳಬೇಕು. ನಾನು ದೇವರನ್ನು ಪ್ರೀತಿಸುತ್ತೇನೆ ಮತ್ತು ನಾನು ಏಳು ವರ್ಷ ವಯಸ್ಸಿನಲ್ಲಿದ್ದಾಗ ದೀಕ್ಷಾಸ್ನಾನವನ್ನು ಪಡೆದುಕೊಂಡೆನು. ಈಗ ನನಗೆ 18 ವರ್ಷ ವಯಸ್ಸಾಗಿದೆ, ಸ್ವತಂತ್ರ ಸಭೆಗೆ ಸೇರಿದ ಒಬ್ಬರು ಅಷ್ಟು ಚಿಕ್ಕವಯಸ್ಸಿನಲ್ಲಿ ಯಾರೂ ರಕ್ಷಣೆ ಹೊಂದಲು ಮತ್ತು ದೀಕ್ಷಾಸ್ನಾನ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ನನಗೆ ಹೇಳಿದರು. ಅಲ್ಲದೆ ನೀನು ಪರಲೋಕಕ್ಕೆ ಹೋಗಬೇಕಾದರೆ ಈಗ ದೀಕ್ಷಾಸ್ನಾನವನ್ನು ತೆಗೆದುಕೊಳ್ಳಲೇಬೇಕು ಎಂದು ಹೇಳಿದರು, ಆದರೆ ನನ್ನ ಬ್ಯಾಪ್ಟಿಸ್ಟ್ ಕುಟುಂಬವು ಇದಕ್ಕೆ ಒಪ್ಪಿಗೆ ನೀಡಲಿಲ್ಲ. ನಾನು ಪರಲೋಕಕ್ಕೆ ಹೋಗಬೇಕೆಂದೇ ಬಯಸುವೆನು. ನನ್ನಿಂದ ಸಾಧ್ಯವಾದಷ್ಟು ನಾನು ದೇವರಿಗಾಗಿ ಜೀವಿಸುತ್ತಿರುವೆನು, ಆದರೆ ನಾನು ದೀಕ್ಷಾಸ್ನಾನವನ್ನು ತೆಗೆದುಕೊಳ್ಳಬೇಕಾದರೆ ಅದಕ್ಕೆ ಸರಿಯಾದ ವಯಸ್ಸನ್ನು ನಾನು ಹೊಂದಿರಬೇಕೇ ಎನ್ನುವುದನ್ನು ಕುರಿತಾಗಿ ತಿಳಿದುಕೊಳ್ಳಲು ಬಯಸುತ್ತಿರುವೆನು. ಆದಷ್ಟು ಬೇಗನೆ ನನಗೆ ಸಹಾಯ ಮಾಡಿರಿ. ದೇವರು ಆಶೀರ್ವದಿಸಲಿ, ವಂದನೆಗಳು."

**ಪ್ರತಿಕ್ರಿಯೆ:** ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ರಕ್ಷಣೆ ಮತ್ತು ಪಾಪಗಳ ಕ್ಷಮಾಪಣೆ ಎಂಬುದು ಉಚಿತವಾಗಿ ದೊರಕುವ ಒಂದು ವರವಾಗಿವೆ. ಅ.ಕೃ. 10:43 ಹೇಳುತ್ತದೆ: *"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ ಅಂದನು."* ರಕ್ಷಣೆಯು ನಂಬಿಕೆಯ ಮೂಲಕ ಬರುತ್ತದೆ; ಅಂದರೆ ಯೇಸುವಿನ ಮೇಲೆ ಹಾಗೂ ಆತನ ಸುರಿಸಲ್ಪಟ್ಟ ರಕ್ತದ ಮೇಲೆ ಭರವಸೆ ಇಡುವುದು ಮತ್ತು ಅದನ್ನು ಆಧಾರ ಮಾಡಿಕೊಳ್ಳುವುದರಿಂದ ದೇವರ ಮುಂದೆ ನಿಲ್ಲುವುದು ಸಾಧ್ಯವಾಗುತ್ತದೆ. ಅ. ಕೃ. 10:44–48ರಲ್ಲಿ ದೀಕ್ಷಾಸ್ನಾನವನ್ನು ಪಡೆಯುವುದಕ್ಕಿಂತ ಮೊದಲೇ ವಿಶ್ವಾಸಿಗಳಿಗೆ (ಅವರ ರಕ್ಷಣೆಯ ಖಚಿತತೆಯನ್ನು ನೀಡಲು) ಪವಿತ್ರಾತ್ಮನನ್ನು ನೀಡಲಾಗಿತ್ತು.

ಇದು ಸತ್ಯವಾಗಿದ್ದರೂ ಸಹ, ಕೆಲವು ಸಮಯಗಳಲ್ಲಿ ದೀಕ್ಷಾಸ್ನಾನದ ಸಮಯದಲ್ಲಿಯೇ (ಅ.ಕೃ. 2:38) ಪಾಪಗಳ ಪರಿಹಾರವಾಗುವಂತೆ ಕಂಡುಬರುತ್ತದೆ.

ಇದು ಏಕೆಂದರೆ ಒಬ್ಬ ವ್ಯಕ್ತಿಯು ಪಶ್ಚಾತ್ತಾಪದಲ್ಲಿ ಮತ್ತು ನಂಬಿಕೆಯಲ್ಲಿ ಯೇಸುವಿನ ಕಡೆಗೆ ತಿರುಗಿಕೊಂಡಾಗ ಇದನ್ನು ವ್ಯಕ್ತಪಡಿಸುವಿಕೆಯಲ್ಲಿ, ಅಥವಾ ಕ್ರಿಯೆಯಲ್ಲಿ ತೋರ್ಪಡಿಸುವ ನಂಬಿಕೆಯೇ ದೀಕ್ಷಾಸ್ನಾನವಾಗಿದೆ (ಮಾರ್ಕ 16:16 ಹೇಳುತ್ತದೆ, *"ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು").* ಹಾಗೂ ಇದು ಒಂದು ಶುದ್ಧವಾದ ಮನಸ್ಸಾಕ್ಷಿಗಾಗಿ ಕರ್ತನಿಗೆ ಮೊರೆಯಿಡುವ ಒಂದು ಮಾರ್ಗವಾಗಿದೆ (ಅ.ಕೃ. 22:16 ಮತ್ತು 1 ಪೇತ್ರ 3:21).

ನೀವು ನಿಮ್ಮ ಏಳನೆಯ ವಯಸ್ಸಿನಲ್ಲಿ ನಿಮ್ಮ ಪೂರ್ಣ ಹೃದಯದಿಂದ ನಿಜವಾಗಿಯೂ ಯೇಸುವಿನ ಕಡೆಗೆ ತಿರುಗಿಕೊಂಡು, ದೀಕ್ಷಾಸ್ನಾನವನ್ನು ಹೊಂದಿದ್ದರೆ, ಮಗುವಿನಂತಹ ನಿಮ್ಮ ನಂಬಿಕೆಯನ್ನು ದೇವರು ಅಂಗೀಕರಿಸುತ್ತಾನೆ. ದೀಕ್ಷಾಸ್ನಾನಕ್ಕೆ ಬೇಕಾದಂತಹ ಅವಶ್ಯಕತೆಗಳಿವೆ. ಇದರಲ್ಲಿ ಪಶ್ಚಾತ್ತಾಪವು ಒಂದು ಅಗತ್ಯವಾಗಿದೆ. ನಿಮ್ಮಲ್ಲಿ ಪಾಪದಿಂದ ತಿರುಗಿಕೊಂಡು ಯೇಸುವಿನ ಬಳಿಗೆ ಮತ್ತು ಆತನ ಕ್ಷಮಾಪಣೆಗೆ ನಡೆಸುವಂತಹ (ಅ.ಕೃ. 2:38, 20:21 ಮತ್ತು 17:30) ಫಲಿತಾಂಶವನ್ನು ನೀಡುವ ಮಾರ್ಪಾಡನ್ನು ಹೊಂದಿರುವ ಹೃದಯ ಮತ್ತು ಮನಸ್ಸನ್ನು ನೀವು ಹೊಂದಿಕೊಂಡಿರುವಿರೇ? ಯೇಸುವನ್ನು ನಿಮ್ಮ ಕರ್ತನಾಗಿ ಮತ್ತು ರಕ್ಷಕನನ್ನಾಗಿ ಅನುಭವಿಸಿರುವಿರೇ (ಮಾರ್ಕ 16:16, ಯೋಹಾನ 3:16 ಮತ್ತು ರೋಮ 10:9–10)? ಹಾಗಿಲ್ಲದಿದ್ದರೆ, ಈಗ ನೀವು ಯೇಸುವಿನ ಕಡೆಗೆ ತಿರುಗಿಕೊಂಡು, ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು, ನಿಮ್ಮನ್ನು ಕ್ಷಮಿಸುವಂತಹ ಆತನ ಕೃಪೆಯ ಕಡೆಗೆ ತಿರುಗಿಕೊಳ್ಳಿರಿ ಹಾಗೂ ಆತನನನ್ನು ಹಿಂಬಾಲಿಸುವ ನಿರ್ಧಾರವನ್ನು ನೀರಿನ ದೀಕ್ಷಾಸ್ನಾನದ ಮೂಲಕ ಮುದ್ರೆ ಹಾಕಿರಿ.

**ದೀಕ್ಷಾಸ್ನಾನ ಎನ್ನುವುದು ಒಬ್ಬ ವ್ಯಕ್ತಿಗೆ ಯೇಸುವಿನಲ್ಲಿರುವ ನಂಬಿಕೆಯನ್ನು ವ್ಯಕ್ತಪಡಿಸುವ ಒಂದು ಕ್ರಿಯೆಯಾಗಿದೆ.** ಆ ನಂಬಿಕೆ ಇಲ್ಲದಿದ್ದಲ್ಲಿ, ಕ್ರಿಯೆಯು ನಿರರ್ಥಕವಾಗಿದೆ. ಯೇಸುವನ್ನು ಕರ್ತನಾಗಿ ಮತ್ತು ರಕ್ಷಕನಾಗಿ ನಂಬಿದವರು, ತಮ್ಮ ನಂಬಿಕೆಯನ್ನು ವ್ಯಕ್ತಪಡಿಸುವುದಕ್ಕೆ ಮತ್ತು ಬಹಿರಂಗವಾಗಿ ಯೇಸುವನ್ನು ಅರಿಕೆಮಾಡುವುದಕ್ಕೆ ಇಚ್ಛಿಸುವವರಾಗಿರುತ್ತಾರೆ. ಯೇಸುವಿನ ಆಜ್ಞೆಗೆ "ಇಲ್ಲ/ಬೇಡ" ಎಂದು ಹೇಳುವವರು ಒಂದು ವಿಧದಲ್ಲಿ ಸತ್ತ ನಂಬಿಕೆಯನ್ನು ತೋರಿಸುತ್ತಿರುವರು. **ವ್ಯಕ್ತಪಡಿಸುವುದಕ್ಕೆ ಇಚ್ಛಿಸದಿರುವ ಜನರ ನಂಬಿಕೆಯು ಸತ್ತದ್ದಾಗಿದೆ** (ಯಾಕೋಬ 2:18–19). ನಂಬಿಕೆ ಮಾತ್ರವೇ ರಕ್ಷಿಸುತ್ತದೆ, ಆದರೆ ರಕ್ಷಿಸುವ ನಂಬಿಕೆ ತಾನೊಂದೇ ಇರುವುದಿಲ್ಲ. ಅದು ಯಾವಾಗಲೂ ವ್ಯಕ್ತಪಡಿಸುವುದಕ್ಕೆ ಇಚ್ಛಿಸುತ್ತದೆ. ನಂಬಿಕೆಯನ್ನು ವ್ಯಕ್ತಪಡಿಸುವುದಕ್ಕೆ ದೀಕ್ಷಾಸ್ನಾನವು ಒಂದು ಮಾರ್ಗವಾಗಿದೆ. **ರಕ್ಷಿಸುವಂತಹುದು ದೀಕ್ಷಾಸ್ನಾನವಲ್ಲ; ಯೇಸುವೇ ರಕ್ಷಿಸುವವನಾಗಿದ್ದಾನೆ. ನೀರು ಪಾಪಗಳನ್ನು ತೊಳೆಯಲು ಸಾಧ್ಯವಿಲ್ಲ; ಯೇಸುವಿನ ರಕ್ತವು ಪಾಪಗಳನ್ನು ತೊಳೆಯುತ್ತದೆ.** ಆದರೆ ನಂಬಿಕೆಯು ಆತನ ರಕ್ತವನ್ನು ನಿಮಗೆ ಹಚ್ಚುತ್ತದೆ, ಮತ್ತು ಕೆಲವೊಮ್ಮೆ ಒಬ್ಬ ವ್ಯಕ್ತಿಯು ದೀಕ್ಷಾಸ್ನಾನವನ್ನು ಪಡೆಯುವ ಸಮಯದಲ್ಲಿ ಆ ನಂಬಿಕೆಯನ್ನು ವ್ಯಕ್ತಪಡಿಸುತ್ತಾನೆ (ಅ.ಕೃ. 22:16). ಪ್ರಶ್ನೆಯೇನೆಂದರೆ,

ನೀವು ಪಶ್ಚಾತ್ತಾಪ ಪಟ್ಟಿದ್ದೀರಾ? ಆತನಲ್ಲಿ (ಯೇಸು) ನೀವು ನಂಬಿಕೆ ಇಟ್ಟಿದ್ದೀರಾ? ಹಾಗಿದ್ದರೆ, ತಡವೇಕೆ – ಏಳಿ, ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ!

## ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಇಲ್ಲಿ ಆ ಯೌವನಸ್ಥನು ಕೇಳುತ್ತಿರುವ ಪ್ರಶ್ನೆ ಏನಾಗಿದೆ?

2. ಅ.ಕೃ. 10:43ರ ಪ್ರಕಾರ, ರಕ್ಷಣೆಯು ನಮಗೆ ಹೇಗೆ ಬರುತ್ತದೆ?

**ಅ.ಕೃ. 10:43** – *ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ ಅಂದನು.*

3. ದೀಕ್ಷಾಸ್ನಾನ ಎಂಬುದು ನಂಬಿಕೆಯನ್ನು ಬಹಿರಂಗಪಡಿಸುವುದಾಗಿದ್ದು ಇದು ರಕ್ಷಣೆಯ ಸಮಯದಲ್ಲಿ ಸಂಭವಿಸುವಂತಹುದಾಗಿದೆ. ಈ ಸತ್ಯವನ್ನು ಅ.ಕೃ. 2:38 ಹೇಗೆ ವ್ಯಕ್ತಪಡಿಸುತ್ತದೆ?

**ಅ.ಕೃ. 2:38** – *ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ.*

4. ಈ ಸತ್ಯವನ್ನು ಮಾರ್ಕ 16:16 ಹೇಗೆ ವ್ಯಕ್ತಪಡಿಸುತ್ತದೆ?

**ಮಾರ್ಕ 16:16** – *ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು.*

5. ದೀಕ್ಷಾಸ್ನಾನವು ಕರ್ತನಿಗೆ ಮೊರೆಯಿಡುವ ಒಂದು ಮಾರ್ಗವಾಗಿದೆ. ಈ ಸತ್ಯವನ್ನು ಅ.ಕೃ. 22:16 ಹೇಗೆ ವ್ಯಕ್ತಪಡಿಸುತ್ತದೆ?

**ಅ.ಕೃ. 22:16** – *ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು.*

6. ದೀಕ್ಷಾಸ್ನಾನವು ಒಳ್ಳೇ ಮನಸ್ಸಾಕ್ಷಿಗಾಗಿ ದೇವರಿಗೆ ಮೊರೆಯಿಡುವುದಾಗಿದೆ. 1 ಪೇತ್ರ 3:21 ಈ ಸತ್ಯವನ್ನು ಖಚಿತಪಡಿಸುತ್ತದೆಯೇ?

**1 ಪೇತ್ರ 3:21** – *ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೋಗಲಾಡುವಂಥದಲ್ಲ; ಒಳ್ಳೆ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ.*

7. ಅ.ಕೃ. 2:38 ರ ಪ್ರಕಾರ ದೀಕ್ಷಾಸ್ನಾನಕ್ಕೆ ಅಗತ್ಯವಿರುವ ಸಂಗತಿಗಳು ಯಾವುವು?

8. ಮಾರ್ಕ 16:16ರ ಪ್ರಕಾರ ದೀಕ್ಷಾಸ್ನಾನಕ್ಕಿರುವ ಅಗತ್ಯಗಳು ಯಾವುವು?

9. ಒಂದು ಚಿಕ್ಕಮಗು ಪಶ್ಚಾತ್ತಾಪ ಪಡಲು ಸಾಧ್ಯವೇ?

10. ಒಂದು ಚಿಕ್ಕಮಗು ನಂಬಿಕೆ ಇಡಲು ಸಾಧ್ಯವೇ?

11. ಅ.ಕೃ. 10:43–48ನ್ನು ಓದಿರಿ. ಒಬ್ಬ ವಿಶ್ವಾಸಿಯು ಕ್ರಿಸ್ತನಲ್ಲಿ ನಂಬಿಕೆ ಇಟ್ಟ ನಂತರ ತೆಗೆದುಕೊಳ್ಳಬಹುದಾದ ಮುಂದಿನ ಹಂತ ಯಾವುದು?

ಅ.ಕೃ. 10:43–48 – ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ ಅಂದನು. [44] ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಆತನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮವರವು ಇಳಿಯಿತು. [45–46] ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯರಾದ ವಿಶ್ವಾಸಿಗಳು ಕೇಳಿದಾಗ – ಅನ್ಯಜನಗಳಿಗೂ ಪವಿತ್ರಾತ್ಮದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು. ನಡೆದ ಸಂಗತಿಯನ್ನು ಪೇತ್ರನು ನೋಡಿ – [47] ನಮ್ಮ ಹಾಗೆಯೇ ಪವಿತ್ರಾತ್ಮವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾವಾಗದಂತೆ ಯಾರಾದರೂ ಅಭ್ಯಂತರ ಮಾಡಾರೇ ಎಂದು ಹೇಳಿ ಅವರಿಗೆ – [48] ನೀವು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಅಪ್ಪಣೆ ಕೊಟ್ಟನು. ಆ ಮೇಲೆ ಅವರು ಅವನನ್ನು – ಇನ್ನೂ ಕೆಲವು ದಿವಸ ಇರಬೇಕೆಂದು ಬೇಡಿಕೊಂಡರು.

## ಉತ್ತರಗಳು

1. ಈ ಯೌವನಸ್ಥನು ಕೇಳುತ್ತಿರುವ ಪ್ರಶ್ನೆ ಏನಾಗಿದೆ?

**ಪರಲೋಕಕ್ಕೆ ಹೋಗಬೇಕಾದರೆ ದೀಕ್ಷಾಸ್ನಾನದ ಅವಶ್ಯಕತೆ ಇದೆಯೇ?**

2. ಅ.ಕೃ. 10:43ರ ಪ್ರಕಾರ, ರಕ್ಷಣೆಯು ನಮಗೆ ಹೇಗೆ ಬರುತ್ತದೆ?

**ಉಚಿತವಾಗಿ, ಯೇಸು ಕ್ರಿಸ್ತನಲ್ಲಿರುವ ನಂಬಿಕೆಯ ಮೂಲಕ ಒಂದು ವರವಾಗಿ ಬರುತ್ತದೆ.**

3. ದೀಕ್ಷಾಸ್ನಾನ ಎಂಬುದು ನಂಬಿಕೆಯ ವ್ಯಕ್ತಪಡಿಸುವಿಕೆಯಾಗಿದ್ದು ಇದು ರಕ್ಷಣೆಯ ಸಮಯದಲ್ಲಿ ಸಂಭವಿಸುವಂತಹುದಾಗಿದೆ. ಈ ಸತ್ಯವನ್ನು ಅ.ಕೃ. 2:38 ಹೇಗೆ ವ್ಯಕ್ತಪಡಿಸುತ್ತದೆ?

**ಪೇತ್ರನು "ಪಶ್ಚಾತ್ತಾಪಪಟ್ಟು, ದೀಕ್ಷಾಸ್ನಾನ ಮಾಡಿಸಿಕೊಳ್ಳಿ" ಅಂದನು.**

4. ಈ ಸತ್ಯವನ್ನು ಮಾರ್ಕ 16:16 ಹೇಗೆ ವ್ಯಕ್ತಪಡಿಸುತ್ತದೆ?

**ಯೇಸು ಹೇಳಿದನು, "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು", ಇದು ಒಂದೇ ಸಮಯದಲ್ಲಿ ನಡೆಯಲು ಸಾಧ್ಯ ಎಂದು ಸೂಚಿಸುತ್ತದೆ.**

5. ದೀಕ್ಷಾಸ್ನಾನವು ಕರ್ತನ ನಾಮವನ್ನು ಹೇಳಿಕೊಳ್ಳುವ ಒಂದು ಮಾರ್ಗವಾಗಿದೆ. ಈ ಸತ್ಯವನ್ನು ಅ.ಕೃ. 22:16 ಹೇಗೆ ವ್ಯಕ್ತಪಡಿಸುತ್ತದೆ?

**ಕರ್ತನ ನಾಮವನ್ನು ಹೇಳಿಕೊಳ್ಳುವವನ ಪಾಪಗಳು ತೊಳೆಯಲ್ಪಡುತ್ತವೆ ಎಂದು ವಾಕ್ಯವು ಹೇಳುತ್ತದೆ. ಕರ್ತನ ನಾಮವನ್ನು ಹೇಳಿಕೊಳ್ಳುವುದು ಧ್ವನಿಯಿಂದಿರಬಹುದು (ಲೂಕ 18:13) ಅಥವಾ ಈ ವಾಕ್ಯದಲ್ಲಿ ಸೂಚಿಸುವಂತೆ ದೀಕ್ಷಾಸ್ನಾನದ ಕ್ರಿಯೆಯ ಮೂಲಕವೂ ಆಗಿರಬಹುದು.**

6. ದೀಕ್ಷಾಸ್ನಾನವು ಒಳ್ಳೇ ಮನಸ್ಸಾಕ್ಷಿಗಾಗಿ ದೇವರಿಗೆ ಮೊರೆಯಿಡುವುದಾಗಿದೆ. 1 ಪೇತ್ರ 3:21 ಈ ಸತ್ಯವನ್ನು ಖಚಿತಪಡಿಸುತ್ತದೆಯೇ?

**ಹೌದು.**

7. ಅ.ಕೃ. 2:38ರ ಪ್ರಕಾರ ದೀಕ್ಷಾಸ್ನಾನಕ್ಕೆ ಅಗತ್ಯವಿರುವ ಸಂಗತಿ ಯಾವುದು?

**ಪಶ್ಚಾತ್ತಾಪ**

8. ಮಾರ್ಕ 16:16ರ ಪ್ರಕಾರ ದೀಕ್ಷಾಸ್ನಾನಕ್ಕಿರುವ ಅಗತ್ಯಗಳು ಯಾವುವು?

**ಆ ವ್ಯಕ್ತಿಯಲ್ಲಿ ನಂಬಿಕೆ ಇರಬೇಕು.**

9. ಒಂದು ಚಿಕ್ಕಮಗು ಪಶ್ಚಾತ್ತಾಪ ಪಡಲು ಸಾಧ್ಯವೇ?

**ಇಲ್ಲ.**

10. ಒಂದು ಚಿಕ್ಕಮಗು ನಂಬಿಕೆ ಇಡಲು ಸಾಧ್ಯವೇ?

**ಇಲ್ಲ.**

11. ಅ.ಕೃ. 10:43–48ನ್ನು ಓದಿರಿ. ಒಬ್ಬ ವಿಶ್ವಾಸಿಯು ಕ್ರಿಸ್ತನಲ್ಲಿ ನಂಬಿಕೆ ಇಟ್ಟ ನಂತರ ತೆಗೆದುಕೊಳ್ಳಬಹುದಾಗ ಮುಂದಿನ ಹಂತ ಯಾವುದು?

**ನೀರಿನ ದೀಕ್ಷಾಸ್ನಾನ**

## ಪಾಠ 9

# ಕ್ರಿಸ್ತನಲ್ಲಿ ಗುರುತಿಸಿಕೊಳ್ಳುವುದು – ಭಾಗ 1

***ಆಂಡ್ರೂ ವ಼ಾಮಕ್***

ಎರಡನೆಯ ಕೊರಿಂಥ 5:17 ಹೇಳುತ್ತದೆ, *"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು." "ಕ್ರಿಸ್ತನಲ್ಲಿ"* ಎಂಬ ಪದವು, ಹೊಸ ಒಡಂಬಡಿಕೆಯಲ್ಲಿ ಮುನ್ನೂರಕ್ಕಿಂತಲೂ ಹೆಚ್ಚು ಬಾರಿ ಉಪಯೋಗಿಸಲಾಗಿದೆ, ಇದು ಯಾವಾಗಲೂ ದೇವರೊಂದಿಗಿನ ಪ್ರಾಮುಖ್ಯವಾದ, ಐಕ್ಯವಾದ ಸಂಬಂಧವನ್ನು ಉಲ್ಲೇಖಿಸುತ್ತದೆ. ಇದು ಒಮ್ಮೆ ಸಂಭವಿಸಿದರೆ, ನೀವು ನೂತನ ಜೀವವಾಗುವಿರಿ. ವಾಸ್ತವದಲ್ಲಿ ಕೆಲವು ಭಾಷಾಂತರಗಳು "ಒಂದು ನೂತನ ಸೃಷ್ಟಿ" ಎಂದು ಹೇಳುತ್ತವೆ.

ಕ್ರಿಸ್ತನಲ್ಲಿ ನಿಮ್ಮನ್ನು ಹೊಸದಾಗಿ ಗುರುತಿಸಿಕೊಳ್ಳುವುದು ಎನ್ನುವುದನ್ನು ಗ್ರಹಿಸುವುದಕ್ಕೆ ಅವಶ್ಯವಾದದ್ದೆಂದು ನಾನು ನಂಬುವ ಒಂದು ವಿಮರ್ಶಾತ್ಮಕ ವಿಷಯಕ್ಕೆ ಇದು ನಡೆಸುತ್ತದೆ: ಇದು ಭೌತಿಕ ಘಟ್ಟದಲ್ಲಿ ನಡೆಯುವಂತದ್ದಲ್ಲ. ಇದು ನಿಮ್ಮ ದೇಹದ ಕುರಿತಾಗಿ ಮಾತನಾಡುವುದಲ್ಲ, ಇದು ನಿಮ್ಮನ್ನು ಪೂರ್ಣವಾಗಿ ಮಾರ್ಪಡಿಸುತ್ತದೆಂದಾಗಲೀ ಅಥವಾ ನೀವು ಕಾಣುವ ರೀತಿ ಬದಲಾಗುತ್ತದೆ ಎಂದಾಗಲೀ ಹೇಳುವುದಿಲ್ಲ. ಒಬ್ಬ ವ್ಯಕ್ತಿಯು ರಕ್ಷಣೆ ಹೊಂದುವುದಕ್ಕಿಂತ ಮೊದಲು ದಪ್ಪವಾಗಿದ್ದು, ಅವರು ಆಹಾರದಲ್ಲಿ ಪಥ್ಯ ಮಾಡದಿದ್ದಲ್ಲಿ ರಕ್ಷಣೆ ಹೊಂದಿದ ನಂತರವೂ ಸಹ ದಪ್ಪವಾಗಿಯೇ ಇರುತ್ತಾರೆ. ಅನೇಕರು "ತಾವು" ಏನಾಗಿರುವೆವು ಎಂದು ಭಾವಿಸಿರುವರೋ – ಆ ನಿಮ್ಮ ಮಾನಸಿಕ ಅಥವಾ ಭಾವನಾತ್ಮಕ ಸ್ಥಿತಿಯ ಕುರಿತಾಗಿ ಮಾತನಾಡುತ್ತಿಲ್ಲ. ನೀವು ರಕ್ಷಣೆ ಹೊಂದುವುದಕ್ಕಿಂತ ಮೊದಲು ಬಹಳ ಬುದ್ಧಿವಂತರಾಗಿಲ್ಲದಿದ್ದರೆ, ರಕ್ಷಣೆಯ ನಂತರವೂ ಸಹ ನೀವು ಅತಿ ಬುದ್ಧಿವಂತರಾಗುವುದಿಲ್ಲ, ಮತ್ತು ಹಿಂದಿನ ಅನೇಕ ನೆನಪುಗಳು ಮತ್ತು ಆಲೋಚನೆಗಳು ನಿಮ್ಮಲ್ಲಿ ಇನ್ನೂ ಇರುತ್ತವೆ.

ಮೂರನೇ ಭಾಗ ಒಂದಿದೆ, ಮತ್ತು ಈ ವಾಕ್ಯದ ಪ್ರಕಾರ, ಉಳಿದೆರಡನ್ನು ಹೊರತು ಪಡಿಸಿ ಮಾರ್ಪಾಡಾದ ನಮ್ಮ ಭಾಗ – ನಮ್ಮ ಆತ್ಮ. 1 ಥೆಸಲೋನಿಕ 5:23ರಲ್ಲಿರುವ ಪೌಲನ ಪ್ರಾರ್ಥನೆ ಇದನ್ನು ಸಮರ್ಥಿಸುತ್ತದೆ – *"ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರ ಮಾಡಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ*

*ನಿಮ್ಮ ಆತ್ಮ ಪ್ರಾಣಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ."* ಈ ವಾಕ್ಯಭಾಗವು, ನಮಗೆ ಒಂದು ಆತ್ಮ, ಪ್ರಾಣ ಮತ್ತು ಶರೀರವು ಇದೆ ಎಂಬುದನ್ನು ತೋರ್ಪಡಿಸುತ್ತದೆ. ಶರೀರವು ಕಣ್ಣಿಗೆ ಕಾಣಿಸುವಂಥದ್ದಾಗಿದೆ. ನಮ್ಮನ್ನು ನೋಡುವವರಿಗೆ ಅದು ಕಾಣಿಸುವಂಥದ್ದಾಗಿದೆ. ಇದಕ್ಕಿಂತಲೂ ಮಿಗಿಲಾದ ಮತ್ತೊಂದು ಭಾಗವಿದೆ ಎಂಬುದನ್ನು ನಾವೆಲ್ಲರೂ ಗುರುತಿಸುತ್ತೇವೆ, ಅಂದರೆ ಅದು ಭಾವನಾತ್ಮಕ, ಮಾನಸಿಕ ಭಾಗವಾಗಿದೆ, ಇದನ್ನು ದೇವರ ವಾಕ್ಯವು ಪ್ರಾಣ ಎಂದು ಹೇಳುತ್ತದೆ. ಒಬ್ಬ ವ್ಯಕ್ತಿಯು ನಿಮ್ಮನ್ನು ಶಾರೀರಿಕವಾಗಿ ಸ್ಪರ್ಶಿಸದಿದ್ದರೂ ಸಹ, ತಮ್ಮ ಮಾತುಗಳಿಂದ ನಿಮ್ಮನ್ನು ಸ್ಪರ್ಶಿಸಬಹುದು, ಇದು ಸಕಾರಾತ್ಮಕವಾದ ಅಥವಾ ನಕರಾತ್ಮಕವಾದ ಮಾತುಗಳಿಂದ ಆಗಿರಬಹುದು ಎಂಬುದನ್ನು ನಾವು ಬಲ್ಲೆವು. ಅನೇಕರು ಶರೀರ ಮತ್ತು ಪ್ರಾಣಕ್ಕೆ ಸಂಬಂಧಪಟ್ಟ ಭಾಗಗಳೊಂದಿಗೆ ಸಾಮರಸ್ಯದಿಂದಿರುತ್ತಾರೆ, ಆದರೆ ವಾಕ್ಯದ ಪ್ರಕಾರ, ಆತ್ಮ ಎಂಬ ಮತ್ತೊಂದು ಭಾಗವೂ ಇದೆ.

ಆತ್ಮವು ನಮ್ಮದೇ ಒಂದು ಭಾಗವಾಗಿದೆ ಮತ್ತು ರಕ್ಷಣೆಯ ನಂತರ ಇದು ನೂತನಗೊಳ್ಳುತ್ತದೆ. ವಾಸ್ತವದಲ್ಲಿ ಇದು ಜೀವವನ್ನು ನೀಡುವಂತಹ ಭಾಗವಾಗಿದೆ. ಯಾಕೋಬ 2:26 ಹೇಳುತ್ತದೆ, *"ಆತ್ಮವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ."* ಇದು ವಾಸ್ತವವಾಗಿ ನಮ್ಮ ಶಾರೀರಿಕ ದೇಹಗಳೊಳಗೆ ಜೀವವನ್ನು ಊದುವಂತಹ ಆತ್ಮವಾಗಿದೆ. ಇಲ್ಲಿಂದಲೇ ನಮ್ಮ ಜೀವವು ಬಂದಿರುವುದಾಗಿದೆ. ಆದಿಕಾಂಡ 2ರಲ್ಲಿ ದೇವರು ಆದಾಮ ಮತ್ತು ಹವ್ವರನ್ನು ಉಂಟುಮಾಡಿದಾಗ, ಆದಾಮನ ದೇಹವು ಪರಿಪೂರ್ಣವಾಗಿತ್ತು, ಆದರೆ ದೇವರು ಅವನೊಳಗೆ ಜೀವಶ್ವಾಸವನ್ನು ಊದಿದನು. ಹಳೇ ಒಡಂಬಡಿಕೆಯಲ್ಲಿ, "ಶ್ವಾಸ" ಎಂಬ ಪದವು ನಾವು ಉಸಿರು ಎಂದು ಹೇಳುವ ಪದದ ಸಮಾನಾರ್ಥಕ ಪದವಾಗಿದೆ, ಮತ್ತು ಕೆಲವು ಸ್ಥಳಗಳಲ್ಲಿ ಇದನ್ನು "ಆತ್ಮ" ಎಂಬುದಾಗಿ ಭಾಷಾಂತರಿಸಲಾಗಿದೆ. ದೇವರು ಆದಾಮನ ಭೌತಿಕ ದೇಹ ಮತ್ತು ಪ್ರಾಣದ ಭಾಗವನ್ನು ಉಂಟುಮಾಡಿದನು, ಆದಾಗ್ಯೂ ದೇವರು ಆತನೊಳಗೆ ಜೀವಶ್ವಾಸವನ್ನು ಊದಿದನು, ಆಗ ಆದಾಮನು ಬದುಕುವ ಪ್ರಾಣಿಯಾದನು. ಆತ್ಮ ಎಂಬುದು ಜೀವವನ್ನು ನೀಡುವ ನಮ್ಮ ಭಾಗವಾಗಿದೆ.

ರಕ್ಷಣೆಗೂ ಮುನ್ನ, ಅಂದರೆ ಕರ್ತನು ತಮ್ಮೊಳಗೆ ಬರುವಂತೆ ಪೂರ್ಣ ಸಮರ್ಪಣೆಯನ್ನು ಮಾಡುವುದಕ್ಕಿಂತ ಮೊದಲು, ಯಾವುದೇ ವ್ಯಕ್ತಿಯ ಆತ್ಮವು ಸತ್ತದ್ದಾಗಿರುತ್ತದೆ. ಎಫೆಸ 2:1 ಹೇಳುತ್ತದೆ, *"ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು."* ನಾವು ತಿರುಗಿಹುಟ್ಟುವುದಕ್ಕಿಂತ ಮೊದಲು ಸಹ ಜೀವಂತವಾಗಿಯೇ ಇದ್ದೆವು ಎಂಬುದು ನಮಗೆ ತಿಳಿದಿದೆ, ಆದರೆ ಇಲ್ಲಿ "ಸತ್ತವರಾಗಿದ್ದ" ಎಂಬುದು ಆತ್ಮದ ಕುರಿತು ಮಾತನಾಡುತ್ತಿರುವುದಾಗಿದೆ. ಸಾವು ಅಥವಾ ಮರಣ ಎಂಬುದರ ಬಗ್ಗೆ ಅನೇಕರು ಇಂದು ತಿಳಿಯುವಂತೆ ಉಸಿರಾಡುವುದು ನಿಂತುಹೋಯಿತು ಎನ್ನುವ ಅರ್ಥವನ್ನು ಸತ್ಯವೇದವು ನೀಡುವುದಿಲ್ಲ. ಅಕ್ಷರಶಃವಾಗಿ

ಇದರ ಅರ್ಥ “ಬೇರ್ಪಡಿಸುವಿಕೆ” ಎಂಬುದಾಗಿದೆ. ಒಬ್ಬ ವ್ಯಕ್ತಿಯು ಶಾರೀರಿಕವಾಗಿ ಮರಣ ಹೊಂದಿದಾಗ, ಅವರ ಅಸ್ತಿತ್ವವು ಅಳಿದು ಹೋಗುವುದಿಲ್ಲ. ಬದಲಾಗಿ ಅಂಥವರು ತಕ್ಷಣವೇ ದೇವರ ಸಮ್ಮುಖಕ್ಕೆ ಅಥವಾ ನರಕಕ್ಕೆ ಹೋಗುವರು ಎಂದು ಸತ್ಯವೇದವು ಬೋಧಿಸುತ್ತದೆ. ಪ್ರಾಣ ಮತ್ತು ಆತ್ಮವು ಜೀವಿಸುವುದನ್ನು ಮುಂದುವರೆಸುತ್ತವೆ, ಆದರೆ ಸತ್ತು ನಾಶವಾಗುವ ದೇಹದಿಂದ ಅವು ಬೇರ್ಪಡುತ್ತವೆ.

ಆದಿಕಾಂಡ 2:17 ಹೇಳುತ್ತದೆ, *“ತಿಂದ ದಿನ ಸತ್ತೇ ಹೋಗುವಿ,”* ಎಂದರೆ ಅವರು ಶಾರೀರಿಕವಾಗಿ ಸಾಯುತ್ತಾರೆ ಎಂದಲ್ಲ, ಆದರೆ ಆತ್ಮೀಕವಾಗಿ ಸಾಯುತ್ತಾರೆ, ಅಂದರೆ ಅವರು ದೇವರಿಂದ ಬೇರ್ಪಡುವರು ಎನ್ನುವ ಅರ್ಥ ನೀಡುತ್ತದೆ. ವಾಸ್ತವದಲ್ಲಿ ಆತ್ಮ, ಅಂದರೆ ದೇವರು ನಮ್ಮೊಳಗೆ ಊದಿದ ಜೀವಶ್ವಾಸವು ನಮಗೆ ಜೀವವನ್ನು ಮತ್ತು ಪ್ರೇರಣೆಯನ್ನು ನೀಡುವಂತಹುದಾಗಿದೆ, ಇದು ದೇವರ ಅಸಾಧಾರಣವಾದ ಜೀವದಿಂದ ... ಆತನ ಪರಿಶುದ್ಧವಾದ ಮತ್ತು ಪರಿಪೂರ್ಣ ಜೀವದಿಂದ ಬೇರ್ಪಟ್ಟಿತು... ಇದನ್ನು ಸತ್ಯವೇದವು “ಸಮೃದ್ಧಿಕರವಾದ ಜೀವ” ಎಂದು ಕರೆಯುತ್ತದೆ. ನಂತರ ಮನುಷ್ಯನು ಅವನತಿ ಹೊಂದಲು ಪ್ರಾರಂಭಿಸಿದನು. ಆಗಲೂ ಅವನು ಕೆಲಸ ಮಾಡುತ್ತಿದ್ದನು ಆದರೆ ಅವನು ಸ್ವತಂತ್ರವಾಗಿ, ದೇವರಿಂದ ಬೇರ್ಪಟ್ಟು ಕಾರ್ಯಮಾಡುತ್ತಿದ್ದನು. ಇದೇ ನಿಜವಾಗಿಯೂ ನಮ್ಮ ಜೀವಿತಗಳಲ್ಲಿ ಸಮಸ್ಯೆಗಳನ್ನು ಉಂಟುಮಾಡುವಂತಹುದಾಗಿದೆ. ನಮಗಿರುವ ಎಲ್ಲ ಭಾವನಾತ್ಮಕ ಒತ್ತಡಗಳು ಇವೇ ಆಗಿವೆ.

ಯಾವುದೇ ವ್ಯಕ್ತಿಯು ಕರ್ತನ ಬಳಿಗೆ ಬಂದಾಗ, ಅವರು ನೂತನ ಆತ್ಮವನ್ನು ಪಡೆದುಕೊಂಡು, ತಿರುಗಿ ಹುಟ್ಟುತ್ತಾರೆ, ಮತ್ತು ಇದು ಯೇಸುವು ಯೋಹಾನ 3:5ರಲ್ಲಿ ಉಪಯೋಗಿಸುವ ಪದಗಳ ಧಾಟಿಯಾಗಿದೆ. ಅದೇ ರೀತಿಯಾಗಿ ಒಬ್ಬ ಮನುಷ್ಯನು ಹುಟ್ಟುವಾಗ ಆತ್ಮ, ಪ್ರಾಣ ಮತ್ತು ಶರೀರದೊಂದಿಗೆ ಹುಟ್ಟುತ್ತಾನೆ, ಆದರೆ ಅವರು ತಿರುಗಿ ಹುಟ್ಟುವಾಗ, ಕ್ರಿಸ್ತನ ಆತ್ಮವನ್ನು ಪಡೆದುಕೊಳ್ಳುತ್ತಾರೆ. ಗಲಾತ್ಯ 4:6 ಹೇಳುತ್ತದೆ, *“ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು.”* ದೇವರು ಅಕ್ಷರಶಃ ತನ್ನ ಆತ್ಮವನ್ನು ನಮ್ಮೊಳಗೆ ಇಡುವನು ಮತ್ತು ಈಗ ನಮಗೆ ಒಂದು ಹೊಸ ಗುಣಮಟ್ಟದ ಜೀವನವಿದೆ, ಒಂದು ನೂತನ ಗುರುತು ಇದೆ, ಮತ್ತು ನಮ್ಮ ಆತ್ಮಗಳಲ್ಲಿ ನಾವು ಸಂಪೂರ್ಣವಾಗಿ ನೂತನ ವ್ಯಕ್ತಿಗಳಾಗಿರುವೆವು.

ಇನ್ನುಳಿದ ಕ್ರೈಸ್ತ ಜೀವಿತವು ನಿಮ್ಮ ಆತ್ಮಗಳಲ್ಲಿ ಸಂಭವಿಸಿರುವ ಕಾರ್ಯಗಳನ್ನು ಪ್ರಾಣದ, ಭಾವನೆಗಳ ನೆಲೆಯಲ್ಲಿ ಕಲಿಯುವಂತಹುದಾಗಿದೆ. ಯೇಸು ಕ್ರಿಸ್ತನನ್ನು ನಿಮ್ಮ ಕರ್ತನಾಗಿ ನೀವು ಸ್ವೀಕರಿಸಿದಾಗಲೇ ರಕ್ಷಣೆಯ ಮೂರನೆಯ ಒಂದು ಭಾಗವು ಸಂಪೂರ್ಣಗೊಂಡಿದೆ ಎನ್ನುವುದು ಸತ್ಯ. ನಿಮ್ಮ ಆತ್ಮವು ಸಂಪೂರ್ಣ ಮಾರ್ಪಾಡನ್ನು ಹೊಂದುತ್ತದೆ. ಇದು ನಿತ್ಯತ್ವದುದ್ದಕ್ಕೂ ನಿಮ್ಮೊಂದಿಗಿರುವ ಅದೇ ಆತ್ಮವಾಗಿದೆ. ಇದರಲ್ಲಿ ಈಗಾಗಲೇ ಪ್ರೀತಿ, ಸಂತೋಷ, ಸಮಾಧಾನವಿದೆ ಹಾಗೂ ಇದು ದೇವರ ಪ್ರಸನ್ನತೆಯಿಂದ

ತುಂಬಿರುವಂತಹುದಾಗಿದೆ. ನಿಮ್ಮ ಆತ್ಮದಲ್ಲಿ ಯಾವುದೇ ಕೊರತೆಯಾಗಲಿ ಅಥವಾ ಅಭಾವವಾಗಲಿ ಇಲ್ಲ, ಆದರೆ ಇದನ್ನು ನೀವು ಗ್ರಹಿಸಿಕೊಳ್ಳಬೇಕು, ಮತ್ತು ಈ ಕಾರಣದಿಂದ ದೇವರ ವಾಕ್ಯವನ್ನು ಅಧ್ಯಯನ ಮಾಡುವುದು ಕ್ರೈಸ್ತ ಜೀವಿತದಲ್ಲಿ ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ. ನೀವು ಸಂಪೂರ್ಣವಾಗಿ ಹೊಚ್ಚ ಹೊಸ ವ್ಯಕ್ತಿಯಾಗಿರುವಿರಿ, ಆದರೆ ಇದರ ತಿಳುವಳಿಕೆಯನ್ನು ನೀವು ಹೊಂದುವ ತನಕ, ನೀವು ಮಾರ್ಪಾಡನ್ನು ಹೊಂದುವುದಿಲ್ಲ. ಆತ್ಮವೂ, ಜೀವವೂ ಆಗಿರುವ ದೇವರ ವಾಕ್ಯದೊಳಗೆ ನೀವು ದೃಷ್ಟಿಸುವುದಕ್ಕೆ ಶಕ್ತರಾದಾಗ ಕ್ರೈಸ್ತ ಜೀವಿತದಲ್ಲಿ ಜಯವು ಸಂಭವಿಸುತ್ತದೆ, ಅಂದರೆ ನೀವು ಯಾರಾಗಿದ್ದೀರಿ ಮತ್ತು ದೇವರು ಏನು ಮಾಡಿರುವನು ಎಂಬುದನ್ನು ದೃಷ್ಟಿಸಬೇಕು ಮತ್ತು ಇದನ್ನು ನಂಬುವುದಕ್ಕೆ ಪ್ರಾರಂಭಿಸಬೇಕು.

## ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. 2 ಕೊರಿಂಥ 5:17 ನ್ನು ಓದಿರಿ. ಯಾವನಾದರೂ ಕ್ರಿಸ್ತನಲ್ಲಿದ್ದರೆ, ಅವರು ಏನಾಗಿರುವರು?

2 ಕೊರಿಂಥ 5:17 – ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು. ಇಗೋ, ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.

2. 2 ಕೊರಿಂಥ 5:17ನ್ನು ಓದಿರಿ. ಹಳೇ ಸಂಗತಿಗಳಿಗೆ ಏನು ಸಂಭವಿಸಿದೆ?

3. 2 ಕೊರಿಂಥ 5:17ನ್ನು ಓದಿರಿ. ಯಾವ ಸಂಗತಿಗಳು ನೂತನಗೊಂಡಿವೆ?

4. ಎಫೆಸ 2:1ನ್ನು ಓದಿರಿ. ನೀವು ತಿರುಗಿ ಹುಟ್ಟುವುದಕ್ಕಿಂತ ಮೊದಲು ಅಥವಾ ಬದುಕುವುದಕ್ಕಿಂತ ಮೊದಲು ನಿಮ್ಮ ಸ್ಥಿತಿಯು ಏನಾಗಿತ್ತು?

**ಎಫೆಸ 2:1–5** – *ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು. [2] ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯುಮಂಡಲದಲ್ಲಿ ಅಧಿಕಾರನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ. [3] ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಸೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು. [4] ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ.)*

5. ಎಫೆಸ 2:2ನ್ನು ಓದಿರಿ. ಒಬ್ಬ ಅವಿಶ್ವಾಸಿಯಾಗಿ, ನೀವು ಹೇಗೆ ನಡೆಯುತ್ತಿದ್ದಿರಿ ಅಥವಾ ಜೀವಿಸುತ್ತಿದ್ದಿರಿ?

6. ಎಫೆಸ 2:3–5ನ್ನು ಓದಿರಿ. ದೇವರು ಯಾವುದರ ನಿಧಿಯಿರುವುದು?

7. ಎಫೆಸ 2:4ನ್ನು ಓದಿರಿ. ದೇವರು ಏಕೆ ಮಹಾ ಕರುಣೆಯುಳ್ಳವನಾಗಿರುವನು?

8. ಎಫೆಸ 2:5ನ್ನು ಓದಿರಿ. ನಮ್ಮ ಅಪರಾಧಗಳಲ್ಲಿ ಮತ್ತು ಪಾಪಗಳಲ್ಲಿ ನಾವು ಇನ್ನೂ ಸತ್ತವರಾಗಿರುವಾಗಲೇ ದೇವರು ನಮಗಾಗಿ ಏನು ಮಾಡಿದನು?

9. ಎಫೆಸ 2:5ನ್ನು ಓದಿರಿ. ದೇವರು ನಮ್ಮನ್ನು ಹೇಗೆ ರಕ್ಷಿಸಿದನು?

10. 1 ಕೊರಿಂಥ 6:9–10ನ್ನು ಓದಿರಿ. ಈ ಪಟ್ಟಿಯಲ್ಲಿರುವ ಯಾವುದೇ ವರ್ಣನೆಗಳಿಗೆ ನಿಮ್ಮನ್ನು ಹೋಲಿಸಲು ಸಾಧ್ಯವೇ?

**1 ಕೊರಿಂಥ 6:9–11** – *ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂಬದು ನಿಮಗೆ ತಿಳಿಯದೋ? ಮೋಸಹೋಗಬೇಡಿರಿ, ಜಾರರು ವಿಗ್ರಹಾರಾಧಕರು ವ್ಯಭಿಚಾರಿಗಳು ವಿಟರು ಪುರುಷಗಾಮಿಗಳು [10] ಕಳ್ಳರು ಲೋಭಿಗಳು ಕುಡಿಕರು ಬೈಯುವವರು ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ. [11] ನಿಮ್ಮಲ್ಲಿ ಕೆಲವರು ಅಂಥವರಾಗಿದ್ದಿರಿ; ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ.*

11. 1 ಕೊರಿಂಥ 6:11ನ್ನು ಓದಿರಿ. "ಆಗಿದ್ದಿರಿ" ಎಂಬ ಪದವು ಭೂತ, ವರ್ತಮಾನ ಮತ್ತು ಭವಿಷ್ಯತ್ ಇವುಗಳಲ್ಲಿ ಯಾವ ಕಾಲವನ್ನು ತೋರಿಸುತ್ತದೆ?

12. 1 ಕೊರಿಂಥ 6: 11ನ್ನು ಓದಿರಿ. ನೀವು "ತಿರುಗಿ ಹುಟ್ಟಿ"ದಾಗ, ನಿಮಗೆ ಸಂಭವಿಸಿದ ಮೂರು ಸಂಗತಿಗಳು ಯಾವುವು?

13. 1 ಕೊರಿಂಥ 6:11ನ್ನು ಓದಿರಿ. ಇದು ಭೂತಕಾಲವೇ, ವರ್ತಮಾನಕಾಲವೇ ಅಥವಾ ಭವಿಷ್ಯತ್ ಕಾಲದ ಪರಿಸ್ಥಿತಿಯೋ?

14. 1 ಕೊರಿಂಥ 6:17ನ್ನು ಓದಿರಿ. "ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ_______________ ಆಗಿರುವನು."

**1 ಕೊರಿಂಥ 6:17** – *ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ.*

# ಉತ್ತರಗಳು

1. 2 ಕೊರಿಂಥ 5:17ನ್ನು ಓದಿರಿ. ಯಾರಾದರು ಕ್ರಿಸ್ತನಲ್ಲಿದ್ದರೆ, ಅವರು ಏನಾಗಿರುವರು?

**ಒಂದು ನೂತನ ಸೃಷ್ಟಿ**

2. 2 ಕೊರಿಂಥ 5:17ನ್ನು ಓದಿರಿ. ಹಳೇ ಸಂಗತಿಗಳಿಗೆ ಏನು ಸಂಭವಿಸಿದೆ?

**ಅವು ಹೊರಟುಹೋಗಿವೆ**

3. 2 ಕೊರಿಂಥ 5:17ನ್ನು ಓದಿರಿ. ಯಾವ ಸಂಗತಿಗಳು ನೂತನಗೊಂಡಿವೆ?

**ಎಲ್ಲಾ ಸಂಗತಿಗಳು**

4. ಎಫೆಸ 2:1ನ್ನು ಓದಿರಿ. ನೀವು ತಿರುಗಿ ಹುಟ್ಟುವುದಕ್ಕಿಂತ ಮೊದಲು ಅಥವಾ ಬದುಕುವುದಕ್ಕಿಂತ ಮೊದಲು ನಿಮ್ಮ ಸ್ಥಿತಿಯು ಏನಾಗಿತ್ತು?

**ನಾನು ಅಪರಾಧಗಳಲ್ಲಿ ಮತ್ತು ಪಾಪಗಳಲ್ಲಿ ಸತ್ತಿದ್ದೆನು**

5. ಎಫೆಸ 2:2ನ್ನು ಓದಿರಿ. ಒಬ್ಬ ಅವಿಶ್ವಾಸಿಯಾಗಿ, ನೀವು ಹೇಗೆ ನಡೆಯುತ್ತಿದ್ದಿರಿ ಅಥವಾ ಜೀವಿಸುತ್ತಿದ್ದಿರಿ?

**ನಾನು ಲೋಕದ ಮಾರ್ಗಗಳನ್ನು ಅನುಸರಿಸುತ್ತಿದ್ದೆನು, ನಾನು ಸೈತಾನನಿಗೆ ವಿಧೇಯನಾಗಿದ್ದೆನು (ವಾಯುಮಂಡಲದ ಅಧಿಪತಿಗೆ), ಮತ್ತು ಅವಿಧೇಯತೆಯ ಆತ್ಮದಲಿ ಜೀವಿಸುತ್ತಿದ್ದೆನು**

6. ಎಫೆಸ 2:3–5ನ್ನು ಓದಿರಿ. ದೇವರು ಯಾವುದರಲ್ಲಿ ಐಶ್ವರ್ಯವಂತನಾಗಿರುವನು?

**ಕರುಣೆ**

7. ಎಫೆಸ 2:4ನ್ನು ಓದಿರಿ. ದೇವರು ಏಕೆ ಮಹಾ ಕರುಣೆಯುಳ್ಳವನಾಗಿರುವನು?

**ಏಕೆಂದರೆ ನಮಗಾಗಿ ಆತನಲ್ಲಿರುವ ಶ್ರೇಷ್ಠ ಪ್ರೀತಿಯ ನಿಮಿತ್ತ**

8. ಎಫೆಸ 2:5ನ್ನು ಓದಿರಿ. ನಮ್ಮ ಅಪರಾಧಗಳಲ್ಲಿ ಮತ್ತು ಪಾಪಗಳಲ್ಲಿ ನಾವು ಇನ್ನೂ ಸತ್ತವರಾಗಿರುವಾಗಲೇ ದೇವರು ನಮಗಾಗಿ ಏನು ಮಾಡಿದನು?

ಕ್ರಿಸ್ತನೊಂದಿಗೆ ನಮ್ಮನ್ನು ಬದುಕಿಸಿದನು

9. ಎಫೆಸ 2:5ನ್ನು ಓದಿರಿ. ದೇವರು ನಮ್ಮನ್ನು ಹೇಗೆ ರಕ್ಷಿಸಿದನು?

**ತನ್ನ ಕೃಪೆಯಿಂದ**

10. 1 ಕೊರಿಂಥ 6:9–10ನ್ನು ಓದಿರಿ. ಈ ಪಟ್ಟಿಯಲ್ಲಿರುವ ಯಾವುದೇ ವರ್ಣನೆಗಳಿಗೆ ನಿಮ್ಮನ್ನು ಹೋಲಿಸಲು ಸಾಧ್ಯವೇ?

**ಹೌದು**

11. 1 ಕೊರಿಂಥ 6:11ನ್ನು ಓದಿರಿ. "ಆಗಿದ್ದಿರಿ" ಎಂಬ ಪದವು ಭೂತಕಾಲ, ವರ್ತಮಾನ ಕಾಲ ಅಥವಾ ಭವಿಷ್ಯತ್ ಕಾಲ ಎಂಬಿವುಗಳಲ್ಲಿ ಯಾವ ಪರಿಸ್ಥಿತಿಯಾಗಿದೆ?

**ಭೂತಕಾಲ/ಹಿಂದೆ**

12. 1 ಕೊರಿಂಥ 6: 11ನ್ನು ಓದಿರಿ. ನೀವು"ತಿರುಗಿ ಹುಟ್ಟಿ"ದಾಗ, ನಿಮಗೆ ಸಂಭವಿಸಿದ ಮೂರು ಸಂಗತಿಗಳು ಯವುವು?

**ನೀವು ತೊಳೆಯಲ್ಪಟ್ಟಿರಿ, ಶುದ್ಧೀಕರಿಸಲ್ಪಟ್ಟಿರಿ ಮತ್ತು ನೀತಿವಂತರೆಂದು ದೇವರ ಮುಂದೆ ನಿರ್ಣಯಿಸಲ್ಪಟ್ಟಿರಿ**

13. 1 ಕೊರಿಂಥ 6:11ನ್ನು ಓದಿರಿ. ಇದು ಭೂತಕಾಲವೇ, ವರ್ತಮಾನಕಾಲವೋ ಅಥವಾ ಭವಿಷ್ಯತ್ ಕಾಲದ ಪರಿಸ್ಥಿತಿಯೋ?

**ವರ್ತಮಾನ**

14. 1 ಕೊರಿಂಥ 6:17ನ್ನು ಓದಿರಿ. "ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ______________ ವಾಗಿರುವನು."

**ಒಂದೇ ಆತ್ಮ**

## ಪಾಠ 10

# ಕ್ರಿಸ್ತನಲ್ಲಿ ಗುರುತಿಸಿಕೊಳ್ಳುವುದು – ಭಾಗ 2

*ಆಂಡ್ರೂ ವಾಮಕ್*

ಹಿಂದಿನ ಪಾಠದಲ್ಲಿ, ತಿರುಗಿ ಹುಟ್ಟುವುದು ಎಂದರೇನು ಎಂಬುದನ್ನು ಚರ್ಚಿಸಿದೆವು, ಇದು ನಮ್ಮ ಆತ್ಮಗಳಲ್ಲಿ, ನಮ್ಮ ಹೃದಯಗಳಲ್ಲಿ ಸಂಭವಿಸುವ ಮಾರ್ಪಡುವಿಕೆಯಾಗಿದೆ. ನಾವು 2 ಕೊರಿಂಥ 5:17 ನ್ನು ಉಪಯೋಗಿಸಿದೆವು, ಇದು ಹೀಗೆ ಹೇಳುತ್ತದೆ, *"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."* ನಾವು ಹೊಸದಾಗಿ ಹುಟ್ಟಿದಾಗ, ನಮ್ಮ ಆತ್ಮಗಳಲ್ಲಿ ಸಂಪೂರ್ಣವಾದ ಮಾರ್ಪಡುವಿಕೆ ಉಂಟಾಗಿರುವುದನ್ನು ಮತ್ತು ಅಲ್ಲಿ ಸಂಭವಿಸಿರುವುದನ್ನು ತಿಳಿದುಕೊಳ್ಳಲು ದೇವರ ವಾಕ್ಯದ ಮೂಲಕ ಮಾತ್ರ ಸಾಧ್ಯವಾಗುತ್ತದೆ ಎನ್ನುವುದನ್ನು ನೋಡಿದೆವು. ಬಾಹ್ಯ ಸಂಗತಿಗಳ ಮೂಲಕ ನಾವಿದನ್ನು ಗ್ರಹಿಸುವುದಕ್ಕೆ ಸಾಧ್ಯವಿಲ್ಲ, ಹಾಗೂ ನಮ್ಮ ಭಾವನೆಗಳ ಮೂಲಕವೂ ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ಅವುಗಳು ಮನಸ್ಸಿಗೆ/ಪ್ರಾಣಕ್ಕೆ ಸಂಬಂಧಪಟ್ಟದ್ದಾಗಿದೆ. ಆದರೆ ನಮ್ಮ ಆತ್ಮದಲ್ಲಿ, ಒಂದು ಸಂಪೂರ್ಣವಾದ ಮಾರ್ಪಡುವಿಕೆಯುಂಟಾಗಿದೆ.

ಒಬ್ಬ ವ್ಯಕ್ತಿಯು ಯೇಸುವನ್ನು ತನ್ನ ಜೀವಿತದೊಳಗೆ ಸ್ವೀಕರಿಸಿದಾಗ ಏನು ಸಂಭವಿಸುತ್ತದೆ ಎನ್ನುವುದನ್ನು ತಿಳಿಸುವ ಕೆಲವು ವಾಕ್ಯಗಳನ್ನು ನಾನು ಉಪಯೋಗಿಸುತ್ತೇನೆ. ಎಫೆಸ 4:24 ಹೇಳುತ್ತದೆ, *"ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ."* ಒಬ್ಬ ವ್ಯಕ್ತಿಯು ತಿರುಗಿ ಹುಟ್ಟಿದಾಗ, ಅವರ ಆತ್ಮವು ನೀತಿಯುಳ್ಳದ್ದಾಗಿರುತ್ತದೆ ಮತ್ತು ನಿಜವಾಗಿಯೂ ಪರಿಶುದ್ಧವಾಗುತ್ತದೆ. ವಾಸ್ತವದಲ್ಲಿ ಸತ್ಯವೇದವು ಎರಡು ವಿಧವಾದ ನೀತಿಯ ಕುರಿತಾಗಿ ಮಾತನಾಡುತ್ತದೆ.

ನಿಮ್ಮ ಸ್ವಂತ ಕ್ರಿಯೆಗಳ ಮೂಲಕ ಉಂಟಾಗುವ ಒಂದು ನೀತಿಯಿದೆ ಹಾಗೂ ಇತರ ವ್ಯಕ್ತಿಗಳೊಂದಿಗೆ ವ್ಯವಹರಿಸುವಾಗ ನಿಭಾಯಿಸಬೇಕಾದ ನೀತಿಯಿದೆ. ನೀವು ಸರಿಯಾಗಿ ವರ್ತಿಸದಿದ್ದರೆ ಮತ್ತು ಸರಿಯಾಗಿ ಕೆಲಸ ಮಾಡದಿದ್ದರೆ ನಿಮ್ಮ ಯಜಮಾನನು ನಿಮ್ಮನ್ನು ಕೆಲಸದಿಂದ ತೆಗೆದುಹಾಕಬಹುದು ಅಥವಾ ನಿಮ್ಮ ಪತಿ/ಪತ್ನಿ ನಿಮಗೆ ವಿಚ್ಛೇದನವನ್ನು ನೀಡಬಹುದು; ಹಾಗಾಗಿ ನಿಮಗೆ ನಿಮ್ಮದೇ ಸ್ವಂತ ನೀತಿಯ ಅಗತ್ಯವಿದೆ. ಆದಾಗ್ಯೂ,

ದೇವರು ನಿಮ್ಮ ಬಾಹ್ಯ ನೀತಿಯ ಆಧಾರದ ಮೇಲೆ ನಿಮ್ಮನ್ನು ಅಂಗೀಕರಿಸುವುದಿಲ್ಲ. ದೇವರು ಅಕ್ಷರಶಃ ತನ್ನ ನೀತಿಯನ್ನು ನಿಮಗೆ ನೀಡಿರುವನು.

2 ಕೊರಿಂಥ 5:21 ರಲ್ಲಿ ನಾವು ಕ್ರಿಸ್ತನಲ್ಲಿ ದೇವರ ನೀತಿಯಾಗುವುದಕ್ಕಾಗಿ ತಂದೆಯಾದ ದೇವರು ತನ್ನ ಮಗನನ್ನು ನಮಗಾಗಿ ಪಾಪ ಸ್ವರೂಪಿಯಾಗಿ ಮಾಡಿದನು ಎಂದು ಹೇಳುತ್ತದೆ. ಹಾಗಾಗಿ ನಾವು ವ್ಯವಹರಿಸುವ ನೀತಿಗೂ ಮಿಗಿಲಾಗಿರುವ ಒಂದು ನೀತಿಯಿದೆ ಮತ್ತು ಇದು ದೇವರು ನಮಗಾಗಿ ಮಾಡಿರುವುದರ ಮೇಲೆ ಆಧಾರಗೊಂಡಿದೆ. ನಾವು ಅಕ್ಷರಶಃ ದೇವರ ನೀತಿಯನ್ನು ಕ್ರಿಸ್ತನಲ್ಲಿ ನಂಬಿಕೆಯಿಡುವುದರ ಮೂಲಕ ಪಡೆದುಕೊಂಡೆವು. ನಾವು ನೀತಿಯಲ್ಲಿಯೂ ಮತ್ತು ನಿಜವಾದ ಪರಿಶುದ್ಧತೆಯಲ್ಲಿಯೂ ಸೃಷ್ಟಿಸಲ್ಪಟ್ಟಿದ್ದೆವು. ನಾವು ಆ ನೀತಿಯಲ್ಲಿ ಬೆಳೆಯಬೇಕಾದ ಕಾರಣವಿಲ್ಲ; ಅಂದರೆ ನಾವು ಈಗಾಗಲೇ ನೀತಿಯಾಗಿದ್ದೇವೆ. ಇದಕ್ಕೆ ಒಂದು ಸರಳ ಅರ್ಥವಿವರಣೆಯೆಂದರೆ, ನಾವು ಈಗಾಗಲೇ ದೇವರ ಮುಂದೆ ನೀತಿಯಾಗಿಯೇ ನಿಂತಿರುವೆವು ಎಂಬುದಾಗಿದೆ.

ದೇವರು ನಮ್ಮನ್ನು ಮೆಚ್ಚಿರುವುದು ಕ್ರಿಸ್ತನ ನಿಮಿತ್ತವೇ ಹೊರತು ಬೇರೆಯಿಲ್ಲ. ನಮ್ಮ ಆತ್ಮವು ಮಾರ್ಪಾಡು ಹೊಂದಿರುತ್ತದೆ. ನಾವು ಈಗಾಗಲೇ ನೀತಿಯಲ್ಲಿ ಮತ್ತು ನಿಜವಾದ ಪರಿಶುದ್ಧತೆಯಲ್ಲಿ ಸೃಷ್ಟಿಸಲ್ಪಟ್ಟಿರುವೆವು ಹಾಗೂ ನಾವು ಹೊಚ್ಚ ಹೊಸ ಸೃಷ್ಟಿಗಳಾಗಿರುವೆವು. ಎಫೆಸ 2:10 ಹೇಳುತ್ತದೆ, *"ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು."* ನಮ್ಮ ಆತ್ಮಗಳಲ್ಲಿ, ನಾವು ಪರಿಪೂರ್ಣರೂ ಮತ್ತು ಸಂಪೂರ್ಣರೂ ಆಗಿದ್ದೇವೆ. ಅಲ್ಲಿ ಯಾವುದೇ ಪಾಪವಿಲ್ಲ ಅಥವಾ ಅಪರಿಪೂರ್ಣತೆಯೂ ಇಲ್ಲ. ಎಫೆಸ 1:13 ಹೇಳುತ್ತದೆ, *"ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ."*

ನಿಮ್ಮಲ್ಲಿ ಕೆಲವರು, *'ನಾನು ಮೊದಲು ಕರ್ತನನ್ನು ನಂಬಿದಾಗ, ಸಂಪೂರ್ಣವಾಗಿ ಕ್ಷಮಿಸಲ್ಪಟ್ಟಿರುವೆನು ಮತ್ತು ತೊಳೆಯಲ್ಪಟ್ಟಿರುವೆನು ಎಂದು ನಂಬಿದೆನು ಮತ್ತು ಆಗ ಎಲ್ಲವೂ ಚೆನ್ನಾಗಿತ್ತು. ಆದರೆ ಆ ಸಮಯದ ನಂತರದಿಂದ ನಾನು ಪಾಪ ಮಾಡಿರುವೆನು, ಪುನಃ ನಾನು ದೇವರಿಗೆ ದುಃಖಪಡಿಸಿರುವೆನು'* ಎಂದು ಆಲೋಚಿಸುತ್ತಿರಬಹುದು. ಹೀಗೆ ಮಾಡಿದ್ದರೆ, ನೀವು ನಿಮ್ಮ ಕ್ರಿಯೆಗಳಲ್ಲಿ, ಮತ್ತು ಮಾನಸಿಕ ಹಾಗೂ ಭಾವನಾತ್ಮಕ ವಲಯದಲ್ಲಿ ಸೋತಿರುವಿರಿ, ಆದರೆ ನಿಮ್ಮ ಆತ್ಮವು ಪಾಪ ಮಾಡುವುದಿಲ್ಲ. ಒಬ್ಬ ವ್ಯಕ್ತಿಯು ಒಂದು ಡಬ್ಬಿಯಲ್ಲಿ ಹಣ್ಣನ್ನು ಹಾಕಿ ಅದರೊಳಗೆ ಯಾವ ಕಲ್ಮಷಗಳೂ ಹೋಗದಂತೆ ಅದನ್ನು ಭದ್ರವಾಗಿ ಮುದ್ರಿಸಿ ಬಿಡುವ ಹಾಗೆಯೇ ಇದು ಸಹ. ದೇವರು ನಿಮ್ಮನ್ನು ಮುದ್ರಿಸಿರುವನು, ಹಾಗಾಗಿ ನೀವು ತಿರುಗಿ ಹುಟ್ಟಿದಾಗ, ನೀವು ಒಂದು ನೂತನ ಆತ್ಮವನ್ನು ಪಡೆದುಕೊಂಡಿರಿ, ಹಾಗೂ ಪಾಪವು ನಿಮ್ಮ ಆತ್ಮವನ್ನು ಛೇದಿಸಲು ಸಾಧ್ಯವಿಲ್ಲ. ನೀವು ಹೊಸದಾಗಿ ಗುರುತಿಸಲ್ಪಟ್ಟಿದ್ದೀರಿ. ಏಕೆಂದರೆ ನಿಮಗೆ ದೇವರೊಂದಿಗೆ ಸಂಬಂಧವಿದೆ, ನಿಮ್ಮ ಶರೀರದಲ್ಲಿ ಅಲ್ಲ ಆದರೆ ನಿಮ್ಮ ಆತ್ಮದಲ್ಲಿ ನೀವು ಏನಾಗಿರುವಿರೋ ಅದರ

ಆಧಾರದ ಮೇಲೆ ನೀವು ದೇವರೊಂದಿಗೆ ಅನ್ಯೋನ್ಯತೆಯಲ್ಲಿರಬೇಕು ಮತ್ತು ಆತನನ್ನು ಆರಾಧಿಸಬೇಕು.

ಇದು ಕ್ರೈಸ್ತ ಜೀವಿತದಲ್ಲುಂಟಾಗುವ ಒಂದು ಶ್ರೇಷ್ಠವಾದ ರೂಪಾಂತರವಾಗಿದೆ, ಅಂದರೆ ಒಬ್ಬ ವ್ಯಕ್ತಿಯು ತನ್ನ ಅಸ್ತಿತ್ವವನ್ನೇ ಬದಲಾಯಿಸಿಕೊಳ್ಳಬೇಕಾಗುತ್ತದೆ. ಪ್ರಾಕೃತಿಕ ವಲಯದಲ್ಲಿ ನೀವೇನು ಮಾಡುವಿರೋ ಅದರ ಆಧಾರದ ಮೇಲಲ್ಲ, ನಿಮ್ಮ ಮನಸ್ಸಿನ ಆಲೋಚನೆಗಳ ಆಧಾರದ ಮೇರೆಯೂ ಅಲ್ಲ, ಬದಲಾಗಿ ದೇವರು ನಿಮಗಾಗಿ ಏನು ಮಾಡಿರುವನೋ ಅದರ ಆಧಾರದ ಮೇರೆಗೆ, ನೀವು ಆತ್ಮದಲ್ಲಿ ಏನಾಗಿರುವಿರೋ ಅದರ ಆಧಾರದ ಮೇಲೆ ನೀವು ದೇವರೊಂದಿಗೆ ಸಂಬಂಧವನ್ನು ಹೊಂದಬೇಕು. ಅದು ಪೂರ್ಣಗೊಂಡಿರುವ ಕ್ರಿಯೆಯಾಗಿದೆ, ಅಂದರೆ ಇದು ಮತ್ತೆ ಮತ್ತೆ ಬದಲಾಗುವಂತಹ ಸಂಗತಿಯಲ್ಲ. ನೀವು ನೀತಿಯಲ್ಲಿಯೂ ಮತ್ತು ನಿಜವಾದ ಪರಿಶುದ್ಧತೆಯಲ್ಲಿಯೂ ಸೃಷ್ಟಿಸಲ್ಪಟ್ಟಿರುವಿರಿ. ಇದು ನಿಮ್ಮ ಆತ್ಮದ ಭಾಗವಾಗಿದೆ, ಮತ್ತು ದೇವರೊಂದಿಗೆ ಅನ್ಯೋನ್ಯತೆ ಹೊಂದಲು ನೀವು ಆತ್ಮದಲ್ಲಿಯೂ ಮತ್ತು ಸತ್ಯದಲ್ಲಿಯೂ ಆತನನ್ನು ಆರಾಧಿಸಬೇಕು. ನೀವು ಕ್ರಿಸ್ತನಲ್ಲಿ ಗುರುತಿಸಿಕೊಂಡಿರುವಿರಿ ಎನ್ನುವ ನೆಲೆಯಲ್ಲಿ ನಿಲ್ಲಬೇಕಾಗಿದೆ.

## ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. 1 ಕೊರಿಂಥ 6:17 ನ್ನು ಓದಿರಿ. ನಮ್ಮ ಆತ್ಮಗಳಲ್ಲಿ ಸಂಪೂರ್ಣವಾದ ಮಾರ್ಪಡುವಿಕೆ ಉಂಟಾಗಿದೆ ಎಂಬುದನ್ನು ನಾವು ದೇವರ ವಾಕ್ಯದಿಂದ ತಿಳಿಯುವುದೇ ಏಕೈಕ ಮಾರ್ಗವಾಗಿದೆ. ನಿಮಗೆ ಏನು ಸಂಭವಿಸಿದೆ ಎಂದು ಈ ವಚನವು ಹೇಳುತ್ತದೆ?

**1 ಕೊರಿಂಥ 6:17** – *ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ.*

2. ಎಫೆಸ 3:17 ನ್ನು ಓದಿರಿ. ಈಗ ಕ್ರಿಸ್ತನು ಎಲ್ಲಿ ವಾಸಿಸುವನು?

**ಎಫೆಸ 3:17** *ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ.*

3. ಎಫೆಸ 3:17 ನ್ನು ಓದಿರಿ. ಇದು ಹೇಗೆ ಸಂಭವಿಸುತ್ತದೆ?

4. 1 ಯೋಹಾನ 5:12 ನ್ನು ಓದಿರಿ. ರಕ್ಷಣೆಯನ್ನು ಪಡೆಯಲು ನಾವು ಯಾರನ್ನು ಅಂಗೀಕರಿಸಬೇಕಾಗಿದೆ?

**1 ಯೋಹಾನ 5:12** – *ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ.*

5. ಕೊಲೊಸ್ಸೆ 1:26–27 ನ್ನು ಓದಿರಿ. ಯುಗಯುಗಾಂತರಗಳಿಂದ ಹಾಗೂ ತಲೆತಲಾಂತರಗಳಿಂದ ಗುಪ್ತವಾಗಿದ್ದ ಮತ್ತು ಈಗ ತಿಳಿಸಲ್ಪಟ್ಟಿರುವ ಮರ್ಮವು ಯಾವುದು?

**ಕೊಲೊಸ್ಸೆ 1:26–27** – *ಆ ವಾಕ್ಯವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು; ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ. ಅನ್ಯಜನಗಳ ವಿಷಯವಾದ ಈ ಮರ್ಮದ ಮಹಿಮಾತಿಶಯವು ಎಷ್ಟೆಂಬುದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸುಮಾಡಿಕೊಂಡನು. ಈ ಮರ್ಮವು ಏನೆಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ.*

6. ಎಫೆಸ 4:23–24 ನ್ನು ಓದಿರಿ. ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ಸೃಷ್ಟಿಸ್ಪಟ್ಟಿರುವುದು ಯಾವುದು?

**ಎಫೆಸ 4:23–24** – *ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ.*

7. 2 ಕೊರಿಂಥ 5:21 ನ್ನು ಓದಿರಿ. ನಾವು ಯಾರ ನೀತಿಯ ಸಾರೂಪ್ಯವನ್ನು ಹೊಂದಿಕೊಂಡಿರುವೆವು?

**2 ಕೊರಿಂಥ 5:21** – *ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು.*

8. ಎಫೆಸ 1:4 ನ್ನು ಓದಿರಿ. ದೇವರ ಮುಂದೆ ವಿಶ್ವಾಸಿಯು ಹೇಗಿರಬೇಕಾಗಿದೆ?

**ಎಫೆಸ 1:4** – *ಹೇಗಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು.*

9. ಎಫೆಸ 1:6 ನ್ನು ಓದಿರಿ. ನಾವು ಹೇಗೆ ಅಂಗೀಕರಿಸಲ್ಪಟ್ಟೆವು?

**ಎಫೆಸ 1:6 –** *ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು.*

## ಉತ್ತರಗಳು

1. 1 ಕೊರಿಂಥ 6:17 ನ್ನು ಓದಿರಿ. ನಮ್ಮ ಆತ್ಮಗಳಲ್ಲಿ ಸಂಪೂರ್ಣವಾದ ಮಾರ್ಪಡುವಿಕೆ ಉಂಟಾಗಿದೆ ಎಂಬುದನ್ನು ನಾವು ದೇವರ ವಾಕ್ಯದಿಂದ ತಿಳಿಯುವುದೇ ಏಕೈಕ ಮಾರ್ಗವಾಗಿದೆ. ನಿಮಗೆ ಏನು ಸಂಭವಿಸಿದೆ ಎಂದು ಈ ವಚನವು ಹೇಳುತ್ತದೆ?

**ಕರ್ತನ ಸಂಸರ್ಗದಲ್ಲಿರುವವನು ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ**

2. ಎಫೆಸ 3:17ನ್ನು ಓದಿರಿ. ಈಗ ಕ್ರಿಸ್ತನು ಎಲ್ಲಿ ವಾಸಿಸುವನು?

**ನಮ್ಮ ಹೃದಯಗಳಲ್ಲಿ**

3. ಎಫೆಸ 3:17ನ್ನು ಓದಿರಿ. ಇದು ಹೇಗೆ ಸಂಭವಿಸುತ್ತದೆ?

**ನಂಬಿಕೆಯಿಂದ**

4. 1 ಯೋಹಾನ 5:12ನ್ನು ಓದಿರಿ. ರಕ್ಷಣೆಯನ್ನು ಪಡೆಯಲು ನಾವು ಯಾರನ್ನು ಅಂಗೀಕರಿಸಬೇಕಾಗಿದೆ?

**ಮಗನನ್ನು (ಯೇಸು ಕ್ರಿಸ್ತನು)**

5. ಕೊಲೊಸ್ಸೆ 1:26–27ನ್ನು ಓದಿರಿ. ಯುಗಯುಗಾಂತರಗಳಿಂದ ಹಾಗೂ ತಲೆತಲಾಂತರಗಳಿಂದ ಗುಪ್ತವಾಗಿದ್ದ ಮತ್ತು ಈಗ ತಿಳಿಸಲ್ಪಟ್ಟಿರುವ ಮರ್ಮವು ಯಾವುದು?

**ಕ್ರಿಸ್ತನು ನಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವುದೇ**

6. ಎಫೆಸ 4:23–24ನ್ನು ಓದಿರಿ. ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಯವುಳ್ಳದ್ದಾಗಿಯೂ ಸೃಷ್ಟಿಸ್ಪಟ್ಟಿರುವುದು ಯಾವುದು?

**ನಮ್ಮ ನೂತನ ಸ್ವಭಾವ (ಹೊಸದಾಗಿ ಹುಟ್ಟಿರುವ ನಮ್ಮ ಆತ್ಮಗಳು)**

7. 2 ಕೊರಿಂಥ 5:21ನ್ನು ಓದಿರಿ. ನಾವು ಯಾರ ನೀತಿವಂತಿಕೆಯನ್ನು ಹೊಂದಿಕೊಂಡಿರುವೆವು?

**ಕ್ರಿಸ್ತನಲ್ಲಿರುವ ದೇವರ ನೀತಿವಂತಿಕೆಯನ್ನು**

8. ಎಫೆಸ 1:4ನ್ನು ಓದಿರಿ. ದೇವರ ಮುಂದೆ ವಿಶ್ವಾಸಿಯು ಹೇಗಿರಬೇಕಾಗಿದೆ?

**ಪರಿಶುದ್ಧರೂ ಮತ್ತು ದೋಷವಿಲ್ಲದವರೂ ಆಗಿರಬೇಕು**

9. ಎಫೆಸ 1:6ನ್ನು ಓದಿರಿ. ನಾವು ಹೇಗೆ ಅಂಗೀಕರಿಸಲ್ಪಟ್ಟೆವು?

**ಪ್ರಿಯನಲ್ಲಿ (ಯೇಸು ಕ್ರಿಸ್ತನಲ್ಲಿ)**

ಪಾಠ 11

# ಯಾವ ಕ್ರೈಸ್ತನಾದರೂ ಪಾಪ ಮಾಡಿದಾಗ ಏನು ಸಂಭವಿಸುತ್ತದೆ?

***ಡೂಣ್ ಕ್ರೊ***

'ಒಬ್ಬ ಕ್ರೈಸ್ತನು ಪಾಪ ಮಾಡಿದಾಗ ಏನಾಗುವುದು?' ಎನ್ನುವುದನ್ನು ಈ ದಿನ ನೋಡೋಣ. ಬೈಬಲ್‌ನ 1 ಯೋಹಾನ 1:8–9 ರಲ್ಲಿ ಈ ರೀತಿಯಾಗಿ ಹೇಳಿದೆ, *"ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು."* ಕ್ರೈಸ್ತರಾದ ನಾವು ಸಹಜವಾಗಿ ಎಡವುವುದೂ ಪಾಪದಲ್ಲಿ ಬೀಳುವುದೂ ಸಾಧ್ಯವಿದೆ. ಮಾನಸಾಂತರ ಹೊಂದುವ ಪೂರ್ವದಲ್ಲಿ ನಾವು ಇದ್ದದ್ದಕ್ಕಿಂತ ಈಗಿರುವ ಭಿನ್ನತೆಯೇನೆಂದರೆ, ಈಗ ನಮಗೆ ನೂತನ ಸ್ವಭಾವ ದೊರೆತಿದೆ. ಪಾಪ ಮಾಡಿದಾಗ ನಮಗೆ ದು:ಖವಾಗುತ್ತದೆ. ಪಾಪ ಮಾಡಲು ನಮಗೆ ಮನಸ್ಸಾಗುವುದಿಲ್ಲ; ನೀತಿಯ ಮಾರ್ಗದಲ್ಲಿ ಜೀವಿಸಬೇಕೆಂದು ಬಯಸುತ್ತೇವೆ. ಆದರೆ ನಾವು ಪಾಪ ಮಾಡಿದಾಗ ಏನಾಗುತ್ತದೆ? ನಾವು ಪುನಃ ರಕ್ಷಣೆ ಹೊಂದಿಕೊಳ್ಳಬೇಕೋ? ಸತ್ಯವೇದವು ಹೀಗೆ ಬೋಧಿಸುತ್ತಿದೆಯೇ? ಹೌದೆನ್ನುವುದಾದರೆ, ನಮಗೆ ಯಾವ ಭದ್ರತ್ರೆಯೂ ಇಲ್ಲ, ಹಾಗೂ ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಲೋಕದವರಿಗಿಂತಲೂ ನಮ್ಮ ಪರಿಸ್ಥಿತಿ ಹದಗೆಟ್ಟಂತಾಗುತ್ತದೆ. ಲೋಕವಾದರೋ ಪಾಪಪ್ರಜ್ಞೆಯಿಂದ ಬಾಧಿಸಲ್ಪಡುವುದಿಲ್ಲ. ವಿಶ್ವಾಸಿಗಳಾಗಿ, ನಮ್ಮ ಗಮನವು ಪಾಪಕೇಂದ್ರಿತವಾಗಿರಬಾರದು. ಇಬ್ರಿಯ 10:2 ಹೇಳುತ್ತದೆ, ಯೇಸುವಿನ ಯಜ್ಞದ ನಿಮಿತ್ತವಾಗಿ, 'ಒಂದೇ ಸಾರಿ ಶುದ್ಧೀಕರಿಸಲ್ಪಟ್ಟ ಮೇಲೆ ಅವರಿಗೆ ಪಾಪವುಂಟೆಂದು ಅವರ ಮನಸ್ಸು ಇನ್ನೂ ಸಾಕ್ಷಿಕೊಡುವುದು ಹೇಗೆ?' ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ನಮ್ಮ ಮನಸ್ಸು ಪಾಪಕೇಂದ್ರೀಕೃತವಾಗಿರಬಾರದು. ಅದು ದೈವ ಕೇಂದ್ರೀಕೃತವಾಗಿರಬೇಕು.

ರೋಮ 4:2 ಹೇಳುತ್ತದೆ, *"ಅಬ್ರಹಾಮನು ಪುಣ್ಯಕ್ರಿಯೆಗಳಿಂದಲೇ ನೀತಿವಂತನಾದ ಪಕ್ಷದಲ್ಲಿ ಹೊಗಳಿಕೊಳ್ಳುವದಕ್ಕೆ ಅವನಿಗೆ ಆಸ್ಪದವಿರುವದು; ಆದರೆ ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿರುವದಿಲ್ಲ."* ರಕ್ಷಣೆಯು ನಮ್ಮ ಪುಣ್ಯಕ್ರಿಯೆಗಳ ಮೇಲೆ ಆಧಾರಗೊಂಡಿದ್ದರೆ, ನಾವು ಮಾಡುವಂತಹ ಸಂಗತಿಗಳ ಬಗ್ಗೆ ನಾವು ಹೊಗಳಿಕೊಳ್ಳುತ್ತಿದ್ದೆವು. ನಾವು, "ಓ ಕರ್ತನೇ, ನೀನು ಶಿಲುಬೆಯ ಮೇಲೆ

ಮಾಡಿರುವ ಕಾರ್ಯಗಳಿಗಾಗಿ ನಾನು ನಿಜವಾಗಿಯೂ ನಿನ್ನನ್ನು ಪ್ರಶಂಸಿಸುತ್ತೇನೆ, ಆದರೆ ನಾನು ಮಾಡಿರುವ ಸಂಗತಿಗಳನ್ನು ನೆನಪಿಸಿಕೋ!" ಎಂದು ಹೇಳಿಕೊಳ್ಳುತ್ತಿದ್ದೆವು. ಹಾಗಾಗಿ ಇಡೀ ನಿತ್ಯತ್ವದಲ್ಲಿ, ನಾವು ಯೇಸುವಿನ ಭುಜವನ್ನು ತಟ್ಟುತ್ತಲೇ ನಾವು ಮಾಡಿದ ಕ್ರಿಯೆಗಳಿಗಾಗಿ ನಮ್ಮ ಬೆನ್ನನ್ನು ತಟ್ಟಿಕೊಳ್ಳುತ್ತಿದ್ದೆವು. ಅದರೆ ಅದು ಹಾಗಲ್ಲ! ದೇವರು ರಕ್ಷಣೆಯನ್ನು ಎಂತಹ ವಿಧದಲ್ಲಿ ರೂಪಿಸಿರುವನೆಂದರೆ, ಇದರಲ್ಲಿ ಮನುಷ್ಯನ ಪಾಲಿಗೆ ಯಾವ ಹೊಗಳಿಕೆಯೂ ಅಥವಾ ಮಹಿಮೆಯೂ ಇರುವುದಿಲ್ಲ. ಮಹಿಮೆ ಮತ್ತು ಹೊಗಳಿಕೆಯು ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಇರುತ್ತದೆ (ರೋಮ 3:27). ನಿತ್ಯಜೀವದ ವರವು ನಿಜವಾಗಿಯೂ ಒಂದು ವರವಾಗಿದೆ ಮತ್ತು ಇದನ್ನು ಸಂಪಾದನೆ ಮಾಡಲು ಸಾಧ್ಯವಿಲ್ಲ (ರೋಮ 6:23).

ರೋಮಾಪುರದವರಿಗೆ ಬರೆದ ಪತ್ರಿಕೆ 4:2 ಹೇಳುತ್ತದೆ, ಅಬ್ರಹಾಮನು ತನ್ನ ಸ್ವಂತ ಕ್ರಿಯೆಗಳಿಂದ ನೀತಿವಂತನಾಗಿದ್ದರೆ, ಹೊಗಳಿಕೊಳ್ಳುವದಕ್ಕೆ ಆಸ್ಪದವಿರುತ್ತಿತ್ತು. ಒಬ್ಬ ವ್ಯಕ್ತಿಯು ರಕ್ಷಣೆ ಹೊಂದಿದನು ಎಂಬುದನ್ನು ಸತ್ಯವೇದವು ಹೇಗೆ ತಿಳಿಸುತ್ತದೆ? ಅವನ ನಡೆಯಿಂದಲೇ? ಅವನ ಸ್ವಂತ ಕ್ರಿಯೆಗಳಿಂದಲೇ? ಅವನು ಮಾಡುವ ಸಂಗತಿಗಳಿಂದಲೇ? ಅಬ್ರಹಾಮನು ನೀತಿವಂತನೆಂದು ಹೇಗೆ ಎಣಿಸಲ್ಪಡಲಾಯಿತು ಅಥವಾ ಹೇಗೆ ಘೋಷಿಸಲಾಯಿತು? ಅವನು ಮಾಡಿದ ಅಥವಾ ಮಾಡದಿರುವ ಸಂಗತಿಗಳಿಂದಲೋ ಅಥವಾ ಅವನು ನಂಬಿಕೆಯ ಮೂಲಕ ದೇವರ ಮೇಲೆ ಭರವಸೆ ಇಟ್ಟನು ಮತ್ತು ಆಧಾರಗೊಂಡನು ಎಂಬುದರಿಂದಲೋ? ರೋಮ 4:3ರಲ್ಲಿ ಸತ್ಯವೇದವು ಹೇಳುತ್ತದೆ, *"ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆಯು ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು."*

ನಾನು ಸೋತುಹೋದಾಗಲೂ ಪಾಪಮಾಡಿದಾಗಲೂ ನನ್ನನ್ನು ಭದ್ರವಾಗಿ ಹಿಡಿದುಕೊಂಡಿರುವುದು, ನಾಶವಾಗದಂತೆ ನನ್ನನ್ನು ಕಾಪಾಡುವದು ಯಾವುದು? ಯೇಸುವು ನನ್ನ ಪಾಪವನ್ನು ತನ್ನ ಮೇಲೆ ಹೊತ್ತುಕೊಂಡನು ಮತ್ತು ಆತನ ಮೇಲಿನ ನಂಬಿಕೆಯ ಮೂಲಕವೇ (ನನ್ನ ಸ್ವಂತ ಕ್ರಿಯೆಗಳಿಂದಲ್ಲ), ನನಗೆ ನೀತಿನಿರ್ಣಯವಾಗಿದೆ (ದೇವರ ಮುಂದೆ ನೀತಿವಂತನೆಂದು ನಿರ್ಣಯಿಸಲ್ಪಟ್ಟಿರುವೆನು) ಎನ್ನುವ ಸಂಗತಿಯೇ.

ರೋಮ 4:6 ರಲ್ಲಿ, *"ದೇವರು ಯಾವನನ್ನು ಪುಣ್ಯಕ್ರಿಯೆಗಳಿಲ್ಲದೆ ನೀತಿವಂತನೆಂದು ಎಣಿಸುತ್ತಾನೋ ಅವನು ಧನ್ಯನು"* ಎಂದು ದಾವೀದನು ಸಹ ಹೇಳುತ್ತಾನೆ, ಎಂದು ಬರೆಯಲಾಗಿದೆ. ಮನುಷ್ಯನು ಯಾವುದೇ ಶ್ರಮ ಪಡದಿದ್ದರೂ ಒಂದು ನೂತನ ಒಡಂಬಡಿಕೆಯ ಮೂಲಕ ದೇವರು ಅವನಿಗೆ ನೀತಿಯನ್ನು, ತನ್ನ ಮುಂದೆ ದೋಷವಿಲ್ಲದವನಾಗಿ ನಿಲ್ಲುವ ಸ್ಥಿತಿಯನ್ನು ಸಾಧ್ಯಮಾಡುವ ಒಂದು ದಿನವು ಬರುತ್ತದೆ ಎಂದು ಹಳೇ ಒಡಂಬಡಿಕೆಯ ದಾವೀದನು ಹೇಳುತ್ತಿರುವನು. ನಂತರ ಅವನು 7ನೇ ವಚನದಲ್ಲಿ, *"ಹೇಗಂದರೆ - ಯಾರ ಅಪರಾಧಗಳು ಪರಿಹಾರವಾಗಿವೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು"* ಎಂದು ಹೇಳಿರುವನು.

ಇದು ನಿರ್ಣಾಯಕವಾದ ಸಂಗತಿಯಾಗಿದೆ: *"ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು"* (ರೋಮ 4:8). ಇದು ಕರ್ತನು ಹೀಗೆ ಮಾಡಬಹುದು ಎಂದು ಹೇಳುವುದಿಲ್ಲ, ಅಂದರೆ ಆತನು ಕೆಲವೊಮ್ಮೆ ಮಾಡುತ್ತಾನೆ ಹಾಗೂ ಕೆಲವೊಮ್ಮೆ ಮಾಡುವುದಿಲ್ಲ ಎಂದು ಹೇಳುತ್ತಿಲ್ಲ. ಈ ವಾಕ್ಯವು, "ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು" ಎಂದು ಹೇಳುತ್ತದೆ. ಗ್ರೀಕ್ ಭಾಷೆಯಲ್ಲಿ 'ತರುವುದಿಲ್ಲವೋ' ಎಂಬ ನುಡಿಯು ಪ್ರಬಲಾಗಿರುವ ನಕಾರಾತ್ಮಕ ಎಂದು ಕರೆಯಲಾಗುತ್ತದೆ. ಇದರರ್ಥ ಕರ್ತನು ಇನ್ನೆಂದಿಗೂ ಪಾಪವನ್ನು ನಮ್ಮ ಲೆಕ್ಕಕ್ಕೆ ತರುವುದಿಲ್ಲ ಎಂಬುದಾಗಿದೆ. ಇದು ಹೊಸ ಒಡಂಬಡಿಕೆಯ ಶುಭ ಸಂದೇಶವಾಗಿದೆ. ಇಬ್ರಿಯ 10:16 ಹೇಳುತ್ತದೆ, *"ನನ್ನ ಆಜ್ಞೆಗಳನ್ನು ಅವರ ಹೃದಯದಲ್ಲಿ ಇಡುವೆನು, ಅವರ ಮನಸ್ಸಿನ ಮೇಲೆ ಅವುಗಳನ್ನು ಬರೆಯುವೆನು ಎಂದು ಕರ್ತನು ನುಡಿಯುತ್ತಾನೆ."* ಇದಕ್ಕೆ ಅಂಗೀಕಾರವಾಗಿರುವ ಭಾಗದ 17ನೇ ವಚನದಲ್ಲಿ ದೇವರು ಹೀಗೆ ಹೇಳುತ್ತಾನೆ, *"ಅವರ ಪಾಪಗಳನ್ನು ಅವರ ದುಷ್ಕೃತ್ಯಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ."*

ನೀವು ಪಾಪ ಮಾಡಿದಾಗ ಮತ್ತು ಅವುಗಳನ್ನು ಅರಿಕೆ ಮಾಡುವುದಕ್ಕೆ ನಿಮಗೆ ಸಮಯವಿಲ್ಲದಿರುವಾಗಲೂ ಸಹ ನೀವು ನಿಮ್ಮ ಸ್ಥಾನದಲ್ಲಿರುವಂತೆ, ನೀತಿವಂತಿಕೆಯಲ್ಲಿರುವಂತೆ ಮತ್ತು ದೇವರ ಮುಂದೆ ನಿರ್ದೋಷಿಗಳಾಗಿರುವಂತೆ ಯಾವುದು ನಿಮ್ಮನ್ನು ಹಿಡುದುಕೊಳ್ಳುತ್ತದೆ? ಇದು ಯೇಸು ಕ್ರಿಸ್ತನಲ್ಲಿರುವ ನಿಮ್ಮ ನಂಬಿಕೆಯಾಗಿದೆ. ಆತನ ಹೆಸರು ಯೇಸು ಹಾಗೂ ಆತನು ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸುವನು (ಮತ್ತಾಯ 1:21).

## ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ರೋಮ 4:5 ನ್ನು ಓದಿರಿ. ದೇವರು ________________ ಜನರನ್ನು ನೀತಿವಂತರೆಂದು ನಿರ್ಣಯಿಸುತ್ತಾನೆ (ನೀತಿವಂತರಾಗಿ ಮಾಡುತ್ತಾನೆ.)

**ರೋಮ 4:5–6** – *ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು. ಯಾವನನ್ನು ಪುಣ್ಯಕ್ರಿಯೆಗಳಿಲ್ಲದೆ ನೀತಿವಂತನೆಂದು ಎಣಿಸುತ್ತಾನೋ ಅವನು ಧನ್ಯನೆಂದು ದಾವೀದನು ಸಹ ಹೇಳುತ್ತಾನೆ.*

2. ರೋಮ 4:2–3 ನ್ನು ಓದಿರಿ. ಅಬ್ರಹಾಮನ ಬಳಿ ಮೊದಲು ಇಲ್ಲದಂತಹ ಒಂದು ಸಂಗತಿಯನ್ನು ದೇವರು ಅವನ ಲೆಕ್ಕಕ್ಕೆ ಹಾಕುತ್ತಾನೆ. ಅದು ಏನಾಗಿತ್ತು?

**ರೋಮ 4:2–3** – *ಅಬ್ರಹಾಮನು ಪುಣ್ಯಕ್ರಿಯೆಗಳಿಂದಲೇ ನೀತಿವಂತನಾದ ಪಕ್ಷದಲ್ಲಿ ಹೊಗಳಿಕೊಳ್ಳುವದಕ್ಕೆ ಅವನಿಗೆ ಆಸ್ಪದವಿರುವದು; ಆದರೆ ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿರುವದಿಲ್ಲ. ಇದರ ವಿಷಯದಲ್ಲಿ ಶಾಸ್ತ್ರವು ಹೇಳುವದನ್ನು ಆಲೋಚಿಸಿರಿ. ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು.3. ರೋಮ 4:22–24ನ್ನು ಓದಿರಿ. ನಾವು ಅಬ್ರಹಾಮನ ಹಾಗೆಯೇ ನಂಬಿದರೆ, ದೇವರು ನಮ್ಮ ಲೆಕ್ಕಕ್ಕೆ ಏನನ್ನು ಹಾಕುವನು?*

3. ರೋಮ 4:22–24 ನ್ನು ಓದಿರಿ. ನಾವು ಅಬ್ರಹಾಮನ ಹಾಗೆಯೇ ನಂಬಿದರೆ, ದೇವರು ನಮ್ಮ ಲೆಕ್ಕಕ್ಕೆ ಏನನ್ನು ಹಾಕುವನು?

**ರೋಮ 4:22–24** – *ಆದದರಿಂದ ಆ ನಂಬಿಕೆಯು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು. [24]ಆದರೆ ಅದು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತೆಂಬದು ಅವನಿಗೋಸ್ಕರ ಮಾತ್ರವಲ್ಲದೆ ನಮಗೋಸ್ಕರವೂ ಬರೆದಿರುವದು.*

4. ರೋಮ 4:6 ನ್ನು ಓದಿರಿ. ದೇವರು ಒಬ್ಬ ವ್ಯಕ್ತಿಯ ______ ಅವರ ಲೆಕ್ಕಕ್ಕೆ ನೀತಿಯನ್ನು ಎಣಿಸುತ್ತಾನೆ (ಅಥವಾ ನಿರ್ದೋಷಿಯಾಗಿ):

(1) ಅವರ ಕ್ರಿಯೆಗಳಿಗನುಸಾರವಾಗಿ

(2) ಕ್ರಿಯೆಗಳ ಹೊರತಾಗಿಯೂ

(3) ಅವರು ಎಷ್ಟು ಒಳ್ಳೆಯವರು ಎನ್ನುವುದಕ್ಕೆ ಅನುಸಾರವಾಗಿ

5. ಇಬ್ರಿಯ 10:14ನ್ನು ಓದಿರಿ. ಎಲ್ಲಿಯತನಕ ವಿಶ್ವಾಸಿಗಳನ್ನು ದೇವರ ಮುಂದೆ ಪರಿಪೂರ್ಣರಾಗಿ ಮಾಡಲಾಗುತ್ತದೆ?

**ಇಬ್ರಿಯ 10:14** – *ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.*

6. ರೋಮ 5:17ನ್ನು ಓದಿರಿ. ನೀತಿಯನ್ನು ಹೀಗೆ ಪಡೆಯಲಾಗುತ್ತದೆ:

(1) ಸಂಪಾದನೆಯ ಮೂಲಕ

(2) ಒಂದು ವರವಾಗಿ

(3) ಕ್ರಿಯೆಯ ಮೂಲಕ

**ರೋಮ 5:17** – *ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೆ.*

7. "ವರ" ಎನ್ನುವುದು ಏನನ್ನು ವ್ಯಕ್ತಪಡಿಸುತ್ತದೆ?

8. ಯೇಸುವನ್ನು ನಿಮ್ಮ ವೈಯಕ್ತಿಕ ರಕ್ಷಕನೆಂದು ಆತನಲ್ಲಿ ಭರವಸೆ ಇಡುವುದು, ಆತನು ನಿಮ್ಮನ್ನು ___________ ಕರೆದುಕೊಂಡು ಹೋಗುವನೆಂದು:

(1) ಸಭೆಗೆ

(2) ಪರಲೋಕಕ್ಕೆ

(3) ಯುರೋಪ್‌ಗೆ

## ಉತ್ತರಗಳು

1. ರೋಮ 4:5ನ್ನು ಓದಿರಿ. ದೇವರು ______________________ ರನ್ನು ನೀತಿವಂತರೆಂದು ನಿರ್ಣಯಿಸುತ್ತಾನೆ (ನೀತಿವಂತರಾಗಿ ಮಾಡುತ್ತಾನೆ.)

**ಪಾಪಾತ್ಮ**

2. ರೋಮ 4:2–3ನ್ನು ಓದಿರಿ. ಅಬ್ರಹಾಮನ ಬಳಿ ಮೊದಲು ಇಲ್ಲದಂತಹ ಒಂದು ಸಂಗತಿಯನ್ನು ದೇವರು ಅವನ ಲೆಕ್ಕಕ್ಕೆ ಹಾಕುತ್ತಾನೆ. ಅದು ಏನಾಗಿತ್ತು?

**ನೀತಿ, ಅಥವಾ ದೇವರ ಎದುರಿನಲ್ಲ ನಿಲ್ಲಲು ಸಾಧ್ಯ ಮಾಡುವಂತದ್ದು**

3. ರೋಮ 4:22–24ನ್ನು ಓದಿರಿ. ನಾವು ಅಬ್ರಹಾಮನ ಹಾಗೆಯೇ ನಂಬಿದರೆ, ದೇವರು ನಮ್ಮ ಲೆಕ್ಕಕ್ಕೆ ಏನನ್ನು ಹಾಕುವನು?

**ನೀತಿ, ಅಥವಾ ದೇವರ ಎದುರಿನಲ್ಲಿ ಸರಿಯಾಗಿ ನಿಲ್ಲುವಂತಹುದು**

4. ರೋಮ 4:6ನ್ನು ಓದಿರಿ. ದೇವರು ಒಬ್ಬ ವ್ಯಕ್ತಿಯ ______ ಅವರ ಲೆಕ್ಕಕ್ಕೆ ನೀತಿಯನ್ನು ಎಣಿಸುತ್ತಾನೆ (ಅಥವಾ ನಿರ್ದೋಷಿಯೆಂದು ನಿರ್ಣಯಿಸುತ್ತಾನೆ):

**(2) ಕ್ರಿಯೆಗಳ ಹೊರತಾಗಿಯೂ**

5. ಇಬ್ರಿಯ 10:14ನ್ನು ಓದಿರಿ. ಎಲ್ಲಿಯ ತನಕ ವಿಶ್ವಾಸಿಗಳನ್ನು ದೇವರ ಮುಂದೆ ಪರಿಪೂರ್ಣರಾಗಿ ಮಾಡಲಾಗುತ್ತದೆ?

**ಸದಾಕಾಲವೂ ಅಥವಾ ನಿತ್ಯನಿರಂತರ**

6. ರೋಮ 5:17ನ್ನು ಓದಿರಿ. ನೀತಿಯನ್ನು ಹೀಗೆ ಪಡೆಯಲಾಗುತ್ತದೆ:

**(2) ಒಂದು ವರವಾಗಿ**

7. "ವರ" ಎನ್ನುವುದು ಏನನ್ನು ವ್ಯಕ್ತಪಡಿಸುತ್ತದೆ?

**ಇದು ಉಚಿತವಾಗಿ ಕೊಡಲ್ಪಟ್ಟಿರುವುದಾಗಿದೆ, ಅಂದರೆ ಇದನ್ನು ಪಡೆಯುವ ವ್ಯಕ್ತಿಯು ಇದಕ್ಕೆ ಯಾವ ಬೆಲೆಯನ್ನು ನೀಡಬೇಕಾಗಿಲ್ಲ.**

8. ಯೇಸುವನ್ನು ನಿಮ್ಮ ವೈಯಕ್ತಿಕ ರಕ್ಷಕನೆಂದು ಆತನಲ್ಲಿ ಭರವಸೆ ಇಡುವುದು, ಆತನು ನಿಮ್ಮನ್ನು ಇಲ್ಲಿಗೆ ಕರೆದುಕೊಂಡು ಹೋಗಲು:

**(2) ಪರಲೋಕಕ್ಕೆ**

## ಪಾಠ 12

# ದೇವರ ವಾಕ್ಯದ ಪ್ರಾಮಾಣಿಕತೆ

*ಆಂಡ್ರೂ ವ್ಹಾಮಕ್*

ದೇವರ ವಾಕ್ಯದ ಪ್ರಾಮಾಣಿಕತೆ ಕುರಿತಂತೆ ಮಾರ್ಕ 4ನೇ ಅಧ್ಯಾಯವು ಅತ್ಯದ್ಭುತವಾಗಿದೆ – ಇದರಲ್ಲಿ ಬಲ, ಗುಣಲಕ್ಷಣ ಮತ್ತು ನಂಬಿಕೆ ಇದೆ. ಈ ಒಂದೇ ದಿನದಲ್ಲಿ ಕನಿಷ್ಟಪಕ್ಷ 10 ಸಾಮ್ಯಗಳನ್ನು ಬೋಧಿಸಲಾಗಿದೆ. ಇದನ್ನು ಗ್ರಹಿಸುವುದಕ್ಕಾಗಿ ನೀವು ಮಾರ್ಕ 4ರೊಂದಿಗೆ ಮತ್ತಾಯ 13 ಮತ್ತು ಲೂಕ 8ನೇ ಅಧ್ಯಾಯವನ್ನು ಹೋಲಿಸಬೇಕು. ಅಲ್ಲಿ ಅನೇಕ ಸಾಮ್ಯಗಳಿವೆ, ಇದರಲ್ಲಿ ಬೀಜವನ್ನು ಬಿತ್ತುವವನ ಸಾಮ್ಯವೂ ಸಹ ಇದೆ. ಮಾರ್ಕ 4:26 ರಲ್ಲಿ ಇದು ಹೀಗೆ ಹೇಳುತ್ತದೆ, *"ಒಬ್ಬನು ಭೂಮಿಯಲ್ಲಿ ಬೀಜವನ್ನು ಹಾಕಿ... ಇದರಂತೆ ದೇವರ ರಾಜ್ಯ."* ಆದರೆ 14ನೇ ವಚನದಲ್ಲಿ ಈ ಬೀಜವು ದೇವರ ವಾಕ್ಯವಾಗಿದೆ ಎಂದು ಹೇಳಿರುವನ್ನು ನೆನಪಿನಲ್ಲಿಡಿ. ವಾಸ್ತವದಲ್ಲಿ ದೇವರು ನೀವು ಹೇಗೆ ರೈತನಾಗಬಹುದು ಎಂಬುದರ ಕುರಿತಾಗಿ ಹೇಳುತ್ತಿಲ್ಲ, ಆದರೆ ಆತ್ಮೀಕ ಸತ್ಯವನ್ನು ವಿವರಿಸುವುದಕ್ಕಾಗಿ ಆತನು ಒಂದು ಸ್ವಾಭಾವಿಕ ಸಂಗತಿಯನ್ನು ಉಪಯೋಗಿಸುತ್ತಿರುವನು. ವಚನ 27 ಹೇಳುತ್ತದೆ, *"ರಾತ್ರಿ ಮಲಗುತ್ತಾ ಹಗಲು ಎದ್ದಿರುತ್ತಾ ಇರಲು ಅವನಿಗೆ ತಿಳಿಯದ ರೀತಿಯಲ್ಲಿ ಆ ಬೀಜವು ಹುಟ್ಟಿ ಬೆಳೆಯುವದು."* ಈಗ, ಇದು ಮುಖ್ಯವಾದುದು ಎಂಬುದಾಗಿ ನಾನು ನಂಬುತ್ತೇನೆ. ಮನುಷ್ಯನಿಗೆ ನಿಜವಾಗಿಯೂ ಅರ್ಥವಾಗುವುದಿಲ್ಲ, ಇದು ಹೇಗೆ ಸಂಭವಿಸುತ್ತಿದೆ ಅವನಿಗೆ ತಿಳಿದಿಲ್ಲ ಎಂದು ಇದು ಹೇಳುತ್ತದೆ.

ಕೆಲವರು ಹೀಗೆ ಹೇಳುತ್ತಾರೆ, "ನೀವು ಯಾವುದರ ಬಗ್ಗೆ ಮಾತನಾಡುತ್ತಿರುವಿರೋ ನನಗೆ ಅರ್ಥವಾಗುತ್ತಿಲ್ಲ. ದೇವರ ವಾಕ್ಯವನ್ನು ಓದುವುದರಿಂದ ಇದು ಹೇಗೆ ನನ್ನನ್ನು ನಿಜವಾಗಿಯೂ ಬದಲಾಯಿಸುತ್ತದೆ ಹಾಗೂ ನನ್ನೊಳಗೆ ದೇವರ ಜೀವವು ಚೇತನಗೊಳ್ಳುವಂತೆ ಮಾಡುತ್ತದೆ?" ಅದು ನನಗೆ ನಿಜವಾಗಿಯೂ ಅರ್ಥವಾಗುವುದಿಲ್ಲ, ಆದರೆ ಇದು ಕ್ರಿಯೆ ಮಾಡುತ್ತದೆ ಎಂಬುದನ್ನು ಬಲ್ಲೆನು. ನೀವು ಒಂದು ಚಿಕ್ಕ ಕಾಳಿನ ಬೀಜವನ್ನು ಭೂಮಿಯಲ್ಲಿ ಬಿತ್ತಿ, ಅದು ಬೆಳೆದು, ಕೊಂಬೆಗಳು ಬಂದು, ಅದು ನೂರರಷ್ಟು ಫಲವನ್ನು ಹೇಗೆ ನೀಡುವುದೋ ಅದು ನನಗೆ ಅರ್ಥವಾಗುವುದಿಲ್ಲ. ಯಾರೂ ಸಹ ಇದನ್ನು ಪೂರ್ಣವಾಗಿ ಗ್ರಹಿಸಲು ಸಾಧ್ಯವಿಲ್ಲ, ಆದರೆ ಇದು ಸಾಧ್ಯವಿದೆ, ಹೌದು ಇದು ಸಾಧ್ಯವಿದೆ ಎಂದು ನಾನು ನಿಮಗೆ ಹೇಳುತ್ತೇನೆ. ದೇವರ ವಾಕ್ಯವನ್ನು ಓದುವದರಿಂದ

ಇದು ನಿಮ್ಮಲ್ಲಿ ತುಂಬಿಕೊಳ್ಳಲಾರಂಭಿಸುತ್ತದೆ, ಅದು ನಿಮ್ಮ ಮನೋಭಾವನೆಯನ್ನು, ನಿಮ್ಮ ಅನುಭವವನ್ನು ಹಾಗೂ ನಿಮ್ಮ ಗ್ರಹಿಕೆಯನ್ನು ಮಾರ್ಪಡಿಸುತ್ತದೆ.

28ನೇ ವಚನವು ಹೇಳುತ್ತದೆ, *"ಭೂಮಿಯು... ತುಂಬಾ ಕಾಳನ್ನು ತನಷ್ಟಕ್ಕೆ ತಾನೇ ಹುಟ್ಟಿಸುತ್ತದೆ."* ಬೀಜವನ್ನು ಪೋಷಿಸುವಂತೆ, ಮತ್ತು ಅದು ಚಿಗುರೊಡೆಯುವಂತೆ ಹಾಗೂ ಆ ಜೀವವನ್ನು ಬಿಡುಗಡೆ ಮಾಡುವಂತೆ ಭೂಮಿಯನ್ನು ಉಂಟುಮಾಡಲಾಗಿದೆ. ಹೌದು ನಿಜವಾಗಿಯೂ ನಿಮ್ಮ ಹೃದಯವು ದೇವರ ವಾಕ್ಯಕ್ಕಾಗಿ ಉಂಟುಮಾಡಲ್ಪಟ್ಟಿತು ಮತ್ತು ದೇವರ ವಾಕ್ಯವು ನಿಮ್ಮ ಹೃದಯದಲ್ಲಿ ಇಡಲ್ಪಡುವುದಕ್ಕಾಗಿಯೇ ಅದೆ. ನಿಮ್ಮ ಸತ್ಯವೇದವನ್ನು ಕೇವಲ ಜೊತೆಯಲ್ಲಿಟ್ಟುಕೊಳ್ಳುವುದು, ಬಹಳ ಹತ್ತಿರವಾಗಿ ಅದನ್ನು ಹಿಡಿದುಕೊಳ್ಳುವುದು, ನಿಮ್ಮ ಮೇಜಿನ ಮೇಲೆ ಅದನ್ನು ಇಡುವುದು, ಅಥವಾ ಇದನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗುವುದು, ಇದರಲ್ಲಿ ಸದ್ಗುಣವಿಲ್ಲ. ಇದು ನಿಮ್ಮ ಜೀವನದಲ್ಲಿ ಶಕ್ತಿಯನ್ನು ಬಿಡುಗಡೆ ಮಾಡುವುದಿಲ್ಲ. ನೀವು ದೇವರ ವಾಕ್ಯವನ್ನು ತೆಗೆದುಕೊಂಡು, ಇದನ್ನು ಬೀಜವಾಗಿ ಮಾಡಿ, ನಿಮ್ಮ ಹೃದಯದಲ್ಲಿ ನೆಡಬೇಕಾಗಿದೆ. ಹೀಗೆ ಮಾಡಿದಾಗ, ಅದು ತನ್ನಷ್ಟಕ್ಕೆ ತಾನೇ ಫಲವನ್ನು ನೀಡುವಂತೆ ನಿಮ್ಮ ಹೃದಯವನ್ನು ರೂಪಿಸಲಾಗಿದೆ. ಇದು ನಿಮ್ಮ ಜೀವನದಲ್ಲಿ ನಡೆಯುವ ಕಾರ್ಯಗಳ ಮಾರ್ಗವನ್ನು ತನ್ನಂತಾನೇ ಮಾರ್ಪಡಿಸುತ್ತದೆ. ವಾಕ್ಯವು ಹೀಗೆ ಮುಂದುವರೆಯುತ್ತದೆ, *"ಮೊದಲು ಗರಿಯನ್ನೂ, ಆ ಮೇಲೆ ಹೊಡೆಯನ್ನೂ, ತರುವಾಯ ತೆನೆಯನ್ನೂ..."* ಇದು ಬೆಳವಣಿಗೆಗೆ ಹಾಗೂ ಪರಿಪಕ್ವತೆ/ಪ್ರೌಢಿಮೆಗೆ ಹಂತಗಳು ಅಥವಾ ಹೆಜ್ಜೆಗಳನ್ನು ಒಳಗೊಂಡಿದೆ ಎಂಬುದನ್ನು ತಿಳಿಸುತ್ತದೆ. ಅನೇಕಬಾರಿ ಜನರು ನನ್ನ ಬಳಿಗೆ ಬಂದು ತಾವು ದೇವರಿಂದ ಒಂದು ವಿಶೇಷವಾದ (ನನಗೂ ಸಮ್ಮತವಾಗುವಂತ) ಒಳ್ಳೆಯ ಸಂಗತಿಗಾಗಿ ನಂಬಿಕೆಯಿಂದ ಎದುರು ನೋಡುತ್ತಿರುವೆವು ಎಂದು ವ್ಯಕ್ತಪಡಿಸುತ್ತಾರೆ, ಆದರೆ ಅವರು ಎಂದೂ ಏನನ್ನೂ ಮಾಡದೆಯೇ, ಅವರು ಒಮ್ಮೆಯಾದರೂ ಒಬ್ಬ ವ್ಯಕ್ತಿಯನ್ನು ಕರ್ತನ ಕಡೆಗೆ ನಡೆಸದೆಯೇ, ಅವರು ಮುಂದಿನ ಕೆಲವು ವಾರಗಳಲ್ಲಿ ದೂರದರ್ಶನದ ಅಥವಾ ರೇಡಿಯೋ ಸೇವೆಯನ್ನು ಹೊಂದಿಕೊಳ್ಳಲಾರರು ಎಂದು ಖಚಿತವಾಗಿ ಹೇಳುತ್ತೇನೆ.

ಯಾವುದನ್ನೇ ಆದರೂ ನೀವು ಅನುಕ್ರಮವಾಗಿ ಮಾಡಬೇಕು. ದೇವರಿಂದ ಪಡೆಯುವಲ್ಲಿ ಹಲವು ಹಂತಗಳೂ ಇವೆ, ಮತ್ತು ಈ ಸಾಮ್ಯವು ಇದನ್ನೇ ಉದಾಹರಣೆಯಾಗಿ ಹೇಳುತ್ತಿದೆ. ಎಲ್ಲದಕ್ಕೂ ಮೊದಲು, ನೀವು ಪ್ರಾರಂಭ ಮಾಡಬೇಕು, ಅನಂತರ ನಿರೀಕ್ಷೆಯು ಬರುತ್ತದೆ, ಆಮೇಲೆ ನಂಬಿಕೆ, ಅದರ ನಂತರವೇ ಫಲಿತಾಂಶಗಳು ಕಾಣುತ್ತದೆ. ಜಯಕ್ಕೆ ಯಾವಾಗಲೂ ಹಂತಗಳಿರುತ್ತವೆ. ಯಾರೂ ಸಹ ಶೂನ್ಯದಿಂದ ಪ್ರಾರಂಭಿಸಿ ಒಂದೇ ಬಾರಿ ಒಂದು ಗಂಟೆಗೆ ಸಾವಿರ ಮೈಲುಗಳನ್ನು ಕ್ರಮಿಸಲು ಸಾಧ್ಯವಿಲ್ಲ. ಇದು ದೈವೀಕವಾದ ಒಂದು ಆಸೆಯಾಗಿದ್ದರೂ ಸಹ, ಇದು ಆ ರೀತಿಯಾಗಿ ನಡೆಯುವುದಿಲ್ಲ. ದೇವರ ರಾಜ್ಯವು ಒಂದು ಬೀಜವಿದ್ದಂತೆ ಎಂದು ಈ

ವಾಕ್ಯಭಾಗವು ತೋರಿಸುತ್ತಿದೆ. ದೇವರ ವಾಕ್ಯವನ್ನು ನಿಮ್ಮ ಹೃದಯಗಳಲ್ಲಿ ನೆಡಬೇಕು, ಮತ್ತು ಬೆಳವಣಿಗೆಯು ಹಂತಗಳಲ್ಲಿ ಬರುವಂತಹುದಾಗಿದೆ: ಮೊದಲು ಗರಿ, ಆ ಮೇಲೆ ಹೊಡೆ, ಅನಂತರ ಪೂರ್ಣ ತೆನೆ. ಮುಂದಿನ ವಚನವು ಹೀಗೆ ಹೇಳುತ್ತದೆ, "ಆದರೆ ಫಲ ಮಾಗಿದ ಕೂಡಲೆ ಅವನು ಸುಗ್ಗಿಕಾಲ ಬಂತೆಂದು ಕೊಯಿಸುತ್ತಾನೆ." ಹಲವು ಹಂತಗಳಿರುವುದು ನಿಜವೇ ಆದರೆ ಫಲವು ಮಾಗುತ್ತದೆ ಮತ್ತು ಕೊಯ್ಲಿನ ಕಾಲ ಬರುತ್ತದೆ.

ವಚನ 35 ಇದನ್ನು ಪ್ರಯೋಗಾತ್ಮಕವಾಗಿ ತೋರಿಸುತ್ತದೆ, *'ಆ ಹೊತ್ತು ಸಾಯಂಕಾಲವಾದಾಗ ಆತನು ಅವರಿಗೆ – ಆಚೇದಡಕ್ಕೆ ಹೋಗೋಣ ಎಂದು ಹೇಳಲು '.* ಯೇಸು ಅವರಿಗೆ ಆ ದಿನವಿಡೀ ದೇವರ ವಾಕ್ಯದ ಶಕ್ತಿಯ ಬಗ್ಗೆ, ದೇವರ ವಾಕ್ಯವು ಹೇಗೆ ಒಂದು ಬೀಜದಂತಿದೆ ಎಂಬುದರ ಬಗ್ಗೆ, ಹಾಗೂ ಇದು ಹೇಗೆ ನಿಮ್ಮ ಜೀವನದೊಳಗೆ ದೇವರ ಜೀವವನ್ನು ಬಿಡುಗಡೆ ಮಾಡುತ್ತದೆ ಎಂಬುದರ ಬಗ್ಗೆ ಬೋಧಿಸುತ್ತಿದ್ದನು. ಆತನು ಅವರಿಗೆ, "ಸರಿ, ಕರ್ತನಿಂದ ಬಂದ ಮಾತು ಇಲ್ಲಿದೆ – ನಾವು ಆಚೇದಡಕ್ಕೆ ಹೋಗೋಣ" ಎಂದು ಹೇಳಿದನು. ಆದರೆ ಆತನು "ನಾವು ದೋಣಿಯಲ್ಲಿ ಅರ್ಧ ಸಮುದ್ರದವರೆಗೆ ಹೋಗಿ, ಅಲ್ಲಿ ಮುಳುಗೋಣ" ಎಂದು ಹೇಳಲಿಲ್ಲ, ಆದರೆ "ನಾವು ಆಚೇದಡಕ್ಕೆ ಹೋಗೋಣ" ಎಂದು ಮಾತ್ರ ಹೇಳಿದನು. ಆಮೇಲೆ ಆತನು ದೋಣಿಯನ್ನು ಹತ್ತಿ, ನಿದ್ರಿಸಿದನು. ಅನಂತರ ಒಂದು ದೊಡ್ಡ ಬಿರುಗಾಳಿಯು ಬೀಸಿ, ದೋಣಿಯಲ್ಲಿ ನೀರು ತುಂಬಿಕೊಳ್ಳಲಾರಂಭಿಸಿತು ಎಂದು ಕಥೆಯು ಮುಂದುವರೆಯುತ್ತದೆ. ಇಲ್ಲಿ ನೀವು ತಿಳಿಯ ಬೇಕಾದದ್ದೆಂದರೆ – ಇನ್ನಿತರ ಬೇರೆ ದೊಡ್ಡ ದೋಣಿಗಳಲ್ಲಿ ಕ್ಯಾಬಿನ್‌ಗಳು ಮತ್ತು ಮಲಗಲು ಬೇರೆ ಬೇರೆ ಕೋಣೆಗಳಿದ್ದು, ಅಲ್ಲಿ ಯೇಸು ನೀರಿನಿಂದ ನೆನೆಯದೆ ಒಂದು ಸ್ಥಳದಲ್ಲಿ ನಿದ್ರಿಸುತ್ತಿದ್ದನು ಹಾಗೂ ಅಲ್ಲಿ ಏನು ಸಂಭವಿಸುತ್ತಿದೆ ಎಂಬುದನ್ನು ಆತನು ಅರಿಯದವನಾಗಿದ್ದನು – ಎಂಬಂತ ದೋಣಿಯು ಇದಾಗಿರಲಿಲ್ಲ. ಇದು ಒಂದು ತೆರೆದ ವಿಶಾಲವಾದ ದೋಣಿಯಾಗಿತ್ತು, ಇದರ ಸುತ್ತಮುತ್ತಲೂ ನೀರು ಚಿಮ್ಮುತ್ತಿತ್ತು. ಇದು ಬಹುಮುಖ್ಯವಾದುದು ಎಂಬುದಕ್ಕೆ ಕಾರಣವೇನೆಂದರೆ, ಏನು ಸಂಭವಿಸುತ್ತಿದೆ ಎಂಬುದು ಯೇಸುವಿಗೆ ತಿಳಿದಿತ್ತು, ಆದಾಗ್ಯೂ ಆತನು ನಿದ್ರಿಸಲು ಪ್ರಯತ್ನಿಸುತ್ತಿದ್ದನು. ಶಿಷ್ಯರು ಕೋಪಗೊಂಡರು, ಅವರು ಆತನ ಬಳಿಗೆ ಬಂದು, "ಗುರುವೇ, ನಾವು ಮುಳುಗಿಹೋಗುವುದರಲ್ಲಿ ನಿನಗೆ ಚಿಂತೆಯಿಲ್ಲವೇ?" ಎಂದು ಕೇಳಿದರು. ಮತ್ತೊಂದು ವಿಧದಲ್ಲಿ ಹೇಳುವುದಾದರೆ, ಅವರು "ಏನಾದರೂ ಮಾಡು! ಈ ನೀರನ್ನು ಮೊಗೆದು ಹೊರಗೆ ಹಾಕು! ಹುಟ್ಟು ಹಾಕು, ಏನಾದರೂ ಮಾಡು! ನಿನ್ನ ಭಾರವನ್ನು ನೀನು ಎಳೆಯುತ್ತಿಲ್ಲ!" ಎಂದು ಹೇಳುತ್ತಿರುವರು.

ಇಂದು ಅನೇಕ ಜನರು ದೇವರೊಂದಿಗೆ ಇದೇ ರೀತಿಯಾಗಿ ವರ್ತಿಸುತ್ತಾರೆ ಮತ್ತು ಹೀಗನ್ನುತ್ತಾರೆ, "ದೇವರೇ, ನೀನು ಏಕೆ ಏನನ್ನಾದರೂ ಮಾಡುತ್ತಿಲ್ಲ?" ದೇವರು ಏನೋ ಕಾರ್ಯವನ್ನು ಮಾಡಿರುವನು. ಕರ್ತನಾದ ಯೇಸುವಿನ ಪ್ರಾಯಶ್ಚಿತ್ತದ ಮೂಲಕ ಆತನು ನಮಗೆ ಅಗತ್ಯವಾಗಿರುವುದೆಲ್ಲವನ್ನೂ ಪೂರೈಸಿರುವನು. ಆತನು

ತನ್ನ ವಾಕ್ಯವನ್ನು ಉತ್ಪತ್ತಿ ಮಾಡಿ, ನಮಗೆ ಈ ಎಲ್ಲಾ ಬೀಜಗಳನ್ನು ನೀಡಿರುವನು. ಇವುಗಳನ್ನು ನಮ್ಮ ಹೃದಯಗಳಲ್ಲಿ ಬಿತ್ತುವುದೇ ನಮ್ಮ ಕೆಲಸವಾಗಿದೆ. ಆತನು ದೇವರ ವಾಕ್ಯಗಳನ್ನು ನಮಗೆ ನೀಡಿರುವನು ಮತ್ತು ಆ ಬೀಜವನ್ನು ತೆಗೆದುಕೊಂಡು, ಅದನ್ನು ನಮ್ಮ ಹೃದಯದೊಳಗೆ ಹಾಕಿ, ಇದು ಜೀವವನ್ನು ಬಿಡುಗಡೆ ಮಾಡುವ ತನಕ ಅದನ್ನು ಧ್ಯಾನಿಸುತ್ತಲೇ ಇರುವುದು ನಮ್ಮ ಕೆಲಸವಾಗಿದೆ. ಆದರೆ ಶಿಷ್ಯರು ಯೇಸುವನ್ನು ಎಬ್ಬಿಸಿ, "ನೀನು ಏನಾದರೂ ಕಾರ್ಯವನ್ನು ಯಾಕೆ ಮಾಡಬಾರದು?" ಎಂದು ಹೇಳಿದರು. ಆತನು ಎದ್ದು, ಬಿರುಗಾಳಿಯನ್ನು ಹಾಗೂ ಸಮುದ್ರವನ್ನು ಗದರಿಸಿದನು, ಅವು ಶಾಂತವಾದವು. ನಂತರ ಸುತ್ತಲೂ ನೋಡಿ, ತನ್ನ ಶಿಷ್ಯರಿಗೆ "ಯಾಕೆ ಧೈರ್ಯಗೆಡುತ್ತೀರಿ? ಇನ್ನೂ ನಿಮಗೆ ನಂಬಿಕೆ ಇಲ್ಲವೆ?" ಅಂದನು. ಆದರೆ ಆತನು, "ಓ, ನನ್ನನ್ನು ಕ್ಷಮಿಸಿ, ನಾನು ಏನಾದರೂ ಮಾಡಬೇಕಾಗಿತ್ತು" ಎಂದು ಹೇಳಲಿಲ್ಲ. ಇಲ್ಲ, ಅವರಿಗೆ ದೇವರ ವಾಕ್ಯವನ್ನು ಬೋಧಿಸಿ, ಅವರಿಗೆ ವಾಗ್ದಾನಗಳನ್ನು ನೀಡುವುದು ಆತನ ಭಾಗವಾಗಿತ್ತು, ಹಾಗೂ ದೇವರ ವಾಕ್ಯವನ್ನು ತೆಗೆದುಕೊಂಡು, ವಾಗ್ದಾನಗಳನ್ನು ನಂಬುವುದು ಶಿಷ್ಯರ ಭಾಗವಾಗಿತ್ತು. ಯೇಸು ಈ ಭೂಮಿಗೆ ಬರುವುದರಲ್ಲಿಯೇ ದೇವರು ಎಲ್ಲಾ ಸಂಗತಿಗಳನ್ನು ಒದಗಿಸಿರುವನು. ನಿಮ್ಮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಯಶಸ್ಸಿಗೆ ಬೇಕಾದ ಎಲ್ಲ ಸಂಗತಿಗಳಿಗೆ ದೇವರ ವಾಕ್ಯವನ್ನು ಬೀಜದ ರೂಪದಲ್ಲಿ ನಿಮಗೆ ನೀಡಿರುವನು. ನೀವು ಮಾಡಬೇಕಾಗಿರುವುದೇನೆಂದರೆ, ದೇವರ ವಾಕ್ಯದ ಬೀಜಗಳನ್ನು ತೆಗೆದುಕೊಂಡು, ಅದನ್ನು ಓದುವುದರ ಮೂಲಕ ಅವುಗಳನ್ನು ನಿಮ್ಮ ಹೃದಯದಲ್ಲಿ ನೆಟ್ಟು, ಅವುಗಳನ್ನು ಧ್ಯಾನಿಸುತ್ತಾ, ಅವುಗಳ ಕುರಿತಾಗಿ ಆಲೋಚಿಸುತ್ತಾ, ನಿಮ್ಮೊಳಗೆ ಇದು ಬೇರೂರುವಂತೆ ಮಾಡಬೇಕಾಗಿದೆ. ಇದನ್ನು ನೀವು ಮಾಡುವಾಗ, ನೀವು ಎದ್ದುನಿಂತು, ನಿಮ್ಮ ಜೀವನದಲ್ಲಿರುವ ಬಿರುಗಾಳಿಗಳನ್ನು ನಿಲ್ಲಿಸಬಹುದು.

ಅಂದು ಶಿಷ್ಯರಿಗೆ ಯೇಸು ನೀಡಿದ ಸಂದೇಶವನ್ನು ಅವರು ಸ್ವೀಕರಿಸಿ, "ನಾವು ಆಚೇದಡಕ್ಕೆ ಹೋಗೋಣ" ಎಂದು ಹೇಳಬೇಕಾದುದೇ ಅವರಿಗಿದ್ದ ದೇವರ ಅತ್ಯುತ್ತಮ ಕಾರ್ಯವಾಗಿತ್ತು. ಅವರು "ಇಂದು ಆತನು ನಮಗೆ ಬೋಧಿಸಿದ ಎಲ್ಲಾ ಸಂಗತಿಗಳ ಪ್ರಕಾರ, ಇದು ಒಂದು ವಾಗ್ದಾನವಾಗಿದೆ. ನಾವು ಅರ್ಧ ದಾರಿಗೆ ಮುಳುಗೋಣ ಎಂದು ಹೇಳದೆ, ನಾವು ಆಚೇದಡಕ್ಕೆ ಹೋಗೋಣ ಎಂದು ಹೇಳಿದಾತನು ಲೋಕವನ್ನು ಉಂಟು ಮಾಡಿದ ಸೃಷ್ಟಿಕರ್ತನಾಗಿದ್ದಾನೆ" ಎಂದು ಹೇಳಬಹುದಾಗಿತ್ತು. ಅವರು ಆ ಮಾತನ್ನು ಹೊಂದಿಕೊಂಡು, ಅದನ್ನು ನಂಬಿಕೆಯೊಂದಿಗೆ ಮಿಶ್ರಣ ಮಾಡಿ, ಅವರೇ ಸಮುದ್ರವನ್ನು ಹಾಗೂ ಅಲೆಗಳನ್ನು ಗದರಿಸಬಹುದಾಗಿತ್ತು. ಅದನ್ನೆ ಯೇಸು ಹೇಳಿದ್ದು, "ಓ ಅಲ್ಪವಿಶ್ವಾಸಿಗಳೇ, ನೀವು ಏಕೆ ಸಂದೇಹಪಟ್ಟಿರಿ?" ನಿಮಗಿದು ಗೊತ್ತೇ? – ನಾವು ದೇವರ ವಾಕ್ಯವನ್ನು ನಂಬಬೇಕು ಹಾಗೂ ಅದರ ಆಧಾರದ ಮೇಲೆ ಕೆಲಸ ಮಾಡಬೇಕು.

# ಶಿಷ್ಯತ್ವದ ಪ್ರಶ್ನೆಗಳು
# ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಮತ್ತಾಯ 13:19 ನ್ನು ಓದಿರಿ. ನಾವು ದೇವರ ವಾಕ್ಯವನ್ನು ನಮ್ಮ ಹೃದಯದೊಳಗೆ ಇಟ್ಟುಕೊಳ್ಳದಿದ್ದರೆ ಅಥವಾ ನೆಡದಿದ್ದರೆ, ಇದಕ್ಕೆ ಏನಾಗುತ್ತದೆ?

**ಮತ್ತಾಯ 13:19** – *ಯಾವನಾದರೂ ಪರಲೋಕ ರಾಜ್ಯದ ವಾಕ್ಯವನ್ನು ಕೇಳಿ ತಿಳುಕೊಳ್ಳದೆ ಇರುವಲ್ಲಿ ಸೈತಾನನು ಬಂದು ಆ ಮನುಷ್ಯನ ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದುಹಾಕುತ್ತಾನೆ; ಈ ಮನುಷ್ಯನೇ ಬೀಜಬಿದ್ದ ದಾರೀ ಮಗ್ಗುಲಾಗಿರುವನು.*

2. ಯೆಹೋಶುವ 1:8 ನ್ನು ಓದಿರಿ. ನಾವು ದೇವರ ವಾಕ್ಯವನ್ನು ಯಾವಾಗ ಧ್ಯಾನಿಸಬೇಕು?

**ಯೆಹೋಶುವ 1:8** – *ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ, ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ, ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ.*

3. ಯೋಹಾನ 6:63 ನ್ನು ಓದಿರಿ. ಈ ವಚನದ ಪ್ರಕಾರ, ದೇವರ ವಾಕ್ಯವು ________________

**ಯೋಹಾನ 6:63** – *ಬದುಕಿಸುವಂಥದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ.*

4. ಮತ್ತಾಯ 4:4 ನ್ನು ಓದಿರಿ. ಮನುಷ್ಯನು ಶಾರೀರಿಕವಾದ ಆಹಾರದಿಂದ ಮಾತ್ರ ಬದುಕುವುದಿಲ್ಲ, ಆದರೆ___________

**ಮತ್ತಾಯ 4:4** – *ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು ಎಂದು ಬರೆದದೆ ಅಂದನು.*

5. ಎಫೆಸ 6:17 ನ್ನು ಓದಿರಿ. ದೇವರ ವಾಕ್ಯವು ಎಂಥಹ ಆಯುಧವಾಗಿದೆ?

**ಎಫೆಸ 6:17** – *ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ.*

6. ಒಂದು ಕತ್ತಿ ತನ್ನ ವೈರಿಗೆ ಹಾನಿಮಾಡಬಲ್ಲದೆ?

7. ರೋಮ 8:6 ನ್ನು ಓದಿರಿ. ನಮ್ಮ ಜೀವಿತಗಳಲಿ ನಾವು ದೇವರ ವಾಕ್ಯಕ್ಕೆ ಸೂಕ್ತವಾದ ಸ್ಥಾನವನ್ನು ನೀಡಿದಾಗ, ನಮಗೆ ____________________

**ರೋಮ 8:6** – *ಶರೀರಭಾವದವುಗಳ ಮೇಲೆ ಮನಸ್ಸಿಡುವದು ಮರಣ; ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು ಜೀವವೂ ಮನಶ್ಶಾಂತಿಯೂ ಆಗಿದೆ.*

8. 2 ಕೊರಿಂಥ 3:18 ನ್ನು ಓದಿರಿ. ನಾವು ಯಾವುದರ ಮೇಲೆ ಗಮನಹರಿಸುತ್ತೇವೆಯೋ ಅವುಗಳಿಂದಲೇ ನಾವು ತುಂಬಲ್ಪಡುವೆವು. ಹಾಗಾದಲ್ಲಿ ನಮ್ಮ ದೃಷ್ಟಿಯು ಯಾವುದರ ಮೇಲೆ ಇರಬೇಕು?

**2 ಕೊರಿಂಥ 3:18** – *ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಹರಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ.*

## ಉತ್ತರಗಳು

1. ಮತ್ತಾಯ 13:19 ನ್ನು ಓದಿರಿ. ನಾವು ದೇವರ ವಾಕ್ಯವನ್ನು ನಮ್ಮ ಹೃದಯದೊಳಗೆ ಇಟ್ಟುಕೊಳ್ಳದಿದ್ದರೆ ಅಥವಾ ನೆಡದಿದ್ದರೆ, ಇದಕ್ಕೆ ಏನಾಗುತ್ತದೆ?

**ವೈರಿಯು ಅದನ್ನು ತೆಗೆದುಹಾಕುತ್ತಾನೆ, ಹೀಗಾಗಿ ಅದು ನಮ್ಮ ಜೀವನಲ್ಲಿ ಫಲವನ್ನು ಉಂಟುಮಾಡುವುದಿಲ್ಲ**

2. ಯೆಹೋಶುವ 1:8ನ್ನು ಓದಿರಿ. ನಾವು ದೇವರ ವಾಕ್ಯವನ್ನು ಯಾವಾಗ ಧ್ಯಾನಿಸಬೇಕು?

**ಹಗಲಿರುಳು**

3. ಯೋಹಾನ 6:63ನ್ನು ಓದಿರಿ. ಈ ವಚನದ ಪ್ರಕಾರ, ದೇವರ ವಾಕ್ಯವು __________________

**ಆತ್ಮವೂ, ಜೀವವೂ ಆಗಿದೆ**

4. ಮತ್ತಾಯ 4:4ನ್ನು ಓದಿರಿ. ಮನುಷ್ಯನು ಶಾರೀರಿಕವಾದ ಆಹಾರದಿಂದ ಮಾತ್ರ ಬದುಕುವುದಿಲ್ಲ, ಆದರೆ________

**ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದ ಬದುಕುವನು**

5. ಎಫೆಸ 6:17ನ್ನು ಓದಿರಿ. ದೇವರ ವಾಕ್ಯವು ಎಂತಹ ಆಯುಧವಾಗಿದೆ?

**ಕತ್ತಿ**

6. ಒಂದು ಕತ್ತಿ ತನ್ನ ವೈರಿಗೆ ಹಾನಿಮಾಡಬಲ್ಲದೆ?

**ಹೌದು**

7. ರೋಮ 8:6ನ್ನು ಓದಿರಿ. ನಮ್ಮ ಜೀವಿತಗಳಲ್ಲಿ ನಾವು ದೇವರ ವಾಕ್ಯಕ್ಕೆ ಸೂಕ್ತವಾದ ಸ್ಥಾನವನ್ನು ನೀಡಿದಾಗ, ನಮಗೆ ____________________

**ಜೀವವೂ, ಮನಶ್ಶಾಂತಿಯು ಸಿಗುತ್ತದೆ**

8. 2 ಕೊರಿಂಥ 3:18ನ್ನು ಓದಿರಿ. ನಾವು ಯಾವುದರ ಮೇಲೆ ಗಮನಹರಿಸುತ್ತೇವೋ ಅವುಗಳಿಂದಲೇ ನಾವು ತುಂಬಲ್ಪಡುವೆವು. ನಮ್ಮ ದೃಷ್ಟಿಯು ಯಾವುದರ ಮೇಲೆ ಇಡಬೇಕು?

**ಕರ್ತನ ಮೇಲೆ ಹಾಗೂ ಆತನ ಪ್ರಭಾವದ ಮೇಲೆ ದೃಷ್ಟಿಹರಿಸಬೇಕು**

ಪಾಠ 13

# ದೇವರು ಅಪರಾಧಿಯಲ್ಲ

*ಆಂಡ್ರೂ ವ಼ಾಮಕ್*

ದೇವರು ನನ್ನ ಜೀವನದಲ್ಲಿ ಹಿಂದೆಂದಿಗಿಂತಲೂ ಮಾಡಿರುವ ಬಹು ಮುಖ್ಯವಾದ ಸಂಗತಿಗಳನ್ನು ಇಂದು ನಾನು ಹಂಚಿಕೊಳ್ಳಲು ಬಯಸುತ್ತೇನೆ. ಜನರು ತಮಗೆ ಸಂಭವಿಸುವ ಪ್ರತಿಯೊಂದು ಸಂಗತಿಗಳು ದೇವರಿಂದ ಆಗುತ್ತವೆ, ಏಕೆಂದರೆ ಆತನು ಪ್ರತಿಯೊಂದನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿರುವನು ಎಂದು ಅವರು ತಾವಾಗಿ ನಂಬುವಂತೆ ತೋರಿಬರುತ್ತದೆ. ಇದಕ್ಕೆ ಕಾರಣವೇನೆಂದರೆ, ದೇವರು ಸಾರ್ವಭೌಮನು, ಪರಾಕ್ರಮಿಯು ಆಗಿರುವನು ಎಂಬುದು ಸ್ಪಷ್ಟವಾಗಿದೆ, – ಹಾಗಾಗಿ ಜನರು ತಮ್ಮ ಜೀವಿತಗಳಲ್ಲಿ ಸಂಭವಿಸುವ ಪ್ರತಿಯೊಂದನ್ನು ಆತನು ನಿಯಂತ್ರಿಸುತ್ತಾನೆ ಎಂದು ಊಹಿಸುತ್ತಾರೆ. ಅವಿಶ್ವಾಸಿಗಳು ಸಹ ಹೀಗೆ ನಂಬುತ್ತಾರೆ. ಈ ಸಿದ್ಧಾಂತವನ್ನು ಬೆಂಬಲಿಸುವ ಅನೇಕ ಕ್ರೈಸ್ತರು ಇದ್ದಾರೆ ಮತ್ತು ಇವು ಅವರ ಜೀವಿತಗಳಲ್ಲಿ ಬೇರೂರಿಬಿಟ್ಟಿದೆ. ಇದಕ್ಕೆ ವಿರುದ್ಧವಾಗಿ ವಾಕ್ಯವು ಏನನ್ನು ಬೋಧಿಸುತ್ತದೋ ಅದನ್ನು ನಾನು ನಂಬುತ್ತೇನೆ, ಹಾಗೂ ಈ ಪಾಠವನ್ನು ಕಲಿಯುವುದು ನಿಮಗೆ ಬಹಳ ಪ್ರಾಮುಖ್ಯವಾಗಿದೆ. ಯಾಕೋಬ 1:13–17 ಹೇಳುತ್ತದೆ, *"ಯಾವನಾದರೂ ಪಾಪ ಮಾಡುವದಕ್ಕೆ ಪ್ರೇರೇಪಿಸಲ್ಪಡುವಾಗ–ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ; ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದಿಲ್ಲ. ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆ ಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ; ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ."*

ಈ ವಚನಗಳು ದೇವರು ಒಳ್ಳೆಯ ಸಂಗತಿಗಳ ಕರ್ತೃವಾಗಿದ್ದಾನೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಯೋಹಾನ 10:10 ರಲ್ಲಿ ಯೇಸು ಹೀಗೆ ಹೇಳಿರುವನು, *"ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು."* ಇದು ಒಳ್ಳೆಯದಾಗಿದ್ದರೆ, ಇದು ದೇವರಿಂದ; ಇದು ಕೆಟ್ಟದಾಗಿದ್ದರೆ, ಅದು ಸೈತಾನನಿಂದ. ಇದು ಬಹಳ ಸರಳವಾದ ದೈವಶಾಸ್ತ್ರವಾಗಿದೆ. ಇದು ಬಹಳ ಕ್ಲಿಷ್ಟವಾಗಿರುವುದರ ಕಾರಣವೇನೆಂದರೆ,

ಯಾಕೋಬ 4:7 ಹೇಳುತ್ತದೆ, *“ಹೀಗಿರಲಾಗಿ ದೇವರಿಗೆ ಒಳಗಾಗಿರಿ, ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು.”* ಇಲ್ಲಿ ಹೇಳಿರುವುದೇನೆಂದರೆ, ನಾವು ಒಳಗಾಗಿ ಅಥವಾ ದೇವರ ನಿಯಂತ್ರಣಕ್ಕೆ ಅಧೀನರಾಗಿ, ಸೈತಾನನ್ನು ಎದುರಿಸಬೇಕು. “ಎದುರಿಸು” ಎಂಬ ಪದದ ಅರ್ಥವೇನೆಂದರೆ, ಅವನ ವಿರುದ್ಧವಾಗಿ ಬಲವಾಗಿ ಹೋರಾಡು ಎಂಬುದಾಗಿದೆ.

ಜೀವನದಲ್ಲಿ ನಡೆಯುವ ಎಲ್ಲಾ ಸಂಗತಿಗಳು ಸಂಪೂರ್ಣವಾಗಿ ದೇವರಿಂದಲೇ ಸಂಭವಿಸಿವೆ ಎಂದು ಜನರು ನಂಬುವಾಗ – ಉದಾಹರಣೆಗೆ ರೋಗ, ವ್ಯಾಪಾರದಲ್ಲಿ ನಷ್ಟ, ಉದ್ಯೋಗವನ್ನು ಕಳೆದುಕೊಳ್ಳುವುದು, ತಿರುಗಿ ಬೀಳುವ ಮಕ್ಕಳು, ಅಥವಾ ವಿವಾಹ ವಿಚ್ಛೇದನ – ಇವು ಜನರನ್ನು ಒಂದು ತಟಸ್ಥವಾದ ಸ್ಥಾನದಲ್ಲಿರುವಂತೆ ಮಾಡುತ್ತವೆ. ತಮ್ಮ ಈ ಪರಿಸ್ಥಿತಿಗೆ ದೇವರೇ ಕಾರಣನಾಗಿದ್ದಾನೆ ಹಾಗೂ ಇದರಿಂದ ತಮ್ಮನ್ನು ಶಿಕ್ಷಿಸಲು ಅಥವಾ ಮಾರ್ಪಡಿಸಲು ಆತನು ಇದನ್ನು ಉಪಯೋಗಿಸುತ್ತಿರುವನು ಎನ್ನುವುದು ಅವರ ನಿಜ ನಂಬಿಕೆಯಾಗಿದ್ದರೆ, ಇದನ್ನು ಅವರು ಎದುರಿಸಿದಾಗ ಅವರು ದೇವರ ವಿರುದ್ಧವಾಗಿ ಹೋರಾಡುವವರಾಗಿರುವರು. ಆದಾಗ್ಯೂ, ಯಾಕೋಬ 4:7ರಲ್ಲಿ, ಸೈತಾನನನ್ನು ಎದುರಿಸಿರಿ, ಆಗ ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು ಎಂದು ಹೇಳುತ್ತಿರುವನು. ನಿಮ್ಮನ್ನು ನೀವು ದೇವರಿಗೆ ಅಧೀನಪಡಿಸಬೇಕು. ಇದು ಕೆಲವು ಸಂಗತಿಗಳು ದೇವರಿಗೆ ಸಂಬಂಧಪಟ್ಟವುಗಳು ಹಾಗೂ ಇನ್ನಿತರ ಸಂಗತಿಗಳು ಸೈತಾನನಿಗೆ ಸಂಬಂಧಪಟ್ಟವುಗಳು ಎಂಬುದನ್ನು ತೋರಿಸುತ್ತದೆ. ಈ ಲೋಕದಲ್ಲಿ ದುಷ್ಟನ ಬಲವಿದೆ ಮತ್ತು ನಿಮ್ಮ ಜೀವನದಲ್ಲಿ ಸಂಭವಿಸುವ ಎಲ್ಲಾ ಸಂಗತಿಗಳು ದೇವರಿಂದ ನಡೆಯುತ್ತವೆ ಎಂಬುದಾಗಿ ಅಲ್ಲ. ಇದನ್ನುನೀವು ಗ್ರಹಿಸದಿದ್ದರೆ, ನೀವು ಕಡೆಯಲ್ಲಿ ಸೈತಾನನ ಅಧೀನತೆಗೆ ಒಳಗಾಗುವಿರಿ, ಮತ್ತು ಸೈತಾನನಿಗೆ ಅಧಿಕಾರವನ್ನು ನೀಡುವಿರಿ.

ನಾನು ರೋಮಾಪುರದ ಪತ್ರಿಕೆಯಿಂದ ಒಂದು ವಾಕ್ಯಭಾಗವನ್ನು ನೀಡಲು ಬಯಸುತ್ತೇನೆ ಏಕೆಂದರೆ ಅನೇಕ ಬಾರಿ ಇದನ್ನು ತಪ್ಪಾಗಿ ಅರ್ಥೈಸಲಾಗಿದೆ. ನಾನು ಶವಸಂಸ್ಕಾರಗಳಿಗೆ ಹೋಗಿದ್ದೇನೆ, ಅಲ್ಲಿ ಜನರಿಗೆ ದೇವರ ಬಗ್ಗೆ ತಿಳಿದಿರುವುದಿಲ್ಲ, ಅವರು ಸಭೆಗೆ ಹೋಗುವುದಿಲ್ಲ, ಅವರಿಗೆ ದೇವರ ವಾಕ್ಯದ ಬಗ್ಗೆ ತಿಳಿದಿರುವುದೇ ಇಲ್ಲ, ಆದರೆ ಈ ವಾಕ್ಯ ಮಾತ್ರ ಅವರಿಗೆ ತಿಳಿದಿರುತ್ತದೆ. ರೋಮ 8:28ಹೇಳುತ್ತದೆ, *“ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ.”* ನಮ್ಮ ಜೀವನದಲ್ಲಿ ಏನೇ ಸಂಭವಿಸಿದರೂ ಸಹ, ಇದನ್ನು ದೇವರೇ ಮಾಡುತ್ತಾನೆ ಹಾಗೂ ಇದನ್ನು ಒಂದಲ್ಲ ಒಂದು ವಿಧದಲ್ಲಿ ನಮ್ಮ ಒಳ್ಳೆಯದಕ್ಕಾಗಿ ಮಾಡುತ್ತಾನೆ ಎಂದು ಅರ್ಥ ನೀಡುತ್ತಾರೆ. ಒಮ್ಮೆ ಪ್ರಾಯದ ಹುಡುಗ ಮತ್ತು ಹುಡುಗಿಯರಿಬ್ಬರು, ಮದ್ಯಪಾನದೊಂದಿಗೆ ಮಾದಕದ್ರವ್ಯಗಳನ್ನು ಮಿಶ್ರಣಮಾಡಿ ಸೇವಿಸಿಕೊಂಡು, ಕಾರಿನಲ್ಲಿ ಕುಳಿತು, ಇಳಿಜಾರಿನ ಒಂದು ರಸ್ತೆಯಲ್ಲಿ ಬಹು ವೇಗವಾಗಿ ಚಲಿಸುತ್ತಾ ಹಿಡಿತ ತಪ್ಪಿ ರಸ್ತೆಯಿಂದ ಸರಿದು

ಒಂದು ದೂರವಾಣಿ ಕಂಬಕ್ಕೆ ಡಿಕ್ಕಿ ಹೊಡೆದು, ಇಬ್ಬರೂ ಮೃತಪಟ್ಟಿದ್ದರಿಂದ, ಅವರ ಶವಸಂಸ್ಕಾರಕ್ಕೆಂದು ಹೋಗಿದ್ದೆನು. ಅಲ್ಲಿದ್ದ ಪ್ರಸಂಗಿಯು ಈ ವಾಕ್ಯವನ್ನು "ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ" ಎಂದು ಹೇಳುತ್ತಾ, ಈ ರೀತಿ ಮಾಡಿರುವುದರಿಂದ ದೇವರಿಗೆ ಒಂದು ಉದ್ದೇಶವಿರಲೇಬೇಕು ಎಂದು ಹೇಳಿದರು. ಈ ಪ್ರಾಯಸ್ಥರನ್ನು ದೇವರು ಕೊಲ್ಲಲಿಲ್ಲ, ಹಾಗೂ ಮತ್ತೊಂದು ಅರ್ಥದಲ್ಲಿ ಹೇಳುವಾಗ ಸೈತಾನನು ಇದನ್ನು ಮಾಡಿದನು ಎಂಬುದಾಗಿಯೂ ಸಹ ಹೇಳಲಾಗುವುದಿಲ್ಲ. ಇದು ಸಂಭವಿಸಿದ್ದು ಆ ಪ್ರಾಯದ ಹುಡುಗ ಮತ್ತು ಹುಡುಗಿಯಿಂದಲೇ ಆಗಿದೆ. ಆದರೆ ಸೈತಾನನು ಈ ಪ್ರಾಯಸ್ಥರು ತಮ್ಮ ತಂದೆತಾಯಿಗಳು ಮತ್ತು ಇನ್ನಿತರರು ತಮಗೆ ಬೋಧಿಸಿರುವ ಮಟ್ಟದ ವಿರುದ್ಧವಾಗಿ ತಿರುಗಿಬೀಳುವಂತೆ ಅವರನ್ನು ಮರಳುಮಾಡಿದ್ದನು ಎಂಬುದು ನನಗೆ ಖಚಿತವಾಗಿ ತಿಳಿದಿತ್ತು, ಆದರೆ ಅಂತ್ಯದಲ್ಲಿ ಇದರ ಆಯ್ಕೆಯು ಅವರ ಕೈಯಲ್ಲಿತ್ತು. ಮಾದಕ ದ್ರವ್ಯವನ್ನು ಮತ್ತು ಮದ್ಯಪಾನವನ್ನು ಅವರೇ ತೆಗೆದುಕೊಂಡಿದ್ದರು; ದೂರವಾಣಿಯ ಕಂಬಕ್ಕೆ ಡಿಕ್ಕಿ ಹೊಡೆದದ್ದು ಅವರೇ ಆಗಿದ್ದರು. ಅದೊಂದು ಸ್ವಾಭಾವಿಕವಾಗಿ ನಡೆದಂತಹುದಾಗಿತ್ತು ಮತ್ತು ಇದರ ಮೂಲಕಾರಣ ದೇವರಾಗಿರಲಿಲ್ಲ.

*"ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ"* ಎಂದು ಹೇಳುವಾಗ ಇದರ ಅರ್ಥವೇನಾಗಿದೆ? ಮೊಟ್ಟಮೊದಲನೆಯದಾಗಿ, ಇದು ಎಲ್ಲಾ ಸಂಗತಿಗಳು ದೇವರಿಂದ ಬರುತ್ತವೆ ಮತ್ತು ಅನುಕೂಲವಾಗುತ್ತವೆ ಎಂದು ಹೇಳಿರುವುದಿಲ್ಲ. ಈ ವಾಕ್ಯವು ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ಹೇಳಿ, ಇದಕ್ಕಾಗಿ ಇರಬೇಕಾದ ಅರ್ಹತೆಯನ್ನು ಹೇಳುತ್ತದೆ: *"ದೇವರನ್ನು ಪ್ರೀತಿಸುವವರಿಗಾಗಿ."* ಯಾವ ವ್ಯಕ್ತಿಯು ದೇವರನ್ನು ಪ್ರೀತಿಸುವುದಿಲ್ಲವೋ ಅಂಥವರಿಗಾಗಿ ಈ ವಾಕ್ಯವು ಕೆಲಸ ಮಾಡುವುದಿಲ್ಲ. ಇದು ಎಷ್ಟು ಸ್ಪಷ್ಟವಾಗಿದೆಯೆಂದರೆ ಈ ಸಂಗತಿಯನ್ನು ಹೇಳದಿರುವುದಕ್ಕೆ ಸಾಧ್ಯವೇ ಇಲ್ಲ, ಆದರೆ ಜನರು ಈ ವಾಕ್ಯವನ್ನು ಸಂದರ್ಭಗಳಿಗನುಸಾರವಾಗಿ ಅಂದರೆ, ಮಾದಕವಸ್ತುಗಳನ್ನು ಸೇವಿಸಿ ಮತ್ತು ಮದ್ಯಪಾನಿಗಳಾಗಿ, ದೇವರ ವಿರುದ್ಧವಾಗಿ ಹಾಗೂ ಆತನ ತತ್ವಗಳಿಗೆ ತಿರುಗಿಬಿದ್ದ ಈ ಪ್ರಾಯಸ್ಥರ ಕುರಿತಾಗಿ ಜನರು ಈ ವಾಕ್ಯವನ್ನು ಅಳವಡಿಸಿಕೊಳ್ಳುತ್ತಿರುವುದು ಬಹಳ ವಿಸ್ಮಯಕಾರಿಯಾಗಿದೆ. ದೇವರನ್ನು ಪ್ರೀತಿಸುವವರ ಹಾಗೂ ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟವರ ಹಿತಕ್ಕಾಗಿ ಮಾತ್ರ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ಮಾತ್ರ ಈ ವಚನವು ತಿಳಿಸುತ್ತದೆ.

1 ಯೋಹಾನ 3:8 ಹೀಗೆ ಹೇಳುತ್ತದೆ, *"ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು."* ಸೈತಾನನ ಕ್ರಿಯೆಯನ್ನು ನಾಶಮಾಡುವುದಕ್ಕಾಗಿ ದೇವರೇ ತನ್ನನ್ನು ಪ್ರತ್ಯಕ್ಷಪಡಿಸಿಕೊಂಡನು. ಇದು ಆತನ ಉದ್ದೇಶವಾಗಿದೆ ಮತ್ತು ಇದು ಆತನನ್ನು ಪ್ರೀತಿಸುವವರು ಹಾಗೂ ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟವರ ಹಿತಕ್ಕಾಗಿ ಮಾತ್ರ ಎಲ್ಲಾ ಕಾರ್ಯಗಳು ಅನುಕೂಲವಾಗುವಂತೆ ಕೆಲಸ ಮಾಡುತ್ತದೆ – ಅಂದರೆ ಆತನ ಕರೆಯುವಿಕೆಯಲ್ಲಿ ನಡೆಯುತ್ತಿರುವವರು, ಸೈತಾನನನ್ನು

ಎದುರಿಸುತ್ತಿರುವವರು ಮತ್ತು ಅವನ ಕ್ರಿಯೆಗಳನ್ನು ನಾಶಮಾಡಲು ಮುಂದಾಗುವವರು. ಸೈತಾನನನ್ನು ಎದುರಿಸುತ್ತಾ, ದೇವರಿಗಾಗಿ ಜೀವಿಸುತ್ತಿರುವಂಥವರಾದರೋ ಸೈತಾನನು ತಮ್ಮ ಜೀವಿತದಲ್ಲಿ ಏನೇ ಮಾಡುತ್ತಿದ್ದರೂ ಸಹ ಲೆಕ್ಕಿಸದೆ, ದೇವರು ಇದನ್ನು ಬೇರೆ ರೀತಿಯಾಗಿ ತಿರುಗಿಸಿ, ತಮ್ಮ ಹಿತಕ್ಕಾಗಿ ಅನುಕೂಲಕರವಾಗಿ ಮಾಡುವನು ಎಂದು ಅವರು ಹೇಳಬಹುದು.

ನಮ್ಮ ಜೀವಿತಗಳಲ್ಲಿ ದೇವರು ಎಲ್ಲಾ ಸಂಗತಿಗಳನ್ನು ನಿಯಂತ್ರಿಸುವುದಿಲ್ಲ ಎಂಬುದನ್ನು ವಿವೇಚಿಸಲು ಅರಂಭಿಸಬೇಕಾದ ಅಗತ್ಯವಿದೆ. ಕೊಲ್ಲುವುದಕ್ಕೆ, ಕದಿಯುವುದಕ್ಕೆ ಮತ್ತು ನಾಶಮಾಡುವುದಕ್ಕೆ ಬರುವ ಒಬ್ಬ ವೈರಿ ಇದ್ದಾನೆ, ಆದರೆ ಯೇಸು ನಮಗೆ ಜೀವವನ್ನು ನೀಡಲು ಬಂದನು. ನಾವು ಜೀವವನ್ನು ಆಯ್ಕೆ ಮಾಡಬೇಕು ಮತ್ತು ನಮ್ಮ ಜೀವಿತದೊಳಗೆ ಬರುವಂತಹ ಪ್ರತಿಯೊಂದು ಸಂಗತಿಗಳ ಬಗ್ಗೆ ದೇವರಿಗೆ ಅಪರಾಧ ಮನೋಭಾವನೆ ಇಲ್ಲ ಎಂಬುದನ್ನು ನಾವು ಉದ್ದೇಶಪೂರ್ವಕವಾಗಿ ಗುರುತಿಸಬೇಕು.

ದೇವರು ಶಾರೀರಿಕವಾಗಿ ಸಿಗುವಂತಿದ್ದು, ಜನರು ಆತನ ಮೇಲೆ ಹೊರಿಸುವ ತಪ್ಪುಗಳಂತೆಯೇ ನಡೆದುಕೊಳ್ಳುತ್ತಿರುವುದಾದರೆ – ಅಂದರೆ ಜನರಲ್ಲಿ ಕ್ಯಾನ್ಸರ್, ವೈಕಲ್ಯಗಳು, ಖಿನ್ನತೆ, ದುಃಖ ಮತ್ತು ನೋವುಗಳನ್ನು ಬರುಮಾಡುವವನು ಎಂಬ ದೋಷಿಯಾಗಿದ್ದಿದ್ದರೆ, ಈ ಲೋಕದಲ್ಲಿ ಆತನನ್ನು ಬಂಧಿಸುವುದಕ್ಕೆ ಅಥವಾ ಆತನು ಈ ರೀತಿ ಮಾಡದಂತೆ ತಡೆಯುವುದಕ್ಕೆ ಯಾವುದೇ ಸರ್ಕಾರವು ಅಡ್ಡಿಪಡಿಸುತ್ತಿರಲಿಲ್ಲ ಎಂದು ನಾನು ಖಚಿತವಾಗಿ ಹೇಳುತ್ತೇನೆ. ಆದರೂ ನಾವು ಇದುವರೆಗೆ ಭೇಟಿಯಾಗಿರುವ ಯಾವುದೇ ವ್ಯಕ್ತಿಗಿಂತಲೂ ಮತ್ತು ನಾವು ನಮ್ಮ ಜೀವಿತಗಳಲ್ಲಿ ಇದುವರೆಗೂ ಊಹೆ ಮಾಡಿರುವುದಕ್ಕಿಂತಲೂ ಅಧಿಕವಾಗಿ ಕರುಣೆಯುಳ್ಳ ದೇವರು, ಎಲ್ಲೆಡೆ ಹೋಗಿ ಜನರಿಗೆ ಕೆಡುಕನ್ನು ಮಾಡುತ್ತಿರುವನು ಎಂದು ನಾವು ಆಲೋಚಿಸುತ್ತೇವೆ. ಕೆಲವು ಸಂಗತಿಗಳು ದುರಾತ್ಮನ ಆಕ್ರಮಣಗಳಾಗಿರುತ್ತವೆ ಹಾಗೂ ಇನ್ನು ಕೆಲವು ಸ್ವಾಭಾವಿಕ ಸಂಗತಿಗಳಾಗಿರುತ್ತವೆ, ಮತ್ತು ಎಲ್ಲ ನಾಶನಗಳನ್ನು ದೇವರು ನೇಮಿಸಿಲ್ಲ. ಇನ್ಶುರೆನ್ಸ್ ಕಂಪನಿಯರು ನಮ್ಮ ಪಾಲಿಸಿಗಳಲ್ಲಿ "ದೇವರ ಕ್ರಿಯೆಗಳಾಗಿರುವ ಭೂಕಂಪಗಳು ಮತ್ತು ಉಪದ್ರವಗಳು" ಎಂದು ಬರೆದಿರುತ್ತಾರೆ. ಇಲ್ಲ, ಈ ಎಲ್ಲಾ ಸಂಗತಿಗಳಿಗೆ ದೇವರು ಕಾರಣಕರ್ತನಲ್ಲ.

## ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಯಾಕೋಬ 1:13 ನ್ನು ಓದಿರಿ. ಮನುಷ್ಯರು ಸೈತಾನನಿಂದ ಶೋಧಿಸಲ್ಪಡಬೇಕೆಂದು ದೇವರು ಅನುಮತಿಸುತ್ತಾನೆಯೇ?

**ಯಾಕೋಬ 1:13** – *ಯಾವನಾದರೂ ಪಾಪ ಮಾಡುವದಕ್ಕೆ ಪ್ರೇರೇಪಿಸಲ್ಪಡುವಾಗ–ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ; ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದಿಲ್ಲ.*

2. ಯಾಕೋಬ 1:17 ನ್ನು ಓದಿರಿ. ಒಳ್ಳೆಯ ವರದಾನಗಳು ಎಲ್ಲಿಂದ ಬರುತ್ತವೆ?

**ಯಾಕೋಬ 1:17** – *ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದುಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ.*

3. ಯೋಹಾನ 10:10 ನ್ನು ಓದಿರಿ. ಕಳ್ಳನು ಯಾರು?

**ಯೋಹಾನ 10:10** – *ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು.*

4. ಯೋಹಾನ 10:10ನ್ನು ಓದಿರಿ. ಅವನ ಉದ್ದೇಶಗಳು ಏನಾಗಿವೆ?

5. ಯೋಹಾನ 10:10ನ್ನು ಓದಿರಿ. ಯೇಸು ಬಂದುದರ ಕಾರಣವೇನಾಗಿದೆ?

6. ಯಾಕೋಬ 4:7ನ್ನು ಓದಿರಿ. ನಿಮ್ಮನ್ನು ದೇವರಿಗೆ ಒಳಪಡಿಸುವುದರ ಹಾಗೂ ಸೈತಾನನನ್ನು ಎದುರಿಸುವುದರ ಫಲಿತಾಂಶವು ಏನಾಗಿದೆ?

**ಯಾಕೋಬ 4:7** – *ಹೀಗಿರಲಾಗಿ ದೇವರಿಗೆ ಒಳಗಾಗಿರಿ. ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು.*

7. ರೋಮ 8:28 ನ್ನು ಓದಿರಿ. ಎಲ್ಲಾ ಸಂಗತಿಗಳು ದೇವರಿಂದ ಬರುತ್ತವೆ ಎಂದು ರೋಮ 8:28 ಹೇಳುತ್ತದೆಯೆ?

**ರೋಮ 8:28 –** *ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ.*

8. ಅ.ಕೃ. 10:38 ನ್ನು ಓದಿರಿ. ರೋಗವು ದೇವರಿಂದ ಬರುತ್ತದೆಯೇ?

**ಅ.ಕೃ. 10:38 –** *ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮನಿಂದಲೂ ಬಲದಿಂದಲೂ ಅಭಿಷೇಕಿಸಿದನು; ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು; ಇದೆಲ್ಲಾ ನಿಮಗೆ ಗೊತ್ತಾಗಿರುವದಷ್ಟೆ.*

9. 1 ಯೋಹಾನ 3:8 ನ್ನು ಓದಿರಿ. ದೇವಕುಮಾರನು ಪ್ರತ್ಯಕ್ಷನಾಗಿರುವುದರ ಉದ್ದೇಶವೇನಾಗಿತ್ತು?

**1 ಯೋಹಾನ 3:8 –** *ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ; ಆದಿಯಿಂದಲೂ ಸೈತಾನನು ಪಾಪ ಮಾಡುವವನಾಗಿದ್ದಾನಲ್ಲಾ. ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು.*

## ಉತ್ತರಗಳು

1. ಯಾಕೋಬ 1:13ನ್ನು ಓದಿರಿ. ಮನುಷ್ಯರು ಸೈತಾನನಿಂದ ಶೋಧಿಸಲ್ಪಡಬೇಕೆಂದು ದೇವರು ಅನುಮತಿಸುತ್ತಾನೆಯೇ?

**ಇಲ್ಲ**

2. ಯಾಕೋಬ 1:17ನ್ನು ಓದಿರಿ. ಒಳ್ಳೆಯ ವರದಾನಗಳು ಎಲ್ಲಿಂದ ಬರುತ್ತವೆ?

**ಬೆಳಕಿನ ತಂದೆಯಿಂದ**

3. ಯೋಹಾನ 10:10ನ್ನು ಓದಿರಿ. ಕಳ್ಳನು ಯಾರು?

**ಸೈತಾನನು**

4. ಯೋಹಾನ 10:10 ನ್ನು ಓದಿರಿ. ಅವನ ಉದ್ದೇಶಗಳು ಏನಾಗಿವೆ?

**ಕದ್ದುಕೊಳ್ಳುವುದು, ಕೊಲ್ಲುವುದು ಮತ್ತು ನಾಶಮಾಡುವುದು**

5. ಯೋಹಾನ 10:10 ನ್ನು ಓದಿರಿ. ಯೇಸು ಬಂದುದರ ಕಾರಣವೇನಾಗಿದೆ?

**ನಮಗೆ ಸಮೃದ್ಧಿಯಾದ ಜೀವವನ್ನು ನೀಡುವುದಕ್ಕಾಗಿ**

6. ಯಾಕೋಬ 4:7 ನ್ನು ಓದಿರಿ. ನಿಮ್ಮನ್ನು ದೇವರಿಗೆ ಒಳಪಡಿಸುವುದರ ಹಾಗೂ ಸೈತಾನನನ್ನು ಎದುರಿಸುವುದರ ಫಲಿತಾಂಶವು ಏನಾಗಿದೆ?

**ಸೈತಾನನು ನಮ್ಮನ್ನು ಬಿಟ್ಟು ಓಡಿಹೋಗುವನು**

7. ರೋಮ 8:28 ನ್ನು ಓದಿರಿ. ಎಲ್ಲಾ ಸಂಗತಿಗಳು ದೇವರಿಂದ ಬರುತ್ತವೆ ಎಂದು ರೋಮ 8:28 ಹೇಳುತ್ತದೆಯೆ?

**ಇಲ್ಲ**

8. ಅ.ಕೃ. 10:38 ನ್ನು ಓದಿರಿ. ರೋಗವು ದೇವರಿಂದ ಬರುತ್ತದೆಯೇ?

**ಇಲ್ಲ**

9. 1 ಯೋಹಾನ 3:8 ನ್ನು ಓದಿರಿ. ದೇವಕುಮಾರನು ಪ್ರತ್ಯಕ್ಷನಾಗಿರುವುದರ ಉದ್ದೇಶವೇನಾಗಿತ್ತು?

**ಸೈತಾನನ ಕೆಲಸಗಳನ್ನು ಲಯಮಾಡುವದು**

ಪಾಠ 14

# ಆತ್ಮಭರಿತ ಜೀವನದ ಬಲ

*ಡೂಣ್ ಕ್ರೊ*

ಮಾರ್ಕ 16:15–16 ಮಹಾಆಜ್ಞೆ ಎಂದು ಕರೆಯಲ್ಪಡುತ್ತದೆ. ಯೇಸು ತನ್ನ ಶಿಷ್ಯರಿಗೆ *"ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು. ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು."* ಅ.ಕೃ. 8ನೇ ಅಧ್ಯಾಯ, 5 ಮತ್ತು 12ನೇ ವಚನಗಳಲ್ಲಿ ಫಿಲಿಪ್ಪನು ಸಮಾರ್ಯದಲ್ಲಿ ಸಾರಿದುದರ ಮೂಲಕ ಹೇಗೆ ಈ ಆಜ್ಞೆಯು ಕಾರ್ಯರೂಪದಲ್ಲಿ ಸಂಭವಿಸಿತು ಎಂಬುದನ್ನು ನೋಡುತ್ತೇವೆ. *"ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು... ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸು ಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು."*

ಪ್ರಶ್ನೆಯೇನೆಂದರೆ, ಸಮಾರ್ಯದ ಈ ಜನರು ಮಾರ್ಕ 16:15–16ರ ಪ್ರಕಾರ ಕ್ರೈಸ್ತರಾದರೇ? ಹೌದು, ಅದರಂತೆಯೇ ಆದರು. ಫಿಲಿಪ್ಪನು ಸಮಾರ್ಯ ಪಟ್ಟಣಕ್ಕೆ ಹೋಗಿ, ಯೇಸುಕ್ರಿಸ್ತನ ಕುರಿತಾಗಿ ಸಾರಿದನು ಮತ್ತು ಕ್ರಿಸ್ತನಲ್ಲಿನ ನಂಬಿಕೆಯ ಮೂಲಕ ಗಂಡಸರೂ ಹೆಂಗಸರೂ ದೀಕ್ಷಾಸ್ನಾನ ಮಾಡಿಸಿಕೊಂಡರು. ಮಹಾ ಆಜ್ಞೆಯ ಪ್ರಕಾರ, ಈ ಜನರು ರಕ್ಷಣೆ ಹೊಂದಿದರು ಎಂದು ನಾವು ಹೇಳಬಹುದು ಆದರೆ ಅವರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿದರೇ?

ಯೋಹಾನನು ನೀರಿನಲ್ಲಿ ದೀಕ್ಷಾಸ್ನಾನ ನೀಡುತ್ತಿದುದರ ಕುರಿತಾಗಿ ಸತ್ಯವೇದವು ಮಾತನಾಡುತ್ತದೆ, ಆದರೆ ಯೇಸು ಕ್ರಿಸ್ತನು ಮಾತ್ರವೇ ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಬಲ್ಲವನಾಗಿದ್ದನು. ವಾಕ್ಯದ ಪ್ರಕಾರ ಜನರು ನಂಬಿದರು, ಅವರು ರಕ್ಷಿಸಲ್ಪಟ್ಟರು, ಹಾಗೂ ನೀರಿನ ದೀಕ್ಷಾಸ್ನಾನ ಮಾಡಿಸಿಕೊಂಡರು, ಆದರೆ ಅವರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪಡೆಯಲಿಲ್ಲ. ಅ.ಕೃ. 8:14–17 ಹೇಳುತ್ತದೆ, *"ಸಮಾರ್ಯದವರು ದೇವರ ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಕೇಳಿ ಪೇತ್ರ ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು. ಇವರು ಅಲ್ಲಿಗೆ ಬಂದು ಆ*

*ಜನರಿಗೆ ಪವಿತ್ರಾತ್ಮ ವರವು ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆ ಮಾಡಿದರು. ಯಾಕಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು. ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮ ವರವನ್ನು ಹೊಂದಿದರು."*

ಒಬ್ಬ ವ್ಯಕ್ತಿಯು ನಂಬಿ, ದೀಕ್ಷಾಸ್ನಾನ ಮಾಡಿಸಿಕೊಂಡು ರಕ್ಷಿಸಲ್ಪಟ್ಟಿರುವುದರಿಂದ ಮಾತ್ರವೇ ಅವರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪಡೆದಿರುವರು ಎಂಬ ಅರ್ಥವಲ್ಲ ಎಂದು ನಾವು ವಾಕ್ಯಗಳಿಂದ ನೋಡಬಹುದಾಗಿದೆ. ಪವಿತ್ರಾತ್ಮನು ಅವರ ಜೀವಿತದೊಳಗೆ ಬಂದನು–ಯೋಹಾನ 20:22ರಲ್ಲಿ ಪವಿತ್ರಾತ್ಮನು ಶಿಷ್ಯರನ್ನು ಮರು ಉತ್ಪತ್ತಿ ಮಾಡಿದನು ಎಂಬುದನ್ನು ಕಾಣುತ್ತೇವೆ – ಆದರೆ ಪಂಚಾಶತ್ತಮ ದಿನದಿಂದೇ ಅವರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪಡೆದರು ಮತ್ತು ದೇವರಿಂದ ಅಧಿಕಾರವನ್ನು ವಹಿಸಿಕೊಂಡರು. ರಕ್ಷಣೆಯಲ್ಲಿ ಪವಿತ್ರಾತ್ಮನ ಜೀವಿಸುವಿಕೆ ಹಾಗೂ ಪವಿತ್ರಾತ್ಮನ ದೀಕ್ಷಾಸ್ನಾನವು ಒಬ್ಬ ವ್ಯಕ್ತಿಯ ಮೇಲೆ ಬರುವುದರ ನಡುವೆ ಒಂದು ವ್ಯತ್ಯಾಸವುಂಟು. ಒಬ್ಬ ವ್ಯಕ್ತಿಯ ಮೇಲೆ ಬರುವುದಕ್ಕೆ ಮತ್ತು ಅವರನ್ನು ಬಲಪಡಿಸುವುದಕ್ಕೆ ಪವಿತ್ರಾತ್ಮನಲ್ಲಿ ಮುಳುಗುವುದು ಎಂಬುದೊಂದಿದೆ. ಒಬ್ಬ ವ್ಯಕ್ತಿಯು ರಕ್ಷಣೆ ಹೊಂದಿದ್ದರೂ ಸಹ, ಅವರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿರುವರು ಎಂಬುದು ಇದರ ಅರ್ಥವಲ್ಲ.

ಅ.ಕೃ. 19:1–2 ಹೇಳುತ್ತದೆ, *"ಅಪೊಲ್ಲೋಸನು ಕೊರಿಂಥದಲ್ಲಿದ್ದಾಗ ಪೌಲನು ಮಲೆನಾಡಿನಲ್ಲಿ ಸಂಚಾರಮಾಡಿ ಎಫೆಸಕ್ಕೆ ಬಂದು ಕೆಲವು ಮಂದಿ ಶಿಷ್ಯರನ್ನು ಕಂಡು – ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ – ಇಲ್ಲ, ಪವಿತ್ರಾತ್ಮ ವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು."ಇಲ್ಲಿ ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ ಎಂದು ಪೌಲನು ಕೇಳಿದನು. ಅವರು "ನಮಗೆ ಪವಿತ್ರಾತ್ಮನ ಬಗ್ಗೆ ಏನೂ ಗೊತ್ತಿಲ್ಲ"* ಅಂದರು. ಆಗ ಪೌಲನು "ನೀವು ನಂಬಿದಾಗ ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿಲ್ಲದಿರುವುದಾದರೆ, ನೀವು ಯಾವ ದೀಕ್ಷಾಸ್ನಾನವನ್ನು ಮಾಡಿಸಿಕೊಂಡಿರಿ?" ಎಂದು ಕೇಳಿದನು. ಅವರು "ನಾವು ಯೋಹಾನನ ದೀಕ್ಷಾಸ್ನಾನವನ್ನು ಮಾಡಿಸಿಕೊಂಡೆವು" ಅಂದರು. ಆಗ ಪೌಲನು ಈ ಜನರಿಗೆ ಯೇಸುವು ಕ್ರಿಸ್ತನಾಗಿರುವುದರ ಕುರಿತಾಗಿ ಪರಿಪೂರ್ಣವಾಗಿ ವಿವರಿಸಿದನು, ನಂತರ ಈ ವಿಶ್ವಾಸಿಗಳು ತಮ್ಮನ್ನು ಯೇಸುವಿನೊಂದಿಗೆ ನೀರಿನ ದೀಕ್ಷಾಸ್ನಾನದ ಮೂಲಕ ಗುರುತಿಸಿಕೊಂಡರು ಎಂದು ನಾನು ನಂಬುತ್ತೇನೆ. 6–7ನೇ ವಚನಗಳು ಹೀಗೆ ಹೇಳುತ್ತವೆ, *"ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು; ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು. ಅವರು ಸುಮಾರು ಹನ್ನೆರಡು ಮಂದಿ ಗಂಡಸರು."*

ಈ ಜನರು ಮೆಸ್ಸೀಯನು ಬರುವನು ಎಂದು ನಂಬಿಕೆ ಇಟ್ಟಂತ ಶಿಷ್ಯರಾಗಿದ್ದರೂ ಸಹ, ಅವರಿಗೆ ಪವಿತ್ರಾತ್ಮನ ದೀಕ್ಷಾಸ್ನಾನವಾಗಿರಲಿಲ್ಲ. ಪವಿತ್ರಾತ್ಮನ ದೀಕ್ಷಾಸ್ನಾನವಿಲ್ಲದೆಯೇ

ಒಬ್ಬ ವ್ಯಕ್ತಿಯು ತಿರುಗಿ ಹುಟ್ಟಬಹುದು ಮತ್ತು ನೀರಿನ ದೀಕ್ಷಾಸ್ನಾನವನ್ನು ತೆಗೆದುಕೊಳ್ಳಬಹುದಾಗಿದೆ. ಮಾನಸಾಂತರಕ್ಕಿಂತಲೂ ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಎಂಬುದು ಪ್ರತ್ಯೇಕವಾದುದು ಮತ್ತು ವಿಭಿನ್ನವಾದುದೂ ಆಗಿದೆ.

ನಾನು ಒಬ್ಬ ವ್ಯಕ್ತಿಗೆ ನೀರಿನ ದೀಕ್ಷಾಸ್ನಾನ ನೀಡಬಲ್ಲವನಾಗಿದ್ದರೂ ಸಹ, ನಾನು ಅವರನ್ನು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ನೀಡಲಾಗುವುದಿಲ್ಲ; ಇದನ್ನು ಯೇಸು ಮಾತ್ರ ಮಾಡಬಲ್ಲನು. ನಿಮಗೆ ಪವಿತ್ರಾತ್ಮನ ದೀಕ್ಷಾಸ್ನಾನ ಮಾಡಿಸಬೇಕೆಂದು ನೀವು ಇದುವರೆಗೂ ಯೇಸುವನ್ನು ಕೇಳಿರದಿದ್ದರೆ, ಈಗ ಇದನ್ನು ಏಕೆ ಕೇಳಬಾರದು? ಲೂಕ 11:13 ಹೇಳುತ್ತದೆ, *"ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವನಲ್ಲವೇ."* ಇಂದೇ ನೀವು ಆತನನ್ನು ಏಕೆ ಕೇಳಬಾರದು?

## ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಮಾರ್ಕ 16:16 ನ್ನು ಓದಿರಿ. ಈಗ ಅ.ಕೃ. 8:5 ಮತ್ತು 12ನ್ನು ಓದಿರಿ. ಅ.ಕೃ. 8:12 ರಲ್ಲಿ ವರ್ಣಿಸಿರುವ ಜನರು ಕ್ರೈಸ್ತರಾದರೇ?

**ಮಾರ್ಕ 16:16** – *ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು. ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು.*

**ಅ.ಕೃ. 8:5** – *ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು.*

**ಅ.ಕೃ. 8:12** – *ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸು ಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು.*

2. ಅ.ಕೃ. 8:14–16 ಓದಿರಿ. ಈ ಜನರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿದ್ದರೇ?

**ಅ.ಕೃ. 8:14–16** – *ಸಮಾರ್ಯದವರು ದೇವರ ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಕೇಳಿ ಪೇತ್ರ ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು. ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮ ವರವು ದೊರಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆ ಮಾಡಿದರು. ಯಾಕಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು.*

3. ಅ.ಕೃ. 19:1–5 ನ್ನು ಓದಿರಿ. ಈ ಜನರು ವಿಶ್ವಾಸಿಗಳೇ?

**ಅ.ಕೃ. 19:1–5** –*ಅಪೊಲ್ಲೋಸನು ಕೊರಿಂಥದಲ್ಲಿದ್ದಾಗ ಪೌಲನು ಮಲೆನಾಡಿನಲ್ಲಿ ಸಂಚಾರಮಾಡಿ ಎಫೆಸಕ್ಕೆ ಬಂದು [2] ಕೆಲವು ಮಂದಿ ಶಿಷ್ಯರನ್ನು ಕಂಡು – ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ – ಇಲ್ಲ, ಪವಿತ್ರಾತ್ಮ ವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು. [3] ಅವನು – ನೀವು ಯಾವದನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು – ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರು. [4] ಅದಕ್ಕೆ ಪೌಲನು – ಯೋಹಾನನು ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆಯಿಡಬೇಕೆಂಬದಾಗಿ ಜನರಿಗೆ ಹೇಳಿದನು ಎಂದು ಹೇಳಲು [5] ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು.*

4. ಅ.ಕೃ. 19:6–7 ನ್ನು ಓದಿರಿ. ಅವರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿದ್ದರೇ?

**ಅ.ಕೃ. 19:6–7** – *ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು; ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು. ಅವರು ಸುಮಾರು ಹನ್ನೆರಡು ಮಂದಿ ಗಂಡಸರು.*

5. ಲೂಕ 11:13ನ್ನು ಓದಿರಿ. ನಾವು ಪವಿತ್ರಾತ್ಮನನ್ನು ಪಡೆಯಲು ಏನು ಮಾಡಬೇಕೆಂದು ಲೂಕ 11:13 ಹೇಳುತ್ತದೆ?

**ಲೂಕ 11:13** – *ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮ ವರವನ್ನು ಕೊಡುವನಲ್ಲವೇ ಅಂದನು.*

6. 1 ಕೊರಿಂಥ 14:2 ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುವಾಗ, ಅವರು ಏನು ಮಾಡುತ್ತಿರುವರು?

**1 ಕೊರಿಂಥ 14:2** – *ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಆಡುವದಿಲ್ಲ. ಅವನು ಆತ್ಮಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ.*

7. 1 ಕೊರಿಂಥ 14:14 ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುತ್ತಿರುವಾಗ, ಅವರು ಏನು ಮಾಡುತ್ತಿರುವರು?

**1 ಕೊರಿಂಥ 14:14** – *ಯಾಕಂದರೆ ನಾನು ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗಿರುವದು.*

8. 1 ಕೊರಿಂಥ 14:16–17 ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುತ್ತಿರುವಾಗ, ಅವರು ಏನು ಮಾಡುತ್ತಿರುವರು?

**1 ಕೊರಿಂಥ 14:16–17** – *ನೀನು ಆತ್ಮದಿಂದ ಮಾತ್ರ ದೇವರ ಸ್ತೋತ್ರಮಾಡಿದರೆ ಆ ವರವನ್ನು ಹೊಂದದಿರುವ ಸಭೆಯವನಿಗೆ ನೀನು ಹೇಳಿದ್ದು ತಿಳಿಯದೆ ಇರುವದರಿಂದ ನೀನು ಮಾಡುವ ಕೃತಜ್ಞತಾಸ್ತುತಿಗೆ ಅವನು ಆಮೆನ್ ಎಂದು ಹೇಗೆ ಹೇಳಾನು? [17] ನೀನಂತೂ ಚೆನ್ನಾಗಿ ಕೃತಜ್ಞತಾಸ್ತುತಿ ಮಾಡುತ್ತೀ ಹೌದು, ಆದರೆ ಬೇರೊಬ್ಬನು ಭಕ್ತಿವೃದ್ಧಿ ಹೊಂದುವದಿಲ್ಲ.*

9. ಅ.ಕೃ. 2:4 ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುವಾಗ, ಇಲ್ಲಿ ಪವಿತ್ರಾತ್ಮನು ಮಾತನಾಡುತ್ತಿರುವನೋ ಅಥವಾ ಆ ವ್ಯಕ್ತಿಯು ವೈಯಕ್ತಿಕವಾಗಿ ಮಾತನಾಡುತ್ತಿರುವನೋ?

**ಅ.ಕೃ. 2:4** – *ಆಗ ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ಆ ಆತ್ಮ ತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.*

10. ಅ.ಕೃ. 2:4 ನ್ನು ಓದಿರಿ. ಆ ವ್ಯಕ್ತಿಗೆ ಮಾತುಗಳನ್ನು ಅಥವಾ ಉಚ್ಚರಣೆಯನ್ನು ಯಾರು ನೀಡುತ್ತಿರುವರು?

## ಉತ್ತರಗಳು

1. ಮಾರ್ಕ 16:16ನ್ನು ಓದಿರಿ. ಈಗ ಅ.ಕೃ. 8:5 ಮತ್ತು 12ನ್ನು ಓದಿರಿ. ಅ.ಕೃ. 8:12 ರಲ್ಲಿ ವರ್ಣಿಸಿರುವ ಜನರು ಕ್ರೈಸ್ತರಾದರೇ?

**ಹೌದು**

2. ಅ.ಕೃ. 8:14–16 ಓದಿರಿ. ಈ ಜನರು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿದ್ದರೇ?

**ಇಲ್ಲ**

3. ಅ.ಕೃ. 19:1–5ನ್ನು ಓದಿರಿ. ಈ ಜನರು ವಿಶ್ವಾಸಿಗಳೇ?

**ಹೌದು**

4. ಅ.ಕೃ. 19:6–7ನ್ನು ಓದಿರಿ. ಅವರು ಪವಿತ್ರಾತ್ಮನ ದೀಕ್ಷಾಸ್ನವನ್ನು ಹೊಂದಿದ್ದರೇ?

**ಇಲ್ಲ**

ಗಮನಿಸಿ: ಇದು ರಕ್ಷಣೆಗಿಂತಲೂ ವಿಭಿನ್ನವಾದುದು ಎಂಬುದನ್ನು ತೋರ್ಪಡಿಸುತ್ತದೆ.

5. ಲೂಕ 11:13ನ್ನು ಓದಿರಿ. ನಾವು ಪವಿತ್ರಾತ್ಮನನ್ನು ಪಡೆಯಲು ಏನು ಮಾಡಬೇಕೆಂದು ಲೂಕ 11:13 ಹೇಳುತ್ತದೆ?

**ಕೇಳಬೇಕು**

6. 1 ಕೊರಿಂಥ 14:2ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುವಾಗ, ಅವರು ಏನು ಮಾಡುತ್ತಿರುವರು?

**ದೇವರ ಸಂಗಡ ಮಾತನಾಡುತ್ತಿರುವರು ಮತ್ತು ರಹಸ್ಯಾರ್ಥಗಳನ್ನು ಮಾತನಾಡುತ್ತಿರುವರು**

7. 1 ಕೊರಿಂಥ 14:14ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುತ್ತಿರುವಾಗ, ಅವರು ಏನು ಮಾಡುತ್ತಿರುವರು?

**ಅವರ ಆತ್ಮವು ದೇವರ ಸಂಗಡ ಮಾತನಾಡುತ್ತಿರುತ್ತದೆ**

8. 1 ಕೊರಿಂಥ 14:16–17ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುತ್ತಿರುವಾಗ, ಅವರು ಏನು ಮಾಡುತ್ತಿರುವರು?

**ತಮ್ಮ ಆತ್ಮದಿಂದ ದೇವರ ಸ್ತೋತ್ರ ಮಾಡುತ್ತಿರುವರು ಮತ್ತು ಕೃತಜ್ಞತಾಸ್ತುತಿಯನ್ನು ಹೇಳುತ್ತಿರುವರು**

9. ಅ.ಕೃ. 2:4ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುವಾಗ, ಇಲ್ಲಿ ಪವಿತ್ರಾತ್ಮನು ಮಾತನಾಡುತ್ತಿರುವನೋ ಅಥವಾ ಆ ವ್ಯಕ್ತಿಯು ವೈಯಕ್ತಿಕವಾಗಿ ಮಾತನಾಡುತ್ತಿರುವನೋ?

**ವ್ಯಕ್ತಿಯು ಮಾತನಾಡುತ್ತಿರುವನು**

10. ಅ.ಕೃ. 2:4ನ್ನು ಓದಿರಿ. ಆ ವ್ಯಕ್ತಿಗೆ ಮಾತುಗಳನ್ನು ಅಥವಾ ಉಚ್ಚರಣೆಯನ್ನು ಯಾರು ನೀಡುತ್ತಿರುವರು?

**ಪವಿತ್ರಾತ್ಮನು**

ಪಾಠ 15

# ಪವಿತ್ರಾತ್ಮನನ್ನು ಪಡೆಯುವುದು ಹೇಗೆ?

***ಡ್ರೂಣ್ ಕ್ರೊ***

ನಾವು ಪವಿತ್ರಾತ್ಮನನ್ನು ಪಡೆಯುವುದು ಹೇಗೆ ಎಂಬುದರ ಕುರಿತಾಗಿ ಮಾತನಾಡಲಿದ್ದೇವೆ. ಅ.ಕೃ. 10:1 ಹೇಳುತ್ತದೆ, *"ಕೈಸರೈಯದಲ್ಲಿ ಇತಾಲ್ಯದ ಪಟಾಲಮೆನಿಸಿಕೊಳ್ಳುವ ಒಂದು ಪಟಾಲಮಿನ ಶತಾಧಿಪತಿಯಾದ ಕೊರ್ನೇಲ್ಯನೆಂಬ ಒಬ್ಬ ಮನುಷ್ಯನಿದ್ದನು."* ಶತಾಧಿಪತಿ ಎಂಬುದು ಸೇನೆಯ ಶ್ರೇಣಿಯಾಗಿದ್ದು, ಬಹುಶಃ ಒಂದು ರೆಜಿಮೆಂಟಿನ ಮೇಲೆ ಕ್ಯಾಪ್ಟನ್ ಆಗಿರಬಹುದಾಗಿದೆ. 2ನೇ ವಚನವು ಹೀಗೆ ಮುಂದುವರೆಯುತ್ತದೆ, *"ಅವನು ಭಕ್ತನೂ ತನ್ನ ಮನೆಯವರೆಲ್ಲರ ಸಹಿತವಾಗಿ ದೇವರಿಗೆ ಭಯಪಡುವವನೂ ಆಗಿದ್ದು ಜನರಿಗೆ ಬಹಳವಾಗಿ ದಾನಧರ್ಮ ಮಾಡುತ್ತಾ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುತ್ತಾ ಇದ್ದನು."* ಅವನು ನೀತಿವಂತನಾಗಿದ್ದನು, ನೀತಿಯಾಗಿದ್ದ ಸಂಗತಿಗಳನ್ನು ಮಾಡಿದನು, ದೇವರಿಗೆ ಭಯಪಡುತ್ತಿದ್ದನು, ಅಗತ್ಯವಿದ್ದ ಜನರಿಗೆ ಧಾರಾಳವಾಗಿ ಹಣ ನೀಡಿದನು, ಮತ್ತು ಅವನು ಯಾವಾಗಲೂ ಪ್ರಾರ್ಥಿಸುತ್ತಿದ್ದನು ಎಂದು ಸತ್ಯವೇದವು ಹೇಳುತ್ತದೆ. ಆದರೆ ಅವನು ಸರಿಯಾದ ಸಂಗತಿಗಳನ್ನು ಮಾಡಿದ್ದರೂ, ದೇವರಿಗೆ ಭಯಪಡುವವನಾಗಿದ್ದರೂ, ಮತ್ತು ಪ್ರಾರ್ಥನೆಯ ಜೀವಿತವನ್ನು ಹೊಂದಿದ್ದರೂ ಸಹ, ಅವನಿಗೆ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಒಂದು ವೈಯಕ್ತಿಕವಾದ ಸಂಬಂಧ ಇರಲಿಲ್ಲ ಎಂಬ ಆಶ್ಚರ್ಯಕರ ಸಂಗತಿಯನ್ನು ನಾವು ಕಂಡುಕೊಳ್ಳಲಿದ್ದೇವೆ.

3–6ನೇ ವಚನಗಳಲ್ಲಿ ಹೀಗೆ ಹೇಳಿಯದೆ, *"ಮಧ್ಯಾಹ್ನದ ಮೇಲೆ ಸುಮಾರು ಮೂರು ಗಂಟೆಗೆ ಅವನಿಗೆ ಒಂದು ದರ್ಶನ ಉಂಟಾಗಿ ಒಬ್ಬ ದೇವದೂತನು ತನ್ನ ಬಳಿಗೆ ಬಂದು – ಕೊರ್ನೇಲ್ಯನೇ ಎಂದು ಕರೆಯುವದನ್ನು ಅವನು ಪ್ರತ್ಯಕ್ಷವಾಗಿ ಕಂಡನು. ಅವನು ಆ ದೂತನನ್ನು ದೃಷ್ಟಿಸಿ ನೋಡಿ ಭಯಹಿಡಿದವನಾಗಿ – ಏನು ಸ್ವಾಮಿ ಎಂದು ಕೇಳಲು ದೂತನು ಅವನಿಗೆ – ನಿನ್ನ ಪ್ರಾರ್ಥನೆಗಳೂ ನಿನ್ನ ದಾನಧರ್ಮಗಳೂ ದೇವರ ಮುಂದೆ ಜ್ಞಾಪಕಾರ್ಥವಾಗಿ ಏರಿ ಬಂದವು. ಈಗ ನೀನು ಯೊಪ್ಪಕ್ಕೆ ಜನರನ್ನು ಕಳುಹಿಸಿ ಪೇತ್ರನೆನಿಸಿಕೊಳ್ಳುವ ಸೀಮೋನನ್ನು ಕರೆಯಿಸಬೇಕು. ಅವನು ಚರ್ಮಕಾರನಾದ ಸೀಮೋನನ ಬಳಿಯಲ್ಲಿ ಇಳುಕೊಂಡಿದ್ದಾನೆ."*

ಈ ವ್ಯಕ್ತಿಯು ದೇವರಿಗೆ ಭಯಪಡುವವನಾಗಿದ್ದು, ನೀತಿಯೆಂದು ಕಾಣಲ್ಪಡುವ ಸರಿಯಾದ ಸಂಗತಿಗಳನ್ನು ಮಾಡುವವನಾಗಿದ್ದರೂ, ಮತ್ತು ದೇವರ ಮುಂದೆ ಪ್ರಾರ್ಥನೆಯ ಜೀವಿತವನ್ನು ಹೊಂದಿದ್ದರೂ ಸಹ, ತಾನು ಏನು ಮಾಡಬೇಕೆಂದು ಹೇಳುವ ಸೀಮೋನ ಪೇತ್ರನನ್ನು ಕರೆತರುವುದಕ್ಕಾಗಿ ಮನುಷ್ಯರನ್ನು ಕಳುಹಿಸಬೇಕು ಎನ್ನುವುದು ದೇವದೂತನು ಹೇಳಿದ ಮಾತು. ಪೇತ್ರನು ಇವನ ಬಳಿಯಲ್ಲಿ ನಿರ್ದಿಷ್ಟವಾಗಿ ಏನು ಹೇಳಬೇಕು ಎಂಬುದನ್ನು ಅ.ಕೃ. 10:43ರಲ್ಲಿ ನೋಡುತ್ತೇವೆ: *"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ ಅಂದನು."* ಇದು ವಿಸ್ಮಯವಾಗಿರುವುದಲ್ಲವೇ? ಈ ಎಲ್ಲಾ ಒಳ್ಳೆಯ ಸಂಗತಿಗಳನ್ನು ಹೊಂದಿದ್ದ ಈ ಕೊರ್ನೇಲ್ಯನಿಗೆ ಯೇಸು ಕ್ರಿಸ್ತನೆಂಬ ವ್ಯಕ್ತಿಯ ಮೂಲಕ ದೇವರೊಂದಿಗೆ ಒಂದು ವೈಯಕ್ತಿಕವಾದ ಸಂಬಂಧವು ಇರಲಿಲ್ಲ. ದೇವರು ಹೇಳಿದನು, "ನೀನು ಮಾಡುತ್ತಿರುವ ಕಾರ್ಯಗಳು ಶ್ರೇಷ್ಠವಾಗಿವೆ, ಅವು ಅದ್ಭುತವಾಗಿವೆ, ಮತ್ತು ಅವು ಜ್ಞಾಪಕಾರ್ಥವಾಗಿ ನನ್ನ ಮುಂದೆ ಇವೆ, ಆದರೆ ನಾನು ಏನು ಮಾಡುವೆನೋ ಅದನ್ನು ಕೊರ್ನೇಲ್ಯನು ನಿನಗೆ ತಿಳಿಸುವೆನು. ಪೇತ್ರನೆಂಬ ಹೆಸರಿನ ವ್ಯಕ್ತಿಯನ್ನು ಕರೆತರುವಂತೆ ಹೇಳುವುದಕ್ಕಾಗಿ ನಾನು ಒಬ್ಬ ದೇವದೂತನನ್ನು ನಿನ್ನ ಬಳಿಗೆ ಕಳುಹಿಸಿರುವೆನು ಮತ್ತು ಅವನು ಏನು ಮಾಡಬೇಕು ಎಂಬುದನ್ನು ನಿನಗೆ ತಿಳಿಸುವನು." ಅ.ಕೃ. 10:43ರಲ್ಲಿ, ಪೇತ್ರನು ಕೊರ್ನೇಲ್ಯನ ಮನೆಗೆ ಹೋದಾಗ, ಅವನು *"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಪಾಪಪರಿಹಾರವನ್ನು ಹೊಂದುವನು"* ಎಂದು ಹೇಳಿದನು.

ಈಗ ಏನು ಸಂಭವಿಸಿತು ಎಂಬುದನ್ನು ನೋಡಿ. *"ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಅವನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮವರವು ಇಳಿಯಿತು"* (ಅ.ಕೃ. 10:44). ಕೊರ್ನೇಲ್ಯನು ಕ್ರಿಸ್ತನಲ್ಲಿ ನಂಬಿಕೆಯಿಡುವುದರ ಕುರಿತು ಕೇಳುತ್ತಿರುವಂತೆಯೇ ಸ್ವೀಕರಿಸಲಾರಂಭಿಸಿದನು ಮತ್ತು ಪಾಪಪರಿಹಾರಕ್ಕಾಗಿ ಯೇಸುವಿನಲ್ಲಿ ನಂಬಿಕೆಯಿಟ್ಟನು. ಇದನ್ನು ಮಾಡಿದ ಕೂಡಲೇ, ಆತನ ಮೇಲೆ ಹಾಗೂ ಆ ಮನೆಯಲ್ಲಿ ಇದ್ದವರೆಲ್ಲರ ಮೇಲೆ ಪವಿತ್ರಾತ್ಮನು ಇಳಿದು ಬಂದನು. ಇದು 45ನೇ ವಚನದಲ್ಲಿ ಹೀಗೆ ಹೇಳುತ್ತದೆ, *"ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯರಾದ ವಿಶ್ವಾಸಿಗಳು ಕೇಳಿದಾಗ – ಅನ್ಯಜನಗಳಿಗೂ ಪವಿತ್ರಾತ್ಮದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು."* ಇದು ಯೆಹೂದ್ಯ ವಿಶ್ವಾಸಿಗಳಿಗೆ ಹೇಗೆ ತಿಳಿಯಿತು? *"ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವದನ್ನು... ಯೆಹೂದ್ಯರಾದ ವಿಶ್ವಾಸಿಗಳು ಕೇಳಿದರು"* (ವಚನ 46).

ಹೊಸ ಒಡಂಬಡಿಕೆಯಲ್ಲಿ ಪವಿತ್ರಾತ್ಮನು ಒಬ್ಬ ವ್ಯಕ್ತಿಯ ಮೇಲೆ ಇಳಿದುಬಂದ ಪ್ರತಿಬಾರಿಯೂ, ಪವಿತ್ರಾತ್ಮನ ವರವು ತೋರ್ಪಡುತ್ತದೆ ಮತ್ತು ಇದು ಅವನು

ಆತ್ಮನಲ್ಲಿ ತುಂಬಲ್ಪಡುವಿಕೆಯನ್ನು ಪಡೆದಿರುವನು ಎಂಬುದಕ್ಕೆ ಸಾಕ್ಷಿಯಾಗಿದೆ. ಹೊಸ ಒಡಂಬಡಿಕೆಯಲ್ಲಿ, ಅವರು ಸಾಮಾನ್ಯವಾಗಿ ಅನ್ಯಭಾಷೆಯಲ್ಲಿ ಮಾತನಾಡುತ್ತಿದ್ದರು ಅಥವಾ ಪ್ರವಾದಿಸುತ್ತಿದ್ದರು.

ಒಂದು ದಿನ ಸಂಜೆ ನಾನು ಟೆಕ್ಸಾಸ್‌ನ ಡಲ್ಲಾಸ್ ಎಂಬ ಸ್ಥಳದಲ್ಲಿ ಮೊಣಕಾಲೂರಿ ಪ್ರಾರ್ಥಿಸುತ್ತಾ, "ದೇವರೇ, ನನಗೆ ಅನ್ಯಭಾಷೆಯಲ್ಲಿ ಮಾತನಾಡುವುದರ ಬಗ್ಗೆಯಾಗಲಿ ಮತ್ತು ಜನರು ಮಾತನಾಡುವಂತಹ ಪವಿತ್ರಾತ್ಮನ ದೀಕ್ಷಾಸ್ನಾನದ ಬಗ್ಗೆ ಏನೂ ಗೊತ್ತಿಲ್ಲ, ಆದರೆ ನಾನು ನಿನ್ನನ್ನು ಸ್ತುತಿಸುವುದಕ್ಕೆ, ನಿನ್ನನ್ನು ಘನಪಡಿಸುವುದಕ್ಕೆ, ನನ್ನ ಆಂಗ್ಲ ಭಾಷೆಯನ್ನು ಮೀರಿ ನಾನು ಮಾಡಬಹುದಾಂತಹ ಮಾರ್ಗವಿರುವುದಾದರೆ, ಅದು ನನಗೆ ಬೇಕು" ಎಂದು, ದೇವರನ್ನು ಆರಾಧಿಸಲು ಆರಂಭಿಸಿದೆ, ಹೀಗೆ ಮಾಡುತ್ತಿರುವಾಗ ಪವಿತ್ರಾತ್ಮನು ನನಗೆ ಒಂದು ಭಾಷೆಯನ್ನು ನೀಡಿದನು, ಅಂದರೆ ನನಗೆ ತಿಳಿಯದಿದ್ದ ಅಥವಾ ನಾನು ಕಲಿಯದಿದ್ದಂತಹ ಮಾತುಗಳನ್ನು/ಪದಗಳನ್ನು ನೀಡಿದನು. ಅ.ಕೃ 2:4ರಲ್ಲಿ ಸತ್ಯವೇದವು ಹೇಳುತ್ತದೆ, *"ಆಗ ಅವರೆಲ್ಲರು ಪವಿತ್ರಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು."* ಯಾರು ಮಾತನಾಡುತ್ತಿದ್ದರು? ಅವರು ಮತನಾಡುತ್ತಿದ್ದರು. ಆ ನುಡಿಯುವ ಪದಗಳನ್ನು ಯಾರು ನೀಡಿದರು? ಪವಿತ್ರಾತ್ಮನು.

ಲೂಕ 11:13 ಹೇಳುತ್ತದೆ, *"ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮ ವರವನ್ನು ಕೊಡುವನಲ್ಲವೇ."* ಈಗಲೇ ನೀವು ಮಾಡಬೇಕಾಗಿರುವ ಕಾರ್ಯವೆಂದರೆ, ಕೇಳಬೇಕು ಹಾಗೂ ನೀವು ಪಡೆದಿರುವಿರಿ ಎಂದು ನಂಬಿರಿ, ನಿಮ್ಮನ್ನು ನೀವು ದೇವರಿಗೆ ಅಧೀನಪಡಿಸಿ, ಕರ್ತನನ್ನು ಆರಾಧಿಸಲು ಆರಂಭಿಸಿ ಮತ್ತು ಆಗ ನೀವು ಎಂದೂ ಕಲಿಯದೇ ಇರುವ ಒಂದು ಭಾಷೆಯಿಂದ ದೇವರನ್ನು ಆರಾಧಿಸುವಂತೆ ಹಾಗೂ ಸ್ತುತಿಸುವಂತೆ ಆತನು ನಿಮಗೆ ನುಡಿಯಲು ಮಾತುಗಳನ್ನು ನೀಡುವನು.

## ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ರಕ್ಷಣೆಗಾಗಿ ಸತ್ಯವೇದವು ಉಪಯೋಗಿಸುವ ಕೆಲವು ವಿಧಾನಗಳನ್ನು ವರ್ಣಿಸಿ.

**ಯೋಹಾನ 3:3** – *ಅದಕ್ಕೆ ಯೇಸು – ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು.*

**ಅ.ಕೃ. 3:19** – *ಆದದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ. ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿಕಾಲಗಳು ಒದಗಿ...*

**ಮಾರ್ಕ 16:16** – *ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು.*

**ಕೊಲೊಸ್ಸೆ 2:13** – *ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ. ಆತನು ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿರುವನು.*

**ರೋಮ 8:9** – *ನೀವಾದರೋ, ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರಾಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ.*

**ಮತ್ತಾಯ 25:46** – *ಮತ್ತು ಇವರು ನಿತ್ಯಶಿಕ್ಷೆಗೂ ನೀತಿವಂತರು ನಿತ್ಯಜೀವಕ್ಕೂ ಹೋಗುವರು.*

2. ಅ.ಕೃ. 11:15ನ್ನು ಓದಿರಿ. ಪವಿತ್ರಾತ್ಮನೊಂದಿಗೆ ಆಗುವ ದೀಕ್ಷಾಸ್ನಾನದ ಅನುಭವವನ್ನು ಈ ವಚನವು ಹೇಗೆ ವರ್ಣಿಸುತ್ತದೆ?

**ಅ.ಕೃ. 11:15** – *ನಾನು ಮಾತಾಡುವದಕ್ಕೆ ಪ್ರಾರಂಭಿಸಿದಾಗ ಪವಿತ್ರಾತ್ಮ ವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆಯೂ ಇಳಿಯಿತು.*

3. ಯೇಸುವಿನ ಶಿಷ್ಯರು ಪವಿತ್ರಾತ್ಮನನ್ನು ಪಡೆದರು (ಯೋಹಾನ 20:22, ಆದರೆ ವಾಸ್ತವದಲ್ಲಿ ಕೆಲವು ದಿನಗಳ ನಂತರ ಅವರು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವನ್ನು ಹೊಂದಿದರು (ಅ.ಕೃ. 2:1–4). ಇವುಗಳನ್ನು ಗಮನಿಸಿರಿ ಹಾಗೂ ಈ ಎರಡು ಸತ್ಯಾಂಶಗಳನ್ನು ಹೋಲಿಸಿ ನೋಡಿರಿ (ಯೋಹಾನ 29:22 ಮತ್ತು ಅ.ಕೃ. 2:1–4)

**ಯೋಹಾನ 20:22** – *ಇದನ್ನು ಹೇಳಿ ಅವರ ಮೇಲೆ ಊದಿ ಅವರಿಗೆ – ಪವಿತ್ರಾತ್ಮ ವರವನ್ನು ತಕ್ಕೊಳ್ಳಿರಿ... ಅಂದನು.*

**ಅ.ಕೃ. 2:1–4** – *ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. [2] ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ಧವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. [3] ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. [4] ಆಗ ಅವರೆಲ್ಲರೂ ಪವಿತ್ರಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.*

4. ಅ.ಕೃ. 1:8ನ್ನು ಓದಿರಿ. ಪವಿತ್ರಾತ್ಮನ ದೀಕ್ಷಾಸ್ನಾನದ ಉದ್ದೇಶವೇನು?

**ಅ.ಕೃ. 1:8** – *ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು.*

5. ಅ.ಕೃ. 2:38–39 ಹಾಗೂ 1 ಕೊರಿಂಥ 1:7ನ್ನು ಓದಿರಿ. ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವು ಇಂದೂ ಸಹ ನಮಗೆ ಇರುವಂತಹುದಾಗಿದೆಯೇ?

**ಅ.ಕೃ. 2:38–39** – *ಪೇತ್ರನು ಅವರಿಗೆ – ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ; ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೂ ಮಾಡೋಣವಾಗಿದೆ ಎಂದು ಹೇಳಿದನು.*

**1 ಕೊರಿಂಥ 1:7** – *ಹೀಗೆ ನೀವು ಯಾವ ಕೃಪಾವರದಲ್ಲಿಯೂ ಕೊರತೆಯಿಲ್ಲದವರಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇದ್ದೀರಿ.*

6. ಲೂಕ 11:13ನ್ನು ಓದಿರಿ. ನೀವು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವನ್ನು ಹೊಂದಿಲ್ಲದಿದ್ದರೆ, ಈಗ ನೀವು ಏನು ಮಾಡಬೇಕು?

**ಲೂಕ 11:13** – *ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮ ವರವನ್ನು ಕೊಡುವನಲ್ಲವೇ.*

7. ಅ.ಕೃ. 2:4ನ್ನು ಓದಿರಿ. ದೇವರು ನಿಮಗೆ ನೀಡುವ ಪ್ರಾರ್ಥನೆಯ ಭಾಷೆಯನ್ನು ನೀವು ಕೇಳುವಿರೇ, ಪಡೆಯುವಿರೇ, ಮಾತನಾಡುವಿರೇ ಮತ್ತು ಆರಾಧನೆಯನ್ನು ಮಾಡುವಿರೇ?

**ಅ.ಕೃ. 2:4** – *ಆಗ ಅವರೆಲ್ಲರೂ ಪವಿತ್ರಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.*

## ಉತ್ತರಗಳು

1. ರಕ್ಷಣೆಗಾಗಿ ಸತ್ಯವೇದವು ಉಪಯೋಗಿಸುವ ಕೆಲವು ವಿಧಾನಗಳನ್ನು ವರ್ಣಿಸಿ.

**ತಿರುಗಿ ಹುಟ್ಟುವುದು (ಯೋಹಾನ 3:3), ಮಾನಸಾಂತರ (3:19), ನಂಬಿ ದೀಕ್ಷಾಸ್ನಾನ ಹೊಂದುವುದು (ಮಾರ್ಕ 16:16), ಕ್ಷಮಿಸಲ್ಪಡುವುದು (ಕೊಲೊಸ್ಸೆ 2:13), ಕ್ರಿಸ್ತನ ಆತ್ಮವನ್ನು ಪಡೆಯುವುದು (ರೋಮ 8:9) ಮತ್ತು ನಿತ್ಯಜೀವ (ಮಾರ್ಕ 25:46)**

2. ಅ.ಕೃ. 11:15ನ್ನು ಓದಿರಿ. ಪವಿತ್ರಾತ್ಮನೊಂದಿಗೆ ಆಗುವ ದೀಕ್ಷಾಸ್ನಾನದ ಅನುಭವವನ್ನು ಈ ವಚನವು ಹೇಗೆ ವರ್ಣಿಸುತ್ತದೆ?

*ಪವಿತ್ರಾತ್ಮನು ಒಬ್ಬರ ಮೇಲೆ ಇಳಿದು ಬರುವಂತೆ*

3. ಯೇಸುವಿನ ಶಿಷ್ಯರು ಪವಿತ್ರಾತ್ಮನನ್ನು ಪಡೆದರು (ಯೋಹಾನ 20:22, ಆದರೆ ವಾಸ್ತವದಲ್ಲಿ ಕೆಲವು ದಿನಗಳ ನಂತರ ಅವರು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವನ್ನು ಹೊಂದಿದರು (ಅ.ಕೃ. 2:1–4). ಇವುಗಳನ್ನು ಗಮನಿಸಿರಿ ಹಾಗೂ ಈ ಎರಡು ಸತ್ಯಾಂಶಗಳನ್ನು ಹೋಲಿಸಿ ನೋಡಿರಿ (ಯೋಹಾನ 29:22 ಮತ್ತು ಅ.ಕೃ. 2:1–4).

**ಯೋಹಾನ 20:22ರಲ್ಲಿ ಶಿಷ್ಯರು ಪವಿತ್ರಾತ್ಮನನ್ನು ಪಡೆದರು. ಅ.ಕೃ. 2:1–4ರಲ್ಲಿ ಅದೇ ಶಿಷ್ಯರು ಪವಿತ್ರಾತ್ಮನಿಂದ ತುಂಬಲ್ಪಟ್ಟರು (ಇದು ಆಂತರಿಕ ಮತ್ತು ಬಹಿರಂಗ ಮುಳುಗುವಿಕೆಯಾಗಿದೆ)**

4. ಅ.ಕೃ. 1:8ನ್ನು ಓದಿರಿ. ಪವಿತ್ರಾತ್ಮನ ದೀಕ್ಷಾಸ್ನಾನದ ಉದ್ದೇಶವೇನು?

**ಸೇವೆ ಮಾಡುವದಕ್ಕಾಗಿ (ಅಥವಾ ಸಾಕ್ಷಿಯಾಗಿರುವದಕ್ಕಾಗಿ) ಅಧಿಕಾರವನ್ನು ನೀಡುವುದಕ್ಕಾಗಿ**

5. ಅ.ಕೃ. 2:38–39 ಹಾಗೂ 1 ಕೊರಿಂಥ 1:7ನ್ನು ಓದಿರಿ. ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವು ಇಂದೂ ಸಹ ನಮಗೆ ಇರುವಂತಹುದಾಗಿದೆಯೇ?

**ಹೌದು. ಕ್ರಿಸ್ತನ ಎರಡನೆಯ ಬರೋಣದಲ್ಲಿ ವರಗಳು ಸಮಾಪ್ತಿಯಾಗುತ್ತವೆ, ಆದರೆ ಅಲ್ಲಿಯ ತನಕ ಇರುತ್ತವೆ**

6. ಲೂಕ 11:13ನ್ನು ಓದಿರಿ. ನೀವು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವನ್ನು ಹೊಂದಿಲ್ಲದಿದ್ದರೆ, ಈಗ ನೀವು ಏನು ಮಾಡಬೇಕು?

**ಅದಕ್ಕಾಗಿ ಕೇಳಬೇಕು**

7. ಅ.ಕೃ. 2:4ನ್ನು ಓದಿರಿ. ದೇವರು ನಿಮಗೆ ನೀಡುವ ಪ್ರಾರ್ಥನೆಯ ಭಾಷೆಯನ್ನು ನೀವು ಕೇಳುವಿರೇ, ಪಡೆಯುವಿರೇ, ಮಾತನಾಡುವಿರೇ ಮತ್ತು ಆರಾಧನೆಯನ್ನು ಮಾಡುವಿರೇ?

**ಹೌದು, ನಾನು ಮಾತನಾಡುವೆನು ಆದರೆ ಪವಿತ್ರಾತ್ಮನು ಮಾತುಗಳನ್ನು (ಭಾಷೆಯನ್ನು) ನನಗೆ ನೀಡುವನು**

ಪಾಠ 16

# ಅನ್ಯಭಾಷೆಯಲ್ಲಿ ಮಾತನಾಡುವುದರ ಪ್ರಯೋಜನಗಳು

*ಆಂಡ್ರೂ ವ್ಹಾಮಕ್*

ಪವಿತ್ರಾತ್ಮನ ದೀಕ್ಷಾಸ್ನಾನವು ಮೊಟ್ಟಮೊದಲನೆಯ ಬಾರಿ ಬಂದಾಗ ಏನು ಸಂಭವಿಸಿತೆಂದರೆ, ಅಲ್ಲಿದ್ದ ಜನರೆಲ್ಲರೂ ಅನ್ಯಭಾಷೆಯಲ್ಲಿ ಮಾತನಾಡಿದರು. ಅ.ಕೃ. 2:4 ಹೇಳುತ್ತದೆ, ಪಂಚಾಶತ್ತಮ ದಿನದಂದು, ಅವರು ಪವಿತ್ರಾತ್ಮನಿಂದ ತುಂಬಲ್ಪಟ್ಟರು ಮತ್ತು ಆತ್ಮನು ಅವರಿಗೆ ನುಡಿಯುವ ಶಕ್ತಿಯನ್ನು ನೀಡಿದ ಪ್ರಕಾರ ಅವರು ಬೇರೆ ಭಾಷೆಗಳಲ್ಲಿ ಮಾತನಾಡಿದರು. ಅಪೊಸ್ತಲರ ಕೃತ್ಯಗಳ ಪುಸ್ತಕದೆಲ್ಲೆಡೆ ಸತತವಾಗಿ, ಜನರು ಪವಿತ್ರಾತ್ಮನನ್ನು ಪಡೆದಾಗ ಅಲ್ಲಿ ದೇವರ ಪ್ರಸನ್ನತೆಯ ತೋರ್ಪಡಿಕೆಯು ಉಂಟಾಗುತ್ತಿತ್ತು.

ಖಂಡಿತವಾಗಿಯೂ, ಅನ್ಯಭಾಷೆಯಲ್ಲಿ ಮಾತನಾಡುವುದಕ್ಕಿಂತಲೂ ಮಿಗಿಲಾದ ಪವಿತ್ರಾತ್ಮನ ಕಾರ್ಯಗಳಿವೆ, ಆದರೆ ಇದು ಮುಖ್ಯ ತೋರ್ಪಡುವಿಕೆಗಳಲ್ಲಿ ಒಂದಾಗಿತ್ತು. 1 ಕೊರಿಂಥ 14:13–14 ಹೇಳುತ್ತದೆ, *"ಆದದರಿಂದ ವಾಣಿಯನ್ನಾಡುವವನು ತನಗೆ ಅದರ ಅರ್ಥವನ್ನು ಹೇಳುವ ಶಕ್ತಿಯೂ ಉಂಟಾಗಬೇಕೆಂದು ದೇವರನ್ನು ಪ್ರಾರ್ಥಿಸಲಿ. ಯಾಕಂದರೆ ನಾನು ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗಿರುವದು."* ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ನಿಮ್ಮ ಆತ್ಮವು ಪ್ರಾರ್ಥಿಸುವುದು. ಒಮ್ಮೆ ನೀವು ಅನ್ಯಭಾಷೆಯಲ್ಲಿ ಮಾತನಾಡಿದಾಗ, ಅದಕ್ಕೆ ನೀವು ಅರ್ಥವಿವರಣೆಯನ್ನು ನೀಡಬೇಕೆಂದು ಪ್ರಾರ್ಥಿಸಿ, ಆಗ ನಿಮ್ಮ ಬುದ್ಧಿಯು ಫಲಭರಿತವಾಗಿರುವದು.

ನಾನು ನನ್ನ ಸ್ವಂತ ಸಾಕ್ಷಿಯನ್ನು ನೀಡಬಲ್ಲೆ, ನಾನು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪಡೆದಾಗ ಮತ್ತು ಅನ್ಯಭಾಷೆಯಲ್ಲಿ ಮಾತನಾಡುವುದಕ್ಕೆ ಪ್ರಾರಂಭಿಸಿದಾಗ, ಇದು ನನ್ನ ಜೀವಿತವನ್ನು ನಾಟಕೀಯವಾಗಿ ಮಾರ್ಪಡಿಸಿತು. ನಾನು ತಿರುಗಿಹುಟ್ಟಿದಾಗ, ಕ್ರಿಸ್ತನು ನನ್ನೊಳಗೆ ವಾಸಿಸುವದಕ್ಕೆ ಬಂದನು ಮತ್ತು ಆತನು ಅಲ್ಲಿ ಎಲ್ಲವನ್ನು ಸಂಗ್ರಹಿಸಿಟ್ಟನು. ಆದರೆ ಪವಿತ್ರಾತ್ಮನು ನನ್ನ ಮೇಲೆ ಬಂದಾಗ, ಈ ಸಂಗ್ರಹಿಸಿಟ್ಟಿದ್ದ ಸಂಗತಿಗಳು ನನಗೂ ಹಾಗೂ ಇನ್ನಿತರರಿಗೂ ತೋರ್ಪಡಿಸಿಕೊಳ್ಳಲಾರಂಭಿಸಿತು. ಆಗ ನಡೆದಂತಹ ಕೆಲವು ಸಂಗತಿಗಳುಂಟು. ಮೊದಲನೆಯ ವರ್ಷ ನಾನು ಅನ್ಯಭಾಷೆಯಲ್ಲಿ ಪ್ರಾರ್ಥಿಸಿದಾಗ,

ಇದು ಹುಚ್ಚಾಟವೆಂದು, ಸಮಯ ಹಾಳುಮಾಡುವಂತದ್ದೆಂದು ನನ್ನ ಮನಸ್ಸು ಹೇಳಿತು. ಅನ್ಯಭಾಷೆಯಲ್ಲಿ ಮಾತನಾಡಲು ನನ್ನಲ್ಲಿ ನಂಬಿಕೆ ಹುಟ್ಟಬೇಕಾಯಿತು. ಯೂದ 20ರಲ್ಲಿ ಹೇಳುವಂತೆ ಇದು ನಿಮ್ಮ ಅತಿಪರಿಶುದ್ಧವಾದ ನಂಬಿಕೆಯನ್ನು ಕಟ್ಟುತ್ತದೆ ಎಂದು ಹೇಳಿರುವುದಕ್ಕೆ ಇದೇ ಕಾರಣವಾಗಿದೆ. ಇದು ನಿಮ್ಮ ಸ್ವಾಭಾವಿಕ ಆಲೋಚನೆಯಿಂದ, ತರ್ಕಗಳಿಂದ ಹೊರತೆಗೆದು ಒಂದು ಅಸಾಧಾರಣವಾದ ನಂಬಿಕೆಯ ಮಟ್ಟದೊಳಗೆ ನಿಮ್ಮನ್ನು ಇಡುತ್ತದೆ.

ನನಗೆ ಅನುಭವವಾದ ಮತ್ತೊಂದು ಸಂಗತಿಯೆಂದರೆ, ನಾನು ಅನ್ಯಭಾಷೆಯಲ್ಲಿ ಪ್ರಾರ್ಥಿಸಿದಾಗ, ವರ್ಷಾನುಗಟ್ಟಲೆ ನೆನಪಿಸಿಕೊಳ್ಳದಿದ್ದ ಜನರೆಲ್ಲರೂ ನನ್ನ ಜ್ಞಾಪಕಕ್ಕೆ ಬಂದರು. ನಾನು ಅವರಿಗಾಗಿ ಪ್ರಾರ್ಥಿಸಲಾರಂಭಿಸಿದೆ, ಆಗ ಎರಡು ಅಥವಾ ಮೂರು ದಿನದೊಳಗಾಗಿ, ಅವರು ನನ್ನನ್ನು ಸಂಪರ್ಕಿಸುತ್ತಿದ್ದರು ಮತ್ತು ಅಲ್ಲಿ ಏನೋ ಅದ್ಭುತವಾದ ಸಂಗತಿಗಳು ಜರುಗಿರುವದನ್ನು ನಾನು ಕಾಣುತ್ತಿದ್ದೆ. ಇದು ಅನೇಕ ಬಾರಿ ನಡೆದಿದೆ, ಕೊನೆಗೆ ನಾನು ಇವೆಲ್ಲವನ್ನೂ ಒಟ್ಟಾಗಿ ಸೇರಿಸಿ, ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ನನ್ನ ಮಾನಸಿಕ ಸಾಮರ್ಥ್ಯಕ್ಕಿಂತಲೂ ಮಿಗಿಲಾಗಿರುವ ಜ್ಞಾನದೊಂದಿಗೆ ನಾನು ಪ್ರಾರ್ಥಿಸುತ್ತಿದ್ದೆನು ಎಂಬುದನ್ನು ಗ್ರಹಿಸಿದೆನು. ಎಲ್ಲಾ ಸಂಗತಿಗಳನ್ನು ಅರಿತಿದ್ದ ನನ್ನ ಆತ್ಮಕ್ಕೆ, ಕ್ರಿಸ್ತನ ಮನಸ್ಸಿತ್ತು ಮತ್ತು ನಾನು ನನ್ನ ಸ್ವಂತ ಶಾರೀರಿಕವಾದ ತಿಳುವಳಿಕೆಯಿಂದ ಎಂದಿಗೂ ಮಾಡಲು ಸಾಧ್ಯವಾಗದಿದ್ದ ವಿಧದಲ್ಲಿ ನನ್ನ ಆತ್ಮವು ಜನರಿಗಾಗಿ ಪ್ರಾರ್ಥಿಸುತ್ತಿತ್ತು.

ಒಂದು ದಿನ ನಾನುಅನ್ಯಭಾಷೆಯಲ್ಲಿ ಪ್ರಾರ್ಥಿಸುತ್ತಿದ್ದೆ – ನಾನು ಹೇಳಿದಂತೆ, ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದಕ್ಕೆ ನಂಬಿಕೆಯೇ ಮುಖ್ಯವಾಗಿತ್ತು. ಆದರೆ ಕೆಲವು ಆಲೋಚನೆಗಳಿಂದ ಹೋರಾಡುತ್ತಿದ್ದೆ, *ಅಂದರೆ ನೀನು ನಿನಗೆ ಅರ್ಥವಾಗದ ಆ ಭಾಷೆಯಲ್ಲಿ ಮಾತನಾಡುವುದರ ಬದಲು ಆಂಗ್ಲ ಭಾಷೆಯಲ್ಲಿಯೇ ಮಾತನಾಡುತ್ತಾ, ಕೆಲವು ಒಳ್ಳೆಯ ಕಾರ್ಯಗಳನ್ನು ಮಾಡಬಹುದು ಎಂಬಂಥಹ ಆಲೋಚನೆಗಳೊಂದಿಗೆ ಹೋರಾಡುತ್ತಿದ್ದೆ.* ನಾನು ಈ ಆಲೋಚನೆಗಳನ್ನು ಜಯಿಸಿ, ಅವುಗಳನ್ನು ಕೆಳಗೆ ಹಾಕಿ, ನಂತರ ಪ್ರಾರ್ಥಿಸುತ್ತಲೇ ಇದ್ದೆ. ನಾನು ನಾಲ್ಕು ವರ್ಷಗಳಿಂದ ನೋಡದಿದ್ದಂತಹ ಒಬ್ಬ ವ್ಯಕ್ತಿಯು ನಮ್ಮ ಮನೆಯ ಬಾಗಿಲನ್ನು ತಟ್ಟಿದರು. ಅವರು ಒಳಗೆ ಬಂದರು, ನನಗೆ ನಮಸ್ಕಾರವನ್ನೂ ಹೇಳದೆ, ಮಾತನ್ನೂ ಆಡದೆ, ಬಂದು ಕುಳಿತುಕೊಂಡು ಅಳುವುದಕ್ಕೆ ಪ್ರಾರಂಭಿಸಿದರು ಹಾಗೂ ಎಲ್ಲಾ ಸಂಗತಿಗಳನ್ನು ಹೇಳುತ್ತಿದ್ದರು, ಏಕೆಂದರೆ ಅವರು ಬಹಳ ಸಮಸ್ಯೆಗಳಲ್ಲಿದ್ದರು. *ನಾನು ಅಲ್ಲಿ ಕುಳಿತು, ಓಹ್, ನಾನು ಆಂಗ್ಲಭಾಷೆಯಲ್ಲಿ ಪ್ರಾರ್ಥಿಸಬಹುದಾಗಿತ್ತು ಎಂದು ಆಲೋಚಿಸುತ್ತಿರುವಾಗ, ಮತ್ತೊಂದು ಆಲೋಚನೆ ಹೀಗೆ ಬಂದಿತು, ನಾನು ನಾಲ್ಕು ವರ್ಷಗಳಿಂದ ನೋಡದಿದ್ದಂತಹ ಈ ವ್ಯಕ್ತಿಗಾಗಿ ನಾನು ಹೇಗೆ ಪ್ರಾರ್ಥಿಸಲು ಸಾಧ್ಯವಾಗುತ್ತಿತ್ತು?* ಕೊನೆಗೆ, ನನಗಿದು ಅರ್ಥವಾಯಿತು – ನಾನು ಪ್ರಾರ್ಥಿಸುತ್ತಲೇ ಇದ್ದೆ ಮತ್ತು ದೇವರು ನನ್ನನ್ನು ಸಿದ್ಧಪಡಿಸುತಲಿದ್ದನು ಎಂಬುದು ನನಗೆ ಹೊಳೆಯಿತು. ಈ ವ್ಯಕ್ತಿಗಾಗಿ ನಾನು ನನ್ನ ಬುದ್ಧಿಯಿಂದ ಪ್ರಾರ್ಥಿಸುತ್ತಿರುವಾಗ

ಮಾಡಲಾಗದಂತಹ ರೀತಿಯಲ್ಲಿ ನಾನು ಆತನಿಗಾಗಿ ವಿಜ್ಞಾಪನೆ ಮಾಡುತ್ತಲಿದ್ದೆನು. ತಕ್ಷಣವೇ, ಒಂದು ಪ್ರಕಟಣೆಯು ನನಗೆ ಬರಲಾರಂಭಿಸಿತು ಮತ್ತು ನಾನು ಆತನಿಗೆ, "ನಿನ್ನ ಸಮಸ್ಯೆ ಏನೆಂದು ನಾನು ಹೇಳಬಲ್ಲೆ" ಅಂದೆನು. ನಾನೇ ಆತನ ಕಥೆಯನ್ನು ಹೇಳಿ ಮುಗಿಸಿದೆನು ಮತ್ತು ಆತನಿಗೆ ಬೇಕಾದ ಉತ್ತರವನ್ನೂ ನೀಡಿದೆನು.

ಇದು ನಾನು ಒಂದು ಪಂಗಡದ ಸಭೆಯಲ್ಲಿದ್ದಂತಹ ಸಮಯದಲ್ಲಿ ನಡೆದಂತಹ ಸಂಗತಿ ಎಂಬುದನ್ನು ನೀವು ಗ್ರಹಿಸಬೇಕು. ನನಗೆ ಏನಾಗಿತ್ತು ಎಂಬುದು ಆ ವ್ಯಕ್ತಿಗೆ ತಿಳಿದಿರಲಿಲ್ಲ ಮತ್ತು ನನಗೂ ಸಹ ಖಚಿತವಾಗಿ ತಿಳಿದಿರಲಿಲ್ಲ. ಇದು ನಮ್ಮಿಬ್ಬರನ್ನೂ ಗಾಭರಿಗೊಳಿಸುವಂತದ್ದು. ಆದರೆ ಇಲ್ಲಿ ದೇವರ ಬಲವು ಪ್ರಕಟಗೊಂಡಿತ್ತು ಮತ್ತು ಇದನ್ನು ಆತನು ಅಸಾಧಾರಣವಾಗಿ ಉಪಯೋಗಿಸಿದನು. ಇದರ ಅರ್ಥವೇನೆಂದರೆ, ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ನಿಮ್ಮ ಆತ್ಮವು ಪ್ರಾರ್ಥಿಸುತ್ತಿರುತ್ತದೆ. ನಿಮ್ಮ ಆತ್ಮವು ತಿರುಗಿ ಹುಟ್ಟಿದೆ, ಅದಕ್ಕೆ ಕ್ರಿಸ್ತನ ಮನಸ್ಸುಂಟು, ಮತ್ತು ನಿರ್ಧಿಷ್ಟವಾಗಿ ಏನು ಮಾಡಬೇಕು ಎಂಬುದು ಅದಕ್ಕೆ ತಿಳಿದಿದೆ. ಈ ನಿಮ್ಮ ಆತ್ಮಕ್ಕೆ ದೇವರಿಂದ ಒಂದು ಅಭಿಷೇಕ ಉಂಟು, ಹಾಗಾಗಿ ನೀವು ಎಲ್ಲಾ ಸಂಗತಿಗಳನ್ನು ಅರಿತುಕೊಳ್ಳುವಿರಿ ಮತ್ತು ನಿಮ್ಮ ಆತ್ಮದಲ್ಲಿ ಯಾವುದೇ ಮಿತಿ ಇರುವುದಿಲ್ಲ. ನಿಮ್ಮ ಆತ್ಮದ ಬಲದಲ್ಲಿ ಮತ್ತು ಪ್ರಕಟಣೆಯಲ್ಲಿ ನೀವು ನಡೆಯುವುದಾದರೆ, ಇದು ನಿಮ್ಮ ಶಾರೀರಿಕ ಜೀವಿತವನ್ನು ಮಾರ್ಪಡಿಸುತ್ತದೆ. ಇದನ್ನು ಮಾಡುವ ಒಂದು ಮಾರ್ಗವೆಂದರೆ, ಇದೊಂದೇ ಮಾರ್ಗವೆಂಬುದಾಗಿ ಇರದಿದ್ದರೂ ಸಹ, ನೀವು ಅನ್ಯಭಾಷೆಯಲ್ಲಿ ಮಾತನಾಡುವುದನ್ನು ಪ್ರಾರಂಭಿಸಬೇಕು. ಇದನ್ನು ನೀವು ಮಾಡುವಾಗ, ನೀವು ನಿಮ್ಮ ಅತಿಪರಿಶುದ್ಧವಾದ ನಂಬಿಕೆಯಲ್ಲಿ ನಿಮ್ಮನ್ನು ಕಟ್ಟುತ್ತಿರುವಿರಿ ಎಂಬುದನ್ನು ಗುರುತಿಸಿರಿ ಹಾಗೂ ನಂಬಿರಿ. ಅಂದರೆ ನಿಮ್ಮ ಆತ್ಮವು ದೇವರ ರಹಸ್ಯವಾದ ಜ್ಞಾನದಲ್ಲಿ ಪ್ರಾರ್ಥಿಸುತ್ತಿದೆ ಮತ್ತು ದೇವರ ಪರಿಪೂರ್ಣವಾದ ಪ್ರಕಟಣೆಯು ಬರುತ್ತಿದೆ ಎಂಬುದನ್ನು ಗುರುತಿಸಿರಿ ಹಾಗೂ ನಂಬಿರಿ. ನಂತರ 1 ಕೊರಿಂಥ 14:13ರ ಪ್ರಕಾರ, ನೀವು ಇದಕ್ಕೆ ಅರ್ಥವನ್ನು ಹೇಳುವಂತ ಪ್ರಾರ್ಥನೆ ಮಾಡಿ. ಅಂದರೆ ನೀವು ಅನ್ಯಭಾಷೆಯಲ್ಲಿ ಮಾತನಾಡುವುದನ್ನು ನಿಲ್ಲಿಸಿ, ಅರ್ಥ ಹೇಳುವುದಕ್ಕಾಗಿ ನಿಮ್ಮ ಭಾಷೆಯಲ್ಲಿ ಪ್ರಾರ್ಥಿಸಬೇಕು ಎಂಬ ಅರ್ಥವಲ್ಲ; ಅಂದರೆ ನಿಮ್ಮ ಬುದ್ಧಿಯು ಫಲಭರಿತವಾಗಬೇಕು ಎಂಬುದೇ ಆಗಿದೆ.

ನೀವು ಸಭೆಯ ಕೂಟದಲ್ಲಿ ಅನ್ಯಭಾಷೆಯಲ್ಲಿ ಪ್ರಸಂಗ ನೀಡುವುದಾದರೆ, ಅದನ್ನು ನಿಲ್ಲಿಸಿ, ಅದಕ್ಕೆ ಅರ್ಥವನ್ನು ನಿಮ್ಮ ಸ್ವಂತ ಭಾಷೆಯಲ್ಲಿ ತಿಳಿಸಬೇಕು. ನೀವೇ ಖುದ್ದಾಗಿ ಪ್ರಾರ್ಥಿಸುವಾಗ, ನಾನು ಮಾಡುವುದೇನೆಂದರೆ, ಅನ್ಯಭಾಷೆಯಲ್ಲಿ ಪ್ರಾರ್ಥಿಸಿ, ದೇವರು ನನಗೆ ಪ್ರಕಟಣೆಯನ್ನು ನೀಡುತ್ತಿರುವನು ಎಂದು ನಂಬುತ್ತೇನೆ. ಕೆಲವೊಮ್ಮೆ ನನ್ನ ಮನೋಭಾವನೆಯೂ ತನ್ನಷ್ಟಕ್ಕೆ ಬದಲಾಗುತ್ತದೆ. ನನ್ನ ಬಳಿ ಯಾವುದೇ ಒಂದು ನಿರ್ಧಿಷ್ಟವಾದ ಮಾತು ಇರುವುದಿಲ್ಲ, ಆದರೆ ಇದ್ದಕ್ಕಿದ್ದಂತೆ ನಾನು ಸಂಗತಿಗಳನ್ನು ಸ್ಪಷ್ಟವಾಗಿ ನೋಡುತ್ತೇನೆ ಮತ್ತು ಒಂದು ವಿಭಿನ್ನವಾದ ದೃಷ್ಟಿಕೋನವನ್ನು ಪಡೆಯುತ್ತೇನೆ.

ಇದು ನಾನು ಪ್ರಕಟಣೆಯನ್ನು ಪೂರ್ಣವಾಗಿ ಹೊಂದುವುದಕ್ಕಿಂತ ಒಂದು ವಾರದ ಮೊದಲೇ ಹೀಗಾಗಬಹುದು, ಆದರೆ ನಾನು ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದಕ್ಕೆ ಮತ್ತು ಅದರ ಅರ್ಥವಿವರಣೆಗಾಗಿ ಕಳೆದಂತಹ ಸಮಯವು ಅದರದೇ ಭಾಗವಾಗಿದೆ ಎಂದು ನಂಬುತ್ತೇನೆ.

ಅನೇಕ ಕಾರಣಗಳಿಗಾಗಿ ಅನ್ಯಭಾಷೆಯಲ್ಲಿ ಮಾತನಾಡುವುದು ಪ್ರಾಮುಖ್ಯವಾಗಿದೆ. ಇದು ನೀವು ಪವಿತ್ರಾತ್ಮನನ್ನು ಪಡೆದಿರುವಿರಿ ಎಂಬುದನ್ನು ರುಜುಪಡಿಸುವುದಕ್ಕಿಂತಲೂ ಅಧಿಕವಾದುದಾಗಿದೆ. ಇದು ದೈನಂದಿನ ಜೀವಿತದ ಒಂದು ಭಾಗವಾಗಿರಬೇಕು. ಇದು ನೇರವಾಗಿ ನಿಮ್ಮ ಹೃದಯದಿಂದ ತಂದೆಯೊಂದಿಗೆ ಸಂಪರ್ಕ ಹೊಂದುವುದಕ್ಕೆ ಒಂದು ಮಾರ್ಗವಾಗಿದೆ, ಅಂದರೆ ನಿಮ್ಮ ಮಿದುಳಿನಲ್ಲಿರುವ ಸಂದೇಹಗಳನ್ನು ಮತ್ತು ಭಯಗಳನ್ನು ದಾಟಿ ಹೋಗುವಂತಹುದಾಗಿದೆ. ಇದು ನಿಮ್ಮನ್ನು ಅತಿಪರಿಶುದ್ಧವಾದ ನಂಬಿಕೆಯಲ್ಲಿ ಕಟ್ಟುತ್ತದೆ ಮತ್ತು ದೇವರ ರಹಸ್ಯವಾದ ಜ್ಞಾನವನ್ನು ಬಿಡುಗಡೆ ಮಾಡುತ್ತದೆ. ನೀವೆಲ್ಲರೂ ಇದರಲ್ಲಿ ಮುಂದುವರೆಯುವುದಕ್ಕೆ, ನಿಮ್ಮ ನಂಬಿಕೆಯನ್ನು ಬಿಡುಗಡೆ ಮಾಡುವುದಕ್ಕೆ ಮತ್ತು ಅನ್ಯಭಾಷೆಯಲ್ಲಿ ಮಾತನಾಡುವುದರ ಸಂಪೂರ್ಣ ಪ್ರಯೋಜನವನ್ನು ಪಡೆಯುವುದಕ್ಕೆ ಶಕ್ತರಾಗುವಂತೆ ನಾನು ಪ್ರಾರ್ಥಿಸುತ್ತೇನೆ.

## ಶಿಷ್ಯತ್ವದ ಪ್ರಶ್ನೆಗಳು
## ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಯೂದ 1:20 ನ್ನು ಓದಿರಿ. ಪವಿತ್ರಾತ್ಮನಲ್ಲಿ ಪ್ರಾರ್ಥಿಸುವುದರಿಂದ ಯಾವ ಶ್ರೇಷ್ಠ ಪ್ರಯೋಜನವನ್ನು ಪಡೆಯುವಿರಿ?

**ಯೂದ 1:20 –** *ಪ್ರಿಯರೇ, ನೀವಾದರೋ ನಿಮಗಿರುವ ಅತಿಪರಿಶುದ್ಧವಾದ ಕ್ರಿಸ್ತನಂಬಿಕೆಯನ್ನು ಆಧಾರ ಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ ಪವಿತ್ರಾತ್ಮ ಪ್ರೇರಿತರಾಗಿ ಪ್ರಾರ್ಥನೆ ಮಾಡುತ್ತಾ...*

2. ಅ.ಕೃ. 2:4 ನ್ನು ಓದಿರಿ. ಎಷ್ಟು ಮಂದಿ ಪವಿತ್ರಾತ್ಮಭರಿತರಾದರು?

**ಅ.ಕೃ. 2:4 –** *ಆಗ ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.*

3. ಅ.ಕೃ. 2:4 ನ್ನು ಓದಿರಿ. ತುಂಬಲ್ಪಟ್ಟ ಕಾರಣದಿಂದ ಅವರು ಏನು ಮಾಡಿದರು?

4. 1 ಕೊರಿಂಥ 14:14 ನ್ನು ಓದಿರಿ. ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸುತ್ತಿರುವಾಗ ನಿಮ್ಮಲ್ಲಿ ಯಾವ ಭಾಗವು ಪ್ರಾರ್ಥನೆ ಮಾಡುತ್ತಿರುವುದು?

**1 ಕೊರಿಂಥ 14:14** – *ಯಾಕಂದರೆ ನಾನು ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗಿರುವದು.*

5. 1 ಕೊರಿಂಥ 14:2 ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುವಾಗ, ಅವನು ಯಾರೊಂದಿಗೆ ಮಾತನಾಡುವನು?

**1 ಕೊರಿಂಥ 14:2** – *ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಆಡುವದಿಲ್ಲ. ಅವನು ಆತ್ಮಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ.*

6. 1 ಕೊರಿಂಥ 14:2ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುವಾಗ, ಇದರಲ್ಲಿ ಏನು ಹೇಳಲಾಗುತ್ತಿದೆ ಎಂಬುದನ್ನು ಜನರು ಅರ್ಥಮಾಡಿಕೊಳ್ಳಬಲ್ಲರೇ?

7. 1 ಕೊರಿಂಥ 14:2ನ್ನು ಓದಿರಿ. ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ನಿಮ್ಮ ಆತ್ಮವು ಏನನ್ನು ನುಡಿಯುತ್ತಿರುತ್ತದೆ?

8. 1 ಕೊರಿಂಥ 14:4ನ್ನು ಓದಿರಿ. ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ನೀವು ಏನು ಮಾಡುತ್ತಿರುವಿರಿ?

**1 ಕೊರಿಂಥ 14:4** – *ವಾಣಿಯನ್ನಾಡುವವನು ತನಗೆ ಮಾತ್ರ ಭಕ್ತಿವೃದ್ಧಿಯನ್ನುಂಟು ಮಾಡುತ್ತಾನೆ; ಪ್ರವಾದಿಸುವವನು ಸಭೆಗೆ ಭಕ್ತಿವೃದ್ಧಿಯನ್ನುಂಟು ಮಾಡುತ್ತಾನೆ.*

**1 ಕೊರಿಂಥ 14:16** – *ನೀನು ಆತ್ಮದಿಂದ ಮಾತ್ರ ದೇವರ ಸ್ತೋತ್ರ ಮಾಡಿದರೆ ಆ ವರವನ್ನು ಹೊಂದದಿರುವ ಸಭೆಯವನಿಗೆ ನೀನು ಹೇಳಿದ್ದು ತಿಳಿಯದೆ ಇರುವದರಿಂದ ನೀನು ಮಾಡುವ ಕೃತಜ್ಞತಾಸ್ತುತಿಗೆ ಅವನು ಆಮೆನ್ ಎಂದು ಹೇಗೆ ಹೇಳಾನು?*

## ಉತ್ತರಗಳು

1. ಯೂದ 1:20ನ್ನು ಓದಿರಿ. ಪವಿತ್ರಾತ್ಮನಲ್ಲಿ ಪ್ರಾರ್ಥಿಸುವುದರಿಂದ ಯಾವ ಶ್ರೇಷ್ಠ ಪ್ರಯೋಜನವನ್ನು ಪಡೆಯುವಿರಿ?

**ನಾನು ಪವಿತ್ರಾತ್ಮನಲ್ಲಿ ಪ್ರಾರ್ಥಿಸುವಾಗ, ನನ್ನನ್ನು ನಾನು ಕಟ್ಟುತ್ತಿರುವೆನು**

2. ಅ.ಕೃ. 2:4ನ್ನು ಓದಿರಿ. ಎಷ್ಟು ಮಂದಿ ಪವಿತ್ರಾತ್ಮ ಭರಿತರಾದರು?

**ಎಲ್ಲರೂ**

3. ಅ.ಕೃ. 2:4ನ್ನು ಓದಿರಿ. ತುಂಬಲ್ಪಟ್ಟ ಕಾರಣದಿಂದ ಅವರು ಏನು ಮಾಡಿದರು?

**ಅವರು ಅನ್ಯಭಾಷೆಯಲ್ಲಿ ಮಾತನಾಡಿದರು**

4. 1 ಕೊರಿಂಥ 14:14ನ್ನು ಓದಿರಿ. ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸುತ್ತಿರುವಾಗ ನಿಮ್ಮಲ್ಲಿ ಯಾವ ಭಾಗವು ಪ್ರಾರ್ಥನೆ ಮಾಡುತ್ತಿರುವುದು?

**ನನ್ನ ಆತ್ಮವು ಪ್ರಾರ್ಥಿಸುತ್ತಿರುತ್ತದೆ**

5. 1 ಕೊರಿಂಥ 14:2ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುವಾಗ, ಅವನು ಯಾರೊಂದಿಗೆ ಮಾತನಾಡುವನು?

**ದೇವರೊಂದಿಗೆ**

6. 1 ಕೊರಿಂಥ 14:2ನ್ನು ಓದಿರಿ. ಒಬ್ಬ ವ್ಯಕ್ತಿಯು ಅನ್ಯಭಾಷೆಯಲ್ಲಿ ಮಾತನಾಡುವಾಗ, ಇದರಲ್ಲಿ ಏನು ಹೇಳಲಾಗುತ್ತಿದೆ ಎಂಬುದನ್ನು ಜನರು ಅರ್ಥಮಾಡಿಕೊಳ್ಳಬಲ್ಲರೇ?

**ಇಲ್ಲ**

7. 1 ಕೊರಿಂಥ 14:2ನ್ನು ಓದಿರಿ. ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ನಿಮ್ಮ ಆತ್ಮವು ಏನನ್ನು ನುಡಿಯುತ್ತಿರುತ್ತದೆ?

**ರಹಸ್ಯಾರ್ಥಗಳು, ಮರ್ಮಗಳು, ನನ್ನ ಮತ್ತು ದೇವರ ನಡುವೆ ಮಾತ್ರ ನಿಕಟತೆ**

8. 1 ಕೊರಿಂಥ 14:4ನ್ನು ಓದಿರಿ. ನೀವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ನೀವು ಏನು ಮಾಡುತ್ತಿರುವಿರಿ?

**ಸ್ತುತಿಸಿ, ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ**

# CONTACT DETAILS

## INDIA

www.awmindia.net info@awmindia.net

**Locations:**

### Hyderabad

42-343/1/188, Near Flora Hotel, Maruthi Nagar

A S Rao Nagar, Hyderabad 500 040, INDIA.

Ph: (040) 4028 0718

### Chennai

72-D, Nandhini Mahal, I Floor, Velachery Main Road

Velachery, Chennai 600 042, INDIA.

Ph: (044) 4202 1820

### Mumbai

Bethel, Plot No 305/E, Mith Chowky, Near Girdhar Park

Malad (W), Mumbai 400 064, INDIA.

Ph: +91 8976549515

### Delhi

Phone: +91 9560591787

## USA

Andrew Wommack Ministries Inc.

PO Box 3333, Colorado Springs CO 80934-3333

www.awmi.net

## UK

Andrew Wommack Ministries - Europe

PO Box 4392, Walsall, WS1 9AR, ENGLAND

www.awme.net

# Charis Bible Colleges

And the things that thou hast heard of me among many witnesses, the same commit thou to faithful men, who shall be able to teach others also. 2 Tim 2:2

The Lord led Andrew to start Charis Bible College (CBC) to equip the saints for the work of ministry with a profound message emphasizing God's Unconditional Love and the balance of Grace and Faith. CBC equips the students giving them rich teaching of God's Word as well as practical hands-on ministry experience.

CBC is not just another bible college, it's a school for life! It is for people from all walks of life whether you are a preacher, businessman, mum, dad or grandparent.



You can learn from the 'school of hard knocks.' I certainly have. But I don't recommend it! There's a better way to learn; it's Charis Bible College.

Andrew Wommack,
President & Founder

There are three course options to match your own schedule: Full Time, Part Time and Correspondence. In Full Time, you can fully immerse yourself in the Word for 8 months in a grace-filled family atmosphere, or join Part Time on weekends, or study the CBC material at home through Correspondence!

*We invite you to take the step of faith and join our CBC family !*

Contact us for further information:
**Chennai:** Ph: (044)-4202 1820

**Hyderabad:** Ph: (040)- 40280718

**Mumbai:** Ph: +91 8976549515

**Delhi:** Ph: +91 9560591787

info@awmindia.net www. charisbiblecollegeindia.org

# ಸಂಪೂರ್ಣ ಶಿಷ್ಯತ್ವದ ಸುವಾರ್ತೆ

## 48 – ಪಾಠಗಳ ಕೋರ್ಸ್

### ಹಂತ 2

### Level 2 (16 Lessons)

ಆಂಡ್ರೂ ವ಼ಾಮಕ್

ಮತ್ತು

ಡೂಣ್ ಡಬ್ಲ್ಯೂ. ಕ್ರೊ

Copyright © 2012, Andrew Wommack
Permission is granted to duplicate or reproduce
for discipleship purposes on the condition that
it is distributed free of charge.

Andrew Wommack Ministries, Inc.
P.O. Box 3333
Colorado Springs, CO 80934-3333
www.awmi.net

The Complete Discipleship Evangelism
48-Lesson Course © 2012
Level 2 (16 Lessons)

Copyright © 2012, Andrew Wommack
Permission is granted to duplicate or reproduce
for discipleship purposes on the condition that
it is distributed free of charge.

Andrew Wommack Ministries Inc.
P.O. Box 3333, Colorado Springs, CO 80934-3333
www.awmi.net

Title in Kannada: ಸಂಪೂರ್ಣ ಶಿಷ್ಯತ್ವದ ಸುವಾರ್ತೆ – ಹಂತ 2

© 2020 Andrew Wommack Ministries India
info@awmindia.net www.awmindia.net

Item Code: KA 417-2/3

Published and sold by Charis Initiatives Pvt. Ltd.

## ಸಂಪೂರ್ಣ ಶಿಷ್ಯತ್ವದ ಸುವಾರ್ತೆ

## 48 ಪಾಠಗಳ ಕೋರ್ಸ್ ಅನುಕ್ರಮಣಿಕೆ

### ಹಂತ 2


1. ಸ್ವಾರ್ಥಭಾವ: ಎಲ್ಲಾ ದುಃಖದ ಮೂಲ 5
2. ದೇವರ ವಾಕ್ಯವನ್ನು ಧ್ಯಾನಿಸುವುದು ಹೇಗೆ 13
3. ಮನಸ್ಸನ್ನು ನೂತನಪಡಿಸಿಕೊಳ್ಳುವುದು 18
4. ಕ್ರಿಸ್ತನ ಸಭೆಯ ಪ್ರಾಮುಖ್ಯತೆ 25
5. ಬಿಡುಗಡೆ 36
6. ವಿಶ್ವಾಸಿಯ ಅಧಿಕಾರ 45
7. ಪ್ರಾಯಶ್ಚಿತ್ತದಲ್ಲಿ ಸ್ವಸ್ಥತೆಯುಂಟು 55
8. ಸ್ವಸ್ಥತೆಗಿರುವ ತಡೆಗಳು 63
9. ಇತರರನ್ನು ಕ್ಷಮಿಸುವುದು 73
10. ದಾಂಪತ್ಯ – ಭಾಗ 1 84
11. ದಾಂಪತ್ಯ – ಭಾಗ 2 92
12. ದೇವರ ರೀತಿಯ ಪ್ರೀತಿ – ಭಾಗ 1 102
13. ದೇವರ ರೀತಿಯ ಪ್ರೀತಿ – ಭಾಗ 2 111
14. ಹಣಕಾಸು – ಭಾಗ 1 119
15. ಹಣಕಾಸು – ಭಾಗ 2 126
16. ನಿಮ್ಮ ಪ್ರಾರ್ಥನೆಗಳಿಗೆ ಉತ್ತರವಿಲ್ಲ ಎಂಬಂತಿರುವಾಗ ಏನು ಮಾಡಬೇಕು 132

# ಸಂಪೂರ್ಣ ಶಿಷ್ಯತ್ವದ ಸುವಾರ್ತೆ

## ಹಂತ 2

# ಪಾಠ 1

# ಸ್ವಾರ್ಥಭಾವ: ಎಲ್ಲಾ ದುಃಖದ ಮೂಲ

*ಆಂಡ್ರೂ ವ್ಹಾಮಕ್*

ನಾವು ಅನುಭವಿಸುವ ಅನೇಕ ದುಃಸ್ಥಿತಿಗಳಿಗೆ ಸ್ವಾರ್ಥಭಾವವೇ ಮೂಲಕಾರಣ. ನೀವು ನಿಜವಾಗಿಯೂ ಓದಲೇಬೇಕಾದ ಗಮವಿಡಬೇಕಾದ ಮಾತೊಂದು, ಜ್ಞಾನೋಕ್ತಿ 13ರಲ್ಲಿ ಅದೆ ಮತ್ತು ಅದನ್ನು ನಿಮ್ಮ ಸತ್ಯವೇದದಲ್ಲಿಯೇ ಓದದಿದ್ದರೆ ನೀವು ನಂಬದೇ ಹೋಗಬಹುದು. 10ನೇ ವಚನವು ಹೇಳುತ್ತದೆ, *"ಹೆಮ್ಮೆಯ ಫಲವು ಕಲಹವೇ, ಬುದ್ಧಿವಾದಕ್ಕೆ ಕಿವಿಗೊಡುವವರಲ್ಲಿ ಜ್ಞಾನ."* ಅನೇಕರು ಮೊದಲ ಬಾರಿಗೆ ಇದನ್ನು ಓದಿದಾಗ, – "ಸ್ವಲ್ಪ ತಾಳಿರಿ. ಕಲಹವನ್ನು ಅಥವಾ ಜಗಳವನ್ನು ಉಂಟುಮಾಡುವುದು ಹೆಮ್ಮೆ ಮಾತ್ರವೇ ಅಲ್ಲ. ಜ್ಞಾನೋಕ್ತಿಗಳು 17:14 ಹೇಳುತ್ತದೆ, ಕಲಹವು ವ್ಯಾಜ್ಯದ ಆರಂಭವಾಗಿದೆ, ಹಾಗಾಗಿ ಹೆಮ್ಮೆ ಮಾತ್ರವಲ್ಲದೆ ಬೇರೆ ಸಂಗತಿಗಳೂ ಕಲಹವನ್ನು ಉಂಟುಮಾಡುತ್ತವೆ. ಹೀಗೆ ಜನರು ನನಗೆ ಇಂತಿಂಥದನ್ನು ಮಾಡಿದ್ದಾರೆ" ಎಂದು ದೂರಬಹುದು. ಇನ್ನಿತರರು, "ನಿಮಗಿದು ತಿಳಿಯುವುದಿಲ್ಲ; ನಾನಿರುವುದೇ ಹೀಗೆ" ಎಂದು ಹೇಳುವರು. ಅದೇನಿದ್ದರೂ, ದೇವರ ವಾಕ್ಯದ ಪ್ರಕಾರ, ಹೆಮ್ಮೆಯಿಂದ ಮಾತ್ರವೇ ಕಲಹವು ಉಂಟಾಗುತ್ತದೆ. ಇದು ಮುಂಚೂಣಿಯಲ್ಲಿರುವ ಕಾರಣವಲ್ಲ, ಬದಲಾಗಿ ಇದೇ ಕಾರಣವಾಗಿದೆ. ಇನ್ನೂ ಕೆಲವರು ಪುನಃ ಈ ವಿಷಯವನ್ನು ತೆಗೆದುಕೊಂಡು, "ನನಗೆ ಎಲ್ಲಾ ವಿಧವಾದ ಸಮಸ್ಯೆಗಳಿವೆ, ಆದರೆ ಅವುಗಳಲ್ಲಿ ಹೆಮ್ಮೆ ಸೇರಿಲ್ಲ. ಹೇಳುವುದಾದರೆ, ನನಗಿರುವುದು ಕೀಳರಿಮೆ, ಹೀಗಿರುವಾಗ ನನಗೆ ಹೆಮ್ಮೆ ಇದೆ ಎಂದು ಯಾರೂ ನನ್ನನ್ನು ದೂಷಿಸಲು ಸಾಧ್ಯವಿಲ್ಲ" ಎನ್ನುವರು.

ಮೊದಲಿಗೆ ಹೆಮ್ಮೆ ಎಂದರೆ ಏನು ಎನ್ನುವುದನ್ನು ನಾವು ಪುನಃ ಅರ್ಥೈಸಿಕೊಳ್ಳೋಣ. ಇದು ನೀವು ಬೇರೆಯವರಿಗಿಂತಲೂ ಉತ್ತಮರು ಎಂದು ಆಲೋಚಿಸುವುದಷ್ಟೆ ಅಲ್ಲ, ಸರಳವಾಗಿ ಹೇಳುವುದಾದರೆ, ಎಲ್ಲಾ ಸಂಗತಿಗಳಲ್ಲಿಯೂ ನಿಮಗೇ ಪ್ರಾಮುಖ್ಯತೆಯನ್ನು ನೀಡಿಕೊಳ್ಳುವುದು. ಎಲ್ಲಾ ಹೆಮ್ಮೆಗೆ ಸ್ವಾರ್ಥಭಾವವೇ ಮೂಲವಾಗಿದೆ. ಅರಣ್ಯಕಾಂಡ 12:2ರಲ್ಲಿ ಮೋಶೆಯ ವಿರುದ್ಧವಾಗಿ ಮಿರ್ಯಾಮಳು ಮತ್ತು ಆರೋನನು ಬಂದರು, ಇವರು ಮೋಶೆಯ ಸಹೋದರಿ ಮತ್ತು ಸಹೋದರನು ಆಗಿದ್ದು, ಮೋಶೆಯು ಬೇರೆ ಕುಲದ ಹೆಣ್ಣನ್ನು ಮದುವೆ ಮಾಡಿಕೊಂಡಿದ್ದಕ್ಕೆ ಅವನನ್ನು ಟೀಕಿಸುತ್ತಾ, *"ಯೆಹೋವನು ಮೋಶೆಯ ಮೂಲಕವಾಗಿ ಮಾತ್ರವೇ ಮಾತಾಡಿದ್ದಾನೋ; ನಮ್ಮ ಮೂಲಕವೂ ಆತನು ಮಾತಾಡಲಿಲ್ಲವೇ"* ಅಂದರು. ಇದರ ನಡುವೆ 3ನೇ ವಚನವು ಸೇರ್ಪಡೆಯಾಗಿದೆ, ಮೋಶೆಯು ಭೂಮಿಯ ಮೇಲಿರುವ

ಎಲ್ಲಾ ಮನುಷ್ಯರಿಗಿಂತಲೂ ಬಹುಸಾತ್ವಿಕನು (ದೀನತೆ) ಎಂದು ಹೇಳುತ್ತದೆ. ಅವರು ತನ್ನ ಬಗ್ಗೆ ಹೇಳಿದುದರ ಕುರಿತಾಗಿ ಎದುರು ಮಾತಾಡದೆ, ಮೋಶೆಯು ಅವರಿಗಾಗಿ ಪ್ರಾರ್ಥಿಸಿ ವಿಜ್ಞಾಪಿಸಿದನು.

ಮೋಶೆಯು ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತಲೂ ಬಹುಸಾತ್ವಿಕನು ಎಂದು ಹೇಳುವಾಗ, ಸ್ವಲ್ಪ ತಡೆದು, ಆ ಮಾತನ್ನು ಆಲೋಚಿಸಿರಿ. ಆಗ ಎಷ್ಟು ಮಂದಿ ಭೂಮಿಯ ಮೇಲಿದ್ದರು ಎಂಬುದು ನಮಗೆ ತಿಳಿದಿಲ್ಲ, ಆದರೆ ಖಂಡಿತವಾಗಿಯೂ ಲಕ್ಷಾಂತರ ಮಂದಿ ಇದ್ದಿರಬಹುದು ಮತ್ತು ಈ ಎಲ್ಲಾ ಜನರಿಗಿಂತಲೂ ಮೋಶೆಯು ಬಹುಸಾತ್ವಿಕನಾಗಿದ್ದನು. ಇದು ನಿಜವಾಗಿಯೂ ಒಂದು ಅತ್ಯುದ್ಭುತವಾದ ಹೇಳಿಕೆಯಾಗಿದೆ ಮತ್ತು ಇಲ್ಲಿ ನೀವು ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ಇದನ್ನು ಬರೆದವನು ಮೋಶೆಯೇ. ಅನೇಕರು ಭಾವಿಸುವುದೇನೆಂದರೆ, ನೀವು ನಿಜವಾಗಿ ದೀನತೆಯುಳ್ಳವರು ಅಥವಾ ಸಾತ್ವಿಕರೂ ಆಗಿದ್ದರೆ, ಇದು ನಿಮಗೆ ತಿಳಿದಿರುವುದಿಲ್ಲ ಎಂದು. ಆದರೆ ಅದು ಗರ್ವದ ನಿಜವಾದ ಅರ್ಥಕ್ಕೆ ಹೊಂದದಿರುವ ಒಂದು ತಪ್ಪು ಅಭಿಪ್ರಾಯವಾಗಿದೆ. ಎಲ್ಲರಿಗಿಂತಲೂ ನೀವೇ ಉತ್ತಮರು ಎಂದು ಆಲೋಚಿಸುವುದು ಮಾತ್ರವೇ ಗರ್ವ ಅಥವಾ ಹೆಮ್ಮೆಯಲ್ಲ – ಸ್ವಾರ್ಥಭಾವವು ಸಹ ಗರ್ವವೇ ಆಗಿದೆ. ಇದು ಒಂದೆಡೆ ಕೋಲನ್ನು ಹಿಡಿಯುವುದು ಎಂದಾದರೆ ಮತ್ತೊಂದೆಡೆ ಕೀಳರಿಮೆಯನ್ನು ಹೊಂದಿರುವುದು – ಎರಡೂ ಗರ್ವವೇ. ಇವೆರಡೂ ಒಂದೇ ಸಂಗತಿಯನ್ನು ತದ್ವಿರುದ್ಧವಾಗಿ ವ್ಯಕ್ತಪಡಿಸುವುದಾಗಿದೆ, ಆದರೆ ಇವೆರಡೂ ಒಂದೇ. ಅದೇ ಸ್ವಾರ್ಥಪರತೆ. ನೀವು ಎಲ್ಲರಿಗಿಂತ ಉತ್ತಮರೆಂದೋ ಅಥವಾ ಎಲ್ಲರಿಗಿಂತಲೂ ಕೀಳು ಎಂದೋ ಆಲೋಚಿಸಬಹುದು, ಅದ್ಯಾವುದಿದ್ದರೂ ನೀವು ಸ್ವಾರ್ಥಪರರೇ ಆಗಿರುವಿರಿ. ಇದರ ಮೂಲಕವೇ ಪ್ರತಿಯೊಂದು ಸಂಗತಿಯನ್ನು ನೋಡಲಾಗುತ್ತದೆ. ಭಯದಿಂದ ಕೂಡಿರುವ, ನಾಚಿಕೆ ಸ್ವಭಾವದ ವ್ಯಕ್ತಿ ಬಹಳ ಗರ್ವಿಷ್ಠರೂ ಮತ್ತು ಸ್ವಾರ್ಥಪರರೂ ಆಗಿರುತ್ತಾರೆ, ಅಂದರೆ ಅವರು ತಮ್ಮ ಸ್ವಾರ್ಥದ ಬಗ್ಗೆ ಮಾತ್ರ ಆಲೋಚಿಸುತ್ತಾರೆ.

ನಾನು ಹೇಳಬಯಸುವುದೇನೆಂದರೆ ಎಲ್ಲಾ ಹೆಮ್ಮೆ/ಗರ್ವ ಇವುಗಳಿಗೆ ಸ್ವಾರ್ಥಪರತೆಯೇ ಮೂಲವಾಗಿದೆ, ಮತ್ತೊಮ್ಮೆ ಜ್ಞಾನೋಕ್ತಿ 13:10 *"ಹೆಮ್ಮೆಯ ಫಲವು ಕಲಹವೇ"*, ಎನ್ನುವುದನ್ನು ಗಮನಿಸುವಾಗ, ನಾನು ಕೋಪಗೊಳ್ಳುವಂತೆ ಮಾಡುವುದು ನನ್ನ ಸ್ವಾರ್ಥಪರತೆಯೇ ಹೊರತು, ಜನರು ಮಾಡುವ ಕ್ರಿಯೆಗಳ ಕಾರಣದಿಂದಲ್ಲ ಎಂದು ಅದು ಹೇಳುತ್ತಿದೆ. ನಮ್ಮ ಸ್ವಾರ್ಥಪರತೆಯೇ ಜನರು ನಮಗೆ ಮಾಡುವ ಕಾರ್ಯಗಳಿಗೆ ಪ್ರತಿಕ್ರಿಯಿಸುವಂತೆ ಮಾಡುತ್ತದೆ. ನಿಮ್ಮ ವಿರುದ್ಧವಾಗಿ ಮಾತಾಡುವಂಥ ಜನರನ್ನು ನಿಲ್ಲಿಸುವುದಕ್ಕೆ ನಿಮಗೆ ಎಂದಿಗೂ ಸಾಧ್ಯವಾಗುವುದಿಲ್ಲ; ಇಲ್ಲವೇ ಇಲ್ಲ. ನಂಬಿಕೆಯು ಜನರನ್ನು ನಿಯಂತ್ರಿಸುವುದಕ್ಕಾಗಿ ಇರುವಂತಹುದಲ್ಲ ಬದಲಾಗಿ ನಿಮ್ಮ ಸಮಸ್ಯೆಗಳನ್ನು ಜಯಿಸುವುದಕ್ಕೆ ಮತ್ತು ನಿಮ್ಮ ಅಂತರಾಳದ ಕ್ಷೋಭೆಗಳನ್ನು ಜಯಿಸುವುದಕ್ಕೆ ಸಹಾಯ ಮಾಡುತ್ತದೆ. ಹಾಗಾಗಿ ಜನರು ನಿಮಗೆ ಏನು ಮಾಡುವರೋ ಅದು ಮುಖ್ಯವಲ್ಲ.

ಯೇಸುವನ್ನು ಶಿಲುಬೆಗೆ ಏರಿಸುವಾಗ, ತನ್ನನ್ನು ಶಿಲುಬೆಗೆ ಹಾಕುತ್ತಿರುವವರ ಕಡೆಗೆ ತಿರುಗಿ, "ತಂದೆಯೇ, ಅವರನ್ನು ಕ್ಷಮಿಸು, ಅವರು ಏನು ಮಾಡುತ್ತಿರುವರೋ ಅವರಿಗೆ ಗೊತ್ತಿಲ್ಲ" ಎಂದು ಪ್ರಾರ್ಥಿಸಲು ಶಕ್ತನಾಗಿದ್ದನು. ಆತನು ಆ ಜನರನ್ನು ನಿಯಂತ್ರಿಸಲಿಲ್ಲ, ಆದರೆ ಯೇಸು ತನ್ನ ಮೇಲೆ ನಿಯಂತ್ರಣವನ್ನು ಹೊಂದಿದ್ದನು. ನಮ್ಮಲ್ಲಿರುವ ಸ್ವಾರ್ಥಪರತೆಯು ನಮ್ಮಲ್ಲಿ ಕೋಪವನ್ನು ಬಡಿದೆಬ್ಬಿಸುತ್ತದೆ. ಯೇಸು ತನಗಾಗಿ ಇಲ್ಲಿಗೆ ಬರಲಿಲ್ಲ, ಆದರೆ ಆತನು ಲೋಕವನ್ನು ಪ್ರೀತಿಸಿ, ನಮಗಾಗಿ ಇಲ್ಲಿಗೆ ಬಂದನು. ಆತನು ಶಿಲುಬೆಯ ಮೇಲಿರುವಾಗ ತನ್ನ ತಾಯಿಯ ಕುರಿತಾಗಿ ಆಲೋಚಿಸಿ, ಅಲ್ಲಿದ್ದ ಶಿಷ್ಯನೊಬ್ಬನಿಗೆ ಆಕೆಯನ್ನು ನೋಡಿಕೊಳ್ಳುವಂತೆ ತಿಳಿಸಿದನು. ಯೇಸುವು – ತನಗುಂಟಾದ ನೋವು, ಅನ್ಯಾಯ ಮತ್ತು ತನ್ನ ಮಾರ್ಗದಲ್ಲಿ ಎದುರಾದ ಎಲ್ಲಾ ಸಂಗತಿಗಳ ನಡುವೆಯೂ – ಕ್ಷಮಿಸುವುದಕ್ಕೆ ಮತ್ತು ಪ್ರೀತಿಯಲ್ಲಿ ತನ್ನ ಕಾರ್ಯಗಳನ್ನು ಮಾಡುವುದಕ್ಕೆ ಶಕ್ತನಾಗಿದ್ದರ ಕಾರಣವೇನೆಂದರೆ ಆತನು ಸ್ವಾರ್ಥಪರನಾಗಿರಲಿಲ್ಲ ಎನ್ನುವುದೇ ಆಗಿದೆ.

ನಿಮ್ಮ ಸ್ವಾರ್ಥಪರತೆಯೇ ನಿಮ್ಮ ಕೋಪಕ್ಕೆ ಕಾರಣವಾಗಿರುತ್ತದೆ, ಅಲ್ಲದೆ ನಿಮ್ಮ ಸ್ವಾರ್ಥದ ಪಾಲಿಗೆ ನೀವು ಸಾಯಬೇಕಾಗುತ್ತದೆ ಎಂದು ಸತ್ಯವೇದವು ಹೇಳುತ್ತದೆ. ನನ್ನ ಮುಂದೆ ಹಣ ಇದ್ದಲ್ಲಿ, ನಾನು ಅದನ್ನು ಅವಮಾನಿಸಬಹುದು, ಒದೆಯಬಹುದು, ಮೇಲೆ ಉಗುಳಬಹುದು, ಅಥವಾ ಅಲಕ್ಷಿಸಬಹುದು ಆದರೆ ಅದು ಹಣವೇ ಆಗಿದ್ದಲ್ಲಿ, ಅದು ಪ್ರತಿಕ್ರಿಯಿಸುವುದಿಲ್ಲ. ನಿಮ್ಮ ಸುತ್ತಮುತ್ತಲಿರುವ ಸಂಗತಿಗಳಿಗೆ ನೀವು ಪ್ರತಿಕ್ರಿಯಿಸುವುದು ಅವುಗಳ ನಿಮಿತ್ತವಾಗಿಯಲ್ಲ ಬದಲಾಗಿ ನಿಮ್ಮ ಅಂತರಂಗದೊಳಗೆ ಏನಿದೆಯೋ ಅದರ ನಿಮಿತ್ತ ಪ್ರತಿಕ್ರಿಯಿಸುವಿರಿ. ಎಲ್ಲಾ ಅಡೆತಡೆಗಳನ್ನು ತೆಗೆಯಲು ಮತ್ತು ನಿಮಗೆ ವಿರುದ್ಧವಾಗಿರುವ ಎಲ್ಲಾ ಸಂಗತಿಗಳನ್ನು ನಿವಾರಿಸುವಷ್ಟು ಬಲವಾದ ನಂಬಿಕೆಯು ನಿಮಗೆಂದಿಗೂ ಇಲ್ಲದಿರಬಹುದು. ಆದರೆ ನಿಮ್ಮನ್ನು ನೀವು ನಿಯಂತ್ರಿಸಿಕೊಳ್ಳಲು ಸಾಧ್ಯವಾಗುತ್ತದೆ. ಆಗ ನೀವು ಯೇಸುವನ್ನು ನಿಮ್ಮ ಜೀವನದ ಕರ್ತನನ್ನಾಗಿ ಮಾಡಿಕೊಂಡು, ಸ್ವಪ್ರೇಮಕ್ಕಿಂತಲೂ ಅಧಿಕವಾಗಿ ಕರ್ತನನ್ನು, ಆತನ ರಾಜ್ಯವನ್ನು ಮತ್ತು ಇನ್ನಿತರ ಜನರನ್ನು ಪ್ರೀತಿಸುವಂತಹ ಮಟ್ಟಕ್ಕೆ ಬರಬಹುದು. ನೀವು ಇದನ್ನು ಮಾಡಿದಾಗ, ಸ್ವಾರ್ಥವನ್ನು ತೊಡೆದು ಹಾಕಿದಾಗ ನಿಮ್ಮ ಜೀವನದಲ್ಲಿರುವ ವ್ಯಾಜ್ಯ ಮತ್ತು ಕಲಹವನ್ನು ತಡೆಗಟ್ಟಲು ಸಾಧ್ಯವಾಗುವುದನ್ನು ನೀವು ಕಾಣುವಿರಿ.

ನಿಮ್ಮ ಜೀವನದಲ್ಲಿ ದೇವರು ಮಾಡಿರುವ ಎಲ್ಲಾ ಸಂಗತಿಗಳನ್ನು ಅಳವಡಿಸಿಕೊಳ್ಳುವುದಕ್ಕಾಗಿ ಇರುವ ಅತಿಮುಖ್ಯ ಕೀಲಿಕೈಯೆಂದರೆ ದೇವರು ತನ್ನ ರಾಜ್ಯವನ್ನು ನಿಮ್ಮ ಸ್ವಾರ್ಥಸಾಧನೆಗಾಗಿ ನೀಡಲಿಲ್ಲ ಎಂಬುದನ್ನು ಗ್ರಹಿಸುವಂತಹುದಾಗಿದೆ. ನಿಮ್ಮ ಪ್ರತಿಯೊಂದು ಅಗತ್ಯಗಳನ್ನು ಪೂರೈಸುವ ಸಲುವಾಗಿ ಆತನು ಈ ಸಂಗತಿಗಳನ್ನು ಮಾಡಲಿಲ್ಲ. ನೀವು ನಿಮ್ಮ ಸ್ವಾರ್ಥವನ್ನು ನಿರಾಕರಿಸುವುದರಿಂದ ಮತ್ತು ನಿಮ್ಮ ಪ್ರಾಣವನ್ನು (ಸ್ವಾರ್ಥವನ್ನು) ಕಳಕೊಳ್ಳುವುದರಿಂದ ಮಾತ್ರ ಜೀವನದ ನೈಜತೆಯೆಂದರೆ ಏನು ಎಂಬುದನ್ನು ನೀವು ಕಂಡುಹಿಡಿಯಲಾರಂಭಿಸುವಿರಿ. ಇದು ನಿಮಗಿಂತಲೂ ಅಧಿಕವಾಗಿ ಬೇರೆಯವರನ್ನು ಹಾಗೂ ದೇವರನ್ನು ಪ್ರೀತಿಸುವುದರಿಂದ ನಿಮ್ಮ ಕೋಪವನ್ನು, ನೋವನ್ನು ಹಾಗೂ ನಿಮ್ಮೊಳಗಿರುವ ಇನ್ನಿತರ ಸಂಗತಿಗಳನ್ನು ನಿಷ್ಕ್ರಿಯೆಗೊಳಿಸುವಿರಿ.

ನಾನು ಹೇಳಿರುವ ಈ ಕೆಲವು ಸಂಗತಿಗಳ ಮೂಲಕ ದೇವರು, ನಿಮ್ಮ ಹೃದಯಗಳನ್ನು ತೆರೆದು, ನಿಮಗೆ ಕ್ಷೋಭೆಯುಂಟಾಗಲು ಸ್ವಾರ್ಥಪರತೆಯೇ ಕಾರಣ ಎಂಬುದನ್ನು ನೀವು ಗ್ರಹಿಸುವಂತೆ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಬೇರೊಬ್ಬರ ಮೇಲೆ ತಪ್ಪುಹೊರಿಸುವುದರ ಬದಲು, ನೀವೇ ಅದಕ್ಕೆ ಜವಾಬ್ದಾರರೆನ್ನುವುದನ್ನು ಅರಿತುಕೊಳ್ಳಬೇಕು, ಅದನ್ನು ಎದುರಿಸಬೇಕು. ದೇವರ ಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ ಮತ್ತು ಆತನು ನಿಮ್ಮೊಳಗೆ ಬರುವಂತೆ ಕೇಳಿಕೊಳ್ಳಿರಿ. ಆತನನ್ನು ನಿಮ್ಮ ಜೀವನದಲ್ಲಿ ಉನ್ನತಕ್ಕೆ ಏರಿಸಿರಿ. ಜಯದಲ್ಲಿ ನಡೆಯುವುದಕ್ಕೆ ಇದೇ ನಿಮಗಿರುವ ಮಾರ್ಗವಾಗಿದೆ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಮಾರ್ಕ 9:33–34 ಓದಿರಿ. ಶಿಷ್ಯರು ಕಪೆರ್ನೌಮಿಗೆ ಹೋಗುವ ಮಾರ್ಗದಲ್ಲಿ ಯಾವ ವಿಷಯದ ಕುರಿತಾಗಿ ವಾಗ್ವಾದ ಮಾಡುತ್ತಿದ್ದರು?

   **ಮಾರ್ಕ 9:33–35** – *ಮತ್ತು ಅವರು ಕಪೆರ್ನೌಮಿಗೆ ಬಂದರು. ಅಲ್ಲಿ ಆತನು ಮನೆಯಲ್ಲಿದ್ದಾಗ – ನೀವು ದಾರಿಯಲ್ಲಿ ಏನು ಮಾತಾಡಿಕೊಳ್ಳುತ್ತಿದ್ದಿರಿ ಎಂದು ಶಿಷ್ಯರನ್ನು ಕೇಳಲು ಅವರು ಸುಮ್ಮನಿದ್ದರು; [34] ಯಾಕಂದರೆ ಅವರು ದಾರಿಯಲ್ಲಿ ಒಬ್ಬರಕೂಡೊಬ್ಬರು – [ತಮ್ಮಲ್ಲಿ] ಯಾವನು ಹೆಚ್ಚಿನವನೆಂದು ವಾಗ್ವಾದ ಮಾಡಿಕೊಂಡಿದ್ದರು. [35] ಆತನು ಕೂತುಕೊಂಡು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕರೆದು ಅವರಿಗೆ – ಯಾವನಾದರೂ ಮೊದಲಿನವನಾಗಬೇಕೆಂದಿದ್ದರೆ ಅವನು ಎಲ್ಲರಲ್ಲಿ ಕಡೇಯವನೂ ಎಲ್ಲರ ಆಳೂ ಆಗಿರಬೇಕು.*

2. ಇದು ನಮ್ಮೆಲ್ಲರಲ್ಲಿರುವ ಸ್ವಾರ್ಥತೆಯನ್ನು ಪ್ರತಿಬಿಂಬಿಸುತ್ತದೆಯೇ?

3. ಮಾರ್ಕ 9:35ನ್ನು ಓದಿರಿ. ಈ ವಾಕ್ಯದ ಪ್ರಕಾರ, ಒಬ್ಬ ವ್ಯಕ್ತಿಯು ಮೊದಲಿಗನಾಗಬೇಕೆಂದು ಬಯಸುವುದಾದರೆ, ಅವರು ಏನಾಗಬೇಕು?

4. ಲೂಕ 22:24–27ರಲ್ಲಿ ಇರುವ ಯೇಸುವಿನ ಬೋಧನೆಯನ್ನು ವಿವರವಾಗಿ ತಿಳಿಸಿ.

   **ಲೂಕ 22:24–27** – *ಇದಲ್ಲದೆ ತಮ್ಮಲ್ಲಿ ಯಾವನು ಹೆಚ್ಚಿನವನೆನಿಸಿಕೊಳ್ಳುವನು ಎಂಬ ವಿಷಯದಲ್ಲಿ ಅವರೊಳಗೆ ಚರ್ಚೆ ಹುಟ್ಟಿತು. [25] ಆಗ ಆತನು ಅವರಿಗೆ – ಅನ್ಯದೇಶದ ಅರಸರು ತಮ್ಮ ತಮ್ಮಜನಗಳ ಮೇಲೆ ದೊರೆತನ ಮಾಡುತ್ತಾರೆ, ಮತ್ತು ಅವರ ಮೇಲೆ ಅಧಿಕಾರ ನಡಿಸುವವರು ಧರ್ಮಿಷ್ಠರೆನಿಸಿಕೊಳ್ಳುತ್ತಾರೆ. [26] ನೀವು ಹಾಗಿರಬಾರದು; ನಿಮ್ಮಲ್ಲಿ ಹೆಚ್ಚಿನವನು ಚಿಕ್ಕವನಂತಾಗಬೇಕು, ಮುಖ್ಯಸ್ಥನು ಸೇವಕನಂತಾಗಬೇಕು. [27] ಯಾವನು ಹೆಚ್ಚಿನವನು? ಊಟಕ್ಕೆ ಕೂತವನಲ್ಲವೇ. ಆದರೆ ನಾನು ನಿಮ್ಮಲ್ಲಿ ಸೇವೆ ಮಾಡುವವನಂತಿದ್ದೇನೆ.*

5. ಜ್ಞಾನೋಕ್ತಿ 13:10ನ್ನು ಓದಿರಿ. ಕಲಹವನ್ನು ಉಂಟುಮಾಡುವ ಏಕೈಕ ಸಂಗತಿ ಯಾವುದು?

   **ಜ್ಞಾನೋಕ್ತಿಗಳು 13:10** – *ಹೆಮ್ಮೆಯ ಫಲವು ಕಲಹವೇ, ಬುದ್ಧಿವಾದಕ್ಕೆ ಕಿವಿಗೊಡುವವರಲ್ಲಿ ಜ್ಞಾನ.*

6. ಗಲಾತ್ಯ 2:20 ಓದಿರಿ. ನಾವು ನಮ್ಮ ಜೀವಿತಗಳನ್ನು ಹೇಗೆ ಜೀವಿಸಬೇಕು?

**ಗಲಾತ್ಯ 2:20** – *ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು.*

7. ಮತ್ತಾಯ 7:12 ಓದಿರಿ. ಸ್ವಾರ್ಥಪರತೆಯನ್ನು ತೊಡೆಯಲು ಇರುವ ಪರಿಹಾರವೇನು?

**ಮತ್ತಾಯ 7:12** – *ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ.*

## ಉತ್ತರಗಳು

1. ಮಾರ್ಕ 9:33–34ನ್ನು ಓದಿರಿ. ಶಿಷ್ಯರು ಕಪೆರ್ನೌಮಿಗೆ ಹೋಗುವ ಮಾರ್ಗದಲ್ಲಿ ಯಾವ ವಿಷಯದ ಕುರಿತಾಗಿ ವಾಗ್ವಾದ ಮಾಡುತ್ತಿದ್ದರು?

   **ಯಾರು ಹೆಚ್ಚಿನವನು ಎಂಬುದರ ಬಗ್ಗೆ ವಾದಿಸುತ್ತಿದ್ದರು**

2. ಇದು ನಮ್ಮೆಲ್ಲರಲ್ಲಿ ಸ್ವಾರ್ಥತೆಯನ್ನು ಪ್ರತಿಬಿಂಬಿಸುತ್ತದೆಯೇ?

   **ಹೌದು**

3. ಮಾರ್ಕ 9:35ನ್ನು ಓದಿರಿ. ಈ ವಾಕ್ಯದ ಪ್ರಕಾರ, ಒಬ್ಬ ವ್ಯಕ್ತಿಯು ಮೊದಲಿಗನಾಗಬೇಕೆಂದು ಬಯಸುವುದಾದರೆ, ಅವರು ಏನಾಗಬೇಕು?

   **ಎಲ್ಲರ ಆಳಾಗಿರಬೇಕು**

4. ಲೂಕ 22:24–27ರಲ್ಲಿರುವ ಯೇಸುವಿನ ಬೋಧನೆಯನ್ನು ವಿವರವಾಗಿ ತಿಳಿಸಿ.

   **"ಇದಲ್ಲದೆ ತಮ್ಮಲ್ಲಿ ಯಾವನು ಹೆಚ್ಚಿನವನೆನಿಸಿಕೊಳ್ಳುವನು ಎಂಬ ವಿಷಯದಲ್ಲಿ ಅವರೊಳಗೆ ಚರ್ಚೆ ಹುಟ್ಟಿತು. ಆಗ ಆತನು ಅವರಿಗೆ – ಅನ್ಯದೇಶದ ಅರಸರು ತಮ್ಮ ತಮ್ಮ ಜನಗಳ ಮೇಲೆ ದೊರೆತನ ಮಾಡುತ್ತಾರೆ, ಮತ್ತು ಅವರ ಮೇಲೆ ಅಧಿಕಾರ ನಡಿಸುವವರು ಧರ್ಮಿಷ್ಠರೆನಿಸಿಕೊಳ್ಳುತ್ತಾರೆ. ನೀವು ಹಾಗಿರಬಾರದು; ನಿಮ್ಮಲ್ಲಿ ಹೆಚ್ಚಿನವನು ಚಿಕ್ಕವನಂತಾಗಬೇಕು, ಮುಖ್ಯಸ್ಥನು ಸೇವಕನಂತಾಗಬೇಕು. ಯಾವನು ಹೆಚ್ಚಿನವನು? ಊಟಕ್ಕೆ ಕೂತವನಲ್ಲವೇ. ಆದರೆ ನಾನು ನಿಮ್ಮಲ್ಲಿ ಸೇವೆ ಮಾಡುವವನಂತಿದ್ದೇನೆ" (ಲೂಕ 22:24–27).**

5. ಜ್ಞಾನೋಕ್ತಿ 13:10ನ್ನು ಓದಿರಿ. ಕಲಹವನ್ನು ಉಂಟುಮಾಡುವ ಏಕೈಕ ಸಂಗತಿ ಯಾವುದು?

   **ಹೆಮ್ಮೆ/ಗರ್ವ**

6. ಗಲಾತ್ಯ 2:20ನ್ನು ಓದಿರಿ. ನಾವು ನಮ್ಮ ಜೀವಿತಗಳನ್ನು ಹೇಗೆ ಜೀವಿಸಬೇಕು?

   **ಕ್ರಿಸ್ತನ ಮೇಲಣ ನಂಬಿಕೆಯಿಂದ (ಅಥವಾ ಕ್ರಿಸ್ತನಲ್ಲಿರುವ ನಂಬಿಕೆಯಿಂದ), ನಮ್ಮ ಸ್ವಂತ ಬಲಗಳು ಅಥವಾ ಬಲಹೀನತೆಗಳ ಮೇಲೆ ಕೇಂದ್ರೀಕರಿಸಬಾರದು**

7. ಮತ್ತಾಯ 7:12ನ್ನು ಓದಿರಿ. ಸ್ವಾರ್ಥ–ಮಗ್ನತೆಗಾಗಿ ಇರುವ ಪರಿಹಾರವೇನು?

**ದೇವರಲ್ಲಿ ಮಗ್ನತೆಯಿಡಿ ಆದರೆ ಇನ್ನಿತರರಲ್ಲಿ ಮಗ್ನರಾಗಬೇಡಿ. ನಮ್ಮನ್ನು ನೋಡಿಕೊಳ್ಳಬೇಕೆಂದು ಬಯಸುವ ರೀತಿಯಲ್ಲಿಯೇ ಬೇರೆಯವರನ್ನು ನೋಡಿಕೊಳ್ಳಿ**

# ಪಾಠ 2

# ದೇವರ ವಾಕ್ಯವನ್ನು ಧ್ಯಾನಿಸುವುದು ಹೇಗೆ

***ಡೂಣ್ ಕ್ರೊ***

"*ಧ್ಯಾನ*" ಎಂಬ ಪದದ ಅರ್ಥ, "ಗಾಢವಾಗಿ ಆಲೋಚಿಸುವುದು, ಪರಿಶೀಲಿಸುವುದು, ಮನಸ್ಸಿನಲ್ಲಿ ಯೋಜನೆ ಮಾಡುವುದು, ಉದ್ದೇಶಕ್ಕಾಗಿ ಮತ್ತು ಸಂಕಲ್ಪಕ್ಕಾಗಿ ಯೋಚಿಸುವುದು." ಇದರ ಗ್ರೀಕ್ ಪದವು "ಮನಸ್ಸಿನಲ್ಲಿ ಏನೋ ಸಂಗತಿಯು ಗಸ್ತು ಹೊಡೆಯುವಂತೆ ಮಾಡುವುದು" ಎಂದು ಹೇಳುತ್ತದೆ ಮತ್ತು ಇದನ್ನು ಊಹೆ ಎಂಬುದಾಗಿಯೂ ಭಾಷಾಂತರಿಸುವುದುಂಟು.

ಸತ್ಯವೇದಕ್ಕನುಗುಣವಾದ ಧ್ಯಾನಕ್ಕಾಗಿ ಇರುವ ಎರಡು ಉದ್ದೇಶಗಳೆಂದರೆ, "ಸೂಕ್ತವಾದ ತಿಳುವಳಿಕೆಗಾಗಿ ಪರಿಶೀಲಿಸುತ್ತಾ ಆಲೋಚಿಸುವುದು" ಹಾಗೂ ಪ್ರಾರ್ಥನೆ, ಸ್ತುತಿ, ಧ್ಯಾನದ ಮೂಲಕ ಅಂದರೆ ಆಲೋಚಿಸುತ್ತಾ, ವಿಚಾರಮಾಡುತ್ತಾ ಮತ್ತು ಕರ್ತನ ಕುರಿತಾಗಿ ಚಿಂತಿಸುತ್ತಾ "ಮನಸ್ಸನ್ನು ನೂತನಪಡಿಸಿಕೊಳುವುದಕ್ಕೆ ಮತ್ತು ದೇವರನ್ನು ಆತನ ವಾಕ್ಯದಿಂದ ಹಿಂಬಾಲಿಸುತ್ತಾ ಸಂಪರ್ಕಿಸುವುದು."

*ಧ್ಯಾನದಲ್ಲಿ ನಿರ್ದಿಷ್ಟ ವಿಷಯಗಳನ್ನು ಅಧ್ಯಯನ ಮಾಡುವುದು* – ಅಂದರೆ ಒಂದು ವಿಷಯವನ್ನು ತೆಗೆದುಕೊಂಡು ಅದರ ಬಗ್ಗೆ ಆಲೋಚಿಸುತ್ತಾ, ಮನನ ಮಾಡುವುದು. ಉದಾಹರಣೆ: ದೀಕ್ಷಾಸ್ನಾನ. ಈ ಪದವನ್ನು ಗ್ರೀಕ್, ಇಬ್ರಿಯ ಅಥವಾ ಒಂದು ಒಳ್ಳೆಯ ನಿಘಂಟಿನಲ್ಲಿ ಅರ್ಥವನ್ನು ತಿಳಿದುಕೊಳ್ಳುವುದು. ಇದರ ಅರ್ಥವನ್ನು ತಿಳಿಸುವ ಮೂಲ ಪದವನ್ನು ಕಂಡುಹಿಡಿಯಿರಿ. ನಂತರ ವಚನಗಳ ಸಂದರ್ಭವನ್ನು ಪರಿಗಣಿಸಿ ಆಲೋಚಿಸಿರಿ. ಇದು ನಿಮ್ಮನ್ನು ಇನ್ನಿತರ ಸಂಬಂಧಪಟ್ಟ ವಿಷಯಗಳನ್ನು ಅಧ್ಯಯನ ಮಾಡುವಂತೆ ಅಂದರೆ ಪಾಪ ಪರಿಹಾರ (ಅಪೊಸ್ತಲರ ಕೃತ್ಯಗಳು 2:38), ಪಶ್ಚಾತ್ತಾಪ (ಅ.ಕೃ. 2:38), ನಂಬಿಕೆ (ಮಾರ್ಕ 16:16), ಮನಸ್ಸಾಕ್ಷಿ (1 ಪೇತ್ರ 3:21), ಕರ್ತನ ನಾಮವನ್ನು ಹೇಳುವುದು (ಅ.ಕೃ. 22:16) ಇಂತಹ ಇನ್ನಿತರ ಸಂಗತಿಗಳನ್ನು ಅಧ್ಯಯನ ಮಾಡುವಂತೆ ನಡೆಸುತ್ತದೆ.

ನಿಮಗಿರುವ ಪ್ರಶ್ನೆಗಳಿಗಾಗಿ ಅಥವಾ ವಾಕ್ಯಭಾಗಗಳಿಂದ ಉದ್ಭವಿಸುವ ಪ್ರಶ್ನೆಗಳಿಗಾಗಿ ಆಲೋಚಿಸುತ್ತಾ ಹುಡುಕಬೇಕು, ಅಂದರೆ ದೀಕ್ಷಾಸ್ನಾನಕ್ಕಿಂತಲೂ ಮೊದಲು ಮಾಡಬೇಕಾದ ಸಂಗತಿಗಳಿವೆಯೇ? ದೀಕ್ಷಾಸ್ನಾನದ ಉದ್ದೇಶವೇನು? ಇದನ್ನು ಯಾವಾಗ ನಡೆಸಲಾಗಿತ್ತು? ಯಾವ ಕಾಲದಲ್ಲಿ ನಡೆಸಲಾಗಿತ್ತು?

*ಧ್ಯಾನವನ್ನು ವ್ಯಾಖ್ಯಾನಪೂರಕವಾದ ಅಧ್ಯಯನ ಮೂಲಕ ಮಾಡಬಹುದಾಗಿದೆ;* ಅಂದರೆ ಸತ್ಯವೇದದ ಒಂದು ಪುಸ್ತಕದ ಒಂದು ವಚನದ ನಂತರ ಮತ್ತೊಂದು ವಚನವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡುವುದು. ಆ ಒಂದು ಪುಸ್ತಕದೊಂದಿಗೆ ನೀವು ಬಹಳ ಚಿರಪರಿಚಿತರಾಗುವಂತೆ ಅದರ ಪರಿಶೀಲನೆ ಮಾಡುವುದು ಮತ್ತು ಆಲೋಚಿಸುವುದು.

*ಧ್ಯಾನವನ್ನು ಪದಗಳ ಅಧ್ಯಯನದ ಮೂಲಕವೂ ಮಾಡಬಹುದಾಗಿದೆ:* ಅಂದರೆ ಆ ನಿರ್ದಿಷ್ಟವಾದ ಪದದ ಅರ್ಥವೇನು? ನಂಬುವುದು ಎಂದರೆ ಏನು? ಕರ್ತನು ಎನ್ನುವುದರ ಅರ್ಥವೇನು? ಯೇಸು ಎಂಬ ಪದದ ಅರ್ಥವೇನು? ಕ್ರಿಸ್ತನು ಎಂಬುದರ ಅರ್ಥವೇನು? ನೀತಿ ಎಂಬುದರ ಅರ್ಥವೇನು? ಇತ್ಯಾದಿ.

*ಧ್ಯಾನವನ್ನು ಸತ್ಯವೇದದಲ್ಲಿರುವ ಒಂದು ಪರಿಚ್ಛೇದವನ್ನು (ಪ್ಯಾರಾ) ಅಧ್ಯಯನ ಮಾಡುವುದರ ಮೂಲಕ ಮಾಡಬಹುದಾಗಿದೆ: ಒಂದು ಪರಿಚ್ಛೇದ ಎಂದರೆ ಅನೇಕ ವಾಕ್ಯಗಳನ್ನು ಒಳಗೊಂಡಿರುವ ಬರವಣಿಗೆಯ ಒಂದು ಘಟಕವಾಗಿದೆ.* ಒಬ್ಬ ಲೇಖಕನು ತನ್ನ ಬರವಣಿಗೆಯಲ್ಲಿ ಒಂದು ಪ್ರಾಶಸ್ತ್ಯದ ವಿಷಯದಿಂದ ಮತ್ತೊಂದಕ್ಕೆ ಬದಲಾಗುವಾಗ, ಸಾಮಾನ್ಯವಾಗಿ ನೂತನ ಪರಿಚ್ಛೇದ ಅಥವಾ ಪ್ಯಾರ ಪ್ರಾರಂಭಿಸುತ್ತಾರೆ.

ವಾಕ್ಯಭಾಗಗಳ ಮೂಲಕ ಧ್ಯಾನ ಮಾಡುವಾಗ, ಪ್ರಶ್ನಾರ್ಥಕ ಚಿಹ್ನೆಗಳಂತಹವು ಗಮನಿಸಿ ನೋಡಿರಿ. ಅಂದರೆ ಈ ಪ್ರಶ್ನೆಯನ್ನು ಏಕೆ ಕೇಳಲಾಗಿದೆ? ಇದು ಈ ಸಂದರ್ಭಕ್ಕೆ ಹೇಗೆ ಸಂಬಂಧವನ್ನು ಹೊಂದಿದೆ, ಇತ್ಯಾದಿ.

ಸತ್ಯವೇದ ಅಧ್ಯಯನ ಅಂದರೆ ಪದಗಳನ್ನು ಮಾತ್ರ ಹುಡುಕುವುದಲ್ಲ, ಆದರೆ ಆ ಪದಗಳ ಹಿಂದಿರುವ ದೇವರಿಗಾಗಿ ಹುಡುಕುವುದಾಗಿದೆ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. "ಧ್ಯಾನ" ಎಂಬ ಪದದ ಅರ್ಥವೇನು?

2. ಸತ್ಯವೇದಾಧ್ಯಯನ ಧ್ಯಾನಕ್ಕಾಗಿ ಇರುವ ಎರಡು ಕಾರಣಗಳೇನು?

3. ವಿಷಯಗಳಿಗೆ ಸಂಬಂಧಪಟ್ಟ ಸಂಗತಿಗಳ ಧ್ಯಾನ ಅಂದರೆ ಏನು?

4. ವಾಕ್ಯಗಳ ಸ್ಪಷ್ಟೀಕರಣ ಧ್ಯಾನ ಅಂದರೆ ಏನು?

5. ಲೂಕ 6:46 ಓದಿರಿ. ಇಲ್ಲಿ "ಸ್ವಾಮೀ (ಕರ್ತನೇ)" ಎಂಬ ಪದದ ಅರ್ಥ ಏನೆಂದು ಆಲೋಚಿಸುವಿರಿ?

   **ಲೂಕ 6:46** – *ಇದಲ್ಲದೆ ನೀನು ನನ್ನನ್ನು ಸ್ವಾಮೀ ಸ್ವಾಮೀ ಅಂತ ಕರೆದು ನಾನು ಹೇಳುವದನ್ನು ನಡಿಸದೆ ಇರುವದೇಕೆ?*

6. ಮತ್ತಾಯ 1:21 ಓದಿರಿ. "ಯೇಸು" ಎಂಬ ಪದದ ಅರ್ಥವೇನೆಂದು ಭಾವಿಸುವಿರಿ?

   **ಮತ್ತಾಯ 1:21** – *ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು, ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು ಅಂದನು.*

7. ಲೂಕ 23:1–2 ಓದಿರಿ. "ಕ್ರಿಸ್ತನು" ಎಂಬ ಪದದ ಅರ್ಥವೇನೆಂದು ನೀವು ಆಲೋಚಿಸುವಿರಿ?

   **ಲೂಕ 23:1–2** – *ಅಲ್ಲಿ ಕೂಡಿದ್ದವರೆಲ್ಲರು ಎದ್ದು ಆತನನ್ನು ಪಿಲಾತನ ಬಳಿಗೆ ತೆಗೆದುಕೊಂಡು ಹೋಗಿ – [2] ಇವನು ತಾನೇ ಕ್ರಿಸ್ತನೆಂಬ ಒಬ್ಬ ಅರಸನಾಗಿದ್ದೇನೆಂದು ಹೇಳುತ್ತಾ ಕೈಸರನಿಗೆ ತೆರಿಕೆ ಕೊಡಬಾರದೆಂದು ಬೋಧಿಸುತ್ತಾ ನಮ್ಮ ದೇಶದವರ ಮನಸ್ಸನ್ನು ಕೆಡಿಸುವದನ್ನು ನಾವು ಕಂಡೆವು ಎಂಬದಾಗಿ ಆತನ ಮೇಲೆ ದೂರು ಹೇಳುವದಕ್ಕೆ ತೊಡಗಿದರು.*

8. ಪರಿಚ್ಛೇದ ಅಂದರೆ ಏನು?

9. ಸತ್ಯವೇದ ಅಧ್ಯಯನ ಅಂದರೆ ಪದಗಳನ್ನು ಮಾತ್ರ ಹುಡುಕುವುದಲ್ಲ, ಆದರೆ ______________________ .

## ಉತ್ತರಗಳು

1. “ಧ್ಯಾನ” ಎಂಬ ಪದದ ಅರ್ಥವೇನು?

   **ಒಬ್ಬ ವ್ಯಕ್ತಿಯ ಮನಸ್ಸಿನಲ್ಲಿರುವ ಸಂಗತಿಗಳಿಗಾಗಿ ಗಾಢವಾಗಿ ಆಲೋಚಿಸುವುದು, ಪರಿಶೀಲಿಸುವುದು, ಮನಸ್ಸಿನಲ್ಲಿ ಗಸ್ತು ತಿರುಗುವುದು**

2. ಸತ್ಯವೇದಕ್ಕನುಗುಣವಾದ ಧ್ಯಾನಕ್ಕಾಗಿ ಇರುವ ಎರಡು ಕಾರಣಗಳೇನು?

   **ಸರಿಯಾದ ತಿಳುವಳಿಕೆಗಾಗಿ ಪರಿಶೀಲಿಸುವುದು (ನನ್ನ ಮನಸ್ಸನ್ನು ನೂತನಪಡಿಸಲು) ಮತ್ತು ದೇವರ ವಾಕ್ಯದ ಹಿಂದಿರುವ ದೇವರನ್ನು ಸಂಪರ್ಕಿಸುವುದು (ಗಾಢವಾಗಿ ಆಲೋಚಿಸುತ್ತಾ, ಆತನ ಕುರಿತಾಗಿ ಆಲೋಚಿಸುವುದು)**

3. ವಿಷಯಗಳಿಗೆ ಸಂಬಂಧಪಟ್ಟ ಸಂಗತಿಗಳ ಧ್ಯಾನ ಅಂದರೆ ಏನು?

   **ಅಧ್ಯಯನ ಮಾಡುವುದಕ್ಕಾಗಿ ಹಾಗೂ ಅದರ ಕುರಿತಾಗಿ ಅಲೋಚಿಸುವುದಕ್ಕಾಗಿ ಸತ್ಯವೇದದಿಂದ ಒಂದು ವಿಷಯವನ್ನು ಆಯ್ಕೆ ಮಾಡುವುದು**

4. ವಾಕ್ಯಗಳ ಸ್ಪಷ್ಟೀಕರಣದ ಧ್ಯಾನ ಅಂದರೆ ಏನು?

   **ಸತ್ಯವೇದದ ಪುಸ್ತಕದಲ್ಲಿರುವ ಒಂದು ವಚನದ ನಂತರ ಮತ್ತೊಂದು ವಚನವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡುವುದು**

5. ಲೂಕ 6:46 ಓದಿರಿ. ಇಲ್ಲಿ “ಸ್ವಾಮೀ (ಕರ್ತನೇ)” ಎಂಬ ಪದದ ಅರ್ಥ ಏನೆಂಬುದಾಗಿ ಆಲೋಚಿಸುವಿರಿ?

   **ನಾವು ವಿಧೇಯರಾಗುವಂತಹ ಒಬ್ಬ ವ್ಯಕ್ತಿ (ಒಬ್ಬ ಯಜಮಾನನ ಹಾಗೆ)**

6. ಮತ್ತಾಯ 1:21 ಓದಿರಿ. “ಯೇಸು” ಎಂಬ ಪದದ ಅರ್ಥವೇನೆಂದು ಭಾವಿಸುವಿರಿ?

   **ಜನರನ್ನು ತಮ್ಮ ಪಾಪಗಳಿಂದ ಬಿಡಿಸುವ ಒಬ್ಬ ರಕ್ಷಕ**

7. ಲೂಕ 23:1–2 ಓದಿರಿ. "ಕ್ರಿಸ್ತನು" ಎಂಬ ಪದ ಅರ್ಥವೇನೆಂದು ನೀವು ಆಲೋಚಿಸುವಿರಿ?

    **ಒಬ್ಬ ಅರಸನಾಗಿರುವುದಕ್ಕಾಗಿ ಅಭಿಷೇಕಿಸಲ್ಪಟ್ಟವನು**

8. ಪರಿಚ್ಛೇದ ಅಂದರೆ ಏನು?

    **ಬರವಣಿಗೆಯಲ್ಲಿನ ಆಲೋಚನೆಯ ಒಂದು ಘಟಕ**

9. ಸತ್ಯವೇದ ಅಧ್ಯಯನ ಅಂದರೆ ಪದಗಳನ್ನು ಮಾತ್ರ ಹುಡುಕುವುದಲ್ಲ, ಆದರೆ

    **ಆ ಪದಗಳ ಹಿಂದಿರುವ ದೇವರನ್ನು ಭೇಟಿ ಮಾಡುವುದಾಗಿದೆ**

## ಪಾಠ 3

# ಮನಸ್ಸನ್ನು ನೂತನಪಡಿಸಿಕೊಳ್ಳುವುದು

*ಡ್ರೂಣ್ ಕ್ರೊ*

ಇಂದು ನಾವು ಮನಸ್ಸನ್ನು ನೂತನಪಡಿಸಿಕೊಳ್ಳುವುದನ್ನು ಕುರಿತಾಗಿ ಮಾತನಾಡಲು ಬಯಸುತ್ತೇವೆ. ನಾನು ಎರಡು ವಾಕ್ಯಭಾಗಗಳನ್ನು ಓದುವುದಕ್ಕೆ ಬಯಸುತ್ತೇನೆ. ಮೊದಲನೆಯದು ಫಿಲಿಪ್ಪಿ4:8 ಹೇಳುತ್ತದೆ, *"ಕಡೇ ಮಾತೇನೆಂದರೆ, ಸಹೋದರರೇ, ಯಾವಾವದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಮನೋಹರವೂ ಆಗಿದೆಯೋ, ಯಾವದು ಸದ್ಗುಣವಾಗಿದೆಯೋ, ಯಾವದು ಕೀರ್ತಿಗೆ ಯೋಗ್ಯವೋ ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ."* ನಾವು ಆಲೋಚಿಸತಕ್ಕ ಸಂಗತಿಗಳು ಇವುಗಳೇ ಎಂದು ಅಪೊಸ್ತಲನಾದ ಪೌಲನು ಸ್ಪಷ್ಟವಾಗಿ ನಮಗೆ ಹೇಳುತ್ತಿರುವನು. ಇನ್ನೊಂದು ವಿಧದಲ್ಲಿ ಹೇಳುವುದಾದರೆ, ನಮ್ಮ ಆಲೋಚನೆಗಳು ನಮ್ಮ ಆಯ್ಕೆಯಾಗಿವೆ. ರೋಮಾಪುರದವರಿಗೆ ಬರೆದ ಪತ್ರಿಕೆಯ 7ನೇ ಅಧ್ಯಾಯ, 22 ಮತ್ತು 23ನೇ ವಚನಗಳ ಪ್ರಕಾರ ದೇವರ ವಾಕ್ಯಕ್ಕೆ ವಿರೋಧವಾಗಿರುವ ಆಲೋಚನೆಗಳು ಕೆಲವೊಮ್ಮೆ ನಮ್ಮೆಲ್ಲರಿಗೂ ಬರುತ್ತವೆ ಎಂದು ನನಗೆ ತಿಳಿದಿದೆ. ನಮ್ಮಲ್ಲಿರುವ ಹೋರಾಟ ಮಾಡುವ ಪಾಪದ ನಿಯಮವು ನಮ್ಮ ಮನಸ್ಸುಗಳ ಮೇಲೆ ಆಕ್ರಮಣ ಮಾಡುತ್ತವೆ. ಆದರೆ ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯು ನಾವು ಅಲ್ಲೇ ಕುಳಿತುಕೊಂಡು, ನಮ್ಮ ಆಲೋಚನೆಗಳು ಮನೆಮಾಡಿಕೊಳ್ಳುವಂತೆ ಅವಕಾಶ ಕೊಡಬಾರದು ಯಾಕೆಂದರೆ ನಮ್ಮ ಆಲೋಚನೆಗಳು ನಮ್ಮ ಆಯ್ಕೆಗಳಾಗಿವೆ. ನಾವು ನಮ್ಮೊಳಗಿನ ಆಲೋಚನೆಯಣತೆಯೇ ಇರುತ್ತೇವೆ ಎನ್ನುವುದು ಬೈಬಲ್‌ನ ಜ್ಞಾನೋಕ್ತಿ 23:7 ಹೇಳುತ್ತದೆ. ಹಾಗಾಗಿ ನಾವು ಏನನ್ನು ಆಲೋಚಿಸುತ್ತೇವೋ ಅದು ಬಹಳ ಪ್ರಮುಖವಾದುದಾಗಿದೆ.

ಸತ್ಯವೇದವು ರೋಮ 12:1 ಮತ್ತು 2ರಲ್ಲಿ ಹೀಗೆ ಹೇಳುತ್ತದೆ, *"ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ – ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದೂ ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ."* ನಾವು ನಮ್ಮ ಮನಸ್ಸುಗಳನ್ನು ನೂತನಪಡಿಸಿಕೊಳ್ಳುವುದರಿಂದ

ಮಾರ್ಪಾಡನ್ನು ಹೊಂದಬಲ್ಲೆವು ಎಂದು ಸತ್ಯವೇದವು ತಿಳಿಸುತ್ತದೆ. ಅಪೊಲೊ ಗಗನ ನೌಕೆಯನ್ನು ಆಗಸದೊಳಕ್ಕೆ ಕಳುಹಿಸಿದಾಗ, ಅವರು ಪ್ರತಿ ಹತ್ತು ನಿಮಿಷಗಳಿಗೊಮ್ಮೆ ಅದರ ಪ್ರಯಾಣದ ಮಾರ್ಗದ ತಿದ್ದುಪಡಿಯನ್ನು ಮಾಡಬೇಕಾಗಿತ್ತು ಎಂಬುದು ನಿಮಗೆ ತಿಳಿದಿದೆಯೇ? ಅವರು ಚಂದ್ರನ ಬಳಿಗೆ ಅಂಕುಡೊಂಕಾದ ಪ್ರಯಾಣದಿಂದ ತಲುಪಿದರು. ಕೊನೆಗೆ ಅವರು ಅಲ್ಲಿ ಇಳಿಯುವುದಕ್ಕೆ 500 ಮೈಲಿಗಳ ಸುತ್ತಳತೆಯವರೆಗೆ ನಿಗದಿಪಡಿಸಲಾಗಿತ್ತು, ಆದರೆ ಅವರು ಅಲ್ಲಿ ಕೇವಲ ಕೆಲವು ಅಡಿಗಳಷ್ಟು ಒಳಗ ಇಳಿಯುವುದಕ್ಕಾಯಿತು. ಆದಾಗ್ಯೂ ಆ ಯಾನವು ಯಶಸ್ವಿಯಾಗಿತ್ತು. ನಾವು ಒಂದು ಹಾದಿಯನ್ನು ನಿಗದಿಮಾಡಿ ಇಟ್ಟುಕೊಳ್ಳಬೇಕು ಮತ್ತು ಒಂದು ಸಜೀವ ಯಜ್ಞವಾಗಿರುವುದರ ಮೂಲಕ ಕರ್ತನಾದ ಯೇಸು ಕ್ರಿಸ್ತನಿಗೆ ಸಂಪೂರ್ಣವಾದ ಸಮರ್ಪಣೆಯನ್ನು ಮಾಡಬೇಕು. ಯಜ್ಞವು ಸಜೀವವಾಗಿರುವುದರಲ್ಲಿ ಇರುವ ಸಮಸ್ಯೆಯೆಂದರೆ, ಕೆಲವೊಮ್ಮೆ ಅದು ತೆವಳಿಕೊಂಡು ಯಜ್ಞವೇದಿಯನ್ನು ದಾಟಿಹೋಗಬೇಕೆಂದು ಬಯಸುತ್ತದೆ, ಹಾಗಾಗಿ ನಮ್ಮ ಆಲೋಚನೆಗಳಲ್ಲಿ ನಾವು ಅದರ ಹಾದಿಯನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ನಮಗೆ "ದೇವರೇ, ನನಗೆ ನೀನು ಬೇಕು ಹಾಗೂ ನಿನ್ನ ಮಾರ್ಗವು ಬೇಕು" ಎಂದು ಹೇಳುವಂತಹ ಹೃದಯದ ಅಗತ್ಯವಿದೆ.

ನಾವು ಒಂದು ಸಂಪೂರ್ಣವಾದ ಸಮರ್ಪಣೆಯನ್ನು ಮಾಡಿಕೊಳ್ಳಬೇಕಾದ ಅಗತ್ಯ ಮಾತ್ರವಲ್ಲದೆ, ಒಂದು ಜಯಭೇರಿ ಕ್ರೈಸ್ತ ಜೀವಿತವನ್ನು ಪಡೆದುಕೊಳ್ಳುವುದಕ್ಕಾಗಿ ನಾವು ಮುಂದಿನ ಹೆಜ್ಜೆಯನ್ನು ತೆಗೆದುಕೊಳ್ಳಬೇಕು ಹಾಗೂ ನಮ್ಮ ಮನಸ್ಸುಗಳನ್ನು ನೂತನಪಡಿಸಿಕೊಳ್ಳುವುದರಿಂದ ಮಾರ್ಪಾಡನ್ನು ಹೊಂದಬೇಕಾಗಿದೆ. ನಮಗೆ ಲೋಕದ ಫಲಿತಾಂಶಗಳು ಬೇಕಿಲ್ಲದಿದ್ದರೆ, ನಾವು ಲೋಕದ ಹಾಗೆ ಆಲೋಚಿಸುವುದಕ್ಕೆ ಸಾಧ್ಯವಿಲ್ಲ. ನಾವು ಫಿಲಿಪ್ಪಿ 4:8ರಲ್ಲಿ ಓದಿದಂತೆಯೇ, ಯಾವುದನ್ನು ಆಲೋಚಿಸಬೇಕು ಎಂಬುದನ್ನು ನಾವು ಆಯ್ಕೆಮಾಡಿಕೊಳ್ಳಬಹುದಾಗಿದೆ. ಯಾವುದು ಮನೋಹರವೂ ನ್ಯಾಯವೂ ಒಳ್ಳೆಯ ಸುದ್ದಿಯೂ ಆಗಿದೆಯೋ ಅಂತಹ ಸಂಗತಿಗಳ ಕುರಿತಾಗಿ ಆಲೋಚಿಸಿರಿ. ಹಳೇ ಒಡಂಬಡಿಕೆಯ ಜನರು ದೇವರ ವಾಕ್ಯವನ್ನು ತೆಗೆದುಕೊಂಡು, ತಮ್ಮ ಮನೆಯ ಬಾಗಿಲಿನ ನಿಲುವುಪಟ್ಟಿಗಳ ಮೇಲೆ ಮತ್ತು ತಮ್ಮ ವಸ್ತ್ರಗಳ ಮೇಲೆ ಹಾಕಿಕೊಳ್ಳುತ್ತಿದ್ದರು. ವಾಕ್ಯವು ಸತತವಾಗಿ ಅವರ ಮುಂದೆಯೇ ಇರುತ್ತಿತ್ತು. ಅವರು ದೇವರ ವಾಕ್ಯವು ಹೇಳುವಂತೆಯೇ ಅದನ್ನು ಅನುಸರಿಸಬೇಕೆಂದು ಅದನ್ನೇ ಹಗಲು ರಾತ್ರಿ ಮಾತನಾಡಬೇಕು ಎಂದು ದೇವರು ಅವರಿಗೆ ಆಜ್ಞಾಪಿಸಿದನು. ಹಾಗೂ ಅವರು ಎಲ್ಲಾ ಸಂಗತಿಗಳನ್ನು ತಮ್ಮ ಮಕ್ಕಳಿಗೂ ತಿಳಿಸುತ್ತಿದ್ದರು. ನಾವು ಏನನ್ನು ಆಲೋಚಿಸುತ್ತೇವೋ ಅದು ಬಹಳ ಪ್ರಾಮುಖ್ಯ. ಜಯದ ಜೀವಿತವನ್ನು ಹೊಂದಿಕೊಳ್ಳುವ ಹಾಗೆ ಎಲ್ಲಾ ಸಮಯದಲ್ಲೂ ನಮ್ಮ ಮುಂದೆ ದೇವರ ವಾಕ್ಯವನ್ನು ಇಟ್ಟುಕೊಳ್ಳುವುದು ಬಹು ಮುಖ್ಯವಾಗಿದೆ. ಯಾವುದು ಮನೋಹರವಾದದ್ದೂ ನ್ಯಾಯವೂ ಮತ್ತು ಒಳ್ಳೆಯ ಸುದ್ದಿಯೂ ಆಗಿದೆಯೋ ಅವುಗಳ ವಿರುದ್ಧವಾದ ಆಲೋಚನೆಗಳು, ದೇವರ ಮತ್ತು ಆತ್ಮನ ವಿಷಯಗಳ ಆಲೋಚನೆಗಳಾಗಿರುವುದಿಲ್ಲ. ರೋಮ 8:6 ಹೇಳುತ್ತದೆ, *"ಯಾಕಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವುದು ಮರಣ"*, ಆದರೆ ಇದರ ಮುಂದಿನ ಭಾಗದ ವಚನವು ಹೀಗೆ ಹೇಳುತ್ತದೆ, *"ಪವಿತ್ರಾತ್ಮನವುಗಳ*

*ಮೇಲೆ ಮನಸ್ಸಿಡುವದು ಜೀವವೂ ಮನಶ್ಶಾಂತಿಯೂ ಆಗಿದೆ."* ದೇವರ ಆತ್ಮನ ಸಂಗತಿಗಳ ಕುರಿತಾಗಿ ಆಲೋಚಿಸುವುದು ಜೀವವೂ ಹಾಗೂ ಮನಶ್ಶಾಂತಿಯೂ ಆಗಿದೆ. ಆದರೆ ನಾವು ವ್ಯಭಿಚಾರದ ಬಗ್ಗೆ, ಲೋಕದ ಸಂಗತಿಗಳು, ಹಣ, ದುರಾಸೆ, ಹಾಗೂ ಇನ್ನಿತರ ಸಂಗತಿಗಳ ಕುರಿತು ಆಲೋಚಿಸಲಾರಂಭಿಸಿದರೆ, ನಮ್ಮ ಜೀವಿತಗಳಿಗೆ ಏನು ಸಂಭವಿಸಬಹುದು ಎನ್ನುವುದು ನಿಮಗೆ ಗೊತ್ತೇ? ಒಬ್ಬ ಮನುಷ್ಯನು ತನ್ನ ಮನಸ್ಸಿನಲ್ಲಿ ಆಲೋಚಿಸಿಕೊಂಡ ಪ್ರಕಾರವೇ, ಅವನಿರುವನು. ನಾವು ಅ ಸಂಗತಿಗಳಂತದೇ ಕ್ರಿಯೆಗಳನ್ನು ಮಾಡಲಾರಂಭಿಸುತ್ತೇವೆ. ಆ ಸಂಗತಿಗಳೊಂದಿಗೆ ನಮ್ಮ ಜೀವನದಲ್ಲಿ ಚೆಲ್ಲಾಟವಾಡಲಾರಂಭಿಸುತ್ತೇವೆ ಹಾಗೂ ಇದು ನಮ್ಮ ಜೀವಿತಗಳನ್ನು ನಾಶಮಾಡುತ್ತದೆ. ನೋಡಿ, ಕೆಲವು ಸಮಯಗಳಲ್ಲಿ ಸೈತಾನನನ್ನು ಎದುರಿಸುತ್ತಾ, ಗದರಿಸಬೇಕಾಗುತ್ತದೆಯಾದರೂ ವಿಶ್ವಾಸಿಗಾಗಿ ಇರುವ ನಿಜವಾದ ಆತ್ಮೀಕ ಹೋರಾಟವು ಎಲ್ಲಾ ಸಮಯದಲ್ಲಿಯೂ ಸೈತಾನನ್ನು ಎದುರಿಸುತ್ತಾ ಗದರಿಸುತ್ತಾ ಇರುವುದೊಂದೇ ಆಗಿರುವುದಿಲ್ಲ. ಆದರೆ ನಾವು ಏನನ್ನು ಆಲೋಚನೆ ಮಾಡುತ್ತೇವೋ ನಾವು ಯಾವುದರಲ್ಲಿ ನೆಲೆಗೊಂಡಿರುವೆವೋ ಅದರ ಮೇಲೆ ಆತ್ಮೀಕ ಹೋರಾಟವಿರುತ್ತದೆ.

ಯೆಶಾಯ 26:3ರಲ್ಲಿ ಸತ್ಯವೇದವು ಹೇಳುತ್ತದೆ, "ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ". ರೋಮ 12ರಲ್ಲಿ ಹೇಳಿರುವಂತೆಯೇ ನಾವು ದಿನಾಲೂ ನಮ್ಮ ಆಲೋಚನಾಧಾಟಿಯ ಪಥವನ್ನು ತಿದ್ದುಪಡಿ ಮಾಡಬೇಕಾಗಿರುತ್ತದೆ. ನಾವು, "ದೇವರೇ, ಅವು ತಪ್ಪಾದ ಆಲೋಚನೆಗಳಾಗಿವೆ. ನಾನು ಇದನ್ನು ಬಿಟ್ಟು ತಿರುಗಿ, ನನ್ನ ಮನಸ್ಸನ್ನು ನೂತನಪಡಿಸಿಕೊಂಡು, ಮನೋಹರವೂ, ನ್ಯಾಯವೂ, ಮತ್ತು ಒಳ್ಳೆಯದೂ ಆದ ಸುದ್ದಿಯ ಕುರಿತಾಗಿ ಆಲೋಚಿಸಬೇಕಾಗಿದೆ" ಎಂದು ಹೇಳಬೇಕು.

ಹಾಗಾಗಿ ನಿಮ್ಮಲ್ಲಿನ ಯಾವುದೋ ಒಂದು ಭಾಗವು ವೈರಿಯ ಹಿಡಿತದಲ್ಲಿದ್ದರೆ, ನೀವು ಬಂಧನದಲ್ಲಿದ್ದರೆ, ನೀವು ಆಲೋಚಿಸಬಾರದು ಎಂದುಕೊಳ್ಳುವುದನ್ನೇ ನೀವು ಆಲೋಚಿಸುತ್ತಿರುವಿರಿ ಎಂದಾದರೆ, ತಕ್ಷಣವೇ ನಿಮ್ಮನ್ನು ನೀವು ಹಿಡಿದಿಟ್ಟುಕೊಳ್ಳಬೇಕಾದ ಅಗತ್ಯವಿದೆ. ಸತ್ಯವೇದವು ಹೇಳುತ್ತದೆ, ನಾವು ದೇವರ ಸಮೀಪಕ್ಕೆ ಬಂದರೆ, ಆತನು ನಮ್ಮ ಸಮೀಪಕ್ಕೆ ಬರುವನು. ನಾವು ಸೈತಾನನ್ನು ಎದುರಿಸಿದರೆ, ಅವನು ನಮ್ಮನ್ನು ಬಿಟ್ಟು ಓಡಿಹೋಗುವನು. ಹಿಂದೊಮ್ಮೆ, ನನ್ನ ಜೀವನದಲ್ಲಿ ಕೆಲವೊಂದು ಸಂಗತಿಗಳು ಕೈಮೀರಿಹೋಗುವಂತೆಯೂ ಖಿನ್ನತೆಯು ಆವರಿಸಿಕೊಳ್ಳುವಂತೆಯೂ ನಾನು ಅನುಮತಿಸಿದ್ದೆನು. ಆ ಸಮಯಗಳಲ್ಲಿ, ಸತ್ಯವೇದವನ್ನು ತೆಗೆದುಕೊಂಡು, "ದೇವರೇ, ನನ್ನ ಕುರಿತಾಗಿ ನೀನು ಇದನ್ನೇ ಹೇಳುತ್ತಿರುವೆ. ನಾನು ಯಾರಾಗಿರುವೆನು ಎಂದು ಹೇಳುವವನು ನೀನೇ ಆಗಿರುವೆ. ನೀನೇ ನನ್ನ ಬಲವು" ಎಂದು ಹೇಳಲು ಕಷ್ಟವಾಗುತ್ತಿತ್ತು. ನಿಮ್ಮ ಜಯವು ಬಹಳ ಸರಳವಾಗಿರುವಂತಹುದು ಎಂಬುದು ನಿಮಗೆ ತಿಳಿದಿದೆಯೇ? ನೀವು, "ವೈರಿಯು ನನ್ನ ವಿರುದ್ಧವಾಗಿ ಮಾಡುವ ಹಾಗೆ ನಾನು ಅನುಮತಿಸಿರುವ ಸಂಗತಿಗಳನ್ನು ನಾನು ಈಗಲೇ ಎದುರಿಸುತ್ತೇನೆ. ನಾನು ಕುಳಿತುಕೊಂಡು, ಸತ್ಯವೇದವನ್ನು ತೆರೆದು, ಅದರಲ್ಲಿ ಕೆಲವು ವಾಕ್ಯಗಳನ್ನು ಓದುವುದಷ್ಟೇ ಅಲ್ಲ, ಆ ವಾಕ್ಯಗಳ ಹಿಂದಿರುವ ದೇವರನ್ನು ನಾನು ಸಂಪರ್ಕಿಸುತ್ತೇನೆ. ನನ್ನ ಮನಸ್ಸು ಆತನ ಮೇಲೆ ಕೇಂದ್ರೀಕೃತವಾಗಿರುವಂತೆ ಮಾಡುತ್ತೇನೆ,

ಹಾಗೂ ಕರ್ತನೇ, ನನ್ನ ಕುರಿತಾಗಿ ನೀನು ಇದನ್ನೇ ಹೇಳುವವನಾಗಿರುವೆ, ನಾನು ಕ್ಷಮಿಸಲ್ಪಟ್ಟಿರುವೆ ಎಂದು ನೀನು ಹೇಳುತ್ತೀ. ನಾನು ಶುದ್ಧೀಕರಿಸಲ್ಪಟ್ಟಿರುವೆ ಎಂದು ಹೇಳುತ್ತೀ. ನಿನ್ನ ಪ್ರೀತಿಯಿಂದ ನನ್ನನ್ನು ಯಾರೂ ಅಗಲಿಸಲಾರರು ಎಂದು ನೀನು ಹೇಳುತ್ತೀ" ಎಂದು ನೀವು ಹೇಳಬೇಕು. ಹೀಗೆ ನೀವು ಕುಳಿತುಕೊಂಡು, ದೇವರು ನಿಮಗಾಗಿ ಮಾಡಿರುವ ಎಲ್ಲಾ ಒಳ್ಳೆಯ ಸಂಗತಿಗಳನ್ನು ಆಲೋಚಿಸುವಾಗ, ಕೆಲವೇ ಕ್ಷಣಗಳಲ್ಲಿ, ನೀವು ಆ ಬೇರೆ ಸಂಗತಿಗಳನ್ನು ಮರೆತು ಹೋಗುವಿರಿ.

ನಾನು ಒಂದು ಉದಾಹರಣೆ ಕೊಡುತ್ತೇನೆ. ಒಮ್ಮೆ ಒಬ್ಬ ವ್ಯಕ್ತಿಯು, "ಈಗ, ನೀವು ಮುಂದಿನ ಹತ್ತು ನಿಮಿಷಗಳು ಗುಲಾಬಿ ಬಣ್ಣದ ಆನೆಗಳ ಕುರಿತಾಗಿ ಆಲೋಚಿಸಬಾರದೆಂದು ಎಚ್ಚರಿಸುತ್ತೇನೆ" ಎಂದು ಹೇಳುವುದನ್ನು ಕೇಳಿದೆನು. ಆಮೇಲೆ ಏನಾಯಿತು ಗೊತ್ತೇ? ಮುಂದಿನ ಹತ್ತು ನಿಮಿಷಗಳು ನಾವು ಗುಲಾಬಿ ಬಣ್ಣದ ಆನೆಗಳ ಕುರಿತಾಗಿ ಆಲೋಚನೆಯನ್ನೇ ಮಾಡುತ್ತಿದ್ದೆವು. ನಂತರ ಅವರು, "ಸ್ಟ್ಯಾಚು ಆಫ್ ಲಿಬರ್ಟಿ (Statue of Liberty) ಯಾವ ಬಣ್ಣದ್ದು?" ಎಂದು ಕೇಳಿದರು. ಒಬ್ಬರು ಹಸಿರು ಎಂದು ಹೇಳಿದರು. ಹಾಗೂ ಅವರು "ಸ್ಟ್ಯಾಚು ಆಫ್ ಲಿಬರ್ಟಿಯ ಯಾವ ಕೈ ಮೇಲಕ್ಕೆ ಎತ್ತಲ್ಪಟ್ಟಿದೆ?" ಎಂದು ಕೇಳಿದರು. ಆಗ ಮತ್ತೊಬ್ಬರು ಬಲಗೈ ಎಂದು ಉತ್ತರಿಸಿದರು. ನಂತರ ಆ ವ್ಯಕ್ತಿಯು, "ಈ ಮೂರ್ತಿಯು ಏನನ್ನು ಹಿಡಿದುಕೊಂಡಿದೆ?" ಎಂದು ಕೇಳಿದರು. ಇನ್ನೊಬ್ಬರು ದೀವಟಿಗೆ ಎಂದು ಉತ್ತರಿಸಿದರು. ಆ ವ್ಯಕ್ತಿಯು, "ಹಾಗಾದರೆ ನೀವು ಗುಲಾಬಿ ಬಣ್ಣದ ಆನೆಗಳ ಕುರಿತಾಗಿ ಮಾಡುತ್ತಿದ್ದ ಆಲೋಚನೆ ಏನಾಯಿತು?" ಎಂದು ಕೇಳಿದರು. ಅದು ಮರೆತುಹೋಗಿತ್ತು. ಹಾಗೆಯೇ ಇದು ಸಹ. "ಈಗ ನೀನು ಈ ಆಲೋಚನೆಗಳನ್ನು ಮಾಡಬಾರದು" ಎಂದಷ್ಟೇ ಹೇಳುವುದಲ್ಲ, ಏಕೆಂದರೆ ನೀವು ಅದೇ ಆಲೋಚನೆಗಳನ್ನು ಮಾಡುವಿರಿ ಎಂದು ನಿಮಗೆ ಗೊತ್ತಿದೆ. ಆದರೆ ದೇವರ ವಾಕ್ಯವು, ನಮ್ಮ ಆಲೋಚನೆಗಳ ಬದಲಿಗೆ ದೇವರ ಆಲೋಚನೆಗಳನ್ನು ತುಂಬುವ ಅಗತ್ಯವಿದೆ ಎಂದು ಹೇಳುತ್ತದೆ, ಮತ್ತು ನಾವು ಆಲೋಚಿಸಬಾರದ ಸಂಗತಿಗಳ ಕುರಿತಾಗಿ ಚಿಂತಿಸುತ್ತಿರುವುದರಿಂದ ಅವುಗಳು ನಮ್ಮ ವಿರುದ್ಧವಾಗಿ ಬರುತ್ತಿವೆ ಎನ್ನುವುದನ್ನು ನೋಡಿದಾಗ, ತಕ್ಷಣವೇ ಕ್ರಿಸ್ತನಲ್ಲಿ ನಮಗಿರುವ ಹೊಸ ಗುರುತನ್ನು ನಮ್ಮ ಮನಸ್ಸಿಗೆ ತಂದುಕೊಳ್ಳಬೇಕಾಗಿದೆ. ನಾವು ತಕ್ಷಣವೇ ಕರ್ತನ ಕಡೆಗೆ ತಿರುಗಿಕೊಳ್ಳಬೇಕು, ಆತನೊಂದಿಗೆ ಸಂಪರ್ಕವನ್ನು ಹೊಂದಿಕೊಳ್ಳಬೇಕು. ಬೈಬಲ್‌ನ ಒಂದು ಪುಟದಲ್ಲಿರುವ ವಾಕ್ಯಗಳೊಂದಿಗೆ ಮಾತ್ರವಲ್ಲದೆ, ಆ ವಾಕ್ಯಗಳ ಹಿಂದೆ ಇರುವ ದೇವರೊಂದಿಗೆ ನಾವು ಸಂಪರ್ಕವನ್ನು ಪಡೆಯಬೇಕು. ಹಾಗೂ ಸತ್ಯವೇದವು ರೋಮ 8:6ರಲ್ಲಿ ಹೇಳುತ್ತದೆ, ನಾವು ನಮ್ಮ ಮನಸ್ಸನ್ನು ಕರ್ತನ ಮೇಲೆ ಮತ್ತು ಆತ್ಮನ ಸಂಗತಿಗಳ ಮೇಲೆ ಕೇಂದ್ರೀಕರಿಸಿದಾಗ ಜೀವಿತದ ಮಾರ್ಪಡುವಿಕೆ ಮತ್ತು ದೇವರು ನೀಡುವ ಶಾಂತಿಯನ್ನು ಕಾಣುತ್ತೇವೆ. ನನ್ನ ಸಹೋದರರೇ, ಈ ಸಂಗತಿಗಳ ಕುರಿತಾಗಿ ಆಲೋಚಿಸಿ ಮತ್ತು ಕ್ರಿಸ್ತನು ನಿಮಗಾಗಿ ಕೊಂಡುಕೊಂಡಿರುವ ಸ್ವಾತಂತ್ರದಲ್ಲಿ ಹಾಗೂ ಬಿಡುಗಡೆಯಲ್ಲಿ ಇಂದೇ ನಡೆಯಿರಿ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ರೋಮ 12:1ನ ಓದಿರಿ. ನಮ್ಮ ದೇಹಗಳನ್ನು ನಾವು ಏನು ಮಾಡಬೇಕು?

**ರೋಮ 12:1–2** – *ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ – ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದೂ ದೋಷವಿಲ್ಲದ್ದೂ ಯಾವಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.*

2. ರೋಮ 12:2 ಓದಿರಿ. ಈ ವಚನವು ನಾವು ________ ಗಿಂತಲೂ ವ್ಯತ್ಯಾಸವುಳ್ಳವರಾಗಿರಬೇಕೆಂದು ಹೇಳುತ್ತಿದೆ.

3. ಅ.ಕೃ. 17:11 ಓದಿರಿ. ನಮ್ಮ ಆಲೋಚನೆಯನ್ನು ಯಾವುದರ ಅನುಸಾರವಾಗಿ ಮಾಡಬೇಕು?

**ಅ.ಕೃ. 17:11** – *ಆ ಸಭೆಯವರು ಥೆಸಲೋನಿಕದವರಿಗಿಂತ ಸದ್ಗುಣವುಳ್ಳವರಾಗಿದ್ದು ದೇವರ ವಾಕ್ಯವನ್ನು ಶುದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು.*

4. ರೋಮ 8:5–6 ಓದಿರಿ. ಆತ್ಮೀಕ ಮನಸ್ಸನ್ನು ಹೊಂದಿರುವುದರ ಅರ್ಥ ________________________ .

**ರೋಮ 8:5–6** – *ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ, ಪವಿತ್ರಾತ್ಮನನ್ನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಶರೀರಭಾವದವುಗಳ ಮೇಲೆ ಮನಸ್ಸಿಡುವದು ಮರಣ; ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು ಜೀವವೂ ಮನಶ್ಶಾಂತಿಯೂ ಆಗಿದೆ.*

5. ರೋಮ 12:1–2 ಓದಿರಿ. ಈ ವಚನಗಳ ಪ್ರಕಾರ ಯಾವ ಎರಡು ಸಂಗತಿಗಳನ್ನು ನಾವು ಮಾಡಬೇಕಾದ ಅಗತ್ಯವಿದೆ?

6. ಯೆಶಾಯ 26:3 ಓದಿರಿ. ನಾವು ಪರಿಪೂರ್ಣವಾದ ಶಾಂತಿಯಲ್ಲಿ ಹೇಗೆ ನೆಲೆಗೊಳ್ಳಬಹುದು?

   **ಯೆಶಾಯ 26:3–4** – *ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸೆವಿದೆ. ಯೆಹೋವನಲ್ಲಿ ಸದಾ ಭರವಸವಿಡಿರಿ; ಯಾಹುಯೆಹೋವನು ಶಾಶ್ವತವಾಗಿ ಆಶ್ರಯಗಿರಿಯಾಗಿದ್ದಾನೆ.*

7. ಯೆಶಾಯ 26:3–4 ಓದಿರಿ. ನಮ್ಮ ಮನಸ್ಸನ್ನು ಕರ್ತನ ಕಡೆಗೆ ದೃಷ್ಟಿಸುವಂತೆ ಮಾಡುವುದಕ್ಕಿರುವ ಎರಡು ಮಾರ್ಗಗಳು ಯಾವುವು?

# ಉತ್ತರಗಳು

1. ರೋಮ 12:1 ಓದಿರಿ. ನಮ್ಮ ದೇಹಗಳನ್ನು ನಾವು ಏನು ಮಾಡಬೇಕು?

**ನಮ್ಮ ದೇಹವನ್ನು ದೇವರಿಗೆ ಸಮರ್ಪಿಸಬೇಕು**

2. ರೋಮ 12:2 ಓದಿರಿ. ಈ ವಚನವು ನಾವು ____________ ಗಿಂತಲೂ ವ್ಯತ್ಯಾಸವುಳ್ಳವರಾಗಿರಬೇಕೆಂದು ಹೇಳುತ್ತಿದೆ.

**ಲೋಕ ಅಥವಾ ಅವಿಶ್ವಾಸಿಗಳಿಗಿಂತಲೂ**

3. ಅ.ಕೃ. 17:11 ಓದಿರಿ. ನಮ್ಮ ಆಲೋಚನೆಯನ್ನು ಯಾವುದರ ಅನುಸಾರವಾಗಿ ಮಾಡಬೇಕು?

**ದೇವರ ವಾಕ್ಯ**

4. ರೋಮ 8:5–6 ಓದಿರಿ. ಆತ್ಮೀಕ ಮನಸ್ಸನ್ನು ಹೊಂದಿರುವುದರ ಅರ್ಥ ______________________ .

**ಜೀವ ಮತ್ತು ಮನಶ್ಶಾಂತಿ**

5. ರೋಮ 12:1–2 ಓದಿರಿ. ಈ ವಚನಗಳ ಪ್ರಕಾರ ಯಾವ ಎರಡು ಸಂಗತಿಗಳನ್ನು ನಾವು ಮಾಡಬೇಕಾದ ಅಗತ್ಯವಿದೆ?

**ನಮ್ಮನ್ನು ನಾವು ದೇವರಿಗೆ ಸಜೀವ ಯಜ್ಞವಾಗಿ ಸಮರ್ಪಿಸಬೇಕು ಮತ್ತು ನಮ್ಮ ಮನಸ್ಸನ್ನು ನೂತನಪಡಿಸಿಕೊಳ್ಳಬೇಕು.**

6. ಯೆಶಾಯ 26:3 ಓದಿರಿ. ನಾವು ಪರಿಪೂರ್ಣವಾದ ಶಾಂತಿಯಲ್ಲಿ ಹೇಗೆ ನೆಲೆಗೊಳ್ಳಬಹುದು?

**ನಮ್ಮ ಮನಸ್ಸನ್ನು ಕರ್ತನ ಮೇಲೆ ಕೇಂದ್ರೀಕರಿಸುವುದರಿಂದ**

7. ಯೆಶಾಯ 26:3 ಓದಿರಿ. ನಮ್ಮ ಮನಸ್ಸನ್ನು ಕರ್ತನ ಕಡೆಗೆ ದೃಷ್ಟಿಸುವಂತೆ ಮಾಡುವುದಕ್ಕಿರುವ ಕೆಲವು ಮಾರ್ಗಗಳು ಯಾವುವು?

**ಪ್ರಾರ್ಥನೆ, ಸ್ತುತಿ, ವಾಕ್ಯವನ್ನು ಧ್ಯಾನಿಸುವುದು, ಕೃತಜ್ಞತೆ ಸಲ್ಲಿಸುವುದು, ಇತರೆ.**

## ಪಾಠ 4

# ಕ್ರಿಸ್ತನ ಸಭೆಯ ಪ್ರಾಮುಖ್ಯತೆ

*ಡೂಣ್ ಕ್ರೊ*

ಇಂದು ನಾವು ಕ್ರಿಸ್ತನ ಸಭೆಯ ಪ್ರಾಮುಖ್ಯತೆಯ ಕುರಿತಾಗಿ ಮಾತನಾಡುತ್ತಿರುವೆವು. ನಾನು ಇಬ್ರಿಯ 10:25ರ ವಚನವನ್ನು ಓದಲು ಬಯಸುತ್ತೇನೆ. ಇದು ಹೀಗೆ ಹೇಳುತ್ತದೆ, *"ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ, ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ."* ನಾವು ಕ್ರಿಸ್ತನ ಸಭೆಯ ಪ್ರಾಮುಖ್ಯತೆಯ ಕುರಿತಾಗಿ ನೋಡುವಾಗ, ನನ್ನ ಪ್ರಶ್ನೆಯೇನೆಂದರೆ, "ಸಭೆ ಅಂದರೆ ಏನು?"

ಕೊಲೊರಾಡೊ ಎಂಬ ಸ್ಥಳದಲ್ಲಿರುವ ಕೊಲೊರಾಡೊ ಸ್ಪ್ರಿಂಗ್ಸ್‌ನ ಒಂದು ಸ್ಥಳೀಯ ಸಭೆಯಲ್ಲಿ ನಾನು ಶಿಷ್ಯತ್ವದ ಸುವಾರ್ತಾ ಸಾರುವಿಕೆಯ ಕಾರ್ಯಕ್ರಮವನ್ನು ನಡೆಸಿದೆನು. ಇದನ್ನು ಹೇಗೆ ಉಪಯೋಗಿಸುವುದು ಎಂದು ಜನರಿಗೆ ತರಬೇತಿ ನೀಡಿದೆವು ಮತ್ತು ಇದನ್ನು ನಾವು ಹೊರಗಡೆ ಉಪಯೋಗಿಸಿದೆವು. ಈ ಸ್ಥಳೀಯ ಸಭೆಯೊಂದಿಗೆ ಆರು ತಿಂಗಳು ಕೆಲಸ ಮಾಡುವಷ್ಟರಲ್ಲಿಯೇ, ಆ ಸ್ಥಳೀಯ ಸಭೆಯ ಹೊರಗೆ ನಾವು ಇಪ್ಪತ್ತು ಸತ್ಯವೇದ ಅದ್ಯಯನಗಳ ಗುಂಪನ್ನು ಸ್ಥಾಪಿಸಿದ್ದೆವು. ತಿಂಗಳುಗಳವರೆಗೆ, ಈ ಜನರೊಂದಿಗೆ ಸತ್ಯವೇದ ಅಧ್ಯಯನದ ಕೆಲಸ ಮಾಡುತ್ತಿದ್ದೆವು. ಒಂದು ದಿನ ಸಭಾಪಾಲಕರು "ನೋಡಿ, ರಕ್ಷಣಾ ಮಾರ್ಗದಲ್ಲಿರುವವರನ್ನು ಕರ್ತನು ದಿನಾಲು ಸಭೆಗೆ ಸೇರಿಸುತ್ತಿದ್ದನು ಎಂದು ಸತ್ಯವೇದವು ಹೇಳುತ್ತದೆ. ಆದರೆ ಈ ಸತ್ಯವೇದ ಅಧ್ಯಯನ ಮಾಡುತ್ತಿರುವ ಜನರು ನಮ್ಮ ಸಭೆಯೊಳಗೆ ಬರುವುದನ್ನು ನಾವು ಕಾಣುತ್ತಿಲ್ಲ, ಏಕೆ?" ಎಂದು ಹೇಳಿದ ಮಾತು, ನನ್ನಲ್ಲಿ ಗೊಂದಲವನ್ನು ಉಂಟುಮಾಡಿತು.

ನಾವು ಹೊರಗಡೆ ಇದ್ದಾಗ, ಜನರು ರಕ್ಷಿಸಲ್ಪಡುತ್ತಿದ್ದರು, ಅವರನ್ನು ಶಿಷ್ಯತ್ವದಲ್ಲಿ ನಡೆಸಲಾಗುತ್ತಿತ್ತು ಮತ್ತು ಅವರನ್ನು ಕರ್ತನಲ್ಲಿ ಬೆಳೆಸುವ ಸೇವೆಯು ನಡೆಯುತ್ತಿತ್ತು. ಆದರೆ ಸಭಾಪಾಲಕರ ಮಾತಿನ ಅರ್ಥವೇನಾಗಿತ್ತೆಂದರೆ, "ಭಾನುವಾರದಂದು ಈ ಕಟ್ಟಡದೊಳಗೆ ಅವರು ಏಕೆ ಬರುತ್ತಿಲ್ಲ?" ಸಭೆಯ ಕುರಿತಾಗಿ ನನಗಿದ್ದ ತಿಳುವಳಿಕೆಯೂ ಅಲ್ಪವಾಗಿತ್ತು. ಸಭಾಪಾಲಕರು ಹೀಗೆ ಹೇಳಿದ್ದು ನಿಜವಾಗಿಯೂ ನನಗೆ ಗೊಂದಲವನ್ನು ಉಂಟುಮಾಡಿತು ಮತ್ತು ಏನು ಮಾಡಬೇಕೆಂದು ನನಗೆ ತಿಳಿದಿರಲಿಲ್ಲ. *ಆಗ ನಾನು ಶಿಷ್ಯತ್ವದ ಸುವಾರ್ತಾ*

*ಸಾರುವಿಕೆಯ ಕಾರ್ಯಕ್ರಮವು ನಿಜವಾಗಿಯೂ ಕೆಲಸ ಮಾಡುತ್ತಿದೆಯೇ? ನಾವು ನಿಜವಾಗಿಯೂ ಜನರ ಜೀವಿತಗಳನ್ನು ಮುಟ್ಟುತ್ತಿರುವೆವೋ?* ಎಂದು ಆಲೋಚಿಸುತ್ತಿದ್ದೆನು. ನಾವು ಅನೇಕರನ್ನು ತಲುಪುತ್ತಿದ್ದೆವು ಎಂಬುದು ನನಗೆ ತಿಳಿದಿತ್ತು, ಆದರೆ ಅವರು ಭಾನುವಾರದಂದು ಸಭೆಗೆ ಏಕೆಬರುತ್ತಿಲ್ಲ ಎಂಬುದು ನನಗೆ ಗೊಂದಲ ತರುವಂತಹುದಾಗಿತ್ತು.

ಆಗ ನಾನು "ಸಭೆ" ಎಂಬ ಪದದ ಕುರಿತಾಗಿ ಅಧ್ಯಯನ ಮಾಡಲು ನಿರ್ಧರಿಸಿದೆ. ಈ ಪಾಠದಲ್ಲಿ ಏನು ತಿಳಿಸಲಾಗಿದೆಯೋ ಅದು ನಾನು ಅಧ್ಯಯನದಲ್ಲಿ ಕಂಡುಕೊಂಡಂತಹ ಸಂಗತಿಗಳಾಗಿವೆ. ರೋಮ 16:3ರಲ್ಲಿ, 1 ಕೊರಿಂಥ 16:19ರಲ್ಲಿ, ಕೊಲೊಸ್ಸೆ 4:15ರಲ್ಲಿ, ಫಿಲೆಮೋನ 2, ಅ.ಕೃ. 5:42ರಲ್ಲಿ ಮತ್ತು ಅ.ಕೃ. 20:20ರಲ್ಲಿ ಸತ್ಯವೇದವು ಹೊಸ ಒಡಂಬಡಿಕೆಯ ಆದಿಸಭೆಯು ಒಬ್ಬರ ಮನೆಯಲ್ಲಿ ಒಟ್ಟಾಗಿ ಸೇರಿಬರುತ್ತಿದ್ದುದರ ಕುರಿತಾಗಿ ಪ್ರಮುಖವಾಗಿ ಮಾತನಾಡುತ್ತದೆ. ಎಲ್ಲಾ ವಿಧದ ಸಭೆಗಳು ಇವೆ ಎಂಬುದು ನನಗೆ ತಿಳಿದಿದೆ. ಮನೆಯಲ್ಲಿ ಸಭೆಗಳು, ಸ್ವಲ್ಪ ಜನರು ಮತ್ತು ಅಧಿಕ ಜನರಿರುವ ಸಭೆಗಳು, ಮತ್ತು ಬಹಳ ಜನರಿಂದ ತುಂಬಿರುವ ದೊಡ್ಡ ದೊಡ್ಡ ಸಭೆಗಳು. ಆದರೆ ಈ ವಾಕ್ಯಗಳಲ್ಲಿನಿಜವಾಗಿಯೂ ನನ್ನ ಗಮನವನ್ನು ಸೆಳೆದಂತಹ ಸಂಗತಿಯೇನೆಂದರೆ, ಹೊಸ ಒಡಂಬಡಿಕೆಯ ಸಭೆಯು ಚಿಕ್ಕ ಗುಂಪುಗಳಾಗಿ ಜನರ ಮನೆಗಳಲ್ಲಿ ಸೇರಿಬರುತ್ತಿರುವಂತೆ ಕಾಣಲ್ಪಡುತ್ತದೆ.

ಲಾರೆನ್ಸ್ ಓ. ರಿಚರ್ಡ್ಸ್‌ರವರ *ದಿ ಎಕ್ಸ್‌ಪೊಸಿಟರಿ ಡಿಕ್ಷನರಿ ಆಫ್ ಬೈಬಲ್* (The Expository Dictionary of Bible Words) (ಪುಟ 164) ಹೇಳುತ್ತದೆ, 'ಸಭೆ'ಎನ್ನುವ ಪದದ ಅರ್ಥದ ಕುರಿತು ಗೊಂದಲಕ್ಕೀಡಾಗುವ ಯಾರನ್ನಾದರೂ ಸಹ ಮನ್ನಿಸಬಹುದಾಗಿದೆ; ಏಕೆಂದರೆ ನಾವು ಈ ಪದವನ್ನು ಅನೇಕ ವಿಧಗಳಲ್ಲಿ ಉಪಯೋಗಿಸುತ್ತೇವೆ. ಇದರ ಅರ್ಥ ಒಂದು ನಿರ್ದಿಷ್ಟವಾದ ಕಟ್ಟಡ (ಉದಾ, 4ನೇ ರಸ್ತೆಯಲ್ಲಿರುವ ಸಭೆ), ಒಂದು ಪಂಗಡ ಅಥವಾ ಕ್ರಮಬದ್ಧವಾದ ನಂಬಿಕೆ (ಅಮೆರಿಕಾದಲ್ಲಿರುವ ರಿಫಾರ್ಮಡ್ ಚರ್ಚ್) (ಅಥವಾ ಬ್ಯಾಪ್ಟಿಸ್ಟ್ ಸಭೆ), ಹಾಗೂ ಭಾನುವಾರದ ಸೇರುವಿಕೆ (ಉದಾ, ಇಂದು ನೀನು ಸಭೆಯ ಹೋಗಿದ್ದೆಯಾ?) ಇವುಗಳಲ್ಲಿ ಯಾವುದೂ ಸಹ ಸತ್ಯವೇದಕ್ಕನುಗುಣವಾದ ನಿರ್ದಿಷ್ಟತೆಯಲ್ಲಿ ಉಪಯೋಗಿಸಿರುವಂತದ್ದಲ್ಲ." ಅನಂತರ ನಾನು ಆಲೋಚಿಸಲಾರಂಭಿಸಿದೆ. *ನಿಜವಾಗಿಯೂ ಇದರ ಅರ್ಥವೇನು? "ಸಭೆ" ಎಂಬ ಪದದ ನಿಜವಾದ ಅರ್ಥವೇನು?* ಇದನ್ನು ಮುಂದುವರೆಸುತ್ತೇನೆ,"ಒಂದು ಗುಂಪಿನ ಜನರು ಆರಾಧನೆಯನ್ನುನಡೆಸುವಂತದ್ದು ಎನ್ನುವುದರ ಬದಲಾಗಿ, ಅನೇಕ ಜನರು ಸಭೆ ಎಂಬುದು ಧಾರ್ಮಿಕ ಕಾರ್ಯಗಳನ್ನು ನಡೆಸುವುದಕ್ಕಾಗಿ ಇರುವ ಒಂದು ಕಟ್ಟಡವೆಂದು ಆಲೋಚಿಸುವುದರಿಂದ, ಸಭೆಗೆ ಅರ್ಪಿಸುವುದನ್ನು ತಪ್ಪಾಗಿ ಅರ್ಥೈಸಲಾಗಿದೆ." "ಸಭೆ" ಎನ್ನುವುದನ್ನು ಗ್ರೀಕ್ ಭಾಷೆಯಲ್ಲಿ ಎಕ್ಲೆಸಿಯ ಎಂದು ಹೇಳಲಾಗುತ್ತದೆ, ಇದರ ಅಕ್ಷರಶಃ ಅರ್ಥವೇನೆಂದರೆ, ದೇವರನ್ನು ಆರಾಧಿಸಲು ಅಥವಾ ಪ್ರಾರ್ಥಿಸಲು ಅಥವಾ ಸ್ತುತಿಸಲು ಅಥವಾ ಅತನನ್ನೇ ದೃಷ್ಟಿಸುವುದಕ್ಕಾಗಿ ಒಟ್ಟಾಗಿ ಸೇರಿಬರುವ ಜನರ ಗುಂಪಾಗಿದೆ. ಇಲ್ಲಿ ನಾನು ಇನ್ನಿತರ ವಿಷಯಗಳನ್ನೂ ಸಹ ಓದಲಿರುವೆನು. ಹೊಸ ಒಡಂಬಡಿಕೆಯಲ್ಲಿನ *ಎಕ್ಲೆಸಿಯ* ಯಾವುದೇ ಸಂಖ್ಯೆಯಲ್ಲಿರುವ ವಿಶ್ವಾಸಿಗಳನ್ನು ಒಳಗೊಂಡಿರುವಂತದ್ದು. ಇದು ಮನೆಗಳಲ್ಲಿ ಭೇಟಿಯಾಗುವ ಚಿಕ್ಕ ಗುಂಪುಗಳಾಗಿರಬಹುದು (ರೊಮ 16:5). ಒಂದು ದೊಡ್ಡ

ನಗರದಲ್ಲಿ ಸೇರಿಬರುವ ಎಲ್ಲಾ ವಿಶ್ವಾಸಿಗಳನ್ನು ಒಳಗೊಳ್ಳಬಹುದು (ಅ.ಕೃ. 11:22), ಅಥವಾ ಒಂದು ದೊಡ್ಡ ಭೌಗೋಳಿಕ ಜಿಲ್ಲೆಯಾಗಿರಬಹುದು, ಅಂದರೆ ಏಷ್ಯಾ ಅಥವಾ ಗಲಾತ್ಯ". ಇದು ಹೀಗೇ ಮುಂದುವರೆಯುತ್ತದೆ, "ಸಭೆಯ ಒಂದು ವಿಶಿಷ್ಟ ಕೂಡುವಿಕೆಯು ಮನೆಯಲ್ಲಿ ಸೇರಿಬರುವಂತಹುದಾಗಿತ್ತು. ಈ ರೀತಿಯ ಗುಂಪು ಭೇಟಿಯಾಗುವಾಗ ಪ್ರತಿಯೊಬ್ಬರೂ ಕೀರ್ತನೆ ಹಾಡುತ್ತಿದ್ದರು, ತಿಳುವಳಿಕೆ ನೀಡುವ ವಾಕ್ಯ, ಒಂದು ಪ್ರಕಟಣೆ, ಅನ್ಯಭಾಷೆ ಅಥವಾ ಅದರ ಅರ್ಥವಿವರಣೆ ಇರುತ್ತಿತ್ತು (1 ಕೊರಿಂಥ 14:26). ಒಬ್ಬ ವ್ಯಕ್ತಿಯು ಪ್ರಸಂಗಿಸುತ್ತಿದ್ದರು ಹಾಗೂ ಇನ್ನಿತರರು 'ಹೇಳಲ್ಪಟ್ಟಂತಹ ಸಂಗತಿಗಳನ್ನು ಬಹು ಎಚ್ಚರಿಕೆಯಿಂದ ಗಮನಿಸುತ್ತಿದ್ದರು' (1 ಕೊರಿಂಥ 14:29)...ಪ್ರತಿಯೊಬ್ಬ ವ್ಯಕ್ತಿಯೂ ತಮಗಿರುವ ಆತ್ಮೀಕ ವರಗಳ ಮೂಲಕ ಇತರರಿಗೆ ಕೊಡುವಂತವರಾಗ ಬೇಕೆಂದು ಮತ್ತು ಮತ್ತೊಬ್ಬರಿಗೆ ಸೇವೆ ಸಲ್ಲಿಸಬೇಕೆಂದು ಅಪೇಕ್ಷಿಸಲಾಗುತ್ತಿತ್ತು."

ಇಬ್ರಿಯ 10:25ರಲ್ಲಿ ಹೇಳುತ್ತದೆ, *"ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ."* ಸಭೆ ಎಂಬುದು ಯೇಸುವನ್ನು ದೃಷ್ಟಿಸಲು, ಕರ್ತನನ್ನು ಆರಾಧಿಸಲು, ಕರ್ತನಿಂದ ಮಾರ್ಗದರ್ಶನವನ್ನು ಹೊಂದಲು, ಆ ಮಾರ್ಗದರ್ಶನವನ್ನು ಅನುಸರಿಸುವ ಉದ್ದೇಶಕ್ಕಾಗಿ ಜನರು ಒಟ್ಟಾಗಿ ಸೇರಿಬರುವುದಾಗಿದೆ. ಹೊಸ ಒಡಂಬಡಿಕೆಯ ಆದಿ ಸಭೆಯು ಒಟ್ಟಾಗಿ ಕೂಡಿಬರುವುದರ ಪ್ರಾಥಮಿಕ ಉದ್ದೇಶವು ಭಕ್ತಿವೃದ್ಧಿಗಾಗಿ ಇತ್ತು. ಅವರು ಒಬ್ಬರನ್ನೊಬ್ಬರು ನಂಬಿಕೆಯಲ್ಲಿ ಕಟ್ಟುವ ಉದ್ದೇಶದಿಂದ ಕೂಡಿಬರುತ್ತಿದ್ದರು.

ಆದಿ ಸಭೆಯು ಸುವಾರ್ತೆಯನ್ನು ಸಾರುತ್ತಿದ್ದಂತಹ ಸಭೆಯಾಗಿತ್ತು. ಜನರು ಎಲ್ಲೆಡೆ ಚದುರಿಹೋಗಿ, ಯೇಸುಕ್ರಿಸ್ತನಲ್ಲಿರುವ ತಮ್ಮ ನಂಬಿಕೆಯನ್ನು ಸಾರುತ್ತಿದ್ದರು ಮತ್ತು ಅವರು ಹಾಗೆ ಮಾಡಿದಾಗ, ಕರ್ತನು ಜನರನ್ನು ಸಭೆಗೆ ಸೇರಿಸುತ್ತಿದ್ದನು, ಆದರೆ ಒಂದು ಕಟ್ಟಡದೊಳಗೆ ಅಲ್ಲ. ಅಂದರೆ ಜನರು ಪಶ್ಚಾತ್ತಾಪ ಪಟ್ಟು, ನಂಬಿಕೆ ಇಟ್ಟಾಗ ಅವರನ್ನು ಸಭೆಯ ಗುಂಪಿಗೆ ಸೇರಿಸುತ್ತಿದ್ದನು. ಅನಂತರ ಅವರು ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವುದಕ್ಕಾಗಿ, ತಮ್ಮ ಆತ್ಮೀಕ ವರಗಳನ್ನು ಕಾರ್ಯರೂಪದಲ್ಲಿ ತರುವುದಕ್ಕಾಗಿ, ಒಬ್ಬರಿಗೊಬ್ಬರು ಸೇವೆ ಮಾಡುವುದಕ್ಕಾಗಿ, ಮತ್ತು ಆಹಾರವನ್ನು ಒಟ್ಟಾಗಿ ಹಂಚಿಕೊಂಡು ಸೇವಿಸುವುದರ ಮೂಲಕ ಒಂದು ಅನ್ಯೋನ್ಯತೆಯ ಸಮಯವನ್ನು ಹೊಂದುವುದಕ್ಕೆ ಒಟ್ಟಾಗಿ ಸೇರಿ ಬರುತ್ತಿದ್ದರು. ಅವರು ಒಟ್ಟಾಗಿರುವಾಗ, ಒಬ್ಬರಿಗೊಬ್ಬರು ಭಕ್ತಿವೃದ್ಧಿಯನ್ನುಂಟು ಮಾಡಲು ಅವರು ತಮ್ಮ ಆತ್ಮೀಕ ವರಗಳನ್ನು ಕಾರ್ಯರೂಪದಲ್ಲಿ ಉಪಯೋಗಿಸುತ್ತಿದ್ದರು. ಅನಂತರ ಅವರು ಹೊರಗೆ ಹೋಗಿ ವಾಕ್ಯವನ್ನು ಪ್ರಸಂಗಿಸುತ್ತಿದ್ದರು ಮತ್ತು ಇದೇ ರೀತಿಯ ಕಾರ್ಯಗಳು ಪುನಃ ಪ್ರಾರಂಭಗೊಳ್ಳುತ್ತಿದ್ದವು. ಅವರು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆ ಇಟ್ಟಿದ್ದರು ಮತ್ತು ತಾವೇ ಗುಂಪಾಗಿ ಕೂಡಿಬರುತ್ತಿದ್ದರು. ಅವರು ಎಲ್ಲಿ ಸೇರಿ ಬರುತ್ತಿದ್ದರು ಎಂಬುದು ಮುಖ್ಯವಾಗಿರಲಿಲ್ಲ. ಅಂದರೆ ಅವರು ಒಂದು ಕಟ್ಟಡದಲ್ಲಾಗಲಿ ಅಥವಾ ಒಬ್ಬ ವ್ಯಕ್ತಿಯ ಮನೆಯಲ್ಲಾಗಲಿ ಕೂಡಿಬರುತ್ತಿದ್ದರು. ಇದು ದೊಡ್ಡ ಸಂಖ್ಯೆಯ ಜನರ ಗುಂಪಾಗಿರುತ್ತಿತ್ತು ಮತ್ತು ಮನೆಗಳಲ್ಲಿ ಕೂಡಿಬರುತ್ತಿದ್ದದ್ದು ಚಿಕ್ಕ ಗುಂಪುಗಳಾಗಿ ಇರುತ್ತಿದ್ದವು. ಅವರು ಕರ್ತನ ಹೆಸರಿನಲ್ಲಿ ತಮ್ಮ ವರಗಳನ್ನು ಉಪಯೋಗಿಸುವ ಉದ್ದೇಶದಿಂದ, ಒಬ್ಬರನ್ನೊಬ್ಬರು

ಪ್ರೋತ್ಸಾಹಿಸಲು ಮತ್ತು ಇತರರೊಂದಿಗೆ ಅನ್ಯೋನ್ಯತೆಯನ್ನು ಉಂಟುಮಾಡುವುದಕ್ಕೆ ಹಾಗೂ ಇದರ ಅಂತ್ಯಫಲವು ಭಕ್ತಿವೃದ್ಧಿ ಮತ್ತು ಬೆಳವಣಿಗೆಯಾಗಿದೆ.

ನಾನು ಈ ಮೊದಲೇ ಹೇಳಿದಂತೆ ಸ್ಥಳೀಯ ಸಭೆಯ ಮೂಲಕ ಶಿಷ್ಯತ್ವದ ಸುವಾರ್ತೆ ಸಾರೋಣ ಕಾರ್ಯಕ್ರಮದ ಮೂಲಕ ನಾವು ಇಡೀ ಪಟ್ಟಣದಲ್ಲಿ ಇಪ್ಪತ್ತು ವಿವಿಧ ಸತ್ಯವೇದ ಅಧ್ಯಯನದ ಗುಂಪುಗಳನ್ನು ನಡೆಸುತ್ತಿದ್ದು, ನಾವು ಇಪ್ಪತ್ತು ವಿವಿಧ ಸಭೆಗಳಲ್ಲಿ ಸೇರಿಬರುತ್ತಿರುವಂತೆ ಇದೆ ಎಂಬುದನ್ನು ನಾನು ಕಂಡುಕೊಂಡೆ. ಇಂದು ನಾವು ತಿಳಿದಿರುವ ಹಾಗೆ ಇದು ಸಭೆಯಾಗಿರಲಿಲ್ಲ, ಆದರೆ ನಾವು "ಸಭೆಯಾಗಿ" ವಾರಕ್ಕೆ ಇಪ್ಪತ್ತು ಬಾರಿ ಭೇಟಿಯಾಗುತ್ತಿದ್ದೆವು, ಏಕೆಂದರೆ ನಾವು ಕರ್ತನಾದ ಯೇಸುವಿನ ಹೆಸರಿನಲ್ಲಿ ಕೂಡಿಬಂದು, ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವುದಕ್ಕೂ, ಕರ್ತನಾದ ಯೇಸುವನ್ನು ದೃಷ್ಟಿಸುವುದಕ್ಕೂ, ದೇವರ ವಾಕ್ಯದ ಮೂಲಕ ಮಾರ್ಗದರ್ಶನವನ್ನು ಹೊಂದುವುದಕ್ಕೂ ಮತ್ತು ನಮ್ಮ ಆತ್ಮೀಕ ವರಗಳನ್ನು ಕಾರ್ಯರೂಪದಲ್ಲಿ ತರುವುದಕ್ಕೂ ಸೇರಿಬರುತ್ತಿದ್ದೆವು.

ನೀವು ಯಾವ ಸಭೆಗೆ ಬೇಕಾದರೂ ಹೋಗಿರಿ, ಅದರ ಬಗ್ಗೆ ಚಿಂತೆಯಿಲ್ಲ – ನೀವು ನಿರ್ದಿಷ್ಟ ಕ್ರೈಸ್ತ ಪಂಗಡದ ಸಭೆಗಳಲ್ಲಿರುವಿರೋ ಅಥವಾ ಪಂಗಡವಿಲ್ಲದ ಸಭೆಯಲ್ಲಿರುವಿರೋ, ನೀವು ಅತಿದೊಡ್ಡ ಸಭೆಯಲ್ಲಿ ಇಲ್ಲವೇ ಅತಿ ಚಿಕ್ಕ ಗುಂಪಿನಲ್ಲಿರುವಿರೋ ಮುಖ್ಯವಲ್ಲ – ದೇವರ ವಾಕ್ಯವು ನಮಗೆ ತಿಳಿಸುವುದೇನೆಂದರೆ ಕರ್ತನ ದಿನವು ಸಮೀಪಿಸುತ್ತಿದೆ ಮತ್ತು ಪಾಪವು ಅಧಿಕವಾಗುತ್ತಿದೆ ಆದರೆ ದೇವರ ಕೃಪೆಯು ಅತ್ಯಧಿಕವಾಗಿ ಆವರಿಸುತ್ತಿದೆ. ದೇವರ ಕೃಪೆಯು ದೇವಜನರ ಈ ಒಟ್ಟುಗೂಡುವಿಕೆಯೊಳಗೆ ಅಂದರೆ ಸಬೆಯೊಳಗೆ ಆವರಿಸಿಕೊಳ್ಳುವಂತಹುದಾಗಿದೆ. ಪ್ರತಿಯೊಬ್ಬ ವಿಶ್ವಾಸಿಯೂ ಯೇಸು ಕ್ರಿಸ್ತನ ಸೇವೆಯ ಭಾಗವಾಗಿರುವ ಸಭೆಯಲ್ಲಿ, ನೀವು ಒಬ್ಬರಿಗೊಬ್ಬರು ಸೇವೆ ಸಲ್ಲಿಸಬಹುದು, ಮತ್ತು ಒಬ್ಬರೊಂದಿಗೊಬ್ಬರು ಆತ್ಮೀಕ ವರಗಳಿಂದ ಸೇವೆ ಸಲ್ಲಿಸುತ್ತಾ ಅವರನ್ನು ಪ್ರೋತ್ಸಾಹಿಸಬಹುದು.

ಈ ವಿಧದಲ್ಲಿ ನಾವು ಒಂದು ಗುಂಪಿನ ವಿಶ್ವಾಸಿಗಳೊಂದಿಗೆ ಭೇಟಿಯಾಗುವುದರಿಂದ ಎಲ್ಲರೂ ಪ್ರಯೋಜನವನ್ನು ಪಡೆಯುತ್ತೇವೆ. ಕರ್ತನಾದ ಯೇಸುವಿನ ಹೆಸರಿನಲ್ಲಿ ಕೇವಲ ಇಬ್ಬರು ಅಥವಾ ಮೂವರು ಮಾತ್ರ ಭೇಟಿಯಾಗುತ್ತಿದ್ದರೂ ಸಹ, ನಾವು ಒಂದು ಕ್ರಮಬದ್ಧವಾದ ರೀತಿಯಲ್ಲಿ ಒಟ್ಟಾಗಿ ಸೇರಿಬರಬೇಕು. ನಮ್ಮ ಆತ್ಮೀಕ ವರಗಳನ್ನು ಉಪಯೋಗಿಸಲು, ಒಬ್ಬರನ್ನೊಬ್ಬರು ಎಚ್ಚರಿಸಲು, ಒಬ್ಬರನ್ನೊಬ್ಬರು ಪ್ರೋತ್ಸಾಹಿಸಲು, ಒಟ್ಟಾಗಿ ಯೇಸುವನ್ನು ದೃಷ್ಟಿಸಲು ಮತ್ತು ಒಬ್ಬರಿಗೊಬ್ಬರು ಪ್ರಾರ್ಥಿಸುವುದಕ್ಕಾಗಿ ಒಂದಾಗಿ ಕೂಡಿಬರುವುದು ಒಳ್ಳೆಯದಾಗಿದೆ. ಸಭೆಯ ಕುರಿತಾಗಿ ನಾವು ಹೇಳುವುದಕ್ಕೆ ಅನೇಕ ಸಂಗತಿಗಳುಂಟು. ನಾವು ಹಿರಿಯರ ಬಗ್ಗೆ, ಮೇಲ್ವಿಚಾರಕರ ಬಗ್ಗೆ, ಸಭಾಪಾಲಕರ ಬಗ್ಗೆ, ಮತ್ತು ಸಭೆಯ ಆಡಳಿತದ ಬಗ್ಗೆ ಮಾತನಾಡಬಹುದು ಆದರೆ ಈ ಬೋಧನೆಯ ಉದ್ದೇಶವು ಅದಲ್ಲ. ಈ ಬೋಧನೆಯ ಉದ್ದೇಶವೇನೆಂದರೆ ಸಭೆಯ ಉದ್ದೇಶವನ್ನು ತಿಳಿದುಕೊಳ್ಳುವುದು ಮತ್ತು ಯಾವುದೇ ಒಬ್ಬ ವ್ಯಕ್ತಿಯು ಯಾರೂ ಇಲ್ಲದೆ ದ್ವೀಪದಲ್ಲಿ ಒಬ್ಬೊಂಟಿಗನಾಗಿರುವಂತೆ

ಇರಬೇಕಾಗಿಲ್ಲ ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಈ ವಿಧವಾಗಿ ಒಂಟಿಯಾಗಿ ನಾವು ಜೀವಿಸಲು ಸಾಧ್ಯವಿಲ್ಲ. ನಾವು ರಕ್ಷಣೆಯನ್ನು ಪಡೆದಾಗ, ದೇವರು ನಮ್ಮನ್ನು ಕ್ರಿಸ್ತನ ದೇಹದಲ್ಲಿ ಇರಿಸಿದನು – ಇದು ವಿಶ್ವಾಸಿಗಳ ಸಾರ್ವತ್ರಿಕ ದೇಹವಾಗಿದೆ. ನಮಗೆ ಒಬ್ಬರಿಗೊಬ್ಬರ ಅವಶ್ಯಕತೆ ಉಂಟು ಮತ್ತು ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವುದಕ್ಕಾಗಿ ಹಾಗೂ ದೇವರು ನಮಗೆ ನೀಡಿರುವ ಆತ್ಮೀಕ ವರಗಳೊಂದಿಗೆ ಒಬ್ಬರಿಗೊಬ್ಬರು ಸೇವೆ ಸಲ್ಲಿಸುವುದಕ್ಕಾಗಿ ನಾವು ಒಟ್ಟಾಗಿ ಕೂಡಿಬರಬೇಕಾಗಿದೆ. ನೀವು ಇಂದೇ ದೇವರ ಜನರೊಂದಿಗೆ ಭೇಟಿಯಾಗಿರಿ ಎಂದು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಇಬ್ರಿಯ 10:25 ಓದಿರಿ. ನಾವು ಯಾವುದನ್ನು ಬಿಟ್ಟುಬಿಡಬಾರದು?

**ಇಬ್ರಿಯ 10:25** – *ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ.*

2. ಅ.ಕೃ. 5:42 ಓದಿರಿ. ಪ್ರತಿದಿನ ದೇವಾಲಯದಲ್ಲಿಯೂ ಮತ್ತು ಮನೆಮನೆಯಲ್ಲಿಯೂ ಯೇಸುವಿನ ಕುರಿತು __________ ಮತ್ತು ________________ ಮಾಡುತ್ತಿದ್ದರು.

**ಅ.ಕೃ. 5:42** – *ಪ್ರತಿದಿನ ಎಡೆಬಿಡದೆ ದೇವಾಲಯದಲ್ಲಿಯೂ ಮನೆಮನೆಯಲ್ಲಿಯೂ ಉಪದೇಶ ಮಾಡುತ್ತಾ ಕ್ರಿಸ್ತನಾದ ಯೇಸುವಿನ ವಿಷಯವಾದ ಶುಭವರ್ತಮಾನವನ್ನು ಸಾರುತ್ತಾ ಇದ್ದರು.*

3. ಅ.ಕೃ. 2:42 ಓದಿರಿ. ಯಾವ ನಾಲ್ಕು ಸಂಗತಿಗಳನ್ನು ಆದಿಸಭೆಯು ಮಾಡುವುದರಲ್ಲಿ ನಿರತರಾಗಿದ್ದರು?

**ಅ.ಕೃ. 2:42** – *ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು.*

4. ಅ.ಕೃ. 2:44–45 ಓದಿರಿ. ಸರಿ ಅಥವಾ ತಪ್ಪು: ಆದಿ ಸಭೆಯು ಒಂದು ಸಭೆಯನ್ನು ಕಟ್ಟುವುದಕ್ಕಾಗಿ ಹಣವನ್ನು ನೀಡುತ್ತಿತ್ತು.

**ಅ.ಕೃ. 2:44–45** – *ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ತಮ್ಮತಮ್ಮ ಚಿರಸ್ಥಿರಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು. [46] ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಲ ಹೃದಯದಿಂದಲೂ ಊಟಮಾಡುತ್ತಾ ಇದ್ದರು.*

5. 1 ಕೊರಿಂಥ 12:28 ಓದಿರಿ. ದೇವರು ತನ್ನ ಸಭೆಯಲ್ಲಿ ಇಟ್ಟಿರುವಂತಹ 8 ವಿವಿಧ ವರಗಳ ಪಟ್ಟಿ ಮಾಡಿ.

**1 ಕೊರಿಂಥ 12:28** – *ದೇವರು ತನ್ನ ಸಭೆಯಲ್ಲಿ ಮೊದಲನೇದಾಗಿ ಅಪೊಸ್ತಲರನ್ನು, ಎರಡನೇದಾಗಿ ಪ್ರವಾದಿಗಳನ್ನು, ಮೂರನೇದಾಗಿ ಉಪದೇಶಕರನ್ನು ಇಟ್ಟಿದ್ದಾನೆ; ಆ ಮೇಲೆ ಮಹತ್ಕಾರ್ಯ ಮಾಡುವ ಶಕ್ತಿಯನ್ನೂ ನಾನಾ ರೋಗಗಳನ್ನು ವಾಸಿಮಾಡುವ ವರವನ್ನೂ ಪರಸಹಾಯ ಮಾಡುವ ಗುಣವನ್ನೂ ಕಾರ್ಯಗಳನ್ನು ನಿರ್ವಹಿಸುವ ಜ್ಞಾನವನ್ನೂ ವಿವಿಧ ವಾಣಿಗಳನ್ನಾಡುವ ವರವನ್ನೂ ಅವರವರಿಗೆ ಕೊಟ್ಟಿದ್ದಾನೆ.*

6. 1 ಕೊರಿಂಥ 14:26 ಓದಿರಿ. ದೇವ ಜನರು ಸಭೆಯಾಗಿ ಒಟ್ಟಾಗಿ ಸೇರಿಬರುತ್ತಿದ್ದಾಗ, ಅಲ್ಲಿ ತಮ್ಮ ವರಗಳನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಸ್ವತಂತ್ರ ಸನ್ನಿವೇಶ ಇತ್ತು. ಅವರು ಒಟ್ಟಾಗಿ ಸೇರಿ ಬಂದಾಗ ಸಂಭವಿಸಿದಂತಹ 5 ಕಾರ್ಯಗಳನ್ನು ತಿಳಿಸಿ.

**1 ಕೊರಿಂಥ 14:26** – *ಹಾಗಾದರೇನು, ಸಹೋದರರೇ? ನೀವು ಕೂಡಿ ಬಂದಿರುವಾಗ ಒಬ್ಬನು ಹಾಡುವದೂ, ಒಬ್ಬನು ಉಪದೇಶ ಮಾಡುವದೂ, ಒಬ್ಬನು ತನಗೆ ಪ್ರಕಟವಾದದ್ದನ್ನು ತಿಳಿಸುವುದೂ, ಒಬ್ಬನು ವಾಣಿಯನ್ನಾಡುವದೂ, ಒಬ್ಬನು ಅದರ ಅರ್ಥವನ್ನು ಹೇಳುವದೂ ಉಂಟಷ್ಟೆ. ನೀವು ಏನು ಮಾಡಿದರೂ ಭಕ್ತಿವೃದ್ಧಿಗಾಗಿಯೇ ನಡಿಸಿರಿ.*

7. ರೋಮ 6:1 ಓದಿರಿ. ಹೊಸ ಒಡಂಬಡಿಕೆಯ ಆದಿ ಸಭೆಯವರು ಪ್ರತಿದಿನ ಆಹಾರವನ್ನು ______________________ ರೊಂದಿಗೆ ಹಂಚಿಕೊಳ್ಳುತ್ತಿದ್ದರು.

**ಅ.ಕೃ. 6:1** – *ಆ ದಿವಸಗಳಲ್ಲಿ ಶಿಷ್ಯರು ಹೆಚ್ಚುತ್ತಾ ಬರಲಾಗಿ ಅವರೊಳಗೆ ಗ್ರೀಕ್ ಭಾಷೆಯವರು ಇಬ್ರಿಯ ಭಾಷೆಯವರ ಮೇಲೆ ದಿನದಿನದ ಉಪಚಾರದಲ್ಲಿ ನಮ್ಮ ವಿಧವೆಯರನ್ನು ಸರಿಯಾಗಿ ಪರಾಂಬರಿಸುವದಿಲ್ಲವೆಂದು ಗುಣುಗುಟ್ಟಿದರು.*

8. ಯಾಕೋಬ 1:27 ಓದಿರಿ. ದೇವರು ಪರಿಗಣಿಸುವಂಥ ಏಕ ಮಾತ್ರ ಭಕ್ತಿ ಎಂದರೆ ______________________

**ಯಾಕೋಬ 1:27** – *ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ.*

9. 1 ತಿಮೋಥಿ 5:9–11 ಓದಿರಿ. ಹೊಸ ಒಡಂಬಡಿಕೆಯ ಆದಿ ಸಭೆಯಿಂದ ಸಹಾಯವನ್ನು ಹೊಂದುತ್ತಿದ್ದಂತಹವಿಧವೆಯರು ಯಾವ ನಿಯಮವನ್ನು ಪಾಲಿಸಬೇಕಾಗಿತ್ತು?

**1 ತಿಮೊಥೆ 5:9–11** – *ವಯಸ್ಸಿನಲ್ಲಿ ಅರುವತ್ತಕ್ಕೆ ಕಡಿಮೆಯಿಲ್ಲದ ವಿಧವೆಯರನ್ನು ವಿಧವೆಯರ ಪಟ್ಟಿಯಲ್ಲಿ ಸೇರಿಸಬಹುದು; ಅಂಥವಳಾದರೂ ಒಬ್ಬ ಗಂಡನಿಗೆ ಮಾತ್ರ ಹೆಂಡತಿಯಾಗಿದ್ದವಳೂ [10] ಸತ್ಕ್ರಿಯೆಗಳನ್ನು ಮಾಡುವವಳೆಂದು ಹೆಸರುಗೊಂಡವಳೂ ಆಗಿರಬೇಕು; ಅಂದರೆಮಕ್ಕಳನ್ನು ಸಾಕಿದವಳಾಗಲಿ ಅತಿಥಿಸತ್ಕಾರವನ್ನು ಮಾಡಿದವಳಾಗಲಿ ದೇವಜನರಿಗೆ ಉಪಚಾರ ಮಾಡಿದವಳಾಗಲಿ ಸಂಕಟದಲ್ಲಿ ಬಿದ್ದವರಿಗೆ ಸಹಾಯ ಮಾಡಿದವಳಾಗಲಿ ಎಲ್ಲಾ ಸತ್ಕಾರ್ಯಗಳಲ್ಲಿ ಆಸಕ್ತಿಯುಳ್ಳವಳಾಗಲಿ ಆಗಿರಬೇಕು. [11] ಪ್ರಾಯದ ವಿಧವೆಯರನ್ನು ಪಟ್ಟಿಯಲ್ಲಿ ಸೇರಿಸಬೇಡ; ಅವರು ಮದಿಸಿ ಕ್ರಿಸ್ತನಿಗೆ ಒಳಗಾಗಲೊಲ್ಲದೆ ಮದುವೆ ಮಾಡಿಕೊಳ್ಳಬೇಕೆಂದು ಇಷ್ಟಪಟ್ಟಾರು.*

10. 1 ಕೊರಿಂಥ 9:14 ಓದಿರಿ. ಸಭೆಯು ವಿಧವೆಯರಿಗೆ, ಅನಾಥರಿಗೆ ಮತ್ತು ಬಡವರಿಗೆ ಸಹಾಯ ಮಾಡುತ್ತಿದ್ದುದಲ್ಲದೇ, ಅವರು __________ ಗೂ ಸಹಾಯ ನೀಡುತ್ತಿದ್ದರು.

**1 ಕೊರಿಂಥ 9:14** – *ಅದೇ ರೀತಿಯಾಗಿ ಕರ್ತನು ಸಹ ಸುವಾರ್ತೆಯನ್ನು ಸಾರುವವರು ಸುವಾರ್ತೆಯಿಂದಲೇ ಜೀವನ ಮಾಡಬೇಕೆಂದು ನೇಮಿಸಿದನು.*

11. ಮತ್ತಾಯ 25:35–40 ಓದಿರಿ. ಕಾಣಿಕೆಯ ಚೀಲದಲ್ಲಿ ಹಣವನ್ನು ಹಾಕುವುದು ಮಾತ್ರವೇ ದೇವರಿಗೆ ನೀಡುವಂತಹ ಕಾರ್ಯ ಎಂದುಜನರು ಏಕೆ ಭಾವಿಸುತ್ತಾರೆ?

**ಮತ್ತಾಯ 25:35–40** – *ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವುದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಡಿರಿ; ಬಟ್ಟೆಯಿಲ್ಲದವನಾಗಿದ್ದೆನು, [36] ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು. [37] ಅದಕ್ಕೆ ನೀತಿವಂತರು –ಸ್ವಾಮೀ, ಯಾವಾಗ ನೀನು ಹಸಿದದ್ದನ್ನು ಕಂಡು ನಿನಗೆ ಊಟಕ್ಕೆ ಕೊಟ್ಟೆವು? ಇಲ್ಲವೆ ನೀನು ಬಾಯಾರಿದ್ದನ್ನು ಕಂಡು ಕುಡಿಯುವದಕ್ಕೆ ಕೊಟ್ಟೆವು? [38] ಯಾವಾಗ ನೀನು ಪರದೇಶಿಯಾಗಿರುವದನ್ನು ಕಂಡು ಸೇರಿಸಿಕೊಂಡೆವು? ಇಲ್ಲವೆ ನಿನಗೆ ಬಟ್ಟೆಯಿಲ್ಲದ್ದನ್ನು ಕಂಡು ಉಡುವದಕ್ಕೆ ಕೊಟ್ಟೆವು? [39] ಯಾವಾಗ ನೀನು ರೋಗದಲ್ಲಿ ಬಿದ್ದದ್ದನ್ನು ಅಥವಾ ಸೆರೆಮನೆಯಲಿ ಇದ್ದದ್ದನ್ನು ಕಂಡು ನಿನ್ನನ್ನು ನೋಡುವದಕ್ಕೆ ಬಂದೆವು ಎಂದು ಉತ್ತರವಾಗಿ ಹೇಳುವರು. [40] ಅದಕ್ಕೆ ಅರಸನು – ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದುನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು.*

12. ಅ.ಕೃ. 4:32–35 ಮತ್ತು ಜ್ಞಾನೋಕ್ತಿಗಳು 3:9–10 ಓದಿರಿ. ಆದಿಸಭೆಯ ಹಿರಿಯರು ಮತ್ತು ಸಭಾಪಾಲಕರು ಹಣವನ್ನು ಏನು ಮಾಡಿದರು?

**ಅ.ಕೃ. 4:32–35** – *ನಂಬಿದ್ದ ಮಂಡಲಿಯವರ ಹೃದಯವೂ ಪ್ರಾಣವೂ ಒಂದೇ ಆಗಿತ್ತು. ಇದಲ್ಲದೆ ಒಬ್ಬನಾದರೂ ತನಗಿದ್ದ ಆಸ್ತಿಯಲ್ಲಿ ಯಾವದೊಂದನ್ನೂ ಸ್ವಂತವಾದದ್ದೆಂದು ಹೇಳಲಿಲ್ಲ. ಎಲ್ಲವೂ ಅವರಿಗೆ ಹುದುವಾಗಿ ಇತ್ತು. [33] ಮತ್ತು ಕರ್ತನಾದ ಯೇಸು ಜೀವಂತನಾಗಿ ಎದ್ದು ಬಂದನೆಂಬದಕ್ಕೆ ಅಪೊಸ್ತಲರು ಬಹು ಬಲವಾಗಿ ಸಾಕ್ಷಿ ಹೇಳುತ್ತಿದ್ದರು. ಬಹಳ ದಯವು ಅವರೆಲ್ಲರ ಮೇಲೆ ಇತ್ತು [34] ಅವರಲ್ಲಿ ಕೊರತೆ ಪಡುವವನು ಒಬ್ಬನೂ ಇರಲಿಲ್ಲ, ಯಾಕಂದರೆ ಹೊಲಮನೆಗಳಿದ್ದವರು ಅವುಗಳನ್ನು [35] ಮಾರಿ ಬಂದ ಕ್ರಯವನ್ನು ತಂದು ಅಪೊಸ್ತಲರ ಪಾದಗಳ ಬಳಿಯಲ್ಲಿ ಇಡುತ್ತಿದ್ದರು; ಅದನ್ನು ಪ್ರತಿಯೊಬ್ಬನಿಗೆ ಅವನವನ ಅವಶ್ಯದಂತೆ ಹಂಚಿಕೊಡುತ್ತಿದ್ದರು.*

**ಜ್ಞಾನೋಕ್ತಿಗಳು 3:9–10** – *ನಿನ್ನ ಆದಾಯದಿಂದಲೂ ಬೆಳೆಯ ಪ್ರಥಮ ಫಲದಿಂದಲೂ ಯೆಹೋವನನ್ನು ಸನ್ಮಾನಿಸು. [10] ಹೀಗೆ ಮಾಡಿದರೆ ನಿನ್ನ ಕಣಜಗಳು ಸಮೃದ್ಧಿಯಿಂದ ತುಂಬುವವು, ತೊಟ್ಟಿಗಳಲ್ಲಿ ದ್ರಾಕ್ಷಾರಸವು ತುಂಬಿತುಳುಕುವದು.*

# ಉತ್ತರಗಳು

1. ಇಬ್ರಿಯ 10:25 ಓದಿರಿ. ನಾವು ಯಾವುದನ್ನು ಬಿಟ್ಟುಬಿಡಬಾರದು?

   **ವಿಶ್ವಾಸಿಗಳಾಗಿ ಒಟ್ಟಾಗಿ ಸೇರಿಬರುವುದನ್ನು ಬಿಟ್ಟುಬಿಡಬಾರದು**

2. ಅ.ಕೃ. 5:42 ಓದಿರಿ. ಪ್ರತಿದಿನ ದೇವಾಲಯದಲ್ಲಿಯೂ ಮತ್ತು ಮನೆಮನೆಯಲ್ಲಿಯೂ ಯೇಸುವಿನ ಕುರಿತು __________ ಮತ್ತು _______ ಮಾಡುತ್ತಿದ್ದರು.

   **ಬೋಧಿಸುತ್ತಿದ್ದರು ಮತ್ತು ಪ್ರಸಂಗಿಸುತ್ತಿದ್ದರು**

3. ಅ.ಕೃ. 2:42 ಓದಿರಿ. ಯಾವ ನಾಲ್ಕು ಸಂಗತಿಗಳನ್ನು ಆದಿಸಭೆಯು ಮಾಡುವುದರಲ್ಲಿ ನಿರತರಾಗಿದ್ದರು?

   **ಅವರು ಅಪೊಸ್ತಲರ ಬೋಧನೆಗಳಲ್ಲಿ, ಅನ್ಯೋನ್ಯತೆಯಲ್ಲಿ, ರೊಟ್ಟಿ ಮುರಿಯುವುದರಲ್ಲಿ (ಕರ್ತನ ಭೋಜನದಲ್ಲಿ ಭಾಗವಹಿಸುವುದು), ಮತ್ತು ಪ್ರಾರ್ಥನೆಯಲ್ಲಿ ನಿರತರಾಗಿದ್ದರು.**

4. ಅ.ಕೃ. 2:44–45 ಓದಿರಿ. ಸರಿ ಅಥವಾ ತಪ್ಪು: ಆದಿ ಸಭೆಯು ಒಂದು ಸಭೆಯನ್ನು ಕಟ್ಟುವುದಕ್ಕಾಗಿ ಹಣವನ್ನು ನೀಡುತ್ತಿತ್ತು.

   **ತಪ್ಪು**

5. 1 ಕೊರಿಂಥ 12:28 ಓದಿರಿ. ದೇವರು ತನ್ನ ಸಭೆಯಲ್ಲಿ ಇಟ್ಟಿರುವಂತಹ 8 ವಿವಿಧ ವರಗಳ ಪಟ್ಟಿ ಮಾಡಿ.

   **ಅಪೊಸ್ತಲರು, ಪ್ರವಾದಿಗಳು, ಬೋಧಕರು, ಅದ್ಭುತಗಳನ್ನು ಮಾಡುವವರು, ಸ್ವಸ್ಥತೆಯ ವರ ಹೊಂದಿದವರು, ಸಹಾಯ ಮಾಡುವವರು, ಕಾರ್ಯಗಳನ್ನು ನಿರ್ವಹಿಸುವವರು ಮತ್ತು ಅನ್ಯಭಾಷೆಯಲ್ಲಿ ಮಾತನಾಡುವವರು.**

6. 1 ಕೊರಿಂಥ 14:26ನ್ನು ಓದಿರಿ. ದೇವ ಜನರು ಸಭೆಯಾಗಿ ಒಟ್ಟಾಗಿ ಸೇರಿಬರುತ್ತಿದ್ದಾಗ, ಅಲ್ಲಿ ತಮ್ಮ ವರಗಳನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಸ್ವತಂತ್ರತೆ ಇತ್ತು. ಅವರು ಒಟ್ಟಾಗಿ ಸೇರಿ ಬಂದಾಗ ಸಂಭವಿಸಿದಂತಹ 5 ಕಾರ್ಯಗಳನ್ನು ತಿಳಿಸಿ.

   **ಒಬ್ಬರು ಹಾಡುತ್ತಿದ್ದರು, ಮತ್ತೊಬ್ಬರು ಬೋಧಿಸುತ್ತಿದ್ದರು, ಇನ್ನೊಬ್ಬರು ದೇವರಿಂದ ಹೊಂದಿದ ಪ್ರಕಟಣೆಯನ್ನು ತಿಳಿಸುತ್ತಿದ್ದರು, ಮತ್ತೊಬ್ಬರು ಅನ್ಯಭಾಷೆಯಲ್ಲಿ ಮಾತನಾಡುತ್ತಿದ್ದರು, ಹಾಗೂ ಇನ್ನೊಬ್ಬರು ಆ ಅನ್ಯಭಾಷೆಯ ಅರ್ಥವನ್ನು ತಿಳಿಸುತ್ತಿದ್ದರು.**

7. ರೋಮ 6:1ನ್ನು ಓದಿರಿ. ಹೊಸ ಒಡಂಬಡಿಕೆಯ ಆದಿ ಸಭೆಯವರು ಪ್ರತಿದಿನ ಆಹಾರವನ್ನು ________ ಗೆ ಹಂಚುತ್ತಿದ್ದರು.

**ವಿಧವೆಯರಿಗೆ**

8. ಯಾಕೋಬ 1:27 ಓದಿರಿ. ದೇವರು ಪರಿಗಣಿಸುವಂಥ ಏಕ ಮಾತ್ರ ಭಕ್ತಿಯೆಂದರೆ____________

**ಅನಾಥರ ಮತ್ತು ವಿಧವೆಯರ ಸಮಸ್ಯೆಗಳಿಗೆ ಸ್ಪಂದಿಸುವುದು**

9. 1 ತಿಮೊಥೆ 5:9–11 ಓದಿರಿ. ಹೊಸ ಒಡಂಬಡಿಕೆಯ ಆದಿ ಸಭೆಯಿಂದ ಸಹಾಯವನ್ನು ಹೊಂದುತ್ತಿದ್ದಂತಹ ವಿಧವೆಯರು ಯಾವ ನಿಯಮವನ್ನು ಪಾಲಿಸಬೇಕಾಗಿತ್ತು?

**"ವಯಸ್ಸಿನಲ್ಲಿ ಅರುವತ್ತಕ್ಕೆ ಕಡಿಮೆಯಿಲ್ಲದ ವಿಧವೆಯನ್ನು ವಿಧವೆಯರ ಪಟ್ಟಿಯಲ್ಲಿ ಸೇರಿಸಬಹುದು; ಅಂಥವಳಾದರೂ ಒಬ್ಬ ಗಂಡನಿಗೆ ಮಾತ್ರ ಹೆಂಡತಿಯಾಗಿದ್ದವಳೂ ಸತ್ಕ್ರಿಯೆಗಳನ್ನು ಮಾಡುವವಳೆಂದು ಹೆಸರುಗೊಂಡವಳೂ ಆಗಿರಬೇಕು; ಅಂದರೆಮಕ್ಕಳನ್ನು ಸಾಕಿದವಳಾಗಲಿ ಅತಿಥಿಸತ್ಕಾರವನ್ನು ಮಾಡಿದವಳಾಗಲಿ ದೇವಜನರಿಗೆ ಉಪಚಾರ ಮಾಡಿದವಳಾಗಲಿ ಸಂಕಟದಲ್ಲಿ ಬಿದ್ದವರಿಗೆ ಸಹಾಯ ಮಾಡಿದವಳಾಗಲಿ ಎಲ್ಲಾ ಸತ್ಕಾರ್ಯಗಳಲ್ಲಿ ಆಸಕ್ತಿಯುಳ್ಳವಳಾಗಲಿ ಆಗಿರಬೇಕು. ಪ್ರಾಯದ ವಿಧವೆಯನ್ನು ಪಟ್ಟಿಯಲ್ಲಿ ಸೇರಿಸಬಾರದು" (1 ತಿಮೋಥಿ 5:9–11)**

10. 1 ಕೊರಿಂಥ 9:14 ಓದಿರಿ. ಸಭೆಯು ವಿಧವೆಯರಿಗೆ, ಅನಾಥರಿಗೆ ಮತ್ತು ಬಡವರಿಗೆ ಸಹಾಯ ಮಾಡುತ್ತಿದ್ದುದಲ್ಲದೇ, ಅವರು _________ ಗೂ ಸಹಾಯ ನೀಡುತ್ತಿದ್ದರು.

**ಸುವಾರ್ತೆಯನ್ನು ಸಾರುವವರಿಗೂ**

11. ಮತ್ತಾಯ 25:35–40 ಓದಿರಿ. ಕಾಣಿಕೆಯ ಚೀಲದಲ್ಲಿ ಹಣವನ್ನು ಹಾಕುವುದು ಮಾತ್ರವೇ ದೇವರಿಗೆ ನೀಡುವಂತಹ ಕಾರ್ಯ ಎಂದು ಜನರು ಏಕೆ ಭಾವಿಸುತ್ತಾರೆ?

**ಏಕೆಂದರೆ ಇದನ್ನೇ ಅವರಿಗೆ ಬೋಧಿಸಲಾಗಿದೆ**

12. ಅ.ಕೃ. 4:32–35 ಮತ್ತು ಜ್ಞಾನೋಕ್ತಿಗಳು 3:9–10 ಓದಿರಿ. ಆದಿಸಭೆಯ ಹಿರಿಯರು ಮತ್ತು ಸಭಾಪಾಲಕರು ಹಣವನ್ನು ಏನು ಮಾಡಿದರು?

**ಅಗತ್ಯವಿದ್ದರಿಗೆ ಹಂಚುವುದರಿಂದ ಹಾಗೂ ಕೊಡುವುದರ ಮೂಲಕ ದೇವರನ್ನು ಸನ್ಮಾನಿಸುತ್ತಿದ್ದರು**

## ಪಾಠ 5

# ಬಿಡುಗಡೆ

***ಡ್ರೂಣ್ ಕ್ರೊ***

ಇಂದು ನಾವು ದುರಾತ್ಮಗಳ ಕುರಿತಾಗಿ ಮಾತನಾಡಲಿರುವೆವು. ಯೇಸು ದುರಾತ್ಮಗಳನ್ನು ಓಡಿಸುತ್ತಾ, ರೋಗಿಗಳನ್ನು ಸ್ವಸ್ಥಪಡಿಸುತ್ತಾ, ಸತ್ತವರನ್ನು ಎಬ್ಬಿಸುತ್ತಾ ಹಾಗೂ ಇನ್ನಿತರ ಅದ್ಭುತಗಳನ್ನು ಮಾಡುತ್ತಾ ತನ್ನ ಸೇವೆಯನ್ನು ನಡೆಸಿದನು. ಆತನ ಸೇವೆಯ ನಾಲ್ಕರಲ್ಲಿ ಒಂದು ಭಾಗವನ್ನು ಜನರಲ್ಲಿದ್ದ ದುರಾತ್ಮಗಳನ್ನು ಓಡಿಸುವುದರಲ್ಲಿ ಕಳೆದನು. ಅ.ಕೃ. 10:38ರಲ್ಲಿ ಸತ್ಯವೇದವು ನಮಗೆ ಹೀಗೆ ಹೇಳುತ್ತದೆ, *"ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು; ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು; ಇದೆಲ್ಲಾ ನಿಮಗೆ ಗೊತ್ತಾಗಿರುವದಷ್ಟೆ."* ಹಾಗೂ 1 ಯೋಹಾನ 3:8 ಹೇಳುತ್ತದೆ, *"ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು."* ನಾನು ದುರಾತ್ಮಗಳ ಬಗ್ಗೆ ಒಂದು ವ್ಯತ್ಯಾಸವಾದ ದೃಷ್ಟಿಕೋನವನ್ನು ಹೊಂದಿದ್ದೆನು – ಅಂದರೆ ದುರಾತ್ಮಗಳು, ದೆವ್ವಗಳು, ಅಶುದ್ಧ ಆತ್ಮಗಳು, ಸೈತಾನನು, ನೀವು ಏನೆಲ್ಲಾ ಇದರ ಕುರಿತಾಗಿ ಹೆಸರು ಹೇಳಿರುವಿರೋ, ಇವೆಲ್ಲವೂ ಸತ್ಯವಾದ, ಜೀವಿಸುವ ದೇವರನ್ನು ಆರಾಧಿಸದೆ ವಿಗ್ರಹಗಳನ್ನು ಆರಾಧಿಸುವ ಹಿಂದುಳಿದ ರಾಷ್ಟ್ರಗಳಲ್ಲಿ ಮಾತ್ರ ಕಾಣಬರುವಂತಹುದು ಎಂದು ಭಾವಿಸಿದ್ದೆ. ಆದರೆ ನನ್ನ ದೃಷ್ಟಿಕೋನ ತಪ್ಪಾಗಿತ್ತು.

ಟೆಕ್ಸಾಸ್ ಎಂಬ ಸ್ಥಳದಲ್ಲಿರುವ ಡಲ್ಲಾಸ್‌ನಲ್ಲಿ ಕೆಲವು ವರ್ಷಗಳ ಹಿಂದೆ ನನಗಾದ ಅನುಭವದ ಬಗ್ಗೆ ನಿಮಗೆ ತಿಳಿಸಲು ಬಯಸುತ್ತೇನೆ. ಅಲ್ಲಿ ಎಲ್ಲಾ ಜನರು ಹಾಡು ಹೇಳುವಾಗ ಒಬ್ಬ ಹುಡುಗಿಯು ತಕ್ಷಣವೇ ನೆಲಕ್ಕೆ ಬಿದ್ದಳು. ಆಕೆಗೆ ಮೂರ್ಛೆರೋಗವಿದ್ದಂತೆ ಕಂಡುಬಂದಿತು. ಆಗ ಅದೇ ಸ್ಥಳದಲ್ಲಿ ಡಾ. ರೈಸ್ ಎಂಬ ಒಬ್ಬ ವೈದ್ಯರಿದ್ದರು. ಆ ಸಭೆಯಿಂದ ಸ್ವಲ್ಪ ದೂರದಲ್ಲಿಯೇ ಸಭೆಯಲ್ಲಿನ ಒಬ್ಬ ವ್ಯಕ್ತಿಯ ಮನೆ ಇದ್ದುದರಿಂದ, ವೈದ್ಯರು ಆಕೆಯನ್ನು ಆ ಮನೆಗೆ ಕರೆದುಕೊಂಡು ಹೋದರೆ ಅಲ್ಲಿ ತಪಾಸಣೆ ಮಾಡಬಹುದು ಎಂದರು. ನಾವು ಆಕೆಯನ್ನು ಆ ಮನೆಗೆ ಕರೆತಂದಾಗ, ಈ ಹುಡುಗಿಯು ಕ್ರೂರವಾಗಿ ಕಂಡಳು! ಆಕೆಯ ಕಣ್ಣುಗಳು ಅಗಲವಾಗಿದ್ದವು, ಹಾಗೂ 45 ಕೆಜಿಗಿಂತಲೂ ಕಡಿಮೆ ತೂಕವಿದ್ದ ಆ ಚಿಕ್ಕ ಪ್ರಾಯದ ಹುಡುಗಿಯ ಬಾಯಿಂದ ಬಹಳ ಗಡುಸಿನ ಧ್ವನಿಯು ನನ್ನನ್ನು ಹೀನವಾಗಿ ಮಾತನಾಡುತ್ತ, "ನೀನು ನರಕಕ್ಕೆ ಹೋಗುವೆ!" ಎಂದು ಹೇಳಿತು. ನಾನು "ಇಲ್ಲ" ಎಂದೆನು. ನನಗೆ ಬಹಳ ಭಯವಾಗಿತ್ತು ಏಕೆಂದರೆ ಈ ಮೊದಲು ನಾನು ಇಂತಹ ಸಂಗತಿಗಳನ್ನು ನೋಡಿರಲಿಲ್ಲ.

ನಂತರ ಅದು, "ಹೌದು, ನೀನು ನರಕಕ್ಕೆ ಹೋಗುವೆ" ಎಂದು ಚೀರಿತು, ಆಗ ನಾನು "ಇಲ್ಲ, ನಾನು ನರಕಕ್ಕೆ ಹೋಗುವುದಿಲ್ಲ" ಎಂದು ಹೇಳಿದೆ. ಇದಕ್ಕೆ ನನ್ನ ಮೇಲೆ ಬಲ ಅಥವಾ ಅಧಿಕಾರವಿರುವಂತೆ ತೋರಿತು, ಹಾಗೂ ನನಗೆ ಏನು ಮಾಡಬೇಕೆಂದು ತಿಳಿಯಲಿಲ್ಲ ಅಥವಾ ಆ ಹುಡುಗಿಯೊಳಗಿದ್ದ ದುರಾತ್ಮದೊಂದಿಗೆ ಹೇಗೆ ವ್ಯವಹರಿಸಬೇಕೆಂಬುದು ತಿಳಿದಿರಲಿಲ್ಲ.

ನನ್ನ ಒಬ್ಬ ಒಳ್ಳೆಯ ಸ್ನೇಹಿತರು ಎಷ್ಟು ಭಯಗ್ರಸ್ತರಾಗಿದ್ದರೆಂದರೆ, ಅವರು ಆ ಸ್ಥಳದಿಂದ ದೌಡಾಯಿಸಿದರು. ಹಾಗಾಗಿ, ಅಲ್ಲಿ ನಾನೇ ಇದ್ದೆನು. *ಈಗ ನಾನು ಏನು ಮಾಡಲು ಸಾಧ್ಯ?* ಎಂದು ಆಲೋಚಿಸುತ್ತಿದ್ದೆ. ಆ ಹುಡುಗಿಗೆ ಅಸಾಧಾರಣವಾದ ಬಲವಿತ್ತು ಮತ್ತು ಆಕೆ ಎಂದೂ ಅರಿಯದಿದ್ದ ಜರ್ಮನ್ ಭಾಷೆಯಲ್ಲಿ ಮಾತನಾಡಲು ಪ್ರಾರಂಭಿಸಿದಳು – ದೆವ್ವದ ಎಲ್ಲಾ ವಿಧವಾದ ಕ್ರೂರ ತೋರ್ಪಡಿಕೆಯು ಆಕೆಯಲ್ಲಿ ಕಂಡುಬರುತ್ತಿದ್ದವು. ಆಕೆ ದುರಾತ್ಮ ಪೀಡಿತಳಾಗಿದ್ದಳು ಮತ್ತು ಏನು ಮಾಡಬೇಕೆಂದು ನನಗೆ ತಿಳಿಯದಿದ್ದರೂ ಸಹ ನಾನು ದೇವರ ವಾಕ್ಯವಾದ ಬೈಬಲ್‌ಗೆ ಶಕ್ತಿಯುಂಟು ಎಂಬುದನ್ನು ಯಾವಾಗಲೂ ನಂಬುತ್ತಿದ್ದೆನು. ಇದು ನೀವು ಚಿಕ್ಕವರಾಗಿದ್ದಾಗ ಡ್ರಾಕುಲಾ ದೆವ್ವದ ಚಲನಚಿತ್ರವನ್ನು ನೋಡಿದಂತಿತ್ತು. ಅದರಲ್ಲಿ ಆ ದೆವ್ವವು ಒಬ್ಬ ವ್ಯಕ್ತಿಯ ಕಡೆಗೆ ಬರುವಾಗ, ಇದ್ದಕ್ಕಿಂದಂತೆಯೇ ಆ ವ್ಯಕ್ತಿಯು ಶಿಲುಬೆಯನ್ನು ಎತ್ತಿಹಿಡಿಯುತ್ತಿದ್ದನು, ಆಗ ಆ ದೆವ್ವವು "ಹೋ" ಎಂದು ಚೀರುತ್ತ ಹೊರಟುಹೋಗುತ್ತಿತ್ತು. ಸತ್ಯವೇದಕ್ಕೆ ಬಲವುಂಟು ಎಂದು ನನಗೆ ತಿಳಿದಿದ್ದರೂ ಸತ್ಯವೇದದಿಂದ ಬಲವನ್ನು ಹೇಗೆ ಉಪಯೋಗಿಸಿಕೊಳ್ಳುವುದು ಎಂಬುದು ನನಗೆ ತಿಳಿದಿರಲಿಲ್ಲ. ಆದರೆ ನಾನು ಇಂಥ ಸನ್ನಿವೇಶಗಳನ್ನು ಎಂದೂ ಅನುಭವಿಸಿರದ ಕಾರಣ, ಅಲ್ಲಿ ದೇವರ ಕೃಪೆಯು ನನಗೆ ಸಹಾಯ ನೀಡಿತು. ನಾನು ಸತ್ಯವೇದದಲ್ಲಿನ ಹೊಸ ಒಡಂಬಡಿಕೆಯ ಫಿಲಿಪ್ಪಿಯರ ಪತ್ರಿಕೆಯನ್ನು ತೆಗೆದು, ಅದಲ್ಲಿರುವ 2ನೇ ಅಧ್ಯಾಯದ 8–11 ವಚನಗಳನ್ನು *"ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು, ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು."* ಎಂದು ಓದಲಾರಂಭಿಸಿದೆನು:

ಆಗ ಆ ದುರಾತ್ಮವು "ಅದನ್ನು ಹೇಳಬೇಡ! ನನಗೆ ಆ ಮಾತುಗಳನ್ನು ಸಹಿಸಲು ಸಾಧ್ಯವಿಲ್ಲ! ಅದನ್ನು ಹೇಳಬೇಡ!" ಎಂದು ಹೇಳಿತು. ಆಗ ನಾನು ಇದು ಎಂತಹ ಪ್ರತಿಕ್ರಿಯೆ ಎಂದು ಬೆರಗಾದೆ! ಹಾಗಾಗಿ ನಾನು, "ಸರಿ, ಯೇಸುವಿನ ಹೆಸರಿನಲ್ಲಿ ಪ್ರತಿ ಮೊಣಕಾಲು ಬಾಗಬೇಕು – ಅಂದರೆ ಪರಲೋಕದಲ್ಲಿರುವವುಗಳು, ಭೂಲೋಕದ ಮೇಲಿರುವವುಗಳು, ಲೋಕದ ಕೆಳಗಿರುವವುಗಳು" ಎಂದು ಹೇಳಿದೆ. ಆ ದೆವ್ವವು "ಅದನ್ನು ಹೇಳಬೇಡ! ನನಗೆ ಆ ಮಾತುಗಳನ್ನು ಸಹಿಸಲು ಸಾಧ್ಯವಿಲ್ಲ! ಅದನ್ನು ಹೇಳಬೇಡ! ಅದನ್ನು ಹೇಳಬೇಡ!" ಎಂದು ಜೋರಾಗಿ ಚೀರಿತು. *ಆಗ ನಾನು ಈ ಹುಡುಗಿಯೊಳಗಿರುವ ದುರಾತ್ಮಕ್ಕೆ ಹುಚ್ಚು ಹಿಡಿಯುತ್ತಿದೆ ಆದರೆ ನಾನು ದೇವರ ವಾಕ್ಯವನ್ನು ಮಾತ್ರ ಓದುತ್ತಿರುವೆನು ಎಂದು*

*ಆಲೋಚಿಸುತ್ತಿದ್ದೆ!* ನಂತರ ನಾನು ಪುನಃ ಇದನ್ನು ಓದಿದೆ, *"ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು."* ಪುನಃ ಅದೇ ಪ್ರತಿಕ್ರಿಯೆ ಬಂದಿತು; "ಅದನ್ನು ಹೇಳಬೇಡ, ಇದನ್ನು ನನಗೆ ತಡೆದುಕೊಳ್ಳಲು ಸಾಧ್ಯವಿಲ್ಲ!" ಆಗ ಆ ದುರಾತ್ಮವು ಹುಡುಗಿಯ ಕೈಗಳಿಂದ ಕಿವಿಗಳನ್ನು ಮುಚ್ಚಿಕೊಂಡು, "ಅದನ್ನು ಹೇಳಬೇಡ! ಆ ಮಾತುಗಳನ್ನು ನಾನು ಕೇಳಲಾರೆ, ಅದನ್ನು ಹೇಳಬೇಡ!" ಎಂದು ಹೇಳಿದಳು. ಆಗ ದುರಾತ್ಮವು ಆ ಹುಡುಗಿಯು ನನ್ನ ಮುಂದೆ ಬೀಳುವಂತೆ ಮಾಡಿತು ಮತ್ತು ಆಕೆಯು ಯೇಸುವಿನ ನಾಮಕ್ಕೆ ಅಡ್ಡಬಿದ್ದಳು. ಆಗ ನಾನು "ಪರಲೋಕದಲ್ಲಿಯಾಗಲಿ ಅಥವಾ ಭೂಲೋಕದಲ್ಲಿಯಾಗಲಿ ಅಥವಾ ಲೋಕದ ಕೆಳಗಿರುವುದಾಗಲಿ, ಎಲ್ಲವೂ ಯೇಸುವಿನ ಹೆಸರಿನಲ್ಲಿ ಅಡ್ಡಬೀಳಬೇಕು" ಎಂದೆನು.

ಇದಕ್ಕೂ ಕೆಲವೇ ಕ್ಷಣಗಳ ಮುನ್ನ, ಆ ದುರಾತ್ಮಕ್ಕೆ ನನ್ನ ಮೇಲೆ ಅಧಿಕಾರ ಮತ್ತು ಬಲ ಇತ್ತು. ಅದು ನನ್ನನ್ನು ಉರುಳಿಸುತ್ತದೆ, ಹೊಡೆಯುತ್ತದೆ ಮತ್ತು ಅಲ್ಲಿಂದ ನನ್ನನ್ನು ಎಸೆಯುತ್ತದೆ ಎಂದು ನಾನು ಭಾವಿಸಿದ್ದೆ – ಅಂದರೆ ನನಗೆ ಏನೂ ಗೊತ್ತಿರಲಿಲ್ಲ! ನನಗೆ ಗೊತ್ತಿದ್ದ ಸಂಗತಿಯೇನೆಂದರೆ, ಸತ್ಯವೇದಕ್ಕೆ ಬಲವಿದೆ ಎಂದು, ಮತ್ತು ಅದನ್ನು ತೆರೆದು ಓದಿದೆ. ಎಫೆಸ 6:17ರಲ್ಲಿ ಸತ್ಯವೇದವು ಹೇಳುತ್ತದೆ, *"ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ."* ನೋಡಿ, ವೈರಿಯನ್ನು ತುಂಡರಿಸಿ, ಗಾಯಗೊಳಿಸುವಂತಹ ಒಂದು ಕತ್ತಿಯಂತಹ ರಕ್ಷಣಾ ಆಯುಧವೊಂದಿದೆ. ಇದು ಆತ್ಮನ ಕತ್ತಿ, ದೇವರ ವಾಕ್ಯವಾಗಿದೆ. ಯೇಸು ಶೋಧನೆಗೊಳಗಾದ ಸಂಗತಿಯು ನಿಮಗೆ ನೆನಪಿದೆಯೇ? ಸೈತಾನನು ಆತನ ಬಳಿಗೆ ಬಂದು, "ನೀನು ನನ್ನನ್ನು ಆರಾಧಿಸಿ, ಅಡ್ಡಬಿದ್ದರೆ ನಾನು ನಿನಗೆ ಲೋಕದ ಎಲ್ಲಾ ರಾಜ್ಯಗಳನ್ನು ನೀಡುವೆನು" ಎಂದು ಹೇಳಿದನು. ಆಗ ಯೇಸು, *"ಸೈತಾನನೇ, ನೀನು ತೊಲಗಿಹೋಗು: ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು ಎಂಬುದಾಗಿ ಬರೆದದೆ"* ಎಂದು ಹೇಳಿದನು (ಮತ್ತಾಯ 4:10). ಆಗ ಸೈತಾನನು ಪುನಃ ಪುನಃ ಶೋಧಿಸುತ್ತಲೇ ಇದ್ದನು, ಆಗ ಯೇಸು, "ಸೈತಾನನೇ, ಹೀಗೆ ಬರೆಯಲ್ಪಟ್ಟಿದೆ, ಬರೆಯಲ್ಪಟ್ಟಿದೆ" ಎಂದು ದೇವರ ವಾಕ್ಯವನ್ನು ಘೋಷಿಸುತ್ತಿದ್ದನು. ಆತನು ಆತ್ಮನ ಕತ್ತಿಯನ್ನು ಉಪಯೋಗಿಸಿದನು, ಆಗ ಸೈತಾನನು ಬಿಟ್ಟುಬಿಟ್ಟನು ಒಂದು ಕಾಲದವರೆಗೆ ಎಂದು ಸತ್ಯವೇದವು ಹೇಳುತ್ತದೆ.

ಸೈತಾನನನ್ನು ಸೋಲಿಸುವುದಕ್ಕೆ ನಮಗಿರುವ ಏಕೈಕ ಆಯುಧವೆಂದರೆ ಆತ್ಮನ ಕತ್ತಿ, ಅಂದರೆ ಅದು ದೇವರ ವಾಕ್ಯ. ಆ ಘಟನೆಯಿಂದ ನಾನು ಏನು ಕಲಿತೆನು ಗೊತ್ತೇ? ಇದನ್ನು ಕಲಿತೆ: ನಾನು ಪ್ರತಿಬಾರಿ ದೇವರ ವಾಕ್ಯವನ್ನು ಅಧ್ಯಯನ ಮಾಡಬೇಕೆಂದು ಬಯಸಿದಾಗ, ನನಗೆ ಬಹಳ ಹಸಿವೆಯಾಗಿದೆ, ತಿನ್ನಲಿಕ್ಕೆ ಏನಾದರೂ ಇದೆಯೇ ಎಂದು ನೋಡಬೇಕು

ಅಥವಾ ಆ ದಿನ ನಾನು ಮಾಡದಿರುವ ಎಲ್ಲಾ ಕೆಲಸಗಳ ಕುರಿತಾಗಿ ನೆನಪಿಸಿಕೊಳ್ಳುತ್ತೇನೆ. ಶಿಷ್ಯತ್ವದ ತರಗತಿಯಲ್ಲಿರುವವರು ತರಗತಿಯಲ್ಲಿ ಇಲ್ಲದಿರುವುದಕ್ಕೆ ಅವರಿಗೆ ಎಲ್ಲಾ ತರಹದ ನೆಪಗಳು ಇರುತ್ತವೆ ಎನ್ನುವುದನ್ನು ನಾನು ಬಲ್ಲೆ. ಇದು ಏಕೆ ಎಂದು ಕೊನೆಗೆ ನಾನು ಲೆಕ್ಕಾಚಾರ ಮಾಡಿದೆ. ಅಂದರೆ ನಾವು ತಿಳಿದುಕೊಳ್ಳಬೇಕಾದ ಸಂಗತಿಗಳು ಸತ್ಯವೇದದಲ್ಲಿ ಇರುವುದರಿಂದ ಅವುಗಳನ್ನು ನಾವು ಅರಿತುಕೊಳ್ಳಬೇಕೆಂದು ದೇವರು ಬಯಸುತ್ತಾನೆ, ಆದರೆ ಸೈತಾನನು ಇದನ್ನು ಬಯಸುವುದಿಲ್ಲ. ಹಾಗಾಗಿ ನೀವು ಪ್ರತಿಬಾರಿ ದೇವರ ವಾಕ್ಯದ ಅಧ್ಯಯನಕ್ಕೆ ಬಂದಾಗ ಅಥವಾ ಶಿಷ್ಯತ್ವದ ತರಗತಿಯಲ್ಲಿ ಹಾಜರಾಗಬೇಕೆಂದಾಗ, ನೀವು ತಿಳಿದುಕೊಳ್ಳಬೇಕಾದ ಸಂಗತಿಯು ಸತ್ಯವೇದದಲ್ಲಿ ಇರುವುದರಿಂದ ಅದನ್ನು ನೀವು ತಿಳಿದುಕೊಳ್ಳಬಾರದೆಂದು ಸೈತಾನನು ಬಯಸುತ್ತಾನೆ – ಅಂದರೆ ಈ ವಾಕ್ಯಗಳ ಹಿಂದೆ ಇರುವಂತಹ ದೇವರನ್ನು ನೀವು ತಿಳಿದುಕೊಳ್ಳಬಾರದೆಂದು ಅವನು ಬಯಸುತ್ತಾನೆ.

ಅಂಧಕಾರದ ಒಂದು ರಾಜ್ಯವಿದೆ ಹಾಗೂ ದೇವರ ಪ್ರಿಯ ಕುಮಾರನ ರಾಜ್ಯವೂ ಸಹ ಇದೆ. ಕೊಲೊಸ್ಸೆ 1:13ರಲ್ಲಿ ಹೇಳುತ್ತದೆ, *"ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು."* ನೀವು ಯಾವ ರಾಜ್ಯದಲ್ಲಿರುವಿರಿ? ರಾಜ್ಯವೆಂದರೆ ಅಲ್ಲಿ ಒಬ್ಬರು ಆಳ್ವಿಕೆ ಮತ್ತು ದೊರೆತನವನ್ನು ನಡೆಸುವಂತಹ ಸ್ಥಳವಾಗಿದೆ. ಯೇಸು ಕ್ರಿಸ್ತನು ಒಬ್ಬ ರಾಜನಾಗಿರುವನು. ನೀವು ಎಂದಾದರೂ ನಿಮ್ಮ ಜೀವಿತವನ್ನು ಆತನಿಗೆ ನೀಡಿರುವಿರೇ? ಇಂದು ನೀವು ಆತನನ್ನು ಹಿಂಬಾಲಿಸುತ್ತಿರುವಿರೇ ಅಥವಾ ಇನ್ನಿತರ ಸಂಗತಿಗಳು ನಿಮ್ಮ ಜೀವನದಲ್ಲಿ ಆದ್ಯತೆಯಾಗಿರುವಂತೆ ಅನುಮತಿಸಿರುವಿರೇ? ಯೇಸು ಲೂಕ 6:46ರಲ್ಲಿ ಹೀಗೆ ಹೇಳಿರುವನು, *"ಇದಲ್ಲದೆ ನೀವು ನನ್ನನ್ನು ಸ್ವಾಮೀ ಸ್ವಾಮೀ ಅಂತ ಕರೆದು ನಾನು ಹೇಳುವದನ್ನು ನಡಿಸದೆ ಇರುವದೇಕೆ?"* ಆತನು ನಿಮ್ಮ ಜೀವನದಲ್ಲಿ ಎಲ್ಲಾದಕ್ಕೂ ಒಡೆಯನಾಗಿರಬೇಕೆಂದು ಬಯಸುತ್ತಾನೆ, ಅಂದರೆ ನಿನ್ನ ಜೀವಿತದಲ್ಲಿ ಎಲ್ಲದರಲ್ಲೂ ಮೊಟ್ಟಮೊದಲಿಗನಾಗಿರಲು ಬಯಸುವನು. ಆದರೆ ಆತನನ್ನು ಒಡೆಯನಾಗಿರುವಂತ, ಅಂದರೆ ನಿಮ್ಮ ಜೀವನದಲ್ಲಿ ಈ ರೀತಿ ಆಳ್ವಿಕೆ ಮಾಡದಂತೆ ಆತನನ್ನು ದೂರವಿಡಲು ಪ್ರಯತ್ನಿಸುವಂತಹ ಒಂದು ಅಂಧಕಾರ ರಾಜ್ಯವುಂಟು. ಇದಕ್ಕೆ ಕಾರಣವೇನೆಂದರೆ, ಸೈತಾನನು ತಾನು ಆ ಒಡೆತನದ ಸ್ಥಾನದಲ್ಲಿರಬೇಕೆಂದು ಬಯಸುವವನಾಗಿದ್ದಾನೆ. ಇಂದೇ ನೀವು ಪೂರ್ಣ ಹೃದಯದಿಂದ ಯೇಸುವಿನ ಕಡೆಗೆ ತಿರುಗಿಕೊಳ್ಳಿರಿ ಮತ್ತು ಒಬ್ಬ ವೈರಿ ಇರುವನು ಎಂಬುದನ್ನು ಗ್ರಹಿಸಿ. ಅವನ ಹೆಸರು ಸೈತಾನನು ಮತ್ತು ಅವನಿಗೆ ದುರಾತ್ಮನ ಶಕ್ತಿಯಿದೆ, ಆದರೆ ನಮಗೆ ಅವನ ಮೇಲೆ ಅಧಿಕಾರವುಂಟು ಎಂಬುದಾಗಿ ಸತ್ಯವೇದವು ನಮಗೆ ಹೇಳುತ್ತದೆ.

ಮತ್ತಾಯ 10:8ರಲ್ಲಿ ಯೇಸು ಹೇಳಿದನು, *"ರೋಗಿಗಳನ್ನು ಸ್ವಸ್ಥ ಮಾಡಿರಿ, ಸತ್ತವರನ್ನು ಬದುಕಿಸಿರಿ, ಕುಷ್ಠ ಹತ್ತಿದವರನ್ನು ಶುದ್ಧಮಾಡಿರಿ, ದೆವ್ವಗಳನ್ನು ಬಿಡಿಸಿರಿ; ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ."* ದೇವರ ರಾಜ್ಯದ ಸುವಾರ್ತೆಯನ್ನು ಸಾರಿರಿ ಮತ್ತು ನೀವು ಹೀಗೆ ಮಾಡುವಾಗ ನಿಮಗೆ ಸೈತಾನನ ಮೇಲೆ ಅಧಿಕಾರವಿರುತ್ತದೆ. ದೇವರು ನಿಮ್ಮ ಜೀವನದಲ್ಲಿ ಇಟ್ಟಿರುವ ಆಶೀರ್ವಾದಗಳಿಗೆ ವಿರುದ್ಧವಾಗಿ ಸೈತಾನನು ಮಾತನಾಡುವಂತೆ ಇನ್ನು

ಮುಂದೆ ಅವನಿಗೆ ಅನುಮತಿಸಬೇಡಿರಿ. ಯೇಸುವನ್ನು ನಿಮ್ಮ ಜೀವನದ ಒಡೆಯನನ್ನಾಗಿ ಮತ್ತು ಪ್ರಥಮವ್ಯಕ್ತಿಯನ್ನಾಗಿ ಮಾಡಿಕೊಳ್ಳಿರಿ. ಇದಕ್ಕೆ ನೀವು ಎಂದೂ ಪಶ್ಚಾತ್ತಾಪಡುವುದಿಲ್ಲ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಎಫೆಸ 6:12 ಓದಿರಿ. ದುರಾತ್ಮಗಳ ರಂಗದೊಂದಿಗೆ ನಮ್ಮ ಆತ್ಮೀಕ ಘರ್ಷಣೆಯ ಕುರಿತಾಗಿ ಈ ವಚನವು ಹೇಗೆ ವರ್ಣಿಸುತ್ತದೆ?

   ***ಎಫೆಸ 6:12*** *– ನಾವು ಹೋರಾಡುವುದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ.*

2. ಮಾರ್ಕ 16:17 ಓದಿರಿ. ಈ ವಚನವು ವಿಶ್ವಾಸಿಯ ಅಧಿಕಾರದ ಬಗ್ಗೆ ನಮಗೆ ಏನನ್ನು ಬೋಧಿಸುತ್ತದೆ?

   ***ಮಾರ್ಕ 16:17*** *– ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು.*

3. ಯಾಕೋಬ 4:7 ಓದಿರಿ. ದುರಾತ್ಮಗಳಿಂದ ಬಿಡುಗಡೆಯನ್ನು ಬಯಸುವ ಒಬ್ಬ ವ್ಯಕ್ತಿಯು ಏನು ಮಾಡುತ್ತಾನೆ?

   ***ಯಾಕೋಬ 4:7*** *– ಹೀಗಿರಲಾಗಿ ದೇವರಿಗೆ ಒಳಗಾಗಿರಿ. ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು.*

4. ಯಾಕೋಬ 1:14 ಓದಿರಿ. ಕೆಟ್ಟದ್ದಾಗಿರುವ ಸಂಗತಿಯು ಅಪೇಕ್ಷಿಸಲು ಯೋಗ್ಯವಾಗಿದೆ ಎಂದು ಆಲೋಚಿಸುವ ಹಾಗೆ ಸೈತಾನನು ಹೇಗೆ ನಮ್ಮನ್ನು ವಂಚಿಸುತ್ತಾನೆ?

   ***ಯಾಕೋಬ 1:14*** *– ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ.*

5. ರೋಮ 6:13 ಓದಿರಿ. ಒಬ್ಬ ವ್ಯಕ್ತಿಯು ತನ್ನ ಜೀವಿತವನ್ನು ಯೇಸುವಿನ ಸಂಗತಿಗಳಿಂದ ತುಂಬಿಸಿಕೊಂಡರೆ, ದುರಾತ್ಮಗಳಿಗೆ ಇರಿಸುಮುರಿಸಾಗಿ, ಅವು ತಾವೇ ಬಿಟ್ಟುಹೋಗುತ್ತವೆ. ಈ ವಚನವು ನಾವು ಏನು ಮಾಡಬೇಕೆಂಬುದಾಗಿ ತಿಳಿಸುತ್ತದೆ?

   ***ರೋಮ 6:13*** *– ಇದು ಮಾತ್ರವಲ್ಲದೆ ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳಾಗ ಮಾಡಬೇಡಿರಿ; ಆದರೆ ಸತ್ತವರೊಳಗಿಂದ ಜೀವಿತರಾಗಿರಲಾಗಿ ನಿಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿ ಕೃತ್ಯಗಳನ್ನು ನಡೆಸುವ ಸಾಧನಗಳನ್ನಾಗಿ ಆತನಿಗೆ ಸಮರ್ಪಿಸಿರಿ.*

6. ರೋಮ 13:14 ಓದಿರಿ. ಶರೀರದ ಅಭಿಲಾಷೆಗಳಿಂದ ದುರಾತ್ಮಗಳಿಗೆ ಪೋಷಣೆ ನೀಡಲಾಗುತ್ತದೆ, ಹಾಗಾಗಿ ದೇವರ ಮಾರ್ಗಗಳಾದ ಪ್ರೀತಿ ಮತ್ತು ಪರಿಶುದ್ಧತೆಯಿಂದ ದುರಾತ್ಮಗಳು ಬಳಲಿಹೋಗುವಂತೆ ಮಾಡಿ. ನಾವು ಶರೀರದ ಅಭಿಲಾಷೆಗಳಿಗೆ ______________________ ಇರದಂತೆ ಮಾಡಬೇಕು.

***ರೋಮ 13:14*** *– ದೇಹದ ಆಶೆಗಳನ್ನು ಪೂರೈಸುವದಕ್ಕಾಗಿ ಚಿಂತಿಸದೆ ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿಕೊಳ್ಳಿರಿ.*

7. ಲೂಕ 10:17–19 ಓದಿರಿ. ದುರಾತ್ಮಗಳನ್ನು ಓಡಿಸುವುದಕ್ಕಾಗಿ ಆತನಲ್ಲಿ ನಾವು ಪ್ರಾರ್ಥಿಸಬೇಕೆಂದು ಯೇಸು ಎಂದೂ ಹೇಳುವುದಿಲ್ಲ. ಆತನು ನಮಗೆ ಅಧಿಕಾರವನ್ನು ನೀಡಿರುವನು. ನಮಗೆ ______________________ ಮೇಲೆ ಬಲ ಮತ್ತು ಅಧಿಕಾರವಿದೆಯೆಂದು ಈ ವಚನವು ತಿಳಿಸುತ್ತದೆ.

***ಲೂಕ 10:17–19*** *– ತರುವಾಯ ಆ ಎಪ್ಪತ್ತು ಮಂದಿಯು ಸಂತೋಷವುಳ್ಳವರಾಗಿ ಹಿಂತಿರುಗಿ ಬಂದು – ಸ್ವಾಮೀ, ದೆವ್ವಗಳು ಕೂಡಾ ನಿನ್ನ ಹೆಸರನ್ನು ಕೇಳಿ ನಮಗೆ ಅಧೀನವಾಗುತ್ತವೆ ಅಂದರು. ಆತನು ಅವರಿಗೆ – ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವದನ್ನು ಕಂಡೆನು. ನೋಡಿರಿ, ಹಾವುಗಳನ್ನೂ ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನೂ ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ. ಯಾವದೂ ನಿಮಗೆ ಕೇಡುಮಾಡುವದೇ ಇಲ್ಲ.*

## ಉತ್ತರಗಳು

1. ಎಫೆಸ 6:12 ಓದಿರಿ. ದುರಾತ್ಮಗಳ ರಂಗದೊಂದಿಗೆ ನಮ್ಮ ಆತ್ಮೀಕ ಘರ್ಷಣೆಯ ಕುರಿತಾಗಿ ಈ ವಚನವು ಹೇಗೆ ವರ್ಣಿಸುತ್ತದೆ?

   **ಇದನ್ನು ಹೋರಾಟವೆಂದು ವರ್ಣಿಸಲಾಗಿದೆ**

2. ಮಾರ್ಕ 16:17 ಓದಿರಿ. ಈ ವಚನವು ವಿಶ್ವಾಸಿಯ ಅಧಿಕಾರದ ಬಗ್ಗೆ ನಮಗೆ ಏನನ್ನು ಬೋಧಿಸುತ್ತದೆ?

   **ದುರಾತ್ಮಗಳನ್ನು ಓಡಿಸುವುದಕ್ಕಾಗಿ ನಮಗೆ ಯೇಸುವಿನ ಹೆಸರಿನಲ್ಲಿ ಅಧಿಕಾರ ಉಂಟು**

3. ಯಾಕೋಬ 4:7 ಓದಿರಿ. ದುರಾತ್ಮಗಳಿಂದ ಬಿಡುಗಡೆಯನ್ನು ಬಯಸುವ ಒಬ್ಬ ವ್ಯಕ್ತಿಯು ಏನು ಮಾಡುತ್ತಾನೆ?

   **ತನ್ನನ್ನು ದೇವರಿಗೆ ಅಧೀನಪಡಿಸಿ, ಸೈತಾನನನ್ನು ಎದುರಿಸುತ್ತಾನೆ**

4. ಯಾಕೋಬ 1:14 ಓದಿರಿ. ಕೆಟ್ಟದ್ದಾಗಿರುವ ಸಂಗತಿಯು ಅಪೇಕ್ಷಿಸಲು ಯೋಗ್ಯವಾಗಿದೆ ಎಂಬಂತೆ ಆಲೋಚಿಸುವ ಹಾಗೆ ಸೈತಾನನು ಹೇಗೆ ನಮ್ಮನ್ನು ವಂಚಿಸುತ್ತಾನೆ?

   **ಸೈತಾನನು ನಮ್ಮಲ್ಲಿರುವ ಆಶಾಪಾಶದ ಮೂಲಕ ಕೆಲಸ ಮಾಡುತ್ತಾನೆ (ಕೆಟ್ಟದ್ದಾಗಿರುವ ಸಂಗತಿಯನ್ನು ಅಪೇಕ್ಷಿಸಲು ಯೋಗ್ಯವೆಂಬಂತೆ ವಂಚಿಸುತ್ತಾನೆ).**

5. ರೋಮ 6:13 ಓದಿರಿ. ಒಬ್ಬ ವ್ಯಕ್ತಿಯು ತನ್ನ ಜೀವಿತವನ್ನು ಯೇಸುವಿನ ಸಂಗತಿಗಳಿಂದ ತುಂಬಿಸಿಕೊಂಡಾಗ, ದುರಾತ್ಮಗಳಿಗೆ ಇರಿಸುಮುರಿಸಾಗಿ, ಅವು ತಾವೇ ಬಿಟ್ಟುಹೋಗುತ್ತವೆ. ಈ ವಚನವು ನಾವು ಏನು ಮಾಡಬೇಕೆಂಬುದಾಗಿ ತಿಳಿಸುತ್ತದೆ?

   **ಪಾಪಕ್ಕೆ ಅಧೀನರಾಗಬೇಡಿ ಆದರೆ ದೇವರಿಗೆ ಅಧೀನರಾಗಿರಿ. ನಮ್ಮ ದೇಹದ ಅಂಗಗಳನ್ನು ಸರಿಯಾದ ಸಂಗತಿಗಳನ್ನು ಮಾಡುವಂತಹ ಸಾಧನಗಳನ್ನಾಗಿ ಒಪ್ಪಿಸಿಕೊಡಿ**

6. ರೋಮ 13:14 ಓದಿರಿ. ಶರೀರದ ಅಭಿಲಾಷೆಗಳಿಂದ ದುರಾತ್ಮಗಳಿಗೆ ಪೋಷಣೆ ನೀಡಲಾಗುತ್ತದೆ, ಹಾಗಾಗಿ ದೇವರ ಮಾರ್ಗಗಳಾದ ಪ್ರೀತಿ ಮತ್ತು ಪರಿಶುದ್ಧತೆಯಿಂದ ಅವು ಬಳಲಿಹೋಗುವಂತೆ ಮಾಡಿ. ನಾವು ಶರೀರದ ಅಭಿಲಾಷೆಗಳಿಗೆ ------------ ನೀಡಬಾರದು.

   **ಸ್ಥಳಾವಕಾಶ**

7. ಲೂಕ 10:17–19ನ್ನು ಓದಿರಿ. ದುರಾತ್ಮಗಳನ್ನು ಓಡಿಸುವುದಕ್ಕಾಗಿ ಆತನಲ್ಲಿ ನಾವು ಪ್ರಾರ್ಥಿಸಬೇಕೆಂದು ಯೇಸು ಎಂದೂ ಹೇಳುವುದಿಲ್ಲ. ಆತನು ನಮಗೆ ಅಧಿಕಾರವನ್ನು ನೀಡಿರುವನು. ನಮಗೆ ____________________ ಶಕ್ತಿ ಮತ್ತು ಅಧಿಕಾರವಿದೆಯೆಂದು ಈ ವಚನವು ತಿಳಿಸುತ್ತದೆ.

**ಸೈತಾನನ ಎಲ್ಲಾ ಬಲದ ಮೇಲೆ**

# ಪಾಠ 6

# ವಿಶ್ವಾಸಿಯ ಅಧಿಕಾರ

*ಆಂಡ್ರೂ ವ್ಹಾಮಕ್*

ವಿಶ್ವಾಸಿಗಳಾಗಿರುವ ನಮಗೆ ದೇವರು ಅಧಿಕಾರವನ್ನು ನೀಡಿರುವನು. ಇದನ್ನು ಹೇಳುವ ಸಲುವಾಗಿ, ನಾವು ನಮಗಿರುವ ಅಧಿಕಾರದ ಕುರಿತಾಗಿ ಮಾತ್ರವಲ್ಲದೆ, ಸೈತಾನನ ಅಧಿಕಾರದ ಕುರಿತಾಗಿಯೂ ತಿಳಿದುಕೊಳ್ಳಲಿದ್ದೇವೆ. ಇವನನ್ನು ಬಲವಿಲ್ಲದಂತೆ ದೊಬ್ಬಿಬಿಡಲಾಗಿದೆ. ನಾವು ನಮಗಿಂತಲೂ ಅತ್ಯಧಿಕವಾದ ಬಲವನ್ನು ಹೊಂದಿರುವುದರೊಂದಿಗೆ ಹೋರಾಡುತ್ತಿರುವೆವು ಮತ್ತು ನಾವು ತಕ್ಕಮಟ್ಟಿಗೆ ಅವನೊಂದಿಗೆ (ಸೈತಾನ) ಹೋರಾಡಬಲ್ಲೆವು ಎಂದು ಕ್ರೈಸ್ತರು ನಂಬುವಂತೆ ಅವರನ್ನು ನಡಿಸಲಾಗುತ್ತಿದೆ. ಅದರೆ ಸತ್ಯವೇದವು ಇದನ್ನು ನಮಗೆ ಹೇಳುವುದೇ ಇಲ್ಲ. ಎಫೆಸ 6:12ರಲ್ಲಿ ಹೇಳುತ್ತದೆ, *"ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ."* ಹಾಗಾಗಿ ಸೈತಾನನು ಒಂದು ಅಸ್ತಿತ್ವವಾಗಿದ್ದಾನೆ; ಅವನಿಗೆ ನಾವು ಹೋರಾಡುತ್ತಿರುವ ರಾಜತ್ವಗಳ ಮತ್ತು ಬಲಗಳ ದೊರೆತನವಿದೆ, ಆದರೆ ಇದಕ್ಕೆ ಮೊದಲು ಇರುವಂತಹ ವಚನದಲ್ಲಿ, ನಾವು ಸೈತಾನನ ತಂತ್ರೋಪಾಯಗಳನ್ನು ಎದುರಿಸಿ ನಿಲ್ಲುವುದಕ್ಕೆ ಶಕ್ತರಾಗಬೇಕು ಎಂದು ಹೇಳುತ್ತದೆ. ಸೈತಾನನಿಗೆ ನಮ್ಮ ಮೇಲೆ ಇರುವ ನಿಜಬಲವೆಂದರೆ ವಂಚನೆಯ ಮೂಲಕ. ನಮ್ಮನ್ನು ಹಾಗೆಯೇ ಜಯಿಸುವುದಕ್ಕೆ ಅವನಿಗೆ ಬಲವಿಲ್ಲ.

ಆದಿಕಾಂಡ 3ರಲ್ಲಿ ಆದಾಮ ಮತ್ತು ಹವ್ವಳ ವಿರುದ್ಧವಾಗಿ ಮೊದಲ ಶೋಧನೆಯು ಬಂದಾಗ, ಸೈತಾನನು ಯಾವುದೋ ಅತಿದೊಡ್ಡ ಬಲದೊಂದಿಗೆ ಅಲ್ಲಿಗೆ ಬರಲಿಲ್ಲ ಎಂಬುದನ್ನು ನಾವು ನೋಡುತ್ತೇವೆ. ಉದಾಹರಣೆಗೆ, ಅವನು ದೊಡ್ಡ ಆನೆಯಂತೆ ಬಂದು, ತನ್ನ ಕಾಲನ್ನು ಆದಾಮನ ತಲೆಯ ಮೇಲೆ ಇಟ್ಟು, "ನನಗೆ ಸೇವೆ ಮಾಡು ಇಲ್ಲದಿದ್ದರೆ..." ಎಂದು ಬೆದರಿಸಲಿಲ್ಲ, ಆದರೆ ದೇವರು ಮಾಡಿದ ಎಲ್ಲ ಜೀವಿಗಳಲ್ಲಿ ಬಹು ಯುಕ್ತಿಯುಳ್ಳ ಒಂದು ಸರ್ಪದ ಹಾಗೆ ಬಂದನು. "ಯುಕ್ತಿ" ಎಂಬ ಪದದ ಅರ್ಥ, "ಕಪಟತನ, ವಂಚನೆ ಅಥವಾ ಮೋಸ" ಎಂಬುದಾಗಿದೆ. ಸೈತಾನನು ಸರ್ಪದ ರೂಪದಲ್ಲಿ ಬಂದುದರ ಕಾರಣವೇನೆಂದರೆ, ಅವನಿಗೆ ಆದಾಮ ಮತ್ತು ಹವ್ವಳಿಂದ ಒತ್ತಾಯಪೂರ್ವಕವಾಗಿ ಮಾಡಿಸುವ ಬಲವು ಅವನಿಗಿಲ್ಲ. ಅವನು ವಂಚಿಸಲು ಮಾತ್ರ ಸಾಧ್ಯ. ಅವನು ದೇವರ ಸ್ವಭಾವ ಮತ್ತು ಗುಣದ ವಿರುದ್ಧವಾಗಿ ಬಂದು, ಆತನನ್ನು ಟೀಕಿಸುತ್ತಾ, "ದೇವರು ನಿಜವಾಗಿಯೂ ನಿನ್ನನ್ನು ಪ್ರೀತಿಸುವುದಿಲ್ಲ –

ಹಾಗಾಗಿ ಆತನು ಇದನ್ನು ನಿನಗೆ ನೀಡದಿರುವನು" ಎಂದು ಹೇಳುತ್ತಾನೆ. ಅವನು ಆದಾಮ ಮತ್ತು ಹವ್ವಳು ದೇವರ ವಿರುದ್ಧವಾಗಿ ಪಾಪ ಮಾಡುವಂತೆ ಅವರನ್ನು ಶೋಧಿಸುತ್ತಾ ವಂಚಿಸಿದನು. ಆದಾಮ ಮತ್ತು ಹವ್ವಳು ಎಲ್ಲಾ ಅಧಿಕಾರವನ್ನು ಹೊಂದಿದವರಾಗಿದ್ದರು, ಮತ್ತು ಸೈತಾನನು ಈ ವಿಧವಾಗಿ ಮಾಡುವುದಕ್ಕೆ ಇದ್ದ ಕಾರಣವೇನೆಂದರೆ ಅವನಿಗೆ ದೇವರ ವಿರುದ್ಧವಾಗಿ ಬರುವುದಕ್ಕೆ ಬಲವಿರಲಿಲ್ಲ.

ಇದರಲ್ಲಿ ಹೇಳುವಂತಹ ಬಹಳ ಸಂಗತಿಗಳಿವೆ, ಆದರೆ ನನಗೆ ಸಮಯದ ಅಭಾವವುಂಟು. ಆದರೆ ನಾನು ಹೇಳಬಯಸುವ ಅತಿಮುಖ್ಯ ಅಂಶಗಳಲ್ಲಿ ಒಂದು ಸಂಗತಿಯೆಂದರೆ, ವಿಶ್ವಾಸಿಗೆ ಇರುವ ಅಧಿಕಾರದ ಕುರಿತಾಗಿ ತಿಳಿದುಕೊಳ್ಳುವಾಗ, ಸೈತಾನನಿಗೆ ನಿಮ್ಮ ಮೇಲೆ ಯಾವುದೇ ಬಲ ಮತ್ತು ಅಧಿಕಾರ ಇಲ್ಲ ಎಂಬುದನ್ನು ನೀವು ಗುರುತಿಸಬೇಕಾಗಿದೆ. ಅವನು ಸೋತಿರುವಂತಹ ವೈರಿಯಾಗಿದ್ದಾನೆ. ನಿಮ್ಮ ವಿರುದ್ಧವಾಗಿ ಬರುವುದಕ್ಕೆ ಅವನಿಗಿರುವ ಬಲವೆಂದರೆ ಸುಳ್ಳುಗಳು ಮತ್ತು ವಂಚನೆಯೇ ಆಗಿದೆ. ನಿಮ್ಮ ಜೀವನವು ನಾಶವಾಗುತ್ತಿದ್ದರೆ, ನೀವು "ಈ ಹೊಡೆತಗಳನ್ನು ನೀಡುತ್ತಿರುವುದು ಸೈತಾನನೇ" ಎಂಬುದಾಗಿ ಹೇಳಬಹುದು, ಆದರೆ ಹೊಡೆಯುವುದಕ್ಕೆ ಸಾಮಗ್ರಿಗಳನ್ನು ಅವನಿಗೆ ನೀಡುತ್ತಿರುವವರು ನೀವೇ ಆಗಿರುವಿರಿ. ಅವನ ಸುಳ್ಳುಗಳಿಗೆ ಮತ್ತು ವಂಚನೆಗೆ ಪ್ರತಿಕ್ರಿಯೆ ನೀಡಬೇಕಾದವರು ನೀವೇ ಆಗಿರುವಿರಿ. ನೀವು ಸೈತಾನನಿಗೆ ಒಳಗಾಗದಿರುತ್ತಿದ್ದರೆ, ಅವನಿಗೆ ನಿಮ್ಮ ವಿರುದ್ಧವಾಗಿ ಬರುವುದಕ್ಕೆ ಯಾವುದೇ ಹಾದಿಯಾಗಲಿ ಅಥವಾ ಬಲವಾಗಿ ಇರುತ್ತಿರಲಿಲ್ಲ. 2 ಕೊರಿಂಥ 10:3–5ರಲ್ಲಿ ಹೇಳುತ್ತದೆ, *"ನಾವು ಲೋಕದಲ್ಲಿದ್ದರೂ ಲೋಕಾನುಸಾರವಾಗಿ ಯುದ್ಧ ಮಾಡುವವರಲ್ಲ. ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿ ಹಾಕುವಂಥವುಗಳಾಗಿವೆ. ನಾವು ವಿತರ್ಕಗಳನ್ನೂ, ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ, ಕೆಡವಿಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿದು..."* ಈ ವಾಕ್ಯಗಳು ನಿಮ್ಮ ಹೋರಾಟದ ಆಯುಧಗಳ ಕುರಿತಾಗಿ ಮಾತನಾಡುತ್ತಿವೆ, ಮತ್ತು ಇಲ್ಲಿ ಹೇಳಿರುವ ಪ್ರತಿಯೊಂದು ಆಯುಧವು ನಿಮ್ಮ ಮನಸ್ಸಿಗೆ ಸಂಬಂಧಪಟ್ಟಿರುವುದಾಗಿದೆ, ಆಲೋಚನೆಗಳಾಗಿವೆ. ವಂಚನೆಯ ಮೂಲಕವಲ್ಲದೆ ಇನ್ನ್ಯಾವ ವಿಧವಾಗಿಯೂ ಸೈತಾನನು ನಿಮಗೆ ಏನೂ ಮಾಡಲು ಬಲವಿಲ್ಲ.

ನಾನು ಬೇಗನೇ ಕೆಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ತಿಳಿಸಲು ಬಯಸುತ್ತೇನೆ. ಆದಿಯಲ್ಲಿ ದೇವರಿಗೆ ನಿಜವಾಗಿಯೂ ಎಲ್ಲಾ ಅಧಿಕಾರವಿತ್ತು. ಎಲ್ಲಾ ಬಲ ಮತ್ತು ಅಧಿಕಾರವು ದೇವರಿಂದಲೇ ಹೊರಹೊಮ್ಮಬೇಕಾಗಿದೆ ಏಕೆಂದರೆ ಆತನಲ್ಲಿ ಮಾತ್ರವೇ ಎಲ್ಲಾ ಬಲವು ಇರುವಂತಹುದಾಗಿದೆ. ಎಲ್ಲಾ ಸಂಗತಿಗಳು ಆತನಿಂದಲೇ ಕೊಡಲ್ಪಟ್ಟಂತವುಗಳಾಗಿವೆ. ಆತನು ಆಕಾಶವನ್ನು ಮತ್ತು ಭೂಮಿಯನ್ನು ಉಂಟುಮಾಡಿದಾಗ, ಆತನಿಗೆ ಎಲ್ಲಾ ಬಲ ಮತ್ತು ಅಧಿಕಾರವಿತ್ತು. ನಂತರ ಆದಿಕಾಂಡ 1:26 ಹೇಳುತ್ತದೆ, ದೇವರು ಆದಾಮ, ಹವ್ವಳನ್ನು ಉಂಟುಮಾಡಿದಾಗ, ಆತನು, *"ಅವರು... ಭೂಮಿಯ ಮೇಲೆಯೂ ದೊರೆತನ ಮಾಡಲಿ"* ಎಂದು ಹೇಳಿದನು. ಇದನ್ನು ಕೀರ್ತನೆ 115:16ರೊಂದಿಗೆ ಒಟ್ಟಾಗಿ ಸೇರಿಸಿ, *"ಪರಲೋಕವು*

*ಯೆಹೋವನದು; ಭೂಲೋಕವನ್ನು ನರಸಂತಾನಕ್ಕೆ ಕೊಟ್ಟಿದ್ದಾನೆ"* ಎಂದು ಹೇಳುತ್ತದೆ. ದೇವರು ಸೃಷ್ಟಿಕರ್ತನಾಗಿ ಆತನಿಗೆ ಎಲ್ಲದರ ಮೇಲೆ ಒಡೆತನವಿತ್ತು, ಆದರೆ ಆತನು ಭೂಮಿಯ ಮೇಲೆ ಅಧಿಕಾರವನ್ನು ಅಥವಾ ಆಳ್ವಿಕೆಯನ್ನು ದೇಹಧಾರಿಗಳಾದ ಮನುಷ್ಯರಿಗೆ ನೀಡಿದನು. ಸೈತಾನನಿಗೆ ಎಂದೂ ಭೂಮಿಯನ್ನು ಆಳ್ವಿಕೆ ಮಾಡುವುದಕ್ಕೆ ಹಕ್ಕಾಗಲಿ, ಬಲವಾಗಲಿ ಇರಲಿಲ್ಲ. ಇದನ್ನು ಅವನು ಮನುಷ್ಯನನ್ನು ಪಾಪ ಮಾಡುವುದಕ್ಕೆ ವಂಚಿಸುವುದರ ಮೂಲಕ ಪಡೆದುಕೊಂಡನು. ದೇವರು ಮನುಷ್ಯಕುಲಕ್ಕೆ ಬಲವನ್ನು ನೀಡಿದನು, ಮತ್ತು ಮನುಷ್ಯನು ಬಿದ್ದಾಗ, ಅವನು ದೇವರಿಂದ ತನಗೆ ನೀಡಲ್ಪಟ್ಟಿದ್ದ ಅಧಿಕಾರ ಮತ್ತು ಬಲವನ್ನು ಸೈತಾನನಿಗೆ ಒಪ್ಪಿಸಿದನು. ಮನುಷ್ಯನನ್ನು ಬಾಧೆಗೊಳಿಸಲು ಅಥವಾ ಈ ಲೋಕವನ್ನು ಆಳ್ವಿಕೆ ಮಾಡಲು ದೇವರು ಸೈತಾನನಿಗೆ ಎಂದೂ ಬಲವನ್ನು ನೀಡಿರಲಿಲ್ಲ.

ದೇವರ ವಾಕ್ಯವು, ಸೈತಾನನು ಈ ಲೋಕದ ದೇವರು ಎಂದು ಹೇಳುತ್ತದೆ, ಅಂದರೆ ದೇವರು ಅವನನ್ನು ಈ ಲೋಕಕ್ಕೆ ದೇವರಾಗಿ ಮಾಡಿದನು ಎಂಬುದಾಗಿ ಇದರ ಅರ್ಥವಲ್ಲ. ದೇವರು ಎಂದಿಗೂ ಸೈತಾನನ್ನು ಮಾನವಕುಲಕ್ಕಿಂತಲೂ ಉನ್ನತವಾಗಿ ಇಡಲಿಲ್ಲ. ಆತನು ಈ ಲೋಕದ ಮೇಲೆ ದೊರೆತನವನ್ನು ಮತ್ತು ಅಧಿಕಾರವನ್ನು ನರಕುಲಕ್ಕೆ ನೀಡಿದನು. ಸೈತಾನನು ನೀಡುವಂತಹ ಬಾಧೆ, ದೊರೆತನ, ಅಥವಾ ಸಮಸ್ಯೆಗಳನ್ನು ಉಂಟುಮಾಡಲು ಶಕ್ತನಾಗಿರುವುದರ ಕಾರಣವೆಂದರೆ, ಜನರು ತಮಗೆ ದೇವರಿಂದ ನೀಡಲ್ಪಟ್ಟ ಅಧಿಕಾರವನ್ನು ಅವರು ಸೈತಾನನಿಗೆ ಒಪ್ಪಿಸುತ್ತಿರುವುದೇ ಆಗಿದೆ. ಇದು ದೇವರಿಗೆ ನಿಜವಾಗಿಯೂ ಒಂದು ಸಮಸ್ಯೆಯನ್ನು ಒಡ್ಡಿತು, ಏಕೆಂದರೆ ಆತನು ಆತ್ಮಸ್ವರೂಪಿಯಾಗಿರುವನು, ಮತ್ತು ಆತನು ಈ ಲೋಕದ ಮೇಲಿನ ಅಧಿಕಾರವನ್ನು ನರರೂಪದ ಮನುಷ್ಯರಿಗೆ ನೀಡಿದನು. ದೇಹವನ್ನು ಹೊಂದಿರುವ ಮನುಷ್ಯರು ಮಾತ್ರವೇ ಈ ಲೋಕದಲ್ಲಿ ಅಧಿಕಾರವನ್ನು, ಬಲವನ್ನು ಮತ್ತು ಪ್ರಭಾವಾವನ್ನು ಬೀರಲು ಸಾಧ್ಯವಿದೆ. ಹಾಗಾಗಿ ಸೈತಾನನು ನಮ್ಮ ಬಳಿಗೆ ಬಂದು, ನಮ್ಮ ಅಧಿಕಾರವನ್ನು ನಾವು ಅವನಿಗೆ ಒಪ್ಪಿಸುವಂತೆ ಮಾಡುತ್ತಾನೆ. ಈ ಕಾರಣದಿಂದಲೇ ಅವನು ಒಂದು ದೇಹದಲ್ಲಿ ನೆಲೆಸಲು ಬಯಸುವವನಾಗಿದ್ದಾನೆ. ದೇವರ ವಾಕ್ಯದಲ್ಲಿ, ದುರಾತ್ಮಗಳು ಆಕ್ರಮಣ ಮಾಡುವುದಕ್ಕಾಗಿ ಅವು ದೇಹದಲ್ಲಿ ಇರುತ್ತವೆ ಎಂದು ಹೇಳುತ್ತದೆ, ಏಕೆಂದರೆ ಮನುಷ್ಯನ ದೇಹಗಳನ್ನು ಉಪಯೋಗಿಸದೆ ಸೈತಾನನು ಏನನ್ನೂ ಮಾಡಲು ಸಾಧ್ಯವಿಲ್ಲ. ದೇವರು ಆತ್ಮಸ್ವರೂಪಿಯಾಗಿರುವುದರ ನಿಮಿತ್ತ ಹಾಗೂ ಆತನು ಶಾರೀರಿಕ ಮನುಷ್ಯರಿಗೆ ಅಧಿಕಾರವನ್ನು ನೀಡಿರುವುದರ ನಿಮಿತ್ತ, ಒಂದು ವಿಧದಲ್ಲಿ ಈಗ ಆತನ ಕೈಗಳು ಕಟ್ಟಲ್ಪಟ್ಟಿರುವಂತೆ ಇವೆ. ಇದು ದೇವರಿಗೆ ಅಧಿಕಾರವಾಗಲಿ ಅಥವಾ ಬಲವಾಗಲಿ ಇಲ್ಲ ಎಂಬ ಅರ್ಥವಲ್ಲ ಆದರೆ ಇದು ಆತನ ಪ್ರಾಮಾಣಿಕತೆಯ ಕಾರಣದಿಂದಾಗಿದೆ. ಆತನು ಅಧಿಕಾರವನ್ನು ಶಾರೀರಿಕವಾಗಿರುವ ಮನುಷ್ಯರಿಗೆ ನೀಡಿದನು, ಮತ್ತು ಆತನು ತನ್ನ ಮಾತಿಗೆ ಸತ್ಯವಾಗಿರುವುದಕ್ಕಾಗಿ, ಆತನು ಅದನ್ನು ಸುಮ್ಮನೆ ಹಾಗೆಯೇ ಹಿಂದಕ್ಕೆ ಪಡೆದು, "ನಾನು ಬಯಸಿದ ರೀತಿ ಇದಲ್ಲ, ಸಮಯ ಮುಗಿದಿದೆ ನಿಲ್ಲಿ, ಇದನ್ನು ನಾವು ಮುಗಿಸಲಿದ್ದೇವೆ" ಎಂದು ಹೇಳಲು ಸಾಧ್ಯವಿಲ್ಲ. ಹೌದು, ದೇವರು ತನ್ನ ಮಾತಿಗೆ ತಾನೇ ಬದ್ಧನಾಗಿರುವನು. ಚರಿತ್ರೆಯೆಲ್ಲೆಡೆ ಆತನು ಉಪಯೋಗಿಸಲಾಗುವಂತಹ ವ್ಯಕ್ತಿಗಳಿಗಾಗಿ ಎದುರುನೋಡಿದನು, ಆದರೆ ಎಲ್ಲಾ

ಮನುಷ್ಯರು ಭ್ರಷ್ಟರಾಗಿದ್ದು, ಅವರು ತಮ್ಮನ್ನು ತಾವು ಸೈತಾನನಿಗೆ ಅಧೀನಪಡಿಸಿಕೊಂಡಿದ್ದುದೇ ಸಮಸ್ಯೆಯಾಗಿತ್ತು. ಹಾಗಾದರೆ ಆತನು ಏನು ಮಾಡಬೇಕಾಗಿತ್ತು?

ಕೊನೆಗೆ ದೇವರು ಮಾಡಿದ ಕಾರ್ಯವೆಂದರೆ ಆತನೇ ಖುದ್ದಾಗಿ ಮನುಷ್ಯನ ರೂಪದಲ್ಲಿ ಲೋಕಕ್ಕೆ ಬಂದನು. ಇದನ್ನು ಅರ್ಥ ಮಾಡಿಕೊಂಡಾಗ ಬಹಳ ಅದ್ಭುತವೆನಿಸುತ್ತದೆ, ಏಕೆಂದರೆ ಈಗ ಸೈತಾನನಿಗೆ ಬಹುದೊಡ್ಡ ಸಮಸ್ಯೆ ಉಂಟಾಗಿತ್ತು. ಅವನು ಮನುಕುಲದ ಬಲವನ್ನು ಉಪಯೋಗಿಸುತ್ತಿದ್ದನು ಮತ್ತು ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ದೇವರು ನೇರವಾಗಿ ಮಧ್ಯಸ್ಥಿಕೆ ವಹಿಸಲು ಸಾಧ್ಯವಿರಲಿಲ್ಲ, ಏಕೆಂದರೆ ದೇವರು ತನಗೆ ನೀಡಿದ್ದ ಅಧಿಕಾರವನ್ನು ಮನುಷ್ಯನು ಸ್ವ–ಇಚ್ಛೆಯಿಂದ, ನ್ಯಾಯಬದ್ಧವಾಗಿ ಸೈತಾನನಿಗೆ ಅಧೀನಪಡಿಸುತ್ತಿದ್ದನು. ಸೈತಾನನು ಮಾಡಿದ್ದು ತಪ್ಪಾಗಿತ್ತು ನಿಜ, ಆದರೆ ಮನುಷ್ಯರು ತಮಗೆ ನೀಡಲಾಗಿದ್ದ ಅಧಿಕಾರವನ್ನು ಮತ್ತು ಬಲವನ್ನು ಸೈತಾನನಿಗೆ ಒಪ್ಪಿಸಿಬಿಟ್ಟಿದ್ದರು. ಆದರೆ ಈಗ, ಇಲ್ಲಿ ದೇವರು ತಾನೇ ಬಂದನು, ಮತ್ತು ಈಗ ಆತನು ಆತ್ಮಸ್ವರೂಪಿಯಾಗಿರಲಿಲ್ಲ, ಬದಲಾಗಿ ಆತನು ದೇಹಧಾರಿಯಾಗಿದ್ದನು. ಇದು ಸೈತಾನನನ್ನು ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಇರುವಂತೆ ಮಾಡಿತು. ಏಕೆಂದರೆ ದೇವರಿಗೆ ಪರಲೋಕದ ಅಧಿಕಾರವಿದ್ದುದು ಮಾತ್ರವಲ್ಲದೆ, ಆತನು ಒಬ್ಬ ಮನುಷ್ಯನಾಗಿದ್ದುದರಿಂದ ಲೋಕದ ಮೇಲೆಯೂ ಆತನಿಗೆ ಅಧಿಕಾರವಿತ್ತು. ಯೋಹಾನ 5:26–27ರಲ್ಲಿ ಯೇಸು ಹೇಳಿದನು, *"ತಂದೆಯು ತಾನು ಹೇಗೆ ಸ್ವತಃ ಜೀವವುಳ್ಳವನಾಗಿದ್ದಾನೋ ಹಾಗೆಯೇ ಮಗನೂ ಸ್ವತಃ ಜೀವವುಳ್ಳವನಾಗಿರುವಂತೆ ಮಾಡಿದನು. ಮತ್ತು ಮಗನು ಮನುಷ್ಯ ಕುಮಾರನಾಗಿರುವದರಿಂದ ತೀರ್ಪು ಮಾಡುವ ಅಧಿಕಾರವನ್ನೂ ಅವನಿಗೆ ಕೊಟ್ಟನು."* ಆತನು ಇಲ್ಲಿ ತನ್ನ ಶಾರೀರಿಕ ದೇಹದ ಕುರಿತಾಗಿ ಉಲ್ಲೇಖಿಸುತ್ತಿರುವನು.

ಯೇಸುವು ಬಂದನು ಮತ್ತು ದೇವರಿಂದ ನೀಡಲ್ಪಟ್ಟಿರುವ ಅಧಿಕಾರವನ್ನು ಕಾರ್ಯರೂಪದಲ್ಲಿ ಮಾಡಿದನು. ಸೈತಾನನು ಆತನನ್ನು ಶೋಧಿಸಿದನು, ಆದರೆ ಯೇಸು ಎಂದೂ ಅವನಿಗೆ ಅಧೀನನಾಗಲಿಲ್ಲ. ಯೇಸುವಿನೊಂದಿಗಿನ ಪ್ರತಿಯೊಂದು ಹೋರಾಟದಲ್ಲಿಯೂ ಸೈತಾನನು ಸೋತನು. ನಂತರ ಯೇಸುವು ನಮ್ಮ ಪಾಪಗಳನ್ನು ಹೊತ್ತುಕೊಂಡನು, ಅವುಗಳಿಗಾಗಿ ಪ್ರಾಣ ನೀಡಿದನು, ನರಕಕ್ಕೆ ಹೋದನು, ಪುನಃ ಜೀವಂತವಾಗಿ ಎದ್ದು ಬಂದನು ಹಾಗೂ ಮತ್ತಾಯ 28:18ರಲ್ಲಿ ಹೇಳಿದನು, *"ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ."* ದೇವರಿಂದ ಕೊಡಲ್ಪಟ್ಟಿದ್ದ ಅಧಿಕಾರವನ್ನು ಮನುಷ್ಯನು ದುರಪಯೋಗಪಡಿಸಿಕೊಂಡಿದ್ದನು, ಆದರೆ ಯೇಸುವು ಪುನಃ ಆ ಅಧಿಕಾರವನ್ನು ಗೆದ್ದುಕೊಂಡನು ಮತ್ತು ದೇವರು ಮನುಷ್ಯರೂಪದಲ್ಲಿ ಇದ್ದುದರಿಂದ ಯೇಸುವಿಗೆ ಪರಲೋಕದಲ್ಲಿ ಮತ್ತು ಭೂಲೋಕದಲ್ಲಿ ಎಲ್ಲಾ ಅಧಿಕಾರವನ್ನು ಹೊಂದಿದ್ದನು. ಇದರ ಮುಂದಿನ ವಚನದಲ್ಲಿಯೇ ಆತನು "ಈಗ ನೀವು ಹೊರಟು ಹೋಗಿ ಈ ಸಂಗತಿಗಳನ್ನು ಮಾಡಿರಿ" ಎಂದು ಹೇಳಿದನು. ಇದನ್ನು ಆತನು "ಈಗ ನನಗೆ ಪರಲೋಕದಲ್ಲಿ ಮತ್ತು ಭೂಲೋಕದಲ್ಲಿ ಎಲ್ಲಾ ಅಧಿಕಾರವೂ ಇದೆ, ಮತ್ತು ಇದನ್ನು ನಾನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿರುವೆನು" ಎಂದು ಹೇಳುತ್ತಿದ್ದಾನೆ. ಆದಾಗ್ಯೂ, ಈ ಬಾರಿ,

ವಿಶ್ವಾಸಿಗಳಾಗಿ ದೇವರು ನಮಗೆ ಹಿಂತಿರುಗಿಸಿ ನೀಡಿರುವ ಅಧಿಕಾರದಲ್ಲಿ ಒಂದು ಪ್ರತ್ಯೇಕವಾದ ವ್ಯತ್ಯಾಸವಿದೆ. ಇದು ನಮ್ಮ ಹಾಗೂ ಕರ್ತನಾದ ಯೇಸು ಕ್ರಿಸ್ತನ ನಡುವೆ ಇರುವಂತಹ ಜಂಟಿ ಅಧಿಕಾರವಾಗಿದೆ. ಇದು ಆದಾಮ, ಹವ್ವಳಿಗೆ ನೀಡಿದ ವೈಯಕ್ತಿಕ ಅಧಿಕಾರದಂತೆ ನಮಗೆ ಇನ್ನು ಮುಂದೆ ಇರುವುದಿಲ್ಲ. ಅವರು ತಮ್ಮ ಅಧಿಕಾರವನ್ನು ಕೊಟ್ಟುಬಿಡುವುದಕ್ಕೆ ಸಾಧ್ಯವಿತ್ತು, ಸೈತಾನನು ತಮ್ಮನ್ನು ಬಾಧಿಸುವಂತೆ ಅನುಮತಿಸಬಹುದಾಗಿತ್ತು ಮತ್ತು ಇದರಿಂದ ನಿರೀಕ್ಷೆ ಇಲ್ಲದವರಾಗಿದ್ದರು. ಆದರೆ ಇಂದು ನಮ್ಮ ಅಧಿಕಾರವು ಕರ್ತನಾದ ಯೇಸುವಿನೊಂದಿಗೆ ಹಂಚಿಕೊಳ್ಳಲಾಗಿದೆ. ಇದು ಒಂದು ಬ್ಯಾಂಕಿನಲ್ಲಿ ಜಂಟಿ ಖಾತೆಯನ್ನು ಹೊಂದಿರುವವರು ಹಣವನ್ನು ಪಡೆಯಲು ಆ ಇಬ್ಬರು ವ್ಯಕ್ತಿಗಳು ಸಹಿ ಮಾಡಿದರೆ ಮಾತ್ರ ಹಣವನ್ನು ಪಡೆಯಲು ಸಾಧ್ಯವಾಗುತ್ತದೆ, ಇದು ಹಾಗೆಯೇ ಇರುವಂತಹುದಾಗಿದೆ. ನಮ್ಮ ಅಧಿಕಾರವನ್ನು ಕರ್ತನಾದ ಯೇಸುವಿನೊಂದಿಗೆ ಹಂಚಿಕೊಡಲಾಗಿದೆ ಮತ್ತು ಆತನ ಅಧಿಕಾರವನ್ನು ಸಭೆಯೊಂದಿಗೆ ಹಂಚಿಕೊಳ್ಳಲಾಗಿದೆ.

ನಾವು ಸೋತರೂ ಸಹ, ದೇವರು ಇನ್ನೆಂದಿಗೂ ಈ ಅಧಿಕಾರವನ್ನು ಸೈತಾನನಿಗೆ ಅಧೀನಪಡಿಸುವುದಿಲ್ಲ. ಸೈತಾನನು ನಿಜವಾಗಿಯೂ ಬಲಹೀನನಾಗಿರುವನು. ಅವನು ನಿಮ್ಮನ್ನು ವಂಚಿಸದ ಹೊರತು ನೀವೇ ಖುದ್ದಾಗಿ ಅವನಿಗೆ ಒಳಗಾಗುವುದನ್ನು ಹೊರತು ಪಡಿಸಿ ಸೈತಾನನಿಗೆ ನಿಮ್ಮ ಜೀವನದ ಮೇಲೆ ಯಾವುದೇ ಸಾಮರ್ಥ್ಯವಿಲ್ಲ. ನೀವು ಅವನಿಗೆ ನಿಮ್ಮ ಜೀವನದಲ್ಲಿ ಅಧಿಕಾರವನ್ನು ನೀಡಬಹುದು, ಇದಕ್ಕಾಗಿ ನೀವು ವೈಯಕ್ತಿಕವಾಗಿ ನೋವನ್ನು ಅನುಭವಿಸಬಹುದು, ಆದರೆ ಮನುಷ್ಯನಿಗೆ ದೇವರಿಂದ ಕೊಡಲ್ಪಟ್ಟಿರುವ ಅಧಿಕಾರವನ್ನು ಇನ್ನೆಂದಿಗೂ ಪುನಃ ಒಬ್ಬರೇ ಸೈತಾನನಿಗೆ ಅಧೀನ ಪಡಿಸಲು ಸಾಧ್ಯವೇ ಇಲ್ಲ. ಇದನ್ನು ಈಗ ನಮ್ಮ ಹಾಗೂ ಕರ್ತನಾದ ಯೇಸುವಿನ ನಡುವೆ ಹಂಚಲ್ಪಡಲಾಗಿದೆ, ಮತ್ತು ಯಾವುದೇ ಕಾರಣಕ್ಕೂ ಆತನು ನಂಬಿಗಸ್ತನಾಗಿಯೇ ಇರುವನು. ಈಗ ಅಧಿಕಾರವನ್ನು ಮತ್ತು ಬಲವನ್ನು ಹೊಂದಿರುವವರು ನೀವೇ ಎಂಬುದನ್ನು ನೀವು ಗುರುತಿಸುವ ಅಗತ್ಯವಿದೆ. ಸೈತಾನನು ನಿಮ್ಮೊಂದಿಗೆ ಆಲೋಚನೆಗಳಲ್ಲಿ ಹೋರಾಡುತ್ತಿರುವನು ಮತ್ತು ನಿಮ್ಮ ಆಯುಧಗಳು ಈ ಆಲೋಚನೆಗಳು ವಶಪಡಿಸಿಕೊಳ್ಳುವಂತಹ ಆಯುಧಗಳಾಗಿದೆ. ಸೈತಾನನು ನಿಮ್ಮನ್ನು ಶಾರೀರಿಕವಾಗಿ ಬಾಧಿಸಿ, ಸ್ವಸ್ಥತೆಯ ಕುರಿತಾಗಿ ವಾಕ್ಯವು ಏನು ಹೇಳುತ್ತದೆ ಎಂಬಂತೆ ಮಾಡುವುದು ಸೈತಾನನ ತಪ್ಪಾಗಿದೆ. ಯೋಹಾನ 8:32 ಹೇಳುತ್ತದೆ, *"ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು."* ಬಲವನ್ನು ಮತ್ತು ಅಧಿಕಾರವನ್ನು ಹೊಂದಿರುವವರು ನೀವೇ ಆಗಿರುವಿರಿ. ಇದನ್ನು ದೇವರು ನಿಮಗೆ ನೀಡಿರುವನು, ಮತ್ತು ಇವನ್ನು ಕಾರ್ಯರೂಪದಲ್ಲಿ ತರುವುದಕ್ಕೆ ನಿಮ್ಮನ್ನು ತಡೆದಿರುವಂತಹುದಕ್ಕೆ ಕಾರಣವೆಂದರೆ, ನೀವು ಈಗಲೂ ಸಹ ನಿಮ್ಮ ಆಲೋಚನೆಗಳನ್ನು ಅಧೀನಪಡಿಸಿಕೊಂಡಿಲ್ಲದಿರುವುದೇ ಆಗಿದೆ. ನಿಮ್ಮ ಮನಸ್ಸನ್ನು ನೂತನಪಡಿಸಿಕೊಳ್ಳುವುದಕ್ಕಾಗಿ ಮತ್ತು ನೀವು ಏನನ್ನು ಹೊಂದಿಕೊಂಡಿರುವಿರಿ ಎಂಬುದನ್ನು ಗ್ರಹಿಸುವುದಕ್ಕಾಗಿ ವಾಕ್ಯಕ್ಕನುಗುಣವಾದ ಆಯುಧಗಳನ್ನು ನೀವು ಉಪಯೋಗಿಸಿಲ್ಲ. ಅಧಿಕಾರದೊಂದಿಗೆ ಮತ್ತು ಬಲದೊಂದಿಗೆ ಇರುವಂತವರು ಖುದ್ದಾಗಿ ನೀವೇ ಆಗಿರುವಿರಿ ಎಂಬುದನ್ನು ಕಂಡುಕೊಳ್ಳುವುದು ಪ್ರೋತ್ಸಾಹಕರವಾಗಿದೆ.

ನೀವು ಇದನ್ನು ತೆಗೆದುಕೊಂಡು, ಧ್ಯಾನಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ ಮತ್ತು ಸೈತಾನನು ನಿಮ್ಮನ್ನು ನೋಡಿ ನಡುಗುವವನಾಗಿದ್ದಾನೆ ಎಂಬ ಪ್ರಕಟಣೆಯನ್ನು ದೇವರು ನಿಮಗೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ನೀವು ಸೈತಾನನನ್ನು ಕಂಡು ನಡುಗಬಾರದು ಏಕೆಂದರೆ ದೇವರಿಂದ ಕೊಡಲ್ಪಟ್ಟಿರುವ ಬಲವನ್ನು ಮತ್ತು ಅಧಿಕಾರವನ್ನು ಹೊಂದಿರುವವರು ನೀವೇ ಆಗಿರುವಿರಿ. ನೀವು ಸೈತಾನನ್ನು ಎದುರಿಸಿದರೆ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು (ಯಾಕೋಬ 4:7).

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಅದಿಕಾಂಡ 3:1 ಓದಿರಿ. ಸೈತಾನನು ಅಸ್ತಿತ್ವದಲ್ಲಿರುವನು, ಆದರೆ ನಮ್ಮನ್ನು ವಂಚಿಸುವುದರಲ್ಲಿಯೇ ಅವನ ನಿಜವಾದ ಸಾಮರ್ಥ್ಯವು ಒಳಗೊಂಡಿರುವುದಾಗಿದೆ. ಹವ್ವಳಿಗೆ ಸರ್ಪವು (ಸೈತಾನನು) ಏನು ಮಾಡುವುದಕ್ಕಾಗಿ ಪ್ರಯತ್ನಿಸಿದನು?

   **ಆದಿಕಾಂಡ 3:1** – *ಯೆಹೋವನು ಉಂಟು ಮಾಡಿದ ಎಲ್ಲಾ ಭೂಜಂತುಗಳಲ್ಲಿ ಸರ್ಪವು ಯುಕ್ತಿಯುಳ್ಳದ್ದಾಗಿತ್ತು. ಅದು ಸ್ತ್ರೀಯ ಬಳಿಗೆ ಬಂದು – ಏನವ್ವಾ, ತೋಟದಲ್ಲಿರುವ ಯಾವ ಮರದ ಹಣ್ಣನ್ನೂ ನೀವು ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವದು ನಿಜವೋ? ಎಂದು ಕೇಳಿದನು.*

2. ಆದಿಕಾಂಡ 3:1 ಓದಿರಿ. ಸೈತಾನನು ವಂಚಿಸುವುದನ್ನು ಆರಿಸಿಕೊಂಡನು, ಇದು ಏಕೆ ಎಂಬುದಾಗಿ ಹೇಳುವಿರಿ?

3. ಆದಿಕಾಂಡ 2:26,28 ಓದಿರಿ. ಮನುಷ್ಯನಿಗೆ ಅವನ ಅಧಿಕಾರವನ್ನು ನೀಡಿದವರು ಯಾರು?

   **ಆದಿಕಾಂಡ 1:26** – *ಆ ಮೇಲೆ ದೇವರು – ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು.*

   **ಆದಿಕಾಂಡ 1:28** – *ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ – ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಅಂದನು.*

4. ಕೀರ್ತನೆ 8:4–8 ಓದಿರಿ. ದೇವರು ಮನುಷ್ಯನನ್ನು ಹೇಗೆ ಸೃಷ್ಟಿಸಿದನು?

   **ಕೀರ್ತನೆ 8:4–8** – *ಮನುಷನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? [5] ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ. [6] ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದೆ; [7] ನೀನು ಎಲ್ಲಾ ಕುರಿದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು, [8] ಆಕಾಶಪಕ್ಷಿಗಳು, ಸಮುದ್ರದ ಮೀನುಗಳು, ಅದರಲ್ಲಿ*

*ಸಂಚರಿಸುವ ಸಕಲ ವಿಧವಾದ ಜೀವಜಂತುಗಳು ಇವೆಲ್ಲವನ್ನೂ ಅವನಿಗೆ ಅಧೀನ ಮಾಡಿದ್ದೀಯಲ್ಲವೇ.*

5. 2 ಕೊರಿಂಥ 4:4 ಓದಿರಿ. ಏನು ಸಂಭವಿಸಿತೆಂಬುದಾಗಿ ಈ ವಚನವು ಸೂಚಿಸುತ್ತದೆ?

   **2 ಕೊರಿಂಥ 4:4** – *ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು.*

6. ಮತ್ತಾಯ 4:8–9 ಓದಿರಿ. ಈ ಅಂಶದ ಕುರಿತಾಗಿ ಈ ವಚನಗಳು ಪುಷ್ಟಿ ನೀಡುತ್ತವೆಯೇ?

   **ಮತ್ತಾಯ 4:8–9** – *ಬಳಿಕ ಸೈತಾನನು ಆತನನ್ನು ಬಹಳ ಎತ್ತರವಾದ ಬೆಟ್ಟಕ್ಕೆ ಕರಕೊಂಡು ಹೋಗಿ ಪ್ರಪಂಚದ ಎಲ್ಲಾ ರಾಜ್ಯಗಳನ್ನೂ ಅವುಗಳ ವೈಭವವನ್ನೂ ಆತನಿಗೆ ತೋರಿಸಿ – ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಇವುಗಳನ್ನೆಲ್ಲಾ ನಿನಗೆ ಕೊಡುವೆನು ಅಂದನು.*

7. ಮತ್ತಾಯ 28:18 ಓದಿರಿ. ಯೇಸುವಿನ ಮರಣ ಮತ್ತು ಪುನರುತ್ಥಾನದ ನಂತರ, ಪರಲೋಕದಲ್ಲಿ ಹಾಗೂ ಭೂಲೋಕದಲ್ಲಿ ಯಾರಿಗೆ ಅಧಿಕಾರವುಂಟು?

   **ಮತ್ತಾಯ 28:18–19** – *ಆಗ ಯೇಸು ಹತ್ತರಕ್ಕೆ ಬಂದು – ಪರಲೋದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ.*

8. ಮತ್ತಾಯ 28:18–19 ಓದಿರಿ. ಈ ವಚನದ ಪ್ರಕಾರ ಅಧಿಕಾರವನ್ನು ಯಾರಿಗೆ ಒಪ್ಪಿಸಿಕೊಡಲಾಗಿದೆ?

9. ಎಫೆಸ 1:19ನ್ನು ಓದಿರಿ. ದೇವರ ಅತಿಶಯವಾದ ಬಲವು ಯಾರಿಗಾಗಿ ಇರುವಂತಹುದಾಗಿದೆ?

   **ಎಫೆಸ 1:19** – *ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ.*

## ಉತ್ತರಗಳು

1. ಅದಿಕಾಂಡ 3:1 ಓದಿರಿ. ಸೈತಾನನು ಅಸ್ತಿತ್ವದಲ್ಲಿರುವನು, ಆದರೆ ನಮ್ಮನ್ನು ವಂಚಿಸುವುದರಲ್ಲಿಯೇ ಅವನ ನಿಜವಾದ ಸಾಮರ್ಥ್ಯವು ಒಳಗೊಂಡಿರುವುದಾಗಿದೆ. ಹವ್ವಳಿಗೆ ಸರ್ಪವು (ಸೈತಾನನು) ಏನನ್ನು ಪ್ರಶ್ನಿಸುವುದಕ್ಕಾಗಿ ಪ್ರಯತ್ನಿಸಿದನು?

   **ದೇವರ ವಾಕ್ಯವನ್ನು (ದೇವರು ನಿಜವಾಗಿಯೂ ಹೀಗೆ ಹೇಳಿರುವನೇ? ಎಂಬುದಾಗಿ)**

2. ಆದಿಕಾಂಡ 3:1 ಓದಿರಿ. ಸೈತಾನನು ವಂಚಿಸುವುದನ್ನು ಆರಿಸಿಕೊಂಡನು, ಏಕೆ ಎಂಬುದಾಗಿ ಹೇಳುವಿರಿ?

   **ಒತ್ತಾಯದಿಂದ ಅವರನ್ನು ಅವಿಧೇಯರನ್ನಾಗಿ ಮಾಡಲು ಸೈತಾನನಿಗೆ ಸಾಧ್ಯವಾಗಲಿಲ್ಲ. ಹಾಗಾಗಿ ಅವರಿಗಿರುವ ಅಧಿಕಾರವನ್ನು ಬಿಟ್ಟುಕೊಡುವಂತೆ ಮಾಡಲು ಅವನು ಅವರನ್ನು ವಂಚಿಸಬೇಕಾಯಿತು**

3. ಆದಿಕಾಂಡ 2:16,28 ಓದಿರಿ. ಮನುಷ್ಯನಿಗೆ ಅವನ ಅಧಿಕಾರವನ್ನು ನೀಡಿದವರು ಯಾರು?

   **ದೇವರು**

4. ಕೀರ್ತನೆ 8:4–8 ಓದಿರಿ. ದೇವರು ಮನುಷ್ಯನನ್ನು ಹೇಗೆ ಸೃಷ್ಟಿಸಿದನು?

   **ದೇವರು ತನ್ನ ಸೃಷ್ಟಿಯ ಮೇಲೆ ಅಧಿಕಾರವನ್ನು ಹೊಂದಿದವರಾಗಿ ಇರುವಂತೆ ಮನುಷ್ಯನನ್ನು ಸೃಷ್ಟಿಸಿದನು**

5. 2 ಕೊರಿಂಥ 4:4 ಓದಿರಿ. ಏನು ಸಂಭವಿಸಿತೆಂಬುದಾಗಿ ಈ ವಚನವು ಸೂಚಿಸುತ್ತದೆ?

   **ಸೈತಾನನು ಮನುಷ್ಯನ ಅಧಿಕಾರವನ್ನು ಪಡೆದುಕೊಂಡನು ಮತ್ತು ಈ ಲೋಕದ (ಅಥವಾ ಈ ಪದ್ಧತಿಯ ಅಥವಾ ಈ ಯುಗದ) ದೇವರಾದನು**

6. ಮತ್ತಾಯ 4:8–9 ಓದಿರಿ. ಈ ಅಂಶದ ಕುರಿತಾಗಿ ಈ ವಚನಗಳು ಪುಷ್ಟಿ ನೀಡುತ್ತವೆಯೇ?

   **ಹೌದು**

7. ಮತ್ತಾಯ 28:18 ಓದಿರಿ. ಯೇಸುವಿನ ಮರಣ ಮತ್ತು ಪುನರುತ್ಥಾನದ ನಂತರ, ಪರಲೋಕದಲ್ಲಿ ಹಾಗೂ ಭೂಲೋಕದಲ್ಲಿ ಯಾರಿಗೆ ಅಧಿಕಾರವುಂಟು?

**ಯೇಸುವಿಗೆ**

8. ಮತ್ತಾಯ 28:18–19ನ್ನು ಓದಿರಿ. ಈ ವಚನದ ಪ್ರಕಾರ ಅಧಿಕಾರವನ್ನು ಯಾರಿಗೆ ಒಪ್ಪಿಸಿಕೊಡಲಾಗಿದೆ?

**ವಿಶ್ವಾಸಿಗೆ**

9. ಎಫೆಸ 1:19 ಓದಿರಿ. ದೇವರ ಅತಿಶಯವಾದ ಬಲವು ಯಾರಿಗಾಗಿ ಇರುವಂತಹುದಾಗಿದೆ?

**ನಂಬುವವರಾದ ನಮಗೆ**

## ಪಾಠ 7

# ಪ್ರಾಯಶ್ಚಿತ್ತದಲ್ಲಿ ಸ್ವಸ್ಥತೆಯುಂಟು

*ಆಂಡ್ರೂ ವ್ಹಾಮಕ್*

ಈಗಾಗಲೇ ಯೇಸು ನಮಗಾಗಿ ಸ್ವಸ್ಥತೆಯನ್ನು ಖರೀದಿಸಿದ್ದಾನೆ. ಮಾರ್ಕ 2 ಮತ್ತು ಲೂಕ 5ರಲ್ಲಿ, ಬಹುಜನರಿಂದ ತುಂಬಿದ್ದ ಒಂದು ಮನೆಯಲ್ಲಿ ಯೇಸು ಬೋಧಿಸುತ್ತಿರಲು, ಒಬ್ಬ ಪಾರ್ಶ್ವವಾಯು ರೋಗಿಯನ್ನು ಆತನ ಸ್ನೇಹಿತರು ಛಾವಣಿಯ ಮೂಲಕ ಇಳಿಸಿದಾಗ, ಯೇಸು ಅತ್ಯದ್ಭುತವಾಗಿ ಅವನನ್ನು ಸ್ವಸ್ಥಪಡಿಸುತ್ತಾನೆ. ಮತ್ತಾ 8:14–16ರಲ್ಲಿ, ಯೇಸು ಜನರನ್ನು ಗುಣಪಡಿಸಿದ ನಂತರ, ಸತ್ಯವೇದವು ಮುಂದುವರೆದು ಹೀಗೆ ಹೇಳುತ್ತದೆ, *"ತರುವಾಯ ಯೇಸು ಪೇತ್ರನ ಮನೆಗೆ ಬಂದು ಅವನ ಅತ್ತೆ ಜ್ವರದಲ್ಲಿ ಬಿದ್ದಿರುವದನ್ನು ಕಂಡು ಆಕೆಯ ಕೈಯನ್ನು ಮುಟ್ಟಿದನು. ಮುಟ್ಟಿದಾಗಲೇ ಜ್ವರವು ಆಕೆಯನ್ನು ಬಿಟ್ಟು ಹೋಗಿತು; ಆಕೆ ಎದ್ದು ಆತನಿಗೆ ಉಪಚಾರ ಮಾಡಿದಳು. ಸಂಜೆಯಾಗಲು ದೆವ್ವ ಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು."* ಈ ಘಟನೆಗೆ ಕಾರಣವನ್ನು ನೀಡುತ್ತಾ 17ನೇ ವಚನವು ಹೀಗೆ ಹೇಳುತ್ತದೆ, *"ಇದರಿಂದ ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು ಎಂದು ಯೆಶಾಯನೆಂಬ ಪ್ರವಾದಿಯಿಂದ ಹೇಳಿರುವ ಮಾತು ನೆರವೇರಿತು."* ಈ ಸಂದರ್ಭದಲ್ಲಿ ಯೇಸು ಅನೇಕ ಜನರನ್ನು ಗುಣಪಡಿಸುತ್ತಿದ್ದನು ಮತ್ತು ಇಲ್ಲಿ ನಿರ್ದಿಷ್ಟವಾಗಿ ಯೆಶಾಯ 53:3–5ನ್ನು ಪುನಃ ಉಲ್ಲೇಖಿಸುತ್ತದೆ: *"ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಷ್ಟಕ್ಕೊಳಗಾದವನು, ವ್ಯಾಧಿಪೀಡಿತನು, ಜನರು ಮುಖವನ್ನು ಓರೆಮಾಡಿಕೊಳ್ಳುವ ಧಿಕ್ಕಾರಕ್ಕೆ ಒಳಗಾದವನೂ ಆಗಿದ್ದನು. ನಾವು ಅವನನ್ನು ಲಕ್ಷ್ಯಕ್ಕೆ ತರಲಿಲ್ಲ. ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ, ಹೌದು; ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು. ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು."*

ಇವು ದೇವರ ವಾಕ್ಯದ ಪ್ರಬಲವಾದ ವಚನಗಳಾಗಿವೆ. ಕೆಲವರು ಈ ವಾಕ್ಯಗಳನ್ನು ತೆಗೆದುಕೊಂಡು, "ಸ್ವಲ್ಪ ತಾಳಿ; ಇದು ಒಂದು ಆತ್ಮೀಕ ಅರ್ಥದಲ್ಲಿ ಮಾತನಾಡುತ್ತಿದೆ" ಎನ್ನುತ್ತಾರೆ.

ನಾನು ಬೆಳೆದಂತಹ ಸಭೆಯು ಶಾರೀರಿಕವಾದ ಸ್ವಸ್ಥತೆಯನ್ನು ನಂಬುತ್ತಿರಲಿಲ್ಲ. ಅವರು ಇಂತಹ ವಾಕ್ಯಭಾಗವನ್ನು ತೆಗೆದುಕೊಂಡು, ಆತ್ಮೀಕವಾಗಿ ಅರ್ಥ ನೀಡುತ್ತಿದ್ದರು – ನಾವು ಭಾವನಾತ್ಮಕವಾಗಿ ಬಾಧಿಸಲ್ಪಟ್ಟಿದ್ದೆವು, ಮತ್ತು ನಮ್ಮ ಜೀವಿತಗಳನ್ನು ಕರ್ತನಿಗೆ ಸಮರ್ಪಿಸಿದಾಗ, ಆತನು ನಮ್ಮನ್ನು ಗುಣಪಡಿಸಿದನು. ಆದರೆ ನಾವು ಈ ವಿಷಯವನ್ನು ಮೇಲೆ ಹೇಳಿದ ವಾಕ್ಯಭಾಗದೊಂದಿಗೆ ಸೇರಿಸಿ ನೋಡಿದಾಗ, ಹೀಗೆ ನಂಬುವವರ ವಾದ ಬಿದ್ದುಹೋಗುತ್ತದೆ. ಯೇಸು ನಿಮ್ಮನ್ನು ಭಾವನಾತ್ಮಕವಾಗಿಯೂ ಇನ್ನಿತರ ರೀತಿಯಲ್ಲಿಯೂ ಗುಣಪಡಿಸುವನು ಎಂಬುದು ಸತ್ಯವಾಗಿರುವುದಾದರೂ ಈ ವಾಕ್ಯಭಾಗಗಳು ದೇಹಕ್ಕಾಗಿ ಇರುವ ಶಾರೀರಿಕವಾದ ಸ್ವಸ್ಥತೆಯ ಕುರಿತಾಗಿಯೆ ಮಾತನಾಡುತ್ತಿವೆ ಎನ್ನುವುದು ನಿಜ. ಇದನ್ನು ನೀವು ಕಾಣಬಹುದು, ಏಕೆಂದರೆ ಮತ್ತಾಯ 8:17ರಲ್ಲಿ, ಈ ಎಲ್ಲಾ ಸ್ವಸ್ಥತೆಗಳು ಈಗ ತಾನೇ ನಾವು ನೋಡಿದ *"ಆತನ ಬಾಸುಂಡೆಗಳಿಂದ ನಮಗೆ ಗುಣವಾಯಿತು"* ಎಂದು ಪ್ರವಾದಿಸಿದ ಯೆಶಾಯನ ಪ್ರವಾದನೆಯ ನೆರವೇರುವಿಕೆಯಾಗಿದೆ ಎಂದು ಹೇಳುತ್ತದೆ. ಇದು ಶಾರೀರಿಕವಾದ ಅಸ್ವಸ್ಥತೆ, ಗಾಯಗಳು ಮತ್ತು ನೋವುಗಳ ಬಗ್ಗೆ ಮಾತನಾಡುತ್ತಿದೆ. 'ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು' ಎಂದು ಹೇಳುವ ವಾಕ್ಯವನ್ನು ನೆರವೇರಿಸುವುದಕ್ಕಾಗಿ ಯೇಸು ಜನರನ್ನು ಶಾರೀರಿಕವಾಗಿ ಗುಣಪಡಿಸಿದನು.

ಸತ್ಯವೇದವು 1 ಪೇತ್ರ 2:24ರಲ್ಲಿ ಹೀಗೆ ಮುಂದುವರೆಸುತ್ತದೆ, *"ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು."* ಇದು ಭೂತಕಾಲದಲ್ಲಿ ಹೇಳಲ್ಪಟ್ಟಿದೆ. ಯೇಸು ಬಂದನು ಹಾಗೂ ಆತನು ಬಂದ ಕಾರಣದ ಒಂದು ಭಾಗವು ನಮ್ಮ ದೇಹಗಳನ್ನು ಸ್ವಸ್ಥಪಡಿಸುವುದಕ್ಕಾಗಿ. ಇಲ್ಲಿ, ಆತನು ಪಾಪಗಳನ್ನು ಕ್ಷಮಿಸುವುದಕ್ಕಾಗಿ ಬಂದನು ಎಂಬ ಸತ್ಯಾಂಶವನ್ನು ನಾನು ಉಪೇಕ್ಷಿಸುತ್ತಿಲ್ಲ. ಅದು ಪ್ರಾಮುಖ್ಯವಾದದ್ದು, ಮತ್ತು ಪಾಪಗಳ ಕ್ಷಮಾಪಣೆಯು ಒಂದು ಬಾಗಿಲಿನಂತೆ ಇದೆ, ಅಂದರೆ ಇತರ ಎಲ್ಲವುಗಳಿಗೂ ಅದು ಪ್ರವೇಶದ್ವಾರವಾಗಿದೆ, ಆದರೆ ಆತನು ನಮ್ಮ ಪಾಪಗಳನ್ನು ಕ್ಷಮಿಸಲು ಮಾತ್ರವೇ ಬರಲಿಲ್ಲ. ಆತನು ನಮ್ಮ ದೇಹಗಳನ್ನು ಸ್ವಸ್ಥಪಡಿಸುವುದಕ್ಕಾಗಿಯೂ ಬಂದನು. ಹೊಸ ಒಡಂಬಡಿಕೆಯಲ್ಲಿರುವ "ರಕ್ಷಣೆ" ಎಂಬ ಪದವನ್ನು ಗ್ರೀಕ್ ಭಾಷೆಯಲ್ಲಿ 'ಸೋಝೊ' ಎಂದು ಹೇಳಲಾಗಿದೆ, ಈ ಪದವು ಬಹಳಷ್ಟನ್ನು ಒಳಗೊಂಡಿದ್ದು ಅನೇಕ ಸಂಗತಿಗಳಿಗೆ ಅಳವಡಿಸಿಕೊಳ್ಳಬಹುದಾಗಿದೆ. ಆದರೆ ಇದನ್ನು ಆಳವಾಗಿ ನೋಡಿದಾಗ, ಇದನ್ನು "ಸ್ವಸ್ಥವಾದವರು" ಎಂದು ಸಹ ಭಾಷಾಂತರಿಸಲಾಗಿದೆ. ಯಾಕೋಬ 5:14 ಹೇಳುತ್ತದೆ: *"ನಿಮ್ಮಲ್ಲಿ ಅಸ್ವಸ್ಥನಾಗಿರುವವನು ಇದ್ದಾನೋ? ಅವನು ಸಭೆಯ ಹಿರಿಯರನ್ನು ಕರೇಕಳುಹಿಸಲಿ; ಅವರು ಕರ್ತನ ಹೆಸರಿನಿಂದ ಅವನಿಗೆ ಎಣ್ಣೆಹಚ್ಚಿ ಅವನಿಗೋಸ್ಕರ ದೇವರನ್ನು ಪ್ರಾರ್ಥಿಸಲಿ. ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವದು."* ಇಲ್ಲಿರುವ "ರಕ್ಷಿಸುವುದು" ಎಂಬ ಪದವು ಗ್ರೀಕ್ ಪದವಾದ ಸೋಝೊ ಎಂಬ ಪದದ ಅರ್ಥವಾಗಿದೆ, ಮತ್ತು ಇದು ರೋಗಿಯು ತನ್ನ ದೇಹದಲ್ಲಿ ಶಾರೀರಿಕವಾಗಿ ಸ್ವಸ್ಥತೆಯನ್ನು ಹೊಂದುವುದರ ಕುರಿತಾಗಿ ಮಾತನಾಡುತ್ತಿದೆ. ಹೊಸ ಒಡಂಬಡಿಕೆಯಲ್ಲಿ ನೂರಾರು ಬಾರಿ

ಪಾಪಗಳ ಕ್ಷಮಾಪಣೆ ಎನ್ನುವುದಕ್ಕಾಗಿ ಭಾಷಾಂತರಿಸಲ್ಪಟ್ಟ ಇದೇ ಪದವನ್ನು ಸ್ವಸ್ಥತೆ ಎಂದೂ ಭಾಷಾಂತರಿಸಲಾಗಿದೆ.

ಮತ್ತಾಯ 10ರಲ್ಲಿ ಯೇಸು ತನ್ನ ಶಿಷ್ಯರನ್ನು ಕಳುಹಿಸಿದಾಗ, ಆತನು ಅವರಿಗೆ ರೋಗಿಗಳನ್ನು ಸ್ವಸ್ಥಪಡಿಸಿರಿ, ಕುಷ್ಠರೋಗಿಗಳನ್ನು ಶುದ್ಧಮಾಡಿರಿ, ಸತ್ತವರನ್ನು ಎಬ್ಬಿಸಿರಿ, ದೆವ್ವಹಿಡಿದವರನ್ನು ಬಿಡಿಸಿರಿ, ಮತ್ತು ಸುವಾರ್ತೆಯನ್ನು ಸಾರಿರಿ ಎಂದು ಅಪ್ಪಣೆಕೊಟ್ಟನು. ಸುವಾರ್ತೆ ಸಾರಿರಿ ಎಂದು ಹೇಳಿದ ಹಾಗೆಯೇ ಆತನು ರೋಗಿಗಳನ್ನು ಗುಣಪಡಿಸಿರಿ, ಕುಷ್ಠದವರನ್ನು ಶುದ್ಧಮಾಡಿರಿ, ದೆವ್ವಗಳನ್ನು ಓಡಿಸಿರಿ ಎಂದೂ ಹೇಳಿದನು. ನಿಮ್ಮ ಜೀವಿತದಲ್ಲಿ ಪಾಪಗಳ ಕ್ಷಮಾಪಣೆಯಷ್ಟೇ ಮುಖ್ಯವಾಗಿ ಸ್ವಸ್ಥತೆಯು ಇರಬೇಕು ಎನ್ನುವುದು ಯೇಸು ಬಂದುದರ ಉದ್ದೇಶವಾಗಿತ್ತು.

ನೀವು ಪಾಪಮಾಡಬೇಕು ಮತ್ತು ಆಗ ತಾನು ನಿಮಗೆ ಪಾಠವನ್ನು ಕಲಿಸಲು ಸಾಧ್ಯವಾಗುತ್ತದೆ ಎಂದು ಕರ್ತನು ಬಯಸುತ್ತಾನೆ ಎನ್ನುವ ಮತನ್ನು ನೀವು ಹೇಗೆ ನಂಬಲಸಾಧ್ಯವೋ ಅದೇ ಮಾತು ನೀವು ರೋಗದಲ್ಲಿರಬೇಕೆಂದು ಆತನು ಎಂದೂ ಬಯಸುವುದಿಲ್ಲ ಎನ್ನುವುದಕ್ಕೂ ಒಪ್ಪುತ್ತದೆ. ಹೌದು, ದೇವರು ನಿಮ್ಮ ಜೀವಿತದಲ್ಲಿ ರೋಗವನ್ನು ತರುವುದಿಲ್ಲ. ಕೆಲವೊಮ್ಮೆ ಜನರು, “ಈ ರೋಗವು ನಿಜವಾಗಿಯೂ ದೇವರಿಂದ ಒಂದು ಆಶೀರ್ವಾದವಾಗಿದೆ, ಏಕೆಂದರೆ ಇದು ನನ್ನನ್ನು ಆತನ ಕಡೆಗೆ ತಿರುಗುವಂತೆ ಮಾಡಿತು” ಎಂದು ಹೇಳುತ್ತಾರೆ. ಸಮಸ್ಯೆಗಳ ಪರಿಸ್ಥಿತಿಯಿಂದಾಗಿ ಜನರು ದೇವರ ಕಡೆಗೆ ತಿರುಗಿಕೊಳ್ಳುತ್ತಾರೆ ಎಂಬುದು ನಿಜವೇ, ಆದರೆ ನಿಮಗೆ ಪಾಠ ಕಲಿಸುವುದಕ್ಕಾಗಿ ದೇವರು ರೋಗವನ್ನು ಕಳುಹಿಸುವುದಿಲ್ಲ. ಪಾಪವನ್ನು ಮಾಡುವಂತೆ ದೇವರು ಹೇಗೆ ಬಯಸುವುದಿಲ್ಲವೋ ಅದರಂತೆಯೇ ರೋಗದಲ್ಲಿರಬೇಕೆಂದೂ ಸಹ ಆತನು ಬಯಸುವುದಿಲ್ಲ. ನೀವು ಪಾಪದಲ್ಲಿ ಜೀವಿಸುವುದರಿಂದ ಏನಾದರೂ ಕಲಿಯುವುದಕ್ಕೆ ಸಾಧ್ಯವೇ? ನೀವು ವ್ಯಭಿಚಾರದ ಅಥವಾ ಸಲಿಂಗಕಾಮದಲ್ಲಿ ಜೀವಿಸುತ್ತಾ, ಯಾವುದೋ ರೋಗಕ್ಕೆ ತುತ್ತಾದ ಮೇಲೆ, ಆ ಜೀವನ ಶೈಲಿಯು ತಪ್ಪು ಎಂದು ನೀವು ಕಲಿಯಲು ಸಾಧ್ಯವೇ? ಸಾಧ್ಯವಿರಬಹುದು. ಆದರೆ ಅಂತಹ ಜೀವನಶೈಲಿಯನ್ನು ನಡೆಸುವುದಕ್ಕೆ ದೇವರು ಕಾರಣವಾಗಿರುವುದಿಲ್ಲ. ಪಾಪದಿಂದ ನೀವು ಪಾಠ ಕಲಿತುಕೊಳ್ಳಬಹುದೆಂದು ಆತನು ನಿಮ್ಮ ಜೀವಿತದಲ್ಲಿ ಪಾಪವನ್ನು ತರುವುದಿಲ್ಲ. ನೀವು ನಿಮ್ಮ ತಲೆಯನ್ನು ಗೋಡೆಗೆ ಗುದ್ದಿಕೊಂಡ ನಂತರ ಈ ರೀತಿ ಮಾಡಬಾರದಾಗಿತ್ತು ಎಂದು ತಿಳಿದುಕೊಳ್ಳ ಬೇಕಾಗಿಲ್ಲ, ನಿಮ್ಮ ತಲೆಯನ್ನು ಗೋಡೆಗೆ ಗುದ್ದಿಕೊಳ್ಳದೆಯೇ ಇದನ್ನು ಕಲಿತುಕೊಳ್ಳಲು ಸಾಧ್ಯವಿದೆಯಲ್ಲ. ನೀವು ಎಲ್ಲವನ್ನು ಬಹಳ ಕಷ್ಟಪಟ್ಟು ಕಲಿತುಕೊಳ್ಳಬೇಕೆಂದೇನೂ ಇಲ್ಲ. ನಿಮಗೆ ದೀನತೆಯ ಪಾಠವನ್ನು ಕಲಿಸಲು ದೇವರು ನಿಮ್ಮ ಜೀವಿತದಲ್ಲಿ ರೋಗವನ್ನು ತರುವುದಿಲ್ಲ. ನಿಮ್ಮ ಪಾಪಗಳನ್ನು ಕ್ಷಮಿಸಲು ಹಾಗೂ ನಿಮ್ಮ ರೋಗಗಳನ್ನು ಗುಣಪಡಿಸಲು ಯೇಸು ಸತ್ತನು. ನಿಮ್ಮ ಪಾಪಗಳನ್ನು ಆತನು ತನ್ನ ದೇಹದಲ್ಲಿ ಹೊತ್ತುಕೊಂಡನು ಮತ್ತು ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು.

ದೇವರ ಅಸಾಧಾರಣವಾದ ದೈವೀಕ ಸ್ವಸ್ಥತೆಯು ನಮ್ಮೆಲ್ಲರಿಗೂ ಲಭ್ಯವಿದೆ ಮತ್ತು ಯೇಸುವು ತಾನು ಪ್ರಾಯಶ್ಚಿತ್ತ ನೀಡಿದ್ದರ ಒಂದು ಭಾಗವಾಗಿದೆ. ಪ್ರಸ್ತುತ ನೀವು ಸ್ವಸ್ಥತೆಯನ್ನು ಹೊಂದಿಲ್ಲವಾದರೆ, ದೇವರು ನಿಮ್ಮ ಬಗ್ಗೆ ಕೋಪಗೊಂಡಿದ್ದಾನೆ ಎಂದು ಅರ್ಥವಲ್ಲ. ಮತ್ತು ನೀವು ದೇವರನ್ನು ಪ್ರೀತಿಸಲು ಸ್ವಸ್ಥತೆ ಹೊಂದಿರಲೇ ಬೇಕು ಎನ್ನುವುದು ಅಗತ್ಯವಲ್ಲ. ನಿಮಗೆ ಸ್ವಸ್ಥತೆಯಲ್ಲಿ ನಂಬಿಕೆ ಇಲ್ಲದಿದ್ದರೂ ಸಹ ದೇವರನ್ನು ಪೂರ್ಣ ಹೃದಯದಿಂದ ನಂಬಬಹುದಾಗಿದೆ ಮತ್ತು ಪರಲೋಕಕ್ಕೆ ಹೋಗಬಹುದಾಗಿದೆ. ಆದರೆ ಒಂದು ಸತ್ಯಾಂಶವೆಂದರೆ, ಸ್ವಸ್ಥತೆಯಲ್ಲಿ ಜೀವಿಸುವುದು ನಿಮಗೆ ತಿಳಿಯದಿರುವ ಕಾರಣ ಬಹುಶಃ ನೀವು ಪರಲೋಕಕ್ಕೆ ಇನ್ನೂ ಬೇಗನೇ ಹೋಗಬಹುದು. ಆದರೆ ನಿಮಗೊಂದು ಸಂಗತಿ ಗೊತ್ತಿರಲಿ – ನಿಮಗೆ ಸ್ವಸ್ಥತೆಯು ಲಭ್ಯವಿದೆ. ಇದನ್ನು ಉಂಟು ಮಾಡಲೆಂದೇ ಯೇಸು ಸತ್ತನು. ನೀವು ಆರೋಗ್ಯವಾಗಿರಬೇಕೆಂದು ದೇವರು ಬಯಸುತ್ತಾನೆ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಮತ್ತಾಯ 8:16–17 ಓದಿರಿ. ಎಷ್ಟು ಜನರನ್ನು ಯೇಸು ಗುಣಪಡಿಸಿದನು?

   **ಮತ್ತಾಯ 8:16–17** – *ಸಂಜೆಯಾಗಲು ದೆವ್ವ ಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು. [17] ಇದರಿಂದ ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡನು ನಮ್ಮ ರೋಗಗಳನ್ನು ಹೊತ್ತುಕೊಂಡನು ಎಂದು ಯೆಶಾಯನೆಂಬ ಪ್ರವಾದಿಯಿಂದ ಹೇಳಿರುವ ಮಾತು ನೆರವೇರಿತು.*

2. ಯೆಶಾಯ 53:3–5 ಓದಿರಿ. ಈ ವಚನಗಳು ಯಾವ ವಿಧವಾದ ಸ್ವಸ್ಥತೆಯ ಕುರಿತಾಗಿ ಮಾತನಾಡುತ್ತಿವೆ?

   **ಯೆಶಾಯ 53:3–5** – *ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಷ್ಟಕ್ಕೊಳಗಾದವನು, ವ್ಯಾಧಿಪೀಡಿತನು, ಜನರು ಮುಖವನ್ನು ಓರೆಮಾಡಿಕೊಳ್ಳುವ ಧಿಕ್ಕಾರಕ್ಕೆ ಒಳಗಾದವನೂ ಆಗಿದ್ದನು. ನಾವು ಅವನನ್ನು ಲಕ್ಷ್ಯಕ್ಕೆ ತರಲಿಲ್ಲ. [4] ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ, ಹೌದು; ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು. [5] ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು.*

3. ಮತ್ತಾಯ 8:17ನ್ನು ಓದಿರಿ. ನಮ್ಮ ರೋಗಗಳಿಗೆ ಮತ್ತು ಖಾಯಿಲೆಗಳಿಗೆ ಏನು ಸಂಭವಿಸಿತು?

4. 1 ಪೇತ್ರ 2:24ನ್ನು ಓದಿರಿ. ಯೇಸು ನಮಗಾಗಿ ಮಾಡಿದ ಯಾವ ಎರಡು ಸಂಗತಿಗಳ ಕುರಿತಾಗಿ ಈ ವಚನವು ತಿಳಿಸುತ್ತದೆ?

   **1 ಪೇತ್ರ 2:24** – *ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು.*

5. ಯಾಕೋಬ 5:14–15ನ್ನು ಓದಿರಿ. 15ನೇ ವಚನದಲ್ಲಿರುವ"ರಕ್ಷಿಸುವುದು" ಎಂಬ ಪದವು ಗ್ರೀಕ್ ಪದದ ಸೊಝೊ ಎಂಬುದಾಗಿದೆ. ಇದನ್ನು "ಬಿಡುಗಡೆ ಮಾಡುವುದಕ್ಕಾಗಿ, ಸಂರಕ್ಷಿಸುವುದಕ್ಕಾಗಿ, ಗುಣಪಡಿಸುವುದಕ್ಕಾಗಿ, ಕಾಪಾಡುವುದಕ್ಕಾಗಿ, ಸ್ವಸ್ಥಪಡಿಸುವುದಕ್ಕಾಗಿ" ಎಂದು ಭಾಷಾಂತರಿಸಲಾಗಿದೆ. ಇದೇ ಅರ್ಥದಲ್ಲಿಯೇ "ರಕ್ಷಿಸುವುದು" ಎಂಬ ಪದವನ್ನು

ಸತ್ಯವೇದದಲ್ಲಿ ಹೇಳಲಾಗಿದೆ. ಈ ವಾಕ್ಯಗಳ ಪ್ರಕಾರ ಹಾಗೂ ರಕ್ಷಣೆ ಎಂಬ ಪದದ ಗ್ರೀಕ್ ಪದದ ವಿವರಣೆಯ ಪ್ರಕಾರ, ರಕ್ಷಣೆಯಲ್ಲಿ ಏನು ಒಳಗೊಂಡಿದೆ?

**ಯಾಕೋಬ 5:14–15** – *ನಿಮ್ಮಲ್ಲಿ ಅಸ್ವಸ್ಥನಾಗಿರುವವನು ಇದ್ದಾನೋ? ಅವನು ಸಭೆಯ ಹಿರಿಯರನ್ನು ಕರೇಕಳುಹಿಸಲಿ; ಅವರು ಕರ್ತನ ಹೆಸರಿನಿಂದ ಅವನಿಗೆ ಎಣ್ಣೆಹಚ್ಚಿ ಅವನಿಗೋಸ್ಕರ ದೇವರನ್ನು ಪ್ರಾರ್ಥಿಸಲಿ. [15] ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವದು; ಕರ್ತನು ಅವನನ್ನು ಎಬ್ಬಿಸುವನು; ಮತ್ತು ಪಾಪ ಮಾಡಿದವನಾಗಿದ್ದರೆ ಅದು ಪರಿಹಾರವಾಗುವದು.*

6. ಮತ್ತಾಯ 10:7ನ್ನು ಓದಿರಿ. ಯೇಸು ತನ್ನ ಶಿಷ್ಯರನ್ನು ಕಳುಹಿಸಿದಾಗ, ಅವರು ಏನು ಹೇಳಬೇಕು ಎಂಬುದಾಗಿ ಯೇಸು ಅವರಿಗೆ ತಿಳಿಸಿದನು?

**ಮತ್ತಾಯ 10:7–8** – *ಪರಲೋಕ ರಾಜ್ಯವು ಸಮೀಪವಾಯಿತೆಂದು ಸಾರಿ ಹೇಳುತ್ತಾ ಹೋಗಿರಿ. ರೋಗಿಗಳನ್ನು ಸ್ವಸ್ಥಮಾಡಿರಿ, ಸತ್ತವರನ್ನು ಬದುಕಿಸಿರಿ, ಕುಷ್ಠಹತ್ತಿದವರನ್ನು ಶುದ್ಧಮಾಡಿರಿ, ದೆವ್ವಗಳನ್ನು ಬಿಡಿಸಿರಿ; ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ.*

7. ಮತ್ತಾಯ 10:8ನ್ನು ಓದಿರಿ. ಅವರು ಏನು ಮಾಡಬೇಕೆಂಬುದಾಗಿ ಯೇಸು ಹೇಳಿದನು?

8. ಮಾರ್ಕ 16:15ನ್ನು ಓದಿರಿ. ತನ್ನ ಶಿಷ್ಯರು ಏನು ಮಾಡಬೇಕೆಂಬುದಾಗಿ ಯೇಸು ಅವರಿಗೆ ತಿಳಿಸಿದನು?

**ಮಾರ್ಕ 16:15–18** – *ಆ ಮೇಲೆ ಅವರಿಗೆ – ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು. [17] ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; [18] ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು.*

9. ಮಾರ್ಕ 16:16ನ್ನು ಓದಿರಿ. ಸುವಾರ್ತೆಗೆ ಕಿವಿಗೊಡುವವರು ಏನು ಮಾಡುತ್ತಾರೆ?

10. ಮಾರ್ಕ 16:17ನ್ನು ಓದಿರಿ. ವಿಶ್ವಾಸಿಗೆ ಯಾವ ಸೂಚಕಕಾರ್ಯಗಳು ಸಂಭವಿಸುತ್ತವೆ?

11. ಮಾರ್ಕ 16:18ನ್ನು ಓದಿರಿ. ಇನ್ನಿತರ ಯಾವ ಸೂಚಕಕಾರ್ಯಗಳನ್ನು ವಿಶ್ವಾಸಿಯು ಮಾಡಬಹುದಾಗಿದೆ?

# ಉತ್ತರಗಳು

1. ಮತ್ತಾಯ 8:16–17ನ್ನು ಓದಿರಿ. ಎಷ್ಟು ಜನರನ್ನು ಯೇಸು ಗುಣಪಡಿಸಿದನು?

   **ಆತನ ಬಳಿಗೆ ಬಂದವರೆಲ್ಲರನು.**

2. ಯೆಶಾಯ 53:3–5ನ್ನು ಓದಿರಿ. ಈ ವಚನಗಳು ಯಾವ ವಿಧವಾದ ಸ್ವಸ್ಥತೆಯ ಕುರಿತಾಗಿ ಮಾತನಾಡುತ್ತಿವೆ?

   **ಎಲ್ಲಾ ವಿಧವಾದ ಸ್ವಸ್ಥತೆ (ಶಾರೀರಿಕವಾದ ಸ್ವಸ್ಥತೆಯೂ ಒಳಗೊಂಡಿದೆ)**

3. ಮತ್ತಾಯ 8:17ನ್ನು ಓದಿರಿ. ನಮ್ಮ ರೋಗಗಳಿಗೆ ಮತ್ತು ಖಾಯಿಲೆಗಳಿಗೆ ಏನು ಸಂಭವಿಸಿತು?

   **ಯೇಸು ಅವೆಲ್ಲವುಗಳನ್ನು ಹೊತ್ತುಕೊಂಡನು**

4. 1 ಪೇತ್ರ 2:24ನ್ನು ಓದಿರಿ. ಯೇಸು ನಮಗಾಗಿ ಮಾಡಿದ ಯಾವ ಎರಡು ಸಂಗತಿಗಳ ಕುರಿತಾಗಿ ಈ ವಚನವು ತಿಳಿಸುತ್ತದೆ?

   **ಆತನು ನಮ್ಮ ಪಾಪಗಳನ್ನು ತನ್ನ ದೇಹದಲ್ಲಿ ಹೊತ್ತುಕೊಂಡನು ಮತ್ತು ನಮ್ಮ ಸ್ವಸ್ಥತೆಗಾಗಿ ಬಾಸುಂಡೆಗಳನ್ನು ಹೊಂದಿದನು.**

5. ಯಾಕೋಬ 5:14–15ನ್ನು ಓದಿರಿ. 15ನೇ ವಚನದಲ್ಲಿರು "ರಕ್ಷಿಸುವುದು" ಎಂಬ ಪದವು ಗ್ರೀಕ್ ಪದದ ಸೊಝೊ ಎಂಬುದಾಗಿದೆ. ಇದನ್ನು "ಬಿಡುಗಡೆ ಮಾಡುವುದಕ್ಕಾಗಿ, ಸಂರಕ್ಷಿಸುವುದಕ್ಕಾಗಿ, ಗುಣಪಡಿಸುವುದಕ್ಕಾಗಿ, ಕಾಪಾಡುವುದಕ್ಕಾಗಿ, ಸ್ವಸ್ಥಪಡಿಸುವುದಕ್ಕಾಗಿ" ಎಂದು ಭಾಷಾಂತರಿಸಲಾಗಿದೆ. ಇದೇ ಅರ್ಥದಲ್ಲಿಯೇ "ರಕ್ಷಿಸುವುದು" ಎಂಬ ಪದವನ್ನು ಸತ್ಯವೇದದಲ್ಲಿ ಹೇಳಲಾಗಿದೆ. ಈ ವಾಕ್ಯಗಳ ಪ್ರಕಾರ ಹಾಗೂ ರಕ್ಷಣೆ ಎಂಬ ಪದದ ಗ್ರೀಕ್ ಪದದ ವಿವರಣೆಯ ಪ್ರಕಾರ, ರಕ್ಷಣೆಯಲ್ಲಿ ಏನು ಒಳಗೊಂಡಿದೆ?

   **ಸ್ವಸ್ಥತೆ**

6. ಮತ್ತಾಯ 10:7ನ್ನು ಓದಿರಿ. ಯೇಸು ತನ್ನ ಶಿಷ್ಯರನ್ನು ಕಳುಹಿಸಿದಾಗ, ಅವರು ಏನು ಹೇಳಬೇಕು ಎಂಬುದಾಗಿ ಯೇಸು ಅವರಿಗೆ ತಿಳಿಸಿದನು?

   **ಪರಲೋಕ ರಾಜ್ಯವು ಸಮೀಪಿಸಿತು ಎಂಬುದಾಗಿ**

7. ಮತ್ತಾಯ 10:8ನ್ನು ಓದಿರಿ. ಅವರು ಏನು ಮಾಡಬೇಕೆಂಬುದಾಗಿ ಯೇಸು ಹೇಳಿದನು?

**ರೋಗಿಗಳನ್ನು ಗುಣಪಡಿಸಿರಿ, ಸತ್ತವರನ್ನು ಎಬ್ಬಿಸಿ, ಮತ್ತು ದುರಾತ್ಮಗಳನ್ನು ಓಡಿಸಿ**

8. ಮಾರ್ಕ 16:15ನ್ನು ಓದಿರಿ. ತನ್ನ ಶಿಷ್ಯರು ಏನು ಮಾಡಬೇಕೆಂಬುದಾಗಿ ಯೇಸು ಅವರಿಗೆ ತಿಳಿಸಿದನು?

**ಲೋಕದ ಎಲ್ಲಾ ಕಡೆಗೆ ಹೋಗಿ, ಪ್ರತಿಯೊಬ್ಬರಿಗೂ ಸುವಾರ್ತೆ ಸಾರುಬೇಕೆಂದು ತಿಳಿಸಿದನು**

9. ಮಾರ್ಕ 16:16ನ್ನು ಓದಿರಿ. ಸುವಾರ್ತೆಗೆ ಕಿವಿಗೊಡುವವರು ಏನು ಮಾಡುತ್ತಾರೆ?

**ನಂಬಿ, ದೀಕ್ಷಾಸ್ನಾನ ಪಡೆಯುತ್ತಾರೆ**

10. ಮಾರ್ಕ 16:17ನ್ನು ಓದಿರಿ. ವಿಶ್ವಾಸಿಗೆ ಯಾವ ಸೂಚಕಕಾರ್ಯಗಳು ಸಂಭವಿಸುತ್ತವೆ?

**ಅವರು ದುರಾತ್ಮಗಳನ್ನು ಓಡಿಸುವರು ಮತ್ತು ಹೊಸ ಭಾಷೆಗಳಿಂದ ಮಾತನಾಡುವರು**

11. ಮಾರ್ಕ 16:18ನ್ನು ಓದಿರಿ. ಇನ್ನಿತರ ಯಾವ ಸೂಚಕಕಾರ್ಯಗಳನ್ನು ವಿಶ್ವಾಸಿಯು ಮಾಡಬಹುದಾಗಿದೆ?

**ರೋಗಿಯ ಮೇಲೆ ಕೈಯನ್ನಿಟ್ಟು, ಅವರು ಗುಣವಾಗುವುದನ್ನು ಕಾಣಬಹುದು**

# ಪಾಠ 8

# ಸ್ವಸ್ಥತೆಗಿರುವ ತಡೆಗಳು

*ಆಂಡ್ರೂ ವ್ಹಾಮಕ್*

ಹಿಂದಿನ ಪಾಠದಲ್ಲಿ, ಸ್ವಸ್ಥತೆ ಹೊಂದುವುದು ದೇವರ ಚಿತ್ತವಾಗಿದೆ ಮತ್ತು ಈ ಸ್ವಸ್ಥತೆಯು ಪ್ರಾಯಶ್ಚಿತ್ತದ ಒಂದು ಭಾಗವಾಗಿದೆ ಎಂಬ ಸತ್ಯಾಂಶದ ಕುರಿತು ಮಾತನಾಡಿದೆನು. ಇದರ ವಿಷಯದಲ್ಲಿ ಇನ್ನೂ ಸವಿಸ್ತಾರವಾಗಿ ಮಾತನಾಡಬಹುದು ಯಾಕೆಂದರೆ, ನೀವು ಇದನ್ನು ಒಪ್ಪಿಕೊಂಡು ದೇವರ ವಾಕ್ಯದಲ್ಲಿ ನೋಡಿದಾಗ್ಯೂ, "ಸ್ವಸ್ಥ ಪಡಿಸುವುದು ದೇವರ ಚಿತ್ತವೇ ಆಗಿದ್ದರೆ, ಎಲ್ಲರೂ ಏಕೆ ಸ್ವಸ್ಥತೆ ಹೊಂದುವುದಿಲ್ಲ?" ಎಂಬಂತಹ ಅನೇಕ ಪ್ರಶ್ನೆಗಳನ್ನು ಇದು ಹುಟ್ಟಿಹಾಕುತ್ತದೆ. ಇದಕ್ಕೆ ಅನೇಕ ಕಾರಣಗಳಿವೆ, ಮತ್ತು ಇಲ್ಲಿ ನನಗೆ ತಿಳಿದಿರುವ ಸಂಗತಿಗಳನ್ನು ಆಳಕ್ಕೆ ಇಳಿಯದೆ ಮೇಲ್ಪದರವನ್ನು ಮಾತ್ರ ನಾನು ತಿಳಿಸುತ್ತಿರುವೆನು. ಅನೇಕ ಸಂಗತಿಗಳು ಇದರ ಕುರಿತಾಗಿ ಇವೆ ಆದರೆ ಅವೆಲ್ಲವುಗಳನ್ನು ನಾನು ಇಲ್ಲಿ ತಿಳಿಸಲಾಗುವುದಿಲ್ಲ, ಆದರೆ ಸ್ವಸ್ಥಪಡಿಸುವುದು ದೇವರ ಚಿತ್ತವಾಗಿದ್ದರೆ, ಜನರು ಏಕೆ ಗುಣವಾಗುತ್ತಿಲ್ಲ ಎಂಬುದರ ಸ್ವಲ್ಪ ಅಂಶವನ್ನು ನಾನು ತಿಳಿಸಲು ಬಯಸುತ್ತೇನೆ. ಅನೇಕ ಕಾರಣಗಳಲ್ಲಿರುವ ಒಂದು ಕಾರಣವೆಂದರೆ – ಅಜ್ಞಾನ. ನಿಮಗೆ ಗೊತ್ತಿಲ್ಲದಿರುವ ವಿಷಯದಲ್ಲಿ ಅಥವಾ ಅರ್ಥವಾಗದಿರುವ ಸಂಗತಿಯಲ್ಲಿ ನೀವು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ, ಮತ್ತು ನನ್ನ ಜೀವನದಲ್ಲಿ ಇದು ನಿಶ್ಚಯವಾಗಿಯೂ ವಾಸ್ತವವಾಗಿದೆ.

ದೇವರ ಚಿತ್ತವು ತಾನೇತಾನಾಗಿ ನೆರವೇರುತ್ತದೆ – ಅಂದರೆ ಅದರ ವಿಷಯದಲ್ಲಿ ನನಗೆ ಯಾವುದೇ ಅಧಿಕಾರವಿಲ್ಲ, ಬಲವಿಲ್ಲ ಅಥವಾ ನಾನು ಏನೂ ಹೇಳಲಾಗುವುದಿಲ್ಲ ಎಂಬುದಾಗಿ ನನಗೆ ಕಲಿಸಲಾಗಿತ್ತು. ಈ ನನ್ನ ಅಜ್ಞಾನದ ಮೂಲಕ, ಅನೇಕ ಸಂಗತಿಗಳು ಸಂಭವಿಸಿದವು. ನಾನು ಹನ್ನೆರಡು ವರ್ಷ ವಯಸ್ಸಿನಲ್ಲಿದ್ದಾಗ ನನ್ನ ತಂದೆ ಸಾವನ್ನಪ್ಪಿದರು, ಅಲ್ಲದೆ ನನಗೆ ಇಪ್ಪತ್ತೊಂದು ವರ್ಷ ವಯಸ್ಸಾಗುವಷ್ಟರಲ್ಲಿ ನನ್ನ ಸಮ್ಮುಖದಲ್ಲಿಯೇ ಇಬ್ಬರು ಅಥವಾ ಮೂವರು ಸಾವನ್ನಪ್ಪಿದ್ದರು. ಇವರೆಲ್ಲರೂ ಗುಣಹೊಂದಲಿ ಎಂಬುದಾಗಿ ನಾನು ಪ್ರಾರ್ಥಿಸುತ್ತಿದ್ದೆ, ಆದರೆ ಸ್ವಸ್ಥತೆಯು ಕಂಡು ಬರಲಿಲ್ಲ, ಆದರೆ ಇದು ದೇವರ ಚಿತ್ತವಾಗಿರಲಿಲ್ಲ ಎನ್ನುವುದು ಕಾರಣವಾಗಿರದೆ, ನನ್ನಲ್ಲಿದ್ದ ಅಜ್ಞಾನವೇ ಕಾರಣವಾಗಿತ್ತು. ಸಮಸ್ಯೆಗಳಿಗೆ ಅಜ್ಞಾನವು ಕಾರಣವೇ ಹೊರತು ಅದೇ ನೆಪವಾಗಬಾರದು. ಇದು ಗುರುತ್ವಾಕರ್ಷಣೆಯ ನಿಯಮವಿದ್ದ ಹಾಗೆ: ಒಬ್ಬ ವ್ಯಕ್ತಿಯು, "ನಾನು ಹತ್ತು ಅಂತಸ್ತಿನ ಮಹಡಿಯ ಮೇಲಿನಿಂದ ಹಾರಿದರೆ, ನನಗೆ ಪ್ರಾಣಾಪಾಯವಾಗುತ್ತದೆ ಎಂಬುದಾಗಿ ನನಗೆ ತಿಳಿದಿರಲಿಲ್ಲ" ಎಂದು

ಹೇಳಬಹುದು. ಈ ಭೌತಿಕ ನಿಯಮವು ಹೇಗೆ ನೆರವೇರುತ್ತದೆ ಎನ್ನವುದನ್ನು ನೋಡಲು ನೀನು ಪ್ರಯತ್ನ ಮಾಡಬೇಕೆಂದೇನೂ ಇಲ್ಲ. ದೇವರ ಕೆಲವು ನಿಯಮಗಳ ಕುರಿತಾಗಿ ಜನರು ಅಜ್ಞಾನಿಗಳಾಗಿರುವರು. ಸ್ವಸ್ಥತೆಯ ವಿಧಾನವು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದು ಅವರಿಗೆ ತಿಳಿಯದಿರುವ ಕಾರಣದಿಂದ ಅಜ್ಞಾನವು ಅನೇಕ ಜನರನ್ನು ಕೊಲ್ಲುತ್ತಿದೆ.

ನಾವು ಸ್ವಸ್ಥರಾಗದ ಹಾಗೆ ತಡೆಯುವಂತಹ ಮತ್ತೊಂದು ಸಂಗತಿಯೆಂದರೆ, ಪಾಪ. ಹಾಗೆಂದು ಹೇಳುವಾಗ, ಜನರು ಬಹಳ ಕೋಪಗೊಳ್ಳುತ್ತಾರೆ, ಏಕೆಂದರೆ ನಮ್ಮಲ್ಲಿ ಯಾವುದೋ ಪಾಪ ಇರುವ ಕಾರಣದಿಂದಲೇ ಎಲ್ಲಾ ಖಾಯಿಲೆಗಳು ಬರುತ್ತಿವೆ ಎಂದು ಅವರು ತಪ್ಪಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಇದನ್ನು ನಾನು ಹೇಳುತ್ತಿಲ್ಲ. ಯೋಹಾನ 9ರಲ್ಲಿ, ಯೇಸು ದೇವಾಲಯದಿಂದ ಹೊರಗೆ ಬರುವಾಗ, ಆತನ ಶಿಷ್ಯನು ಅಲ್ಲಿ ಹುಟ್ಟು ಕುರುಡನಾಗಿದ್ದ ಒಬ್ಬ ವ್ಯಕ್ತಿಯ ಕುರಿತಾಗಿ ಮಾತನಾಡುವ ಘಟನೆಯನ್ನು ಹೇಳಲಾಗಿದೆ. 2ನೇ ವಚನದಲ್ಲಿ ಯೇಸುವಿನ ಶಿಷ್ಯನು, *"ಸ್ವಾಮೀ, ಇವನ್ನು ಹುಟ್ಟು ಕುಂಟನಾಗಿ ಹುಟ್ಟುವುದಕ್ಕೆ ಕಾರಣ, ಈ ಮನುಷ್ಯನ ಪಾಪ ಅಥವಾ ಅವನ ತಂದೆತಾಯಿಯ ಪಾಪ ಕಾರಣವಾಗಿದೆಯೋ?"* ಎಂದು ಕೇಳುತ್ತಾನೆ. ಮತ್ತೊಂದು ವಿಧದಲ್ಲಿ ಹೇಳುವುದಾದರೆ, ಇವನಿಗಿರುವ ಕುರುಡತನವು ಇವನ ಪಾಪದ ಕಾರಣವೋ ಅಥವ ಇವನ ತಂದೆತಾಯಿಯ ಪಾಪದ ಕಾರಣವೋ ಎಂಬುದನ್ನು ಕೇಳುತ್ತಾ, ಇಲ್ಲಿ ಅವರು ರೋಗವನ್ನು ನೇರವಾಗಿ ಪಾಪಕ್ಕೆ ಜೋಡಿಸುತ್ತಿರುವರು. ಅದು ಯಾರ ಪಾಪದ ಫಲಿತಾಂಶವೂ ಅಲ್ಲ ಎನ್ನವುದು ಯೇಸುವಿನ ಉತ್ತರವಾಗಿತ್ತು. ಅಂದರೆ ಆ ವ್ಯಕ್ತಿಯಾಗಲಿ ಅಥವಾ ಅವನ ತಂದೆತಾಯಿಯಾಗಲಿ ಎಂದೂ ಪಾಪ ಮಾಡಿರಲಿಲ್ಲ ಎಂದು ಇದರ ಅರ್ಥವಲ್ಲ ಆದರೆ ಅವನು ಕುರುಡನಾಗಲು ಅವರ ಪಾಪವು ನೇರವಾಗಿ ಕಾರಣವಲ್ಲ ಎಂದು ಅರ್ಥ ಬರುತ್ತದೆ. ಯಾವುದೇ ರೋಗ ಬರುವುದಕ್ಕೆ ಪಾಪವೇ ಕಾರಣ ಎನ್ನುವುದು ಸತ್ಯವಲ್ಲ, ಅದೇ ಸಮಯದಲ್ಲಿ ರೋಗ ಬರಲು ಇರುವ ಕಾರಣಗಳಲ್ಲಿ ಪಾಪವು ಕಾರಣವೇ ಅಲ್ಲ ಎಂದು ಹೇಳಿದರೆ, ಅದು ಸುಳ್ಳಾಗುತ್ತದೆ.

ಯೋಹಾನ 5ರಲ್ಲಿ, ಯೇಸು ಬೆತೆಸ್ಥ ಕೊಳದ ಬಳಿ ಇದ್ದಾಗ, ಅಲ್ಲಿದ್ದ ಒಬ್ಬ ವ್ಯಕ್ತಿಯನ್ನು ಅಸಾಧಾರಣವಾಗಿ ಗುಣಪಡಿಸಿದುದರ ಒಂದು ಸಂದರ್ಭವುಂಟು. ಆ ಸ್ಥಳದಲ್ಲಿ ಅನೇಕ ಜನರಿದ್ದರು, ಆದರೆ ಒಬ್ಬನು ಮಾತ್ರವೇ ಸ್ವಸ್ಥತೆಯನ್ನು ಹೊಂದಿದನು. ನಂತರ 12ನೇ ವಚನದಲ್ಲಿ ಯೆಹೂದ್ಯರು ಈ ವ್ಯಕ್ತಿಗೆ *"ಹೊತ್ತುಕೊಂಡು ನಡೆ ಎಂದು ನಿನಗೆ ಹೇಳಿದ ಮನುಷ್ಯನು ಯಾರು?"* ಎಂದು ಕೇಳಿದಾಗ ಅವನು ತನಗೆ ಗೊತ್ತಿಲ್ಲ ಎಂಬುದಾಗಿ ಈ ಅಧ್ಯಾಯವು ಹೇಳುತ್ತದೆ. 13–14ನೇ ವಚನಗಳಲ್ಲಿ ಹೀಗೆ ಮುಂದುವರೆಯುತ್ತದೆ, *"ಆದರೆ ಅವನಾರೆಂಬದು ಸ್ವಸ್ಥವಾದವನಿಗೆ ತಿಳಿದಿರಲಿಲ್ಲ; ಆ ಸ್ಥಳದಲ್ಲಿ ಜನರ ಗುಂಪು ಇದ್ದದರಿಂದ ಯೇಸು ಸರಕೊಂಡು ಹೋಗಿದ್ದನು. ಇದಾದ ಮೇಲೆ ಯೇಸು ಅವನನ್ನು ದೇವಾಲಯದಲ್ಲಿ ಕಂಡುಕೊಂಡು – ನಿನಗೆ ಸ್ವಸ್ಥವಾಯಿತಲ್ಲಾ; ಇನ್ನು ಮೇಲೆ ಪಾಪ ಮಾಡಬೇಡ; ನಿನಗೆ ಹೆಚ್ಚಿನ ಕೇಡು ಬಂದೀತು ಅಂದನು."* ಈ ಸ್ಥಳದಲ್ಲಿಯೇ ಯೇಸು ಅವನಿಗೆ, ಪುನಃ ಪಾಪ ಮಾಡಿದರೆ ಮೊದಲಿದ್ದ ಪಾರ್ಶವಾಯು ರೋಗಕ್ಕಿಂತಲೂ ಹೆಚ್ಚಿನ ಕೇಡು ಬಂದೀತು ಎಂದು ಎಚ್ಚರಿಸಿದನು. ಇಲ್ಲಿ ಆತನು ರೋಗವು ಫಲಿಸುವುದಕ್ಕೂ ಪಾಪಕ್ಕೂ ಸಂಬಂಧವಿದೆ ಎಂದು

ಹೇಳಿದನು. ಆದರೆ ಆತನು ಯೋಹಾನ 9ರಲ್ಲಿ, ಈ ಮನುಷ್ಯನು ಹುಟ್ಟು ಕುರುಡನಾಗಿರುವುದು ಯಾರದೇ ಪಾಪದ ನಿಮಿತ್ತವಲ್ಲ ಎಂದೂ ಹೇಳಿದನು.

ಕೆಲವು ಸಂಗತಿಗಳು ಸ್ವಾಭಾವಿಕವಾಗಿಯೇ ಸಂಭವಿಸುತ್ತವೆ, ಆದರೆ ಕೆಲವೊಮ್ಮೆ ಖಾಯಿಲೆ, ಅನಾರೋಗ್ಯ ಅಥವಾ ಸಮಸ್ಯೆಗಳು ಪಾಪದ ನೇರ ಫಲಿತಾಂಶಗಳಾಗಿರಬಹುದು. ಇಂತಹ ಸಂದರ್ಭಗಳಲ್ಲಿಯೂ ಸಹ, ಇವೆಲ್ಲವನ್ನು ದೇವರೇ ಮಾಡುತ್ತಿರುವನು ಎಂದು ಅರ್ಥವಲ್ಲ. ಉದಾಹರಣೆಗೆ, ಒಬ್ಬ ವ್ಯಕ್ತಿಯು ಪ್ರಕೃತಿಗೆ ವಿರುದ್ಧವಾಗಿರುವ ಸಲಿಂಗಕಾಮದಲ್ಲಿ ಜೀವಿಸುತ್ತಿದ್ದಾನೆ ಎಂದಿಟ್ಟುಕೊಳ್ಳೋಣ. ಮನುಷ್ಯನ ದೇಹವು ಈ ವಿಧವಾಗಿ ಜೀವಿಸುವುದಕ್ಕಾಗಿ ಉಂಟುಮಾಡಲ್ಪಟ್ಟಿಲ್ಲ. ಇಂತಹ ಜೀವನಶೈಲಿಯ ನಿಮಿತ್ತ ಲೈಂಗಿಕತೆಗೆ ಸಂಬಂಧಪಟ್ಟ ರೋಗಗಳು ಉದ್ಭವಿಸುತ್ತವೆ. ಈ ರೋಗಗಳಿಗೆ ದೇವರು ಕಾರಣಕರ್ತನಲ್ಲ – ಇದು ಪ್ರಕೃತಿಯ ನಿಯಮವಲ್ಲದ್ದರಿಂದ ಅದು ಉಲ್ಲಂಘನೆಗೊಂಡಾಗ ಪ್ರಕೃತಿಯು ತಿರುಗಿಬೀಳುತ್ತದೆ. ಉದಾಹರಣೆಗೆ, ನೀವು ಹೊರಗಡೆ ಒಳ್ಳೆಯ ಆಹಾರವನ್ನು ಸೇವಿಸದಿದ್ದರೆ, ನಿಮ್ಮ ದೇಹವು ಇದರ ಕೆಟ್ಟ ಪರಿಣಾಮವನ್ನು ಅನುಭವಿಸುತ್ತದೆ, ಮತ್ತು ಇದು ದೇವರಿಂದಾದುದಲ್ಲ. ಇಲ್ಲಿ ಸ್ವಾಭಾವಿಕವಾದ ನಿಯಮಗಳಿವೆ, ಸ್ವಾಭಾವಿಕವಾದ ವಿಷಯಗಳಿವೆ. ಜನರು ಸ್ವಸ್ಥತೆ ಹೊಂದದೇ ಇರುವುದಕ್ಕೆ ಪಾಪವೂ ಒಂದು ಕಾರಣವಾಗಿರಲು ಸಾಧ್ಯವಿದೆ.

ನಿಮ್ಮ ಜೀವನದಲ್ಲಿ ನಿಮಗೆ ತಿಳಿದಿರುವ ಪಾಪವಿರಬಹುದು ಮತ್ತು ಸ್ವಸ್ಥತೆಗಾಗಿ ನೀವು ದೇವರಲ್ಲಿ ನಂಬಿಕೆ ಇಟ್ಟಿರಬಹುದು. ಆದರೆ ನೀವು ಪಾಪವನ್ನು ತಡೆಗಟ್ಟಬೇಕು, ಏಕೆಂದರೆ ದೇವರು ನಿಮ್ಮ ಜೀವನದಲ್ಲಿ ಮಾಡುತ್ತಿರುವುದನ್ನು ನೀವು ಪಡೆಯಲಾಗದಂತೆ ಈ ಮೂಲಕ ನೀವು ಸೈತಾನನಿಗೆ ನೇರವಾಗಿ ದಾರಿತೋರಿಸಿದಂತಾಗುತ್ತದೆ. ರೋಮ 6:16 ಹೇಳುತ್ತದೆ, *"ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿ ಕೊಡುತ್ತೀರೋ ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂಬದು ನಿಮಗೆ ಗೊತ್ತಿಲ್ಲವೋ? ಪಾಪಕ್ಕೆ ದಾಸರಾದರೆ ಮರಣವೇ ಫಲ; [ನಂಬಿಕೆಯೆಂಬ] ವಿಧೇಯತ್ವಕ್ಕೆ ದಾಸರಾದರೆ ನೀತಿಯೇ ಫಲ".* ಅಂದರೆ ನೀವು ನಿಮ್ಮ ರಕ್ಷಣೆಯನ್ನು ಕಳೆದುಕೊಂಡು ನರಕಕ್ಕೆ ಹೋಗುವ ಹಾಗೆ ಸೈತಾನನು ನಿಮ್ಮ ಯಜಮಾನನಾಗಿರುವನು ಎಂಬ ಅರ್ಥದಲ್ಲಿ ಇಲ್ಲಿ ಹೇಳಲಾಗಿಲ್ಲ, ಆದರೆ ನೀವು ಕ್ರೈಸ್ತರಾದರೂ ಇಲ್ಲದಿದ್ದರೂ, ನೀವು ಪಾಪದಲ್ಲಿಯೇ ಅತ್ಯಧಿಕವಾಗಿ ಜೀವಿಸುತ್ತಿದ್ದರೆ, ಆಗ ನಿಮ್ಮ ಜೀವನದೊಳಗೆ ಸೈತಾನನು ಬರುವ ಹಾಗೆ ಅವನಿಗೆ ಒಂದು ದಾರಿಯನ್ನು ಸಿದ್ಧಮಾಡಿಕೊಟ್ಟಂತೆ ಎಂದು ಅರ್ಥಬರುತ್ತದೆ. ಯೋಹಾನ 10:10 – ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ ಎಂದು ಹೇಳುತ್ತದೆ. ಆದರೆ ಯೇಸು ಬಂದದ್ದು ನಿಮಗೆ ಜೀವವನ್ನು ಕೊಡುವುದಕ್ಕಾಗಿ. ಹೀಗೆ, ತನ್ನ ಜೀವವನ್ನು ಮತ್ತು ಆರೋಗ್ಯವನ್ನು ನಿಮಗೆ ತರುವುದಕ್ಕಾಗಿ ಯೇಸು ನಿಮಗಿರುವನು, ಆದರೆ ನೀವು ಅನಾರೋಗ್ಯದಲ್ಲಿರುವಂತೆ ಮಾಡುವುದಕ್ಕಾಗಿ ನಿಮ್ಮ ಬಳಿ ಸೈತಾನನು ಇರುವನು. ನಿಮ್ಮ ಪಾಪದ ಮೂಲಕ ನೀವು ಸೈತಾನನಿಗೆ ಒಳಗಾಗಿದ್ದರೆ, ನೀವು ಅವನಿಗೆ ಅಧಿಕಾರ ವಹಿಸಿಕೊಡುತ್ತಿದ್ದೀರಿ ಹಾಗೂ ನಿಮ್ಮ

ಜೀವನದಲ್ಲಿ ಇರಲು ನೀವು ಅವನಿಗೆ ಅವಕಾಶವನ್ನು ನೀಡುತ್ತಿರುವಿರಿ. ಆರೋಗ್ಯಕ್ಕಾಗಿ ನೀವು ದೇವರಿಗೆ ಪ್ರಾರ್ಥಿಸಿ ಕೇಳಿಕೊಳ್ಳುವಿರಿ ಆದರೆ, ನಿಮ್ಮ ಕ್ರಿಯೆಗಳಾದರೋ ಸೈತಾನನು ಒಳಗೆ ಬಂದು ಅನಾರೋಗ್ಯವನ್ನು ತರುವಂತೆ ಮಾಡುತ್ತಿವೆ. ಹಾಗಾಗಿ, ನೀವು ಪಾಪದಲ್ಲಿದ್ದರೆ, ನೀವು ಅದನ್ನು ನಿಲ್ಲಿಸಬೇಕು.

ಇಲ್ಲಿ ನಾನು ನಿಮಗೆ ಹೇಳಬೇಕಾದ ಮತ್ತೊಂದು ಮಾತೆಂದರೆ, ನೀವು ನಿಮ್ಮ ಅಂತರಂಗವನ್ನು ಶೋಧಿಸುವುದರಲ್ಲಿ ಎಷ್ಟೊಂದು ಸೂಕ್ಷ್ಮತೆಯುಳ್ಳವರಾಗ ಬಹುದೆಂದರೆ, ನೀವು "ನಾನು ಯಾವ ಮಟ್ಟದಲ್ಲಿ ಇರಬೇಕೆಂದು ಅಪೇಕ್ಷಿಸುತ್ತೇನೋ ಯಾವಾಗಲೂ ಆ ಮಟ್ಟಕ್ಕಿಂತ ಕೆಳಗಿನ ಮಟ್ಟದಲ್ಲೇ ಇರುತ್ತೇನೆ" ಎಂದು ಹೇಳುವಿರಿ ಮತ್ತು ದೇವರು ನಿಮ್ಮನ್ನು ಸ್ವಸ್ಥಪಡಿಸುವನು ಎನ್ನುವ ನಂಬಿಕೆ ಇದ್ದರೂ ನಿಮಗೆ ಆ ಯೋಗ್ಯತೆ ಇಲ್ಲದಿರುವ ಕಾರಣ ಕರ್ತನು ನಿಮ್ಮನ್ನು ಸ್ವಸ್ಥಪಡಿಸುವುದಿಲ್ಲ ಎಂಬುದಾಗಿ ನಂಬುವಿರಿ. ಖಂಡಿತವಾಗಿಯೂ ಇದು ತಪ್ಪು. ನಮ್ಮ ಯೋಗ್ಯತೆಯ ಕಾರಣದಿಂದ ದೇವರು ನಮಗೆ ಸ್ವಸ್ಥತೆ ನೀಡುತ್ತಾನೆ ಎನ್ನುವ ಕಾರಣದಿಂದ ನಮ್ಮಲ್ಲಿ ಯಾರೂ ಸ್ವಸ್ಥತೆಯನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಮತ್ತು ಹಾಗೆ ತಿಳಿಯುವುದು ತಪ್ಪು. ಯಾವ ಒಬ್ಬ ವ್ಯಕ್ತಿಯು ತನ್ನ ಕ್ರಿಯೆಗಳ ಮೂಲಕ ದೇವರಿಂದ ಅರ್ಹತೆಯನ್ನು ಹೊಂದುವನು ಎನ್ನುವಂತಹುದು ಇಲ್ಲಿಯ ತನಕ ನಡೆದಿಲ್ಲ. ಹಾಗಾಗಿ ಕೇವಲ ನಿಮ್ಮ ಕ್ರಿಯೆ, ಮತ್ತು ನಿಮ್ಮ ಪರಿಶುದ್ಧತೆ ಮಾತ್ರದಿಂದಲೇ ದೇವರು ನಿಮ್ಮಲ್ಲಿ ಕಾರ್ಯಸಾಧಿಸುವಂತೆ ನೀವು ಆತನೊಂದಿಗೆ ಸಹಕರಿಸಬೇಕಾದ ಅಗತ್ಯವಿಲ್ಲ. ಇದೇನಿದ್ದರೂ ಯೇಸುವು ನಿಮಗಾಗಿ ಮಾಡಿರುವ ಕಾರ್ಯ ಮತ್ತು ಇದು ಆತನಲ್ಲಿ ನಿಮಗಿರುವ ನಂಬಿಕೆಯ ಮೇಲೆ ಆಧಾರಗೊಂಡಿದೆ. ಅದೇ ಸಮಯದಲ್ಲಿ, ನಿಮ್ಮ ಕ್ರಿಯೆಗಳನ್ನು ನೀವು ಅಲಕ್ಷಿಸಬಾರದು ಮತ್ತು ಸೈತಾನನು ಅಡ್ಡಿಪಡಿಸುವ ಹಾಗೆ ನೀವು ಅವನಿಗೆ ಒಳಗಾಗಬಾರದು. ನೀವು ಪಶ್ಚಾತ್ತಾಪಪಟ್ಟು, ನಿಮ್ಮ ಜೀವನದಲ್ಲಿ ಸೈತಾನನಿಗೆ ಪ್ರವೇಶ ನೀಡಿದ ಕಾರ್ಯಗಳನ್ನು ತೊರೆದುಬಿಟ್ಟಾಗ ನಿಮ್ಮ ಜೀವನದಲ್ಲಿ ಸುಲಭವಾಗಿ ಮತ್ತು ಉತ್ತಮವಾಗಿ ಸ್ವಸ್ಥತೆಯು ಫಲಿಸುವುದನ್ನು ನೀವು ಕಾಣಬಹುದಾಗಿದೆ.

ಸ್ವಸ್ಥತೆಯ ಕುರಿತಾಗಿ ಜನರು ಹೆಚ್ಚಾಗಿ ಗಮನಕೊಡದಿರುವ ಮತ್ತೊಂದು ಮುಖ್ಯವಾದ ಅಂಶವೆಂದರೆ ಇತರರ ನಕಾರಾತ್ಮಕತೆ ಹಾಗೂ ಅಪನಂಬಿಕೆ ಇವುಗಳು ನಿಮ್ಮ ಮೇಲೆ ಪರಿಣಾಮ ಬೀರುವಂತಹುದಾಗಿದೆ ಎನ್ನುವುದು. ಇದಕ್ಕಿರುವ ಬಹು ಉತ್ತಮವಾದ ಉದಾಹರಣೆಯೆಂದರೆ ಮಾರ್ಕ 6, ಇಲ್ಲಿ ಯೇಸು ತನ್ನ ಸ್ವಂತ ಊರಿನಲ್ಲಿರುತ್ತಾನೆ, ಮತ್ತು ಇಲ್ಲಿ ಜನರು ಯೇಸುವನ್ನು ತಾವು ಚಿಕ್ಕಂದಿನಿಂದಲೂ ನೋಡಿರುವ ನೆನಪು ಇರುವುದರಿಂದ, ಆತನಿಗೆ ಗೌರವವನ್ನು ಸಲ್ಲಿಸುವುದಿಲ್ಲ. ಅವರಿಗೆ ಯೇಸುವಿನ ತಾಯಿ, ತಂದೆ, ಸಹೋದರರು ಮತ್ತು ಸಹೋದರಿಯರ ಪರಿಚಯವಿತ್ತು, ಹಾಗಾಗಿ ಇತರರು ಯೇಸುವನ್ನು ಗೌರವಿಸಿದಂತೆ ಅವರು ಆತನಿಗೆ ಮರ್ಯಾದೆ ನೀಡಲಿಲ್ಲ. ಅವರು ಆತನಿಗೆ ವಿರುದ್ಧವಾಗಿ ಮಾತನಾಡಿ, ಆತನನ್ನು ಟೀಕಿಸಿದರು. ಮಾರ್ಕ 6:4–6 ಹೇಳುತ್ತದೆ, *"ಯೇಸು ಅವರಿಗೆ – ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶದಲ್ಲಿಯೂ ಸ್ವಂತ ಜನರಲ್ಲಿಯೂ ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆಯಿಲ್ಲ ಎಂದು ಹೇಳಿದನು.*

*ಆತನು ಅಲ್ಲಿ ಕೆಲವು ಮಂದಿ ರೋಗಿಗಳ ಮೇಲೆ ಕೈಯಿಟ್ಟು ಸ್ವಸ್ಥಮಾಡಿದ್ದೇ ಹೊರತು ಬೇರೆ ಯಾವ ಮಹತ್ಕಾರ್ಯವನ್ನೂ ಮಾಡುವದಕ್ಕಾಗಲಿಲ್ಲ. ಅವರು ತನ್ನನ್ನು ನಂಬದೆ ಹೋದದ್ದಕ್ಕೆ ಆತನು ಆಶ್ಚರ್ಯಪಟ್ಟನು."* ಹೀಗಾಗಿ ಯೇಸು ಅಲ್ಲಿ ಯಾವುದೇ ಮಹತ್ಕಾರ್ಯಗಳನ್ನು ಮಾಡುವುದಿಲ್ಲ ಎಂದು ಹೇಳಲಿಲ್ಲ, ಬದಲಾಗಿ ಆತನಿಗೆ ಮಾಡಲು ಸಾಧ್ಯವಾಗಲಿಲ್ಲ ಎಂದು ನೋಡುತ್ತೇವೆ. ಇಲ್ಲಿ, ದೇವಕುಮಾರನೂ ಭೂಲೋಕಕ್ಕೆ ಮನುಷ್ಯನಾಗಿ ಬಂದವನೂ ತನ್ನಲ್ಲಿ ನಂಬಿಕೆಗೆ ಯಾವುದೇ ಕೊರತೆ ಇಲ್ಲದವನೂ ಆದ ಯೇಸುವು ಇದ್ದನು. ಹಾಗೂ ಆತನ ಜೀವಿತದಲ್ಲಿ ಪಾಪವು ಪ್ರವೇಶಿಸುವುದಕ್ಕೆ ಯಾವುದೇ ವಿಧವಾದ ಮಾರ್ಗವೂ ಇರಲಿಲ್ಲ. ಆದರೂ ಉಳಿದವರ ಅಪನಂಬಿಕೆಯ ನಿಮಿತ್ತ ಆತನು ಜನರಿಗೆ ಏನನ್ನು ಮಾಡಲು ಶಕ್ತನಾಗಿದ್ದನೋ ಅದನ್ನು ಪೂರ್ಣಮಟ್ಟದಲ್ಲಿ ಮಾಡಲಾಗದೆ ಹೋದನು. ಮತ್ತಾಯ 13:58ರ ಜೊತೆ ಸೇರಿಸಿ ನೋಡಿ, ಇಲ್ಲಿ ವಾಕ್ಯವು ಹೀಗೆ ಹೇಳುತ್ತದೆ, *"ಅವರು ಆತನನ್ನು ನಂಬದೆ ಹೋದದರಿಂದ ಆತನು ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ."* ಇಲ್ಲಿ ಯೇಸುವನ್ನು ನೋಡಿ, ಆತನಲ್ಲಿ ಯಾವುದೇ ವಿಧವಾದ ಮಿತಿಗಳಿರಲಿಲ್ಲ, ಸೈತಾನನು ಆತನಲ್ಲಿ ಪ್ರವೇಶಿಸುವ ಹಾಗೆ ಆತನ ಜೀವಿತದಲ್ಲಿ ಯಾವ ಮಾರ್ಗವೂ ಇರಲಿಲ್ಲ, ಆದರೂ ಸಹ ಆತನ ಸುತ್ತಮುತ್ತಲಿದ್ದ ಜನರ ಅಪನಂಬಿಕೆಯ ನಿಮಿತ್ತ ಆತನ ಕ್ರಿಯೆಗಳು ಮಿತಿಗೊಂಡವು.

ಇದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾಗಿದೆ: ಎಲ್ಲಾ ಸಮಯದಲ್ಲೂ ಪ್ರತಿಯೊಬ್ಬರನ್ನೂ ಸ್ವಸ್ಥ ಮಾಡುವುದು ದೇವರ ಚಿತ್ತವಾಗಿದೆ. ಇದನ್ನು ನೀವು ನಂಬಿದರೆ, ನೀವು ಆಸ್ಪತ್ರೆಗೆ ಹೋಗಿ, ಆ ಆಸ್ಪತ್ರೆಯನ್ನು ರೋಗಿಗಳಿಲ್ಲದೆ ಖಾಲಿಯಾಗಿ ಮಾಡಬೇಕೆಂಬ ತಪ್ಪನ್ನು ಮಾಡುವ ಸಾಧ್ಯತೆ ಇರಬಹುದು ಏಕೆಂದರೆ ಪ್ರತಿಯೊಬ್ಬರೂ ಸ್ವಸ್ಥತೆ ಹೊಂದುವುದು ದೇವರ ಚಿತ್ತ ಎಂಬುದಾಗಿ ನೀವು ನಂಬುವಿರಿ. ಅವರು ಸ್ವಸ್ಥತೆ ಹೊಂದಬೇಕೆಂಬುದು ದೇವರ ಚಿತ್ತವಾಗಿದೆ, ಆದರೆ ಅವರ ಚಿತ್ತಕ್ಕೆ ವಿರುದ್ಧವಾಗಿ ದೇವರು ಮುಂದುವರಿಯಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯ ನಂಬಿಕೆಯ ಹಕ್ಕನ್ನು ದೇವರು ಗೌರವಿಸುತ್ತಾನೆ. ಅವರು ತಾವು ಕಾಯಿಲೆಯಲ್ಲಿಯೇ ಇರಬೇಕೆನ್ನುವ ಮತ್ತು ಸ್ವಸ್ಥತೆ ಬೇಡವೆನ್ನುವ ಅವರ ಹಕ್ಕನ್ನು ದೇವರು ಗೌರವಿಸುತ್ತಾನೆ. ಸ್ವಸ್ಥವಾಗುವಂತೆ ಯಾರೂ ಅವರನ್ನು ಒತ್ತಾಯಮಾಡಲು ಮಾಡಲಾಗುವುದಿಲ್ಲ ಮತ್ತು ಬೇರೆಯವರ ನಂಬಿಕೆಯ ಕಾರಣದಿಂದ ಅವರು ಸ್ವಸ್ಥತೆ ಹೊಂದಲು ಸಾಧ್ಯವಿಲ್ಲ. ಒಂದು ವೇಳೆ ಅವರು ನಂಬಿಕೆಯ ವಿಷಯದಲ್ಲಿ ಕಷ್ಟಪಡುತ್ತಿದ್ದರೆ, ಮತ್ತೊಬ್ಬರ ನಂಬಿಕೆಯು ಅವರ ಸಹಾಯಕ್ಕೆ ಬರಬಹುದು, ಆದರೆ ಬೇರೆಯವರು ಅವರಿಗಾಗಿ ನಂಬಲು ಸಾಧ್ಯವಿಲ್ಲ. ಒಂದು ಕಾರು ತಟಸ್ಥ ಅಥವ ನ್ಯೂಟ್ರಲ್ ಗೇರ್‌ನಲ್ಲಿ ಇರುವಾಗ ಅದನ್ನು ತಳ್ಳಬಹುದು ಆದರೆ ಅದನ್ನು ನಿಲ್ಲಿಸಿಬಿಟ್ಟಿದ್ದರೆ ಅಥವಾ ರಿವರ್ಸ್‌ನಲ್ಲಿ ಇದ್ದರೆ ತಳ್ಳುವುದಕ್ಕೆ ಆಗುವುದಿಲ್ಲ. ಒಬ್ಬ ವ್ಯಕ್ತಿಯು ಸ್ವಸ್ಥತೆಯನ್ನು ವಿರೋಧಿಸಿದರೆ, ನೀವು ಅದನ್ನು ಜಯಿಸಲಾರಿರಿ. ಇದರ ನಿಮಿತ್ತ, ನೀವು ಆಸ್ಪತ್ರೆಯನ್ನು ರೋಗಿಗಳಿಲ್ಲದಂತೆ ಖಾಲಿ ಮಾಡಲು ಸಾಧ್ಯವಿಲ್ಲ ಅಥವಾ ನೀವು ಒಂದು ಸಭೆಯೊಳಗೆ ಹೋಗಿ, ಅಲ್ಲಿರುವವರ ಸಹಕಾರವಿಲ್ಲದೆಯೇ ಅವರು ಸ್ವಸ್ಥರಾಗುವುದನ್ನು ಕಾಣುವುದು ಅಸಾಧ್ಯ. ಇದರ ಕುರಿತಾಗಿ ಹೇಳುವುದಕ್ಕೆ ಅನೇಕ ವಿಷಯಗಳುಂಟು. ಯೇಸು

ಜನರನ್ನು ಸ್ವಸ್ಥಪಡಿಸುವಾಗ, ಅದು ಸತ್ತವರನ್ನು ಎಬ್ಬಿಸುವುದೇ ಆಗಿರಲಿ, ಆತನು ಅವರ ಬಳಿಗೆ ಹೋಗಿ "ಅಳಬೇಡ" ಎಂದು ಹೇಳುತ್ತಿದ್ದನು. ಆತನು ಅಳುತ್ತಿದ್ದ ತಾಯಿಗೆ ಅಳಬೇಡವೆಂದು ಹೇಳಿ, ನಂತರ ಸತ್ತಿದ್ದ ಆಕೆಯ ಮಗನನ್ನು ಬದುಕಿಸಿದನು. ಒಬ್ಬರ ನಂಬಿಕೆಯನ್ನು ಎಲ್ಲಿಯಾದರೂ ಉಪಯೋಗಿಸಲು ಸಾಧ್ಯವಿದೆ. ಸ್ವಸ್ಥತೆಯ ವಿಷಯದಲ್ಲಿ ನಮ್ಮ ಕಡೆಯಿಂದ ನಂಬಿಕೆ ಇರಬೇಕು ಸರಿ ಆದರೆ ಇನ್ನೂ ಅನೇಕಾನೇಕ ಸಂಗತಿಗಳು ಸಹ ಒಳಗೊಂಡಿರುತ್ತದೆ. ಇಲ್ಲಿ ನಾನು ಕೆಲವು ಸಂಗತಿಗಳ ಕುರಿತಾಗಿ ಮಾತ್ರ ತಿಳಿಸುತ್ತಿರುವೆನು, ಮತ್ತು ಇವು ನಿಮಗೆ ಸಹಾಯ ಮಾಡುತ್ತದೆ ಎಂದು ಆಶಿಸುತ್ತೇನೆ, ಆದರೆ ಇದರಲ್ಲಿ ಮುಖ್ಯವಾಗಿ ನೀವು ತಿಳಿದುಕೊಳ್ಳಬೇಕಾದ ವಿಷಯವೆಂದರೆ ದೇವರು ನಂಬಿಗಸ್ತನು. ನೀವು ಸ್ವಸ್ಥರಾಗಬೇಕೆಂಬುದೇ ಆತನ ಚಿತ್ತವಾಗಿದೆ, ಆದರೆ ಅತನೊಂದಿಗೆ ಹೇಗೆ ಸಹಕರಿಸಬೇಕೆಂದು ನೀವು ತಿಳಿದುಕೊಳ್ಳಬೇಕು. ನಿಮ್ಮ ಹೊರತಾಗಿ ಆತನದನ್ನು ಮಾಡಲು ಸಾಧ್ಯವಿಲ್ಲ, ಆದರೆ ನಿಮ್ಮ ಮೂಲಕ ಮಾಡಲು ಸಾಧ್ಯವಿದೆ. ಅದು ನಿಮ್ಮೊಳಗಿಂದ ಹೊರಡುವಂಥದ್ದಾಗಿದೆ.

ನೀವು ಕರ್ತನಿಗೆ ಸಮರ್ಪಣೆ ಮಾಡಿಕೊಳ್ಳುವಂತೆ, ದೇವರ ಬಲವು ನಿಮ್ಮ ಮೂಲಕ ಹರಿಯುವಂತೆ, ಮತ್ತು ಅಸಾಧಾರಣವಾದ ಆರೋಗ್ಯದಲ್ಲಿ ನೀವು ಮುನ್ನಡೆಯುವಂತೆ ಈ ಸಂದೇಶವು ನಿಮಗೆ ಸಹಾಯ ಮಾಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಮತ್ತಾಯ 8:17 ಓದಿರಿ. ನಮಗಾಗಿ ಸ್ವಸ್ಥತೆಯನ್ನು ನೀಡಲು ಯೇಸು ಏನು ಮಾಡಿದನು?

   **ಮತ್ತಾಯ 8:17** – *ಇದರಿಂದ ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು ಎಂದು ಯೆಶಾಯನೆಂಬ ಪ್ರವಾದಿಯಿಂದ ಹೇಳಿರುವ ಮಾತು ನೆರವೇರಿತು.*

2. ಹೋಶೇಯ 4:6 ಓದಿರಿ. ಕೆಲವರು ಈ ಕೆಳಗಿನ ಕಾರಣಗಳಿಂದ ಸ್ವಸ್ಥತೆ ಹೊಂದುವುದಿಲ್ಲ:

   1) ಅಜ್ಞಾನ (ತಿಳುವಳಿಕೆಯ ಕೊರತೆ)

   2) ಅವರು ಸಭೆಗೆ ಹೋಗುವುದಿಲ್ಲ

   3) ಅವರು ಸಾಕಷ್ಟು ಒಳ್ಳೆಯವರಲ್ಲ

   **ಹೋಶೇಯ 4:6** – *ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ; ನೀವು ಜ್ಞಾನವನ್ನು ತಳ್ಳಿಬಿಟ್ಟದರಿಂದ ಇನ್ನು ನನಗೆ ಯಾಜಕ ಸೇವೆ ಮಾಡದಂತೆ ನಾನುನಿಮ್ಮನ್ನು ತಳ್ಳಿಬಿಡುವೆನು; ನೀವು ನಿಮ್ಮ ದೇವರ ಧರ್ಮೋಪದೇಶವನ್ನು ಮರೆತ ಕಾರಣ ನಾನು ನಿಮ್ಮ ಸಂತತಿಯವರನ್ನು ಮರೆಯುವೆನು.*

3. ಯೋಹಾನ 9:1–3 ಓದಿರಿ. ಈ ವ್ಯಕ್ತಿಯ ಕುರುಡುತನಕ್ಕೆ ಏನು ಕಾರಣವಾಗಿರಬಹುದೆಂದು ಶಿಷ್ಯರು ಆಲೋಚಿಸಿದರು?

   ಅವರ ಆಲೋಚನೆ ಸರಿಯಾಗಿತ್ತೇ?

   **ಯೋಹಾನ 9:1–3** – *ಯೇಸು ಹಾದುಹೋಗುತ್ತಿರುವಾಗ ಒಬ್ಬ ಹುಟ್ಟು ಕುರುಡನನ್ನು ಕಂಡನು. ಆತನ ಶಿಷ್ಯರು – ಗುರುವೇ, ಇವನು ಕುರುಡನಾಗಿ ಹುಟ್ಟಿರುವುದಕ್ಕೆ ಯಾರು ಪಾಪ ಮಾಡಿದರು? ಇವನೋ? ಇವನ ತಂದೆ ತಾಯಿಗಳೋ? ಎಂದು ಆತನನ್ನು ಕೇಳಿದ್ದಕ್ಕೆ ಯೇಸು – ಇವನೂ ಪಾಪಮಾಡಲಿಲ್ಲ, ಇವನ ತಂದೆ ತಾಯಿಗಳೂ ಪಾಪ ಮಾಡಲಿಲ್ಲ; ದೇವರ ಕ್ರಿಯೆಗಳು ಇವನಲ್ಲಿ ತೋರಿ ಬರುವದಕ್ಕೆ ಇದಾಯಿತು.*

4. ಯೋಹಾನ 5:14 ಓದಿರಿ. ಪಾಪವು ರೋಗಕ್ಕೆ ಪ್ರವೇಶಾವಕಾಶವನ್ನು ನೀಡುತ್ತದೆ ಆದರೆ ಎಲ್ಲ ಸಮಯದಲ್ಲಿಯೂ ಅಲ್ಲ. ರೋಗವನ್ನು ಮಾತ್ರವಲ್ಲದೆ, ಪಾಪವು ಒಬ್ಬ ವ್ಯಕ್ತಿಯಲ್ಲಿ ಇನ್ನಾವ ಸಂಗತಿಗಳನ್ನು ಉಂಟು ಮಾಡಬಲ್ಲದು?

**ಯೋಹಾನ 5:14** – *ಇದಾದ ಮೇಲೆ ಯೇಸು ಅವನನ್ನು ದೇವಾಲಯದಲ್ಲಿ ಕಂಡುಕೊಂಡು – ನಿನಗೆ ಸ್ವಸ್ಥವಾಯಿತಲ್ಲಾ; ಇನ್ನು ಮೇಲೆ ಪಾಪ ಮಾಡಬೇಡ; ನಿನಗೆ ಹೆಚ್ಚಿನ ಕೇಡು ಬಂದೀತು ಅಂದನು.*

5. ರೋಮ 5:12–14 ಓದಿರಿ. ಯಾವಾಗಲೂ ಪಾಪವೇ ರೋಗಕ್ಕೆ ಕಾರಣವಾಗಿಲ್ಲದಿದ್ದರೆ, ಅದಕ್ಕಿರುವ ಮತ್ತೊಂದು ಕಾರಣವು ಯಾವುದು?

**ರೋಮ 5:12–14** – *ಈ ವಿಷಯ ಹೇಗಂದರೆ – ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು. [13] ಧರ್ಮಶಾಸ್ತ್ರ ಉಂಟಾಗುವದಕ್ಕೆ ಮುಂಚೆಯೇ ಪಾಪವು ಲೋಕದಲ್ಲಿತ್ತು; ಆದರೆ ಧರ್ಮಶಾಸ್ತ್ರವಿಲ್ಲದಿರುವಾಗ ಪಾಪವು ಲೆಕ್ಕಕ್ಕೆ ಬರುವದಿಲ್ಲ. [14] ಆದರೂ ಆದಾಮನ ಕಾಲದಿಂದ ಮೋಶೆಯ ಕಾಲದವರೆಗೂ ಮರಣದ ಆಳ್ವಿಕೆಯು ನಡೆಯುತ್ತಿತ್ತು. ಆದಾಮನು ದೇವಾಜ್ಞೆ ಮೀರಿ ಮಾಡಿದ ಪಾಪಕ್ಕೆ ಸಮಾನವಾದ ಪಾಪವನ್ನು ಮಾಡದೆ ಇದ್ದವರ ಮೇಲೆಯೂ ಅದು ನಡೆಯುತ್ತಿತ್ತು. ಆ ಆದಾಮನು ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನಾಗಿದ್ದಾನೆ!*

6. ಅ.ಕೃ. 10:38 ಓದಿರಿ. ಅ.ಕೃ. 10:38ರ ಪ್ರಕಾರ, ರೋಗವು ಯಾವುದರಿಂದ ಬರುತ್ತದೆ?

**ಅ.ಕೃ. 10:38** – *ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮನಿಂದಲೂ ಬಲದಿಂದಲೂ ಅಭಿಷೇಕಿಸಿದನು; ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು.*

7. ಮತ್ತಾಯ 13:58 ಓದಿರಿ. ಸ್ವಸ್ಥತೆಗೆ ತಡೆಯಾಗುವುದು ಯಾವುದರಿಂದ?

**ಮತ್ತಾಯ 13:58** – *ಅವರು ಆತನನ್ನು ನಂಬದೆ ಹೋದದರಿಂದ ಆತನು ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ.*

8. ಯಾಕೋಬ 5:15 ಓದಿರಿ. ರೋಗಿಯನ್ನು ಯಾವುದು ರಕ್ಷಿಸುತ್ತದೆ?

**ಯಾಕೋಬ 5:15** – *ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವದು; ಕರ್ತನು ಅವನನ್ನು ಎಬ್ಬಿಸುವನು; ಮತ್ತು ಪಾಪ ಮಾಡಿದವನಾಗಿದ್ದರೆ ಅದು ಪರಿಹಾರವಾಗುವದು.*

## ಉತ್ತರಗಳು

1. ಮತ್ತಾಯ 8:17 ಓದಿರಿ. ನಮಗಾಗಿ ಸ್ವಸ್ಥತೆಯನ್ನು ನೀಡಲು ಯೇಸು ಏನು ಮಾಡಿದನು?

**ಆತನು ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು**

2. ಹೋಶೇಯ 4:6 ಓದಿರಿ. ಕೆಲವರು ಈ ಕೆಳಗಿನ ಕಾರಣಗಳಿಂದ ಸ್ವಸ್ಥತೆ ಹೊಂದುವುದಿಲ್ಲ:

**1) ಅಜ್ಞಾನ (ತಿಳುವಳಿಕೆಯ ಕೊರತೆ)**

3. ಯೋಹಾನ 9:1–3 ಓದಿರಿ. ಈ ವ್ಯಕ್ತಿಯ ಕುರುಡುತನಕ್ಕೆ ಏನು ಕಾರಣವಾಗಿರಬಹುದೆಂದು ಶಿಷ್ಯರು ಆಲೋಚಿಸಿದರು?

**ಪಾಪ**

ಅವರ ಆಲೋಚನೆ ಸರಿಯಾಗಿತ್ತೇ?

**ಇಲ್ಲ**

4. ಯೋಹಾನ 5:14 ಓದಿರಿ. ಪಾಪವು ರೋಗಕ್ಕೆ ಪ್ರವೇಶವನ್ನು ನೀಡುತ್ತದೆ ಆದರೆ ಯಾವಾಗಲೂ ಅಲ್ಲ. ರೋಗವನ್ನು ಮಾತ್ರವಲ್ಲದೆ, ಪಾಪವು ಒಬ್ಬ ವ್ಯಕ್ತಿಯಲ್ಲಿ ಇನ್ಯಾವ ಸಂಗತಿಗಳನ್ನು ಉಂಟು ಮಾಡಬಲ್ಲದು?

**ರೋಗಕ್ಕಿಂತಲೂ ಬಹಳ ಭಯಂಕರವಾದುದು, ಇದರಲ್ಲಿ ಮರಣವೂ ಆಗಿರುತ್ತದೆ (ರೋಮ 6:23)**

5. ರೋಮ 5:12–14 ಓದಿರಿ. ಯಾವಾಗಲೂ ಪಾಪವೇ ರೋಗಕ್ಕೆ ಕಾರಣವಾಗಿಲ್ಲದಿದ್ದರೆ, ಅದಕ್ಕಿರುವ ಮತ್ತೊಂದು ಕಾರಣವು ಯಾವುದಾಗಿತ್ತು?

**ಮನುಷ್ಯನ ಬೀಳುವಿಕೆ (ಆದಿಕಾಂಡ 3). ಆದಾಮನು ತನ್ನ ಅಪರಾಧದ ಮೂಲಕ ಮಾನವಕುಲಕ್ಕೆ ಪಾಪ ಮತ್ತು ರೋಗವನ್ನು ಪರಿಚಯಿಸಿದನು**

6. ಅ.ಕೃ. 10:38 ಓದಿರಿ. ಅ.ಕೃ. 10:38ರ ಪ್ರಕಾರ, ರೋಗವು ಯಾವುದರಿಂದ ಬರುತ್ತದೆ?

**ಸೈತಾನನಿಂದ ಬಾಧಿಸಲ್ಪಡುವುದರಿಂದ**

7. ಮತ್ತಾಯ 13:58 ಓದಿರಿ. ಸ್ವಸ್ಥತೆಗೆ ತಡೆಯಾಗುವುದು ಯಾವುದರಿಂದ?

   **ಅಪನಂಬಿಕೆ**

8. ಯಾಕೋಬ 5:15 ಓದಿರಿ. ರೋಗಿಯನ್ನು ಯಾವುದು ರಕ್ಷಿಸುತ್ತದೆ?

   **ನಂಬಿಕೆಯ ಪ್ರಾರ್ಥನೆ**

## ಪಾಠ 9

# ಇತರರನ್ನು ಕ್ಷಮಿಸುವುದು

### *ಡೂಣ್ ಕ್ರೊ*

ಮತ್ತಾಯ 18:21–22 ಹೇಳುತ್ತದೆ, *"ಆಗ ಪೇತ್ರನು ಆತನ ಬಳಿಗೆ ಬಂದು – ಸ್ವಾಮೀ, ನನ್ನ ಸಹೋದರನು ನನಗೆ ತಪ್ಪು ಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ ಎಂದು ಕೇಳಲು ಯೇಸು ಅವನಿಗೆ – ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ...ಅಂದನು"* ಪೇತ್ರನು ತನ್ನ ವಿರುದ್ಧವಾಗಿ ತಪ್ಪು ಮಾಡಿದವರನ್ನು "ಏಳು ಸಾರಿ ಕ್ಷಮಿಸಬೇಕೇ" ಎಂದು ಕೇಳುವುದರಲ್ಲಿ ತಾನು ಬಹಳ ಉದಾರವಾಗಿ ಕೇಳುತ್ತಿರುವೆನು ಎಂದು ಭಾವಿಸಿದ್ದಿರಬಹುದು ಎನ್ನುವುದು ನನ್ನ ಅಭಿಪ್ರಾಯ. ಆದರೆ ಯೇಸು, "ಪೇತ್ರನೇ, ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ" ಎಂದು ಹೇಳಿದನು. ಅಂದರೆ 490 ಸಾರಿ, ಆದರೆ 490 ಬಾರಿ ಕ್ಷಮಿಸಿದ ನಂತರ ಕ್ಷಮಿಸಬೇಕಾಗಿಲ್ಲ ಎನ್ನುವುದು ಇದರ ಅರ್ಥವಲ್ಲ. ಒಬ್ಬ ವ್ಯಕ್ತಿಯಿಂದ ಒಂದು ದಿನದಲ್ಲಿ ಸಂಭವಿಸುವಂತಹ ಎಣಿಕೆಯಿಲ್ಲದಂತಹ ಅಪರಾಧಗಳ ಕುರಿತಾಗಿ ಯೇಸು ತಿಳಿಸಿರುವನು. ಆತನು ಕ್ಷಮಾಪಣೆ ಎಂಬುದು ಸತತವಾಗಿ ಮುಂದುವರೆಯುವಂತಹ ಕಾರ್ಯ ಎಂದು ಹೇಳುತ್ತಿರುವನು, ಅಂದರೆ ಇದು ಮತ್ತೆ ಮತ್ತೆ ಮಾಡುತ್ತಲೇ ಇರುವಂತಹ ಕಾರ್ಯವಾಗಿದೆ. ಕ್ಷಮಾಪಣೆ ಎಂಬುದು ಒಬ್ಬ ಕ್ರೈಸ್ತನ ನಿಜವಾದ ಮನೋಭಾವನೆಯಾಗಿರಬೇಕು. ಯೇಸು ಲೂಕ 23:34ರಲ್ಲಿ ಹೀಗೆ ಹೇಳಿರುವನು, *"ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು ಅಂದನು"* ಹಾಗೂ ರಕ್ತಸಾಕ್ಷಿಯಾದ ಸ್ತೆಫನನು ಅಪೊಸ್ತಲರ ಕೃತ್ಯಗಳು 7:60ರಲ್ಲಿ ಹೀಗೆ ಅಂದನು, *"ಕರ್ತನೇ, ಈ ಪಾಪವನ್ನು ಅವರ ಮೇಲೆ ಹೊರಿಸಬೇಡವೆಂದು ಮಹಾಶಬ್ದದಿಂದ ಕೂಗಿದನು."* ಎಲ್ಲರಿಗೂ ಕ್ಷಮಾಪಣೆ ದೊರೆಯುವುದಿಲ್ಲ, ಆದರೆ ಒಬ್ಬ ಕ್ರೈಸ್ತನು ಕ್ಷಮಿಸುವ ಮನೋಭಾವನೆಯನ್ನು ಯಾವಾಗಲೂ ಹೊಂದಿದವನಾಗಿರಬೇಕು.

ಮತ್ತಾಯ 18ನೇ ಅಧ್ಯಾಯದ 23ನೇ ವಚನದಲ್ಲಿ ಯೇಸು ಕ್ಷಮಾಪಣೆಯ ಕುರಿತಾಗಿ ಒಂದು ಸಾಮ್ಯವನ್ನು ತಿಳಿಸುತ್ತಾ ಮುಂದುವರೆಸುತ್ತಾನೆ, *"ಆದದರಿಂದ ಪರಲೋಕ ರಾಜ್ಯವು ತನ್ನ ಸೇವಕರಿಂದ ಲೆಕ್ಕವನ್ನು ತೆಗೆದುಕೊಳ್ಳಬೇಕೆಂದಿದ್ದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ. ಅವನು ಲೆಕ್ಕಾ ತೆಗೆದುಕೊಳ್ಳುವದಕ್ಕೆ ಪ್ರಾರಂಭ ಮಾಡಿದಾಗ ಕೋಟ್ಯಂತರ ಸಾಲಾ ಮಾಡಿದವನೊಬ್ಬನನ್ನು ಅವನ ಬಳಿಗೆ ಹಿಡತಂದರು. ಆ ಸಾಲಾ ತೀರಿಸುವದಕ್ಕೆ ಅವನಲ್ಲಿ ಏನೂ ಇಲ್ಲದ್ದರಿಂದ ಅವನ ಒಡೆಯನು ಅವನನ್ನೂ, ಅವನ ಹೆಂಡತಿ ಮಕ್ಕಳನ್ನೂ, ಅವನ ಬದುಕೆಲ್ಲವನ್ನೂ ಮಾರಿ ಅದನ್ನು ತೀರಿಸಬೇಕೆಂದು ಅಪ್ಪಣೆ ಮಾಡಿದನು. ಆ ಸೇವಕನು*

*ಅವನ ಕಾಲಿಗೆ ಬಿದ್ದು ಅವನಿಗೆ – ಒಡೆಯನೇ, ಸ್ವಲ್ಪ ತಾಳಿಕೋ, ನಿನ್ನದೆಲ್ಲಾ ನಾನು ಕೊಟ್ಟು ತೀರಿಸುತ್ತೇನೆ.. ಅಂದನು."* ಈಗ, ಇಲ್ಲಿ ಒಂದು ಸನ್ನಿವೇಶವಿದೆ: ಇಲ್ಲಿ ಒಬ್ಬ ವ್ಯಕ್ತಿಯು ಕೋಟ್ಯಾಂತರ ಸಾಲವನ್ನು ತನ್ನ ಒಡೆಯನಿಗೆ ಕೊಡಬೇಕಾಗಿತ್ತು. ಆದರೆ ಅದನ್ನು ತೀರಿಸಲು ಅವನಿಗೆ ಸಾಧ್ಯವೇ ಇರಲಿಲ್ಲ – ತನಗೆ ಸಾಧ್ಯವಿಲ್ಲ ಎಂಬುದು ಆ ವ್ಯಕ್ತಿಗೂ ತಿಳಿದಿತ್ತು ಹಾಗೂ ಅವನ ಒಡೆಯನಿಗೂ ಸಹ ತಿಳಿದಿತ್ತು. ಆ ಕಾಲದಲ್ಲಿ, ನೀವು ದಿವಾಳಿಯಾದಾಗ ನಮ್ಮ ದೇಶಗಳಲ್ಲಿ ಎದುರಿಸುವಂತಹ ಪರಿಸ್ಥಿತಿಗಳು ಇರಲಿಲ್ಲ – ಆಗಿನ ಕಾಲದಲ್ಲಿ ನಿಮಗೆ ಈ ರೀತಿ ಸಂಭವಿಸಿದ್ದರೆ ಅವರು ನಿಮ್ಮನ್ನು, ನಿಮ್ಮ ಹೆಂಡತಿಯನ್ನು, ನಿಮ್ಮ ಮಕ್ಕಳನ್ನು, ಮತ್ತು ನಿಮಗಿರುವ ಎಲ್ಲವುಗಳನ್ನು ಮಾರಿಬಿಡುತ್ತಿದ್ದರು ಮತ್ತು ನೀವು ದಾಸರಾಗಿ ಇರಬೇಕಾಗಿತ್ತು. ಎಲ್ಲಾ ಸಾಲದ ಹಣವನ್ನು ಹಿಂತಿರುಗಿಸುವ ತನಕ ಅವರನ್ನು ಸೆರೆಮನೆಗೆ ಕಳುಹಿಸಲಾಗುತ್ತಿತ್ತು ಮತ್ತು ಇದು ತೀರಿಸಲು ಸಾಧ್ಯವೇ ಇಲ್ಲ ಎಂದಾದಲ್ಲಿ ಅವರು ತಮ್ಮ ಇಡೀ ಜೀವಿತವನ್ನು ಸೆರೆಮನೆಯಲ್ಲಿಯೇ ಕಳೆಯಬೇಕಾಗಿತ್ತು. ಈ ವ್ಯಕ್ತಿಯು ತನಗೆ ಮಾಡಲು ತಿಳಿದಿದ್ದ ಒಂದೇ ಒಂದು ಸಂಗತಿಯನ್ನು ಇಲ್ಲಿ ಮಾಡಿದನು: ಅವನು ಮೊಣಕಾಲೂರಿ, ಒಡೆಯನ ಕಾಲಿಗೆ ಬಿದ್ದು ಕರುಣೆ ತೋರಿಸಬೇಕೆಂದು ಮೊರೆಯಿಟ್ಟನು, "ಓ ಒಡೆಯನೇ, ಸ್ವಲ್ಪ ನನ್ನ ಮೇಲೆ ತಾಳ್ಮೆಯನ್ನು ತೋರಿಸು! ದಯವಿಟ್ಟು, ನಾನು ನಿನ್ನನ್ನು ಬೇಡಿಕೊಳ್ಳುತ್ತೇನೆ. ನಾನು ನಿನಗೆ ಎಲ್ಲವನ್ನೂ ಹಿಂತಿರುಗಿಸಿ ಕೊಡುತ್ತೇನೆ. ಸ್ವಲ್ಪ ತಾಳಿಕೋ!" ಎಂದನು. 27ನೇ ವಚನದಲ್ಲಿ ಏನು ಸಂಭವಿಸಿತು ಎಂಬುದನ್ನು ಗಮನಿಸಿ, ಆಗ ಒಡೆಯನು ಕನಿಕರಪಟ್ಟು ಅವನನ್ನು ಬಿಡಿಸಿ ಆ ಸಾಲವನ್ನೆಲ್ಲಾ ಬಿಟ್ಟುಬಿಟ್ಟನು.

ನಾವು ತೀರಿಸಲಾಗದಂತಹ ಸಾಲ ನಮಗಿತ್ತು. ಸತ್ಯವೇದವು ಹೇಳುತ್ತದೆ, ಪಾಪದ ಸಂಬಳ ಮರಣ (ರೋಮ 6:23) – ನಿತ್ಯನಿರಂತರಕ್ಕೂ ದೇವರಿಂದ ಬೇರ್ಪಡುವುದು – ಲೋಕದಲ್ಲಿರುವ ಎಲ್ಲಾ ಬೆಳ್ಳಿ, ಬಂಗಾರಗಳು ನಮ್ಮನ್ನು ವಿಮೋಚಿಸಲು ಸಾಧ್ಯವಿಲ್ಲ. ಆಗ ನಮಗೆ ತೀರಿಸಲು ಅಸಾಧ್ಯವಾಗಿದ್ದ ಸಾಲವನ್ನು ತೀರಿಸುವುದಕ್ಕಾಗಿ, ದೇವರು ತನ್ನ ಕನಿಕರದಿಂದ ಮತ್ತು ಕೃಪೆಯಿಂದ ತನ್ನ ಮಗನಾದ ಯೇಸು ಕ್ರಿಸ್ತನನ್ನು ಲೋಕಕ್ಕೆ ಕಳುಹಿಸಿದನು. ದೇವರು ನಮ್ಮನ್ನು ತನ್ನ ಕನಿಕರದಿಂದ ಮತ್ತು ಕರುಣೆಯಿಂದ ನಮ್ಮನ್ನು ದೃಷ್ಟಿಸಿ, "ನಿಮ್ಮ ಸಾಲವನ್ನು ನಾನು ಬಿಟ್ಟುಬಿಡುತ್ತೇನೆ'" ಎಂದು ಹೇಳಿದನು.

ಈ ಕೋಟ್ಯಂತರ ಹಣದ ಸಾಲದಿಂದ ಬಿಡುಗಡೆ ಹೊಂದಿದ್ದ ಈ ವ್ಯಕ್ತಿಗೆ ಮತ್ತೊಬ್ಬ ವ್ಯಕ್ತಿಯು ನೂರು ರೂಪಾಯಿಗಳ ಸಾಲವನ್ನು ಕೊಡಬೇಕಾಗಿತ್ತು. ಆ ವ್ಯಕ್ತಿಯನ್ನು ಕಂಡು, "ನನಗೆ ಈಗ ತಾನೇ ಕೋಟ್ಯಂತರ ರೂಪಾಯಿಗಳ ಸಾಲದಿಂದ ಬಿಡುಗಡೆ ದೊರಕಿದೆ, ಹೀಗಿರುವಾಗ ನೂರು ರೂಪಾಯಿಯು ಯಾವ ಲೆಕ್ಕಕ್ಕೂ ಇಲ್ಲವಲ್ಲವೇ? ನಾನು ಬಿಡುಗಡೆ ಹೊಂದಿದಂತೆ ನೀನೂ ಸಹ ಬಿಡುಗಡೆ ಹೊಂದಬೇಕೆಂದು ಬಯಸುತ್ತೇನೆ! ಹೋಗಲಿಬಿಡು, ಪರವಾಗಿಲ್ಲ, ಏಕೆಂದರೆ ನಾನು ಕೋಟ್ಯಂತರ ಸಾಲದಿಂದ ಬಿಡುಗಡೆ ಹೊಂದಿದ್ದೇನೆ!" ಎಂದು ಹೇಳಿದನು. ವಾಸ್ತವದಲ್ಲಿ ಈ ಸಂಗತಿಯು ಈ ರೀತಿಯಾಗಿಯೇ ಸಂಭವಿಸಬೇಕಾಗಿತ್ತು, ಆದರೆ ಅಲ್ಲಿ ನಡೆದದ್ದು ಬೇರೆ. ಹಾಗಾದರೆ ನಿಜವಾಗಿಯೂ ಏನು ಸಂಭವಿಸಿತು ಎಂಬುದನ್ನು ನಾವು 28–31ನೇ ವಚನದಲ್ಲಿ ಓದೋಣ. *"ತರುವಾಯ ಆ ಸೇವಕನು ಹೊರಕ್ಕೆ ಬಂದು*

*ತನಗೆ ನೂರು ಹಣಾ ಕೊಡಬೇಕಾದ ಒಬ್ಬ ಜೊತೇ ಸೇವಕನನ್ನು ಕಂಡು ಅವನನ್ನು ಹಿಡಿದು – ಎಲಾ, ನನ್ನ ಸಾಲ ತೀರಿಸು ಎಂದು ಹೇಳಿ ಕುತ್ತಿಗೆ ಹಿಸಿಕಿದನು. ಆಗ ಅವನ ಜೊತೇ ಸೇವಕನು ಅವನ ಕಾಲಿಗೆ ಬಿದ್ದು – ಸ್ವಲ್ಪ ತಾಳಿಕೋ, ತೀರಿಸುತ್ತೇನೆ ಎಂದು ಬೇಡಿಕೊಂಡನು. ಆದರೆ ಅವನು ಒಪ್ಪದೆ ಹೊರಟುಹೋಗಿ ಆ ಸಾಲಾ ತೀರಿಸುವ ತನಕ ಅವನ್ನು ಸೆರೆಮನೆಯಲ್ಲಿ ಹಾಕಿಸಿದನು. ಅವನ ಜೊತೇ ಸೇವಕರು ನಡೆದ ಸಂಗತಿಯನ್ನು ನೋಡಿ ಬಹಳವಾಗಿ ದುಃಖಪಟ್ಟು ಒಡೆಯನ ಬಳಿಗೆ ಬಂದು ನಡೆದದ್ದನ್ನೆಲ್ಲಾ ತಿಳಿಸಿದರು."* ಈ ವ್ಯಕ್ತಿಯು ತನ್ನ ಕೋಟ್ಯಂತರ ಸಾಲದ ಕ್ಷಮಾಪಣೆಯನ್ನು ಹೊಂದಿದ ಅದೇ ಸಮಯದಲ್ಲಿಯೇ ನೂರು ರೂಪಾಯಿಗಳಿಗಾಗಿ ಆ ಮತ್ತೊಬ್ಬ ವ್ಯಕ್ತಿಯನ್ನು ಸೆರೆಮನೆಯಲ್ಲಿ ಹಾಕಿಸಿದನು! ಇದನ್ನು ನೀವು ಊಹಿಸಲು ಸಾಧ್ಯವೇ?

ವಚನ 32–34 ಹೇಳುತ್ತದೆ, *"ಆಗ ಅವನ ಒಡೆಯನು ಅವನನ್ನು ಕರಸಿ – ಎಲಾ ನೀಚನೇ, ನೀನು ನನ್ನನ್ನು ಬೇಡಿಕೊಂಡದ್ದರಿಂದ ಆ ಸಾಲವನ್ನೆಲ್ಲಾ ನಾನು ಬಿಟ್ಟುಬಿಟ್ಟೆನಲ್ಲಾ; ನಾನು ನಿನ್ನನ್ನು ಕರುಣಿಸಿದ ಹಾಗೆ ನೀನು ಸಹ ನಿನ್ನ ಜೊತೇ ಸೇವಕನನ್ನು ಕರುಣಿಸಬಾರದಾಗಿತ್ತೇ ಎಂದು ಹೇಳಿ ಸಿಟ್ಟುಮಾಡಿ ತನಗೆ ಕೊಡಬೇಕಾದ ಸಾಲವನ್ನು ತೀರಿಸುವ ತನಕ ಪೀಡಿಸುವವರ ಕೈಗೆ ಒಪ್ಪಿಸಿದನು."* ಈ ವ್ಯಕ್ತಿಯು ತನ್ನ ಜೊತೇ ಸೇವಕನೊಂದಿಗೆ ವರ್ತಿಸಿದ ರೀತಿಯ ನಿಮಿತ್ತ ಸೆರೆಮನೆಗೆ ಹಾಕಲ್ಪಟ್ಟನು ಹಾಗೂ ಈ ವಿಧವಾಗಿ ತನ್ನ ವಾಸ್ತವ ಕ್ಷಮಾಪಣೆ ದಂಡನೆಯನ್ನು ಹೊಂದಿದನು. ಯೇಸು 35ನೇ ವಚನದಲ್ಲಿ *"ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆ ಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು ಅಂದನು."* ಪಾಪದ ಸಂಬಳವಾಗಿರುವ ಮರಣದಿಂದ ಮತ್ತು ನಿತ್ಯನಿರಂತರಕ್ಕೂ ದೇವರಿಂದ ಬೇರ್ಪಡುವಂತಹ ನಮ್ಮ ಎಲ್ಲಾ ಪಾಪಗಳಿಂದ ಕ್ಷಮಾಪಣೆಯನ್ನು ಹೊಂದಿಕೊಂಡು, ಬೇರೆಯವರನ್ನು ಕ್ಷಮಿಸುವುದಕ್ಕೆ ನಿರಾಕರಿಸುವುದು, ಎಂತಹ ಮೂರ್ಖತನವಲ್ಲವೇ? ನಾವು ದೇವರನ್ನು "ನನ್ನನ್ನು ಕ್ಷಮಿಸು, ಯೇಸು ಕ್ರಿಸ್ತನ ಮೂಲಕ ನನಗೆ ಕರುಣೆ ತೋರಿಸು" ಎಂದು ಮೊರೆಯಿಟ್ಟು ಕೇಳುತ್ತೇವೆ, ಮತ್ತು ಕ್ಷಮಾಪಣೆಯನ್ನು ಹೊಂದಿಕೊಳ್ಳುತ್ತೇವೆ, ತದನಂತರ ಬೇರೆಯವರು ಮಾಡಿದಂತಹ ಒಂದು ಚಿಕ್ಕ ತಪ್ಪನ್ನು ದೊಡ್ಡದಾಗಿಸಿ ಅವರನ್ನು ಕ್ಷಮಿಸಲು ನಿರಾಕರಿಸುತ್ತೇವೆ. ಇದು ನೀಚತನವೆಂದು ದೇವರು ಹೇಳುತ್ತಾನೆ.

ಹಿಂದೆ ನಾನು ಒಂದು ಸಭೆಗೆ ಸಭಾಪಾಲಕನಾಗಿದ್ದೆ ಮತ್ತು ಆ ಸಭೆಯಲ್ಲಿ ಮುಂದಾಗುವ ಸಂಗತಿಗಳನ್ನು ತಿಳಿಯಬಲ್ಲವಳಾಗಿದ್ದ ಒಬ್ಬ ಯೌವನಸ್ಥ ಸ್ತ್ರೀ ಇದ್ದಳು. ಒಂದು ದಿನ ಆಕೆ ನನ್ನ ಬಳಿ ಬಂದು, "ಮುಂದೆ ಸಂಭವಿಸಲಿರುವ ಸಂಗತಿಗಳ ಕುರಿತಾಗಿ ಮತ್ತು ಭವಿಷ್ಯದಲ್ಲಿನ ಸಂಗತಿಗಳ ಕುರಿತಾಗಿ ನನಗೆ ತಿಳಿಸುತ್ತಿರುವುದು ಪವಿತ್ರಾತ್ಮನೇ ಹೌದೋ? ಜನರು ಯಾವಾಗ ಸಾಯುತ್ತಾರೆ, ಯಾರಿಗೆ ಕಾರಿನ ಅಪಘಾತ ಸಂಭವಿಸುತ್ತದೆ, ಈ ವಿಧವಾದ ವಿಷಯಗಳು ನನಗೆ ತಿಳಿದಿವೆ" ಎಂದು ಹೇಳಿದಳು. ಆಗ ನಾನು, "ನಿಮಗೆ ನನ್ನ ಉತ್ತರ ಇಷ್ಟವಾಗದಿರಬಹುದು, ಆದರೆ ಇದು ಪವಿತ್ರಾತ್ಮನಿಂದ ಬರುತ್ತಿರುವುದು ಎಂದು ನಾನು ನಂಬುವುದಿಲ್ಲ. ಇದು ಕಣಿ ಹೇಳುವ ಆತ್ಮ ಎಂದು ನಾನು ಭಾವಿಸುತ್ತೇನೆ, ಅಂದರೆ ಅಪೊಸ್ತಲರ ಕೃತ್ಯಗಳಲ್ಲಿ

ಅಪೊಸ್ತಲನಾದ ಪೌಲನನ್ನು ಹಿಂಬಾಲಿಸಿದ ಅದೇ ಆತ್ಮವಾಗಿದೆ ಎಂದು ಭಾವಿಸುತ್ತೇನೆ. ಕೊನೆಗೆ ಪೌಲನು ಅದನ್ನು ಗದರಿಸಿದನು ಮತ್ತು ಇದು ಆ ಹುಡುಗಿಯಿಂದ ಹೊರಗೆ ಬರುವಂತೆ ಅದಕ್ಕೆ ಆಜ್ಞಾಪಿಸಿದನು, ನಂತರ ಆ ಹುಡುಗಿಯು ಕಣಿ ಹೇಳುವ ಶಕ್ತಿಯನ್ನು ಕಳೆದುಕೊಂಡಳು" ಎಂದೆನು. ನಂತರ ಆಕೆಗೆ "ನಾನು ದೇವರಲ್ಲ" ಎಂದು ಹೇಳುತ್ತಾ, "ನೀವು ಯೇಸುವಿನ ಬಳಿ, 'ಕರ್ತನೇ, ನಾನು ರಕ್ಷಣೆ ಹೊಂದುವುದಕ್ಕಿಂತಲೂ ಮೊದಲು ನನಗೆ ಮುಂದಾಗುವುದನ್ನು ತಿಳಿಸುತ್ತಿದ್ದುದು ಹಾಗೂ ನನಗೆ ಮಾಹಿತಿಯನ್ನು ನೀಡುತ್ತಿದ್ದು ಏನು? ಇದು ಪವಿತ್ರಾತ್ಮನೋ ಅಥವಾ ಬೇರೆಯೋ' ಎಂದು ಕೇಳಿ" ಎಂದು ಹೇಳಿದೆನು. ಇದಾದ ಮೇಲೆ ಒಂದು ದಿನ ಆಕೆ ನನ್ನ ಬಳಿಗೆ ಹಿಂತಿರುಗಿ, "ನಾನು ಕರ್ತನೊಂದಿಗೆ ಇದರ ಕುರಿತಾಗಿ ಮಾತನಾಡಿದೆನು, ಇದು ಎಲ್ಲಾ ಸರಿಯಾಗಿದೆ ಎಂದು ನಾನು ಭಾವಿಸುತ್ತೇನೆ" ಅಂದಳು. ಆಗ ನಾನು "ಕರ್ತನು ಏನು ತಿಳಿಸಿರುವನೋ ಅದು ಸರಿಯಾಗಿರುತ್ತದೆ – ಏಕೆಂದರೆ ನಾನು ಆ ಮಹಾ ಕುರುಬನಲ್ಲ" ಎಂದೆನು.

ಇದು 1986ಕ್ಕಿಂತಲೂ ಮೊದಲೇ ನಡೆದದ್ದು, ಆದರೆ 1986ರಲ್ಲಿ ಏನು ಸಂಭವಿಸಿತೆಂದು ಬಲ್ಲಿರೇ? ಚಾಲೆಂಜರ್ ಎಂಬ ಒಂದು ಗಗನ ನೌಕೆಯು ನಮ್ಮ ದೇಶದಲ್ಲಿತ್ತು, ಮತ್ತು ಎಂಟು ಮಂದಿ ಇದರಲ್ಲಿ ಬಾನಿಗೆ ಹಾರಿದರು. ಅದರಲ್ಲಿ ಒಬ್ಬ ಮಹಿಳೆ, ಶಾಲಾ ಶಿಕ್ಷಕಿಯಾಗಿದ್ದರು. ಮೇಲೆ ತಿಳಿಸಿರುವ ಈ ಯೌವನಸ್ಥ ಹುಡುಗಿಯು ದೂರದರ್ಶನದಲ್ಲಿ ಇದನ್ನು ನೋಡುತ್ತಿರುವಾಗ, ಅಲ್ಲಿದ್ದ ಮಹಿಳೆಯು, "ನಾಳೆ ನಾನು ಚಾಲೆಂಜರ್‌ನಲ್ಲಿ ಪ್ರಯಾಣಿಸಲಿದ್ದೇನೆ" ಎಂದು ಹೇಳುತ್ತಾ ಇದರ ಕುರಿತಾಗಿ ಮಾತನಾಡುತ್ತಿದ್ದಳು. ಆಗ ಒಂದು ದುರಾತ್ಮವು ಈ ಯೌವನಸ್ಥೆಯೊಂದಿಗೆ ಮಾತನಾಡಿ, "ಆಕೆ ಸಾಯುತ್ತಾಳೆ, ಆಕೆ ಸಾಯುತ್ತಾಳೆ" ಎಂದು ಹೇಳಿತು. ಮರುದಿನ ಆ ಚಾಲೆಂಜರ್ ಎಂಬ ಗಗನನೌಕೆಯು ಬಾನಂಗಳಕ್ಕೆ ಹಾರಿದಾಗ, ಇಡೀ ಲೋಕವು ಇದನ್ನು ನೋಡುತ್ತಿರುವಾಗಲೇ ಆ ಗಗನನೌಕೆಯು ಸ್ಫೋಟಗೊಂಡಿತು ಹಾಗೂ ಆ ಗಗನನೌಕೆಯು ನಾಶವಾಯಿತು. ನಂತರ ಆ ಯೌವನಸ್ಥೆಯು ನನ್ನ ಬಳಿಗೆ ಬಂದು, "ಸಹೋದರ ಡಾನ್‌ರವರೇ, ನನ್ನೊಂದಿಗೆ ಮಾತನಾಡುತ್ತಿರುವುದು ಮತ್ತು ನನಗೆ ಮಾಹಿತಿ ನೀಡುತ್ತಿರುವಂತಹ ಪವಿತ್ರಾತ್ಮನಾಗಿಲ್ಲದಿರಬಹುದು. ಹಾಗಾಗಿ ನನಗೋಸ್ಕರ ಪ್ರಾರ್ಥಿಸುವಿರೇ?" ಎಂದು ಕೇಳಿದಳು. ಆ ದಿನದ ರಾತ್ರಿಯ ಕೂಟದ ನಂತರ ಎಲ್ಲರೂ ಹೊರಟ ನಂತರ, ನಾನು ಆಕೆಯ ಕೈಯನ್ನು ಹಿಡಿದು, "ಕಣಿ ಹೇಳುವ ಅಶುದ್ಧ ಆತ್ಮವೇ, ಈಕೆಯನ್ನು ಬಿಟ್ಟು ಹೊರಗೆ ಬಾ!" ಎಂದು ಹೇಳಿದೆನು. ಏನೂ ಸಂಭವಿಸಲಿಲ್ಲ. ಒಮ್ಮೆ ಯೇಸುವಿನ ಶಿಷ್ಯರು ಒಬ್ಬ ಯೌವನಸ್ಥನಲ್ಲಿದ್ದ ದುರಾತ್ಮವನ್ನು ಓಡಿಸಲು ಪ್ರಯತ್ನಿಸಿದರು, ಆದರೆ ಸಾಧ್ಯವಾಗಲಿಲ್ಲ. ಆಗ ಯೇಸು "ಆ ಯೌವನಸ್ಥನನ್ನು ನನ್ನ ಬಳಿಗೆ ಕರೆತನ್ನಿ" ಅಂದನು. ಹಾಗಾಗಿ ನಾನು, "ಕರ್ತನೇ, ಇಲ್ಲಿ ಏನು ಸಂಭವಿಸುತ್ತಿದೆ ಎಂಬುದು ನನಗೆ ತಿಳಿದಿದೆ ಎಂದು ನಾನು ಭಾವಿಸಿದ್ದೆ, ಆದರೆ ನಾನು ಈಕೆಯನ್ನು ನಿನ್ನ ಬಳಿಗೆ ಕರೆತರುತ್ತೇನೆ. ಏನು ಸಂಭವಿಸುತ್ತಿದೆ ಎಂಬುದನ್ನು ನಮಗೆ ತೋರಿಸು" ಅಂದೆನು. ನಮ್ಮೊಂದಿಗೆ ನನ್ನ ಪತ್ನಿಯೂ ಪ್ರಾರ್ಥಿಸುತ್ತಿದ್ದಳು, ಆಗ ದೇವರು ಆಕೆಗೆ ಒಂದು ಜ್ಞಾನವಾಕ್ಯವನ್ನು ನೀಡಿದನು. ಆಕೆಯು "ಈ ವಿಷಯವು ಈಕೆಯ ತಾಯಿಯೊಂದಿಗೆ ಸಂಬಂಧವನ್ನು ಹೊಂದಿರುವುದಾಗಿದೆ" ಅಂದಳು.

ನಾನು ಆ ಸ್ತ್ರೀಗೆ, "ನೀನು ನಿನ್ನ ತಾಯಿಯನ್ನು ಕ್ಷಮಿಸುವೆಯೋ?" ಎಂದು ಕೇಳಿದೆನು. ನಾನು ಹೀಗೆ ಹೇಳಿದ ಆ ಕ್ಷಣದಲ್ಲಿಯೇ, ಆಕೆಯಿಂದ ಒಂದು ಧ್ವನಿಯೂ ಚೀರುತ್ತಾ, "ಇಲ್ಲಾ! ಆಕೆ ನನ್ನನ್ನು ಬಿಟ್ಟುಕೊಟ್ಟಳು!" ಎಂದು ಹೇಳಿದಳು. ಆಗ ನಾನು "ಅಶುದ್ಧ ಆತ್ಮವೇ, ನಿನ್ನನ್ನು ಬಂಧಿಸುತ್ತೇನೆ" ಎಂದು ಹೇಳಿ, ಪುನಃ ಆಕೆಗೆ, "ನಿನ್ನ ತಾಯಿಯನ್ನು ಕ್ಷಮಿಸುವೆಯೋ" ಎಂದು ಕೇಳಿದೆನು. ಆಗ ದೇವರ ಕೃಪೆಯಿಂದ ಮತ್ತು ಆತನ ಸಹಾಯದಿಂದ ಆಕೆ ತನ್ನ ತಾಯಿಯನ್ನ ಕ್ಷಮಿಸಿದಳು ಮತ್ತು ಆಕೆಯನ್ನು ಹೋಗುವಂತೆ ಬಿಟ್ಟುಕೊಟ್ಟಳು. ಇದನ್ನು ಆಕೆಯು ಕ್ಷಮಿಸುವೆನು ಎನ್ನುವ ನಿರ್ಧಾರ ಮಾಡುವುದರ ಮೂಲಕ ಬಿಟ್ಟುಕೊಟ್ಟಳು, ನಂತರ ಆಕೆ ತನ್ನ ಬಿಡುಗಡೆಯನ್ನು ಹಾಗೂ ಸ್ವತಂತ್ರವನ್ನು ಪಡೆದಳು.

ಮತ್ತಾಯ 18ರಲ್ಲಿ ಯೇಸು ಹೇಳಿದ ಆ ಸಾಮ್ಯದಂತೆ, ಪರಲೋಕದ ತಂದೆಯಿಂದ ನಮ್ಮ ಅತಿದೊಡ್ಡ ಪಾಪದ ಸಾಲದಿಂದ ಕ್ಷಮಾಪಣೆಯನ್ನು ಹೊಂದಿದವರಾದ ನಾವು ಪೂರ್ಣ ಹೃದಯದಿಂದ ಕ್ಷಮಿಸದೇ ಹೋದರೆ, ನಮ್ಮನ್ನು ಪೀಡಿಸುವವರ ಕೈಗಳಿಗೆ ಒಪ್ಪಿಸಲಾಗುವುದು. ಪೀಡಿಸುವವರು ಅಂದರೆ ಏನು? ಇದು ಎಲ್ಲಾ ವಿಧವಾದ ಸಂಗತಿಗಳನ್ನು ಒಳಗೊಂಡಿರಬಹುದು – ಅಂದರೆ ದುರಾತ್ಮನ ಬಲವಾದ ಹಿಡಿತಗಳು, ಕುಗ್ಗುವಿಕೆ, ರೋಗ, ಖಿನ್ನತೆ, ಖಾಯಿಲೆ ಮತ್ತು ಇನ್ನಿತರ ಅನೇಕ ಸಂಗತಿಗಳು. ಇದರ ಮೂಲ ಬೇರು ಕ್ಷಮೆನೀಡದಿರುವುದೇ ಆಗಿದೆ. ನಾವು ಕ್ಷಮಾಪಣೆ ಹೊಂದಿದ ನಂತರ ಇತರರರನ್ನು ಕ್ಷಮಿಸದಿರುವುದು, ಸೈತಾನನಿಗೆ ನಮ್ಮ ಜೀವನದಲ್ಲಿ ಎಡೆಮಾಡಿಕೊಟ್ಟಂತಾಗುವುದು. ನಾವು ಕ್ಷಮಿಸುವ ಆಯ್ಕೆಯನ್ನು ಮಾಡಬೇಕೆಂದು ಸತ್ಯವೇದವು ಹೇಳುತ್ತದೆ. ಕರ್ತನ ಪ್ರಾರ್ಥನೆಯಲ್ಲಿ (ಮತ್ತಾಯ 6:9–11), ತಂದೆಯು ನಮ್ಮನ್ನು ಕ್ಷಮಿಸಿದ ಹಾಗೆ ನಾವು ಇತರರನ್ನು ಕ್ಷಮಿಸಬೇಕೆಂದು ಯೇಸು ಹೇಳಿರುವನು.

ಮಾರ್ಕ 11:25–26, ನಾವು ಪ್ರಾರ್ಥಿಸುವಾಗ, ನಮ್ಮಲ್ಲಿ ಬೇರೆಯವರ ವಿರುದ್ಧವಾಗಿ ಏನಾದರೂ ಇದ್ದರೆ, ನಾವು ಅವರನ್ನು ಕ್ಷಮಿಸಬೇಕೆಂದು ತಿಳಿಸುತ್ತದೆ. ಇದರ ಅರ್ಥವೇನು? ಅಕ್ಷಮಾಪಣೆಯು ನಮ್ಮ ಹೃದಯಗಳಲ್ಲಿ ಇನ್ನೆಷ್ಟು ದೀರ್ಘಕಾಲ ಉಳಿಯಬೇಕು? ಇದರ ಕುರಿತಾಗಿ ನಾವು ಕರ್ತನ ಬಳಿ ಹೇಳಿಕೊಳ್ಳುವ ತನಕ ಅಕ್ಷಮಾಪಣೆ ಇರುತ್ತದೆ. ಬೇರೆಯವರ ವಿರುದ್ಧವಾಗಿ ನಮ್ಮಲ್ಲಿ ಕೊಂಚಮಟ್ಟಿನ ಅಕ್ಷಮಾಪಣೆ ಇದ್ದರೂ ಸಹ, ಅಂತವರನ್ನು ನಾವು ಬಿಡುಗಡೆ ಮಾಡುತ್ತಾ, "ದೇವರೇ, ಇಂದು ನಾನು ಅವರನ್ನು ಬಿಟ್ಟುಕೊಡುತ್ತೇನೆ. ನಾನು ಅವರನ್ನು ಕ್ಷಮಿಸುತ್ತಿದ್ದೇನೆ. ನೀನು ನನ್ನ ಅದೆಷ್ಟೋ ದೊಡ್ಡ ಪಾಪಗಳನ್ನು ಕ್ಷಮಿಸಿರುವುದರ ನಿಮಿತ್ತ ನಾನು ಈ ಆಯ್ಕೆಯನ್ನು ಮಾಡುತ್ತಿರುವೆನು" ಎಂದು ಹೇಳಿರಿ.

*"ಕರ್ತನೇ, ತಮ್ಮ ಜೀವನದಲ್ಲಿ ಅಕ್ಷಮಾಪಣೆಯನ್ನು ಹೊಂದಿ ಈ ಪಾಠವನ್ನು ಓದುತ್ತಿರುವ ಪ್ರತಿಯೊಬ್ಬರಿಗಾಗಿ ನಾನು ಪ್ರಾರ್ಥಿಸುತ್ತಿದ್ದೇನೆ, ಈ ಕ್ಷಣದಲ್ಲಿ ಇವರು ಆ ವ್ಯಕ್ತಿಯನ್ನು ಬಿಡುಗಡೆ ಮಾಡುವ ನಿರ್ಧಾರವನ್ನು ಮಾಡಲಿ, ಅವರು ಬದುಕಿದ್ದರೂ ಅಥವಾ ಸತ್ತಿದ್ದರೂ ಅವರನ್ನು ಕ್ಷಮಿಸಲಿ. ಅಕ್ಷಮಾಪಣೆಯು ಹೊರಟುಹೋಗುವಂತೆ ಬಿಟ್ಟುಬಿಡಲು*

*ಮತ್ತು ಕರ್ತನೇ, ಇಂದು ನಿನ್ನ ಬಲದಿಂದ ಮತ್ತು ನಿನ್ನ ಕೃಪೆಯಿಂದ ಆ ನೋವಿನ ಗಾಯವು ವಾಸಿಯಾಗಲಿ. ನಿನಗೆ ವಂದಿಸುತ್ತೇನೆ, ಯೇಸುವಿನ ನಾಮದಲ್ಲಿ, ಆಮೆನ್."*

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಮತ್ತಾಯ 18:21 ಓದಿರಿ. ಎಷ್ಟು ಬಾರಿ ಕ್ಷಮಿಸಬೇಕೆಂದು ಪೇತ್ರನು ಹೇಳಿದನು?

   **ಮತ್ತಾಯ 18:21–27** – *ಆಗ ಪೇತ್ರನು ಆತನ ಬಳಿಗೆ ಬಂದು – ಸ್ವಾಮೀ, ನನ್ನ ಸಹೋದರನು ನನಗೆ ತಪ್ಪು ಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ ಎಂದು ಕೇಳಲು [22] ಯೇಸು ಅವನಿಗೆ – ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ. [23] ಆದದರಿಂದ ಪರಲೋಕ ರಾಜ್ಯವು ತನ್ನ ಸೇವಕರಿಂದ ಲೆಕ್ಕವನ್ನು ತೆಗೆದುಕೊಳ್ಳಬೇಕೆಂದಿದ್ದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ. [24] ಅವನು ಲೆಕ್ಕಾ ತೆಗೆದುಕೊಳ್ಳುವದಕ್ಕೆ ಪ್ರಾರಂಭ ಮಾಡಿದಾಗ ಕೋಟ್ಯಂತರ ಸಾಲಾ ಮಾಡಿದವನೊಬ್ಬನನ್ನು ಅವನ ಬಳಿಗೆ ಹಿಡತಂದರು [25] ಆ ಸಾಲಾ ತೀರಿಸುವದಕ್ಕೆ ಅವನಲ್ಲಿ ಏನೂ ಇಲ್ಲದ್ದರಿಂದ ಅವನ ಒಡೆಯನು ಅವನನ್ನೂ ಅವನ ಹೆಂಡತಿ ಮಕ್ಕಳನ್ನೂ, ಅವನ ಬದುಕೆಲ್ಲವನ್ನೂ ಮಾರಿ ಅದನ್ನು ತೀರಿಸಬೇಕೆಂದು ಅಪ್ಪಣೆ ಮಾಡಿದನು. [26] ಆ ಸೇವಕನು ಅವನ ಕಾಲಿಗೆ ಬಿದ್ದು ಅವನಿಗೆ – ಒಡೆಯನೇ, ಸ್ವಲ್ಪ ತಾಳಿಕೋ, ನಿನ್ನದೆಲ್ಲಾ ನಾನು ಕೊಟ್ಟು ತೀರಿಸುತ್ತೇನೆಂದು ನಮಸ್ಕರಿಸಲಾಗಿ [27] ಆ ಸೇವಕನ ಒಡೆಯನು ಕನಿಕರಪಟ್ಟು ಅವನನ್ನು ಬಿಡಿಸಿ ಆ ಸಾಲವನ್ನೆಲ್ಲಾ ಬಿಟ್ಟುಬಿಟ್ಟನು.*

2. ಮತ್ತಾಯ 18:22 ಓದಿರಿ. ನಾವು ಎಷ್ಟು ಬಾರಿ ಕ್ಷಮಿಸಬೇಕೆಂದು ಯೇಸು ಹೇಳಿದನು?

3. ಮತ್ತಾಯ 18:22–24 ಓದಿರಿ. ಈ ಸೇವಕನು ತನ್ನ ಯಜಮಾನನಿಗೆ ಎಷ್ಟು ಹಣವನ್ನು ಸಾಲವಾಗಿ ತೀರಿಸಬೇಕಾಗಿತ್ತು?

4. ಮತ್ತಾಯ 18:25 ಓದಿರಿ. ಈ ಸೇವಕನು ತನ್ನಲ್ಲಿ ಹಣವಿಲ್ಲದ್ದರಿಂದ ಸಾಲವನ್ನು ತೀರಿಸದಿದ್ದರೆ, ಇದರ ಪರಿಣಾಮ ಏನಾಗುತ್ತಿತ್ತು?

5. ಮತ್ತಾಯ 18:26 ಓದಿರಿ. ಸೇವಕನ ಕೋರಿಕೆ ಏನಾಗಿತ್ತು?

   ಅವನಿಗೆ ತನ್ನ ಸಾಲವನ್ನು ಹಿಂತಿರುಗಿಸಲು ಸಾಧ್ಯವಿತ್ತೇ?

6. ಮತ್ತಾಯ 18:27ನ್ನು ಓದಿರಿ. ಇಲ್ಲಿ ಯಜಮಾನನು ತನ್ನ ಸೇವಕನ ಕುರಿತಾಗಿ ಎಂತಹ ಮನೋಭಾವನೆಯನ್ನು ತೋರ್ಪಡಿಸಿದನು?

   ದೇವರು ನಮ್ಮ ಕುರಿತಾಗಿ ಮತ್ತು ನಮ್ಮ ಸಾಲದ (ಪಾಪದ) ಕುರಿತಾಗಿ ಎಂತಹ ಮನೋಭಾವನೆಯನ್ನು ತೋರಿಸುವವನಾಗಿದ್ದಾನೆ?

7. ಮತ್ತಾಯ 18:28 ಓದಿರಿ. ತನ್ನ ಸಾಲದಿಂದ ಕ್ಷಮಾಪಣೆ ಹೊಂದಿದ್ದ ಸೇವಕನಿಗೆ ಮತ್ತೊಬ್ಬ ಜೊತೆ ಸೇವಕನು ಎಷ್ಟು ಹಣವನ್ನು ಸಾಲವಾಗಿ ನೀಡಬೇಕಾಗಿತ್ತು?

**ಮತ್ತಾಯ 18:28–35** – *ತರುವಾಯ ಆ ಸೇವಕನು ಹೊರಕ್ಕೆ ಬಂದು ತನಗೆ ನೂರು ಹಣಾ ಕೊಡಬೇಕಾದ ಒಬ್ಬ ಜೊತೇಸೇವಕನನ್ನು ಕಂಡು ಅವನನ್ನು ಹಿಡಿದು – ಎಲಾ, ನನ್ನ ಸಾಲ ತೀರಿಸು ಎಂದು ಹೇಳಿ ಕುತ್ತಿಗೆ ಹಿಸಿಕಿದನು. [29] ಆಗ ಅವನ ಜೊತೇ ಸೇವಕನು ಅವನ ಕಾಲಿಗೆ ಬಿದ್ದು – ಸ್ವಲ್ಪ ತಾಳಿಕೋ, ತೀರಿಸುತ್ತೇನೆ ಎಂದು ಬೇಡಿಕೊಂಡನು. [30] ಆದರೆ ಅವನು ಒಪ್ಪದೆ ಹೊರಟು ಹೋಗಿ ಆ ಸಾಲಾ ತೀರಿಸುವ ತನಕ ಅವನನ್ನು ಸೆರೆಮನೆಯಲ್ಲಿ ಹಾಕಿಸಿದನು. [31] ಅವನ ಜೊತೇ ಸೇವಕರು ನಡೆದ ಸಂಗತಿಯನ್ನು ನೋಡಿ ಬಹಳವಾಗಿ ದುಃಖಪಟ್ಟು ಒಡೆಯನ ಬಳಿಗೆ ಬಂದು ನಡೇದಿದ್ದನ್ನೆಲ್ಲಾ ತಿಳಿಸಿದನು. [32] ಆಗ ಅವನ ಒಡೆಯನು ಅವನನ್ನು ಕರಸಿ – ಎಲಾ ನೀಚನೇ, ನೀನು ನನ್ನನ್ನು ಬೇಡಿಕೊಂಡದ್ದರಿಂದ ಆ ಸಾಲವನ್ನೆಲ್ಲಾ ನಾನು ಬಿಟ್ಟುಬಿಟ್ಟೆನಲ್ಲಾ; [33] ನಾನು ನಿನ್ನನ್ನು ಕರುಣಿಸಿದ ಹಾಗೆ ನೀನು ಸಹ ನಿನ್ನ ಜೊತೇ ಸೇವಕನನ್ನು ಕರುಣಿಸಬಾರದಾಗಿತ್ತೇ ಎಂದು ಹೇಳಿ [34] ಸಿಟ್ಟುಮಾಡಿ ತನಗೆ ಕೊಡಬೇಕಾದ ಸಾಲವನ್ನು ತೀರಿಸುವ ತನಕ ಪೀಡಿಸುವವರ ಕೈಗೆ ಒಪ್ಪಿಸಿದನು. [35] ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆ ಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು ಅಂದನು.*

8. ಮತ್ತಾಯ 18:28 ಓದಿರಿ. ತನ್ನ ಜೊತೆ ಸೇವಕನೊಂದಿಗೆ ಈ ಸೇವಕನ ಮನೋಭಾವನೆ ಹೇಗಿತ್ತು?

9. ಮತ್ತಾಯ 18:29–30 ಓದಿರಿ. ಈ ಸೇವಕನು ತನ್ನ ಜೊತೆ ಸೇವಕನಿಗೆ ಏನು ಮಾಡಿದನು?

10. ಮತ್ತಾಯ 18:31–33 ಓದಿರಿ. ಈ ಅಕ್ಷಮಾಪಣೆಯ ಸೇವಕನನ್ನು ಯಜಮಾನನು ಏನೆಂದು ಕರೆದನು?

11. ಮತ್ತಾಯ 18:33 ಓದಿರಿ. ಈ ಸೇವಕನು ಏನು ಮಾಡಬಹುದಾಗಿತ್ತೆಂದು ಯಜಮಾನನು ಅವನಿಗೆ ತಿಳಿಸಿದನು?

12. ಮತ್ತಾಯ 18:34 ಓದಿರಿ. ಏನು ನಡೆದಿತ್ತು ಎಂಬುದರ ಕುರಿತಾಗಿ ಯಜಮಾನನಿಗೆ ತಿಳಿದಾಗ, ಅವನಿಗೆ ಯಾವ ರೀತಿಯ ಅನಿಸಿಕೆ ಉಂಟಾಯಿತು?

13. ಮತ್ತಾಯ 18:34 ಓದಿರಿ. ಈ ಅಕ್ಷಮಾಪಣೆಯ ಸೇವಕನ ಕ್ರಿಯೆಗಳಿಂದ (ಅಥವಾ ನಿರ್ಧಾರದಿಂದ) ಮೊದಲು ದೊರೆತಿದ್ದ ಕ್ಷಮಾಪಣೆಗೆ ತಪ್ಪಾಗಿ ನಡೆದುಕೊಂಡಿದ್ದರಿಂದ ದಂಡವನ್ನು ತೆರಬೇಕಾಯಿತೇ?

14. ಮತ್ತಾಯ 18:35 ಓದಿರಿ. ಈ ಸಾಮ್ಯದ ಉದ್ದೇಶವೇನಾಗಿದೆ?

# ಉತ್ತರಗಳು

1. ಮತ್ತಾಯ 18:21 ಓದಿರಿ. ಎಷ್ಟು ಬಾರಿ ಕ್ಷಮಿಸಬೇಕೆಂದು ಪೇತ್ರನು ಹೇಳಿದನು?

   **ಏಳು ಸಾರಿ**

2. ಮತ್ತಾಯ 18:22 ಓದಿರಿ. ನಾವು ಎಷ್ಟು ಬಾರಿ ಕ್ಷಮಿಸಬೇಕೆಂದು ಯೇಸು ಹೇಳಿದನು?

   **ನಾನೂರ ತೊಂಬತ್ತು (ಅಥವಾ ಕೊನೆಯಿಲ್ಲದೆ, ಸತತವಾಗಿ)**

3. ಮತ್ತಾಯ 18:23–24 ಓದಿರಿ. ಈ ಸೇವಕನು ತನ್ನ ಯಜಮಾನನಿಗೆ ಎಷ್ಟು ಹಣವನ್ನು ಸಾಲವಾಗಿ ತೀರಿಸಬೇಕಾಗಿತ್ತು?

   **ಕೋಟ್ಯಾಂತರ ಹಣ ಅಥವಾ ಬಹುಶಃ ತೀರಿಸಲು ಸಾಧ್ಯವಾಗದಷ್ಟು ಮೊತ್ತ**

4. ಮತ್ತಾಯ 18:25 ಓದಿರಿ. ಈ ಸೇವಕನು ತನ್ನಲ್ಲಿ ಹಣವಿಲ್ಲದ್ದರಿಂದ ಸಾಲವನ್ನು ತೀರಿಸದಿದ್ದರೆ, ಇದರ ಪರಿಣಾಮ ಏನಾಗುತ್ತಿತ್ತು?

   **ಅವನನ್ನೂ, ಅವನ ಹೆಂಡತಿ ಮಕ್ಕಳನ್ನೂ ಅವನ ಬದುಕೆಲ್ಲವನ್ನೂ ಮಾರಿಕೊಳ್ಳಬೇಕಾಗಿತ್ತು**

5. ಮತ್ತಾಯ 18:26 ಓದಿರಿ. ಸೇವಕನ ಕೋರಿಕೆ ಏನಾಗಿತ್ತು?

   **ಯಜಮಾನನು ತನಗೆ ತಾಳ್ಮೆ ತೋರಿಸಬೇಕೆಂತಲೂ ಹಾಗೂ ಅವನು ಎಲ್ಲಾ ಸಾಲವನ್ನೂ ಹಿಂತಿರುಗಿಸುವೆನು ಎಂಬುದಾಗಿತ್ತು**

   ಅವನಿಗೆ ತನ್ನ ಸಾಲವನ್ನು ಹಿಂತಿರುಗಿಸಲು ಸಾಧ್ಯವಿತ್ತೇ?

   **ಬಹುಶಃ ಇಲ್ಲ**

6. ಮತ್ತಾಯ 18:27 ಓದಿರಿ. ಇಲ್ಲಿ ಯಜಮಾನನು ತನ್ನ ಸೇವಕನ ಕುರಿತಾಗಿ ಎಂತಹ ಮನೋಭಾವನೆಯನ್ನು ತೋರ್ಪಡಿಸಿದನು?

   **ಕನಿಕರ ಮತ್ತು ಕ್ಷಮಾಪಣೆ ತುಂಬಿದವನಾಗಿ**

ದೇವರು ನಮ್ಮ ಕುರಿತಾಗಿ ಮತ್ತು ನಮ್ಮ ಸಾಲದ (ಪಾಪದ) ಕುರಿತಾಗಿ ಎಂತಹ ಮನೋಭಾವನೆಯನ್ನು ತೋರಿಸುವವನಾಗಿದ್ದಾನೆ?

**ಕನಿಕರ ಮತ್ತು ಕ್ಷಮಾಪಣೆ ತುಂಬಿದವನಾಗಿ**

7. ಮತ್ತಾಯ 18:28 ಓದಿರಿ. ತನ್ನ ಸಾಲದಿಂದ ಕ್ಷಮಾಪಣೆ ಹೊಂದಿದ್ದ ಸೇವಕನಿಗೆ ಮತ್ತೊಬ್ಬ ಜೊತೆ ಸೇವಕನು ಎಷ್ಟು ಹಣವನ್ನು ಸಾಲವಾಗಿ ನೀಡಬೇಕಾಗಿತ್ತು?

**ನೂರು ಹಣ (ಒಂದು ದಿನದ ಸಂಬಳ)**

8. ಮತ್ತಾಯ 18:28 ಓದಿರಿ. ತನ್ನ ಜೊತೆ ಸೇವಕನೊಂದಿಗೆ ಈ ಸೇವಕನ ಮನೋಭಾವನೆ ಹೇಗಿತ್ತು?

**ತಾಳ್ಮೆ ತೋರಿಸದಿರುವುದು, ಹಿಂಸೆ ಮತ್ತು ಅಕ್ಷಮಾಪಣೆ**

9. ಮತ್ತಾಯ 18:29–30 ಓದಿರಿ. ಈ ಸೇವಕನು ತನ್ನ ಜೊತೆ ಸೇವಕನಿಗೆ ಏನು ಮಾಡಿದನು?

**ಸಾಲಾ ತೀರಿಸುವ ತನಕ ಸೆರೆಮನೆಗೆ ಹಾಕಿಸಿದನು**

10. ಮತ್ತಾಯ 18:31–33 ಓದಿರಿ. ಈ ಅಕ್ಷಮಾಪಣೆಯ ಸೇವಕನನ್ನು ಯಜಮಾನನು ಏನೆಂದು ಕರೆದನು?

**"ಎಲಾ, ನೀಚನೇ!"**

11. ಮತ್ತಾಯ 18:33 ಓದಿರಿ. ಈ ಸೇವಕನು ಏನು ಮಾಡಬಹುದಾಗಿತ್ತೆಂದು ಯಜಮಾನನು ಅವನಿಗೆ ತಿಳಿಸಿದನು?

**ಅವನಿಗೆ ಕರುಣೆ ತೋರಿಸಿದ ಹಾಗೆಯೇ ಈ ಸೇವಕನೂ ಸಹ ತನ್ನ ಜೊತೆಸೇವಕನಿಗೆ ಕರುಣೆಯನ್ನು ತೋರಿಸಿ, ಅವನನ್ನು ಸಾಲದಿಂದ ಬಿಡುಗಡೆಗೊಳಿಸಿ, ಕ್ಷಮಿಸಬಹುದಾಗಿತ್ತು**

12. ಮತ್ತಾಯ 18:34 ಓದಿರಿ. ಏನು ನಡೆದಿತ್ತು ಎಂಬುದರ ಕುರಿತಾಗಿ ಯಜಮಾನನಿಗೆ ತಿಳಿದಾಗ, ಅವನಿಗೆ ಯಾವ ರೀತಿಯ ಅನಿಸಿಕೆ ಉಂಟಾಯಿತು?

**ಆತನಿಗೆ ಕೋಪ ಉಂಟಾಯಿತು**

13. ಮತ್ತಾಯ 18:34 ಓದಿರಿ. ಈ ಅಕ್ಷಮಾಪಣೆಯ ಸೇವಕನ ಕ್ರಿಯೆಗಳಿಂದ (ಅಥವಾ ನಿರ್ಧಾರದಿಂದ) ಮೊದಲು ದೊರೆತಿದ್ದ ಕ್ಷಮಾಪಣೆಗೆ ತಪ್ಪಾಗಿ ನಡೆದುಕೊಂಡಿದ್ದರಿಂದ ದಂಡವನ್ನು ತೆರಬೇಕಾಯಿತೇ?

**ಹೌದು**

14. ಮತ್ತಾಯ 18:35 ಓದಿರಿ. ಈ ಸಾಮ್ಯದ ಉದ್ದೇಶವೇನಾಗಿದೆ?

**ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆ ಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು**

# ಪಾಠ 10

# ದಾಂಪತ್ಯ – ಭಾಗ 1

*ಡ್ರೂಣ್ ಕ್ರೊ*

ಇಂದು ನಾವು ದಾಂಪತ್ಯದ ಕುರಿತು ಮಾತನಾಡೋಣ. ಮೊಟ್ಟಮೊದಲು, ನಾನು ನಿಮಗೆ ಕೆಲವು ಅಂಕಿ ಅಂಶಗಳನ್ನು ಕೊಡಲಿಚ್ಛಿಸುತ್ತೇನೆ: 75%ರಷ್ಟು ಕುಟುಂಬಗಳಿಗೆ ಯಾವುದೇ ರೀತಿಯ ಆಪ್ತಸಮಾಲೋಚನೆ, ಮಾರ್ಗದರ್ಶನದ ಅಗತ್ಯವಿರುತ್ತದೆ. ಎರಡರಲ್ಲಿ ಒಂದು ಮದುವೆ ವಿಚ್ಛೇನದಲ್ಲಿ ಕೊನೆಗೊಳ್ಳುತ್ತದೆ. ಶೇಕಡ 50ರಷ್ಟು ಮದುವೆಗಳ ಮೊದಲ ಐದು ವರ್ಷಗಳೊಳಗೆ ದಂಪತಿಗಳಲ್ಲೊಬ್ಬರು ಅನೈತಿಕವಾಗಿ ನಡೆದುಕೊಂಡಿರುತ್ತಾರೆ. ಕ್ರೈಸ್ತವಲಯದಲ್ಲಿಯೂ ಶೇಕಡ 30ರಷ್ಟು ಸೇವಕರು ಸಭೆಯ ಯಾವುದಾದರೂ ಸದಸ್ಯರೊಂದಿಗೆ ಅಸಮಂಜಸವಾದ ಸಂಬಂಧವನ್ನು ಹೊಂದಿರುತ್ತಾರೆ. ಈ ಅಂಕಿಅಂಶಗಳಲ್ಲಿ ಸ್ವಲ್ಪವಾದರೂ ಸತ್ಯವಿದೆ ಎನ್ನುವುದಾದರೂ ನಾವು ಬೈಬಲ್ಲಿನ ಸಿದ್ಧಾಂತಗಳನ್ನು ಅರ್ಥಮಾಡಿಕೊಳ್ಳಲಿಲ್ಲವೆಂದೇ ತೋರುತ್ತದೆ. ನಾವೀಗ ದಾಂಪತ್ಯ, ಮತ್ತು ದೇವರು ಅದರ ಕುರಿತು ಏನು ಹೇಳುತ್ತಾನೆ – ಮತ್ತು ಆ ಮೂಲಕ ನಿಮ್ಮ ದಾಂಪತ್ಯ ಸಂಬಂಧವು ಬಲಗೊಳ್ಳುತ್ತದೆ ಎನ್ನುವುದನ್ನು ನೋಡೋಣ.

ಮದುವೆಯು ದೇವರ ಆಲೋಚನೆಯಾಗಿದೆ. ಆತನೇ ಅದನ್ನು ರೂಪಿಸಿದನು. ಆದಿಕಾಂಡ 2:18ರಲ್ಲಿ, *"ಮನುಷ್ಯನು ಒಂಟಿಗನಾಗಿರುವದು ಒಳ್ಳೇದಲ್ಲ; ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು"* ಎಂದು ಬರೆದಿದೆ. ಇದರೊಂದಿಗೆ ಆದಿಕಾಂಡ 1:31ರಲ್ಲಿ, *"ದೇವರು ತಾನು ಉಂಟು ಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು. ಸಾಯಂಕಾಲವೂ ಪ್ರಾತ:ಕಾಲವೂ ಆಗಿ ಆರನೆಯ ದಿನವಾಯಿತು"* ಎಂದು ಹೇಳಿಯದೆ. ಇದು ಪರಿಪೂರ್ಣ ಸೃಷ್ಟಿಯಾಗಿದೆ ಎನ್ನುವುದನ್ನು ನೀವು ನೆನಪಿಡಬೇಕು. ದೇವರು ಬಂದು ಮನುಷ್ಯರೊಡನೆ ಅನ್ಯೋನ್ಯವಾಗಿದ್ದನು. ಅವರೊಂದಿಗೆ ಅದ್ಭುತವಾದ ಸಂಬಂಧವೇರ್ಪಡಿಸಿಕೊಂಡಿದ್ದನು. ಪ್ರತಿದಿನ ಸಾಯಂಕಾಲದ ತಂಗಾಳಿಯಲ್ಲಿ ಆತನು ಆದಾಮನೊಂದಿಗೆ ಆಹ್ಲಾದಕರ ಸಮಯವನ್ನು ಕಳೆಯುತ್ತಿದ್ದನು. ದೇವರೊಂದಿಗೆ ಅನ್ಯೋನ್ಯವಾಗಿದ್ದರೆ ನಮಗೆ ಬೇರೆ ಯಾವುದರ ಅವಶ್ಯಕತೆಯೂ ಇರುವುದಿಲ್ಲ ಎಂದು ಕೆಲವೊಮ್ಮೆ ನಾವು ಅಂದುಕೊಳ್ಳುವುದುಂಟು, ಆದರೆ ಅದು ಹಾಗಲ್ಲ. ಆದಿಕಾಂಡ 1:31ರಲ್ಲಿ ದೇವರು ತನ್ನ ಸೃಷ್ಟಿಯ ಕುರಿತು, *"ಅದು ಬಹಳ ಒಳ್ಳೆಯದು"* ಎಂದು ಹೇಳಿದನು. "ಒಳ್ಳೇದಲ್ಲ" ಎಂದು ದೇವರು ಮೊದಲಬಾರಿಗೆ ಹೇಳಿದ ಮಾತು ಆದಿಕಾಂಡ 2:18ರಲ್ಲಿ, *"ಮನುಷ್ಯನು ಒಂಟಿಗನಾಗಿರುವದು ಒಳ್ಳೇದಲ್ಲ"* ಎನ್ನುವಾಗ ಕಂಡುಬರುತ್ತದೆ, ಆದ್ದರಿಂದ

ದೇವರು ಮನುಷ್ಯನಿಗಿದ್ದ ಅಗತ್ಯವನ್ನು ಪೂರೈಸಲು, ಆತನ ಜೀವನದಲ್ಲಿ ಕಾಡಬಹುದಾದ ಒಂಟಿತನದ ಸಮಸ್ಯೆಗೆ ಪರಿಹಾರವಾಗಿ ಅವನಿಗೆ ಸರಿಬೀಳುವ ಸಹಕಾರಿಯನ್ನು ನೀಡಲು ದಾಂಪತ್ಯವೆಂಬ ಯೋಜನೆಯನ್ನು ಮಾಡಿದನು. ನಾವು ಸಲಹಾ ಕೈಪಿಡಿಯನ್ನು ಅನುಸರಿಸಿ ದೇವರ ಅಪೇಕ್ಷೆಯಂತೆ ಮಾಡುತ್ತಾ ಬಂದಲ್ಲಿ ದಾಂಪತ್ಯವು ನೋವನ್ನಲ್ಲ, ನಲಿವನ್ನೇ ನೀಡುವ ಉದ್ದೇಶ ಹೊಂದಿದೆ.

ಬೈಬಲ್ ಮೊದಲ ಬಾರಿಗೆ ದಾಂಪತ್ಯದ ಕುರಿತು ಮಾತನಾಡುವುದು ಆದಿಕಾಂಡ 2:24ರಲ್ಲಿ *"ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು"* ಎಂದು ಹೇಳಲಾಗಿದೆ. ದಾಂಪತ್ಯವೆಂದರೆ, ಇತರ ಎಲ್ಲಾ ಸಂಬಂಧಗಳನ್ನು ಒತ್ತಟ್ಟಿಗಿಟ್ಟು, ಒಬ್ಬ ವ್ಯಕ್ತಿಯೊಂದಿಗೆ ಜೀವನದ ದಾರಿಯಲ್ಲಿ ಒಮ್ಮುಖವಾಗಿ ಸಾಗಿಸುವುದೇ ದಾಂಪತ್ಯ ಮತ್ತು ಅದು ಈ ರೀತಿಯಾಗಿ ಇರಬೇಕು ಎನ್ನುವುದೇ ಬೈಬಲ್‌ನ ಉದ್ದೇಶ. ಅದು ತ್ರಿ–ಏಕತೆಯಂತ ಸಂಬಂಧವಾಗಿದೆ. ದಾಂಪತ್ಯ ಸಂಬಂಧದಲ್ಲಿ ದೇವರು ಆದಾಮ ಹವ್ವರನ್ನು ಕರೆದಾಗ ಅವರಿಬ್ಬರೂ ತಮ್ಮನ್ನು ದೇವರ ಮುಂದೆ ಪ್ರತ್ಯೇಕವಾಗಿ ಪ್ರತಿನಿಧಿಸಿಕೊಳ್ಳಲಿಲ್ಲ. ದೇವರ ಮುಂದೆ ಆದಾಮ ಹವ್ವರಿಬ್ಬರೂ ಒಂದೇ ಉದ್ದೇಶವನ್ನು ಹೊಂದಿದ ಏಕಸಂಸ್ಥೆಯಾಗಿ ನಿಲ್ಲುತ್ತಾರೆ. 1 ಪೇತ್ರ 3:7ರಲ್ಲಿ ಬೈಬಲ್ ಹೀಗೆ ಹೇಳುತ್ತದೆ, *"ಅದೇ ರೀತಿಯಾಗಿ ಪುರುಷರೇ, ಸ್ತ್ರೀಯು ಅದೇ ರೀತಿಯಾಗಿ ಪುರುಷರೇ, ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬದನ್ನು ಜ್ಞಾಪಕಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನಮಾಡಿರಿ. ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆಂದು ತಿಳಿದು ಅವರಿಗೆ ಮಾನವನ್ನು ಸಲ್ಲಿಸಿರಿ. ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವದಿಲ್ಲ".* ಆದಿಕಾಂಡ 5:1–2 ಒಂದು ಅದ್ಭುತವಾದ ವಿಷಯವನ್ನು ಹೇಳುತ್ತದೆ – *"ಅವರನ್ನು ಗಂಡು ಹೆಣ್ಣಾಗಿ ಉಂಟುಮಾಡಿದನು. ಇದಲ್ಲದೆ ಅದೇ ದಿವಸದಲ್ಲಿ ಅವರನ್ನು ಆಶೀರ್ವದಿಸಿ ಅವರಿಗೆ ಮನುಷ್ಯ ಎಂದು ಹೆಸರಿಟ್ಟನು".* ಆದಾಮನೇ ತನ್ನ ಹೆಂಡತಿಗೆ ಹೆಸರನ್ನಿಟ್ಟರೂ ದೇವರು ಅವರಿಬ್ಬರನ್ನೂ ಒಂದೇ ಆಗಿ 'ಮನುಷ್ಯ' (ಮೂಲ: ಆದಾಮ್) ಎಂದು ಕರೆದನು. ಆದ್ದರಿಂದ ದಾಂಪತ್ಯ ಸಂಬಂಧಗಳಲ್ಲಿ ಇನ್ನು ಮುಂದೆ, ದೇವರು ಮತ್ತು ನಾನು ಅಥವಾ ದೇವರು ಮತ್ತು ಆ ಸ್ತ್ರೀ ಎಂಬುದಾಗಿ ಇರುವುದಿಲ್ಲ – ಜೀವವರಕ್ಕೆ ಬಾಧ್ಯರಾಗಿರುವ ನಾನು ಮತ್ತು ನನ್ನ ಹೆಂಡತಿಯು ಸೇರಿಕೊಂಡು ಉದ್ದೇಶಪೂರ್ವಕವಾಗಿ ದೇವರ ಸೇವೆಯನ್ನು ಮಾಡುವುದಕ್ಕೂ ಐಕ್ಯತೆಯಲ್ಲಿ ನಡೆಯುವುದಕ್ಕೂ ಕರೆಯಲ್ಪಟ್ಟವರಾಗಿದ್ದೇವೆ.

ನಾವು ಈಗ ತಾನೇ ಓದಿದ ಆದಿಕಾಂಡ 2:24ರಲ್ಲಿರುವ ಈ ಕಾರಣದಿಂದ ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು ಮತ್ತು ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಹೇಳಿಯದೆ. ಇಲ್ಲಿ "ಬಿಟ್ಟು ಎಂದರೆ ಉದ್ದೇಶಪೂರ್ವಕವಾಗಿ ಅಂಟಿಕೊಳ್ಳುವುದು, ಒಪ್ಪಂದ ಮಾಡಿಕೊಳ್ಳುವುದು, ಒಂದೇ ಆಗುವುದು, ಐಕ್ಯವಾಗುವುದು ಎನ್ನುವ ಅರ್ಥಗಳು ಬರುತ್ತವೆ. ನಿನ್ನ ದಾಂಪತ್ಯದಲ್ಲಿ ಸಮಸ್ಯೆ ಇರುವುದಾದರೆ ನಾನು ನಿಮಗೆ ಕೆಲವು ಪ್ರಶ್ನೆಗಳನ್ನು ಕೇಳಲು ಇಷ್ಟಪಡುತ್ತೇನೆ: ನೀವು ಮಾಡುತ್ತಿರುವ ಸಂಗತಿಗಳು ಮತ್ತು ನಿನ್ನ

ಸಂಗಾತಿಯ ಕಡೆಗೆ ನಿಮ್ಮ ನಡವಳಿಕೆಯು ಹೇಗಿದೆ, ನೀವಾಡುವ ಮಾತುಗಳು ಹೇಗಿವೆ, ಅವು ನಿಮ್ಮಿಬ್ಬರ ಬಂಧವ್ಯವನ್ನು ಗಟ್ಟಿಮಾಡುತ್ತಿದೆಯೇ? ಅಥವಾ ಅದು ಬಿರುಕು, ಬೇರ್ಪಡಿಸುವಿಕೆ ಇವುಗಳಿಗೆ ಕಾರಣವಾಗುತ್ತಿದೆಯೇ? ದಾಂಪತ್ಯದ ಕುರಿತು ದೇವರ ವಾಕ್ಯವು ನೀಡುವ ಆಜ್ಞೆಯೆಂದರೆ ಬಿಡುವುದು ಮತ್ತು ಅಂಟಿಕೊಳ್ಳುವದು. ಆದ್ದರಿಂದ ನೀವು ಮಾಡುತ್ತಿರುವ ಸಂಗತಿಗಳು ನಿಮ್ಮ ಸಂಬಂಧಗಳನ್ನು ಕಟ್ಟುತ್ತಿರುವುದೋ ಅಥವಾ ಕೆಡವುತ್ತಿರುವುದೋ? ನೀವು ಈ ಸಂಗತಿಗಳನ್ನು ಗಮನಿಸಿಕೊಳ್ಳಬೇಕು.

ಅನೇಕರು ಪ್ರೀತಿಯನ್ನು ಕೇವಲ ಒಂದು ಭಾವನೆಯೆಂದು ತಿಳಿಯುತ್ತಾರೆ: "ನಾನು ನಿನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದೆನು ಆದರೆ ಈಗ ನನಗೆ ಆ ಭಾವನೆಯಿಲ್ಲ – ನನಗೆ ನಿನ್ನ ಮೇಲೆ ಪ್ರೀತಿಯಿಲ್ಲ" ಎನ್ನುತ್ತಾರೆ. ಒಂದು ವೇಳೆ ನೀವು ಒಡೆದ ಕುಟುಂಬದಿಂದ ಬಂದಿದ್ದೀರಿ ಎಂದಿಟ್ಟುಕೊಳ್ಳೋಣ. ನೀವು ಮದುವೆಯಾಗಲು ಒಬ್ಬ ಪಾದ್ರಿಯ ಬಳಿಗೋ ಅಥವಾ ನೋಂದಣಾಧಿಕಾರಿಗಳ ಬಳಿಗೋ ಹೋಗುತ್ತೀರಿ; ನೀವು ಮದುವೆಯಾಗುವ ವ್ಯಕ್ತಿಗಾಗಿ ನಿಮ್ಮ ಪ್ರಾಣವನ್ನು ಕೊಡುವುದಾಗಿ ಮಾತುಕೊಡುತ್ತೀರಿ. ಮರಣವು ನಿಮ್ಮನ್ನು ಅಗಲಿಸುವ ತನಕ ಈ ಬಾಂಧವ್ಯ ಹೀಗೆಯೇ ಮುಂದುವರಿಯಬೇಕು ಎನ್ನುವುದು ನಿಮ್ಮ ಅನಿಸಿಕೆ. ಆದರೆ ನಿಮಗೆ ಒಡೆದ ಕುಟುಂಬದ ಹಿನ್ನಲೆಯಿರುವ ಕಾರಣದಿಂದಾಗಿ ಬಹುಶಃ ನೀವೆಂದೂ ಪ್ರೀತಿಯನ್ನು ಕಾಣಲಿಲ್ಲ, ಕುಟುಂಬದಲ್ಲಿ ಪ್ರೀತಿಯು ಹೇಗೆ ವ್ಯಕ್ತಗೊಳ್ಳುತ್ತದೆನ್ನುವುದನ್ನು ನೋಡಲಿಲ್ಲ, ಮತ್ತು ನಿಮ್ಮ ತಂದೆತಾಯಿಗಳು ಪರಸ್ಪರ ಪ್ರೀತಿಯನ್ನು ಹಂಚಿಕೊಂಡದ್ದನ್ನು ನೋಡಲಿಲ್ಲ. ಇದಕ್ಕೆ ವಿರುದ್ಧವಾಗಿ ನಿಮ್ಮ ಸಂಗಾತಿಯು ಪ್ರೀತಿಯನ್ನು ಧಾರಾಳವಾಗಿ ವ್ಯಕ್ತಪಡಿಸುವಂತ ಕುಟುಂಬದ ಹಿನ್ನಲೆಯಿಂದ ಬಂದಿರಬಹುದು, ಆದರೆ ಅವರಂತೆ ಮಾಡಲು ನಿಮಗೆ ತಿಳಿಯದಿರಬಹುದು. ನೀವು ಒಪ್ಪಂದ ಮಾಡಿಕೊಳ್ಳುವ ವ್ಯಕ್ತಿಯನ್ನು ಪ್ರೀತಿಸಬೇಕೆಂದು ನಿಮಗೆ ಮನಸ್ಸಿದ್ದರೂ, ನಿಮ್ಮ ಒಡೆದುಹೋದ ಕುಟುಂಬದ ಹಿನ್ನಲೆಯ ಕಾರಣವಾಗಿ, ನೀವು ಇಲ್ಲಿ ಸೋಲುವ ಸಾಧ್ಯತೆಯಿದೆ. ಮದುವೆಯಾದ ಕೆಲವೇ ವರ್ಷಗಳಲ್ಲಿ ನೀವು ಸಮಾಲೋಚಕರ ಬಳಿ ಹೋಗಬೇಕಾಗಿ ಬಂದು, "ನಮಗೆ ಹೊಂದಾಣಿಕೆಯಾಗುತ್ತಿಲ್ಲ, ನಾನು ಅವರನ್ನು ಪ್ರೀತಿಸುತ್ತಿಲ್ಲ" ಎಂದು ಹೇಳಬಹುದು. ಸರಿ, ಇಂದು ನಾನು ನಿಮಗೆ ಒಂದು ಶುಭಸಂದೇಶ ನೀಡುತ್ತೇನೆ: ನಿಮ್ಮ ದಾಂಪತ್ಯದಲ್ಲಿ ಸಮಸ್ಯೆ ಇದೆಯಾದರೆ ಅದನ್ನು ಸರಿಪಡಿಸಲು ಸಾಧ್ಯವಿದೆ.

ನೀವು ಒಂದು ಹೊಸ ರೆಫ್ರಿಜಿರೇಟರ್‌ಅನ್ನು ಕೊಂಡುಕೊಳ್ಳುವಿರಿ ಮತ್ತು ಅದರಲ್ಲಿ ಸಮಸ್ಯೆ ತೋರಿದಾಗ ನೀವು ಕೈಪಿಡಿ ನೋಡಬೇಕೆಂದು ನಿಮಗೆ ತಿಳಿಯುತ್ತದಲ್ಲ. ಆ ಕೈಪಿಡಿಯು ರೆಫ್ರಿಜಿರೇಟರ್‌ನಲ್ಲಿ ಏನು ದೋಷವಿದೆ ಎಂದು ನಿಮಗೆ ತಿಳಿಸುತ್ತದೆ ಅಥವಾ ನೀವು ಅದನ್ನು ಸರ್ವಿಸ್ ಮಾಡುವವರ ಬಳಿ ತೋರಿಸಬಹುದು. ನಿಮ್ಮ ಮದುವೆಯು ಸರಿಯಾಗಿ ನಡೆಯುವಂತೆ ಒಂದು ಕೈಪಿಡಿ ಇದೆ. ಅದು ನಿಮ್ಮ ದಾಂಪತ್ಯವನ್ನು ಸರಿಪಡಿಸುತ್ತದೆ. ಅದುವೇ ಬೈಬಲ್, ಅದು ದೇವರ ವಾಕ್ಯ. ಮೇಲಾಗಿ ಬೈಬಲ್‌ನ ತೀತನು 2:4ರಲ್ಲಿ ಪ್ರೀತಿ ಮಾಡುವುದನ್ನು ಕಲಿಸುವುದು ಮತ್ತು ಕಲಿತುಕೊಳ್ಳುವುದು ಎರಡೂ ಸಾಧ್ಯ ಎಂದು ಬರೆಯಲಾಗಿದೆ. ನೀವು ಒಂದು ಒಡೆದ ಕುಟುಂಬದ ಹಿನ್ನಲೆಯಿಂದ ಬಂದಿದ್ದು ನಿಮ್ಮ ಸಂಗಾತಿಯನ್ನು ಪ್ರೀತಿಸಲು ನಿಮಗೆ ತಿಳಿಯದಿರುವುದಾದರೆ–ನಿಮ್ಮ ಮದುವೆಯು ಮುರಿದುಬೀಳುವ ಸ್ಥಿತಿಯಲ್ಲಿದೆ

ಎನ್ನುವುದಾದರೆ– ನಿಮಗೊಂದು ಒಳ್ಳೆಯ ಸಂದೇಶವಿದೆ. 1 ಯೋಹಾನ 5:3ರಲ್ಲಿ, *"ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದೇ".* ಹೇಗೆ ಪ್ರೀತಿ ಮಾಡಬೇಕು, ಹೇಗೆ ಕರುಣೆಯುಳ್ಳವರು ಧಾರಾಳಿಗಳು ಆಗಿರಬೇಕು, ದಾಂಪತ್ಯದಲ್ಲಿ ಸಂಗಾತಿಗೆ ಹೇಗೆ ಒಳ್ಳೆಯದಾಗಬೇಕು ಎಂದು ತೋರಿಸಿಕೊಡುವ ಯೇಸು ಕ್ರಿಸ್ತನ ಆಜ್ಞೆಗಳ ಮೂಲಕ ದೇವರು ನಿನ್ನ ಪರಿಸ್ಥಿತಿಯನ್ನು ಬದಲಾಯಿಸುತ್ತಾನೆ.

ಇದು ದಾಂಪತ್ಯ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾರಂಭ ಮಾತ್ರ. ನೀನು ಇದರ ಅಧ್ಯಯನವನ್ನು ಮುಂದುವರಿಸುತ್ತಾ ಬಂದಂತೆ ದೇವರು ನಿನ್ನನ್ನು ಆಶೀರ್ವದಿಸಲಿ. ಈ ವಿಷಯವನ್ನು ಕಲಿಯುತ್ತಿರುವಂತೆ ದೇವರು ನಿನಗೆ ಹೆಚ್ಚಿನ ಜ್ಞಾನ ಮತ್ತು ತಿಳುವಳಿಕೆಯನ್ನು ನೀಡಲಿ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಎಫೆಸದವರಿಗೆ 5:31–32 ಓದಿರಿ. ಎಫೆಸದವರಿಗೆ 5:31 ವಚನವು ಆದಿಕಾಂಡ 2:24ರ ಉಲ್ಲೇಖವಾಗಿದೆ. ಎಫೆಸದವರಿಗೆ 5:32ರ ವಾಕ್ಯಭಾಗದ ಪ್ರಕಾರ ನಿಮ್ಮ ಅಭಿಪ್ರಾಯದಲ್ಲಿ ದೇವರು ಇಲ್ಲಿ ಏನು ಹೇಳುತ್ತಿದ್ದಾನೆ?

*__ಎಫೆಸದವರಿಗೆ 5:31–32__ – ಇದರ ನಿಮಿತ್ತದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಬರೆದದೆ. ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಎದ್ದೇನೆ; ಇದುವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು.*

2. ಯಾಕೋಬನು 4:4–5 ಓದಿರಿ. ಈ ವಚನಗಳು ಏನನ್ನು ಹೇಳುತ್ತಿವೆ?

*__ಯಾಕೋಬನು 4:4–5__ – ವ್ಯಭಿಚಾರಿಗಳು ನೀವು; ಇಹಲೋಕಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ. ದೇವರು ನಮ್ಮಲ್ಲಿ ಇರಿಸಿರುವ ಪವಿತ್ರಾತ್ಮನು ಅಭಿಮಾನತಾಪದಿಂದ ನಮಗೋಸ್ಕರ ಹಂಬಲಿಸುತ್ತಾನೆ ಎಂಬ ಶಾಸ್ತ್ರೋಕ್ತಿ ಬರೀ ಮಾತೆಂದು ಭಾವಿಸುತ್ತೀರೋ?*

3. 1 ಪೇತ್ರ 3:7 ಓದಿರಿ. ನೀವು ನಿಮ್ಮ ಪತಿ ಅಥವಾ ಪತ್ನಿಯ ಜೊತೆ ಏಕೆ ಪ್ರೀತಿಯಿಂದ ಒಗೆತನ ಮಾಡಬೇಕು?

*__1 ಪೇತ್ರ 3:7__ – ಅದೇ ರೀತಿಯಾಗಿ ಪುರುಷರೇ, ಸ್ತ್ರೀಯು ಬಲಹೀನಳೆಂಬದನ್ನು ಜ್ಞಾಪಕಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನಮಾಡಿರಿ. ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆಂದು ತಿಳಿದು ಅವರಿಗೆ ಮಾನವನ್ನು ಸಲ್ಲಿಸಿರಿ. ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವದಿಲ್ಲ.*

4. ಯೋಹಾನ 15:5 ಓದಿರಿ. ಕ್ರಿಸ್ತನು ನಿಮ್ಮ ಜೀವಿತಕ್ಕೆ ಯಜಮಾನನಾಗಿರದಿದ್ದಲ್ಲಿ ನಿಮ್ಮ ದಾಂಪತ್ಯವು ಸಫಲವಾಗಲು ಸಾಧ್ಯವೇ?

*__ಯೋಹಾನ 15:5__ – ನಾನು ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ.*

5. ತೀತನು 2:4 ಓದಿರಿ. ಪ್ರೀತಿ ಕೇವಲ ಒಂದು ಭಾವನೆಯಲ್ಲ. ದೇವರವಾಕ್ಯದ ಪ್ರಕಾರ ಪ್ರೀತಿಯು ________________ .

***ತೀತನು 2:4*** *– ಇದಲ್ಲದೆ ಅವರು ಪ್ರಾಯದ ಸ್ತ್ರೀಯರಿಗೆ – ನಿಮ್ಮ ಮೂಲಕ ದೇವರ ವಾಕ್ಯಕ್ಕೆ ದೂಷಣೆಯಾಗದಂತೆ ನೀವು ಗಂಡಂದಿರನ್ನೂ ಮಕ್ಕಳನ್ನೂ ಪ್ರೀತಿಸುವವರೂ ಮನೆಯಲ್ಲೇ ಕೆಲಸಮಾಡುವವರೂ ಸುಶೀಲೆಯರೂ ನಿಮ್ಮ ಗಂಡಂದಿರಿಗೆ ಅಧೀನರೂ ಆಗಿರಬೇಕೆಂದು ಬುದ್ಧಿಕಲಿಸುವ ಹಾಗೆ ಬೋಧಿಸು.*

6. 1 ಯೋಹಾನ 5:3 ಓದಿರಿ. ನಾವು ದೇವರ ಆಜ್ಞೆಗಳಂತೆ ನಡೆದರೆ ನಾವು ________________ ನಡೆಯುತ್ತೇವೆ.

***1 ಯೋಹಾನ 5:3*** *– ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ.*

7. ಮತ್ತಾಯ 7:12 ಓದಿರಿ. ನಮ್ಮ ದಾಂಪತ್ಯದಲ್ಲಿ ಸಮಸ್ಯೆಯಿರುವುದಾದರೆ, ಅದಕ್ಕೆ ಕಾರಣ ಯಾರೋ ಒಬ್ಬರು ________________ .

***ಮತ್ತಾಯ 7:12*** *– ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ.*

8. 1 ಕೊರಿಂಥದವರಿಗೆ 13:4 ಓದಿರಿ. ಪ್ರೀತಿಯು

ಅ. ಭಾವನೆಯಾಗಿದೆ

ಇ. ಒಳ್ಳೆಯ ಅನಿಸಿಕೆಯಾಗಿದೆ

ಉ. ದಯೆತೋರಿಸುವುದು

***1 ಕೊರಿಂಥದವರಿಗೆ 13:4*** *– ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆತೋರಿಸುವದು. ಪ್ರೀತಿಯು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ; ಉಬ್ಬಿಕೊಳ್ಳುವದಿಲ್ಲ*

# ಉತ್ತರಗಳು

1. ಎಫೆಸದವರಿಗೆ 5:31–32 ಓದಿರಿ. ಎಫೆಸದವರಿಗೆ 5:31 ವಚನವು ಆದಿಕಾಂಡ 2:24ರ ಉಲ್ಲೇಖವಾಗಿದೆ. ಎಫೆಸದವರಿಗೆ 5:32ರ ವಾಕ್ಯಭಾಗದ ಪ್ರಕಾರ ನಿಮ್ಮ ಅಭಿಪ್ರಾಯದಲ್ಲಿ ದೇವರು ಇಲ್ಲಿ ಏನು ಹೇಳುತ್ತಿದ್ದಾನೆ?

   **(ದಾಂಪತ್ಯಕ್ಕೆ ಹೋಲಿಸಬಹುದಾದ) ಕ್ರಿಸ್ತನು ಮತ್ತು ಆತನ ಸಭೆಗೆ ಇರುವ ಸಂಬಂಧ**

2. ಯಾಕೋಬನು 4:4–5 ಓದಿರಿ. ಈ ವಚನಗಳು ಏನನ್ನು ಹೇಳುತ್ತಿವೆ?

   **ದೇವರು ನಮ್ಮ ವಿಷಯದಲ್ಲಿ ಅತಿಶಯವಾದ ಆಸಕ್ತಿಯುಳ್ಳವನಾಗಿದ್ದಾನೆ ಮತ್ತು ನಾವು ಆತನಿಗೆ ಸತ್ಯವಾಗಿ ನಡೆದುಕೊಳ್ಳಬೇಕೆಂದು ಆಶಿಸುತ್ತಾನೆ.**

3. 1 ಪೇತ್ರ 3:7 ಓದಿರಿ. ನೀವು ನಿಮ್ಮ ಪತಿ ಅಥವಾ ಪತ್ನಿಯ ಜೊತೆ ಏಕೆ ಪ್ರೀತಿಯಿಂದ ಒಗೆತನ ಮಾಡಬೇಕು?

   **ನಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಾಗಬಾರದೆಂದು**

4. ಯೋಹಾನ 15:5 ಓದಿರಿ. ಕ್ರಿಸ್ತನು ನಿಮ್ಮ ಜೀವಿತಕ್ಕೆ ಯಜಮಾನನಾಗಿರದಿದ್ದಲ್ಲಿ ನಿಮ್ಮ ದಾಂಪತ್ಯವು ಸಫಲವಾಗಲು ಸಾಧ್ಯವೇ?

   **ಇಲ್ಲ**

5. ತೀತನು 2:4 ಓದಿರಿ. ಪ್ರೀತಿ ಕೇವಲ ಒಂದು ಭಾವನೆಯಲ್ಲ. ದೇವರವಾಕ್ಯದ ಪ್ರಕಾರ ಪ್ರೀತಿಯನ್ನು ________________ .

   **ಕಲಿಸಿಕೊಡಬೇಕು**

6. 1 ಯೋಹಾನ 5:3 ಓದಿರಿ. ನಾವು ದೇವರ ಆಜ್ಞೆಗಳಂತೆ ನಡೆದರೆ ನಾವು ________________ ನಡೆಯುತ್ತೇವೆ.

   **ಪ್ರೀತಿಯಲ್ಲಿ**

7. ಮತ್ತಾಯ 7:12 ಓದಿರಿ. ನಮ್ಮ ದಾಂಪತ್ಯದಲ್ಲಿ ಸಮಸ್ಯೆಯಿರುವುದಾದರೆ, ಅದಕ್ಕೆ ಕಾರಣ ಯಾರೋ ಒಬ್ಬರು ________________ ನಡೆಯುತ್ತಿಲ್ಲ.

   **ಪ್ರೀತಿಯಲ್ಲಿ**

8. 1 ಕೊರಿಂಥದವರಿಗೆ 13:4 ಓದಿರಿ. ಪ್ರೀತಿಯು

**ಉ. ದಯೆತೋರಿಸುವುದು**

# ಪಾಠ 11

# ದಾಂಪತ್ಯ – ಭಾಗ 2

*ಡೂಣ್ ಕ್ರೊ*

ಇಂದು ಪುನಃ ನಾವು 'ದಾಂಪತ್ಯ' ಎಂಬ ವಿಷಯದ ಕುರಿತು ಮತ್ತು 'ದಾಂಪತ್ಯ ಎಂದರೇನು' ಎಂದು ತಿಳಿದುಕೊಳ್ಳೋಣ. ಮದುವೆ ಎಂದರೆ ಕೂಡಿಸುವುದು, ಐಕ್ಯತೆ, ಒಂದಾಗುವುದು ಎಂದು ಹೇಳಬಹುದು. ಆದಿಕಾಂಡ 24 ಹೇಳುತ್ತದೆ, *"ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು".* ದಾಂಪತ್ಯವು ಕೇವಲ ಒಂದಾಗುವುದು ಎನ್ನುವುದಕ್ಕಿಂತಲೂ, ಐಕ್ಯವಾಗುವುದಕ್ಕಿಂತಲೂ ಮಿಗಿಲಾದದ್ದು ಎಂದು ನಿಮಗೆ ಗೊತ್ತಿದೆಯೇ? ಉದಾಹರಣೆಗೆ, 1 ಕೊರಿಂಥದವರಿಗೆ 6:15, 16ರ ಪ್ರಕಾರ ಕ್ರೈಸ್ತನಾದ ನಾನು ಒಬ್ಬ ವೇಶ್ಯೆಯನ್ನು ಕೂಡಿದಲ್ಲಿ, ಅವಳೊಂದಿಗೆ ಒಂದೇ ಶರೀರವಾಗುತ್ತೇನೆ. ಇಲ್ಲಿ ಆದಿಕಾಂಡ 2:24ರಲ್ಲಿ ದಾಂಪತ್ಯದ ಕುರಿತು ಬರೆದಿರುವುದನ್ನು ಗಮನಿಸಿರಿ. ನಾನು ವೇಶ್ಯೆಯನ್ನು ಕೂಡಿದ ಕಾರಣಕ್ಕೆ ನನ್ನ ಪತ್ನಿಯನ್ನು ವಿಚ್ಛೇದಿಸಿದಂತಾಗಲಿಲ್ಲ ಅಥವಾ ವೇಶ್ಯೆಯೊಂದಿಗೆ ಸೇರಿದ ಕಾರಣದಿಂದ ಅವಳನ್ನೇ ಮದುವೆಯಾದೆನು ಎನ್ನುವಂತೆಯೂ ಇಲ್ಲ. ಹಾಗಾದರೆ, ದಾಂಪತ್ಯವೆಂದರೇನು? ದಾಂಪತ್ಯವೆಂದರೆ ಒಂದಾಗುವುದು, ಜೊತೆಗೂಡುವುದು, ಒಂದೇ ಶರೀರವಾಗುವುದು ಎನ್ನುವುದಾದರೆ ಇದಕ್ಕೂ ವೇಶ್ಯೆ ಬಳಿಗೆ ಹೋಗುವುದಕ್ಕೂ ಏನು ವ್ಯತ್ಯಾಸ? ಆದರೆ ವಾಸ್ತವದಲ್ಲಿ ನೀನು ವೇಶ್ಯೆಯ ಬಳಿ ಹೋಗುವುದರಿಂದ ನೀನು ಆಕೆಯೊಂದಿಗೆ ಒಂದೇ ಶರೀರವಾಗುತ್ತೀ.

ಬೈಬಲ್‌ನಲ್ಲಿ ದಾಂಪತ್ಯವನ್ನು ಒಂದಾಗುವುದು, ಜೊತೆಗೂಡುವುದು, ಐಕ್ಯವಾಗುವುದು ಎಂದು ಹೇಳಿದಾಗ್ಯೂ ದಾಂಪತ್ಯವು ಅದಕ್ಕಿಂತಲೂ ಮಿಗಿಲಾದದ್ದಾಗಿದೆ. ಅದು ಒಡಂಬಡಿಕೆಯೊಂದಿಗೆ ಒಂದಾಗುವುದಾಗಿದೆ. "ಒಡಂಬಡಿಕೆ" ಎನ್ನುವ ಪದಕ್ಕೆ ಇಬ್ರಿಯ ಭಾಷೆಯಲ್ಲಿ, ಬೆರಿತ್ ಎಂದಿದ್ದು 'ಜೊತೆಯಾಗಿ ಒಪ್ಪಂದ ಮಾಡಿಕೊ' ಎನ್ನುವ ಅರ್ಥಕೊಡುತ್ತದೆ. ಅದು ಯಾವುದೇ ಒಬ್ಬ ವ್ಯಕ್ತಿಯ ಖಂಡಿತವಾದ ಒಪ್ಪಂದವಾಗಿದೆ, ಮರಣವು ನಿಮ್ಮನ್ನು ಅಗಲಿಸುವವರೆಗೂ ಇರುವಂತ ಬದ್ಧತೆಯ ವಾಗ್ದಾನವಾಗಿದೆ. ಹೀಗಿರುವಾಗ ನಾನು ಯಾವುದೇ ಒಬ್ಬ ವೇಶ್ಯೆಯ ಸಂಗ ಮಾಡಿದಲ್ಲಿ, ಅಂತಹ ದುಷ್ಟತನವನ್ನು ನಡಿಸಿದಾಗ್ಯೂ ನನ್ನ ಅವಳ ನಡುವೆ ಯಾವುದೇ ಬದ್ಧತೆಯ ಒಪ್ಪಂದವಿಲ್ಲ. ಮೊಟ್ಟಮೊದಲನೆಯದಾಗಿ ಬೇರೆಯವರನ್ನು ಬಿಟ್ಟುಬಿಡುವುದೇ ದಾಂಪತ್ಯದ ಮೂಲಭೂತ ಅಂಶ. ಬೈಬಲ್ 'ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು' ಎಂದು ಹೇಳುತ್ತದೆ. ಯೆಹೆಜ್ಕೇಲನು *"ನೀನು ನನ್ನವಳಾದಿ"* ಎನ್ನುತ್ತಾನೆ. ಇವಳೊಬ್ಬಳಿಗಾಗಿ ಉಳಿದ ಎಲ್ಲವನ್ನು

ಬಿಟ್ಟು – ಈಕೆಯೊಬ್ಬಳನ್ನೇ ಅಂಟಿಕೊಂಡಿರುವುದು. ಮದುವೆಯಾಗಿರುವ ನೀವು ಬದ್ಧತೆ ಮತ್ತು ಒಡಂಬಡಿಕೆಯ ಕಾರಣದಿಂದ ಊರ್ಜಿತವಾಗುವ ನೀವು ಅನೈತಿಕವಾಗಿ ಮತ್ತೊಬ್ಬಳ ಬಳಿಗೆ ಹೋದಲ್ಲಿ ದಾಂಪತ್ಯ ಧರ್ಮವನ್ನು ಉಲ್ಲಂಘಿಸಿದಂತಾಗುತ್ತದೆ. ಯೆಹೆಜ್ಕೇಲ 16:8 ಅದನ್ನು ಒಡಂಬಡಿಕೆಯಿಂದುಂಟಾಗುವ ಪ್ರೀತಿ ಎಂದು ಹೇಳುತ್ತದೆ. ಎಫೆಸದವರಿಗೆ ಬರೆದ ಪತ್ರಿಕೆ 5ನೇ ಅಧ್ಯಾಯದಲ್ಲಿ, ದಾಂಪತ್ಯಧರ್ಮದಲ್ಲಿ ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ಪುರುಷನು ತನ್ನ ಹೆಂಡತಿಯನ್ನು ಪ್ರೀತಿಸಬೇಕು ಎನ್ನುವುದನ್ನು ಕಲಿತುಕೊಳ್ಳುತ್ತೇವೆ ಮತ್ತು ಅದು ಪ್ರೀತಿಯ ಒಡಂಬಡಿಕೆಯಾಗಿರುತ್ತದೆ. ಅದು ಪ್ರೀತಿಯ ಒಡಂಬಡಿಕೆಯಾಗಿದೆ. ದಾಂಪತ್ಯದ ಮೂಲ ತತ್ವವು ಪ್ರೀತಿಯಾಗಿರುವ ಕಾರಣದಿಂದ ಉಳಿದೆಲ್ಲಕ್ಕಿಂತಲೂ ಹೆಚ್ಚಾಗಿ ಪ್ರೀತಿಯೇ ದಾಂಪತ್ಯವನ್ನು ಮುನ್ನಡೆಸುವ ಶಕ್ತಿಯಾಗಿರಬೇಕು.

ದಾಂಪತ್ಯವು ಐಕ್ಯತೆಯ ಒಡಂಬಡಿಕೆಯಾಗಿದೆ. ಅದು 1 ಪೇತ್ರ 3:7ರಲ್ಲಿ, ಸ್ತ್ರೀಯು ಪುರುಷನಿಗಿಂತ ಬಲಹೀನಳು ನಿಮ್ಮೊಂದಿಗೆ ಜೀವವರಕ್ಕೆ ಬಾಧ್ಯರು ಜ್ಞಾಪಕಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನ ಮಾಡಿದಲ್ಲಿ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವುದಿಲ್ಲ ಎಂದು ಹೇಳುತ್ತದೆ. ಇದನ್ನು ಆಲೋಚಿಸಿರಿ – ದಂಪತಿಗಳಾದ ನಾವು ಮದುವೆ ಸಂಬಂಧದಲ್ಲಿ ದೇವರು ರೂಪಿಸಿರುವ ಐಕ್ಯತೆ ಮತ್ತು ಸಂಯೋಜನೆ ಇವುಗಳಲ್ಲಿ ನಡೆಯದೆ ಹೋದಲ್ಲಿ ನಮ್ಮ ಪ್ರಾರ್ಥನೆಗಳಿಗೆ ಉತ್ತರ ಬರುವುದಿಲ್ಲ. ಜ್ಞಾನೋಕ್ತಿ 2:16,17 ವಚನವು, ತನ್ನ ಯೌವನಕ್ಕೆ ಮಾರ್ಗದರ್ಶನ ನೀಡುವ ತನ್ನ ದಾಂಪತ್ಯದ ಒಡಂಬಡಿಕೆಯನ್ನು ತೊರೆದುಬಿಡುವ ದಾರಿ ತಪ್ಪಿದ ಸ್ತ್ರೀಯ ಕುರಿತು ಮಾತನಾಡುತ್ತದೆ. ಜೊತೆಗೆ ದಾಂಪತ್ಯದ ಒಡಂಬಡಿಕೆಯು ದೇವರ ಮುಂದೆ ಮಾಡಿಕೊಂಡ ಒಡಂಬಡಿಕೆಯೆನ್ನುತ್ತದೆ. ಇದು ಬಹಳ ಗಂಭೀರವಾದ ವಿಷಯ. ಇದು ನಾವು ಮತ್ತೊಂದು ವ್ಯಕ್ತಿಯ ಜೊತೆಗೆ ಮಾಡುವ ಒಡಂಬಡಿಕೆಯೇ ಆದರೂ ಇದು ದೇವರ ಮುಂದೆ ಮಾಡುವ ಒಡಂಬಡಿಕೆಯಾಗಿದೆ. ಜನರಿಗೆ ಸೇವೆ ಮಾಡುವುದನ್ನು ನಾನು ಬಹಳ ಇಷ್ಟಪಡುವೆನಾದರೂ ದೇವರಿಗೆ ಇರುವ ಆದ್ಯತೆಯೆಂದರೆ ನನ್ನ ದಾಂಪತ್ಯದ ಮೇಲೆ ಗಮನ ಇಡುವುದು. ದಾಂಪತ್ಯವೆಂದರೆ, ನನ್ನ ಜೀವನದ ಗಮನವನ್ನು ಸಂಪೂರ್ಣವಾಗಿ ಮತ್ತೊಬ್ಬ ವ್ಯಕ್ತಿಯ ಮೇಲೆ ಇಡುವುದು ಮತ್ತು ಪ್ರೀತಿಯೇ ಇದರ ಸೂತ್ರವಾಗಿದೆ.

ಮತ್ತಾಯ 7:12 ಹೇಳುತ್ತದೆ, “ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ”, ಮತ್ತು ಮದುವೆಯಲ್ಲಿ ಇದುವೇ ಪ್ರಧಾನವಾಗಿರಬೇಕು. ಇದು ಸ್ವಾರ್ಥಲಾಭ ಅಲ್ಲ, ಸ್ವಂತಕ್ಕಾಗಿ ಅಲ್ಲ, ಈ ವ್ಯಕ್ತಿ ನನಗೆ ಏನನ್ನು ಕೊಡಬಹುದು ಎಂದು ನಿರೀಕ್ಷಿಸುವುದಲ್ಲ. 1 ಕೊರಿಂಥದವರಿಗೆ 13:4ರಲ್ಲಿ ‘ಪ್ರೀತಿಯು ದಯೆ ತೋರುವುದು’ ಎಂದು ಬರೆಯಲಾಗಿದೆ. ಇದರ ಅರ್ಥ, ಇನ್ನೊಬ್ಬರ ಒಳಿತನ್ನು ಬಯಸುವುದು, ಧಾರಾಳತನ ಮತ್ತು ಕರುಣೆಯನ್ನು ತೋರುವುದು, ಮತ್ತು ಯಾವಾಗಲೂ ಮತ್ತೊಬ್ಬರಿಗೆ ಯಾವುದು ಉತ್ತಮವೋ ಅದನ್ನೇ ಆಯ್ಕೆ ಮಾಡಿಕೊಳ್ಳುವುದಾಗಿದೆ. ದಾಂಪತ್ಯವು ಹೀಗೇ ಇರಬೇಕು ಎಂದು ಚಿತ್ರಿಸಲಾಗಿರುವ ಕಾರಣವೇನೆಂದರೆ–ಇದು ದೇವರೊಂದಿಗಿರುವ ಸಂಬಂಧಕ್ಕೆ

ಮಾದರಿ ಮತ್ತು ಉದಾಹರಣೆಯಾಗಿದೆ. ಪ್ರಾಕೃತ ಸಂಬಂಧದಲ್ಲಿ ಅತನು ನಮಗೆ ಒಂದು ದೃಷ್ಟಾಂತವನ್ನು ತೋರಿಸಿದ್ದಾನೆ. ಯಾಕೆಂದರೆ ಅತನೊಂದಿಗೆ ನಿಜವಾದ ನಿತ್ಯವಾದ ಸಂಬಂಧವು ಹೇಗಿರಬಹುದು ಎನ್ನುವುದರ ಮಾದರಿ ಇದಾಗಿರುತ್ತದೆ. ದಾಂಪತ್ಯವು ಶಾಶ್ವತವಲ್ಲದ, ಮರಣವು ನಮ್ಮನ್ನು ಅಗಲಿಸುವ ತನಕ ಇರುವ ಸಂಬಂಧವಾಗಿದೆ. ಪುನರುತ್ಥಾನದಲ್ಲಿ ಮದುವೆ ಮಾಡಿಕೊಳ್ಳುವುದೂ ಇಲ್ಲ ಮಾಡಿಕೊಡುವುದೂ ಇಲ್ಲ ಎಂದು ಬೈಬಲ್ ಹೇಳುತ್ತದೆ. ಒಂದು ಒಳ್ಳೆಯ ದಾಂಪತ್ಯವೆಂದರೆ ಏನು – ಪ್ರೀತಿಯ ಸೂತ್ರಗಳು, ನಮ್ಮ ಸಂಗಾತಿಗೆ ನಮ್ಮನ್ನು ನಿಸ್ವಾರ್ಥವಾಗಿ ಸಮರ್ಪಿಸಿಕೊಳ್ಳುವುದು – ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು ಎನ್ನುವುದು ದೇವರ ಉದ್ದೇಶವಾಗಿದೆ. ಆತನು, "ನಾನು ನಿನಗೆ ಹೇಳಬಯಸುವುದೇನೆಂದರೆ – ನಿನಗೂ ನನಗೂ ದಾಂಪತ್ಯ ಸಂಬಂಧವಿರಬೇಕೆಂದು ನಿನ್ನನ್ನು ಕರೆದಿದ್ದೇನೆ – ಅದು ತಾತ್ಕಾಲಿಕವಾದ ಸಂಬಂಧವಲ್ಲ, ಕೆಲವೇ ವರ್ಷಗಳು ಇದ್ದು ದಾಟಿಹೋಗುವಂತದಲ್ಲ. ಬದಲಾಗಿ, ನಾನು ಎಂದೆಂದಿಗೂ ನನ್ನ ಪ್ರೀತಿಯನ್ನು ನಿನಗೆ ವ್ಯಕ್ತಪಡಿಸುತ್ತಾ ಇರುವ ಶಾಶ್ವತ ಸಂಬಂಧವಾಗಿದೆ.

ದಾಂಪತ್ಯದ ಕೆಲವು ಸೂತ್ರಗಳನ್ನು ನಿಮಗೆ ಕೊಡುತ್ತೇನೆ. ದಾಂಪತ್ಯವು ಪಾಲುಗಾರಿಕೆಯಲ್ಲ, ಅದು ಐಕ್ಯತೆಯಾಗಿದೆ. ಆದಿಕಾಂಡ 4ರಲ್ಲಿ ಕೂಡುವುದು ಮತ್ತು 1 ಪೇತ್ರ 3:7 ರಲ್ಲಿ "ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರು" ಎಂದು ಬರೆದಿದೆ. ಮದುವೆಯು ಒಡಂಬಡಿಕೆಯಾಗಿದೆ, ಎಂದರೆ ಅದು ನಿಮ್ಮನ್ನು ಬೆಸೆಯುತ್ತದೆ ಎಂದು ಅರ್ಥವಾಗುತ್ತದೆ. ಅದರಲ್ಲಿ ಒಪ್ಪಂದವಿದೆ. ಪಾಪವು ಮೊದಲ ಸಭೆಯನ್ನು ಪ್ರವೇಶಿಸಲಿಲ್ಲ; ಅದು ಮೊದಲ ಮದುವೆಯನ್ನು ಪ್ರವೇಶಿಸಿತು. ಆದುದರಿಂದಲೇ ನಮಗೆ ಕೈಪಿಡಿ ಬೇಕು, ಮದುವೆಯ ಕುರಿತು ತಿಳುವಳಿಕೆ ಬೇಕು, ಮತ್ತು ಪ್ರೀತಿಯ ಸೂತ್ರವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. 'ಪ್ರೀತಿ ಎಂದರೆ ಏನು?' ಎಂದು ನಾವು ಕೇಳುತ್ತೇವೆ. ಒಂದು ಅರ್ಥದಲ್ಲಿ ಪ್ರೀತಿ ಎಂದರೆ ನಿಸ್ವಾರ್ಥತೆ ಎಂದೇ ಹೇಳಬಹುದು. ಯೆಶಾಯ 53:6ರಲ್ಲಿ 'ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬರೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು' ಎಂದು ಹೇಳಿಯದೆ, ಆದರೆ ಮದುವೆಯಲ್ಲಿ, ನಾವು ನಮ್ಮ ಸಂಗಾತಿಯ ಸುಖವನ್ನು ಶ್ರೇಯಸ್ಸನ್ನು ಬಯಸುತ್ತೇವೆ.

ಬೈಬಲ್‌ನ ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ, 'ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ. ನಾವು ಗಂಡಸರು, ದೇವರು ನಮಗೆ ಕೊಟ್ಟ ಹೆಂಡತಿಯರನ್ನು ಆದರಿಇ ಗೌರವಿಸಬೇಕು, ಅಂದರೆ ಅವರನ್ನು ಶ್ಲಾಘಿಸಬೇಕು ಎಂದು ಅರ್ಥ. ನಿಮ್ಮ ಸ್ವಂತ ದೇಹವನ್ನು ಪ್ರೀತಿಸಬೇಕು ಅಂದರೆ ನೀವು ಜೊತೆಯಲ್ಲಿ ಕುಳಿತು, ಕೈಹಿಡಿದುಕೊಂಡು, ಬೆನ್ನು ತಟ್ಟುತ್ತಾ, 'ನಿನ್ನನ್ನು ಪ್ರೀತಿಸುತ್ತೇನೆ' ಎಂದು ಹೇಳುವುದು. ಅಷ್ಟು ಮಾತ್ರವೇ ಅಲ್ಲ, ನಿಮ್ಮನ್ನು ಪ್ರೀತಿಸಿಕೊಳ್ಳುವುದೆಂದರೆ, ನಿಮ್ಮನ್ನು ಕಾಪಾಡಿಕೊಳ್ಳುವುದು, ಪೋಷಣೆ ಮಾಡಿಕೊಳ್ಳುವುದು ಮತ್ತು ಆರೈಕೆ ಮಾಡಿಕೊಳ್ಳುವುದು. ನಾವು ಎಂದಿಗೂ ನಮ್ಮ ಪತ್ನಿಯರನ್ನು ಉದಾಸೀನ ಮಾಡಬಾರದು. ಆಕೆಯ ಬಲಹೀನತೆಯನ್ನು

ಎಲ್ಲ ಮುಂದೆ ಬಹಿರಂಗಪಡಿಸಬಾರದು, ಆಕೆಯನ್ನು ಅಪಹಾಸ್ಯ ಮಾಡಬಾರದು. ನಾವು ನಮ್ಮನ್ನು ಪ್ರೀತಿಮಾಡಿಕೊಳ್ಳುವಂತೆಯೇ ಆಕೆಯನ್ನು ಪ್ರೀತಿಸಬೇಕು.

ಪ್ರಾರ್ಥನೆಯಲ್ಲಿ ನೀವು ನಿಮ್ಮನ್ನು ದೇವರ ಮುಂದೆ ಎತ್ತಿ ಹಿಡಿಯಿರಿ. ಮತ್ತು ಪ್ರಥಮವಾಗಿ ನಿಮ್ಮನ್ನು ಪ್ರೀತಿ ಮಾಡಿದ್ದಕ್ಕಾಗಿ ಆತನಿಗೆ ಕೃತಜ್ಞತೆ ಹೇಳಿರಿ. ಅನಂತರ ಆತನು ನಿಮಗೆ ನೀಡಿರುವ ಸಂಗಾತಿಗಾಗಿ ಆತನಿಗೆ ವಂದನೆ ಹೇಳಿರಿ. ಅದು ಸಮಸ್ಯೆಯ ಒಂದು ಭಾಗವಾಗಿರಬಹುದಾಗಿದೆ. ನೀವು ನಿಮ್ಮ ಸಂಗಾತಿಯನ್ನು ಮೆಚ್ಚಿದಂತ ಮಾತನಾಡದೆ ಇರಬಹುದು, ನೀವು ಆಕೆಯನ್ನು ಕಡೆಗಣಿಸಿ ಮಾತನಾಡಿರಬಹುದು ಮತ್ತು ಅದು ಪಾಪವೆಂದು ಸ್ವಾರ್ಥವೆಂದು ಬೈಬಲ್ ಹೇಳುತ್ತದೆ. ಎಫೆಸ 5 ರಲ್ಲಿ ಯೇಸುವು, 'ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು' ಎಂದು ಬರೆದದೆ. ನೀವು ನಿಮ್ಮ ಸಂಗಾತಿಯ ಮೇಲೆ ಯಾವ ಮಾತುಗಳನ್ನು ನುಡಿಯುತ್ತೀರೋ ಅದರ ಮಟ್ಟಕ್ಕೆ ಅವರು ಏರಿಬರುತ್ತಾರೆ. ನೀವು ಆಕೆಗೆ, ನೀನು ಲಾಯಕ್ಕಿಲ್ಲ, ನೀನು ಚೆನ್ನಾಗಿಲ್ಲ, ನೀನು ದಪ್ಪಗಿದ್ದಿ' ಎಂದು ಮೂದಲಿಸುತ್ತಿದ್ದರೆ ನೀವು ನಿಮ್ಮ ದಾಂಪತ್ಯವನ್ನು ಕುಗ್ಗಿಸುತ್ತೀರಿ ಮತ್ತು ಇಲ್ಲಿ ಐಕ್ಯತೆಯು ಮೂಡದೆ ಭಿನ್ನತೆಗೂ ಬೇರ್ಪಡುವುದಕ್ಕೂ ಕಾರಣರಾಗುತ್ತೀರಿ. ಆದರೆ ನೀವು ಸೌಜನ್ಯಪೂರಿತ ಮಾತುಗಳನ್ನಾಡಿದರೆ, ಅಂದರೆ, 'ಪ್ರಿಯೆ, ನೀನು ಮಾಡುವುದನ್ನೆಲ್ಲಾ ನಾನು ಮೆಚ್ಚುತ್ತೇನೆ, ನಿನ್ನನ್ನು ಮೆಚ್ಚುತ್ತೇನೆ, ನಿನ್ನನ್ನು ಪ್ರೀತಿಸುತ್ತೇನೆ' ಎಂದು ಹೇಳುತ್ತಾ ನಿಮ್ಮ ಕಾರ್ಯಗಳಿಂದ ಅದನ್ನು ಪ್ರಮಾಣೀಕರಿಸುತ್ತಾ ಇದ್ದಲ್ಲಿ ನಿಮ್ಮ ಸಂಗಾತಿಯು ಅದೇ ಮಟ್ಟಕ್ಕೆ ಏರುತ್ತಾರೆ.

ಇಂದು ನಿಮ್ಮ ದಾಂಪತ್ಯದ ಅನೇಕ ಸಮಸ್ಯೆಗಳಿಗೆ ನೀವು ಹಿಂದೆ ಆಡಿದ ಮಾತುಗಳೇ ಕಾರಣ ಎಂದು ನಿಮಗೆ ತಿಳಿಯಿತೋ? ನೀವು ನಿಮ್ಮ ಸಂಗಾತಿಯನ್ನು ಮೇಲೆತ್ತುವ ಬದಲು ಅವರನ್ನು ಕೆಳಗೆ ದೊಬ್ಬಿದಿರೋ? ಇಂದು ನಿಮ್ಮ ಸಂಗಾತಿಗೆ ಸೌಜನ್ಯದ ಮಾತುಗಳನ್ನಾಡಿರಿ ಎಂದು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ. ಪ್ರೀತಿ ಎಂಬುದು ಭಾವನೆ ಮಾತ್ರವಲ್ಲ; ನಿಮ್ಮ ಭಾವನೆಗಳನ್ನೂ ಮೀರಿ ನಿಮ್ಮ ಸಂಗಾತಿಯ ಒಳಿತನ್ನು ಆಕೆಯ ಮೇಲನ್ನು ಬಯಸುವುದು ಪ್ರೀತಿಯಾಗಿದೆ. ಈ ದಿನವೇ ಸಜ್ಜನಿಕೆಯ ಕನಿಕರದ ಕ್ರಿಯೆಗಳನ್ನು ಮಾಡಲು ಪ್ರಾರಂಭಿಸಿರಿ. ಪ್ರೀತಿಯನ್ನು ಕಟ್ಟುವುದೇ ಹೀಗೆ – ಸದ್ಭಾವನೆಯ ಸಣ್ಣ ಸಣ್ಣ ಕ್ರಿಯೆಗಳಿಂದ. ನಿಮ್ಮ ಸಂಗಾತಿಯ ಜೊತೆಗೆ ಮಹತ್ವದ, ಗೌರವಯುತ, ಮೌಲ್ಯಾಧಾರಿತ ಮತ್ತು ಪ್ರೀತಿಪೂರ್ವಕ ಮಾತುಗಳನ್ನಾಡುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ಆಗ ನೀವೇ ವ್ಯತ್ಯಾಸವನ್ನು ಕಾಣುವಿರಿ. ನೀವಿದನ್ನು ಮಾಡುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಜ್ಞಾನೋಕ್ತಿ 18:22 ಓದಿರಿ. ದಾಂಪತ್ಯವು:

ಅ. ಲಾಭಕರವಾದದ್ದು

ಇ, ಭಯಂಕರವಾದದ್ದು

ಉ. ಕರ್ತನಿಗೆ ಮೆಚ್ಚಿಕೆಯಾದಂತದ್ದು

***ಜ್ಞಾನೋಕ್ತಿಗಳು 18:22*** *– ಪತ್ನೀಲಾಭವು ರತ್ನಲಾಭ, ಅದು ಯೆಹೋವನ ಅನುಗ್ರಹವೇ.*

2. ಇಬ್ರಿಯರಿಗೆ 13:4 ಓದಿರಿ. ಗಂಡಹೆಂಡರ ಸಂಬಂಧವು

ಅ. ಪಾಪ

ಇ. ಅಸಹ್ಯ ಮತ್ತು ಕೆಟ್ಟದ್ದು

ಉ. ನಿಷ್ಕಲಂಕವಾಗಿರಬೇಕು

***ಇಬ್ರಿಯರಿಗೆ 13:4*** *– ಗಂಡಹೆಂಡರ ಸಂಬಂಧವು ನಿಷ್ಕಳಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿಸುವನೆಂದು ತಿಳುಕೊಳ್ಳಿರಿ.*

3. ಪ್ರಸಂಗಿ 9:9 ಓದಿರಿ. ಸರಿ ಅಥವ ತಪ್ಪು: ಒಂದು ದೈವೀಕ ದಾಂಪತ್ಯವು ಈ ಜೀವಿತದಲ್ಲಿ ನಿಮಗೆ ಕರ್ತನಿಂದ ಕೊಡಲ್ಪಟ್ಟ ಒಂದು ಉಡುಗೊರೆ ಮತ್ತು ಪುರಸ್ಕಾರದಂತೆ.

***ಪ್ರಸಂಗಿ 9:9*** *– ಲೋಕದೊಳಗೆ ದೇವರು ನಿನಗೆ ನೇಮಿಸಿರುವ ವ್ಯರ್ಥ ದಿನಗಳಲ್ಲೆಲ್ಲಾ ನಿನ್ನ ಪ್ರಿಯಪತ್ನಿಯೊಡನೆ ಸುಖದಿಂದ ಬದುಕು; ನಿನ್ನ ಬಾಳಿನಲ್ಲಿಯೂ ನೀನು ಲೋಕದೊಳಗೆ ಪಡುವ ಪ್ರಯಾಸದಲ್ಲಿಯೂ ಇದೇ ನಿನಗೆ ಬಂದ ಪಾಲು.4. 1 ಯೋಹಾನ 3:18 ಓದಿರಿ. ಅಮೇರಿಕದ ನ್ಯಾಯಾಧೀಶರಾದ ಫಿಲಿಪ್ ಗಿಲ್ಯಮ್ ರವರು, ತಾವು ತೀರ್ಪು ನೀಡಿದ 28000 ಬಾಲಾಪರಾಧ ಮೊಕದ್ದಮೆಗಳಲ್ಲಿ ಹೆಚ್ಚಿನವುಗಳಿಗೆ ಆ ಮಕ್ಕಳ ತಂದೆತಾಯಿಗಳ ಮಧ್ಯೆ ಪ್ರೀತಿಯ ಕೊರತೆ ಇರುವುದೇ ಮುಖ್ಯ ಕಾರಣವಾಗಿತ್ತು ಎಂದಿದ್ದಾರೆ (ಟುಗೆದರ್ ಫಾರೆವರ್, ಪುಟ 152).*

***1 ಯೋಹಾನ 3:18*** *– ಪ್ರಿಯರಾದ ಮಕ್ಕಳೇ, ನಾವು ಬರೀಮಾತಿನಿಂದಗಲೀ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು.*

5. ಎಫೆಸದವರಿಗೆ 5:28 ಓದಿರಿ. ಸರಿ ಅಥವ ತಪ್ಪು: ಹೇಗೆ ನಾನು ನನ್ನ ದೇಹವನ್ನು ಅಲಕ್ಷ್ಯ ಮಾಡುವುದಿಲ್ಲವೋ ಹಾಗೆಯೇ ನನ್ನ ಹೆಂಡತಿಯನ್ನೂ ಅಲಕ್ಷ್ಯ ಮಾಡಬಾರದು.

***ಎಫೆಸದವರಿಗೆ 5:28** – ಹಾಗೆಯೇ ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ. ತನ್ನ ಹೆಂಡತಿಯನ್ನು ಪ್ರೀತಿಸುವವನು ತನ್ನನ್ನೇ ಪ್ರೀತಿಸಿಕೊಳ್ಳುವವನಾಗಿದ್ದಾನೆ.*

6. 1 ಯೋಹಾನ 3:16 ಓದಿರಿ. ಸರಿ ಅಥವ ತಪ್ಪು: "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎನ್ನುವ ಮಾತು ಅದಕ್ಕೆ ತಕ್ಕಂತ ಕ್ರಿಯೆಗಳಿದ್ದರೆ ಮಾತ್ರವೇ ಚೆನ್ನಾಗಿರುತ್ತದೆ. ಯೇಸುವು ತಾನು ನಮಗಾಗಿ ಪ್ರಾಣಕೊಟ್ಟದ್ದರಲ್ಲಿ ತನ್ನ ಮಾತುಗಳನ್ನು ಪುಷ್ಟೀಕರಿಸಿದನು. ನಾವು ಸಾಧ್ಯವಾದ ಎಲ್ಲ ಪ್ರಾಯೋಗಿಕ ರೀತಿಯಲ್ಲಿಯೂ ನಮ್ಮ ಸಂಗಾತಿಗಾಗಿ ನಮ್ಮ ಪ್ರಾಣವನ್ನು ಅರ್ಪಿಸಬೇಕು.

ನೀವು ಪ್ರಾಯೋಗಿಕವಾಗಿ ಯಾವ ರೀತಿಯಲ್ಲಿ ಪ್ರೀತಿಸಲ್ಪಡಬೇಕೆಂದು ಇಷ್ಟಪಡುತ್ತೀರಿ ಎನ್ನುವುದನ್ನು ಇಲ್ಲಿ ಹಂಚಿಕೊಳ್ಳಿರಿ.

***1 ಯೋಹಾನ 3:16** – ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಎಂಥದೆಂದು ನಮಗೆ ತಿಳಿದು ಬಂದದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ.*

7. ಎಫೆಸದವರಿಗೆ 5:25–26 ಓದಿರಿ. ಸರಿ ಅಥವ ತಪ್ಪು: ನನ್ನ ಪತ್ನಿಯು ನಾನು ಅವಳ ವಿಷಯದಲ್ಲಿ ಏನನ್ನು ನುಡಿಯುತ್ತೇನೆಯೋ ಆ ಮಟ್ಟಕ್ಕೆ ಏರಿ ಬರುತ್ತಾಳೆ.

***ಎಫೆಸದವರಿಗೆ 5:25–26** – ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು.*

8. ರೋಮಾಪುರದವರಿಗೆ 8:38–39 ಮತ್ತು 1 ಯೋಹಾನ 4:19. ಸರಿ ಅಥವ ತಪ್ಪು: ನಮಗೆ ಹೇಳಲ್ಪಡುವ ಆತ್ಮೀಯವಾದ ಮಾತುಗಳು ಮತ್ತು ಕೃತ್ಯಗಳಿಂದ ನಾವು ಆಕರ್ಷಿಸಲ್ಪಡುತ್ತೇವೆ. ದೇವರು ಬೈಬಲ್‌ನಲ್ಲಿ ಬರೆದಿರುವಂತ ಆತನ ಪ್ರೀತಿಯ ಮಾತುಗಳಿಂದ ನಮ್ಮನ್ನು ಒಲಿಸಿಕೊಳ್ಳುತ್ತಾನೆ.

***ರೋಮಾಪುರದವರಿಗೆ 8:38–39** – ಹೇಗಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು.*

***1 ಯೋಹಾನ 4:19** – ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ.*

9. 1 ಯೋಹಾನ 5:3 ಮತ್ತು 2 ಯೋಹಾನ 6. ಸರಿ ಅಥವ ತಪ್ಪು: ಯೇಸುವಿನ ಆಜ್ಞೆಗಳು ನಮಗೆ ಹೇಗೆ ಪ್ರೀತಿಸಬೇಕೆನ್ನುವುದು ತಿಳಿಸಿಕೊಡುತ್ತವೆ. ಈ ಸೂತ್ರಗಳನ್ನು ನಾವು ದೇವರ ವಾಕ್ಯದಿಂದ ಕಲಿತುಕೊಳ್ಳಬಹುದಾಗಿದೆ.

***1 ಯೋಹಾನ 5:3** – ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯವದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ.*

***2 ಯೋಹಾನ 1:6** – ದೇವರ ಆಜ್ಞೆಗಳನ್ನು ಅನುಸರಿಸಿ ನಡೆಯುವದೇ ಪ್ರೀತಿ; ಪ್ರೀತಿಯಲ್ಲಿ ನಡೆಯಬೇಕೆಂಬದೇ ನೀವು ಮೊದಲಿಂದಲೂ ಕೇಳಿದ ಅಪ್ಪಣೆಯಾಗಿದೆ.*

10. ಯೋಹಾನ 14:15 ಓದಿರಿ. ಸರಿ ಅಥವ ತಪ್ಪು: ಪ್ರೀತಿಯು ನಿಮ್ಮ ಭಾವನೆಗಳನ್ನು ಕುರಿತಾದದ್ದಲ್ಲ ಬದಲಿಗೆ ನಿಮ್ಮ ಚಿತ್ತವನ್ನು ಕುರಿತದ್ದಾಗಿದೆ. ಬೈಬಲ್‌ನ ಪ್ರತಿಯೊಂದು ಆಜ್ಞೆಯು ಮನುಷ್ಯನ ಚಿತ್ತಕ್ಕೆ ಒಳಪಟ್ಟಿದೆಯೇ ಹೊರತು ಅವನ ಭಾವನೆಗಳಿಗಲ್ಲ. ದೇವರು ಎಂದಿಗೂ ನಿಮಗೆ ಯಾವ ಭಾವನ ಇರಬೇಕೆಂದು ಹೇಳುವುದಿಲ್ಲ ಆದರೆ ಏನು ಮಾಡಬೇಕೆಂದು ಹೇಳುತ್ತಾನೆ.

***ಯೋಹಾನ 14:15** – ನೀವು ನನ್ನನ್ನು ಪೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ.*

11. ಗಲಾತ್ಯದವರಿಗೆ 5:22–23. ಪ್ರೀತಿಯು ಸ್ವಾಭಾವಿಕವಲ್ಲ. ಪವಿತ್ರಾತ್ಮನು ಅದನ್ನು ಮನುಷ್ಯರೊಳಗೆ ಹುಟ್ಟಿಸಬೇಕು ಮತ್ತು ನಾವು ಅದನ್ನು ಕಲಿತುಕೊಳ್ಳಬೇಕು. ಪ್ರೀತಿಯು ________ ಫಲವಾಗಿದೆ:

ಅ. ಮನುಷ್ಯನ ಆಲೋಚನೆಗಳು

ಇ. ಮನುಷ್ಯನ ಸ್ವಭಾವ

ಉ. ದೇವರಾತ್ಮನ

***ಗಲಾತ್ಯದವರಿಗೆ 5:22–23*** – *ದೇವರಾತ್ಮನಿಂದ ಉಂಟಾಗುವ ಫಲವೇನಂದರೆ–ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ.*

12. ಎಫೆಸದವರಿಗೆ 5:31–32 ಓದಿರಿ. ಒಂದು ಒಳ್ಳೆಯ ದಾಂಪತ್ಯವು ಯಾವುದರ ಪುಟ್ಟ ಮಾದರಿಯಾಗಿದೆ?

***ಎಫೆಸದವರಿಗೆ 5:31–32*** – *ಇದರ ನಿಮಿತ್ತದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಬರೆದದೆ. ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಎದ್ದೇನೆ; ಇದುವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು.*

## ಉತ್ತರಗಳು

1. ಜ್ಞಾನೋಕ್ತಿ 18:22 ಓದಿರಿ. ದಾಂಪತ್ಯವು:

**ಅ. ಲಾಭಕರವಾದದ್ದು ಉ. ಕರ್ತನಿಗೆ ಮೆಚ್ಚಿಕೆಯಾದಂತದ್ದು**

2. ಇಬ್ರಿಯರಿಗೆ 13:4 ಓದಿರಿ. ಗಂಡಹೆಂಡರ ಸಂಬಂಧವು

**ಉ. ನಿಷ್ಕಲಂಕವಾಗಿರಬೇಕು**

3. ಪ್ರಸಂಗಿ 9:9 ಓದಿರಿ. ಸರಿ ಅಥವ ತಪ್ಪು: ಒಂದು ದೈವೀಕ ದಾಂಪತ್ಯವು ಈ ಜೀವಿತದಲ್ಲಿ ನಿಮಗೆ ಕರ್ತನಿಂದ ಕೊಡಲ್ಪಟ್ಟ ಒಂದು ಉಡುಗೊರೆ ಮತ್ತು ಪುರಸ್ಕಾರದಂತೆ.

**ಸರಿ**

4. 1 ಯೋಹಾನ 3:18 ಓದಿರಿ. ಅಮೇರಿಕದ ನ್ಯಾಯಾಧೀಶರಾದ ಫಿಲಿಪ್ ಗಿಲ್ಯಮ್ ರವರು, ತಾವು ತೀರ್ಪು ನೀಡಿದ 28000 ಬಾಲಾಪರಾಧ ಮೊಕದ್ದಮೆಗಳಲ್ಲಿ ಹೆಚ್ಚಿನವುಗಳಿಗೆ ಆ ಮಕ್ಕಳ ತಂದೆತಾಯಿಗಳ ಮಧ್ಯೆ ಪ್ರೀತಿಯ ಕೊರತೆ ಇರುವುದೇ ಮುಖ್ಯ ಕಾರಣವಾಗಿತ್ತು ಎಂದಿದ್ದಾರೆ (ಟುಗೆದರ್ ಫಾರೆವರ್, ಪುಟ 152).

**ಕ್ರಿಯೆಗಳು ಮತ್ತು ಹಿತಚಿಂತನೆ**

5. ಎಫೆಸದವರಿಗೆ 5:28 ಓದಿರಿ. ಸರಿ ಅಥವ ತಪ್ಪು: ಹೇಗೆ ನಾನು ನನ್ನ ದೇಹವನ್ನು ಅಲಕ್ಷ್ಯ ಮಾಡುವುದಿಲ್ಲವೋ ಹಾಗೆಯೇ ನನ್ನ ಹೆಂಡತಿಯನ್ನೂ ಅಲಕ್ಷ್ಯ ಮಾಡಬಾರದು.

**ಸರಿ**

6. 1 ಯೋಹಾನ 3:16 ಓದಿರಿ. ಸರಿ ಅಥವ ತಪ್ಪು: “ನಾನು ನಿನ್ನನ್ನು ಪ್ರೀತಿಸುತ್ತೇನೆ” ಎನ್ನುವ ಮಾತು ಅದಕ್ಕೆ ತಕ್ಕಂತ ಕ್ರಿಯೆಗಳಿದ್ದರೆ ಮಾತ್ರವೇ ಚೆನ್ನಾಗಿರುತ್ತದೆ. ಯೇಸುವು ತಾನು ನಮಗಾಗಿ ಪ್ರಾಣಕೊಟ್ಟದ್ದರಲ್ಲಿ ತನ್ನ ಮಾತುಗಳನ್ನು ಪುಷ್ಟೀಕರಿಸಿದನು. ನಾವು ಸಾಧ್ಯವಾದ ಎಲ್ಲ ಪ್ರಾಯೋಗಿಕ ರೀತಿಯಲ್ಲಿಯೂ ನಮ್ಮ ಸಂಗಾತಿಗಾಗಿ ನಮ್ಮ ಪ್ರಾಣವನ್ನು ಅರ್ಪಿಸಬೇಕು.

**ನೀವು ಪ್ರಾಯೋಗಿಕವಾಗಿ ಯಾವ ರೀತಿಯಲ್ಲಿ ಪ್ರೀತಿಸಲ್ಪಡಬೇಕೆಂದು ಇಷ್ಟಪಡುತ್ತೀರಿ ಎನ್ನುವುದನ್ನು ಇಲ್ಲಿ ಹಂಚಿಕೊಳ್ಳಿರಿ.**

7. ಎಫೆಸದವರಿಗೆ 5:25–26 ಓದಿರಿ. ಸರಿ ಅಥವ ತಪ್ಪು: ನನ್ನ ಪತ್ನಿಯು ನಾನು ಅವಳ ವಿಷಯದಲ್ಲಿ ಏನನ್ನು ನುಡಿಯುತ್ತೇನೆಯೋ ಆ ಮಟ್ಟಕ್ಕೆ ಏರಿ ಬರುತ್ತಾಳೆ.

**ಸರಿ. ಎಫೆಸದವರಿಗೆ 5:26ರಲ್ಲಿ ಬಳಕೆಯಾದ ಗ್ರೀಕ್ ಪದವು ರೇಮಾ ಅಂದರೆ "ನುಡಿದ/ಹೇಳಿದ ಮಾತುಗಳು" ಎಂದಾಗಿರುತ್ತದೆ.**

8. ರೋಮಾಪುರದವರಿಗೆ 8:38–39 ಮತ್ತು 1 ಯೋಹಾನ 4:19. ಸರಿ ಅಥವ ತಪ್ಪು: ನಮಗೆ ಹೇಳಲ್ಪಡುವ ಆತ್ಮೀಯವಾದ ಮಾತುಗಳು ಮತ್ತು ಕೃತ್ಯಗಳಿಂದ ನಾವು ಆರ್ಕ್ಷಿಸಲ್ಪಡುತ್ತೇವೆ. ದೇವರು ಬೈಬಲ್‌ನಲ್ಲಿ ಬರೆದಿರುವಂತ ಆತನ ಪ್ರೀತಿಯ ಮಾತುಗಳಿಂದ ನಮ್ಮನ್ನು ಒಲಿಸಿಕೊಳ್ಳುತ್ತಾನೆ.

**ಸರಿ. ದೇವರ ವಾಕ್ಯದ ತುಂಬ ನಮಗೆ ಪ್ರೀತಿಯ ಮಾತುಗಳನ್ನೇ ಹೇಳಿದೆ.**

9. 1 ಯೋಹಾನ 5:3 ಮತ್ತು 2 ಯೋಹಾನ 6. ಸರಿ ಅಥವ ತಪ್ಪು: ಯೇಸುವಿನ ಆಜ್ಞೆಗಳು ನಮಗೆ ಹೇಗೆ ಪ್ರೀತಿಸಬೇಕೆನ್ನುವುದು ತಿಳಿಸಿಕೊಡುತ್ತವೆ. ಈ ಸೂತ್ರಗಳನ್ನು ನಾವು ದೇವರ ವಾಕ್ಯದಿಂದ ಕಲಿತುಕೊಳ್ಳಬಹುದಾಗಿದೆ.

**ಸರಿ.**

10. ಯೋಹಾನ 14:15 ಓದಿರಿ. ಸರಿ ಅಥವ ತಪ್ಪು: ಪ್ರೀತಿಯು ನಿಮ್ಮ ಭಾವನೆಗಳನ್ನು ಕುರಿತಾದದ್ದಲ್ಲ ಬದಲಿಗೆ ನಿಮ್ಮ ಚಿತ್ತವನ್ನು ಕುರಿತದ್ದಾಗಿದೆ. ಬೈಬಲ್‌ನ ಪ್ರತಿಯೊಂದು ಆಜ್ಞೆಯು ಮನುಷ್ಯನ ಚಿತ್ತಕ್ಕೆ ಒಳಪಟ್ಟಿದೆಯೇ ಹೊರತು ಅವನ ಭಾವನೆಗಳಿಗಲ್ಲ. ದೇವರು ಎಂದಿಗೂ ನಿಮಗೆ ಯಾವ ಭಾವನ ಇರಬೇಕೆಂದು ಹೇಳುವುದಿಲ್ಲ ಆದರೆ ಏನು ಮಾಡಬೇಕೆಂದು ಹೇಳುತ್ತಾನೆ.

**ಸರಿ**

11. ಗಲಾತ್ಯದವರಿಗೆ 5:22–23. ಪ್ರೀತಿಯು ಸ್ವಾಭಾವಿಕವಲ್ಲ. ಪವಿತ್ರಾತ್ಮನು ಅದನ್ನು ಮನುಷ್ಯರೊಳಗೆ ಹುಟ್ಟಿಸಬೇಕು ಮತ್ತು ನಾವು ಅದನ್ನು ಕಲಿತುಕೊಳ್ಳಬೇಕು. ಪ್ರೀತಿಯು ________ ಫಲವಾಗಿದೆ:

**ಉ. ದೇವರಾತ್ಮನ**

12. ಎಫೆಸದವರಿಗೆ 5:31–32 ಓದಿರಿ. ಒಂದು ಒಳ್ಳೆಯ ದಾಂಪತ್ಯವು ಯಾವುದರ ಮಟ್ಟ ಮಾದರಿಯಾಗಿದೆ?

**ಕ್ರಿಸ್ತನು ಮತ್ತು ಆತನ ಸಭೆ**

# ಪಾಠ 12

# ದೇವರ ರೀತಿಯ ಪ್ರೀತಿ – ಭಾಗ 1

*ಡೂಣ್ ಕ್ರೊ*

1 ಕೊರಿಂಥದವರಿಗೆ 13:13, *"ಹೀಗಿರುವುದರಿಂದ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತವೆ; ಇವುಗಳಲ್ಲಿ ದೊಡ್ಡದು ಪ್ರೀತಿಯೇ"* ಎಂದು ಹೇಳುತ್ತದೆ. ಮತ್ತು 1 ಕೊರಿಂಥದವರಿಗೆ 14:1ರಲ್ಲಿ, *"ಪ್ರೀತಿಯನ್ನು ಅಭ್ಯಾಸಮಾಡಿಕೊಳ್ಳಿರಿ. ಆದರೂ ಪವಿತ್ರಾತ್ಮನಿಂದುಂಟಾಗುವ ವರಗಳನ್ನು, ಅವುಗಳೊಳಗೆ ವಿಶೇಷವಾಗಿ ಪ್ರವಾದಿಸುವ ವರವನ್ನೇ ಆಸಕ್ತಿಯಿಂದ ಅಪೇಕ್ಷಿಸಿರಿ"* ಪ್ರೀತಿಯನ್ನು ಹಿಂಬಾಲಿಸಿರಿ. ಅದರ ಬೆಂಬಿಡದಿರಿ ಮತ್ತು ಅದನ್ನು ನಿಮ್ಮ ಜೀವನದ ಅತ್ಯುನ್ನತ ಗುರಿಯಾಗಿ ಮಾಡಿಕೊಳ್ಳಿರಿ ಎಂದು ಬೈಬಲ್ ಹೇಳುತ್ತದೆ. ಕೆಲವೊಂದು ಭಾಷಾಂತರಗಳಲ್ಲಿ ಅದನ್ನೇ ನಿಮ್ಮ ಜೀವನದ ಮುಖ್ಯ ಅನ್ವೇಷಣೆಯನ್ನಾಗಿ ಮಾಡಿಕೊಳ್ಳಿರಿ ಎಂದು ಹೇಳುತ್ತದೆ. ಇದನ್ನು ಮಾತ್ರವೇ ನಾವು ನಿತ್ಯತ್ವಕ್ಕೆ ತೆಗೆದುಕೊಂಡು ಹೋಗುತ್ತೇವೆ. ನಾವು, ನಮ್ಮ ಮನೆಗಳು, ನಮ್ಮ ಕಾರುಗಳು, ನಮ್ಮ ಹಣ ಮುಂತಾದವುಗಳನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಆದರೆ ಪವಿತ್ರಾತ್ಮನ ಮೂಲಕವಾಗಿ ಯೇಸು ಕ್ರಿಸ್ತನು ನಮ್ಮಲ್ಲಿ ಇರಿಸಿರುವ ಪ್ರೀತಿಯನ್ನು ತೆಗೆದುಕೊಂಡು ಹೋಗಲು ಸಾಧ್ಯವಿದೆ. ಪ್ರೀತಿ ಮಾತ್ರವೇ ಶಾಶ್ವತವಾದ ಮೌಲ್ಯ ಮತ್ತು ಸತ್ವವನ್ನು ಹೊಂದಿದೆ.

ಪ್ರೀತಿಯ ನಿಜವಾದ ಅರ್ಥವೇನು? ನಾನು 'ನನ್ನ ಹೆಂಡತಿಯನ್ನು ಪ್ರೀತಿಸುತ್ತೇನೆ, ಐಸ್‌ಕ್ರೀಂಅನ್ನು ಪ್ರೀತಿಸುತ್ತೇನೆ, ಮಿಠಾಯಿಯನ್ನು ಪ್ರೀತಿಸುತ್ತೇನೆ' ಎಂದು ಹೇಳುತ್ತೇವೆ. ಪ್ರೀತಿಗೆ ಇಂಗ್ಲಿಷ್ ಭಾಷೆಯಲ್ಲಿ ಒಂದೇ ಪದವಿದೆ. ಹೀಗಾಗಿ ನಾನು 'ನನ್ನ ಹೆಂಡತಿಯನ್ನು ಪ್ರೀತಿಸುತ್ತೇನೆ' ಎಂದು ಹೇಳಿ 'ನನ್ನ ಬೆಕ್ಕನ್ನು ಪ್ರೀತಿಸುತ್ತೇನೆ', ಎಂದು ಹೇಳುವಾಗ ನನ್ನ ಹೆಂಡತಿಗೆ ಸಂತೋಷವಾಗುವುದೇ? ಖಂಡಿತವಾಗಿಯೂ ಇಲ್ಲ. ನಾನು ಏನು ಹೇಳಲು ಬಯಸುತ್ತಿದ್ದೇನೆ ಎಂದು ನಿಮಗೆ ತಿಳಿಯುತ್ತಿದೆಯಲ್ಲವೇ? ನಾವು 'ಪ್ರೀತಿ' ಎನ್ನುವ ಪದವನ್ನು ಬಳಸುವಾಗ ಕೆಲವರು ಅದನ್ನು 'ಸೆಕ್ಸ್' ಎಂತಲೂ. ಕೆಲವರು ಅದನ್ನು ಮಧುರವಾದ ಭಾವನೆ ಎಂದೂ ತಿಳಿಯಬಹುದು – ಹೀಗೆ ವಿಧವಿಧವಾದ ಜನರು ಪ್ರೀತಿಗೆ ಭಿನ್ನಭಿನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುತ್ತಾರೆ. ಗ್ರೀಕ್ ಭಾಷೆಯಲ್ಲಿ ಇದಕ್ಕೆ ನಾಲ್ಕು ಮುಖ್ಯ ಪದಗಳು ಬಳಕೆಯಲ್ಲಿವೆ. ಮೊದಲನೆಯದು 'ಈರೋಸ್'. ಇದು, ಲೈಂಗಿಕ ಆಕರ್ಷಣೆ ಮತ್ತು ಪ್ರಣಯ ಪ್ರೀತಿಗೆ ಸಂಬಂಧಿಸಿದೆ. ಈ ಪದವು ಬೈಬಲ್‌ನಲ್ಲಿ ಬಳಕೆಯಾಗಿಲ್ಲ. ಇಂಥ ಪ್ರೀತಿಯನ್ನು ದೇವರು, "ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು;

ಅವರಿಬ್ಬರು ಒಂದೇ ಶರೀರವಾಗಿರುವರು” ಎಂದು ಹೇಳುವಾಗ ನಿಯಮಿಸಿದನು. ಬೈಬಲ್‌ನ ಪರಮಗೀತ ಪುಸ್ತಕವು ದಾಂಪತ್ಯಪ್ರೇಮದ ಚೌಕಟ್ಟಿನಲ್ಲಿ ಇರುವ ಪ್ರಣಯಪ್ರೀತಿಯನ್ನು ಬಿಂಬಿಸುತ್ತದೆ. ಉಳಿದ ಮೂರು ಬಗೆಯ ಪ್ರೀತಿಗಳನ್ನು ಎಲ್ಲಾ ಮಾನವರೂ ಬಳಬಹುದು, ಆದರೆ *ಈರೋಸ್* ಮಾತ್ರ ದಾಂಪತ್ಯಕ್ಕೆ ಮೀಸಲು ಎಂದು ದೇವರು ನುಡಿಯುತ್ತಾನೆ,

*‘ಸ್ಟೋರ್ಗ್’* ಎನ್ನುವುದು ಮತ್ತೊಂದು ಬಗೆಯ ಪ್ರೀತಿ ಮತ್ತು ಇದು ಕುಟುಂಬದಲ್ಲಿ ತೋರಿಸುವ ಪ್ರೀತಿಯಾಗಿದೆ. ಮೂರನೆಯದು *‘ಫಿಲಿಯ’* ಎಂಬ ಮೂಲ ಪದದಿಂದ ಬರುವ *‘ಫಿಲಿಯೊ’* ಪ್ರೀತಿಯಾಗಿದೆ. ಈ ಪದವು ಹೊಸ ಒಡಂಬಡಿಕೆಯಲ್ಲಿ ಸುಮಾರು 72 ಬಾರಿ ಉಪಯೋಗಿಸ್ಪಟ್ಟಿದೆ ಮತ್ತು ಇದು ಮೂಡುವ ಮತ್ತು ಅಳಿಯುವ ಆತ್ಮೀಯ ಭಾವವಾಗಿದೆ. ಪ್ರೀತಿಯ ಕುರಿತು ಮಾತನಾಡುವ ಅನೇಕರು ಇದನ್ನೇ ಪ್ರೀತಿ ಎಂದು ಹೇಳುತ್ತಾರೆ, ‘ನನ್ನಲ್ಲಿ ಪ್ರೀತಿ ಹುಟ್ಟಿದೆ ಮತ್ತು ಪ್ರೀತಿ ಬತ್ತಿ ಹೋಗಿದೆ’. ನಿಮ್ಮ ಪ್ರೀತಿಯು ಈ ತೆರನಾಗಿ ಇದ್ದರೆ, ನೀವೂ ಸಹ ಅದರಲ್ಲಿ ಏರಿಳಿತಗಳನ್ನು ಕಾಣುತ್ತೀರಿ. ಈ ಆಧಾರದ ಮೇಲೆಯೇ ನೀವು ಪ್ರೀತಿಯ ಸೆಳೆವಿಗೆ ಸಿಲುಕುತ್ತೀರಿ ಮತ್ತು ಹೊರಬೀಳುತ್ತೀರಿ.

ನಾವು ದೇವರ ಪ್ರೀತಿಯನ್ನು ಬಿಂಬಿಸುವ *‘ಅಗಾಪೆ’* ಎಂಬ ಪ್ರೀತಿಯನ್ನು ತೋರಬೇಕೆಂದು ಬೈಬಲ್ ಹೇಳುತ್ತದೆ. ಈ ಪ್ರೀತಿಗೆ ಅನೇಕ ಆಯಾಮಗಳಿವೆ ಮತ್ತು 1ಕೊರಿಂಥದವರಿಗೆ 13ರಲ್ಲಿ ಇದರ ಸಂಪೂರ್ಣ ವ್ಯಾಖ್ಯಾನ ಲಭ್ಯವಿದೆ. 1 ಯೋಹಾನ 5:13 ರಲ್ಲಿ, *“ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ”* ಎಂದು ಬರೆಯಲ್ಪಟ್ಟಿದೆ. ಯೇಸುವಿನ ಆಜ್ಞೆಗಳು ಆತನ ಪ್ರೀತಿಯನ್ನು ವ್ಯಕ್ತಪಡಿಸುತ್ತದೆ ಮತ್ತು ನಾನು ಅವುಗಳನ್ನು ಕ್ರೋಢೀಕರಿಸಿ ಹೇಳುವುದಾದರೆ, ಮತ್ತಾಯ 7:12 *“ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ”* ಎನ್ನುವ ವಾಕ್ಯವು ಸೂಕ್ತವಾಗುತ್ತದೆ. ಸಭೆಯಲ್ಲಿರುವ ಅವರು ಇವರು ಮುಂತಾದವರು ನನ್ನನ್ನು ಪ್ರೀತಿಸುವುದಿಲ್ಲ, ನನ್ನನ್ನು ಕುರಿತು ಚಿಂತಿಸುವುದಿಲ್ಲ ಎನ್ನುವುದು ಇಲ್ಲಿ ವಿಷಯವಲ್ಲ. ಇತರರು ನಿಮಗೆ ಏನೇನು ಮಾಡಬೇಕೆಂದು ಬಯಸುತ್ತೀರೋ ನೀವದನ್ನು ಮೊದಲು ಮಾಡಬೇಕಾದುದು ಮುಖ್ಯವಾಗುತ್ತದೆ. ಅದು ಪ್ರೀತಿ. ಅದು ನಮ್ಮ ಪ್ರಕೃತಿ, ಪ್ರವೃತ್ತಿ ಇವುಗಳನ್ನೂ ಮೀರಿ, ನಮ್ಮ ಶ್ರೇಯಸ್ಸು ಮತ್ತು ಉದ್ಧಾರಕ್ಕಿಂತಲೂ ಇತರರ ಒಳಿತನ್ನು ಆಶಿಸುವುದಾಗಿದೆ. ಇದು ಸಾಧ್ಯವಾಗುವುದು ದೇವರಿಂದ ಮಾತ್ರ. ದೇವರಿಂದಲ್ಲದೆ ಇದು ಸಾಧ್ಯವಾಗುತ್ತದೆ ಎಂದು ನೆನೆಸಬೇಡಿರಿ. ಪ್ರೀತಿಯು ಪವಿತ್ರಾತ್ಮನ ಫಲವಾಗಿದೆ ಮತ್ತು ದೇವರು ಪ್ರೀತಿಸ್ವರೂಪಿಯಾಗಿದ್ದಾನೆ. ಆತನೇ ಪ್ರೀತಿಗೆ ಮೂಲನಾಗಿದ್ದಾನೆ ಮತ್ತು ತನ್ನ ಆಜ್ಞೆಗಳ ಮೂಲಕ ಹೇಗೆ ಪ್ರೀತಿಸಬೇಕೆಂದು ತೋರಿಸಿಕೊಡುತ್ತಾನೆ. ನಮ್ಮ ಶರೀರಭಾವದ ಅಭಿಲಾಷೆಯನ್ನೂ ಮೀರಿ ಸರಿಯಾದ ಆಯ್ಕೆ ಮತ್ತು ತೀರ್ಮಾನಗಳನ್ನು ಮಾಡಲು ಮತ್ತು ಸರಿಯಾದ ತತ್ವಗಳ ಮೇಲೆ ಕಾರ್ಯ ನಡೆಸಲು ಆತನು ನಮಗೆ ಬಲವನ್ನು ನೀಡುತ್ತಾನೆ.

ಎಂದಿನಂತೆ ಒಂದು ದಿನ ನಾನು ನನ್ನ ಕೆಲಸವಾದ ನಂತರ ಹೋಗಿ ಪ್ರಾರ್ಥನೆ ಮಾಡಬೇಕೆಂದಿದ್ದೆನು. ನಾನೊಂದು ಪಾರ್ಕ್‌ನಲ್ಲಿ ಕುಳಿತುಕೊಂಡು, 'ದೇವರೇ, ಯಾರೊಂದಿಗಾದರೂ ನಿನ್ನನ್ನು ಕುರಿತು ಹೇಳಬೇಕೆಂದು ಆಶೆಯಾಗಿದೆ' ಎಂದು ಪ್ರಾರ್ಥಿಸಿದೆನು. ಅದು ಬೇಸಿಗೆಕಾಲವಾಗಿತ್ತು ಮತ್ತು ಅಲ್ಲೊಬ್ಬ ಚಿಕ್ಕ ಹುಡುಗ ಮತ್ತು ಹುಡುಗಿ ಉಯ್ಯಾಲೆಗಳಲ್ಲಿ ಕುಳಿತು ಆಡುತ್ತಿದ್ದರು. ಅಲ್ಲಿ ಉಯ್ಯಾಲೆಯೊಂದು ಖಾಲಿ ಇತ್ತು ಮತ್ತು ನಾನದರಲ್ಲಿ ಕುಳಿತು ಆ ಬಾಲಕಿಯ ಕಡೆಗೆ ತಿರುಗಿಕೊಂಡು "ಈ ದಿನ ಬಹಳ ಚೆನ್ನಾಗಿದೆಯಲ್ಲವೇ?" ಎಂದು ಇಂಗ್ಲಿಷ್‌ನಲ್ಲಿ ಕೇಳಿದೆ. ಆ ಬಾಲಕಿಯು "ನನಗೆ ಇಂಗ್ಲಿಷ್ ಬರುವುದಿಲ್ಲ" ಎಂದಳು ಮತ್ತು ನಾನು, "ನಿನ್ನ ಊರು ಯಾವುದು? ಎಂದು ಕೇಳಿದೆ. ಆಕೆ ತಾನು ರೊಮೇನಿಯಾ ದೇಶದವಳು ಎಂದು ಉತ್ತರಿಸಿದಳು. ಆ ಭಾಗದಲ್ಲಿ ಅನೇಕ ರೊಮೇನಿಯಾಯಲ್ಲಿ ದೇಶದವರು ವಾಸಿಸುತ್ತಾರೆಂದು ನನಗೆ ತಿಳಿದಿತ್ತು. ಮತ್ತು ನಾನು ಆ ಮಕ್ಕಳೊಂದಿಗೆ ಯಾಕೆ ಮಾತನಾಡುತ್ತಿದ್ದೇನೆಂದು ಅವರು ದಿಟ್ಟಿಇ ನೋಡುತ್ತಿದ್ದರು. ನಾನು ಅವರ ಬಳಿಗೆ ಹೋಗಿ, "ನಿಮಗೆ ಸಹಾಯ ಮಾಡಲು ನನಗೆ ಮನಸ್ಸಿದೆ" ಎಂದು ಹೇಳಿದೆನು. ಅದಕ್ಕವರು, "ನಮಗೆ ಸಹಾಯ ಮಾಡಬೇಕು ಅಂದುಕೊಳ್ಳುವಿಯಾ? ನೀನು ಯಾಕೆ ನಮಗೆ ಸಹಾಯ ಮಾಡಬೇಕು? ನಮ್ಮ ಪರಿಚಯ ಕೂಡ ನಿನಗಿಲ್ಲ!" ಎಂದರು. ಆಗ ನಾನು "ದೇವರ ನಿಮಗೆ ಹಾಯ ಮಾಡಬೇಕೆಂದಿದ್ದಾನೆ" ಎಂದು ಉತ್ತರಿಸಿದೆನು. ನಾನು 1 ಯೋಹಾನ 3:18 ರಲ್ಲಿರುವ, *" ನಾವು ಬರೀ ಮಾತಿನಿಂದಾಗಲಿ ಬಾಯುಪಚಾರದಿಂದಾಗಲಿ ಪ್ರೀತಿಉವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ತ್ಯದಲ್ಲಿಯೂ ತೋರಬೇಕಯ"* ಎನ್ನುವ ವಾಕ್ಯವನ್ನು ನಾನು ಧ್ಯಾನಮಾಡುತ್ತಿದ್ದೆನು. ನಾವು ಕೇವಲ ಬಾಯಿಮಾತಿನಿಂದ ಮಾತ್ರ ಪ್ರೀತಿ ಡೋರದೆ ಅದನ್ನು ಕೃತ್ಯದಲ್ಲಿಯೂ ತೋರಿಸಬೇಕು. ಆಧಾರಣವಾಗಿ ನಾನು ನನ್ನೊಂದಿಗೆ ಹಣವನ್ನು ಇಟ್ಟುಕೊಂಡಿರುವುದಿಲ್ಲ. ಆದರೆ ಅಂದು ನನ್ನ ಜೇಬಿನಲ್ಲಿ ಸ್ವಲ್ಪ ಹಣವಿತ್ತು. ನನ್ನಲ್ಲಿದ್ದ ಹಣವನ್ನು ತೆಗೆದು ನಾನು ಅವರಿಗೆ ಕೊಟ್ಟೆನು. ಅಂದು ನಾನು ಉಪವಾಸ ಮಾಡುತ್ತಿದ್ದದರಿಂದ ನನ್ನ ಬಳಿ ಊಟವೂ ಇತ್ತು. "ಇಲ್ಲಿ ನಿಮ್ಮ ಕುಟುಂಬಕ್ಕಾಗಿ ಸ್ವಲ್ಪ ಊಟವಿದೆ" ಎಂದು ಅವರಿಗೆ ಅದನ್ನು ಕೊಟ್ಟುಬಿಟ್ಟೆನು. ಅದು ಅವರ ಮನಮುಟ್ಟಿತು. "ನೀನು ಯಾರು?" ಎಂದು ಅವರು ಕೇಳಿದರು. "ನಾವು ಹೀಗೆ ಭೇಟಿಯಾಗಬೇಕೆಂದು ದೇವರು ನೇಮಿಇದ್ದಾನೆ. ನಾನು ನಿಮ್ಮನ್ನು ಪುನಃ ಭೇಟಿ ಮಾಡುತ್ತೇನೆ" ಎಂದು ಅವರಿಗೆ ಹೇಳಿದೆನು.

ಅಂದು ನಾನು ಮನೆಗೆ ಹೋಗಿ, ರೊಮೇನಿಯನ್ನರ ಜೊತೆ ನನಗಾದ ಭೇಟಿಯ ಬಗ್ಗೆ ಹೆಂಡತಿಯ ಬಳಿ ಹೇಳಿದೆ. ಮರುದಿನ ಒಂದು ದೊಡ್ಡ ಬುಟ್ಟಿಯ ತುಂಬ ತೀರಾ ಹೊಸದಲ್ಲದ ಕೆಲವು ಪಾತ್ರೆಗಳನ್ನು ಕೂಡಿಸಿಕೊಂಡು ನನ್ನ ಹೆಂಡತಿಯ ಜೊತೆ ಆ ಪಾರ್ಕ್‌ಗೆ ಹೋದೆ. ಅಲ್ಲಿ ರೊಮೇನಿಯನ್ನರು ತಮ್ಮ ಮಕ್ಕಳೊಡನಿದ್ದರು ಮತ್ತು ನಾನು ಅವರಿಗೆ, "ನಾನು ನಿಮಬೆ ಕೆಲವು ಉಡುಗೊರೆಗಳನ್ನು ತಂದಿದ್ದೇನೆ. ಅವು ಭಾರವಾಗಿರುವುದರಿಂದ ನೀವು ಎಲ್ಲಿ ವಾಸಿಸುತ್ತೀರೆಂದು ತೋರಿಸಿದಲ್ಲಿ ಅದನ್ನು ನಿಮ್ಮ ಮನೆಯ ಬಳಿಯೇ ಇಳಿಸುತ್ತೇನ" ಎಂದು ಹೇಳಿದೆನು. ನಾವು ಅವರ ಒಂದು ಕೋಣೆಯ ಮನೆಗೆ ಹೋದಾಗ ನಾನು ಪಾತ್ರೆಗಳು, ತಟ್ಟೆ,

ಲೋಟಗಳನ್ನು ಒಂದೊಂದಾಗಿ ತೆಗೆದು ಅವರಿಗೆ ಕೊಡುತ್ತಾ ಹೋದೆನು. ನಾನು ಅವುಗಳನ್ನು ಕೊಡುತ್ತಿದ್ದಂತೆ ಅವರು ಕಣ್ಣೀರು ಮಿಡಿಯತೊಡಗಿದರು ಮತ್ತು ಆ ಮನೆಯೊಡತಿಯು, "ನನಗೆ ಕಣ್ಣೀರನ್ನು ತಡೆಯಲಾಗುತ್ತಿಲ್ಲ" ಎಂದಳು. ನಾನು, "ಸೋಮವಾರ ಸಂಜೆ ನಮ್ಮ ಮನೆಯಲ್ಲಿ 'ಸತ್ಯವೇದ ಅಧ್ಯಯನವಿರುತ್ತದೆ. ಅಲ್ಲಿಗೆ ಬರುವಂತೆ ನಿಮ್ಮೆಲ್ಲರನ್ನೂ ಅಹ್ವಾನಿಸುತ್ತೇನೆ" ಎಂದು ಆಮಂತ್ರಿಸಿದೆನು. ಅವರು, "ನಾವು ಖಂಡಿತವಾಗಿ ಬರುತ್ತೇವೆ" ಎಂದರು. ಆಗ ನಾನು, "ನಿಮಗೆ ಈ ಉಡುಗೊರೆಗಳನ್ನು ನೀಡಿದ ಕಾರಣದಿಂದ ನೀವು ಬರಬೇಕೆಂದು ನಾನು ಬಯಸುವುದಿಲ್ಲ" ಎಂದು ಹೇಳಲು, "ಎಲ್ಲ ನಾವು ಬಂದು ನಿಮ್ಮ ಗೆಳೆಯರನ್ನು ಭೇಟಿ ಮಾಡಲು ಇಷ್ಟವಿದೆ" ಎಂದನು.

ನಮ್ಮ ಮನೆಗೆ ಬರಲು ಅವರ ಬಳಿ ವಾಹನ ಸೌಲಭ್ಯವಿಲ್ಲದ್ದರಿಂದ ನಾನೇ ಅವರನ್ನು ಕರೆದುಕೊಂಡು ಹೋಗತೊಡಗಿದೆನು, ಮತ್ತು ಬಹುಬೇಗನೆ ದೇವರು ಅವರಲ್ಲಿ ಕಾರ್ಯಮಾಡಲು ತೊಡಗಿದನು. ಅವರಿಗೆ ಅಷ್ಟಾಗಿ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲವಾದರೂ ನಾನು ಅವರಿಗಾಗಿ ಪ್ರಾರ್ಥನೆ ಮಾಡುತ್ತಿರುವಂತೆ ದೇವರು ಅವರಲ್ಲಿ ಕಾರ್ಯಮಾಡುತ್ತಾ ಬಂದನಲ್ಲದೆ ದೇವರ ಪ್ರೀತಿಯು ಅವರಲ್ಲಿ ಪ್ರಕಟಗೊಳ್ಳುತ್ತಾ ಬಂತು. ಸ್ವಲ್ಪ ದಿನಗಳಲ್ಲೇ ನಾವು ಮತ್ತೊಂದು ದಂಪತಿಯನ್ನು ಭೇಟಿ ಮಾಡಿದೆವು ಮತ್ತು ನಾವು ಮೊದಲು ಪರಿಚಯವಾದ ದಂಪತಿಗಳಿಗೆ "ನಾವು ಆ ಮತ್ತೊಬ್ಬ ದಂಪತಿಯನ್ನು ಭೇಟಿ ಮಾಡಲು ಸಹಾಯ ಮಾಡುವಿರೋ?" ಎಂದು ಕೇಳಿದೆನು. ಅವರು ಒಪ್ಪಿಕೊಂಡರು ಮತ್ತು ಅದೊಂದು ದಿನ ಆ ಮತ್ತೊಬ್ಬ ದಂಪತಿಗಳಿಂದ ನನಗೆ ಕರೆ ಬಂದಿತು, "ಮಿ. ಡಾನ್, ನಾವು ನಿಮ್ಮ ಬಗ್ಗೆ ಕೇಳಿದ್ದೇವೆ. ನಮಗೆ ಏಕಾಂಗಿತನ ಬಹಳವಾಗಿ ಕಾಡುತ್ತಿದೆ, ನಾವು ನಿಮ್ಮನ್ನು ಭೇಟಿ ಮಾಡಬೇಕೆಂದಿದ್ದೇವೆ", ನಾನು ನಮ್ಮ ಮೊದಲ ರೊಮೇನಿಯಾದ ಸ್ನೇಹಿತರನ್ನು ಕರೆದುಕೊಂಡು ಅವರನ್ನು ಭೇಟಿ ಮಾಡಲು ಹೋದೆನು. ನಾವು ಅವರಿಗೆ ಊಟ, ಉಡುಗೊರೆ ಮತ್ತು ಇತರ ವಸ್ತುಗಳನ್ನು ತೆಗೆದುಕೊಂಡು ಹೋದೆವು. ನಾವು ಹಾಗೆ ಮಾಡುತ್ತಾ ಅವರನ್ನು ಭೇಟಿಮಾಡುತ್ತಾ ಬಂದಂತೆ ಎಲ್ಲವೂ ಚೆನ್ನಾಗಿಯೇ ನಡೆಯುತ್ತಿದೆ ಎನ್ನುತ್ತಿರುವಂತೆ ನಮ್ಮ ಪ್ರಥಮ ಸ್ನೇಹಿತರು ವರಿಗೆ, "ನೀವು ಸತ್ಯವೇದಾಧ್ಯಯನಕ್ಕೆ ಬರಬೇಕು. ಅವರು ಯೇಸುವಿನ ಕುರಿತು ಕಲಿಉತ್ತಾರೆ ಮತ್ತು ಅದು ಬಹಳ ಚೆನ್ನಾಗಿರುತ್ತದೆ" ಎಂದು ಆಹ್ವಾನಿಸಿದರು. ಆಗ ಅವರು "ಸ್ವಲ್ಪ ತಾಳಿರಿ! ನಾವು ಕಮ್ಯುನಿಸ್ಟ್ ದೇಶದಿಂದ ಬಂದಿದ್ದೇವೆ ಮತ್ತು ದೇವರು ಇದ್ದಾನೋ ಎನ್ನುವುದು ಖಾತ್ರಿಯಿಲ್ಲ. ನಮಗೆ ಈ ಯೇಸುವಿನ ವಿಷಯ ಬೇಕಿಲ್ಲ" ಎಂದು ಉತ್ತರಿಸಿದರು.

ನಾನು, "ಇರಲಿ, ನಾನೊಬ್ಬ ಸ್ನೇಹಿತನಾಗಿ ಇರುತ್ತೇನೆ", ಎಂದು ಹೇಳಿ ಅವರನ್ನು ವಾರಾಂತ್ಯದಲ್ಲಿ ಹೊರಗೆ ಕರೆದುಕೊಂಡು ಹೋಗಿ ಬಟ್ಟೆಬರೆಗಳನ್ನು ಮತ್ತು ಅಗತ್ಯವಸ್ತುಗಳನ್ನು ಕೊಡಿಸುತ್ತಿದ್ದೆನು. ಅವರಿಗೆ ಅದು ಗಾಬರಿಯೆನಿಸಿ ಒಲ್ಲದೆ ಹೋದರು. ನಾನು, "ನಿಮಗೆ ಈ ಕೋಟು ಬೇಡವೇನು?" ಎನ್ನಲು ಅವರು, ಬೇಕಾಗಿದೆ, ಆದರೆ ", "ಹಾಗಾದರೆ ಇದನ್ನು ತೆಗೆದುಕೊಳ್ಳೋಣ" ಎಂದೆ. ನಾನು ಕೃತ್ಯದಲ್ಲಿ ಪ್ರೀತಿಯನ್ನು ಪ್ರಕಟಿಸುತ್ತಾ ಇದ್ದೆನು ಆದರೂ ಅವರು ಸತ್ಯವೇದಾಧ್ಯಯನಕ್ಕೆ ಬರಲೊಪ್ಪಲಿಲ್ಲ. ನಾನು ಒಮ್ಮೆ ಅವರಿಗೆ, "ನೀವು ಅಲ್ಲಿಗೆ ಬಂದಲ್ಲಿ ಅಲ್ಲಿರುವ ಕೆಲವು ಅಮೆರಿಕನ್ನರು ನಿಮಗೆ ಉದ್ಯೋಗ ದೊರೆಯುವಂತೆ

ಪ್ರಯತ್ನಿಸಬಹುದು" ಎಂದಾಗ ಅವರು ಬಂದರು. ಅಂದು ನಾನು ಕರ್ತನಿಗೆ ಪ್ರಾರ್ಥಿಸುವಾಗ ತುಸು ಮೂರ್ಖನಂತೆ, "ಕರ್ತನೇ ನೀನು ಇಂದು ನನಗೆ ನಿಜವಾದ ಅನ್ಯಭಾಷೆಯ ವರವನ್ನು ನೀಡಬೇಕು, ಇಲ್ಲದಿದ್ದರೆ ನಮಗೆ ಪರಸ್ಪರರೊಡನೆ ಅರ್ಥಪೂರ್ಣ ಸಂಭಾಷಣೆ ಮಾಡಲು ಸಾಧ್ಯವೇ ಇಲ್ಲ", ಎಂದು ಹೇಳಿದೆನು. ಅಂದು ರಾತ್ರಿ ಕೆಲವು ಅಮೆರಿಕನ್ನರು ಕರ್ತನು ತಮಗೆ ಮಾಡಿದ ಉಪಕಾರಗಳ ಬಗ್ಗೆ ಸಾಕ್ಷಿ ನುಡಿದರು. ನಾನು ಮಾತನಾಡಲು ಪ್ರಾರಂಭಿಸಿದಂತೆ ಆ ಮತ್ತೊಬ್ಬ ರೊಮೇನಿಯಾದ ದಂಪತಿಗಳ ಪೈಕಿ ಅವರ ಹೆಂಡತಿಯ ಕಣ್ಣುಗಳು ಕಳೆಗೊಂಡವು, ಮತ್ತು ಆಕೆಯಲ್ಲಿ ಏನೋ ವಿಶೇಷವಾದ ಸಂಗತಿ ಜರುಗುತ್ತಿದೆ ಎನ್ನುವುದು ನನ್ನ ಅರಿವಿಗೆ ಬಂದಿತು. ವೈವಲ್ ಅಧ್ಯಯನ ಮುಗಿದ ನಂತರ ಅವರಿಗೆ, "ನಾನು ನಿಮಗಾಗಿ ಪ್ರಾರ್ಥನೆ ಮಾಡುತ್ತೇನೆ" ಎಂದು ಪ್ರಾರ್ಥನೆ ಮಾಡುತ್ತಿರುವಾಗಲೇ ದೇವರು ಅವರನ್ನು ಮುಟ್ಟಿ ಇಡೀ ಕೋಣೆಯನ್ನು ತನ್ನ ಪ್ರೀತಿಯಿಂದ ತುಂಬಿಸಿದನು. ಆಗ ಆ ಸ್ತ್ರೀಯು, "ಆ ಅಮೆರಿಕನ್ನರು ಮಾತನಾಡುತ್ತಿರುವಾಗ ನನಗೆ ಅವರ ಮಾತು ಅಷ್ಟಾಗಿ ತಿಳಿಯಲಿಲ್ಲ, ಆದರೆ ನೀವು ಎದ್ದು ನಿಂತು ಯೇಸುವಿನ ಕುರಿತು, ನಮ್ಮ ಮೇಲೆ ಆತನಿಗಿರುವ ಪೀತಿ, ನಮ್ಮೊಂದಿಗೆ ಸಂಬಂಧವನ್ನೇರ್ಪಡಿಸಿಕೊಳ್ಳುವ ಲುವಾಗಿ ಆತನು ಮಾಡಿದ ಕಾರ್ಯ, ಇವುಗಳನ್ನೆಲ್ಲ ನೀವು ವಿವರಿಸುವಾಗ ನೀವಾಡಿದ ಪ್ರತಿಯೊಂದು ಶಬ್ದವೂ ನನಗರ್ಥವಾಯಿತು! ನನಗೆ ಎಲ್ಲವೂ ಪೂರ್ಣವಾಗಿ ತಿಳಿಯಿತು! ಹೀಗೆ ಮಾಡಲು ದೇವರಿಗೆ ಮಾತ್ರ ಸಾಧ್ಯವಿದೆ! ದೇವರಿಗೆ ಮಾತ್ರ ಸಾಧ್ಯವಿದೆ!" ಎಂದು ನುಡಿದಳು. ಇದರ ಫಲವಾಗಿ ರೊಮೇನಿಯನ್ನರ ಜೀವಿತದಲ್ಲಿ ಮಾತ್ರವಲ್ಲ ನಮ್ಮೆಲ್ಲರ ಬದುಕಿನಲ್ಲೂ ಹಲವು ಬದಲಾವಣೆಗಳಾದವು.

ಅಂದಿನಿಂದ ಸೋಮವಾರಗಳ ರಾತ್ರಿ ನಮ್ಮ ಮನೆಯು ಅಂತರಾಷ್ಟ್ರೀಯ ಜನರಿಂದ – ರೊಮೇನಿಯನ್ನರು, ಬಲ್ಗೇರಿಯನ್ನರು ಮತ್ತು ರಷ್ಯನ್ನರು – ಇವರುಗಳಿಂದ ತುಂಬಲ್ಪಡುತ್ತಿತ್ತು. ದೇವರು ಅವರನ್ನೆಲ್ಲಾ ಬದಲಾಯಿಸುತ್ತಿದ್ದನು, ಮತ್ತು ನಾವು ಅವರನ್ನು ಪ್ರೀತಿಉತ್ತೇವೆಂಬುದು ಅವರಿಗೆ ಅರ್ಥವಾಯಿತು. ನಮ್ಮಲ್ಲಿ ಆಫ್ರಿಕನ್ನರು ಸಹ ಇದ್ದರು. ನಾವು ಪರಸ್ಪರರೊಡನೆ ಸಂಭಾಷಿಸಲು ಸಾಧ್ಯವಾಗದೆ ಹೋದರೂ ಅವರಿಗೆ ಒಂದು ವಿಷಯವಂತೂ ಸ್ಪಷ್ಟವಾಗಿತ್ತು – ನಾವು ಪ್ರಾರ್ಥನೆ ಮಾಡಿದಾಗ ದೇವರು ಅವರಿಗೆ ತನ್ನನ್ನು ಪ್ರಕಟ ಮಾಡಿಕೊಳ್ಳುತ್ತಾನೆ. ನಾನು ಅವರಿಗಾಗಿ ಏನನ್ನಾದರೂ ಮಾಡಲು ಸಿದ್ಧನಿದ್ದೇನೆ ಮತ್ತು ಅವರನ್ನು ಪ್ರೀತಿಸುತ್ತೇನೆಂದು ಸಹ ಅವರಿಗೆ ತಿಳಿದಿತ್ತು. ದೇವರು ಅವರ ಜೀವನವನ್ನೂ ಇತರರ ಜೀವನವನ್ನೂ ಮಾರ್ಪಡಿಸಿತು. ನಾನು ಒಂದು ದಿನ ಉದ್ಯಾನವನದಲ್ಲಿ ಭಿನ್ನ ವರ್ಣದ ಬೇರೆ ರಾಷ್ಟ್ರೀಯತೆಯ ಜನರನ್ನು ಭೇಟಿ ಮಾಡಿದ್ದು ಇದಕ್ಕೆಲ್ಲ ಕಾರಣವಾಗಿತ್ತು. ನಾನೇನೂ ಭಾವೋದ್ವೇಗಕ್ಕೆ ಒಳಗಾಗದಿದ್ದರೂ ಪ್ರೀತಿ ಎನ್ನುವುದು ಹೀಗೆ ಎಂದು ತಿಳಿದಿತ್ತು; ಇತರರು ನಿಮಗೆ ಏನು ಮಾಡಬೇಕೆಂದು ಬಯಸುವಿರೋ ಅದನ್ನೇ ನೀವು ಅವರಿಗೆ ಮಾಡಿರಿ. ನನ್ನ ಅನಿಸಿಕೆಗಳನ್ನು ಮೀರಿ ನಾನು ಅವರ ಯೋಗಕ್ಷೇಮಕ್ಕೆ ಗಮನಕೊಡುವಾಗ ಏನಾಯಿತು ಗೊತ್ತೇ? ಅವರದನ್ನು ಬಹಳವಾಗಿ ಪ್ರೀತಿಸಿದರು, ಅವರು ನನಗೆ 'ಫಿಲಿಯ' ಪ್ರೀತಿಯನ್ನು, ಅಂದರೆ ಸಂವೇದನೆಯುಳ್ಳ ಪ್ರೀತಿಯನ್ನು ತೋರಿದರು. ಅವರು ನನ್ನನ್ನು ಅಪ್ಪಿಕೊಂಡು"ನಿಮ್ಮನ್ನು ಪ್ರೀತಿಸುತ್ತೇನೆ" ಎನ್ನುತ್ತಾ ಮುತ್ತಿಟ್ಟರು. ಇದರಿಂದ ನನ್ನಲ್ಲಿ ಅವರ

ಮೇಲೆ ಸದ್ಭಾವನೆಗಳುಂಟಾದವು. ನಿಮ್ಮ ಜೀವನದಲ್ಲಿ ಭಾವತರಂಗಗಳು ಏಳಬೇಕೆಂದರೆ 'ಅಗಾಪೆ' ಪ್ರೀತಿಯನ್ನು ಅಭ್ಯಾಸ ಮಾಡಿಕೊಳ್ಳಿರಿ. ನಿಮ್ಮ ಭಾವನೆಗಳೇ ಇದ್ದರೂ ಅದನ್ನು ಪಕ್ಕಕ್ಕಿಟ್ಟು ಇತರರ ಉನ್ನತಿ ಮತ್ತು ಪ್ರಯೋಜನವನ್ನು ಆಶಿಸಿರಿ, ಇದು ಸಂವೇದನೆಯುಳ್ಳ ಪ್ರೀತಿಯನ್ನು ನಿಮ್ಮಲ್ಲಿ ಹುಟ್ಟಿಸುತ್ತದೆ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. 1. ಯೋಹಾನ 5:3 ಓದಿರಿ. ದೇವರ ಪೃಈತಿಯು ಹೇಗೆ ವ್ಯಕ್ತವಾಗಿದೆ ________________

***1 ಯೋಹಾನ 5:3*** *– ಅಲ್ಲಿ ಐದು ಮಂಟಪಗಳಿವೆ; ಇವುಗಳಲ್ಲಿ ಬಹುಮಂದಿ ರೋಗಿಗಳೂ ಕುರುಡರೂ ಮೈಒಣಗಿದವರೂ ಬಿದ್ದುಕೊಂಡಿರುವರು.*

2. ರೋಮಾಪುರದವರಿಗೆ 13:9–10 ಓದಿರಿ. ಈ ವಾಕ್ಯಗಳಲ್ಲಿರುವ ಆಜ್ಞೆಗಳು ಪ್ರೀತಿಯನ್ನು ಹೇಗೆ ವ್ಯಕ್ತಪಡಿಸುತ್ತವೆ.

***ರೋಮಾಪುರದವರಿಗೆ 13:9–10*** *– ಹೇಗಂದರೆ ವ್ಯಭಿಚಾರ ಮಾಡಬಾರದು, ನರಹತ್ಯ ಮಾಡಬಾರದು, ಕದಿಯಬಾರದು, ಪರರ ಸೊತ್ತನ್ನು ಆಶಿಸಬಾರದು ಈ ಮೊದಲಾದ ಕಟ್ಟಳೆಗಳು– ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬ ಒಂದೇ ಮಾತಿನಲ್ಲಿ ಅಡಕವಾಗಿವೆ. ಪ್ರೀತಿಯು ಮತ್ತೊಬ್ಬರಿಗೆ ಯಾವ ಕೇಡನ್ನೂ ಮಾಡುವದಿಲ್ಲ. ಆದಕಾರಣ ಪ್ರೀತಿಯಿಂದಲೇ ಧರ್ಮಪ್ರಮಾಣವು ನೆರವೇರುತ್ತದೆ.*

3. ರೋಮಾಪುರದವರಿಗೆ 12:19–21 ಓದಿರಿ. ನಮಗೆ ಮನಸ್ಸಿಲ್ಲದಿದ್ದರೂ ನಮ್ಮ ವೈರಿಗಳನ್ನು ಹೇಗೆ ಪ್ರೀತಿಸಲು ಸಾಧ್ಯವಿದೆ?

***ರೋಮಾಪುರದವರಿಗೆ 12:19–21*** *– ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವದನ್ನು ದೇವರಿಗೆ ಬಿಡಿರಿ. ಯಾಕೆಂದರೆ ಮುಯ್ಯಿಗೆ ಮುಯ್ಯಿ ತೀರಿಸುವದು ದೇವರ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬದಾಗಿ ಬರೆದದೆ. ಹಾಗಾದರೆ ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಅವನಿಗೆ ಕುಡಿಯುವದಕ್ಕೆ ಕೊಡು. ಹೀಗೆ ಮಾಡುವದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವದು. ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು.*

4. ತೀತನು 2:4 ಓದಿರಿ. ಪ್ರೀತಿಯ ಕುರಿತು ಈ ಭಾಗವು ಏನನ್ನು ತಿಳಿಸುತ್ತದೆ.

***ತೀತನು 2:4–5*** *– ಇದಲ್ಲದೆ ಅವರು ಪ್ರಾಯದ ಸ್ತ್ರೀಯರಿಗೆ – ನಿಮ್ಮ ಮೂಲಕ ದೇವರ ವಾಕ್ಯಕ್ಕೆ ದೂಷಣೆಯಾಗದಂತೆ ನೀವು ಗಂಡದಂದಿರನ್ನೂ ಮಕ್ಕಳನ್ನೂ ಪ್ರೀತಿಸುವವರೂ ದಮೆಯುಳ್ಳವರೂ ಪತಿವ್ರತೆಯರೂ ಮನಯಲ್ಲೇ ಕೆಲಸಮಾಡುವವರೂ ಕಲಿಸುವ ಹಾಗೆ ಬೋಧಿಸು.*

5. 1 ಕೊರಿಂಥದವರಿಗೆ 13: 4–8 ಓದಿರಿ. ಪ್ರೀತಿಯು ತತ್ವಗಳನ್ನು ವಿವರಿಸಿರಿ.

***1 ಕೊರಿಂಥದವರಿಗೆ 13: 4–8 –*** *ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆ ತೋರಿಸುವುದು, ಪ್ರೀತಿಯು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲ; ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ, ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ; ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ,ಎಲ್ಲವನ್ನೂ ಸಹಿಸಿಕೊಳ್ಳುತ್ತದೆ.*

6. 1 ಯೋಹಾನ 3:18 ಓದಿರಿ. ನಾವು ಪ್ರೀತಿಯನ್ನು ಹೇಗೆ ಅಭ್ಯಾಸ ಮಾಡಬೇಕು

***1 ಯೋಹಾನ 3:18*** *– ಪ್ರಿಯರಾದ ಮಕ್ಕಳೇ, ನಾವು ಬರೀಮಾತಿನಿಂದಗಲೀ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು.*

# ಉತ್ತರಗಳು

1. 1. ಯೋಹಾನ 5:3 ಓದಿರಿ. ದೇವರ ಪ್ರೀತಿಯು ಹೇಗೆ ವ್ಯಕ್ತವಾಗಿದೆ

**ಆತನ ಆಜ್ಞೆಗಳ ಮೂಲಕ**

2. ರೋಮಾಪುರದವರಿಗೆ 13:9–10 ಓದಿರಿ. ಈ ವಾಕ್ಯಗಳಲ್ಲಿರುವ ಆಜ್ಞೆಗಳು ಪ್ರೀತಿಯನ್ನು ಹೇಗೆ ವ್ಯಕ್ತಪಡಿಸುತ್ತವೆ.

**ಪ್ರೀತಿಯು ತನ್ನ ನೆರೆಯವರಿಗೆ ಯಾವುದೇ ಕೇಡನ್ನು ಮಾಡುವುದಿಲ್ಲ. ನಾವು ನಮ್ಮ ನೆರೆಯವರಿಗೆ ಹೇಗೆ ಪ್ರತಿಕ್ರಿಯಿಸಬೇಕು ಎನ್ನುವುದನ್ನು ತೋರಿಸುವ ಮೂಲಕ ಪ್ರತಿ ಆಜ್ಞೆಯು ಪ್ರೀತಿಯನ್ನು ವ್ಯಕ್ತಪಡಿಸುತ್ತದೆ.**

3. ರೋಮಾಪುರದವರಿಗೆ 12:19–21 ಓದಿರಿ. ನಮಗೆ ಮನಸ್ಸಿಲ್ಲದಿದ್ದರೂ ನಮ್ಮ ವೈರಿಗಳನ್ನು ಹೇಗೆ ಪ್ರೀತಿಸಲು ಸಾಧ್ಯವಿದೆ?

**ನಮ್ಮ ವೈರಿಯು ಹಸಿದಿದ್ದರೆ ಅವನಿಗೆ/ಳಿಗೆ ಊಟಕ್ಕೆ ಬಡಿಸಬೇಕು; ಬಾಯಾರಿದ್ದರೆ ಕುಡಿಯುವದಕ್ಕೆ ಕೊಡಬೇಕು. ಇತರರ ಭಾವನೆಗಳೇನೇ ಆಗಿದ್ದರೂ ನಾವು ಅವರ ಒಳಿತನ್ನು ಬಯಸಬೇಕು.**

4. ತೀತನು 2:4 ಓದಿರಿ. ಪ್ರೀತಿಯ ಕುರಿತು ಈ ಭಾಗವು ಏನನ್ನು ತಿಳಿಸುತ್ತದೆ.

**ಪ್ರೀತಿಯು ಕೇವಲ ಭಾವನೆಯಲ್ಲ. ಅದನ್ನು ಅಭ್ಯಾಸಮಾಡಿಕೊಳ್ಳಲು ಸಾಧ್ಯವಿದೆ.**

5. 1 ಕೊರಿಂಥದವರಿಗೆ 13: 4–8 ಓದಿರಿ. ಪ್ರೀತಿಯು ತತ್ವಗಳನ್ನು ವಿವರಿಸಿರಿ.

**ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆ ತೋರಿಸುವದು. ಪ್ರೀತಿಯು ಹೊಟ್ಟೆಕಿಚ್ಚು ಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ; ಉಬ್ಬಿಕೊಳ್ಳುವದಿಲ್ಲ; ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ; ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ; ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದು ಹೋಗುವದಿಲ್ಲ.**

6. 1 ಯೋಹಾನ 3:18 ಓದಿರಿ. ನಾವು ಪ್ರೀತಿಯನ್ನು ಹೇಗೆ ಅಭ್ಯಾಸ ಮಾಡಬೇಕು

**ನಾವು ಬರೀ ಮಾತಿನಿಂದಾಗಲಿ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು.**

# ಪಾಠ 13

# ದೇವರ ರೀತಿಯ ಪ್ರೀತಿ – ಭಾಗ 2

*ಡ್ವೂಣ್ ಕ್ರೊ*

ಭೂಮಿಯ ಮೇಲೆ ಕಾಣುವ ಯಾವುದೇ ಪ್ರೀತಿಗಿಂತಲೂ ಯೇಸುಕ್ರಿಸ್ತನೇ ಪ್ರೀತಿಯ ಅತ್ಯಂತ ಶ್ರೇಷ್ಠ ಅಭಿವ್ಯಕ್ತಿಯಾಗಿದ್ದಾನೆ, ಹೀಗಿದ್ದರೂ ಆತನು ಒಂದು ಬಾರಿಯಾದರೂ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳಿದ ದಾಖಲೆ ಬೈಬಲ್ನಲ್ಲಿ ಇಲ್ಲ. ಇದು ಬಹಳ ಆಶ್ಚರ್ಯವಲ್ಲವೇ? ಯಾಕೆ ಗೊತ್ತೇ? ಯಾಕೆಂದರೆ ಪ್ರೀತಿಯು ಪದಗಳನ್ನು ಮೀರಿದ್ದಾಗಿದೆ; ಅದು ಕಾರ್ಯದಲ್ಲಿ ವ್ಯಕ್ತಗೊಳ್ಳುತ್ತದೆ. ಒಂದು ವೇಳೆ ನಾನು ನನ್ನ ಹೆಂಡತಿಗೆ, "ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಹೇಳಿ ಅವಳ ವಿರುದ್ಧವಾಗಿ ವ್ಯಭಿಚಾರ ಮಾಡಿದಲ್ಲಿ ಅವಳು ನನ್ನ ಮಾತನ್ನು ನಂಬುತ್ತಾಳೋ ಅಥವಾ ನನ್ನ ಕ್ರಿಯೆಯನ್ನು ನಂಬುತ್ತಾಳೋ? ಅವಳು ನನ್ನ ಕಾರ್ಯಗಳ ನಿಮಿತ್ತ ನನ್ನನ್ನು ನಂಬುತ್ತಾಳೆ, ಯಾಕೆಂದರೆ ಪ್ರೀತಿಯ ಪ್ರತಿಶತ 95ರಷ್ಟು ಭಾಗವು ಅಮೌಖಿಕವಾಗಿದೆ. ಅದು ಮಾತುಗಳಲ್ಲಿ ಅಲ್ಲ ಕೃತ್ಯಗಳಲ್ಲಿ ವ್ಯಕ್ತವಾಗುತ್ತದೆ.

1 ಯೋಹಾನ 3:18 *"ಪ್ರಿಯರಾದ ಮಕ್ಕಳೇ, ನಾವು ಬರೀ ಮಾತಿನಿಂದಾಗಲಿ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು."* ಪ್ರೀತಿಯು ಕ್ರಿಯಾಪದವಾಗಿದೆ. ಮತ್ತಾಯ 25:35,36 ರಲ್ಲಿ, ಯೇಸುವು ಪ್ರೀತಿಯ ಪ್ರೇರಣೆಯಿಂದಾಗುವ ಕಾರ್ಯಗಳನ್ನು ವಿವರಿಸುತ್ತಾನೆ – "ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಎರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ' ಮತ್ತು ವಚನ 40ರಲ್ಲಿ – "ಈ ನನ್ನ ಸಹೋದರರಲ್ಲಿ ಕೇವಲ ಅಲ್ಪವಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು" ನೋಡಿರಿ, ಪ್ರೀತಿಯ ಕ್ರಿಯೆಯಾಗಿದೆ; ನೀನು ಪ್ರೀತಿಯನ್ನು ಮಾಡಬೇಕಾದಂತದ್ದು. ಇಬ್ರಿಯ 6:10ರಲ್ಲಿ, ನೀವು *"ದೇವಜನರಿಗೆ ಉಪಚಾರ ಮಾಡಿದಿರಿ, ಇನ್ನೂ ಮಾಡುತ್ತಾ ಇದ್ದೀರಿ. ಈ ಕೆಲಸವನ್ನೂ, ಇದರಲ್ಲಿ ನೀವು ದೇವರ ನಾಮದ ವಿಷಯವಾಗಿ ತೋರಿಸಿದ ಪ್ರೀತಿಯನ್ನೂ ಆತನು ಮರೆಯುವದಕ್ಕೆ ಅನ್ಯಾಯಸ್ಥನಲ್ಲ; ಎಂದು ಬರೆದದೆ."* ಮತ್ತಾಯ 22 ರಲ್ಲಿ, ಯೇಸುವನ್ನು "ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆ ಮುಖ್ಯವಾದದ್ದು" ಎಂದು ಕೇಳಲಾಗಿ ಯೇಸುವು, "ದೇವರನ್ನು ಮತ್ತು ನೆರೆಹೊರೆಯವರನ್ನು ಪ್ರೀತಿಸುವುದು" ಎಂದು ಹೇಳಿದನು. ಇದನ್ನು ಸರಿಯಾಗಿ ಗ್ರಹಿಸಿದಲ್ಲಿ ಈ ಎರಡೂ ಆಜ್ಞೆಗಳು ಒಂದೇ ಎಂದು ತಿಳಿಯುತ್ತದೆ.

ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ಯೇಸು ಹೇಳಿದನು. ಇತರರನ್ನು ಪ್ರೀತಿಸುವ ಮೂಲಕ ನಾವು ಪ್ರಯೋಗಿಕವಾಗಿ ಯೇಸುಕ್ರಿಸ್ತನನ್ನು ಪ್ರೀತಿಸುವ ಒಂದು ಅದ್ಭುತವಾದ ಅವಕಾಶ ನಮಗಿದೆ ಎಂದು ಬೈಬಲ್ ಹೇಳುತ್ತದೆ.

ಕಳೆದ ವಾರದಲ್ಲಿ, ನಾನು ಉದ್ಯಾನವನದಲ್ಲಿ ರೊಮೇನಿಯರನ್ನು ಭೇಟಿಯಾದೆನೆಂದು ತಿಳಿಸಿದೆನಲ್ಲಾ, ನನ್ನ ಭಾವನೆಗಳಿಗೆ ಹೊರತಾಗಿ ನಾನು ಅವರ ಹಿತಚಿಂತನೆ ಮತ್ತು ಅನುಕೂಲವನ್ನು ಅಪೇಕ್ಷಿಸಿದ್ದರಿಂದ ಅವರ ಜೀವನ ಬದಲಾಯಿತು. ಅವರು ಮೈಬಣ್ಣ ಮತ್ತು ಭಾಷೆ ಭಿನ್ನವಾಗಿದ್ದರೂ ಯೇಸು ಮಾಡಿದ ಹಾಗೆ ನಾನು ಇತರರ ಹಿತಚಿಂತನೆ ಮತ್ತು ಲಾಭವನ್ನು ಅಪೇಕ್ಷಿಸಿದಾಗ ದೇವರ ಪ್ರೀತಿಯು ತಾನಾಗಿಯೇ ವ್ಯಕ್ತವಾಗುತ್ತದೆ ಎಂದು ನಾನು ತಿಳಿದಿದ್ದೆನು. ಆತನಿಗೆ ಶಿಲುಬೆಗೆ ಹೋಗಲು ಮನಸ್ಸಿರಲಿಲ್ಲ. ಆತನು "ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ" ಎಂದನು. ಯೇಸುವು ತನ್ನ ಭಾವನೆಯನ್ನು ಬದಿಗೊತ್ತಿ ನಮ್ಮ ಹಿತಚಿಂತನೆ ಮತ್ತು ಲಾಭವನ್ನು ಅಪೇಕ್ಷಿಸಿದನು.

ಒಂದು ದಿನ ನನಗೆ ಆ ರೊಮೇನಿಯನ್ನರಿಂದ ಕರೆಬಂದಿತು. ಅವರು ಅಳುತ್ತಿದ್ದರು. ಅವರು ಅಮೇರಿಕಾ ದೇಶದಲ್ಲಿ ನೆಲೆಸಿ ಏಳೂವರೆ ವರ್ಷಕಾಲ ಗತಿಸಿತ್ತು. ಅವರು ಕಾನ್ಸಸ್ ರಾಜ್ಯದಲ್ಲಿದ್ದುಕೊಂಡು ಉದ್ಯೋಗ ಮಾಡುತ್ತಿದ್ದರು. ಅವರು, "ನಮ್ಮ ರಾಜಕೀಯ ಆಶ್ರಯದ ಪ್ರಮಾಣಪತ್ರಗಳ ಕುರಿತು ತೀರ್ಪು ಹೊರಬಿದ್ದಿದೆ. ಅವರು ನಮಗೆ ಮನವಿಮಾಡಿಕೊಳ್ಳಲು ಮೂವತ್ತು ದಿನಗಳ ಕಾಲಾವಕಾಶ ನೀಡಿದ್ದಾರೆ ಮತ್ತು ತದನಂತರ ನಮ್ಮನ್ನು ಗಡಿಪಾರು ಮಾಡುತ್ತಾರೆ' ಎಂದು ಅವಲತ್ತುಕೊಂಡರು. ಸಾಧಾರಣ ಪರಿಸ್ಥಿತಿಯಲ್ಲಿ ಈ ದೇಶದಲ್ಲಿ ರಾಜಕೀಯ ಆಶ್ರಯ ಸಿಗುವ ಅವಕಾಶ ಕೇವಲ 2%–5% ಮಾತ್ರ. ರೊಮೇನಿಯನ್ನರು ಒಬ್ಬ ವಕೀಲನ ಬಳಿಗೆ ಹೋದರು ಮತ್ತು ಆ ವಕೀಲನು ಅವರಿಗೆ ಯಾವುದೇ ಅವಕಾಶವಿಲ್ಲವೆಂದು ಹೇಳಿಕಳುಹಿಸಿದನು. ನಾನು ಅವರಿಗೆ, ನಾವು ನಿಮಗಾಗಿ ಪ್ರಾರ್ಥಿಸುತ್ತೇವೆ ಮತ್ತು ಸಹಾಯಕ್ಕಾಗಿ ಪ್ರಯತ್ನಿಸುವೆವು ಎಂದು ಹೇಳಿದೆನು. ಅದು ಹೇಗೆಂದು ನನಗೂ ತಿಳಿದಿರಲಿಲ್ಲ. ಅವರನ್ನು ವಾಪಸ್ ಕಳುಹಿಸುವುದು ಬಹಳ ಅನ್ಯಾಯ ಎನ್ನುವುದು ನನ್ನ ಆಲೋಚನೆಯಾಗಿತ್ತು – ಅದರಲ್ಲೂ ಅವರ ಮಕ್ಕಳಿಗೆ ಈಗ ರೊಮೇನಿಯ ಭಾಷೆಯೂ ಅಷ್ಟಾಗಿ ಬರುತ್ತಿರಲಿಲ್ಲ.

ನನ್ನ ಸಹೋದರರು, ನಮ್ಮ ಕೊಲೆರಾಡೋ ರಾಜ್ಯದ ಸಂಸದ್ ಸದಸ್ಯರಿಗೆ ಕರೆಮಾಡಿದಾಗ ಅವರು ಕಾನ್ಸಸ್‌ನ ಸೆನೆಟರ್ ಸ್ಯಾಮ್ ಬ್ರೌನ್‌ರನ್ನು ಸಂಪರ್ಕಿಸುವಂತೆ ಹೇಳಿದರು – ಯಾಕೆಂದರೆ ಈಗ ರೊಮೇನಿಯನ್ನರು ಕಾನ್ಸಸ್ ರಾಜ್ಯದಲ್ಲಿ ನೆಲೆಸಿದ್ದರು. ಅದೀಗ ಒಳ್ಳೆಯದೇ ಆಯಿತು ಯಾಕೆಂದರೆ ನನ್ನ ಸ್ನೇಹಿತೆ ಕಿಮ್ ಎಂಬಾಕೆಯು ಸೆನೆಟರ್ ಬ್ರೌನ್‌ಬ್ಯಾಕ್ ಬಳಿ ಉದ್ಯೋಗದಲ್ಲಿದ್ದಳು. ನಾನು ಆಕೆಯ ಸಹಾಯ ಬೇಡಲು ಆಕೆ ವಾಷಿಂಗ್ಟನ್ ಡಿ.ಸಿ ಯಲ್ಲಿ ಈ ವಿಷಯವನ್ನು ಇತ್ಯರ್ಥಗೊಳಿಸಲು ನಾಲ್ಕು ಜನರನ್ನು ನಿಯೋಜಿಸಿದಳು. ಕಾನ್ಸಸ್‌ನ ಸಬ್ಲೆಟ್ ಪ್ರದೇಶದ ಸಮುದಾಯವು ಈ ರೊಮೇನಿಯನ್ನರ ಬೆನ್ನಿಗೆ ನಿಂತು ಇವರು ಇಲ್ಲಿಯೇ

ಇರಬೇಕೆಂದು ಸಹಿಸಂಗ್ರಹ ಮಾಡಿ ಮನವಿ ಸಲ್ಲಿಸಿದರು. "ಅವರು ಒಳ್ಳೆಯ ಜನರಿದ್ದಾರೆ, ಅವರು ತೆರಿಗೆ ಕಟ್ಟುತ್ತಿದ್ದಾರೆ ಅಲ್ಲದೆ ಶ್ರಮಜೀವಿಗಳೂ ಆಗಿದ್ದಾರೆ" ಎಂದು ದನಿಗೂಡಿಸಿದರು. ನಡೆದ ಎಲ್ಲಾ ಸಂಗತಿಗಳ ಕುರಿತು ವಾರ್ತಾಪತ್ರಿಕೆಯಲ್ಲಿ ಒಂದು ಪುಟದ ವರದಿಯಾಯಿತು. ಮುಂದೆ ಅದ್ಭುತವೇ ನಡೆದು ಹೋಯಿತು. ಸರ್ಕಾರದ ಉನ್ನತಾಧಿಕಾರಿಗಳು ಎಲ್ಲವನ್ನೂ ಅರ್ಥಮಾಡಿಕೊಂಡು ತಮ್ಮ ತೀರ್ಮಾನವನ್ನು ಬದಲಿಸಿ ರೊಮೇನಿಯನ್ನರು ಸಂಯುಕ್ತ ಅಮೇರಿಕ ಸಂಸ್ಥಾನದಲ್ಲಿ ನೆಲೆಸಬಹುದೆಂದು ಅನುಮತಿ ಪತ್ರ ನೀಡಿದರು.

ನಾನು ಕಾನ್ಸಸ್‌ನ ಸಬ್ಲೆಟ್‌ಗೆ ಹೋದೆನು. ನಾನು ಅವರಲ್ಲಿಗೆ ಹೋಗುತ್ತಿರುವೆನೆಂದು ನನ್ನ ಸ್ನೇಹಿತರಿಗೆ ತಿಳಿದಿರಲಿಲ್ಲ. ಆ ಸಮಯದಲ್ಲಿ ಅವರು ತಮಗೆ ರಾಜಕೀಯ ಆಶ್ರಯ ಸಿಕ್ಕಿದ್ದಕ್ಕಾಗಿ ಸೆನೆಟರ್ ಬ್ರೌನ್ ಬ್ಯಾಕ್‌ರವರನ್ನು ದೂರವಾಣಿ ಕರೆಯ ಮೂಲಕ ವಂದಿಸುತ್ತಿದ್ದರು. ಅಂದು ರಾಷ್ಟ್ರಾಧ್ಯಕ್ಷರಾದ ಕ್ಲಿಂಟನ್‌ರವರ ಮೇಲಿನ ದೋಷಾರೋಪದ ವಿಚಾರಣೆಯ ಕೊನೆಯ ದಿನವಾಗಿದ್ದದರಿಂದ ಅವರು ವೈಯಕ್ತಿಕವಾಗಿ ಇಲ್ಲಿರಲು ಸಾಧ್ಯವಾಗಿರಲಿಲ್ಲ. ಆದರೆ ಎಬಿಸಿ ಮತ್ತು ಎನ್‌ಬಿಸಿ ಸುದ್ದೀ ಸಂಸ್ಥೆಗಳು ತಮ್ಮ ಕ್ಯಾಮೆರಾಗಳೊಂದಿಗೆ ಅಲ್ಲಿದ್ದವು. ಅದು ಮುಗಿದ ಕೂಡಲೆ ಅವರು ಓಡಿಬಂದು ನನ್ನನ್ನು ಅಪ್ಪಿಕೊಂಡರು. ಆಗ ತಿರುಗಿ ಕ್ಯಾಮೆರಾಗಳು ನನ್ನ ಕಡೆಗೆ ದೃಷ್ಟಿಸಿದವು; ಅವರು ನನ್ನನ್ನು, "ನೀವು ಯಾರು? ನಿಮಗೆ ಈ ಜನರು ಹೇಗೆ ಗೊತ್ತು?" ಎಂದು ಕೇಳಿದರು. ನಾನು ರೊಮೇನಿಯರನ್ನು ಭೇಟಿಯಾದದ್ದು, ಅವರ ಕ್ಷೇಮಾಭ್ಯುದಯವನ್ನು ಹಾರೈಇದ್ದು, ಮತ್ತಾಯ 7:12 ರಲ್ಲಿ ಯೇಸು ಹೇಳಿದ ಪ್ರಕಾರ ಮಾಡಿದ್ದು, ಹೀಗೆ ಎಲ್ಲವನ್ನು ಹೇಳಿದೆನು.

ಅನಂತರ ನಾವು ಜಿಮ್ನಾಸಿಯಾಗೆ ಹೋದೆವು. ಅಲ್ಲಿ ಕೆಂಪು, ಬಿಳಿ ಮತ್ತು ನೀಲಬಣ್ಣದ ಬಲೂನ್‌ಗಳನ್ನು ಕಟ್ಟಿದ್ದರು ಹಾಗೂ ದೇಶಭಕ್ತಿ ಗೀತೆಗಳನ್ನು ಹಾಡುತ್ತಿದ್ದರು ಮತ್ತು ಸ್ನೇಹಿತರು ಒಳಗೆ ಬಂದಾಗ ಎಲ್ಲರೂ ಉದ್ಘೋಷ ಮಾಡುತ್ತಿದ್ದರು ಮತ್ತು ಕೆಲವರು ಅಳುತಿದ್ದರು. ನಗರದ ಮೇಯರ್‌ರವರು ಹೇಳಿದರು, 'ಇಂದು ಫೆಬ್ರವರಿ 12 ನೇ ತಾರೀಖು ಮತ್ತು ಈ ದಿನವನ್ನು ರೊಮೇನಿಯನ್ನರ ಗೌರವದಲ್ಲಿ ಜೂಕಾನ್ ಕುಟುಂಬ ದಿನ ಎಂದು ಕರೆಯಲಾಗುತ್ತದೆ. ಅವರ ಗೌರವಾರ್ಥವಾಗಿ ಅಂದು ವಾಷಿಂಗ್ಟನ್ ಡಿ.ಸಿ ಯ ಕಾಪಿಟಾಲ್ ಮೇಲೆ ಸೆನೆಟರ್‌ರವರು ಹಾರಿಸಿದ್ದ ಅಮೇರಿಕದ ಧ್ವಜವನ್ನು ರೊಮೆನಿಯನ್ನರಿಗೆ ನೀಡಲಾಯಿತು. ತಮ್ಮ ಜೀವಮಾನ ಪೂರ್ತಿ ಅಮೇರಿಕಾದಲ್ಲಿ ನೆಲೆಸಬಹುದೆಂದು ಹೇಳುವ ಪೇಪರ್‌ಗಳನ್ನು ಸಹ ಅವರಿಗೆ ನೀಡಲಾಯಿತು. ಅವರೆಲ್ಲರೂ ಸಾಕ್ಷಿನುಡಿದರು ಮತ್ತು ಪ್ರಾರ್ಥನೆ ಮಾಡುವಂತೆ ನನ್ನನ್ನು ಕೇಳಿಕೊಂಡರು. ನಾನು ಹೇಳಿದೆ – 'ಈ ದಿನ ನಾವು ಇನ್ನೂ ಪೂರ್ತಿಯಾಗಿ ಒಬ್ಬರನ್ನೊಬ್ಬರು ವಂದಿಸಿರಲಿಲ್ಲಿ; ಅದು ಯಾರೆಂದರೆ ಸರ್ವಶಕ್ತನಾದ ದೇವರು. ಕೊಲೊರಾಡೊ ಸ್ಪ್ರಿಂಗ್ಸ್‌ನ ಆ ಉದ್ಯಾನವನದಲ್ಲಿ ಏಳೂವರೆ ವರ್ಷಗಳ ಹಿಂದೆ, ಈವತ್ತು ನಾನು ದೇವರ ಪ್ರೀತಿಯನ್ನು ಯಾರೊಂದಿಗಾದರೂ ಹಂಚಿಕೊಳ್ಳಬೇಕೆಂದು ದೇವರನ್ನು ಕೇಳಿಕೊಳ್ಳುತ್ತಿದ್ದೆನು. ಆಗ ಆತನು ನನ್ನನ್ನು ಈ ರೊಮೇನಿಯನ್ನರ ಬಳಿಗೆ ನಡಿಸಿದನು' ನಾನು ಈ ಇಡೀ ಸಂಗತಿಯನ್ನು ಪುನಃ ಒಂದಾವರ್ತಿ ಹೇಳಿ, "ದೇವರು ನಿಮಗೆ ಸಹಾಯ ಮಾಡಬೇಕೆಂದಿದ್ದಾನೆ– ಅಮೇರಿಕಾ ದೇಶಕ್ಕೆ ನಿಮಗೆ ಸ್ವಾಗತ" ಎಂದು ಅಭಿನಂದಿಸಿದೆನು.

ಇದೆಲ್ಲವೂ ನಡೆದದ್ದು ಒಂದು ಅದ್ಭುತದಂತೆಯೇ ಇತ್ತು. ನನಗೆ ಸರಿಯಾದ ಸಮಯದಲ್ಲಿ ತಕ್ಕ ಸ್ಥಳದಲ್ಲಿ ಸರಿಯಾದ ಜನರು ಗೊತ್ತಿದ್ದರು. ಇದೆಲ್ಲವೂ ನಡೆಯುವ ಒಂದು ವರ್ಷದ ಮೊದಲು ನನ್ನ ಸ್ನೇಹಿತೆ ಕಿಮ್, ಆಂಡ್ರೂ ವಾಮ್ಮಕ್ ಮಿನಿಸ್ಟ್ರೀಸ್‌ನಲ್ಲಿ ಸೆವೆಟರ್ ಬ್ರೌನ್‌ಬ್ಯಾಕ್‌ರವರು ಮತ್ತು ನಾನು ಭೇಟಿಯಾಗುವಂತೆ ಅನುಕೂಲ ಮಾಡಿಕೊಟ್ಟಿದ್ದರು. ಬ್ರೌನ್‌ಬ್ಯಾಕ್‌ರವರಿಗೆ, 'ನೀವು ಡಾನ್‌ಕ್ರೋರವರನ್ನು ಭೇಟಿಮಾಡಬೇಕು' ಎಂದು ಕಿಮ್ ಹೇಳಿದ್ದರು. ಅದು ಯಾಕೆಂದು ತಿಳಿಯದೆ ನಾನು ಗೊಂದಲಗೊಂಡಿದ್ದೆನು. ಆ ಸಮಯದಲ್ಲಿ, ದೇವರು ಒಂದು ಕುಟುಂಬಕ್ಕೆ ಸಹಾಯವಾಗುವಂತೆ ಇವುಗಳನ್ನು ಸಿದ್ಧಪಡಿಸುತ್ತಿದ್ದಾನೆಂದು ನನಗೆ ತಿಳಿದಿರಲಿಲ್ಲ. ಕೇವಲ ಯೇಸುಕ್ರಿಸ್ತನು ಹೇಳಿದಂತ 'ಜನರು ನಿಮಗೆ ಏನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ' ಎನ್ನುವ ಆಜ್ಞೆಯ ನಿಮಿತ್ತ ಆತನು ತನ್ನನ್ನು ತನ್ನ ಪ್ರೀತಿಯನ್ನೂ ಪ್ರಕಟಿಸಿಕೊಂಡನು. ಈ ಅದ್ಭುತವನ್ನು ಅವರು ಎಂದೂ ಮರೆಯಲಾರರು ಮತ್ತು ಇಂದಿಗೂ ಅವರು, "ಇದು ದೇವರಿಂದಲೇ ಆದದ್ದು" ಎಂದು ಹೇಳುತ್ತಾರೆ. ಅಂಕಾ ಎನ್ನುವಾ ರೊಮೇನಿಯಾದ ಸ್ತ್ರೀಯು "ನನ್ನ ನಂಬಿಕೆ ಏರುಪೇರಾಗುತ್ತಿತ್ತು ಆದರೆ ದೇವರು ನಂಬಿಗಸ್ತನು, ನಾವು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಉಳಿದುಕೊಳ್ಳಲು ಆತನು ಸಹಾಯಮಾಡಿದನು" ಎಂದು ಹೇಳುತ್ತಾಳೆ.

ಪ್ರೀತಿಗಾಗಿ ಹಾತೊರೆಯುತ್ತಿರುವ ದೊಡ್ಡ ಸಮೂಹವೆ ಇದೆ. ದೇವರ ವಾಕ್ಯದಿಂದ ಪ್ರೀತಿಯ ತತ್ವಗಳನ್ನು ನೀನು ಮತ್ತು ನಾನು ಅರ್ಥಮಾಡಿಕೊಂಡರೆ ಮಾತ್ರವೇ ಆ ಜನರಿಗೆ ಪ್ರೀತಿ ಲಭಿಸುತ್ತದೆ. ಪ್ರೀತಿ ದಯೆತೋರಿಸುವುದು, ಇತರ ಕ್ಷೇಮಾಭ್ಯುದಯವನ್ನು ಬಯಸುತ್ತದೆ–ಯೇಸುವು ತಾನು ಕ್ರೂಜೆಗೆ ಹೋಗುವಾಗ ನಮ್ಮ ಹಿತರಕ್ಷಣೆಯನ್ನು ಗುರಿಯಾಗಿಸಿ ಕೊಂಡಿದ್ದನು. ಈ ದಿನ ದೈವಪ್ರೀತಿಯಿಂದ ಪ್ರೀತಿಸುವುದೆಂದರೆ ಏನು ಎನ್ನುವ ಸೂತ್ರಗಳನ್ನು ನೀವು ತಿಳಿದುಕೊಳ್ಳುವಂತೆ ದೇವರ ಆಶೀರ್ವಾದ ನಿಮ್ಮ ಮೇಲಿರಲಿ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಮತ್ತಾಯ 7:12 ಓದಿರಿ. ಸುವರ್ಣ ಸೂತ್ರವನ್ನು ನಿಮ್ಮ ಮಾತಿನಲ್ಲಿ ವಿವರಿಸಿರಿ

   ***ಮತ್ತಾಯ 7:12–*** *ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ, ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ.*

2. ಮತ್ತಾಯ 7:12 ಓದಿರಿ ಪ್ರೀತಿಯನ್ನು ಹುಡುಕುವ ಪ್ರಯತ್ನದಲ್ಲಿ ಅನೇಕರು ಸರಿಯಾದ ವ್ಯಕ್ತಿಗಾಗಿ ಹುಡುಕುತ್ತಾರೆ. ನೀವು ಸರಿಯಾದ ವ್ಯಕ್ತಿಯನ್ನು ಹುಡುಕಲು ಪ್ರಯತ್ನಿಸಬೇಕೋ ಅಥವಾ ನೀವೇ ಆ ಸರಿಯಾದ ವ್ಯಕ್ತಿಯಾಗಬೇಕೋ?

3. 1 ಯೋಹಾನ 5:3 ಓದಿರಿ. ಪ್ರೀತಿ ಒಂದು ಭಾವನೆಯೇ ಅಥವಾ ಅದು ನೀವು ಮಾಡುವ ಕಾರ್ಯವೇ?

   ***1 ಯೋಹಾನ 5:3–*** *ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ.*

4. 1 ಯೋಹಾನ 3:18 ಓದಿಕೊಳ್ಳಿರಿ. ನೀವು ನಿಮ್ಮ ಹೆಂಡತಿ ಅಥವಾ ಗಂಡನಿಗೆ 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು ಹೇಳಿ ಹೋಗಿ ವ್ಯಭಿಚಾರ ಮಾಡಿದಲ್ಲಿ ಅವರು ನಿಮ್ಮ ಮಾತುಗಳನ್ನು ನಂಬುತ್ತಾರೊ ಇಲ್ಲವೇ ಕೃತ್ಯವನ್ನೋ

   ***1 ಯೋಹಾನ 3:18*** *– ಪ್ರಿಯರಾದ ಮಕ್ಕಳೇ, ನಾವು ಬರೀಮಾತಿನಿಂದಗಲೀ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು.*

5. ರೋಮಾಪುರದವರಿಗೆ 5:6–8 ಓದಿರಿ. ಯೇಸುವಿಗೆ ನಮಗಾಗಿ ತನ್ನ ಪ್ರಾಣಕೊಡಬೇಕೆಂಬ ಭಾವನೆ ಇತ್ತೆಂದು ನಿಮಗನಿಸಬಹುದೇ?

   ***ರೋಮಾಪುರದವರಿಗೆ 5:6–8*** *– ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಹೀನರಿಗೋಸ್ಕರ ಪ್ರಾಣಕೊಟ್ಟನು. ನೀತಿವಂತನಿಗೋಸ್ಕರ ಯಾರಾದರೂ ಪ್ರಾಣಕೊಡುವದಕ್ಕೆ ಯಾವನಾದರೂ ಧೈರ್ಯಮಾಡಿದರೂ ಮಾಡಾನು. ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ.*

6. ಗಲಾತ್ಯದವರಿಗೆ 5:22 ಓದಿರಿ. ದೇವರು ನಮ್ಮ ಜೀವನದ ಕೇಂದ್ರ ವ್ಯಕ್ತಿಯಾಗಿರದಿದ್ದರೆ ಯಾರನ್ನಾದರೂ ಪ್ರೀತಿಸಲು ಸಾಧ್ಯವೇ?

*__ಗಲಾತ್ಯ 5:22__ – ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನಂದರೆ – ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ.*

7. 1 ಯೋಹಾನ 4:8 ಓದಿರಿ ನಾವು ಇತರರನ್ನು ಪ್ರೀತಿ ಮಾಡಲು ನಮಗೆ ದೇವರ ಬೇಕು ಯಾಕೆಂದರೆ ಆತನೊಬ್ಬನೇ ______________________

*__1 ಯೋಹಾನ 4:8__ – ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕಂದರೆ ದೇವರು ಪ್ರೀತಿಸ್ವರೂಪಿಯು.*

8. 1 ಕೊರಿಂಥದವರಿಗೆ 13.5 ಓದಿರಿ. ಈ ಕೆಳಗಿನ ಪದಗಳಲ್ಲಿ ಪ್ರೀತಿ ಏನಾಗಿಲ್ಲ ಎನ್ನುವುದನ್ನು ಆರಿಸಿ ತೆಗೆಯಿರಿ: ಮಾರ್ಯಾದೆಗೆಟ್ಟು ನಡೆಯುವುದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವುದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ

*__1 ಕೊರಿಂಥದವರಿಗೆ 13:5__ – ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ.*

9. 1 ಕೊರಿಂಥದವರಿಗೆ 13:8 ಈ ಜೀವಿತದಿಂದ ಮುಂದಿನ ಜೀವಿತಕ್ಕೆ ಅಥವಾ ಸಮಾಧಿಯಾಚೆಗೆ ನೀನು ತೆಗೆದುಕೊಂಡು ಹೋಗುವ ಒಂದೇ ಸಂಗತಿ ಯಾವುದು?

*__1 ಕೊರಿಂಥದವರಿಗೆ 13:8__ – ಪ್ರೀತಿಯು ಎಂದಿಗೂ ಬಿದ್ದು ಹೋಗುವದಿಲ್ಲ; ಪ್ರವಾದನೆಗಳಾದರೋ ಇಲ್ಲದಂತಾಗುವವು; ವಾಣಿಗಳೋ ನಿಂತುಹೋಗುವವು; ವಿದ್ಯೆಯೋ ಇಲ್ಲದಂತಾಗುವದು.*

10. ಜ್ಞಾನೋಕ್ತಿಗಳ 10:12 ಓದಿಕೊಳ್ಳಿರಿ. 1 ಕೊರಿಂಥದವರಿಗೆ 13:5, 'ಪ್ರೀತಿ ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ' ಎಂದು ಹೇಳುತ್ತದೆ. ಪ್ರೀತಿಯು ಎಷ್ಟು ಪಾಪವನ್ನು ಮುಚ್ಚುತ್ತದೆ?

*__ಜ್ಞಾನೋಕ್ತಿಗಳು 10:12__ – ದ್ವೇಷವು ಜಗಳಗಳನ್ನೆಬ್ಬಿಸುತ್ತದೆ; ಪ್ರೀತಿಯು ಪಾಪಗಳನ್ನೆಲ್ಲಾ ಮುಚ್ಚುತ್ತದೆ.*

## ಉತ್ತರಗಳು:

1. ಮತ್ತಾಯ 7:12 ಓದಿರಿ. ಸುವರ್ಣ ಸೂತ್ರವನ್ನು ನಿಮ್ಮ ಮಾತಿನಲ್ಲಿ ವಿವರಿಸಿರಿ

   **ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ, ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ.**

2. ಮತ್ತಾಯ 7:12 ಓದಿರಿ ಪ್ರೀತಿಯನ್ನು ಹುಡುಕುವ ಪ್ರಯತ್ನದಲ್ಲಿ ಅನೇಕರು ಸರಿಯಾದ ವ್ಯಕ್ತಿಗಾಗಿ ಹುಡುಕುತ್ತಾರೆ. ನೀವು ಸರಿಯಾದ ವ್ಯಕ್ತಿಯನ್ನು ಹುಡುಕಲು ಪ್ರಯತ್ನಿಸಬೇಕೋ ಅಥವಾ ನೀವೇ ಆ ಸರಿಯಾದ ವ್ಯಕ್ತಿಯಾಗಬೇಕೋ?

   **ನೀವೇ ಸರಿಯಾದ ವ್ಯಕ್ತಿಯಾಗಬೇಕು.**

3. 1 ಯೋಹಾನ 5:3 ಓದಿರಿ. ಪ್ರೀತಿ ಒಂದು ಭಾವನೆಯೇ ಅಥವಾ ಅದು ನೀವು ಮಾಡುವ ಕಾರ್ಯವೇ?

   **ಇದನ್ನು ನಾವು ದೇವರ ಸೂತ್ರಗಳಲ್ಲಿ ನಡೆಯುತ್ತ ಮಾಡುವಂತದ್ದಾಗಿದೆ.**

4. 1 ಯೋಹಾನ 3:18 ಓದಿಕೊಳ್ಳಿರಿ. ನೀವು ನಿಮ್ಮ ಹೆಂಡತಿ ಅಥವಾ ಗಂಡನಿಗೆ 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು ಹೇಳಿ ಹೋಗಿ ವ್ಯಭಿಚಾರ ಮಾಡಿದಲ್ಲಿ ಅವರು ನಿಮ್ಮ ಮಾತುಗಳನ್ನು ನಂಬುತ್ತಾರೊ ಇಲ್ಲವೇ ಕೃತ್ಯವನ್ನೋ

   **ನಿಮ್ಮ ಕ್ರಿಯೆಗಳು ಮಾತುಗಳಿಂತಲೂ ಬಲವಾಗಿ ಮಾತನಾಡುತ್ತವೆ.**

5. ರೋಮಾಪುರದವರಿಗೆ 5:6–8 ಓದಿರಿ. ಯೇಸುವಿಗೆ ನಮಗಾಗಿ ತನ್ನ ಪ್ರಾಣಕೊಡಬೇಕೆಂಬ ಭಾವನೆ ಇತ್ತೆಂದು ನಿಮಗನಿಸಬಹುದೇ?

   **ಇಲ್ಲ, ಆತನು ತನ್ನ ಅನಿಸಿಕೆಗಳಿಗಿಂತಲೂ ಹೆಚ್ಚಾಗಿ ನಮ್ಮ ಹಿತಚಿಂತನೆ ಮಾಡಿದನು.**

6. ಗಲಾತ್ಯದವರಿಗೆ 5:22 ಓದಿರಿ. ದೇವರು ನಮ್ಮ ಜೀವನದ ಕೇಂದ್ರ ವ್ಯಕ್ತಿಯಾಗಿರದಿದ್ದರೆ ಯಾರನ್ನಾದರೂ ಪ್ರೀತಿಸಲು ಸಾಧ್ಯವೇ?

   **ಇಲ್ಲ.**

7. 1ಯೋಹಾನ 4:8 ಓದಿರಿ ನಾವು ಇತರರನ್ನು ಪ್ರೀತಿ ಮಾಡಲು ನಮಗೆ ದೇವರ ಬೇಕು ಯಾಕೆಂದರೆ ಆತನೊಬ್ಬನೇ ____________________

**ಪ್ರೀತಿಸ್ವರೂಪನು**

8. 1 ಕೊರಿಂಥದವರಿಗೆ 13.5 ಓದಿರಿ. ಈ ಕೆಳಗಿನ ಪದಗಳಲ್ಲಿ ಪ್ರೀತಿ ಏನಾಗಿಲ್ಲ ಎನ್ನುವುದನ್ನು ಆರಿಸಿ ತೆಗೆಯಿರಿ: ಮಾರ್ಯಾದೆಗೆಟ್ಟು ನಡೆಯುವುದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವುದಿಲ್ಲ ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ.

**ಈ ಎಲ್ಲಾ ಪದಗಳು ಪ್ರೀತಿಯಲ್ಲಿ ಇಲ್ಲದ ಗುಣಗಳನ್ನು ತೋರಿಸುತ್ತದೆ.**

9. 1 ಕೊರಿಂಥದವರಿಗೆ 13:8 ಈ ಜೀವಿತದಿಂದ ಮುಂದಿನ ಜೀವಿತಕ್ಕೆ ಅಥವಾ ಸಮಾಧಿಯಾಚೆಗೆ ನೀನು ತೆಗೆದುಕೊಂಡು ಹೋಗುವ ಒಂದೇ ಸಂಗತಿ ಯಾವುದು?

**ಪ್ರೀತಿ ಎಂದಿಗೂ ನಿಲ್ಲುತ್ತದೆ.**

10. ಜ್ಞಾನೋಕ್ತಿಗಳ 10:12 ಓದಿಕೊಳ್ಳಿರಿ. 1 ಕೊರಿಂಥದವರಿಗೆ 13:5, 'ಪ್ರೀತಿ ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ' ಎಂದು ಹೇಳುತ್ತದೆ. ಪ್ರೀತಿಯು ಎಷ್ಟು ಪಾಪವನ್ನು ಮುಚ್ಚುತ್ತದೆ?

**ಎಲ್ಲಾ ಪಾಪಗಳನ್ನು**

## ಪಾಠ –14

# ಹಣಕಾಸು – ಭಾಗ 1

*ಆಂಡ್ರೂ ವ್ಹಾಮಕ್*

ಯೇಸುವು, ನೀವು ಆರ್ಥಿಕವಾಗಿ ಸಬಲರಾಗಬೇಕೆಂದು ಬಯಸುತ್ತಾನೆ ಇದು ಎಲ್ಲರಿಗೂ ಪ್ರಾಮುಖ್ಯವಾದ ಸಂಗತಿಯಾಗಿದೆ. ನಮಗೆ ಜೀವನ ನಡೆಸಲು,ನಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು, ಇತರರಿಗೆ ಆಶೀವಾದಪ್ರದರಾಗಲು ಹಣಬೆಕು. ಈ ವಿಷಯದಲ್ಲಿ ದೇವರು ನಮ್ಮನ್ನು ಏಕಾಂಗಿಯಾಗಿ ಬಿಟ್ಟು, 'ನಾನು ನಿನ್ನ ಆತ್ಮದ ವಿಷಯದಲ್ಲಿ ಮಾತ್ರ ಆಸಕ್ತಿಯುಳ್ಳವನಾಗಿದ್ದೆನೆ; ಅದರೆ ನಿನ್ನ ಹಣಕಾಸಿನ ವಿಷಯ ನನಗೆ ಸಂಬಂಧಪಟ್ಟಿಲ್ಲ ಅದನ್ನು ನೀನೇ ನೋಡಿಕೋ' ಎಂದು ಹೇಳುವದಿಲ್ಲ. ಹೌದು ಆತನು ನಿನ್ನನ್ನು ಸರ್ವವಿಷಯದಲ್ಲಿಯೂ ಪ್ರೀತಿಸುತ್ತಾನೆ – ಆತ್ಮ, ಪ್ರಾಣ, ದೇಹ– ಮತ್ತು ಎಲ್ಲವುಗಳಿಗೂ ಒದಗಿಸಿಕೊಡುತ್ತಾನೆ. ಹೆಚ್ಚಿನವರು ಒಂದಷ್ಟು ಆರ್ಥಿಕ ಸಬಲತೆ ಇರಬೇಕೆಂದು ಒಪ್ಪಿಕೊಳ್ಳುತ್ತಾರೆ ಆದರೆ ಮೂಲಭೂತವಾದ ಧಾರ್ಮಿಕತೆಯು ಸಂಪದ್ಭರಿತರಾಗಿರುವದನ್ನು ವಿರೋಧಿಸುತ್ತದೆ.

ದೇವರ ವಾಕ್ಯವು ದುರಾಸೆಯ ವಿರುದ್ಧ ಬೇರೆಬೇರೆ ರೀತಿಯಲ್ಲಿ ಬೋಧಿಸುತ್ತದೆಯಾದರೂ ಸಂಪತ್ತು ಆಶೀರ್ವಾದವಾಗಿದೆಯೆಂದು ಸ್ವಷ್ಟಪಡಿಸುತ್ತದೆ. 3ಯೋಹಾನ 2ನೇ ವಚನದಲ್ಲಿ ಅಪೊಸ್ತಲನಾದ ಯೋಹಾನನು, *"ಪ್ರಿಯನೇ, ನೀನು ಆತ್ಮ ವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಬೇಕೆಂದು ಪ್ರಾರ್ಥಿಸುತ್ತೇನ"* ಎಂದು ಹೇಳುತ್ತಾನೆ. ಇದು ಎಂಥ ಬಲವಾದ ಮಾತು! ಯೋಹಾನನು "ಎಲ್ಲಾ ವಿಷಯಗಳಲ್ಲಿಯೂ" ಎನ್ನುತ್ತಾನೆ, ಅದು ಸ್ವಸ್ಥತೆ, ಭಾವನೆಗಳು, ಸಂಬಂಧಗಳು ಮತ್ತು ಆಥಿಕತೆಯನ್ನು ಒಳಗೊಂಡಿದೆ. ಕರ್ತನು, ನೀನು ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿಹೊಂದಿ ಸುಕ್ಷೇಮವಾಗಿರಬೇಕೆಂದು ಬಯಸುತ್ತಾನೆ. ನೀನು ಆತ್ಮ, ಪ್ರಾಣ, ಮತ್ತು ದೇಹದಲ್ಲಿ ಅಭಿವೃದ್ಧಿ ಹೊಂದಬೇಕೆಂದು ಇಚ್ಛೈಸುತ್ತಾನೆ. ನಿನ್ನ ವಿಷಯದಲ್ಲಿ ಆತನ ಚಿತ್ತ ಇದುವೇ ಆಗಿದೆ.

ಅನೇಕ ಧರ್ಮಿಕರು– ನೀನು ಬಡತನದಲ್ಲಿರಬೇಕೆಂದು ದೇವರು ಬಯಸುತ್ತಾನೆ ಮತ್ತು ಬಡತನವು ಭಕ್ತಿಗೆ ಸಂಬಂಧಿಸಿದೆ, ನೀನೆಷ್ಟು ಬಡವನಾಗಿರುವಿಯೋ ಅಷ್ಟರ ಮಟ್ಟಿಗೆ ನಿನ್ನಲ್ಲಿ ಭಕ್ತಿಭಾವವು ಇರುತ್ತದೆ ಎಂದೆಲ್ಲಾ ಹೇಳುತ್ತಾರೆ. ದೇವರ ವಾಕ್ಯದ ಉಪದೇಶಕರಿಗೆ ಹೆಚ್ಚು ಸಂಪತ್ತು ಇರಬಾರದು ಒಬ್ಬ ಕ್ರೈಸ್ತನು ಸಂಪತ್ತಿಲ್ಲದೆ ಜೀವಿಸಬೇಕು ಎನ್ನುವ

ಆಲೋಚನಾಧಾಟಿಯ ಅಡಿಯಲ್ಲಿಯೇ ನಾನು ಬೆಳೆದು ಬಂದೆನು. ಆದರೆ ಇದನ್ನು ದೇವರ ವಾಕ್ಯದಿಂದ ಸಮರ್ಥಿಸಿಕೊಳ್ಳಲಾಗುವುದಿಲ್ಲ. ಅಬ್ರಹಾಮನು ತನ್ನ ಕಾಲದಲ್ಲಿ ಬಹು ಐಶ್ವರ್ಯವಂತನಾದ ಮನುಷ್ಯನಾಗಿದ್ದನು. ಅವನ ಐಶ್ವರ್ಯವು ಇತರ ರಾಜ್ಯಗಳ ಸಂಪತ್ತನ್ನು ಭಾಧಿಸುತ್ತಿದ್ದುದರಿಂದ ಅವನು ಆ ಸ್ಥಳವನ್ನು ಬಿಟ್ಟು ಹೋಗಬೇಕೆಂದು ಅವುಗಳ ಅರಸರು ಅವನೊಂದಿಗೆ ತಗಾದೆ ಮಾಡಿದರು. ಇಸಾಕನು ಮತ್ತು ಯಾಕೋಬನಿಗೂ ಇದೇ ಅನುಭವವಾಯಿತು. ಯೋಸೇಫನಂತೂ ಬಹಳ ಅಭಿವೃದ್ಧಿ ಹೊಂದಿದನು ಮತ್ತು ಸಂಪದ್ಭರಿತನಾಗಿದ್ದನು. ದಾವೀದನು, ಯೆಹೋವನ ಮಂದಿರವನ್ನು ಕಟ್ಟಲು 1836 ಸಾವಿರ ಕೋಟಿ ರೂಪಯಿ ಬೆಲೆಬಾಳುವಷ್ಟು ಚಿನ್ನ ಮತ್ತು ಬೆಳ್ಳಿಯನ್ನು ತನ್ನ ಸ್ವಂತ ಖಜಾನೆಯಿಂದ ಕೊಟ್ಟನು. ದಾವೀದನ ಮಗನಾದ ಸೊಲೊಮೋನನು ಪ್ರಪಂಚದಲ್ಲಿಯೇ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದನು. ನೀವು ದೈವಶಾಸ್ತ್ರಾಧಾರಿತವಾಗಿ ದೇವರಿಗೆ ಸೇವೆಸಲ್ಲಿಸುವವರು ಸಂಪದ್ಭರಿತರಾಗಿರುವ ಆಶೀರ್ವಾದವನ್ನು ಹೊಂದಿದರು ಎಂದು ತಿಳಿಯುತ್ತದೆ.

ಸಂಪತ್ತು ಬೇಡವೆಂದು ತಳ್ಳಿಬಿಟ್ಟು ಕಷ್ಟಸಂಕಟಗಳಲ್ಲಿ ದಾಟಿಹೋದವರ ಉದಾಹರಣೆಗಳೂ ನಮಗೆ ಲಭ್ಯವಿದೆ. ಫಿಲಿಪ್ಪಿ 4:13 ರಲ್ಲಿ ಪೌಲನು 'ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ; ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದೆನೆ ಎಂದು ಹೇಳುತ್ತಾನೆ. ಬಡನಾಗಿರಲೂ ಬಲ್ಲೆನು, ಸಮೃದ್ಧಿಯುಳ್ಳವನಾಗಿರಲೂ ಬಲ್ಲೆನು ಎನ್ನುತ್ತಾನೆ. ದೇವರ ಸೇವಕರು ಕಷ್ಟ ಮತತು ಬಡತನಗಳ ಹಾದಿಯಲ್ಲಿ ನಡೆದ ಉದಾಹರಣೆಗಳಿವೆ ಆದರೆ ನೀವೆಷ್ಟು ಬಡವರಾಗಿರುತ್ತಿರೋ ಅಷ್ಟು ಭಕ್ತಿವಂತರಾಗಿರುತ್ತೀರಿ ಎನ್ನುವಂತ ಮಾತುಗಳು ಬೈಬಲ್‌ನಲ್ಲಿ ಇಲ್ಲ, ಯಾಕೆಂದರೆ ಅದು ನಿಜವಲ್ಲ ಮತ್ತು ನೀವು ಈ ಮಾತು ಸುಳ್ಳಾಗುವುದೆಂದು ಕಾಯುತ್ತಾ ಕೂರಬೇಕಿಲ್ಲ. ಇಲ್ಲಿ ಒಂದು ಮಾತು ಸತ್ಯ. ದುರಾಸೆ ತಪ್ಪು. 1ತಿಮೋಥೆ 6:10 ರಲ್ಲಿ *"ಹಣದಾಸೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಗಿದೆ"* ಎಂದು ಬರೆದದೆ. ಕೆಲವರು ಇದನ್ನು ಹಿಡಿದು ಹಣವು ಕೆಟ್ಟತನಕ್ಕೆ ಮೂಲವಗಿದೆ ಅಂದುಕೊಳ್ಳುತ್ತಾರೆ. ಆದರೆ ಅಲ್ಲಿ *"ಹಣದಾಸೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ"* ಉಲ್ಲೇಖಿಸಲಾಗಿದೆ.ಕೈಯಲ್ಲಿ ಕವಡೆಕಾಸಿಲ್ಲದಿದ್ದರೂ ಹಣವನ್ನು ಪ್ರೀತಿಸುವವರಿದ್ದಾರೆ; ಇತರರಿಗೆ ಬಹಳಷ್ಟು ಹಣವಿದ್ದರೂ ಅದರ ವ್ಯಾಮೋಹವಿರುವದಿಲ್ಲ. ಅದನ್ನು ಬಳಕೆಗೆ ಮಾತ್ರ ಇಟ್ಟುಕೊಳ್ಳುತ್ತಾರಷ್ಟೆ.

ಧರ್ಮೋಪದೇಶಕಾಂಡ 8:18 ರಲ್ಲಿ ಸಂಪತ್ತಿನ ನಿಜವಾದ ಉದ್ದೇಶವನ್ನು ನೀಡುತ್ತದೆ, ಇಸ್ರಾಯೇಲ್ಯರು ತಾವು ಹಿಂದೆಂದೂ ಹೊಂದಿರದ ಸಂಪತ್ತನ್ನು ಅನುಭವಿಸಲು ಈಗ ವಾಗ್ದತ್ತ ದೇಶದೊಳಗೆ ಪ್ರವೇಶಿಸಲು ಸಿದ್ದರಾಗಿರುವ ಸಮಯದಲ್ಲಿ ಕರ್ತನು ಅವರನ್ನುದ್ದೇಶಿಸಿ ಈ ಮಾತನ್ನು ಹೇಳುತ್ತಾನೆ. *"ಆದದರಿಂದ ನಿಮ್ಮ ದೇವರಾದ ಯೆಹೋವನೇ ತಾನು ನಿಮ್ಮ ಪಿತೃಗಳಿಗೆ ಪ್ರಮಾಣಪೂರ್ವಕವಾಗಿ ಮಾಡಿದ ವಾಗ್ದಾನವನ್ನು ಈಗ ನಿಮ್ಮ ಅನುಭವಕ್ಕೆ ಬಂದ ರೀತಿಯಲ್ಲಿ ನೆರವೇರಿಸುವವನಾಗಿ ನಿಮಗೆ ಇಷ್ಟು ಭಾಗ್ಯವನ್ನು ಸಂಪಾದಿಸುವದಕ್ಕೆ ಸಾಮರ್ಥ್ಯವನ್ನು ಕೊಟ್ಟವನೆಂದು ಜ್ಞಾಪಕಮಾಡಿಕೊಳ್ಳಿರಿ."* ಈ ವಾಕ್ಯದ ಆಧಾರದ ಮೇಲೆ ಸಂಪತ್ತನ್ನು ನೀಡುವ ಉದ್ದೇಶವು ನಿಮ್ಮ ಸ್ವಾರ್ಥ ಲಾಭಕ್ಕಾಗಿ ಇದನ್ನು ಬಳಸದೆ ಭೂಮಿಯ ಮೇಲೆ ದೇವರ ವಾಗ್ದಾನದ ಒಡಂಬಡಿಕೆಯನ್ನು ಸ್ಥಾಪಿಸುವುದಕ್ಕಾಗಿ ಇರುತ್ತದೆ.

ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ, ದೇವರು ನಿಮ್ಮನ್ನು ಆಶೀರ್ವದಿಸುವುದು ನೀವು ಮತ್ತೊಬ್ಬರಿಗೆ ಆಶೀರ್ವಾದವಾಗಬೇಕು ಎನ್ನುವ ಕಾರಣಕ್ಕೆ, ಆದಿಕಾಂಡ 12:2 ರಲ್ಲಿ ದೇವರು ಅಬ್ರಹಾಮನಿಗೆ, *'ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು'* ಎಂದು ಹೇಳಿದನು. ನೀವು ಇತರರಿಗೆ ಆಶೀರ್ವಾದವಾಗುವ ಮೊದಲು ನೀವು ಆ ಆಶೀರ್ವಾದವನ್ನು ಅನುಭವಿಸಬೇಕಲ್ಲವೆ.

ನಿಮಗೆ ಅಗತ್ಯವಾಗಿ ಬೇಕಾಗಿರುವ ನಿರ್ದಿಷ್ಟ ಸಂಗತಿಗಳು ಮತ್ತು ನಿರ್ದಿಷ್ಟ ಅವಶ್ಯಕತೆಗಳು ಇವುಗಳನ್ನು ಪೂರೈಸಲು ದೇವರು ಸಿದ್ಧನಾಗಿದ್ದಾನೆ, ಆದರೆ ಇದು ಸ್ವಾರ್ಥವನ್ನು ಮೀರಿ ನಡೆಯುವಂತದ್ದಾಗಿದೆ. ದೇವರು ನಿಮಗೆ ಸಮೃದ್ಧಿಯನ್ನು ಕೊಡಲು ಕಾರಣವೇನೆಂದರೆ ಆತನು ನಿಮ್ಮ ಮೂಲಕ ತನ್ನ ಹಣವನ್ನು ಬಳಸಿಕೊಂಡು ನಿಮ್ಮನ್ನು ಆಶೀವಾದನಿಧಿಯನ್ನಾಗಿ ಮಾಡಬೇಕು ಎನ್ನುವುದಾಗಿದೆ. 2 ಕೊರಿಂಥದವರಿಗೆ 9:8 *'ದೇವರು ಸಕಲವಿಧವಾದ ದಾನಗಳನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವದಕ್ಕೆ ಶಕ್ತನಾದ್ದರಿಂದ ನೀವು ಯಾವಾಗಲೂ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರಾಗಿ ಸಕಲಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರಬೇಕು'* ಎಂದು ಹೇಳುತ್ತದೆ. ಇದು, ದೇವರು ನಿಮ್ಮನ್ನು ಅಭಿವೃದ್ಧಿಪಡಿಸಲು ಏನು ಕಾರಣ – ನೀವು ಸಕಲ ಸತ್ಕಾರ್ಯಗಳನ್ನು ಹೇರಳವಾಗಿ ಮಾಡಬೇಕು – ಎಂದು ತಿಳಿಸುತ್ತದೆ. ಅಭಿವೃದ್ಧಿಯ ಕುರಿತು ದೇವರ ವಾಕ್ಯದ ವಿವರಣೆ ಇದೇ ಆಗಿದೆ. ಅಭಿವೃದ್ಧಿ ಎಂದರೆ ಏನು? ಅದೆಂದರೆ ಒಂದು ಒಳ್ಳೆಯ ಮನೆ, ಒಳ್ಳೆಯ ಕಾರು, ಒಳ್ಳೆಯ ಬಟ್ಟೆಗಳು, ಒಳ್ಳೆಯ ಭೋಜನ ಎಂದರ್ಥವೇ? ಈ ವಾಕ್ಯದ ಪ್ರಕಾರ ನಿಮ್ಮ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿ ಸಕಲ ಸತ್ಕಾರ್ಯಗಳನ್ನು ಮಾಡಲು ಬೇಕಾಗುವಷ್ಟು ಸಮೃದ್ಧಿಯಿರುವುದು ಎಂದಾಗುತ್ತದೆ. ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಸಹಾಯ ಮಾಡಬೇಕೆಂದು ದೇವರು ನಿಮ್ಮ ಹೃದಯದಲ್ಲಿ ಮಾತನಾಡಿದರೂ ನಿಮಗೆ ಅನುಕೂಲವಾಗದೇ ಹೋದಲ್ಲಿ, ನೀವು ಯಾರಿಗಾದರೂ ಆಶೀರ್ವಾದವಾಗಬೇಕೆಂದು ಆಶಿಸಿದರೂ ಹಾಗಾಗದೆ ಹೋದಲ್ಲಿ, ವಾಕ್ಯವು ಹೇಳುವಂತೆ ನೀವು ಅಭಿವೃದ್ಧಿ ಹೊಂದುತ್ತಾ ಇಲ್ಲವೆಂದೇ ಅರ್ಥವಾಗುವುದು. ನಿಮ್ಮ ಎಲ್ಲಾ ಅಗತ್ಯತೆಗಳೂ ಪೂರ್ತಿಗೊಂಡು ಇತರ ಎಲ್ಲಾ ಸತ್ಕಾರ್ಯಗಳನ್ನು ಹೇರಳವಾಗಿ ಮಾಡಬೇಕೆನ್ನುವಷ್ಟು ತಾನು ಆಶೀರ್ವದಿಸುತ್ತೇನೆಂದು ದೇವರು ಹೇಳುತ್ತಾನೆ.

ದೇವರು ವಾಕ್ಯಾನುಸಾರವಾದ ಅಭಿವೃದ್ಧಿಯೆಂದರೆ, ಕೇವಲ ನಿಮ್ಮ ಅವಶ್ಯಕತೆಗಳನ್ನು ಪೂರೈಸುವುದಷ್ಟೇ ಅಲ್ಲ. ನೀವು ಇತರರಿಗೂ ಆಶೀರ್ವಾದವಾಗಬೇಕು. ವಾಸ್ತವವೆಂದರೆ ಯಾರು ಕೇವಲ ತಮ್ಮ ಅಗತ್ಯತೆಗಳನ್ನಷ್ಟೇ ನೋಡಿಕೊಳ್ಳುವರೋ ಅವರು ಸ್ವಾರ್ಥಿಗಳು. ಯಾರಾದರೂ, 'ನನಗೆ ಹೆಚ್ಚಿನ ಅಭಿವೃದ್ಧಿ ಬೇಕೆಂದು ನಾನು ದೇವರನ್ನು ನಂಬುತ್ತೇನೆ' ಎಂದು ಹೇಳಿದರೆ ಇತರರು ಅವರನ್ನು ದುರಾಸೆಯವರು ಅಥವಾ ಸ್ವಾರ್ಥಿಗಳು ಎಂದು ಹೇಳಬಹುದು, ಆದರೆ ಅವರ ಮಾತಿನ ನಿಜವಾದ ಅರ್ಥ ಇಲ್ಲಿ ಮುಖ್ಯವಾಗುತ್ತದೆ. ಇರುವುದಕ್ಕಿಂತ ಇನ್ನೂ ದೊಡ್ಡ ಮನೆ ಅಥವಾ ಇನ್ನೂ ದೊಡ್ಡ ಕಾರು ಕೊಂಡುಕೊಳ್ಳಲು

ದೇವರಿಂದ ಅಭಿವೃದ್ಧಿಯನ್ನು ಬೇಡಿಕೊಂಡರೆ ಅದು ದೇವರ ವಾಕ್ಯಾನುಸಾರವಲ್ಲ. ಆದರೆ ನಿಮ್ಮ ಅಗತ್ಯತೆಗಳನ್ನು ಮೀರಿ ಮತ್ತೊಬ್ಬರಿಗೆ ಆಶೀರ್ವಾದವಾಗಬೇಕೆಂದು ನೀವು ಇಷ್ಟವುಳ್ಳವರಾಗಿ ಸಂಪತ್ತನ್ನು ಆಶಿಸುವವರಾದರೆ ಅಂಥ ಗುಣ ನಿಮ್ಮಲ್ಲಿರಬೇಕೆಂದು ದೇವರು ಬಯಸುತ್ತಾನೆ. ನೀವು ಅಭಿವೃದ್ಧಿ ಹೊಂದಬೇಕು. ನೀವು ಅಭಿವೃದ್ಧಿ ಹೊಂದುವುದು ಆತನ ಚಿತ್ತವಾಗಿದೆ.

ಮತ್ತಾಯ 6: ನಮಗೆ ಅವಶ್ಯವಾಗಿರುವ ಸಂಗತಿಗಳ ಕುರಿತು ಹೇಳುತ್ತದೆ ಮತ್ತು ನಾವು 'ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡುವುದಾದರೆ ಉಳಿದ ಸಂಗತಿಗಳೂ ದೊರಕುವವು ಎಂದು ಹೇಳುತ್ತದೆ. ನೀವು ದೇವರಿಗೆ ಪ್ರಥಮ ಸ್ಥಾನ ಕೊಡುತ್ತ ಬಂದರೆ ಆತನು ಉಳಿದ ಸಂಗತಿಗಳನ್ನು ನಿಮಗೆ ಕೊಡುತ್ತಾನೆ. ನಿಮ್ಮ ಅಗತ್ಯಗಳೂ ಪೂರೈಸಲ್ಪಡುತ್ತಲ್ಲದೆ ನೀವು ಇತರರಿಗೂ ಆಶೀರ್ವಾದವಾಗುತ್ತೀರಿ. ದೇವರು ನಿಮ್ಮನ್ನು ಅಭಿವೃದ್ಧಿ ಪಡಿಸುತ್ತಾನೆ ಆದರೆ ಅದು ನಿಮ್ಮ ಉದ್ದೇಶ ಮತ್ತು ಆ ವಿಷಯದ ಕುರಿತು ನೀವು ಮಾಡುವ ಕಾರ್ಯಗಳ ಮೇಲೆ ಅವಲಂಬಿತವಾಗಿದೆ.

ಈ ಸಂದೇಶವು ನಿಮ್ಮನ್ನು ಉತ್ತೇಜಿಸಿ, ಈ ದಿನ ಮೊದಲುಗೊಂಡು ನಿಮ್ಮ ಅಭಿವೃದ್ಧಿಗೋಸ್ಕರ ದೇವರು ಅತ್ಯುತ್ತಮವಾದದ್ದನ್ನು ಇಟ್ಟಿದ್ದಾನೆಂದು ನಂಬಬೇಕೆನ್ನುವುದು ನನ್ನ ಪ್ರಾರ್ಥನೆಯಾಗಿದೆ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. 2 ಕೊರಿಂಥದವರಿಗೆ 8:7,8 ಓದಿರಿ. ಕೊರತೆಯಿರುವವರಿಗೆ ನೀವು ಸಹಾಯ ಮಾಡುವಾಗ ನೀವು ಏನನ್ನು ರುಜುವಾತು ಪಡಿಸಿದಂತಾಗುತ್ತದೆ?

   ***2 ಕೊರಿಂಥದವರಿಗೆ 8:7,8*** *– ನೀವು ದೇವರ ಮೇಲಣ ನಂಬಿಕೆ ವಾಕ್ಚಾತುರ್ಯ ಜ್ಞಾನ ಸಕಲವಿಧವಾದ ಆಸಕ್ತಿ ನಮ್ಮ ಪ್ರೇರಣೆಯಿಂದ ನಿಮ್ಮಲ್ಲಿ ಹುಟ್ಟಿದ ಪ್ರೀತಿ ಇವೇ ಮೊದಲಾದ ಎಲ್ಲಾ ವಿಷಯಗಳಲ್ಲಿ ಹೇಗೆ ಸಮೃದ್ಧರಾಗಿದ್ದೀರೋ ಹಾಗೆಯೇ ಈ ಧರ್ಮಕಾರ್ಯದಲ್ಲಿಯೂ ಸಮೃದ್ಧರಾಗಿರಿ. ಇದನ್ನು ಆಜ್ಞಾರೂಪವಾಗಿ ಹೇಳದೆ ಇತರರ ಆಸಕ್ತಿಯನ್ನು ತೋರಿಸಿಕೊಟ್ಟು ನಿಮ್ಮ ಪ್ರೀತಿಯೂ ಯಥಾರ್ಥವಾದದ್ದೆಂಬದನ್ನು ಪರೀಕ್ಷೆಯಿಂದ ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ.*

2. 2 ಕೊರಿಂಥದವರಿಗೆ 8:13,14 ಓದಿರಿ. ನಾವೆಲ್ಲರೂ ಸೇರಿ ಕೊಡುವಾಗ ಅಲ್ಲಿ ಏನಿರಬೇಕೆಂದು ಪೌಲನ ತಾತ್ಪರ್ಯವಾಗಿದೆ?

   ***2 ಕೊರಿಂಥದವರಿಗೆ 8: 13,14*** *– ಇತರರಿಗೆ ಕಷ್ಟಪರಿಹಾರವೂ ನಿಮಗೆ ಕಷ್ಟವೂ ಉಂಟಾಗಬೇಕೆಂದು ನನ್ನ ತಾತ್ಪಾರ್ಯವಲ್ಲ; ಸಮಾನತ್ವವಿರಬೇಕೆಂಬದೇ ನನ್ನ ತಾತ್ಪರ್ಯ. ಸದ್ಯಕ್ಕೆ ನಿಮ್ಮ ಸಮೃದ್ಧಿಯು ಅವರ ಕೊರತೆಯನ್ನು ನೀಗಿಸುತ್ತದೆ. ಮುಂದೆ ಅವರ ಸಮೃದ್ಧಿಯು ನಿಮ್ಮ ಕೊರತೆಯನ್ನು ನೀಗಿಸುವುದು; ಹೀಗೆ ಸಮಾನತ್ವವುಂಟಾಗುವುದು.*

3. 2 ಕೊರಿಂಥದವರಿಗೆ 8:13,14 ಓದಿರಿ. ಎಲ್ಲರ ಕೊರತೆಗಳು ಹೇಗೆ ನೀಗುತ್ತವೆ?

4. ಎಫಸ 4:28 ಓದಿರಿ. ಕಳವು ಮಾಡುವವನು ಇನ್ನು ಮೇಲೆ ಕಳುವುಮಾಡದೆ ಕೈಯಿಂದ ಯಾವದೊಂದು ಉದ್ಯೋಗವನ್ನು ಮಾಡಿ ದುಡಿಯಲಿ. ಇದರೊಂದಿಗೆ ಎಫೆಸದವರಿಗೆ 4:28 ಬೇರೆ ಏನು ಮಾಡಬೇಕೆಂದು ಹೇಳುತ್ತದೆ?

   ***ಎಫೆಸ 4:28*** *– ಕಳವು ಮಾಡುವವನು ಇನ್ನು ಮೇಲೆ ಕಳವುಮಾಡದೆ ಕೈಯಿಂದ ಯಾವದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ; ಆಗ ಕಷ್ಟದಲ್ಲಿರುವವರಿಗೆ ಕೊಡುವದಕ್ಕೆ ಅವನಿಂದಾಗುವದು.*

5. ಆದಿಕಾಂಡ 13:2 ಮತ್ತು 12:2 ಓದಿರಿ. ದೇವರು ಈ ಕಾರಣದಿಂದ ಅಬ್ರಹಾಮನನ್ನು ಐಶ್ವರ್ಯವಂತನನ್ನಾಗಿ ಮಾಡಿದನು – ಅಬ್ರಹಾಮನು ಕೇವಲ ತನ್ನ ಒಳಿತನ್ನು ಮಾತ್ರ ಆಲೋಚಿಸಲಿಲ್ಲ. ಅವನು ಇತರರಿಗೆ ________________ ಆದನು.

   ***ಆದಿಕಾಂಡ 13:2*** *– ಅಬ್ರಾಮನು ಬಹು ಐಶ್ವರ್ಯವಂತನಾಗಿದ್ದನು; ಅವನಿಗೆ ಪಶುಗಳೂ ಬೆಳ್ಳಿಬಂಗಾರವೂ ಇದ್ದವು.*

***ಆದಿಕಾಂಡ 12:2*** *– ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು.*

6. 1 ತಿಮೊಥೆ 6:17,18 ಓದಿರಿ ಐಶ್ವರ್ಯವಂತರು ತಮ್ಮ ಸಂಪತ್ತನ್ನು ಹೇಗೆ ಬಳಸಬೇಕು?

***1 ತಿಮೊಥೆ 6:17,18*** *– ಇಹಲೋಕವಿಷಯದಲ್ಲಿ ಐಶ್ವರ್ಯವುಳ್ಳವರು ಅಹಂಕಾರಿಗಳಾಗಿರದೆ ಅಸ್ತವಾರವಾದ ಐಶ್ವರ್ಯದ ಮೇಲೆ ನಿರೀಕ್ಷೆಯನ್ನಿಡದೆ ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯನ್ನಿಡಬೇಕೆಂತಲೂ ವಾಸ್ತವವಾದ ಜೀವವನ್ನು ಹೊಂದುವದಕ್ಕೋಸ್ಕರ ಅವರು ಒಳ್ಳೇದನ್ನು ಮಾಡುವವರೂ ಸತ್ಕಾರ್ಯಗಳಲ್ಲಿ ಐಶ್ವರ್ಯವಂತರೂ ದಾನಧರ್ಮಗಳನ್ನು ಮಾಡುವವರೂ ಪರೋಪಕಾರ ಮಾಡುವವರು ಆಗಿದ್ದು ಮುಂದಿನ ಕಾಲಕ್ಕೆ ಒಳ್ಳೇ ಅಸ್ತಿವಾರವಾಗುವಂಥವುಗಳನ್ನು ತಮಗೆ ಕೂಡಿಸಿಟ್ಟು ಕೊಳ್ಳಬೇಕೆಂತಲೂ ಅವರಿಗೆ ಅಜ್ಞಾಪಿಸು.*

7. ದೇವರು ನಿಮಗೆ ಭರವಸೆಯೊಡನೆ ಹಣಕಾಸು ನೀಡಬಹುದೇ?

# ಉತ್ತರಗಳು

1. 2 ಕೊರಿಂಥದವರಿಗೆ 8:7,8 ಓದಿರಿ. ಕೊರತೆಯಿರುವವರಿಗೆ ನೀವು ಸಹಾಯ ಮಾಡುವಾಗ ನೀವು ಏನನ್ನು ರುಜುವಾತು ಪಡಿಸಿದಂತಾಗುತ್ತದೆ?

   **ನಿನ್ನ ಪ್ರೀತಿ ನಿಜವಾಗಿದೆ**

2. 2 ಕೊರಿಂಥದವರಿಗೆ 8:13,14 ಓದಿರಿ. ನಾವೆಲ್ಲರೂ ಸೇರಿ ಕೊಡುವಾಗ ಅಲ್ಲಿ ಏನಿರಬೇಕೆಂದು ಪೌಲನ ತಾತ್ಪರ್ಯವಾಗಿದೆ?

   **ಎಲ್ಲರೂ ತಮ್ಮ ಕೈಲಾಗುವಷ್ಟನ್ನು ಕೊಡುವುದರಿಂದ ಇರುತ್ತದೆ.**

3. 2 ಕೊರಿಂಥದವರಿಗೆ 8:13,14 ಓದಿರಿ. ಎಲ್ಲರ ಕೊರತೆಗಳು ಹೇಗೆ ನೀಗುತ್ತವೆ?

   **ನಿಮಗೆ ಸಾಧ್ಯವಿರುವಾಗ ಕೈಲಾದಷ್ಟು ಕೊಡಬೇಕು**

4. ಎಫಸ 4:28 ಓದಿರಿ. ಕಳವುಮಾಡುವವನು ಇನ್ನು ಮೇಲೆ ಕಳುವುಮಾಡದೆ ಕೈಯಿಂದ ಯಾವದೊಂದು ಉದ್ಯೋಗವನ್ನು ಮಾಡಿ ದುಡಿಯಲಿ. ಇದರೊಂದಿಗೆ ಎಫೆಸದವರಿಗೆ 4:28 ಬೇರೆ ಏನು ಮಾಡಬೇಕೆಂದು ಹೇಳುತ್ತದೆ?

   **ಬಡವರಿಗೂ ಕೊರತೆಯಲ್ಲಿರುವವರಿಗೂ ಕೊಡಬೇಕು**

5. ಆದಿಕಾಂಡ 13:2 ಮತ್ತು 12:2 ಓದಿರಿ. ದೇವರು ಈ ಕಾರಣದಿಂದ ಅಬ್ರಹಾಮನನ್ನು ಐಶ್ವರ್ಯವಂತನನ್ನಾಗಿ ಮಾಡಿದನು – ಅಬ್ರಹಾಮನು ಕೇವಲ ತನ್ನ ಒಳಿತನ್ನು ಮಾತ್ರ ಆಲೋಚಿಸಲಿಲ್ಲ. ಅವನು ಇತರರಿಗೆ ________________ ಆದನು.

   **ಆಶೀರ್ವಾದನಿಧಿ**

6. 1 ತಿಮೊಥೆ 6:17,18 ಓದಿರಿ ಐಶ್ವರ್ಯವಂತರು ತಮ್ಮ ಸಂಪತ್ತನ್ನು ಹೇಗೆ ಬಳಸಬೇಕು?

   **ಸತ್ಕಾರ್ಯಗಳಲ್ಲಿ ಐಶ್ವರ್ಯವಂತರೂ ದಾನಧರ್ಮಗಳನ್ನು ಮಾಡುವವರೂ ಸತ್ಕಾರ್ಯಗಳನ್ನು ಮಾಡುವವರು**

7. ದೇವರು ನಿಮಗೆ ಭರವಸೆಯೊಡನೆ ಹಣಕಾಸು ನೀಡಬಹುದೋ?

# ಪಾಠ –15

## ಹಣಕಾಸು– ಭಾಗ 2

*ಆಂಡ್ರೂ ವ್ಹಾಮಕ್*

ಕಳೆದ ಪಾಠದಲ್ಲಿ ನೀವು ಅಭಿವೃದ್ಧಿ ಹೊಂದುವುದು ದೇವರ ಚಿತ್ತವಾಗಿದೆ ಎಂದು ನಾನು ವಿವರಿಸಿದೆನು. ಇದು ಕೆಲಸಮಾಡಲು ಕೆಲವು ಸೂತ್ರಗಳಿವೆ. ಲೂಕ 6:38 ಹೇಳುತ್ತದೆ, *"ಕೊಡಿರಿ, ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರಚೆಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು"* ಇಲ್ಲಿ ಅನೇಕ ತತ್ವಗಳು ಒಳಗೊಂಡಿವೆ, ಆದರೆ ನೀವು ಕೊಡುವದನ್ನು ಅಭ್ಯಾಸ ಮಾಡಿಕೊಳ್ಳದಿದ್ದರೆ ಸಮೃದ್ದಿಯ ಕುರಿತು ನೀವು ಮಾತನಾಡಲಾಗುವುದಿಲ್ಲ.

ಆರ್ಥಿಕ ಅಭಿವೃದ್ದಿಯ ಕುರಿತು ಮಾತನಾಡುವಾಗ ಅನೇಕರು, "ದೇವರು ಬೇಕಾದರೆ ನನ್ನನ್ನು ಅಭಿವೃದ್ದಿ ಪಡಿಸಲಿ ಆದರೆ ನಾನು ಏನನ್ನು ಕೊಡುವುದಿಲ್ಲ" ಎಂದು ಹೇಳುತ್ತಾರೆ. ಒಬ್ಬ ವಿಧವೆಯು ತನ್ನ ಕೊನೆಯ ಎರಡು ದುಗ್ಗಾಣಿಗಳನ್ನು ಕಾಣಿಕೆಯ ಡಬ್ಬಿಗಳಲ್ಲಿ ಹಾಕಿದ್ದನ್ನು ಯೇಸುವು ಗುರುತಿಸುತ್ತಾನೆ. ಅಲ್ಲಿ ಅನೇಕ ಶ್ರೀಮಂತರು ಕಾಣಿಕೆಯ ಡಬ್ಬಿಗಳಲ್ಲಿ ದೊಡ್ಡ ಮೊತ್ತದ ಹಣದ ಗಂಟುಗಳನ್ನು ಹಾಕುತ್ತಿದ್ದರು, ಆದಾಗ್ಯೂ ಆತನು ತನ್ನ ಶಿಷ್ಯರನ್ನು ಕರೆದು ತೋರಿಸಿ ಆ ಸ್ತ್ರೀಯು ಎಲ್ಲರಿಗಿಂತಲೂ ಹೆಚ್ಚಾಗಿ ದೇವರಿಗೆ ಕೊಟ್ಟಳು ಎಂದು ಹೇಳುತ್ತಾನೆ. ಶ್ರೀಮಂತರಾದರೋ ತಮಗೆ ಸಾಕಾಗಿ ಮಿಕ್ಕದ್ದರಲ್ಲಿ ಕೊಟ್ಟರು ಈಕೆಯೋ ತನ್ನ ಬಡತನದಲ್ಲಿಯೂ ತನಗಿದ್ದದ್ದನ್ನೆಲ್ಲಾ ಕೊಟ್ಟುಬಿಟ್ಟಳು ಎಂದು ಯೇಸು ಹೇಳುತ್ತಾನೆ. ದೇವರು ನಮ್ಮ ಕಾಣಿಕೆಯ ಮೌಲ್ಯವನ್ನು ಅದರ ಮೊತ್ತದ ಮೇಲೆ ನಿರ್ಣಯಿಸದೆ ನಮಗಿರುವುದರ ಶೇಕಡಾವಾರು ಲೆಕ್ಕದ ಮೇಲೆ ನಿರ್ಣಯಿಸುತ್ತಾನೆ. ಒಬ್ಬ ವ್ಯಕ್ತಿಯು 'ಕೊಡುವುದಕ್ಕೆ ನನ್ನ ಬಳಿ ಏನೂ ಇಲ್ಲ' ಎಂದರೆ ಅದು ಸತ್ಯವಲ್ಲ. ಬೇರೇನೂ ಇಲ್ಲದಿದ್ದರೂ ಕೊಡುವದಕ್ಕೆ ನಿಮ್ಮ ಬಳಿ ಬಟ್ಟೆ ಇರಬಹುದು. ಎಲ್ಲರ ಬಳಿಯೂ ಕೊಡುವುದಕ್ಕೆ ಏನಾದರೂ ಇದ್ದೇ ಇರುತ್ತದೆ, ಆದುದರಿಂದ ಕೊಡುವದಕ್ಕೆ ನನ್ನ ಬಳಿ ಏನೂ ಇಲ್ಲ ಎನ್ನುವ ವಾದವನ್ನು ಬಿಟ್ಟುಬಿಡಿರಿ. ವಾಸ್ತವಾಗಿ, ನಿಮ್ಮಲ್ಲಿರುವ ಸ್ವಲ್ಪದರಲ್ಲೇ ನೀವು ಕೊಡುವಾಗ ನಿಮ್ಮ ಕಾಣಿಕೆಯ ಶೇಕಡವಾರು ಲೆಕ್ಕವು ಬೇರೆಲ್ಲಾ ಸಮಯಕ್ಕಿಂತ ಹೆಚ್ಚಾಗಿರುತ್ತದೆ. ಒಬ್ಬ ಮನುಷ್ಯನಲ್ಲಿ ಹತ್ತು ರೂಪಾಯಿ ಇದ್ದು ಅದರಲ್ಲಿ ಐದು ರೂಪಾಯಿ ಹಾಕುವ ಲೆಕ್ಕದ ಶೇಕಡವು ಅವನಲ್ಲಿ ಕೋಟಿ ಕೋಟಿ ಇದ್ದು ಲಕ್ಷಗಳಲ್ಲಿ ಹಾಕುವ ಲೆಕ್ಕದ ಶೇಕಡಕ್ಕಿಂತ ಹೆಚ್ಚಾಗಿರುತ್ತದೆ. ಪ್ರತಿಯೊಬ್ಬರಿಗೂ ಕೊಡಲು ಸಾಧ್ಯವಾಗುವಂತೆ ದೇವರು ಇದನ್ನು ಮಾಡಿದ್ದಾನೆ.

ನಾವು ಕೊಡಬೇಕೆಂದು ದೇವರು ಯಾಕೆ ಹೇಳುತ್ತಾನೆ? ಇದರಲ್ಲಿ ಅನೇಕ ಸಂಗತಿಗಳಿರುವುದಾದರೂ ಮುಖ್ಯವಾದವುಗಳಲ್ಲಿ ಒಂದು ಸಂಗತಿಯೆಂದರೆ ನಿಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ನೀವು ಆತನನ್ನು ಆಧಾರಮಾಡಿಕೊಳ್ಳಬೇಕು ಎನ್ನುವುದಾಗಿದೆ. ದೇವರಿಲ್ಲದಿದ್ದರೆ ಮತ್ತು "ಕೊಡಿರಿ, ಆಗ ನಿಮಗೂ ಕೊಡುವರು" ಎನ್ನುವ ಆತನ ಮಾತು ಸುಳ್ಳಾಗಿರುವುದಾದರೆ ನಿಮಗಿರುವ ಸ್ವಲ್ಪದರಲ್ಲಿ ಹಂಚಿಕೊಡುವುದು ಮೂರ್ಖತನವಾಗುತ್ತದೆ. ನಿಮ್ಮ ಕೊರತೆಗಳೆಲ್ಲವು ನೀಗಲ್ಪಡಬೇಕು ಎನ್ನುವ ಗುರಿಯ ಕಡೆಗೆ ಹೋಗುವುದರ ಬದಲು – ದೇವರು ನಿಮ್ಮನ್ನು ಆಶೀರ್ವದಿಸುವನು ಎನ್ನುವ ವಾಗ್ದಾನವಿಲ್ಲದಿದ್ದಲ್ಲಿ – ನೀವು ಅದರ ವಿರುದ್ಧ ದಿಕ್ಕಿನೆಡೆಗೆ ನಡೆದಂತಾಗುತ್ತದೆ. ದೇವರು ಹೇಳಿದಂತೆ ಕೊಡಲು ನಂಬಿಕೆಯ ಅವಶ್ಯಕತೆ ಇದೆ ಮತ್ತು ಈ ಕಾರಣದಿಂದಲೇ ನೀವು ಕೊಡಬೇಕೆಂದು ದೇವರು ಬಯಸುತ್ತಾನೆ.

ಲೂಕ 16 ರಲ್ಲಿ ತನ್ನ ಯಜಮಾನನನ್ನು ವಂಚಿಸಿದ ಒಬ್ಬ ಮನೆವಾರ್ತೆಯವನ ಸಾಮ್ಯವಿದೆ, ಮತ್ತು ಅದರ ತಿರುಳು ಹೀಗಿದೆ. ಯೇಸು ಹೇಳುತ್ತಾನೆ, 'ಹೀಗಿರುವುದರಿಂದ ಅನ್ಯಾಯದ ಧನದ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಮ್ಮದನ್ನು ನಿಮಗೆ ಯಾರು ಕೊಟ್ಟರು?' ಹಣಕ್ಕೆ ಸಂಬಂಧಪಟ್ಟಂತೆ ಸ್ವಲ್ಪವಾದದ್ದರಲ್ಲಿ ನೀವು ದೇವರನ್ನು ನಂಬದೆ ಹೋದರೆ, ದೊಡ್ಡ ಸಂಗತಿಗಳಾದ ಆಧ್ಯಾತ್ಮಿಕ ಮೌಲ್ಯಗಳ ವಿಷಯದಲ್ಲಿ ನೀವು ದೇವರನ್ನು ಹೇಗೆ ನಂಬೀರಿ? ದೇವರ ವಾಕ್ಯದ ಇಂಥ ಹಲವು ಭಾಗಗಳು ಹಣಕ್ಕೆ ಸಂಬಬಂಧಪಟ್ಟ ಮನೆವಾರ್ತೆಯನ್ನು ಬಹಳ ಅಲ್ಪವಾದ ವಿಷಯವೆಂದು ಹೇಳುತ್ತದೆ. ನೀವು ನಿಮ್ಮ ಹಣದ ವಿಷಯದಲ್ಲಿ ದೇವರನ್ನು ನಂಬದೆ ಹೋದರೆ, ನಿಮ್ಮ ನಿತ್ಯತ್ವಕ್ಕೆ ಸಂಬಂಧಪಟ್ಟಂತೆ ಆತನನ್ನು ಹೇಗೆ ನಂಬುತ್ತೀರಿ? ಯೇಸುವು ನಿಜವಾಗಲೂ ನಿಮ್ಮ ಪಾಪಗಳನ್ನು ಪರಿಹರಿಸಿದ್ದಾನೆಂದೂ ಮತ್ತು ನೀವು ನಿಮ್ಮ ನಿತ್ಯತ್ವವನ್ನು ಪರಲೋಕದಲ್ಲಿ ಕಳೆಯುತ್ತೀರೆಂದೂ ನಂಬಲು ಹೇಗೆ ಸಾಧ್ಯವಿದೆ? ಇದಕ್ಕೆ ಹೋಲಿಕೆಯಾಗಿ, ಆಧ್ಯಾತ್ಮಕ್ಕೆ ಸಂಬಂಧಪಟ್ಟಂತೆ ನಾವು ನಮ್ಮ ಕರ್ತನಲ್ಲಿ ಇಡುವ ನಂಬಿಕೆಯು ಹಣದ ವಿಷಯಕ್ಕಿಂತಲೂ ಬಹು ದೊಡ್ಡದಾಗಿದೆ. ಹಣವು ಬಹಳ ಅಲ್ಪವಾದ ಸಂಗತಿಯಾದರೂ, ದೇವರ ಮೇಲೆ ಭರವಸವಿಡುವುದನ್ನು ಪ್ರಾರಂಭಿಸುವಂತೆ ನಮಗೆ ಮೊದಲು ಹೆಜ್ಜೆ ಇಡಲು ಕಲಿಸುತ್ತದೆ. ಜ್ಞಾನೋಕ್ತಿಗಳು 11:24 – 'ಒಬ್ಬನು ತನ್ನ ಧನವನ್ನು ಚೆಲ್ಲಿದರೂ ಅವನಿಗೆ ವೃದ್ಧಿ; ಮತ್ತೊಬ್ಬನು ನ್ಯಾಯವಾದದ್ದನ್ನು ಬಿಗಿ ಹಿಡಿದರೂ ಅವನಿಗೆ ಬಡತನ'.

ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರದುವವು. ದೇವರು ನಿಮ್ಮ ಹಣಕಾಸಿನ ವಿಷಯದಲ್ಲಿ ನಿಮಗೆ ಸಹಾಯ ಮಾಡಬೇಕೆಂದು ಬಯಸುತ್ತೀರಿ ಮತ್ತು ಅದಕ್ಕಾಗಿ ನೀವು ದೇವರ್ನು ಪ್ರಾರ್ಥಿಸುತ್ತೀರಿ – ಆದರೆ ದೇವರ ರಾಜ್ಯಕ್ಕಾಗಿ ನೀವು ತವಕಿಸುತ್ತಿಲ್ಲವಾದರೆ, ಮತ್ತು ನೀವು ನಿಮ್ಮ ಹಣದ ವಿಷಯದಲ್ಲಿ ಆತನ ಮೇಲೆ ವಿಶ್ವಾಸವಿಡದೆ, ಕಾಣಿಕೆ ಕೊಡುವುದರಲ್ಲಿ ನಂಬಿಕೆಯ ಹೆಜ್ಜೆಗಳನ್ನು ಇಡಲು ವಿಫಲರಾಗುತ್ತಿದ್ದರೆ – ನೀವು ನಿಜವಾಗಿಯೂ ಆತನಲ್ಲಿ ಭರವಸೆ ಇಟ್ಟಿಲ್ಲ ಎಂದೇ ಹೇಳಬೇಕು.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಯೋಹಾನ 3:16 ಓದಿರಿ. ಕೊಡುವಂತೆ ದೇವರಿಗೆ ಪ್ರೇರೇಪಣೆಯಾದದ್ದು ಹೇಗೆ?

*__ಯೋಹಾನ 3:16__ – ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.*

2. 1 ಕೊರಿಂಥದವರಿಗೆ 13:3 ಓದಿರಿ. ಕೊಡುವುದರ ವಿಷಯದಲ್ಲಿ ನಿಮ್ಮ ಉದ್ದೇಶವೇನಾಗಿರಬೇಕು?

*__1 ಕೊರಿಂಥದವರಿಗೆ 13:3__ – ನನಗಿರುವದೆಲ್ಲವನ್ನು ಅನ್ನದಾನಮಾಡಿದರೂ ನನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜವಾಗುವದಿಲ್ಲ.*

3. ಯಾಕೋಬ 2:15,16 ಓದಿರಿ. ಈ ವಚನದ ಅರ್ಥವನ್ನು ವಿವರಿಸಿರಿ.

*__ಯಾಕೋಬ 2:15,16__ – ಒಬ್ಬ ಸಹೋದರನಿಗೆ ಇಲ್ಲವೇ ಒಬ್ಬ ಸಹೋದರಿಗೆ ಬಟ್ಟೆಯೂ ಆ ದಿನದ ಆಹಾರವೂ ಇಲ್ಲದೆ ಇರುವಾಗ ನಿಮ್ಮಲ್ಲಿ ಒಬ್ಬನು ಅವರಿಗೆ ದೇಹಕ್ಕೆ ಬೇಕಾದದ್ದನ್ನು ಕೊಡದೆ – ಸಮಾಧಾನದಿಂದ ಹೋಗಿರಿ ಬೆಂಕಿಕಾಯಿಸಿಕೊಳ್ಳಿ, ಹೊಟ್ಟೆತುಂಬಿಸಿಕೊಳ್ಳಿಎಂದು ಬರೀ ಮಾತು ಹೇಳಿದರೆ ಪ್ರಯೋಜನವೇನು?*

4. ಲೂಕನು 6:38 ಓದಿರಿ ಈ ವಚನವು ನಿಮಗೆ ಏನು ಹೇಳುತ್ತದೆ.

*__ಲೂಕನು 6:38__ – ಕೊಡಿರಿ, ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರಚಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು, ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು.*

5. ಎಫೆಸದವರಿಗೆ 1:7 ದೇವರು ತನ್ನ ಸಂಪತ್ತಿನೊಳಗಿಂದ ಕೊಟ್ಟನೋ ಅಥವಾ ತನ್ನ ಐಶ್ವರ್ಯಕ್ಕೆ ತಕ್ಕ ಹಾಗೆ ಕೊಟ್ಟನೋ? ಇದರ ವ್ಯತ್ಯಾಸವನ್ನು ವಿವರಿಸಿರಿ.

*__ಎಫೆಸದವರಿಗೆ 1:7__ – ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ*

6. ಜ್ಞಾನೋಕ್ತಿಗಳು 19: 17 ಓದಿರಿ. ನೀವು ಬಡವರಿಗೆ ಕೊಡುವಾಗ ನೀವು ಏನು ಮಾಡಿದಂತಾಗುತ್ತದೆ?

   ದೇವರು ನಿಮಗೆ ಹಿಂದಿರುಗಿಡುತ್ತಾನೋ?

   ***ಜ್ಞಾನೋಕ್ತಿಗಳು 19:17*** *– ಬಡವರಿಗೆ ದಯೆತೋರುವವನು ಯೆಹೋವನಿಗೆ ಸಾಲಕೊಡುವವನು; ಆ ಉಪಕಾರಕ್ಕೆ ಯೆಹೋವನೇ ಪ್ರತ್ಯುಪಕಾರ ಮಾಡುವನು.*

7. ಕೀರ್ತನೆ 41:1–3 ಓದಿರಿ. ಬಡವರಿಗೆ ಕೊಡುವವರಿಗಾಗಿ ದೇವರು ಮಾಡುವ 5 ಸಂಗತಿಗಳು ಯಾವುವು?

   ***ಕೀರ್ತನೆ 41:1–3*** *– ದಿಕ್ಕಿಲ್ಲದವನನ್ನು ಪರಾಂಬರಿಸುವವನು ಧನ್ಯನು; ಯೆಹೋವನು ಅವನನ್ನು ಅಪತ್ಕಾಲದಲ್ಲಿ ರಕ್ಷಿಸುವನು. ಯೆಹೋವನು ಅವನ ಪ್ರಾಣವನ್ನು ಕಾಪಾಡಿ ಉಳಿಸುವನು; ಅವನು ದೇಶದಲ್ಲಿ ಧನ್ಯನೆನಿಸಿಕೊಳ್ಳುವನು; ಯೆಹೋವನೇ, ಅವನನ್ನು ಶತ್ರುಗಳ ಅಧೀನಕ್ಕೆ ಕೊಡಬೇಡ! ಅವನು ಅಸ್ವಸ್ಥನಾಗಿ ಬಿದ್ದು ಕೊಂಡಿರುವಾಗ ಯೆಹೋವನು ಅವನನ್ನು ಉದ್ಧರಿಸುವನು; ಅವನ ರೋಗವನ್ನೆಲ್ಲಾ ಪರಿಹರಿಸಿ ಆರೋಗ್ಯವನ್ನುಂಟುಮಾಡಿದಿಯಲ್ಲಾ, ಸ್ವಾಮಿ.*

# ಉತ್ತರಗಳು

1. ಯೋಹಾನ 3:16 ಓದಿರಿ. ಕೊಡುವಂತೆ ದೇವರಿಗೆ ಪ್ರೇರೇಪಣೆಯಾದದ್ದು ಹೇಗೆ?

   **ಆತನ ಪ್ರೀತಿ**

2. 1 ಕೊರಿಂಥದವರಿಗೆ 13:3 ಓದಿರಿ. ಕೊಡುವುದರ ವಿಷಯದಲ್ಲಿ ನಿಮ್ಮ ಉದ್ದೇಶ ವೇನಾಗಿರಬೇಕು?

   **ಪ್ರೀತಿ; ಅಂದರೆ ನಮ್ಮ ಭಾವನೆಗಳನ್ನೂ  ಮೀರಿ ಇತರರ ಒಳಿತು ಮತ್ತು ಪ್ರಯೋಜನವನ್ನು ಬಯಸುವುದು (ಮತ್ತಾಯ 7:12)**

3. ಯಾಕೋಬ 2:15,16 ಓದಿರಿ. ಈ ವಚನದ ಅರ್ಥವನ್ನು ವಿವರಿಸಿರಿ.

   **ತೊಂಬತ್ತೈದು ಪ್ರತಿಶತರಷ್ಟು ಪ್ರೀತಿಯು ಮೌಖಿಕವಲ್ಲದದ್ದಾಗಿರುತ್ತದೆ ನಾವು ಹೇಳುವ ಮಾತುಗಳಲ್ಲಿ ಅಲ್ಲ ನಾವು ಮಾಡುವ ಕ್ರಿಯೆಗಳಲ್ಲಿ ಅದು ವ್ಯಕ್ತಗೊಳ್ಳುತ್ತದೆ.**

4. ಲೂಕನು 6:38 ಓದಿರಿ ಈ ವಚನವು ನಿಮಗೆ ಏನು ಹೇಳುತ್ತದೆ.

   **ಇತರರಿಗೆ ನೀವು ಯಾವ ಅಳತೆಯಿಂದ ಅಳೆದು ಕೊಡುತ್ತೀರೋ ಅದೇ ಅಳತೆಯಲ್ಲಿ ಅದು ನಿಮಗೆ ಹಿಂದಿರುಗುತ್ತದೆ.**

5. ಎಫೆಸದವರಿಗೆ 1:7 ದೇವರು ತನ್ನ ಸಂಪತ್ತಿನೊಳಗಿಂದ ಕೊಟ್ಟನೋ ಅಥವಾ ತನ್ನ ಐಶ್ವರ್ಯಕ್ಕೆ ತಕ್ಕ ಹಾಗೆ ಕೊಟ್ಟನೋ? ಇದರ ವ್ಯತ್ಯಾಸವನ್ನು ವಿವರಿಸಿರಿ.

   **ಆತನ ಐಶ್ವರ್ಯಕ್ಕೆ ತಕ್ಕ ಹಾಗೆ. ನಮ್ಮನ್ನು ಬಿಡಿಸಲು ದೇವರು ಆತನು ಎಲ್ಲವನ್ನೂ ತನ್ನ ಮಗನನ್ನೂ ಕೊಟ್ಟನು.**

6. ಜ್ಞಾನೋಕ್ತಿಗಳು 19: 17 ಓದಿರಿ. ನೀವು ಬಡವರಿಗೆ ಕೊಡುವಾಗ ನೀವು ಏನು ಮಾಡಿದಂತಾಗುತ್ತದೆ?

   **ಕರ್ತನಿಗೆ ಸಾಲ ಕೊಟ್ಟಂತೆ**

   ದೇವರು ನಿಮಗೆ ಹಿಂದಿರುಗಿಸುತ್ತಾನೋ?

   **ಹೌದು**

7. ಕೀರ್ತನೆ 41:1–3 ಓದಿರಿ. ಬಡವರಿಗೆ ಕೊಡುವವರಿಗಾಗಿ ದೇವರು ಮಾಡುವ 5 ಸಂಗತಿಗಳು ಯಾವುವು?

**ಆತನು ಅವನನ್ನು ಆಪತ್ಕಾಲದಲ್ಲಿ ರಕ್ಷಿಸುವನು, ಅವನ ಪ್ರಾಣವನ್ನು ಕಾಪಾಡಿ ಉಳಿಸುವನು, ದೇಶದಲ್ಲಿ ಧನ್ಯನೆನಿಸಿಕೊಳ್ಳುವನು (ಸಂಪತ್ತನ್ನು ಕೊಡುವನು) ಶತ್ರುಗಳಿಂದ ಬಿಡಿಸುವನು, ಸ್ವಸ್ಥಮಾಡುವನು**

# ಪಾಠ 16

# ನಿಮ್ಮ ಪ್ರಾರ್ಥನೆಗಳಿಗೆ ಉತ್ತರವಿಲ್ಲ ಎಂಬಂತಿರುವಾಗ ಏನು ಮಾಡಬೇಕು

*ಆಂಡ್ರೂ ವೊಮಕ್*

ನಿಮ್ಮ ಪ್ರಾರ್ಥನೆಗಳಿಗೆ ಉತ್ತರ ಬರುತ್ತಿಲ್ಲ ಎಂದು ಅನ್ನಿಸುವಾಗ ಏನು ಮಾಡಬೇಕೆಂದು ಹೇಳಲು ಇಷ್ಟಪಡುತ್ತೇನೆ ಮತ್ತು ಇಲ್ಲಿ ನಿಮ್ಮ ಪ್ರಾರ್ಥನೆಗಳಿಗೆ ಉತ್ತರ ಬಂದಂತೆ 'ಅನ್ನಿಸು'ವುದಿಲ್ಲ ಎಂಬ ಮಾತಿಗೆ ಒತ್ತು ನೀಡಲು ಇಚ್ಛಿಸುತ್ತೇನೆ. ದೇವರವಾಕ್ಯಕ್ಕೆ ಅನುಸಾರವಾಗಿ ನಂಬಿಕೆಯಿಂದ ಮಾಡಿದ ಪ್ರತಿಯೊಂದು ಪ್ರಾರ್ಥನೆಗೆ ದೇವರು ಯಾವಾಗಲೂ ಉತ್ತರಿಸುತ್ತಾನೆ. 1 ಯೋಹಾನ 5:14,15ರಲ್ಲಿ– *"ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬುದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ."* ಇದು ಅಧಿಕವಾದ ಭರವಸೆಯಾಗಿದೆ. ದೇವರು ಪ್ರಾರ್ಥನೆಗಳಿಗೆ ಯಾವಾಗಲೂ ಉತ್ತರಿಸತ್ತಾನೆ, ಆದರೆ ಎಲ್ಲಾ ಸಮಯದಲ್ಲೂ ಅದು ಉತ್ತರಿಸಲ್ಪಟ್ಟಂತೆ ಭಾಸವಾಗುವುದಿಲ್ಲ. ಮತ್ತಾಯ 7:7–8 – *"ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವುದು; ತಟ್ಟಿರಿ ನಿಮಗೆ ತೆರೆಯುವದು; ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು"* ಈ ವಚನಗಳು ದೇವರು ಪ್ರಾರ್ಥನೆಗೆ ಉತ್ತರ ನೀಡುತ್ತಾನೆ ಎಂದೇ ಹೇಳುತ್ತವೆ. ಆದಾಗ್ಯೂ ನಾವೆಲ್ಲರೂ ನಮ್ಮ ಜೀವಿತದ ಯಾವುದೇ ಘಟ್ಟದಲ್ಲಿ, ನಾವು ಯೋಗ್ಯವಾದದ್ದೆಂದು, ಒಳ್ಳೆಯದೆಂದು ಸಂಪೂರ್ಣವಾಗಿ ಸ್ವಾರ್ಥವಲ್ಲವೆಂದು ತಿಳಿದು ದೇವರಲ್ಲಿ ಪ್ರಾರ್ಥಿಸಿದ್ದುಂಟು ಮತ್ತು ಅದಕ್ಕೆ ಉತ್ತರ ಬರಲಿಲ್ಲವೆಂದು ನಿರಾಶೆಗೊಂಡದ್ದೂ ಉಂಟು.

ದೇವರ ವಾಕ್ಯವು, ಕೇಳಿರಿ ದೊರೆಯುವುದು ಎಂದು ಹೇಳುತ್ತದೆ. ಆದರೆ ನಮ್ಮ ಅನುಭವ ಹೇಳುತ್ತದೆ – ನಾವು ಕೇಳಿದೆವು ಆದರೆ ನಮಗೆ ದೊರೆಯಲಿಲ್ಲ. ಯಾವುದು ಸತ್ಯ? ಈ ಉತ್ತರದಿಂದ ನಿಮಗೆ ಆಶ್ಚರ್ಯವಾಗಬಹುದು. ಆದರೆ ಇವೆರಡೂ ಸತ್ಯವೇ. ಅನೇಕರು ಹೀಗೆ ಆಲೋಚಿಸುತ್ತಾರೆ, 'ದೇವರ ವಾಕ್ಯವು, ದೇವರು ಪ್ರಾರ್ಥನೆಯನ್ನು ಕೇಳಿ ಉತ್ತರಿಸುತ್ತಾನೆ ಎಂದು ಹೇಳುತ್ತದೆ. ಆದರೆ ಅದು ನೆರವೇರಿದಂತೆ ಕಂಡುಬರುವುದಿಲ್ಲ' ಯೋಹಾನ 4:24 ಹೇಳುತ್ತದೆ, *"ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು*

*ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು".* ಪ್ರಾರ್ಥನೆಗೆ ಉತ್ತರ ಕೊಡಲು ದೇವರು ಆತ್ಮ ವಲಯದಲ್ಲಿ ಕಾರ್ಯನಡೆಸುತ್ತಾನೆ; ಮತ್ತು ಅದು ಹೊರತೋರಬೇಕಾದಲ್ಲಿ ನಾವು ನಂಬಿಕೆಯನ್ನು ತೋರಬೇಕು. ನಂಬಿಕೆಯು ಉತ್ತರಗಳನ್ನು ಆತ್ಮನ ವಲಯದಿಂದ ಭೌತಿಕ ವಲಯಕ್ಕೆ ತರುತ್ತದೆ. ಮೂಲತಃ ಇಬ್ರಿಯ 11:1 ರಲ್ಲಿ ಹೇಳುವುದೂ ಇದನ್ನೇ, *"ನಂಬಿಕೆಯೋ ನಾನು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ".* ಅದು "ಕಣ್ಣಿಗೆ ಕಾಣದವುಗಳನ್ನು" ಎಂದು ಹೇಳುತ್ತದೆಯೇ ಹೊರತು "ಇಲ್ಲದೇ ಇರುವುದನ್ನು" ಎಂದು ಹೇಳುವದಿಲ್ಲ. ಅವು ಇವೆ ಆದರೆ ಅದು ಕಣ್ಣಿಗೆ ಕಾಣುವ ಭೌತಿಕ ಲೋಕದಲ್ಲಿ ಇರದೆ, ಕಣ್ಣಿಗೆ ಕಾಣದ ಆತ್ಮದ ವಲಯದಲ್ಲಿ ಇವೆ. ನಂಬಿಕೆಯು ಆತ್ಮದ ವಲಯವನ್ನು ಪ್ರವೇಶಿಸಿ ಅವುಗಳನ್ನು ಭೌತಿಕ ವಲಯಕ್ಕೆ ಎಳೆದು ತರುತ್ತದೆ.

ಅದು ರೇಡಿಯೋ ಸಿಗ್ನಲ್ ಅಥವಾ ಸಂಜ್ಞೆಗಳಂತೆ ರೇಡಿಯೋ ಮತ್ತು ಟೆಲಿವಿಷನ್ ವಾಹಿನಿಗಳು ನಿರಂತರವಾಗಿ ತಮ್ಮ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಲೇ ಇರುತ್ತವೆ. ನೀವಿರುವ ಕೋಣೆಯಲ್ಲಿ ನಿಮಗೆ ಈ ತರಂಗಗಳು ಕಾಣದೆ ಕೇಳದೆ ಹೋಗಬಹುದು ಆದರೆ ಅವುಗಳಿಲ್ಲ ಎಂದು ಹೇಳಲಾಗದು, ನೀವು ರೇಡಿಯೋವನ್ನು ಆ ಧ್ವನಿ ತರಂಗಗಳ ಆವರ್ತನಕ್ಕೆ ಹೊಂದಿಸಬೇಕಾಗುತ್ತದೆ. ಆಗ ಆ ವಲಯದಲ್ಲಿ ನೀವು ಗ್ರಹಿಸಲಾರದ ಸಂಜ್ಞೆಗಳನ್ನು ನೀವು ಗ್ರಹಿಸಬಲ್ಲ ಧ್ವನಿ ತರಂಗಗಳನ್ನಾಗಿ ಬದಲಿಸಿ ನಿಮ್ಮ ಕಿವಿ ತುಂಬುತ್ತದೆ. ಇದೇ ರೀತಿಯಲ್ಲಿ ದೇವರು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ. ಆತನು ಆತ್ಮನ ವಲಯದಲ್ಲಿ ಎಲ್ಲಾ ಸಂಗತಿಗಳನ್ನು ನಿಮಗೆ ದಯಪಾಲಿಸಿದ್ದಾನೆ ಮತ್ತು ನೀವು ಅದನ್ನು ನಂಬಿಕೆಯ ಸಾಧನ ಬಳಸಿ ಭೌತಿಕ ವಲಯದಲ್ಲಿ ಪಡೆದುಕೊಳ್ಳಬೇಕು. ಭೌತಿಕ ಮತ್ತು ಆಧ್ಯಾತ್ಮಿಕ ಲೋಕಗಳು ಒಂದಕ್ಕೊಂದು ಸಮನಾಂತರವಾಗಿ ಚಲಿಸುತ್ತವೆ. ದೇವರು ನಿಮ್ಮ ಪ್ರಾರ್ಥನೆಗೆ ಕಿವಿಗೊಟ್ಟು ಕಾರ್ಯ ಮಾಡುತ್ತಾನೆ ಆದರೆ ಕಾಣದ ಆತ್ಮನ ಲೋಕಕ್ಕೂ ಭೌತಿಕ ಲೋಕಕ್ಕೂ ನಡುವೆ ನಂಬಿಕೆಯ ಸೇತುವೆಯನ್ನು ಕಟ್ಟದಿದ್ದರೆ ಪ್ರಾರ್ಥನೆಗೆ ಉತ್ತರವನ್ನು ನೀವು ಕಾಣಲಾಗುವುದಿಲ್ಲ.

ಉದಾಹರಣೆಗಾಗಿ, ದೇವರ ಮನುಷ್ಯನಾದ ದಾನಿಯೇಲನು ಯಾವುದೋ ಒಂದು ವಿಷಯದಲ್ಲಿ ತನಗೆ ಪ್ರಟಕಣೆಯಾಗಬೇಕೆಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದನು. ಸಮಯದ ಮಿತಿಯಿಂದಾಗಿ ನಾನು ಈ ಕತೆಯನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ದಾನಿಯೇಲನ ಪ್ರಾರ್ಥನೆಗೆ ಉತ್ತರವನ್ನು ಕೊಂಡೊಯ್ಯಲು ಕರ್ತನು ತನ್ನ ದೂತನಾದ ಗಬ್ರಿಯೇಲನನ್ನು ಕಳುಹಿಸಿದನು. ದಾನಿಯೇಲನು 9:22,23 ಹೇಳುತ್ತದೆ, *"ದಾನಿಯೇಲನೇ, ನಿನಗೆ ಜ್ಞಾನಬೋಧೆ ಮಾಡುವದಕ್ಕೆ ಈಗ ಬಂದೆನು; ನಿನ್ನ ವಿಜ್ಞಾಪನೆಯ ಆರಂಭದಲ್ಲಿಯೇ ದೇವರ ಅಪ್ಪಣೆಯಾಯಿತು; ಅದನ್ನು ನಿನಗೆ ತಿಳಿಸಲು ಇಲ್ಲಿಗೆ ಬಂದಿದ್ದೇನೆ; ನೀನು (ದೇವರಿಗೆ) ಅತಿಪ್ರಿಯ; ಈ ದೈವೋಕ್ತಿಯನ್ನು ಯೋಚಿಸು, ಈ ದರ್ಶನವನ್ನು ಗ್ರಹಿಸಿಕೋ."* ಇಲ್ಲಿ ಒಂದು ಸತ್ಯಾಂಶ ಅಡಗಿದೆ; ಗಬ್ರಿಯೇಲನು ಹೇಳುತ್ತಾನೆ – ಪ್ರಾರ್ಥನೆಯ ಪ್ರಾರಂಭದಲ್ಲಿಯೇ, ಅದಕ್ಕೆ ಉತ್ತರವನ್ನು ತೆಗೆದುಕೊಂಡು ಬರುವಂತೆ ಗಬ್ರಿಯೇಲನಿಗೆ ಅಪ್ಪಣೆಯಾಯಿತು. ಅದು ಬರಲು ಎಷ್ಟು ಸಮಯ ಹಿಡಿಯಿತೆಂದು

ನೀವು ಓದುವಿರಾದರೆ ಅದು ಕೇವಲ ಮೂರು ನಿಮಿಷ, ದೇವರ ಅಪ್ಪಣೆಗೂ ಮತ್ತು ಅದು ಮನುಷ್ಯರ ನಡುವೆ ನೆರವೇರುವುದಕ್ಕೂ ತಗುಲಿದ ಸಮಯ ಕೇವಲ ಮೂರು ನಿಮಿಷ.

ನಾವು ಬೇಕಾದಷ್ಟು ಊಹೆಗಳನ್ನು ಮಾಡುತ್ತೇವೆ– ದೇವರು ನಿಜವಾಗಿಯೂ ದೇವರಾಗಿದ್ದರೆ ಮತ್ತು ಆತನ ಚಿತ್ತವಿದ್ದರೆ, ಅದು ಚಿಟಿಕೆ ಹೊಡೆಯುವುದರಲ್ಲಿ ನೆರೆವೇರುತ್ತದೆ ಎಂದು; ಆದರೆ ಅದು ಹಾಗಲ್ಲ. ಈ ಸನ್ನಿವೇಶದಲ್ಲಿ, ದೇವರು ಆಜ್ಞೆಯನ್ನು ನೀಡುತ್ತಾನೆ, ಮತ್ತು ಅದನ್ನು ಭೂಮಿಗೆ ಹೊತ್ತೊಯ್ದು ಬರಲು ಗಬ್ರಿಯೇಲನಿಗೆ ಮೂರು ನಿಮಿಷ ಹಿಡಿಯುತ್ತದೆ. ಇದಕ್ಕೆ ಕಾರಣವೇನೆಂದು ವಿವರಿಸಲು ನನ್ನಿಂದಾಗುವುದಿಲ್ಲ ಮತ್ತು ಅದರ ಅವಶ್ಯಕತೆಯೂ ಇಲ್ಲ. ನಾನು ಇಲ್ಲಿ ಸ್ಪಷ್ಟಪಡಿಸಲು ಬಯಸುವುದೇನಂದರೆ ದೇವರು ಅಪ್ಪಣೆಕೊಟ್ಟ ಸಮಯದಿಂದ ಅದು ತನ್ನ ಕಾರ್ಯಸ್ಥಾನ ಮುಟ್ಟಲು ಮೂರು ನಿಮಿಷಗಳ ಕಾಲಾವಧಿ ಹಿಡಿಯಿತು. ಒಂದು ಪ್ರಾರ್ಥನೆಗೆ ಉತ್ತರಬರಲು ತಗಲುವ ಅತ್ಯಂತ ದೀರ್ಘಾವಧಿಯು ಇದೆಂದು ನಾವು ತಿಳಿಯುವುದಾದರೆ, ನಮ್ಮಲ್ಲಿ ಹೆಚ್ಚಿನವರು ಎದುರು ನೋಡಲು ಸಿದ್ಧರಿರುತ್ತೇವೆ ಆದರೆ ಅದು ಯಾವಾಗಲೂ ಹೀಗಿರುವುದಿಲ್ಲ.

ದಾನಿಯೇಲನು 10 ನೇ ಅಧ್ಯಾಯದಲ್ಲಿ ಇದೇ ಮನುಷ್ಯನು ಮತ್ತೊಂದು ಪ್ರಾರ್ಥನೆಯನ್ನು ಮಾಡುವುದನ್ನು ನೋಡುತ್ತೇವೆ. ಮತ್ತು ಇದನ್ನು ಓದಿದ ಅನೇಕರು, ದೇವರು ದಾನಿಯೇಲನ ಒಂದು ಪ್ರಾರ್ಥನೆಯನ್ನು ಮೂರು ನಿಮಿಷಗಳಲ್ಲಿ ಉತ್ತರಿಸಿ ಮತ್ತೊಂದನ್ನು ಮೂರು ವಾರಗಳ ಮೇಲೆ ಉತ್ತರಿಸಿದ್ದು ಏಕೆ ಎಂದು ಕೇಳಬಹುದು ದಾನಿಯೇಲನು 10:11,12 ಹೇಳುತ್ತದೆ, *"ಆಗ ಅವನು ನನಗೆ – ದಾನಿಯೇಲನೇ, ಅತಿಪ್ರಿಯನೇ, ನಾನು ನುಡಿಯುವ ಮಾತುಗಳನ್ನು ಗ್ರಹಿಸು; ನಿಂತುಕೋ, ಈಗ ನಿನ್ನ ಬಳಿಗೆ ಕಳುಹಿಸಲ್ಪಟ್ಟಿದ್ದೇನೆ ಎಂದು ಹೇಳಿದನು; ಹೇಳಿದ ಕೂಡಲೆ ನಾನು ನಡುಗುತ್ತಾ ನಿಂತುಕೊಂಡೆನು. ಆ ಮೇಲೆ ಅವನು ನನಗೆ – ದಾನಿಯೇಲನೇ, ಭಯಪಡಬೇಡ, ನೀನು (ದೈವಸಂಕಲ್ಪವನ್ನು) ವಿಮರ್ಶಿಸುವದಕ್ಕೂ ನಿನ್ನನ್ನು ನಿನ್ನ ದೇವರ ಮುಂದೆ ತಗ್ಗಿಸಿಕೊಳ್ಳುವದಕ್ಕೂ ಮನಸ್ಸಿಟ್ಟ ಮೊದಲನೆಯ ದಿನದಲ್ಲಿಯೇ ನಿನ್ನ ವಿಜ್ಞಾಪನೆಯು ದೇವರಿಗೆ ಮುಟ್ಟಿತು; ಆ ವಿಜ್ಞಾಪನೆಯ ನಿಮಿತ್ತವೇ ನಾನು ಬಂದೆನು. ದಾನಿಯೇಲನ ಪ್ರಾರ್ಥನೆಯ ಮೊದಲನೆಯ ದಿನದಲ್ಲಿಯೇ ದೇವರು ಗಬ್ರಿಯೇಲನಿಗೆ ಅಪ್ಪಣೆ ನೀಡಿದನು. ಆದರೆ ಆ ಉತ್ತರವು ನೆಲಮುಟ್ಟುವಷ್ಟರಲ್ಲಿ ಮೂರು ವಾರಗಳು ಕಳೆದವು."* ಆದರೆ ದೇವರು ನಂಬಿಗಸ್ತನು. ಆತನು ಇಬ್ರಿಯ 13:8 – ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು. ಎಂದು ದೇವರ ವಾಕ್ಯವು ಹೇಳುತ್ತದೆ.

ನೀವು 9 ಮತ್ತು 10 ಅಧ್ಯಾಯಗಳನ್ನು ಒಟ್ಟಾಗಿ ನೋಡುವುದಾದರೆ ದೇವರು ಎರಡೂ ಪ್ರಾರ್ಥನೆಗಳನ್ನು ತಕ್ಷಣವೇ ಉತ್ತರಿಸಿದನು. ಆದರೆ ನೆಲೆಮುಟ್ಟಲು ಒಂದಕ್ಕೆ ಮೂರು ನಿಮಿಷ ಮತ್ತು ಮತ್ತೊಂದಕ್ಕೆ ಮೂರುವಾರಗಳ ಸಮಯ ಹಿಡಿಯಿತು; ಆದರೆ ದೇವರಲ್ಲಿ ಯವುದೇ ವ್ಯತ್ಯಾಸವಿಲ್ಲ. ಇಲ್ಲಿ ಸ್ಪಷ್ಟವಾದ ಒಂದು ವಿಷಯವೆಂದರೆ, ದೇವರು ಪ್ರಾರ್ಥನೆಗಳನ್ನು ಉತ್ತರಿಸುತ್ತಾನೆ. ಆತನು ತನ್ನ ಕೆಲಸವನ್ನು ಮಾಡುತ್ತಾನೆ ಆದರೆ ಆತನು

ಪ್ರಾರ್ಥನೆಗೆ ಉತ್ತರಿಸುವುದಕ್ಕೂ ಮತ್ತು ಆ ಉತ್ತರಗಳು ನಮಗೆ ಕಂಡುಬರುವದಕ್ಕೂ ನಡುವೆ ವ್ಯತ್ಯಾಸವಾಗುವಂತ ಅನೇಕ ಸಂಗತಿಗಳು ಜರುಗುತ್ತವೆ. ನೀವಿದನ್ನು ನಂಬಬೇಕು ಪ್ರಾರ್ಥನೆಗೆ ಉತ್ತರವನ್ನು ನಂಬಿಕೆಯು ಆತ್ಮನ ವಲಯದಿಂದ ಭೌತಿಕ ವಲಯಕ್ಕೆ ವರ್ಗಾಯಿಸುತ್ತಾರೆ. ಆದುದರಿಂದ ಇಲ್ಲಿ ನಂಬಿಕೆಯು ಬಹಳ ಮಹತ್ವದ ಅಂಶವಾಗಿದೆ.

ಇದರ ಜೊತೆಗೆ ದಾನಿಯೇಲನು 10:13ರಲ್ಲಿ *"ಪಾರಸಿಯ ರಾಜ್ಯದ ದಿವ್ಯಪಾಲಕನು ಇಪ್ಪತ್ತೊಂದು ದಿವಸ ನನ್ನನ್ನು ತಡೆಯಲು ಇಗೋ, ಪ್ರಧಾನ ಪಾಲಕರಲ್ಲೊಬ್ಬನಾದ ಮಿಕಾಯೇಲನು ನನ್ನ ಸಹಾಯಕ್ಕೆ ಬಂದನು"* ಎಂದು ನೋಡುತ್ತೇವೆ. ಇದು ಒಬ್ಬ ವ್ಯಕ್ತಿಯ ಕುರಿತಾಗಿ ಹೇಳದೆ ಒಂದು ದುರಾತ್ಮನನ್ನು ಉದ್ದೇಶಿಸಿ ಹೇಳಿದ ಮಾತಾಗಿದೆ. ಕೆಲವು ವೇಳೆ, ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳಿದ್ದರೂ ಸೈತಾನನು ಇತರರನ್ನು ಉಪಯೋಗಿಸಿ ಅವುಗಳಿಗೆ ಉತ್ತರವನ್ನು ತಡೆಹಿಡಿಯುತ್ತಾನೆ. ಉದಾಹರಣೆಗಾಗಿ, ನೀವು ಆರ್ಥಿಕ ಸಮೃದ್ಧಿಗಾಗಿ ದೇವರನ್ನು ನಂಬಿರುವಿರಿ ಎಂದುಕೊಳ್ಳೋಣ. ದೇವರು ಈ ಹಣವನ್ನು ನೇರವಾಗಿ ನಿಮ್ಮ ಕೈಗಳಲ್ಲಿ ಇಡುವುದಿಲ್ಲ. ಆತನು ನಿಮ್ಮ ದೇಶದ ಚಲಾವಣೆಯನ್ನಾಗಲೀ ಅಥವ ಇನ್ನಾವುದೇ ದೇಶದ ಚಲಾವಣೆಯನ್ನಾಗಲೀ ಮುದ್ರಿಸಿ ನಿಮಗೆ ಕೊಡುವುದಿಲ್ಲ ಆಕಾಶದಿಂದ ನಿಮಗೆ ಬೇಕಾದ ಹಣದ ಮಳೆ ಸುರಿಸುವುದಿಲ್ಲ ಅಥವಾ ನಿಮ್ಮ ಜೇಬು ತುಂಬಿಸುವುದಿಲ್ಲ. ಲೂಕನು 6:38 ರಲ್ಲಿ – *"ಕೊಡಿರಿ, ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರಚಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು, ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು"* ಎಂದು ಹೇಳಿಯದೆ. ದೇವರು ನಿಮ್ಮ ಪ್ರಾರ್ಥನೆಗೆ ಸ್ಪಂದಿಸಿ ಉತ್ತರಿಸುತ್ತಾನೆ ಆದರೆ ಅದು ಜನರ ಮೂಲಕವೇ ನಿಮಗೆ ದೊರಕುತ್ತದೆ. ಕೆಲವು ದುರಾಶೆಯಿರುವ ಜನರಿರುತ್ತಾರೆ, ಮತ್ತು ಒಂದುವೇಳೆ ಅವರಿಗೆ ನಿಮ್ಮ ಮೇಲೆ ಕೋಪವಿದ್ದಿರಬಹುದು, ಅಥವಾ ಅವರಿಗೆ ಅಡ್ಡಿಯಾಗುವಂತಹ ಕೆಲಸಗಳನ್ನು ನೀವು ಮಾಡುತ್ತಿರಬಹುದು. ಸೈತಾನನು ಅಂಥವರನ್ನು ಉಪಯೋಗಿಸಿ ನಿಮ್ಮ ಪ್ರಾರ್ಥನೆಗಳಿಗೆ ಉತ್ತರ ಬರುವುದನ್ನು ತಡೆಯಲು ಪ್ರಯತ್ನಿಸುತ್ತನೆ, ನೀವು ನಿಮ್ಮ ಆರ್ಥಿಕ ನೆರವಿಗಾಗಿ ಪ್ರಾರ್ಥಿಸುವಾಗ, ನಿಮ್ಮ ಆರ್ಥಿಕ ಅದ್ಭುತಕ್ಕಾಗಿ ಇತರರ ಪಾಲೂ ಇದೆ ಎಂದು ನೀವು ಗುರುತಿಸಬೇಕು, ಮತ್ತು ನೀವು ಅವರಿಗಾಗಿ ಸಹ ಪ್ರಾರ್ಥನೆ ಮಾಡಬೇಕು.

ದೇವರು ನಂಬಿಗಸ್ತನು. ಆತನ ವಾಕ್ಯದ ಮೇಲೆ ಆಧಾರಗೊಂಡು ನಂಬಿಕೆಯಿಂದ ಮಾಡಿದ ಯಾವ ಪ್ರಾರ್ಥನೆ ಆದರೂ ಆತನು ಉತ್ತರಿಸದೆ ಹೋಗುವದಿಲ್ಲ. ಆತನು ಯಾವಾಗಲೂ ಕೊಡುತ್ತಾನೆ, ಆದರೆ ಪರಿಸರದಲ್ಲಿನ ಇತರ ವ್ಯತ್ಯಾಸಗಳ ನಿಮಿತ್ತ ಅದು ನಿಮಗೆ ಕಾಣದೆ ಹೋಗಬಹುದು. ಇದು ನಿಮ್ಮ ನಂಬಿಕೆಯನ್ನು ವೃದ್ಧಿಸಲು ಸಹಾಯ ಮಾಡಲಿ ಮತ್ತು ದೇವರು ಯಾವಾಗಲೂ ಪ್ರಾರ್ಥನೆಗಳಿಗೆ ಉತ್ತರ ನೀಡುವನೆಂದು ನೀವು ತಿಳಿಯುವಂತಾಗಲಿ.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸುವ ವಾಕ್ಯಗಳು

1. ಮತ್ತಾಯ 7:7,8 ಓದಿರಿ. ನಾವು ದೇವರನ್ನು ಬೇಡಿಕೊಳ್ಳುವಾಗ ಏನನ್ನು ನಿರೀಕ್ಷಿಸಬಹುದು?

*__ಮತ್ತಾಯ 7:7–8__ – ಬೇಡಿಕೊಳ್ಳಿರಿ, ನಿಮಗೆ ದೊರೆಯುವುದು; ಹುಡುಕಿರಿ ನಿಮಗೆ ಸಿಕ್ಕುವುದು; ತಟ್ಟಿರಿ, ನಿಮಗೆ ತೆರೆಯುವದು; ಯಾಕೆಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವುದು, ತಟ್ಟುವವನಿಗೆ ತೆರೆಯುವದು.*

2. ಮತ್ತಾಯ 7:7–8 ಓದಿರಿ ನಾವು ದೇವರಿಗಾಗಿ ಹಂಬಲಿಸುವಾಗ ಹಂಬಲಿಸುವಾಗ ನಾವು ಏನ್ನನ್ನು ನಿರೀಕ್ಷಿಸಬಹುದು?

3. ಮತ್ತಾಯ 7:7–8 ಓದಿರಿ ನಾವು ತಟ್ಟಿದಾಗ ಏನಾಗಬಹುದು?

4. ಯೋಹಾನ 10:35 ಓದಿರಿ. ದೇವರು ತನ್ನ ವಾಕ್ಯದಲ್ಲಿ ನೀಡಿರುವ ವಾಗ್ದಾನಗಳಿಗಿಂತ ಕಡಿಮೆಯಾದದ್ದನ್ನು ಕೊಡುವನೋ?

*__ಯೋಹಾನ 10:35__ – ಹಾಗಾದರೆ ದೇವರ ವಾಕ್ಯವನ್ನು ಹೊಂದಿರುವವರನ್ನು ದೇವರುಗಳೆಂದು ಆತನು ಹೇಳಿರುವಲ್ಲಿ*

5. ಯಾಕೋಬನು 4:1–3 ಓದಿರಿ. ಈ ಜನರು ದೇವರಿಂದ ಹೊಂದಿಕೊಳ್ಳಲಾಗದಂತೆ ಏಕೆ ಅಡ್ಡಿಯಾಯಿತು?

*__ಯಾಕೋಬನು 4:1–3__ – ನಿಮ್ಮಲ್ಲಿ ಯುದ್ಧಗಳೂ ಕಾದಾಟಗಳೂ ಎಲ್ಲಿಂದ ಹುಟ್ಟುತ್ತವೆ? ನಿಮ್ಮ ಇಂದ್ರಿಯಗಳಲ್ಲಿ ಹೋರಾಡುವ ಭೋಗಾಶೆಗಳಿಂದಲೇ ಅಲ್ಲವೇ. ನೀವು ಆಶಿಸಿದರೂ ಹೊಂದದೆ ಇದ್ದೀರಿ. ನೀವು ಕೊಲೆಗಾರರಾಗುವಷ್ಟು ಹೊಟ್ಟೆಕಿಚ್ಚುಪಟ್ಟಾದರೂ ಸಂಪಾದಿಸಲಾರದೆ ಇದ್ದೀರಿ; ನೀವು ಕಾದಾಡುತ್ತೀರಿ, ಯುದ್ಧ ಮಾಡುತ್ತೀರಿ. ನೀವು ದೇವರನ್ನು ಬೇಡಿಕೊಳ್ಳದ ಕಾರಣ ನಿಮಗೇನೂ ದೊರೆಯಲಿಲ್ಲ. ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ ದುರಭಿಪ್ರಾಯಪಟ್ಟು ಬೇಡಿಕೊಳ್ಳುವದರಿಂದ ನಿಮಗೆ ದೊರೆಯುವದಿಲ್ಲ.*

6. 1 ಪೇತ್ರ 3:7 ಓದಿರಿ. ನೀವು ನಿಮ್ಮ ಸಂಗತಿಯನ್ನು ಹೀನಾಯವಾಗಿ ನಡೆಸಿಕೊಂಡರೆ ನಿಮ್ಮ ಪ್ರಾರ್ಥನಾ ಜೀವಿತ ಹೇಗಿರುತ್ತದೆ.

*__1 ಪೇತ್ರ 3:7__ – ಅದೇ ರೀತಿಯಾಗಿ ಪುರುಷರೇ, ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬದನ್ನು ಜ್ಞಾಪಕಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನ ಮಾಡಿರಿ.*

7. 1 ಯೋಹಾನ 5:14–15 ಓದಿರಿ. ನಿಮ್ಮ ಪ್ರಾರ್ಥನೆಗಳು ಉತ್ತರಿಸಲ್ಪಡುವಂತೆ ಇರುವ ಸೂತ್ರವೇನು?

*__1 ಯೋಹಾನನು 5: 14–15__ – ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬುದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ.*

8. ಮಾರ್ಕ 11:24 ಓದಿರಿ. ನೀವು ಪ್ರಾರ್ಥಿಸುವಾಗ ಏನು ಮಾಡತಕ್ಕದ್ದು?

*__ಮಾರ್ಕ 11: 24__ – ಆದಕಾರಣ ನೀವು ಪ್ರಾರ್ಥನೆಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ.*

## ಉತ್ತರಗಳು

1. ಮತ್ತಾಯ 7:7,8 ಓದಿರಿ. ನಾವು ದೇವರನ್ನು ಬೇಡಿಕೊಳ್ಳುವಾಗ ಏನನ್ನು ನಿರೀಕ್ಷಿಸಬಹುದು?

**ಅದು ನಿಮಗೆ ಕೊಡಲ್ಪಡುವುದೆಂದು ನಿರೀಕ್ಷಿಸಬೇಕು**

2. ಮತ್ತಾಯ 7:7–8 ಓದಿರಿ ನಾವು ದೇವರಿಗಾಗಿ ಹಂಬಲಿಸುವಾಗ ಹಂಬಲಿಸುವಾಗ ನಾವು ಏನ್ನನ್ನು ನಿರೀಕ್ಷಿಸಬಹುದು?

**ಸಿಕ್ಕುವುದೆಂದು**

3. ಮತ್ತಾಯ 7:7–8 ಓದಿರಿ ನಾವು ತಟ್ಟಿದಾಗ ಏನಾಗಬಹುದು?

**ತೆರೆಯಲ್ಪಡುವುದೆಂದು**

4. ಯೋಹಾನ 10:35 ಓದಿರಿ. ದೇವರು ತನ್ನ ವಾಕ್ಯದಲ್ಲಿ ನೀಡಿರುವ ವಾಗ್ದಾನಗಳಿಗಿಂತ ಕಡಿಮೆಯಾದದ್ದನ್ನು ಕೊಡುವನೋ?

**ಇಲ್ಲ.**

5. ಯಾಕೋಬನು 4:1–3 ಓದಿರಿ. ಈ ಜನರು ದೇವರಿಂದ ಹೊಂದಿಕೊಳ್ಳಲಾಗದಂತೆ ಏಕೆ ಅಡ್ಡಿಯಾಯಿತು?

**ಅವರ ಮನಸ್ಸು ಮತ್ತು ಉದ್ದೇಶಗಳು ಸರಿಯಿರಲಿಲ್ಲ.**

6. 1 ಪೇತ್ರ 3:7 ಓದಿರಿ. ನೀವು ನಿಮ್ಮ ಸಂಗತಿಯನ್ನು ಹೀನಾಯವಾಗಿ ನಡೆಸಿಕೊಂಡರೆ ನಿಮ್ಮ ಪ್ರಾರ್ಥನಾ ಜೀವಿತ ಹೇಗಿರುತ್ತದೆ.

**ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಾಗುತ್ತದೆ**

7. 1 ಯೋಹಾನ 5:14–15 ಓದಿರಿ. ನಿಮ್ಮ ಪ್ರಾರ್ಥನೆಗಳು ಉತ್ತರಿಸಲ್ಪಡುವಂತೆ ಇರುವ ಸೂತ್ರವೇನು?

**ಆತನ ಚಿತ್ತಕ್ಕೆ ಅನುಸಾರವಾಗಿ**

8. ಮಾರ್ಕ 11:24 ಓದಿರಿ. ನೀವು ಪ್ರಾರ್ಥಿಸುವಾಗ ಏನು ಮಾಡತಕ್ಕದ್ದು?

**ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ.**

## CONTACT DETAILS

### INDIA


www.awmindia.net info@awmindia.net

**Locations:**

### Hyderabad

42-343/1/188, Near Flora Hotel, Maruthi Nagar

A S Rao Nagar, Hyderabad 500 040, INDIA.

Ph: (040) 4028 0718

### Chennai

72-D, Nandhini Mahal, I Floor, Velachery Main Road

Velachery, Chennai 600 042, INDIA.

Ph: (044) 4202 1820

### Mumbai

Bethel, Plot No 305/E, Mith Chowky, Near Girdhar Park

Malad (W), Mumbai 400 064, INDIA.

Ph: +91 8976549515

### Delhi

Phone: +91 9560591787

### USA

Andrew Wommack Ministries Inc.

PO Box 3333, Colorado Springs CO 80934-3333

www.awmi.net

### UK

Andrew Wommack Ministries - Europe

PO Box 4392, Walsall, WS1 9AR, ENGLAND

www.awme.net

# Charis Bible Colleges

And the things that thou hast heard of me among many witnesses, the same commit thou to faithful men, who shall be able to teach others also. 2 Tim 2:2

The Lord led Andrew to start Charis Bible College (CBC) to equip the saints for the work of ministry with a profound message emphasizing God's Unconditional Love and the balance of Grace and Faith. CBC equips the students giving them rich teaching of God's Word as well as practical hands-on ministry experience.



*You can learn from the 'school of hard knocks,' I certainly have. But I don't recommend it! There's a better way to learn; it's Charis Bible College.*

Andrew Wommack,
President & Founder

CBC is not just another bible college, it's a school for life! It is for people from all walks of life whether you are a preacher, businessman, mum, dad or grandparent.

There are three course options to match your own schedule: Full Time, Part Time and Correspondence. In Full Time, you can fully immerse yourself in the Word for 8 months in a grace-filled family atmosphere, or join Part Time on weekends, or study the CBC material at home through Correspondence!

*We invite you to take the step of faith and join our CBC family !*

Contact us for further information:

**Chennai:** Ph: (044)-4202 1820

**Hyderabad:** Ph: (040)- 40280718

**Mumbai:** Ph: +91 8976549515

**Delhi:** Ph: +91 9560591787

info@awmindia.net    www. charisbiblecollegeindia.org

# ಸಂಪೂರ್ಣ ಶಿಷ್ಯತ್ವದ ಸುವಾರ್ತೆ

## 48 – ಪಾಠಗಳ ಕೋರ್ಸ್

## ಹಂತ 3

ಆಂಡ್ರೂ ವ಼ಾಮಕ್

ಮತ್ತು

ಡೂಣ್ ಕ್ರೊ

Copyright © 2012, Andrew Wommack
Permission is granted to duplicate or reproduce
for discipleship purposes on the condition that
it is distributed free of charge.

Andrew Wommack Ministries
P.O. Box 3333
Colorado Springs, CO 80934-3333
www.awmi.net

The Complete Discipleship Evangelism
48-Lesson Course © 2012
Level 3 (16 Lessons)

Copyright © 2012, Andrew Wommack
Permission is granted to duplicate or reproduce
for discipleship purposes on the condition that
it is distributed free of charge.

Andrew Wommack Ministries Inc.
P.O. Box 3333, Colorado Springs, CO 80934-3333
www.awmi.net

Title in Kannada: ಸಂಪೂರ್ಣ ಶಿಷ್ಯತ್ವದ ಸುವಾರ್ತೆ – ಹಂತ 3

© 2020 Andrew Wommack Ministries India
info@awmindia.net    www.awmindia.net

Item Code: KA 417-3/3

Published and sold by Charis Initiatives Pvt. Ltd.

# ಸಂಪೂರ್ಣ ಶಿಷ್ಯತ್ವದ ಸುವಾರ್ತೆ

## 48 ಪಾಠಗಳ ಕೋರ್ಸ್ ಅನುಕ್ರಮಣಿಕೆ

## ಹಂತ 3


| | | |
|---|---|---|
| 1. | ದೈವಿಕವಾದ ಹರಿವು | 5 |
| 2. | ಸೇವೆಮಾಡಲು ವರಗಳನ್ನು ಉಪಯೋಗಿಸುವುದು | 13 |
| 3. | ಅದ್ಭುತಕಾರ್ಯಗಳು ದೇವರನ್ನು ಮಹಿಮೆ ಪಡಿಸುತ್ತವೆ | 26 |
| 4. | ಸದ್ಭಕ್ತರ ಸಹವಾಸದಲ್ಲಿರುವ ಶಕ್ತಿ | 36 |
| 5. | ಹಿಂಸೆ | 43 |
| 6. | ರಾಜನು ಮತ್ತು ಆತನ ರಾಜ್ಯ | 51 |
| 7. | ನಂಬಿಕೆಯ ಮೂಲಕ ರಕ್ಷಿಸಲ್ಪಡುವ ಉದ್ದೇಶ | 63 |
| 8. | ದೇವರ ಆಜ್ಞೆಗಳನ್ನು ಸರಿಯಾಗಿ ಉಪಯೋಗಿಸುವುದು | 70 |
| 9. | ಧರ್ಮಶಾಸ್ತ್ರಾಧೀನರಲ್ಲ, ಕೃಪಾಶ್ರಯದಲ್ಲಿದ್ದೇವೆ | 80 |
| 10. | ಪಾಪಪ್ರಜ್ಞೆ ಕಾಡುವುದಿಲ್ಲ | 89 |
| 11. | ನಾನು ಪ್ರಿಯನು/ಳು ನಾನು ಸುಂದರನು/ಳು | 100 |
| 12. | ರಕ್ಷಣೆಯ ಫಲ – ಭಾಗ 1 | 109 |
| 13. | ರಕ್ಷಣೆಯ ಫಲ – ಭಾಗ 2 | 119 |
| 14. | ಶಿಷ್ಯತ್ವಕ್ಕೆ ಕರೆ | 128 |
| 15. | ನಿಮ್ಮ ಸಾಕ್ಷಿಯನ್ನು ಹೇಗೆ ಉಪಯೋಗಿಸಬೇಕು | 138 |
| 16. | ಶಿಷ್ಯತ್ವದ ತರಬೇತಿಯಲ್ಲಿ ಎಲ್ಲರ ವರಗಳನ್ನೂ ಉಪಯೋಗಿಸುವುದು | 150 |

# ಸಂಪೂರ್ಣ ಶಿಷ್ಯತ್ವದ ಸುವಾರ್ತೆ

## ಹಂತ 3

# ಪಾಠ 1

# ದೈವಿಕವಾದ ಹರಿವು

*ಆಂಡ್ರೂ ವ್ಹಾಮಕ್*

ದೇವರು, ನಿಮ್ಮ ಮೂಲಕವಾಗಿ ತಾನು ಇತರರಿಗೆ ಸಹಾಯ ಮಾಡುವಂತೆ ನೀವು ಅವಕಾಶ ಮಾಡಿಕೊಡಬಹುದು. ನಿಮ್ಮಲ್ಲಿ ದೇವರ ಬಲ ಮತ್ತು ಅಭಿಷೇಕವಿದೆ, ಆದರೆ ಅದು ಇತರರನ್ನು ಹೇಗೆ ತಲುಪಬಹುದಾಗಿದೆ? ಈಗ ಮೊದಲಿಗೆ ದೇವರ ವಾಕ್ಯದಲ್ಲಿರುವ ಅನೇಕ ವಚನಗಳನ್ನು ನೋಡೋಣ. ಫಿಲೆಮೋನನಿಗೆ ಬರೆದ ಪತ್ರಿಕೆ 6ನೇ ವಚನದಲ್ಲಿ ಪೌಲನು, *"ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ ಕ್ರಿಸ್ತನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ"* ಎನ್ನುತ್ತಾನೆ. ನಿಮ್ಮೊಳಗೆ ಒಳ್ಳೆಯ ವರಗಳಿವೆ ಎಂದು ನೀವು ಅರಿತುಕೊಂಡಾಗ ಮಾತ್ರವೇ ನಿಮ್ಮ ಮೂಲಕವಾಗಿ ಇತರರಿಗೆ ದೇವರ ಬಲವು ಹರಿಯುತ್ತದೆ. ನಿಮ್ಮಲ್ಲಿ ಇಲ್ಲದೆ ಇರುವುದನ್ನು ಕೊಡಲು ನಿಮಗೆ ಸಾಧ್ಯವಿಲ್ಲ. ನಿಮ್ಮಲ್ಲಿ ಏನಿದೆ ಎನ್ನುವ ಅರಿವುಂಟಾಗುತ್ತಲೇ ವಸ್ತುಸ್ಥಿತಿ ಬದಲಾಗುತ್ತಾ ಹೋಗುತ್ತದೆ. ನೀವು ಇತರರೊಂದಿಗೆ ನಿಮ್ಮ ಸಂತೋಷವನ್ನು ಹಂಚಿಕೊಳ್ಳಲು ಪ್ರಾರಂಭಿಸುವಿರಿ ಮತ್ತು ದೇವರು ನಿಮ್ಮ ಜೀವಿತಲ್ಲಿ ಮಾಡಿದವುಗಳ ವಿಷಯದಲ್ಲಿ ಸಾಕ್ಷಿ ಹೇಳುವಿರಿ, ಈ ಮೂಲಕವಾಗೊ ಕೆಲವರಿಗೆ ಸಹಾಯವಾಗುತ್ತದೆ.

ಯೋಹಾನ 4:7–8ರಲ್ಲಿ, *"ಪ್ರಿಯರೇ, ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ. ಪ್ರೀತಿಯು ದೇವರಿಂದಾಗಿದೆ, ಮತ್ತು ಪ್ರೀತಿಮಾಡುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನೂ ದೇವರನ್ನು ಬಲ್ಲವನೂ ಆಗಿದ್ದಾನೆ  ಯಾಕೆಂದರೆ ದೇವರು ಪ್ರೀತಿಸ್ವರೂಪಿಯು."* ಒಮ್ಮೊಮ್ಮೆ ಯಾರ ಮೇಲಾದರೂ ಪ್ರೀತಿ ಹುಟ್ಟಿತೆಂದು ನಿಮಗೆ ಅನ್ನಿಸುವುದಾದರೆ ಅದು ಅವರ ಕಡೆಗೆ ಹರಿಯುತ್ತಿರುವ ದೇವರ ಪ್ರೀತಿಯಾಗಿರುತ್ತದೆ. 'ಪ್ರೀತಿ' ಎಂಬ ಪದಕ್ಕೆ ಗ್ರೀಕ್ ಭಾಷೆಯಲ್ಲಿ ನಾಲ್ಕು ಪದಗಳಿವೆ; ಅಗಾಪೆ ಪ್ರೀತಿ ಅಂದರೆ, ದೇವರ ಅತೀತವಾದ ಪ್ರೀತಿ. ಅಮೋಘವಾದ ದೇವರ ಪ್ರೀತಿ ಮತ್ತು ಇತರರ ಕಡೆಗೆ ಇರುವ ಆಕರ್ಷಣೆ ಮತ್ತು ಬಯಕೆ ಇವುಗಳ ವ್ಯತ್ಯಾಸವನ್ನು ನೀವು ಗುರುತಿಸಬೇಕು. ನಿಮ್ಮೊಳಗಿಂದ ದೇವರ ಪ್ರೀತಿಯು ಯಾರ ಕಡೆಗಾದರೂ ಹರಿಯುವಾಗ ಅದು ಸ್ವಾರ್ಥದಿಂದ ಕೂಡಿರುವುದಿಲ್ಲ. ಇದನ್ನು ನೀವು 1 ಕೊರಿಂಥದವರಿಗೆ 13:4–8 ರೊಂದಿಗೆ ಹೋಲಿಸಬಹುದು. ಯಾಕೆಂದರೆ ಅದು ದೇವರ

ಪ್ರೀತಿಯ ಗುಣವನ್ನು ತಿಳಿಸುತ್ತದೆ. ಪ್ರೀತಿಯು ಹೊಟ್ಟೆಕಿಚ್ಚು ಪಡುವುದಿಲ್ಲ, ಹೊಗಳಿಕೊಳ್ಳುವುದಿಲ್ಲ, ಉಬ್ಬಿಕೊಳ್ಳುವುದಿಲ್ಲ, ಮರ್ಯಾದೆಗೆಟ್ಟು ನಡೆಯುವುದಿಲ್ಲ, ಮುಂತಾಗಿ. ನೀವು ಪ್ರೀತಿಯನ್ನು ಹೇಗೆ ಅರ್ಥಮಾಡಿಕೊಂಡಿದ್ದೀರಿ ಮತ್ತು ಅದು ನಿಜವಾಗಿಯೂ ದೇವರ ಪ್ರೀತಿಯಾಗಿದೆಯೋ – ಅಂದರೆ ಅದು ಸ್ವಾರ್ಥದಿಂದ ಕೂಡಿಲ್ಲ ಅಥವಾ ಸ್ವಲಾಭವನ್ನು ಅಪೇಕ್ಷಿಸುವುದಿಲ್ಲ – ಆ ವ್ಯಕ್ತಿಯಿಂದ ನಿಮಗೆ ಲಾಭವಿದೆ ಎನ್ನುವ ಕಾರಣದಿಂದಾಗಿ ನೀವು ಅವರನ್ನು ಪ್ರೀತಿಸುತ್ತಾ ಇಲ್ಲ, ಎಂದು ನೀವು ಪರೀಕ್ಷಿಸಿಕೊಳ್ಳುವುದು ಅವಶ್ಯ. ನೀವು ಇದರಲ್ಲಿ ಬೆಳೆಯುತ್ತಾ ದೇವರ ಪ್ರೀತಿಯ ಬಗೆಯನ್ನು ಗ್ರಹಿಸಿಕೊಳ್ಳಲು ಪ್ರಾರಂಭಿಸುವಾಗ ಯಾರಮೇಲಾದರೂ ಪ್ರೀತಿ ತುಂಬಿಬಂದಿತೆಂದರೆ, ದೇವರು ಆವರ ಮೇಲೆ ತನ್ನ ಪ್ರೀತಿಯನ್ನು ಹರಿಸುತ್ತಿದ್ದಾನೆಂದು ಅರ್ಥ. ನಿಮ್ಮ ಮೂಲಕವಾಗಿ ಯಾರಕಡೆಗಾದರೂ ದೇವರ ಪ್ರೀತಿ ಹರಿಯುತ್ತಿದೆ ಎನ್ನುವುದು ನಿಮ್ಮ ಗಮನಕ್ಕೆ ಬರುವಾಗ ನೀವು ಅವರನ್ನು ನಿಮ್ಮ ಮಾತುಗಳಿಂದಲೂ ಕೃತ್ಯದಿಂದಲೂ ಉತ್ತೇಜನ ಪಡಿಸಬೇಕು.

ಕೆಲವು ಸಂದರ್ಭಗಳಲ್ಲಿ, ನಾನು ಪ್ರಾರ್ಥಿಸುತ್ತಿರುವಾಗ ಯಾವ ವ್ಯಕ್ತಿಯಾದರೂ ನನ್ನ ನೆನಪಿಗೆ ಬರಲಾಗಿ, ಅವರಿಗಾಗಿ ನನ್ನಲ್ಲಿ ದೇವರ ಪ್ರೀತಿಯುಕ್ಕಿದ್ದುಂಟು. ಹೀಗಾಗಲು ದೈವಿಕ ಕಾರಣವಲ್ಲದೆ ಬೇರೇನಿಲ್ಲ. ಆ ವ್ಯಕ್ತಿಗೆ ಕರೆ ಮಾಡುವುದು, ಪತ್ರ ಬರೆಯುವುದು ಅಥವ ಇನ್ನಾವುದೇ ರೀತಿಯಲ್ಲಿ ಅವರನ್ನು ಸಂಪರ್ಕಿಸುವುದನ್ನು ನಾನು ಕಲಿತುಕೊಂಡೆ. ಹಾಗೆ ಮಾಡಿದ ಪ್ರತಿ ಬಾರಿಯೂ, ಅವರುಗಳು, "ನಿಜವಾಗಲೂ ದೇವರೇ ನಿಮ್ಮ ಮೂಲಕವಾಗಿ ನನ್ನೊಂದಿಗೆ ಮಾತನಾಡಿದನು, ನಿಮ್ಮ ಮೂಲಕವಾಗಿ ದೇವರು ನನ್ನನ್ನು ಮುಟ್ಟಿದನು" ಎಂದು ನನಗೆ ಹೇಳಿದ್ದಾರೆ. ಅದು ಹೇಗೆ ಸಾಧ್ಯವಾಯಿತು ಎಂದು ನಿಮಗೆ ಗೊತ್ತೇ? ನನ್ನೊಳಗಿಂದ ಆ ವ್ಯಕ್ತಿಯ ಕಡೆಗೆ ದೈವಿಕವಾದ ಪ್ರೀತಿಯು ಹರಿಯುತ್ತಿದೆ ಎಂದು ನಾನು ಗುರುತಿಸಿದಾಗ ಇದು ಸಾಧ್ಯವಾಯಿತು. ಅಂಥ ಅನುಭವವಾದಾಗಲೆಲ್ಲ, ಅದು ನಾನಲ್ಲ – ಅದು ದೇವರು ಎಂದು ಗೊತ್ತಾಗುತ್ತದೆ. ದೇವರು ಪ್ರೀತಿಸ್ವರೂಪಿಯಾಗಿದ್ದಾನೆ, ಮತ್ತು ನಾನು ಇತರರನ್ನು ಪ್ರೀತಿಸುವಾಗ, ಆತನು ನನ್ನ ಮೂಲಕವಾಗಿ ಅವರನ್ನು ಪ್ರೀತಿಸಿತ್ತಾನೆ. ಯೇಸುವು ತನ್ನ ಸೇವೆಯನ್ನು ಈ ರೀತಿಯಾಗಿಯೇ ನಡೆಸಿದನು. ಮತ್ತಾಯ 14:14ರಲ್ಲಿ, *"ಆತನು ಹೊರಗೆ ಬಂದು ಬಹು ಜನರ ಗುಂಪನ್ನು ಕಂಡು ಕನಿಕರಪಟ್ಟು ಅವರಲ್ಲಿದ್ದ ರೋಗಿಗಳನ್ನು ಸ್ವಸ್ಥಮಾಡಿದನು".* ಯೇಸುವಿನ ಮೂಲಕ ದೇವರ ಬಲವು ಜನರಿಗೆ ಹರಿದುಬಂದಿದ್ದು ಹೇಗೆಂದರೆ ಆತನು ತಾನು ಸೇವೆ ಮಾಡಿದ ಜನರನ್ನು ಪ್ರೀತಿಸಿದ ಕಾರಣವಾಗಿ. ಮತ್ತಾಯ 8:2–4ರಲ್ಲಿ, ಕುಷ್ಠರೋಗಿಯಾದ ಒಬ್ಬ ಮನುಷ್ಯನು ದನಿಯೆತ್ತಿ, *"ಸ್ವಾಮೀ, ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧಮಾಡಬಲ್ಲೆ"* ಅಂದನು. ಯೆಹೂದ್ಯರ ಪದ್ಧತಿಯ ಪ್ರಕಾರ ಕುಷ್ಠರೋಗದಿಂದ ಅಶುದ್ಧನಾದ ಒಬ್ಬ ಮನುಷ್ಯನನ್ನು ಮುಟ್ಟಿಸಿಕೊಳ್ಳಬಾರದು (ಯಾರೂ ಅವನ ಮೈಯನ್ನು ಮುಟ್ಟಬಾರದು, ಮುಟ್ಟಿದಲ್ಲಿ ಅಶುದ್ಧರಾಗುವರು). ಯೇಸು ಕರುಣೆಯಿಂದ ತುಂಬಿದವನಾಗಿ ಆ ಕುಷ್ಠರೋಗಿಯನ್ನು ಮುಟ್ಟಿದನು. ನೀವು ದೇವರ ವಾಕ್ಯವನ್ನು ಅಭ್ಯಾಸ ಮಾಡುವಾಗ, ಅನೇಕ ಕಡೆಗಳಲ್ಲಿ ಈ ದೈವಿಕವಾದ ಪ್ರೀತಿ, ಕರುಣೆ ಇವುಗಳು ಕಂಡುಬರುತ್ತದೆ. ಅದು ಕೇವಲ ಒಂದು ಭಾವನೆಯಲ್ಲ, ಬದಲಿಗೆ ನಮ್ಮ ಮೂಲಕ ಹರಿಯುವ ದೈವೀಕ ಪ್ರೀತಿಯಾಗಿದೆ.

ಯೇಸುವು ಕ್ರೂಜೆಯ ಮೇಲೆ ತೂಗಾಡುತ್ತಿರುವಾಗ, ಆತನು ತನ್ನ ಸುತ್ತಲು ನಿಂತಿದ್ದ ಜನರನ್ನು ಪ್ರೀತಿಸಿ, *"ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು"* (ಲೂಕ 23:34) ಅಂದನು. ಇದೇ ಜನರು ಆತನನ್ನು ಕ್ರೂಜೆಗೆ ಹಾಕಿದ್ದರೂ ಆತನಿಗೆ ಅವರ ಮೇಲೆ ಕನಿಕರವಿತ್ತು ಮತ್ತು ಅವರನ್ನು ಕ್ಷಮಿಸುವಂತೆ ಆತನು ದೇವರನ್ನು ಬೇಡಿಕೊಂಡನು. ನಮಗೆ ಗೊತ್ತಿದೆ, ಹೀಗೆ ಹೇಳುವಾಗ ಆತನ ಮೈನವಿರೇಳಲಿಲ್ಲ–ಅದು ಕೇವಲ ಅನಿಸಿಕೆಯಾಗಿರಲಿಲ್ಲ, ಅಥವ ಒಂದು ಭಾವವಾಗಿರಲಿಲ್ಲ–ಅದು ಆಯ್ಕೆಯಾಗಿತ್ತು. ಆತನು ಅದನ್ನು ಅನುಭವಿಸಿ ಜನರಿಗಾಗಿ ಕ್ಷಮೆಯನ್ನು ಹೊರಸೂಸಿದನು. ನೀವು ಹೊಸದಾಗಿ ಹುಟ್ಟಿರುವುದಾದರೆ ದೇವರು ನಿಮ್ಮಲ್ಲಿ ವಾಸಮಾಡುತ್ತಿದ್ದಾನೆ. ಪ್ರಾರಂಭದಲ್ಲಿ ನಾವು ನೋಡಿದ 1 ಯೋಹಾನ 4:8 ವಾಕ್ಯದಂತೆ ದೇವರು ಪ್ರೀತಿಸ್ವರೂಪಿಯಾಗಿದ್ದಾನೆ ಮತ್ತು ಆ ಪ್ರೀತಿಯು ನಿಮ್ಮ ಮೂಲಕವಾಗಿ ಇತರರಿಗೆ ಹರಿಯಬೇಕೆಂದು ಬಯಸುತ್ತಾನೆ. ಹಾಗೆ ಮಾಡಲು, ಆತನು ನಿಮ್ಮಲ್ಲಿ ಕನಿಕರವನ್ನು ಹುಟ್ಟಿಸುತ್ತಾನೆ. ಅದು ನಿಮ್ಮ ಮೂಲಕವಾಗಿ ಇತರರ ಕಡೆಗೆ ಹರಿಯುವುದು ನಿಮ್ಮ ಅನುಭವಕ್ಕೆ ಬರುತ್ತದೆ, ಅಂಥ ಸಂದರ್ಭದಲ್ಲಿ ನೀವು ಪ್ರತಿಸ್ಪಂದಿಸುವುದು ಅವಶ್ಯಕ.

ನೀವು ಎಲ್ಲ ಸಮಯದಲ್ಲಿಯೂ ವಿಶೇಷವಾದದ್ದನ್ನು ಮಾಡಬೇಕೆಂದೇನೂ ಇಲ್ಲ. "ಕರ್ತನು ಇಂತೆನ್ನುತ್ತಾನೆ" ಎನ್ನುವ ಅಗತ್ಯವಿಲ್ಲ. ಕೆಲವೊಮ್ಮೆ, ಯಾವುದೇ ವ್ಯಕ್ತಿಯನ್ನು ನೋಡಿದಾಗ ನಿಮ್ಮಲ್ಲಿ ಕನಿಕರವುಕ್ಕಿ ಬಂದಲ್ಲಿ, ಅವರ ಬಳಿಗೆ ಹೋಗಿ, ಹೆಗಲ ಮೇಲೆ ಕೈಹಾಕಿ, "ದೇವರು ನಿಮ್ಮನ್ನು ಪ್ರೀತಿಸುತ್ತಾನೆ, ಮತ್ತು ನಾನು ಸಹ ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳಿರಿ. ಒಮ್ಮೆ ಇಂತಹುದು ನನ್ನ ಜೀವನದಲ್ಲಿಯೇ ನಡೆದುಹೋಗಿದೆ. ನನ್ನನ್ನು ಒಂದು ಸಭೆಯಿಂದ ಹೊರಹಾಕುವಂತಹ ಸಂದರ್ಭ ಬಂದಿತು. ಜನರು ನನ್ನ ಮೇಲೆ ಸುಳ್ಳು ಆರೋಪ ಹೊರಿಸಿದ್ದರು, ಮತ್ತು ಒಬ್ಬ ವ್ಯಕ್ತಿಯು ನನ್ನನ್ನು ಕೊಲ್ಲುವುದಾಗಿ ಬೆದರಿಸಿದ್ದನು. ನಾನು ಬಹಳ ನಿರಾಶೆಗೊಂಡು, "ದೇವರೇ, ಏನು ಪ್ರಯೋಜನವಾಯಿತು? ನಾನು ಮಾಡುವುದನ್ನು ಯಾರೂ ಒಪ್ಪುತ್ತಿಲ್ಲವಲ್ಲ" ಅಂದುಕೊಳ್ಳುತ್ತಿದ್ದೆನು. ನಾನಿಲ್ಲಿ ಸೈತಾನನ ವಿರುದ್ಧ ಹೋರಾಡುತ್ತಿದ್ದೆನು, ಆಗ ಒಬ್ಬ ಸ್ನೇಹಿತನು ಬಹುದೂರದ ಸ್ಥಳದಿಂದ ನನಗೆ ಕರೆಮಾಡಿದನು. ಅವನು ಕೆಲವು ನಿಮಿಷ ನನ್ನೊಂದಿಗೆ ಮಾತನಾಡಿದ ನಂತರ ನಾನವನಿಗೆ, "ಹೌದು, ನೀನು ನನಗೆ ಯಾಕೆ ಕರೆಮಾಡಿದೆ? ಎಂದು ಕೇಳಿದೆ. ಆಗ ಅವನು, "ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಹೇಳಲು ನಿನಗೆ ಕರೆಮಾಡಿದೆ. ನಾನು ಪ್ರಾರ್ಥನೆ ಮಾಡುತ್ತಿದ್ದೆನು ಮತ್ತು ನಿನ್ನ ಕಡೆಗೆ ದೇವರ ಪ್ರೀತಿಯು ಉಕ್ಕಿಬರುವುದನ್ನು ಗ್ರಹಿಸಿದೆನು. ನಿನ್ನ ಕೆಲಸವನ್ನು ನಾನು ಮೆಚ್ಚುತ್ತೇನೆ" ಎಂದಷ್ಟೇ ಹೇಳಿದನು. ನನ್ನ ಜೀವನದಲ್ಲಿ ಏನು ನಡೆಯುತ್ತಿದೆ ಎಂದು ಅವನಿಗೆ ತಿಳಿದಿರಲಿಲ್ಲ ಆದರೂ ದೇವರು ಅವನನ್ನು ಉಪಯೋಗಿಸಿದನು. ದೇವರು ಅವನ ಮೂಲಕವಾಗಿ ನನ್ನನ್ನು ಪ್ರೀತಿಸುತ್ತಿದ್ದಾನೆಂದು ನನಗೆ ತಿಳಿಯಿತು. ಹೀಗೆ ನಾನು ಸೇವೆಯಲ್ಲಿ ಮುಂದೆ ಹೋದೆನು ಮತ್ತು ಅದು ನನ್ನ ಜೀವನವನ್ನೇ ಬದಲಾಯಿಸಿತು.

ಇದು ಗಹನವಾಗಿ ಅಥವಾ ವಿಶೇಷವಾಗಿ ಇರಬೇಕಾಗಿಲ್ಲ. ದೇವರು ಪ್ರೀತಿಸ್ವರೂಪಿಯಾಗಿದ್ದಾನೆ ಮತ್ತು ಎಂದಾದರೂ ಅದು ನಿಮ್ಮ ಮೂಲಕವಾಗಿ ಹರಿಯುತ್ತದೆ ಎಂದು ನಿಮಗೆ ಅನ್ನಿಸುವಾಗ ಅದು ದೈವಿಕವಾದ ಹರಿವು ದೇವರ ಜೀವರಸವೇ ಆಗಿದೆ. ಅದನ್ನು ನೀವು ಗ್ರಹಿಸಿದಾಗ ನೀವು ಅದನ್ನು ಅನುಸರಿಸಬೇಕು. ಹೋಗಿರಿ ಏನನ್ನಾದರೂ ಮಾಡಿರಿ, ಏನನ್ನಾದರೂ ಹೇಳಿರಿ, ಯಾರಿಗಾದರೂ ಆಶೀರ್ವಾದವಾಗಿರಿ. ನೀವು ಹೇಳಬೇಕಾದದ್ದನ್ನು ದೇವರೇ ತಿಳಿಸುತ್ತಾನೆ. ಆತನು ನಿಮ್ಮನ್ನು ಉಪಯೋಗಿಸುತ್ತಾನೆ, ಮತ್ತು ನೀವು ಕನಿಕರದಿಂದ ನಿಮ್ಮ ಜೊತೆಗಾರರಿಗೆ ಏನನ್ನಾದರೂ ಮಾಡಬೇಕೆಂದು ಬಯಸುವಾಗ ಆತನು ಜನರನ್ನು ಬಂಧನಗಳಿಂದ ಬಿಡಿಸುತ್ತಾನೆ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

**ಗಮನಕ್ಕೆ:** ಈ ಪಾಠದಲ್ಲಿ, ದೇವರು ನಮ್ಮಲ್ಲಿಟ್ಟಿರುವ ಹರಿವು ಇತರರಿಗೂ ತಲುಪುವಂತೆ ಮಾಡುವುದು ಹೇಗೆ ಎನ್ನುವುದನ್ನು ಪರಿಶೀಲಿಸೋಣ.

1. ಫಿಲೆಮೋನನು 6 ಓದಿರಿ. ನಮ್ಮಲ್ಲಿರುವ ದೇವರು ಮತ್ತೊಬ್ಬರನ್ನು ಸ್ಪರ್ಶಿಸುವಂತೆ ಮಾಡಲು ಮೊದಲ ಹೆಜ್ಜೆ ಯಾವುದು?

   ***ಫಿಲೆಮೋನನಿಗೆ 6*** *– ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ ಕ್ರಿಸ್ತನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ.*

2. 1 ಯೋಹಾನನು 4:7–8 ಓದಿರಿ. ಇತರರನ್ನು ಪ್ರೀತಿಸಲು ನಮ್ಮನ್ನು ಏನು ಪ್ರೇರೇಪಿಸುತ್ತದೆ?

   ***1 ಯೋಹಾನನು 4:7–8*** *– ಪ್ರಿಯರೇ, ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ. ಪ್ರೀತಿಯು ದೇವರಿಂದಾಗಿದೆ, ಮತ್ತು ಪ್ರೀತಿ ಮಾಡುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನೂ ದೇವರನ್ನು ಬಲ್ಲವನೂ ಆಗಿದ್ದಾನೆ. [8] ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕಂದರೆ ದೇವರು ಪ್ರೀತಿಸ್ವರೂಪಿಯು.*

3. ಆಂಡ್ರ್ಯೂ ವಾಮ್ಮಕ್‌ವರು, "ಎಂದಾದರೂ ನಿಮ್ಮೊಳಗಿಂದ ಪ್ರೀತಿ ಹರಿವು ಉಂಟಾಗಿದೆ ಎಂದು ಕಂಡುಬಂದರೆ ಅದು ದೇವರ ಪ್ರೀತಿ ಎಂದು ತಿಳಿದುಕೊಳ್ಳಬೇಕು" ಎನ್ನುತ್ತಾರೆ. 1 ಯೋಹಾನ 4:7ರ ಯಾವ ಪದಗಳು ಈ ಮಾತನ್ನು ಸಮರ್ಥಿಸುತ್ತವೆ?

4. 1 ಕೊರಿಂಥದವರಿಗೆ 13:4–8 ಓದಿರಿ. ದೇವರ ಪ್ರೀತಿಯ ಕೆಲವು ಗುಣಲಕ್ಷಣಗಳು ಯಾವುವು?

   ***1 ಕೊರಿಂಥದವರಿಗೆ 13:4–8*** *– ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆ ತೋರಿಸುವದು. ಪ್ರೀತಿಯು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲ; [5] ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ; [6] ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ; [7] ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. [8] ಪ್ರೀತಿಯು ಎಂದಿಗೂ*

*ಬಿದ್ದು ಹೋಗುವದಿಲ್ಲ; ಪ್ರವಾದನೆಗಳಾದರೋ ಇಲ್ಲದಂತಾಗುವವು; ವಾಣಿಗಳೋ ನಿಂತುಹೋಗುವವು; ವಿದ್ಯೆಯೋ ಇಲ್ಲದಂತಾಗುವದು.*

5. ಮತ್ತಾಯ 14:14 ಓದಿರಿ. ಇತರರಿಗೆ ಸಹಾಯ ಮಾಡುವಂತೆ ಯೇಸುವಿನಲ್ಲಿ ಯಾವ ಭಾವನೆಯು ಪ್ರೇರೇಪಣೆ ನೀಡಿತು?

***ಮತ್ತಾಯ 14:14** – "ಆತನು ಹೊರಗೆ ಬಂದು ಬಹು ಜನರ ಗುಂಪನ್ನು ಕಂಡು ಕನಿಕರಪಟ್ಟು ಅವರಲ್ಲಿದ್ದ ರೋಗಿಗಳನ್ನು ಸ್ವಸ್ಥ ಮಾಡಿದನು."*

6. ಮತ್ತಾಯ 25:37–40 ಓದಿರಿ. ನಾವು ಇತರರಿಗೆ ಪ್ರೀತಿ ಮತ್ತು ಕಾಳಜಿ ತೋರಿಸುವಾಗ, ನಾವು ನಿಜವಾಗಿಯೂ ಯಾರಿಗೆ ಪ್ರೀತಿ ಮತ್ತು ಕಾಳಜಿ ತೋರಿಸಿದಂತಾಗುತ್ತದೆ?

***ಮತ್ತಾಯ 25:37–40** – ಅದಕ್ಕೆ ನೀತಿವಂತರು – ಸ್ವಾಮಿ, ಯಾವಾಗ ನೀನು ಹಸಿದದ್ದನ್ನು ಕಂಡು ನಿನಗೆ ಊಟಕ್ಕೆ ಕೊಟ್ಟೆವು? ಇಲ್ಲವೆ ನೀನು ಬಾಯಾರಿದ್ದನ್ನು ಕಂಡು ಕುಡಿಯುದಕ್ಕೆ ಕೊಟ್ಟೆವು? [38] ಯಾವಾಗ ನೀನು ಪರದೇಶಿಯಾಗಿರುವದನ್ನು ಕಂಡು ಸೇರಿಸಿಕೊಂಡೆವು? ಇಲ್ಲವೆ ನಿನಗೆ ಬಟ್ಟೆಯಿಲ್ಲದ್ದನ್ನು ಕಂಡು ಉಡುವದಕ್ಕೆ ಕೊಟ್ಟೆವು? [39] ಯಾವಾಗ ನೀನು ರೋಗದಲ್ಲಿ ಬಿದ್ದದ್ದನ್ನು ಅಥವಾ ಸೆರೆಮನೆಯಲ್ಲಿ ಇದ್ದದ್ದನ್ನು ಕಂಡು ನಿನ್ನನ್ನು ನೋಡುವದಕ್ಕೆ ಬಂದೆವು ಎಂದು ಉತ್ತರವಾಗಿ ಹೇಳುವರು. [40] ಅದಕ್ಕೆ ಅರಸನು – ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು.*

***ಇಬ್ರಿಯರಿಗೆ 6:10** – ನೀವು ದೇವಜನರಿಗೆ ಉಪಚಾರ ಮಾಡಿದಿರಿ, ಇನ್ನೂ ಮಾಡುತ್ತಾ ಇದ್ದೀರಿ. ಈ ಕೆಲಸವನ್ನೂ, ಇದರಲ್ಲಿ ನೀವು ದೇವರ ನಾಮದ ವಿಷಯವಾಗಿ ತೋರಿಸಿದ ಪ್ರೀತಿಯನ್ನೂ ಆತನು ಮರೆಯುವದಕ್ಕೆ ಅನ್ಯಾಯಸ್ಥನಲ್ಲ.*

## ಉತ್ತರಗಳು

1. ಫಿಲೆಮೋನನು 6 ಓದಿರಿ. ನಮ್ಮಲ್ಲಿರುವ ದೇವರು ಮತ್ತೊಬ್ಬರನ್ನು ಸ್ಪರ್ಶಿಸುವಂತೆ ಮಾಡಲು ಮೊದಲ ಹೆಜ್ಜೆ ಯಾವುದು?

   *ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳ ಕುರಿತಾದ ತಿಳುವಳಿಕೆ*

2. 1 ಯೋಹಾನ 4:7–8 ಓದಿರಿ. ಇತರರನ್ನು ಪ್ರೀತಿಸಲು ನಮ್ಮನ್ನು ಏನು ಪ್ರೇರೇಪಿಸುತ್ತದೆ?

   *ದೇವರು, ದೇವರು ಪ್ರೀತಿಸ್ವರೂಪಿಯಾಗಿದ್ದಾನೆ (1 ಯೋಹಾನ 4:8)*

3. ಆಂಡ್ರ್ಯೂ ವಾಮ್ಮಕ್‌ವರು, "ಎಂದಾದರೂ ನಿಮ್ಮೊಳಗಿಂದ ಪ್ರೀತಿ ಹರಿವು ಉಂಟಾಗಿದೆ ಎಂದು ಕಂಡುಬಂದರೆ ಅದು ದೇವರ ಪ್ರೀತಿ ಎಂದು ತಿಳಿದುಕೊಳ್ಳಬೇಕು" ಎನ್ನುತ್ತಾರೆ. 1 ಯೋಹಾನ 4:7ರ ಯಾವ ಪದಗಳು ಈ ಮಾತನ್ನು ಸಮರ್ಥಿಸುತ್ತವೆ?

   *"ಪ್ರೀತಿಯು ದೇವರಿಂದಾಗಿದೆ" (ಆತನೇ ಪ್ರೀತಿಯ ಮೂಲವಾಗಿದ್ದಾನೆ)*

4. 1 ಕೊರಿಂಥದವರಿಗೆ 13:4–8 ಓದಿರಿ. ದೇವರ ಪ್ರೀತಿಯ ಕೆಲವು ಗುಣಲಕ್ಷಣಗಳು ಯಾವುವು?

   *ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ಕಯೆ ತೋರಿಸುವದು. ಪ್ರೀತಿಯು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲ; ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ; ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ; ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದುಹೋಗುವದಿಲ್ಲ*

5. ಮತ್ತಾಯ 14:14 ಓದಿರಿ. ಇತರರಿಗೆ ಸಹಾಯ ಮಾಡುವಂತೆ ಯೇಸುವಿನಲ್ಲಿ ಯಾವ ಭಾವನೆಯು ಪ್ರೇರೇಪಣೆ ನೀಡಿತು?

   *ಆತನು ಹೊರಗೆ ಬಂದು ಬಹು ಜನರ ಗುಂಪನ್ನು ಕಂಡು ಕನಿಕರಪಟ್ಟು ಅವರಲ್ಲಿದ್ದ ರೋಗಿಗಳನ್ನು ಸ್ವಸ್ಥಮಾಡಿದನು. ನಿಘಂಟಿನಲ್ಲಿ "ಕನಿಕರ" ಎನ್ನುವ ಪದಕ್ಕೆ "ಕರುಣೆ, ಮರುಕ" ಎನ್ನುವ ಅರ್ಥ ಬರುತ್ತದೆ.*

6. ಮತ್ತಾಯ 25:37–40 ಓದಿರಿ. ನಾವು ಇತರರನ್ನು ಪ್ರೀತಿಸಿ ವಾತ್ಸಲ್ಯ ತೋರಿಸುವಾಗ, ನಾವು ನಿಜವಾಗಿಯೂ ಯಾರಿಗೆ ಪ್ರೀತಿ ಮತ್ತು ವಾತ್ಸಲ್ಯ ತೋರಿಸಿದಂತಾಗುತ್ತದೆ?

*ಯೇಸುವಿಗೆ ಪ್ರೀತಿ ತೋರಿಸಿದಂತಾಯಿತು*

ಇದರೊಂದಿಗೆ ಇಬ್ರಿಯ 6:10 ನೋಡಿರಿ.

# ಪಾಠ 2

# ಸೇವೆಮಾಡಲು ವರಗಳನ್ನು ಉಪಯೋಗಿಸುವುದು

*ಆಂಡ್ರೂ ವ್ಹಾಮಕ್*

ನಿಮಗೆ ದೊರೆತ ದೇವರ ಪ್ರೀತಿಯನ್ನು ಇತರರೊಂದಿಗೆ ಹಂಚಿಕೊಳ್ಳುವುದು ಹೇಗೆ–ನೀವು ಇತರರಿಗೆ ಹೇಗೆ ಸೇವೆಮಾಡವಹುದು? 1 ಪೇತ್ರ 4:11ರಲ್ಲಿ, *"ಒಬ್ಬನು ಬೋಧಿಸುವವನಾದರೆ ದೈವೋಕ್ತಿಗಳನ್ನು ನುಡಿಯುವವನಾಗಿ ಬೋಧಿಸಲಿ". "ದೈವೋಕ್ತಿಗಳು"* – ಹಳೆ ಒಡಂಬಡಿಕೆಯ ಕಾಲದಲ್ಲಿ ಅತಿಪರಿಶುದ್ಧ ಸ್ಥಳದಲ್ಲಿದ್ದ ಒಡಂಬಡಿಕೆಯ ಮಂಜೂಷದಲ್ಲಿ ಧರ್ಮಶಾಸ್ತ್ರವನ್ನು ಇಡಲಾಗಿದ್ದು ಅದನ್ನು ದೈವೋಕ್ತಿ ಎಂದು ಕರೆಯುತ್ತಿದ್ದರು, ಮತ್ತು "ದೈವೋಕ್ತಿಯನ್ನು ನುಡಿಯಲಿ" ಎಂದರೆ ದೇವರ ಬಾಯಿಯಾಗಿ ನುಡಿಯಲಿ ಎಂದರ್ಥ. ನೀವು ದೇವರಿಂದ ಹೊಂದಿಕೊಂಡು ನುಡಿಯಲಿ ಎಂದರ್ಥ. ಮತ್ತು ಆ ವಾಕ್ಯವು ಮುಂದುವರಿದು, *"ಒಬ್ಬನು ಸಭೆಯ ಸೇವೆ ಮಾಡುವವನಾದರೆ ದೇವರಿಂದ ಶಕ್ತಿಯನ್ನು ಹೊಂದಿದವನಾಗಿ ಮಾಡಲಿ. ಇದರಿಂದ ಎಲ್ಲಾದರಲ್ಲಿ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ ಉಂಟಾಗುವದು. ಯೇಸು ಕ್ರಿಸ್ತನಿಗೆ ಆಧಿಪತ್ಯವೂ ಘನವೂ ಯುಗಯುಗಾಂತರಗಳಲ್ಲಿಯೂ ಇರುವವು".* ಇಲ್ಲಿ ಹೇಳುವುದೇನೆಂದರೆ, ನೀವು ಇತರರಿಗೆ ಸೇವೆ ಮಾಡುವುದು, ನಿಮ್ಮ ಸ್ವಂತ ಶಕ್ತಿಯಿಂದಲ್ಲ, ದೇವರು ನಿಮಗೆ ಕೊಡುವ ಶಕ್ತಿಯಿಂದ ಮಾಡಬೇಕು.

ಕ್ರಿಸ್ತೀಯ ಜೀವಿತದ ವಿಶೇಷವೆಂದರೆ, ನೀವು ಮತ್ತು ನಾನು ನಮ್ಮ ಸ್ವಂತ ಬಲದಲ್ಲಿಯೆ ಯಾರೊಂದಿಗಾದರೂ ಮಾತನಾಡುವುದು ಅಥವಾ ಏನನ್ನಾದರೂ ಹಂಚಿಕೊಳ್ಳುವುದಲ್ಲ, ಆದರೆ ದೇವರು ತಾನೇ ನಮ್ಮಲ್ಲಿ ವಾಸಿಸುವುದರಿಂದ ಹಾಗೆ ಮಾಡುತ್ತೇವೆ ಎನ್ನುವುದು ಶ್ರೇಷ್ಠವಾಗಿದೆ. ಆತನು ನಮ್ಮ ಮೂಲಕವಾಗಿ ಇತರರನ್ನು ಸಂಪರ್ಕಿಸುತ್ತಾನೆ ಮತ್ತು ಅವರನ್ನು ಮುಟ್ಟುತ್ತಾನೆ. ದೇವರು ಅಕ್ಷರಶ: ನಮ್ಮನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವುದಲ್ಲದೆ ಆತನ ಆತ್ಮನು ನಮ್ಮ ಮೂಲಕವಾಗಿ ಹರಿಯುವುದು ಸಾಧ್ಯವಾಗುತ್ತದೆ. ನಾವು ಇತರರೊಂದಿಗೆ ನಮ್ಮ ಅನುಭವ ಸಾಕ್ಷಿ ನುಡಿಯುವ ಸಂದರ್ಭದಲ್ಲಿ ಪರಿಶುದ್ಧಾತ್ಮನ ವರಗಳೆಂದರೆ ಏನು ಮತ್ತು ಅದು ಯಾಕೆ ಕೊಡಲ್ಪಟ್ಟಿವೆ ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವಶ್ಯವಾಗಿದೆ. ದೇವರು ಕ್ರಿಸ್ತನ ದೇಹಕ್ಕೆ ಅಂಗಗಳಾಗಿರುವ ಪ್ರತಿಯೊಬ್ಬರಿಗೂ ನಿರ್ದಿಷ್ಟವಾದ ವರಗಳನ್ನು ಕೊಟ್ಟಿರುತ್ತಾನೆ. ವಚನ 4–6ರಲ್ಲಿ, *"ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ದೇವರಾತ್ಮನು*

*ಒಬ್ಬನೇ; ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು, ಕರ್ತನು ಒಬ್ಬನೇ; ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು, ಸರ್ವರಲ್ಲಿಯೂ ಸರ್ವಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ"* ಎಂದು ಬರೆದಿದೆ. ವಚನ 7ರಲ್ಲಿ, *"ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ"* ಎಂದು ನೋಡುವಂತೆ ದೇವರು ತಾನೇ ನಮ್ಮಲ್ಲಿ ಈ ಕೆಲಸಗಳನ್ನು ನಡೆಸುತ್ತಾನೆ ಅಥವಾ ಇತರರಿಗೆ ಒಳ್ಳೆಯದಾಗುವಂತೆ ಮಾಡುತ್ತಾನೆ ಎಂಬುದು ಇದರ ಅರ್ಥ.

ದೇವರು ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಒಂದಿಲ್ಲೊಂದು ದೈವಿಕವಾದ ಸಾಮರ್ಥ್ಯವನ್ನು ಇಟ್ಟಿದ್ದಾನೆಂದು ಈ ವಚನಗಳು ಹೇಳುತ್ತವೆ. ನಿಮಗೆ ಅದರ ಅನುಭವವಾಗದೇ ಇರಬಹುದು, ಅದರ ಅರಿವೂ ಇಲ್ಲದಿರಬಹುದು, ಆದರೆ ಇದು ದೇವರ ವಾಗ್ದಾನವಾಗಿದೆ. ನೀವು 'ಶಿಷ್ಯತ್ವದ ಸುವಾರ್ತೆ' ಪಾಠಮಾಲೆಯನ್ನು ಅಭ್ಯಾಸಿಸುತ್ತಾ ಇಲ್ಲಿಯವರೆಗೆ ಬಂದಿದ್ದೀರಿ, ನೀವು ಈಗಾಗಲೇ ಯೇಸುಕ್ರಿಸ್ತನನ್ನು ನಿಮ್ಮ ಒಡೆಯನನ್ನಾಗಿ ಮಾಡಿಕೊಂಡವರಾಗಿದ್ದು, ದೇವರಿಂದ ಪಡೆದುಕೊಳ್ಳುವುದು ಮತ್ತು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಹೇಗೆ ಎಂದು ತಿಳಿದುಕೊಂಡಿದ್ದರೆ, ನಿಮ್ಮಲ್ಲಿ ಈಗಾಗಲೇ ದೇವರ ಪರಿಶುದ್ಧಾತ್ಮನು ಕೆಲಸ ಮಾಡುತ್ತಿದ್ದಾನೆಂದು ಖಚಿತವಾಗಿ ಹೇಳಬಲ್ಲೆ. ಬೇರೆಯವರ ಅದ್ಭುತಗಳು ನಿಮ್ಮೊಳಗೆ ಅಡಗಿ ಕುಳಿತಿವೆ. ಬೇರೆಯವರಿಗಾಗಿ ನಡೆಯಬೇಕಾದ ಮಹತ್ಕಾರ್ಯದ ಬೀಜಗಳನ್ನು ದೇವರು ನಿಮ್ಮೊಳಗೆ ಹುದುಗಿಸಿಟ್ಟಿದ್ದಾನೆ. ಅದನ್ನು ನಿಮ್ಮೊಳಗಿಂದ ತೆಗೆದು ಅವರ ಜೀವಿತದಲ್ಲಿಡುವುದು ನಿಮ್ಮ ಪಾಲಿನ ಕೆಲಸ. ಹೀಗೆ ಮಾಡಲು ಸಾಧ್ಯವಾಗುವಂತೆ ಪರಿಶುದ್ಧಾತ್ಮನು ನಮ್ಮಲ್ಲಿ ಪ್ರತಿಯೊಬ್ಬರಿಗೂ ಅನುಗ್ರಹಿಸಿದ್ದಾನೆ ಎಂದು ದೇವರ ವಾಕ್ಯ ಹೇಳುತ್ತದೆ. ಒಬ್ಬರಾದರೂ ಇದಕ್ಕೆ ಹೊರತಾಗಿಲ್ಲ. 1 ಕೊರಿಂಥದವರಿಗೆ 12ರಲ್ಲಿ ಪರಿಶುದ್ಧಾತ್ಮನು ನೀಡುವ ಒಂಬತ್ತು ವರಗಳು ಪಟ್ಟಿಮಾಡಲ್ಪಟ್ಟಿವೆ: ಜ್ಞಾನವಾಕ್ಯ, ವಿದ್ಯಾವಾಕ್ಯ, ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರವು, ಮಹತ್ತುಗಳನ್ನು ಮಾಡುವ ವರವು, ನಾನಾ ರೋಗಗಳನ್ನು ವಾಸಿಮಾಡುವ ವರವು ಮುಂತಾಗಿ. ರೋಮಾಪುರದವರಿಗೆ 12ನೇ ಅಧ್ಯಾಯದಲ್ಲಿ ಇತರ ಕೆಲವು ವರಗಳು ಪಟ್ಟಿಯಲ್ಲಿವೆ. ನೀವು ಅದನ್ನು ಧ್ಯಾನಮಾಡಿ, ಪರಿಶುದ್ಧಾತ್ಮನು ನಿಮ್ಮಲ್ಲಿ ಪ್ರತಿಯೊಬ್ಬರಿಗೂ ವಿಶೇಷವಾದ ಅಭಿಷೇಕವನ್ನು – ವಿಶೇಷ ವರವನ್ನು – ದಯಪಾಲಿಸಿದ್ದಾನೆ ಎನ್ನುವ ಅರಿವಿರಬೇಕು. ಉದಾಹರಣೆಗೆ, ನಾನು ಮಾಡುವ ರೀತಿಯಲ್ಲಿಯೇ ಎಲ್ಲರಿಗೂ ಸೇವೆ ಮಾಡಲು ಸಾಧ್ಯವಿಲ್ಲ. ನಿಮಗೆ ಬೋಧಿಸುವ ವರವಿಲ್ಲದೆ ಇರಬಹುದು, ಆದರೆ ಕ್ರಿಸ್ತನ ದೇಹದ ಪ್ರತಿಯೊಬ್ಬ ವ್ಯಕ್ತಿಯು ತಮ್ಮ ನಂಬಿಕೆಯನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುವುದು ಬೋಧನೆಯೇ ಆಗಿದೆ. ಕೆಲವರು ಬೋಧಕರಾಗಲೆಂದೇ ನಿರ್ದಿಷ್ಟವಾಗಿ ಕರೆಯಲ್ಪಟ್ಟಿದ್ದಾರೆ, ಸಭಾಪಾಲಕರು–ಬೋಧಕರು ಇಂಥವರಾಗಿದ್ದಾರೆ. ರೋಮಾಪುರದವರಿಗೆ 12ನೇ ಅಧ್ಯಾಯದಲ್ಲಿ ಇರುವ ಮತ್ತೊಂದು ವರವೆಂದರೆ ಅತಿಥಿಸತ್ಕಾರ ಮಾಡುವುದು. ನಿಮ್ಮಲ್ಲಿ ಅನೇಕರಿಗೆ ಕೆಲವು ಸಾಮರ್ಥ್ಯಗಳು ಅಥವಾ ವರಗಳು ಇವೆ ಆದರೆ ನೀವದನ್ನು ಗುರುತಿಸದೆ ಇರಬಹುದು. ನಿಮ್ಮ ಮೂಲಕ ಯಾರಿಗಾದರೂ ಆಶೀರ್ವಾದವಾಗಬೇಕು ಎನ್ನುವ ಆಶೆ ನಿಮ್ಮಲ್ಲಿರಬಹುದು. ನೀವು ಎಲ್ಲಿಯಾದರೂ ಹೋದಾಗ ಅಲ್ಲಿ ಯಾರಿಗಾದರೂ

ಅಸೌಖ್ಯವಿರುವುದನ್ನು ಕೂಡಲೇ ಗುರುತಿಸಲು ನಿಮಗೆ ಸಾಧ್ಯವಿರಬಹುದು. ಅವರ ಕುರಿತು ನಿಮಗೆ ಅನುಕಂಪವಿದೆ, ಅವರಿಗೆ ಏನು ಸಂಭವಿಸುತ್ತಿದೆ ಎಂದು ನಿಮಗೆ ತಿಳಿಯುತ್ತದೆ, ಅವರನ್ನು ಸುಧಾರಿಸಿ ಸಾಂತ್ವನ ಹೇಳಬೇಕೆಂದು ನಿಮಗೆ ಆಶೆಯಾಗಬಹುದು. ಇದು ದೇವರು ನಿಮಗೆ ನೀಡಿದ ದೈವೀಕವರವೆಂದು ನಿಮಗೆ ಗೊತ್ತಿದೆಯೇ?

ರೋಮಾಪುರದವರಿಗೆ 12ನೇ ಅಧ್ಯಾಯದಲ್ಲಿ, ಕೆಲವರಿಗೆ ದಾನಮಾಡುವ ವರವು ಕೊಡಲ್ಪಟ್ಟಿದೆ, ಅವರು ಹಣಸಂಪಾದಿಸಿ ಸುವಾರ್ತಾ ಸೇವೆಗೆ ಕೊಡುವವರಾಗಿದ್ದಾರೆ. ಅದು ಅವರ ವರವಾಗಿದೆ, ಜೀವನದ ಕರೆಯಾಗಿದೆ, ಮತ್ತು ಹೀಗೆ ಮಾಡಲೆಂದು ನಿಮ್ಮಲ್ಲಿ ಕೆಲವರು ಕರೆಯಲ್ಪಟ್ಟಿದೀರಿ. ಕೆಲವರಿಗೆ ಉಪದೇಶ ಮಾಡುವ ವರವಿದೆ. ಇನ್ನು ಕೆಲವರಿಗೆ ಕೊಡುವ ವರವಿದೆ, ಅಂದರೆ ನೀವು ಸಭೆಗೆ ಅನೇಕ ರೀತಿಯಲ್ಲಿ ಸಹಾಯಹಸ್ತ ಚಾಚುವವರಾಗಿದ್ದೀರಿ. ವಿಧವಿಧವಾದ ಸಹಾಯಗಳನ್ನು ಮಾಡುವ ಸಾಧ್ಯತೆ ನಿಮಗಿದೆ, ಸಭೆಯ ಆವರಣವನ್ನು ಸಿದ್ಧಪಡಿಸುವುದಷ್ಟೇ ಅಲ್ಲ, ದಿನದ ಕೆಲಸಕಾರ್ಯಗಳು ಮತ್ತು ವ್ಯವಹಾರಗಳಲ್ಲಿ ಜನರಿಗೆ ಸಹಾಯಮಾಡುವುದು ಕೂಡ ಸಾಧ್ಯವಿದೆ. ನಿಮ್ಮಲ್ಲಿ ಕೆಲವರಿಗೆ ದುಃಖದಲ್ಲಿರುವವರನ್ನು, ನಿರಾಶೆಯಲ್ಲಿರುವವರನ್ನು ಉತ್ತೇಜಿಸಲು ಸಾಧ್ಯವಿದೆ, ದೇವರ ವಾಕ್ಯವನ್ನು ಉಪದೇಶಿಸುವ ನನಗೆ ಇದು ಸಾಧ್ಯವಾಗದು ಎಂದು ಹೇಳಬಲ್ಲೆ. ನೀವು ಯಾರ ಬಳಿಗಾದರೂ ಹೋಗಿ, ಅವರ ಹೆಗಲ ಮೇಲೆ ಕೈಹಾಕಿ, ಅವರನ್ನು ಸಂತೈಸಿ ಪ್ರೋತ್ಸಾಹಿಸಬಲ್ಲಿರಿ. ದೇವರ ಬಲದಿಂದಲೇ ಇದು ಸಾಧ್ಯವಿದೆ. ನಾನು ಇಲ್ಲಿ ಹೇಳಬಯಸುವುದೇನೆಂದರೆ, ನೀವಿದನ್ನು, "ನಾನಿರುವುದೇ ಹೀಗೆ" ಎಂದು ಹೇಳುವುದು ವಿಶೇಷವಲ್ಲ. ನೀವು ಇಂಥ ಸ್ವಭಾವದವರ ಗುಂಪಿಗೆ ಸೇರಿದವರಾಗಿದ್ದೀರಿ ಎಂದುಕೊಳ್ಳುವುದಕ್ಕಿಂತಲೂ, ಕೆಲವು ನಿರ್ದಿಷ್ಟಕೆಲಸಗಳನ್ನು ಮಾಡಲು ದೇವರು ನಿಮಗೆ ಅತಿಶಯವಾದ ಸಾಮರ್ಥ್ಯವನ್ನು, ವರಗಳನ್ನು ಮತ್ತು ದೃಷ್ಟಿಕೋನವನ್ನು ಕೊಟ್ಟಿದ್ದಾನೆ ಎಂದು ತಿಳಿದು ನೀವು ಸಂತೋಷಪಡಬೇಕು.

ನೀವು ಇತರರಿಗೆ ಸೇವೆಮಾಡುವಾಗ, ದೇವರು ನಿಮಗೆ ಏನನ್ನು ಕೊಟ್ಟಿದ್ದಾನೋ ಅದರಿಂದಲೇ ಅವರಿಗೆ ಸಹಾಯಮಾಡಬೇಕೆಂದು ದೇವರವಾಕ್ಯ ಹೇಳುತ್ತದೆ. ನಾವೆಲ್ಲರೂ ಸೇವಕರಾಗಬೇಕು, ಅದು ಪೂರ್ಣಾವಧಿಯ ಸೇವೆಯಾಗಿರಬಹುದು, ಅಥವಾ ನಮ್ಮ ಉದ್ಯೋಗದ ಸ್ಥಳದಲ್ಲಿರಬಹುದು ಮತ್ತು ಎಲ್ಲಿದ್ದರೂ ಸರಿಯೇ. ನೀವದನ್ನು ನಿಮ್ಮ ನೆರೆಹೊರೆಯಲ್ಲಿ ಅಥವ ಅಂಗಡಿಗಳಲ್ಲಿ ಮಾಡುವುದಾದರೂ ದೇವರು ನಿಮಗೆ ಕೊಡುವ ಸಾಮರ್ಥ್ಯದಲ್ಲಿ ಮಾಡಬೇಕೇ ಹೊರತು, ನಿಮ್ಮ ಸ್ವಂತಬಲದಲ್ಲಿ ಅಲ್ಲ. ಆದ್ದರಿಂದ ನೀವು ದೇವರನ್ನು ಬೇಡಿಕೊಂಡು ಆತನು ನಿಮಗೆ ಯಾವ ವರವನ್ನು ಕೊಟ್ಟಿದ್ದಾನೆಂದು ತಿಳಿದುಕೊಳ್ಳಿರಿ ಮತ್ತು ನೀವು ಪೂರ್ಣಾವಧಿಸೇವೆಯಲ್ಲಿ ಇಲ್ಲದಿದ್ದರೂ ಇತರರಿಗೆ ಸೇವೆಸಲ್ಲಿಸುವಾಗ ಕೊರತೆ ಮಾಡಬೇಡಿರಿ. ನಿಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಪರಿಶುದ್ಧಾತ್ಮನು ದೈವಿಕವಾದ ಸಾಮರ್ಥ್ಯವನ್ನು ಇಟ್ಟಿದ್ದಾನೆ ಎನ್ನುವುದನ್ನು ಗುರುತಿಸಿರಿ ಮತ್ತು ದೇವರು ನಿಮಗೆ ಕೊಟ್ಟಿರುವ ವರಗಳ ಮೂಲಕವಾಗಿ ಇತರರಿಗೆ ಸೇವೆ ಮಾಡಿರಿ.

ಇದಕ್ಕೆ ಸಮಯ ಮತ್ತು ಅಭ್ಯಾಸಗಳೆರಡೂ ಬೇಕು. ಮೊದಲ ಪ್ರಯತ್ನದಲ್ಲಿ ನೀವು ಎಲ್ಲವನ್ನು ಸರಿಯಾಗಿಯೇ ಮಾಡಲಾಗದಿರಬಹುದು, ಆದರೆ ಹಿಂಜರಿಯದೆ ಅಭ್ಯಾಸವನ್ನು ಮುಂದುವರಿಸಿರಿ. ನೀವು ತಪ್ಪುಗೈದರೆ ದೇವರ ಸಿಂಹಾಸನವೇನೂ ಬಿದ್ದುಹೋಗುವುದಿಲ್ಲ, ಮೇಲಾಗಿ ಇತರರು ನಿಮ್ಮ ಪ್ರಾಮಾಣಿಕವಾದ ಪ್ರಯತ್ನವನ್ನು ನೋಡಲು ಸಾಧ್ಯವಾಗುತ್ತದೆ. ನೀವು ಏನನ್ನಾದರೂ ಸರಿಯಾಗಿ ಮಾಡಲಾಗದೇ ಇದ್ದರೂ ನಿಮ್ಮ ಪ್ರೀತಿ ಮತ್ತು ಆತ್ಮೀಯತೆ ಅವರಿಗೆ ತಂಪೆರೆಯುತ್ತದೆ. ದೇವರು ನಿಮಗೆ ವರಗಳನ್ನು ಕೊಟ್ಟಿದ್ದಾನೆನ್ನುವುದನ್ನು ಗುರುತಿಸಿ, ನಿಮಗಿರುವ ದೈವೀಕ ಸಾಮರ್ಥ್ಯವನ್ನು ಇತರರೊಂದಿಗೆ ಹಂಚಿಕೊಳ್ಳಿರಿ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. 1 ಪೇತ್ರನು 4:11 ಓದಿರಿ. ನಾವು ಯಾರಿಂದ ಬಲವನ್ನು ಹೊಂದಿ ಸೇವೆ ಮಾಡಬೇಕು?

*__1 ಪೇತ್ರ 4:11 –__ ಒಬ್ಬನು ಬೋಧಿಸುವವನಾದರೆ ದೈವೋಕ್ತಿಗಳನ್ನು ನುಡಿಯುವವನಾಗಿ ಬೋಧಿಸಲಿ. ಒಬ್ಬನು ಸಭೆಯ ಸೇವೆ ಮಾಡುವವನಾದರೆ ದೇವರಿಂದ ಶಕ್ತಿಯನ್ನು ಹೊಂದಿದವನಾಗಿ ಮಾಡಲಿ. ಇದರಿಂದ ಎಲ್ಲಾದರಲ್ಲಿ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ ಉಂಟಾಗುವದು. ಯೇಸು ಕ್ರಿಸ್ತನಿಗೆ ಅಧಿಪತ್ಯವೂ ಘನವೂ ಯುಗಯುಗಾಂತರಗಳಲ್ಲಿಯೂ ಇರುವವು. ಆಮೆನ್.*

2. 1 ಕೊರಿಂಥದವರಿಗೆ 12:4 ಓದಿರಿ. ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ಆದರೆ ಇವುಗಳಿಗೆ ಯಾರು ಕಾರಣರಾಗಿದ್ದಾರೆ?

*__1 ಕೊರಿಂಥದವರಿಗೆ 12:4 –__ ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ದೇವರಾತ್ಮನು ಒಬ್ಬನೇ;*

3. 1 ಕೊರಿಂಥದವರಿಗೆ 12:6 ಓದಿರಿ. ಕೆಳಗಿನ ಮೂರರಲ್ಲಿ ಸರಿಯಾದದ್ದನ್ನು ಆರಿಸಿರಿ.

ಅ. ದೇವರು ಒಂದೇ ರೀತಿಯಲ್ಲಿ ಕೆಲಸ ಮಾಡುತ್ತಾನೆ

ಇ. ದೇವರು ಜನರ ಮೂಲಕವಾಗಿ ಅನೇಕರೀತಿಯಲ್ಲಿ ಕೆಲಸ ಮಾಡುತ್ತಾನೆ.

ಉ. ದೇವರು ಬೋಧಕರ ಮುಖಾಂತರವಾಗಿ ಮಾತ್ರ ಕೆಲಸಮಾಡುತ್ತಾನೆ.

*__1 ಕೊರಿಂಥದವರಿಗೆ 12:6–10 –__ ಕರ್ತನು ಒಬ್ಬನೇ; ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು, ಸರ್ವರಲ್ಲಿಯೂ ಸರ್ವಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ. [7] ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟವೆ. [8] ಒಬ್ಬನಿಗೆ ದೇವರಾತ್ಮನ ಮೂಲಕ ಜ್ಞಾನವಾಕ್ಯವು, ಒಬ್ಬನಿಗೆ ಆ ಆತ್ಮನಿಗೆ ಅನುಗುಣವಾಗಿ ವಿದ್ಯಾವಾಕ್ಯವು, [9] ಒಬ್ಬನಿಗೆ ಆ ಆತ್ಮನಿಂದಲೇ ನಂಬಿಕೆಯು, ಒಬ್ಬನಿಗೆ ಆ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿ ಮಾಡುವ ವರವು, [10] ಒಬ್ಬನಿಗೆ ಮಹತ್ತುಗಳನ್ನು ಮಾಡುವ ವರವು, ಒಬ್ಬನಿಗೆ ಪ್ರವಾದನೆಯ ವರವು, ಒಬ್ಬನಿಗೆ ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರವು, ಒಬ್ಬನಿಗೆ ವಿವಿಧ ವಾಣಿಗಳನ್ನಾಡುವ ವರವು. ಒಬ್ಬನಿಗೆ ವಾಣಿಗಳ ಅರ್ಥವನ್ನು ಹೇಳುವ ವರವು ಕೊಡಲ್ಪಡುತ್ತವೆ.*

4. 1 ಕೊರಿಂಥದವರಿಗೆ 12:7 ಓದಿರಿ. ಇದರಲ್ಲಿ ಸರಿ/ತಪ್ಪು ತಿಳಿಸಿರಿ. ಪರಿಶುದ್ಧಾತ್ಮನ ಪ್ರಸನ್ನತೆ ಮತ್ತು ದೈವೀಕ ವರಗಳು ಸರ್ವರ ಒಳಿತಿಗಾಗಿ ನಮ್ಮೆಲ್ಲರಿಗೂ ಕೊಡಲ್ಪಟ್ಟಿದೆ.

5. 1 ಕೊರಿಂಥದವರಿಗೆ 12:8–10. ದೇವರು ತನ್ನ ಜನರಿಗೆ ಕೊಡುವ ದೈವೀಕ ವರಗಳನ್ನು ಪಟ್ಟಿಮಾಡಿ ವ್ಯಾಖ್ಯಾನಿಸಿರಿ.

6. ರೋಮಾಪುರದವರಿಗೆ 12:6–8 ಓದಿರಿ. ದೇವರು ತನ್ನ ಜನರಿಗೆ ಕೊಡುವ ದೈವೀಕ ವರಗಳನ್ನು ಪಟ್ಟಿಮಾಡಿ ವ್ಯಾಖ್ಯಾನಿಸಿರಿ.

*__ರೋಮಾಪುರದವರಿಗೆ 12:6–8__ – ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ. [7] ಅದು ಸಭಾಸೇವೆಯ ರೂಪವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ. [8] ಬೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿಹೇಳುವವನು ಬುದ್ಧಿಹೇಳುವದರಲ್ಲಿಯೂ ನಿರತನಾಗಿರಲಿ. ದಾನಕೊಡುವವನು ಯಥಾರ್ಥ ಮನಸ್ಸಿನಿಂದ ಕೊಡಲಿ. ಹಿರೀತನ ನಡಿಸುವವನು ಆಸಕ್ತಿಯಿಂದ ನಡಿಸಲಿ. ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ.*

7. ಇವುಗಳಲ್ಲಿ ಯಾವ ವರಗಳು ನಿಮ್ಮ ಮೂಲಕವಾಗಿ ಕೆಲಸ ಮಾಡುತ್ತಿವೆ ಎಂದು ನೀವು ಗಮನಿಸಿರುವಿರಾ?

*__2 ತಿಮೊಥೆಯನಿಗೆ 4:10ಬ, 11__ – ಲೂಕನು ಮಾತ್ರ ನನ್ನ ಜೊತೆಯಲ್ಲಿದ್ದಾನೆ. ಮಾರ್ಕನನ್ನು ಸಂಗಡ ಕರಕೊಂಡು ಬಾ, ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ.*

*__ಅಪೊಸ್ತಲರ ಕೃತ್ಯಗಳು 13:1__ – ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳೂ ಬೋಧಕರೂ ಇದ್ದರು; ಯಾರಾರಂದರೆ – ಬಾರ್ನಬ, ನೀಗರನೆಂಬ ಸಿಮೆಯೋನ, ಕುರೇನ್ಯದ ಲೂಕ್ಯ, ಉಪರಾಜನಾದ ಹೆರೋದನ ಸಾಕುತಮ್ಮನಾದ ಮೆನಹೇನ, ಸೌಲ ಇವರೇ.*

*__ಅಪೊಸ್ತಲರ ಕೃತ್ಯಗಳು 13:15__ – ಧರ್ಮಶಾಸ್ತ್ರವು ಪ್ರವಾದಿಗಳ ಗ್ರಂಥವು ಇವುಗಳ ಪಾರಾಯಣವಾದ ಮೇಲೆ ಸಭಾಮಂದಿರದ ಯಜಮಾನರು – ಸಹೋದರರೇ, ಜನರಿಗೆ ಹೇಳತಕ್ಕ ಬುದ್ಧಿ ಮಾತೇನಾದರೂ ನಿಮಗಿದ್ದರೆ ಹೇಳಿರಿ ಎಂದು ಅವರಿಗೆ ಹೇಳಿ ಕಳುಹಿಸಿದರು.*

8. 1 ಕೊರಿಂಥದವರಿಗೆ 12:7 ಓದಿರಿ. ಈ ವರಗಳಿಂದ ಯಾರಿಗೆ ಲಾಭವಾಗುತ್ತದೆ?

***ಜ್ಞಾನೋಕ್ತಿಗಳು 22:9** – ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ.*

***ಅಪೊಸ್ತಲರ ಕೃತ್ಯಗಳು 20:28** – ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ.*

***ಮತ್ತಾಯ 5:7** – ಕರುಣೆಯುಳ್ಳವರು ಧನ್ಯರು; ಅವರು ಕರುಣೆ ಹೊಂದುವರು.*

***1 ಕೊರಿಂಥದವರಿಗೆ 12:7** – ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟಿವೆ.*

## ಉತ್ತರಗಳು

1. 1 ಪೇತ್ರ 4:11 ಓದಿರಿ. ನಾವು ಯಾರಿಂದ ಬಲವನ್ನು ಹೊಂದಿ ಸೇವೆ ಮಾಡಬೇಕು?

   ***ದೇವರಿಂದ ಬಲವನ್ನು ಹೊಂದಿಕೊಂಡು***

2. 1 ಕೊರಿಂಥದವರಿಗೆ 12:4 ಓದಿರಿ. ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ಆದರೆ ಇವುಗಳಿಗೆ ಯಾರು ಕಾರಣರಾಗಿದ್ದಾರೆ?

   ***ದೇವರು/ಪರಿಶುದ್ಧಾತ್ಮನು***

3. 1 ಕೊರಿಂಥದವರಿಗೆ 12:6 ಓದಿರಿ. ಕೆಳಗಿನ ಮೂರರಲ್ಲಿ ಸರಿಯಾದದ್ದನ್ನು ಆರಿಸಿರಿ.

   ***ಇ. ದೇವರು ಜನರ ಮೂಲಕವಾಗಿ ಅನೇಕ ರೀತಿಯಲ್ಲಿ ಕೆಲಸ ಮಾಡುತ್ತಾನೆ.***

4. 1 ಕೊರಿಂಥದವರಿಗೆ 12:7 ಓದಿರಿ. ಇದರಲ್ಲಿ ಸರಿ/ತಪ್ಪು ತಿಳಿಸಿರಿ. ಪರಿಶುದ್ಧಾತ್ಮನ ಪ್ರಸನ್ನತೆ ಮತ್ತು ದೈವಿಕ ವರಗಳು ಸರ್ವರ ಒಳಿತಿಗಾಗಿ ನಮ್ಮೆಲ್ಲರಿಗೂ ಕೊಡಲ್ಪಟ್ಟಿದೆ.

   ***ಸರಿ***

5. 1 ಕೊರಿಂಥದವರಿಗೆ 12:8–10. ದೇವರು ತನ್ನ ಜನರಿಗೆ ಕೊಡುವ ಕೆಲವು ದೈವೀಕ ವರಗಳನ್ನು ಪಟ್ಟಿಮಾಡಿರಿ.

   ***ಜ್ಞಾನವಾಕ್ಯ = ದೇವರ ಮನಸ್ಸು ಮತ್ತು ಉದ್ದೇಶಗಳನ್ನು ತಿಳಿಸುವ ದೈವೀಕ ಪ್ರಕಟಣೆಗಳು***

   ಅಪೊಸ್ತಲರ ಕೃತ್ಯಗಳು 27:21–25 ನೋಡಿರಿ.

   ***ವಿದ್ಯಾವಾಕ್ಯ = ಯಾವುದೇ ಸತ್ಯಾಂಶ ಅಥವ ಘಟನೆಯ ಕುರಿತು ದೈವೀಕ ಪ್ರಕಟಣೆ***

   ಅಪೊಸ್ತಲರ ಕೃತ್ಯಗಳು 9:11–12 ನೋಡಿರಿ.

   ***ನಂಬಿಕೆಯ ವರ = ಯಾವುದೇ ಅನುಮಾನ/ತರ್ಕವಿಲ್ಲದೆ ದೇವರನ್ನು ನಂಬಲು ದೈವೀಕ ಅನುಗ್ರಹವಿರುವುದು***

   1 ಕೊರಿಂಥದವರಿಗೆ 13:2 ನೋಡಿರಿ.

*ರೋಗಗಳನ್ನು ಗುಣಪಡಿಸುವುದು = ಮನುಷ್ಯ ಸಹಾಯವಿಲ್ಲದೆ ಅಥವ ಯಾವುದೇ ಔಷಧಿಯನ್ನು ಬಳಸದೆ ರೋಗಗಳನ್ನು ಗುಣಪಡಿಸುವುದು*

ಮಾರ್ಕ 16:18 ನೋಡಿರಿ.

*ಅದ್ಭುತಕಾರ್ಯಗಳನ್ನು ಮಾಡುವುದು = ಪ್ರಕೃತಿಯ ನಿಯಮಕ್ಕೆ ವಿರುದ್ಧವಾಗಿ ದೈವೀಕ ಸಹಾಯದಿಂದ ಅದ್ಭುತಕಾರ್ಯಗಳನ್ನು ಮಾಡುವುದು*

ಇಬ್ರಿಯರಿಗೆ 2:3–4 ನೋಡಿರಿ.

*ಪ್ರವಾದನೆಗಳು = ದೈವಪ್ರೇರಿತರಾಗಿ ಮನುಷ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ನುಡಿಯುವುದು*

ಅಪೊಸ್ತಲರ ಕೃತ್ಯಗಳು 11:27–28 ಮತ್ತು 1 ಕೊರಿಂಥದವರಿಗೆ 14:3 ನೋಡಿರಿ.

*ಸತ್ಯಾಸತ್ಯಾತ್ಮಗಳ ನುಡಿಯನ್ನು ವಿವೇಚಿಸಿ ತಿಳಿದುಕೊಳ್ಳುವುದು*

ಅಪೊಸ್ತಲರ ಕೃತ್ಯಗಳು 16:16–18 ನೋಡಿರಿ.

*ವಿವಿಧ ಭಾಷೆಗಳನ್ನು ಆಡುವುದು = ದೈವಪ್ರೇರಿತರಾಗಿ ತಿಳಿಯದ ಭಾಷೆಯಲ್ಲಿ (ಮಾತನಾಡುವ ವ್ಯಕ್ತಿಗೂ ಅದು ತಿಳಿಯದು) ನುಡಿಯುವುದು*

1 ಕೊರಿಂಥದವರಿಗೆ 14:13–14 ನೋಡಿರಿ.

6. ರೋಮಾಪುರದವರಿಗೆ 12:6–8 ಓದಿರಿ. ದೇವರು ತನ್ನ ಜನರಿಗೆ ಕೊಡುವ ದೈವೀಕ ವರಗಳನ್ನು ಪಟ್ಟಿಮಾಡಿರಿ.

*ಸಭಾಸೇವೆ = ಇತರರಿಗೆ ಸೇವೆ ಮಾಡುವುದು, ಪ್ರಾಯೋಗಿಕವಾದ ಸೇವೆ*

2 ತಿಮೊಥೆಯನಿಗೆ 4:11 ನೋಡಿರಿ.

*ಬೋಧನೆ = ವಿವರಣೆ ನೀಡುವುದು, ವಿಶೇಷಾರ್ಥ ತಿಳಿಸುವುದು, ತಿಳುವಳಿಕೆ ನೀಡುವುದು*

ಅಪೊಸ್ತಲರ ಕೃತ್ಯಗಳು 13:1 ನೋಡಿರಿ.

*ಬುದ್ಧಿ ಹೇಳುವುದು = ಉತ್ತೇಜನಪಡಿಸುವುದು, ಸಲಹೆ, ಪ್ರೋತ್ಸಾಹ ನೀಡುವುದು, ಬೇಡಿಕೊಳ್ಳುವುದು, ಗದರಿಸುವುದು, ಸಂತೈಸುವುದು ಅಥವ ಎಚ್ಚರಿಸುವುದು*

ಅಪೊಸ್ತಲರ ಕೃತ್ಯಗಳು 13:15 ನೋಡಿರಿ.

***ಕೊಡುವುದು = ಹಣದ ರೂಪದಲ್ಲಿ ದೇವರಿಗೆ ಮತ್ತು ಇತರರಿಗೆ ಧಾರಾಳವಾಗಿ ಕೊಡುವುದು***

ಜ್ಞಾನೋಕ್ತಿಗಳು 22:9 ನೋಡಿರಿ.

***ಪರಿಪಾಲನೆ = ನಾಯಕತ್ವ***

ಅಪೊಸ್ತಲರ ಕೃತ್ಯಗಳು 5:7 ನೋಡಿರಿ.

***ಕರುಣೆ = ವಿರೋಧಿಗಳಿಗೆ ಅಥವ ಸಂತ್ರಸ್ಥರಿಗೆ ಕರುಣೆ ತೋರುವುದು***

7. ಇವುಗಳಲ್ಲಿ ಯಾವ ವರಗಳು ನಿಮ್ಮ ಮೂಲಕವಾಗಿ ಕೆಲಸ ಮಾಡುತ್ತಿವೆ ಎನ್ನುವುದನ್ನು ನೀವು ಗಮನಿಸಿರುವಿರಾ?

8. 1 ಕೊರಿಂಥದವರಿಗೆ 12:7 ಓದಿರಿ. ಈ ವರಗಳಿಂದ ಯಾರಿಗೆ ಲಾಭವಾಗುತ್ತದೆ?

***ಪ್ರತಿಯೊಬ್ಬರಿಗೆ. ಮತ್ತೊಬ್ಬರಿಗೆ ಸಹಾಯ ಮಾಡಲು ನೀವು ಈ ವರಗಳನ್ನು ಉಪಯೋಗಿಸುವಾಗ, ದೇವರು ನಿಮ್ಮ ಮೂಲಕ ಕಾರ್ಯಮಾಡಲು ನೀವು ಅನುವು ಮಾಡಿಕೊಡುತ್ತೀರಿ.***

# ಈ ಪಾಠದಲ್ಲಿರುವ ಹೆಚ್ಚಿನ ವಾಕ್ಯಭಾಗಗಳು

***ಅಪೊಸ್ತಲರ ಕೃತ್ಯಗಳು 27:21–25*** *– ಅವರು ಬಹುಕಾಲ ಊಟವಿಲ್ಲದೆ ಇದ್ದ ಮೇಲೆ ಪೌಲನು ಅವರ ಮಧ್ಯದಲ್ಲಿ ನಿಂತುಕೊಂಡು – ಎಲೈ ಜನರೇ, ನೀವು ಕ್ರೇತದಿಂದ ಹೊರಟು ಈ ಕಷ್ಟನಷ್ಟಗಳಿಗೆ ಗುರಿಯಾಗದಂತೆ ನನ್ನ ಮಾತನ್ನು ಕೇಳಬೇಕಾಗಿತ್ತು. [22] ಈಗಲಾದರೂ ನೀವು ಧೈರ್ಯದಿಂದಿರಬೇಕೆಂದು ನಿಮಗೆ ಬುದ್ಧಿ ಹೇಳುತ್ತೇನೆ; ಹಡಗು ನಷ್ಟವಾಗುವದೇ ಹೊರತು ನಿಮ್ಮಲ್ಲಿ ಒಬ್ಬರಿಗೂ ಪ್ರಾಣನಷ್ಟವಾಗುವದಿಲ್ಲ. [23] ನಾನು ಯಾರವನಾಗಿದ್ದೇನೋ ಯಾರನ್ನು ಸೇವಿಸುತ್ತೇನೋ ಆ ದೇವರಿಂದ ಬಂದ ಒಬ್ಬ ದೂತನು ಕಳೆದ ರಾತ್ರಿಯಲ್ಲಿ ನನ್ನ ಹತ್ತಿರ ನಿಂತು ಪೌಲನೇ, ಭಯ ಪಡಬೇಡ, [24] ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು; ಇದಲ್ಲದೆ ನಿನ್ನ ಸಂಗಡ ಈ ಹಡಗಿನಲ್ಲಿ ಪ್ರಯಾಣಮಾಡುವವರೆಲ್ಲರ ಪ್ರಾಣ ದೇವರು ನಿನ್ನ ಮೇಲಣ ದಯೆಯಿಂದ ಉಳಿಸಿಕೊಟ್ಟಿದ್ದಾನೆಂದು ನನ್ನ ಸಂಗಡ ಹೇಳಿದನು. [25] ಆದದರಿಂದ ಜನರೇ ಧೈರ್ಯವಾಗಿರ್ರಿ. ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದೆಂದು ದೇವರನ್ನು ನಂಬುತ್ತೇನೆ.*

***ಅಪೊಸ್ತಲರ ಕೃತ್ಯಗಳು 9:11–12*** *– ಕರ್ತನು ಅವನಿಗೆ – ನೀನೆದ್ದು ನೆಟ್ಟನೇಬೀದಿ ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬವನನ್ನು ವಿಚಾರಿಸು; [12] ಅವನು ಪ್ರಾರ್ಥನೆ ಮಾಡುತ್ತಾನೆ. ಮತ್ತು ಅನನೀಯನೆಂಬ ಒಬ್ಬ ಮನುಷ್ಯನು ಒಳಗೆ ಬಂದು ತನಗೆ ತಿರಿಗಿ ಕಣ್ಣುಕಾಣುವಂತೆ ತನ್ನ ಮೇಲೆ ಕೈಯಿಡುವದನ್ನು ನೋಡಿದ್ದಾನೆ ಎಂದು ಹೇಳಿದನು.*

***1 ಕೊರಿಂಥದವರಿಗೆ 13:2*** *– ನನಗೆ ಪ್ರವಾದನವರವಿದ್ದರೂ ಎಲ್ಲಾ ರಹಸ್ಯಗಳೂ ಸಕಲ ವಿಧವಾದ ವಿದ್ಯೆಯೂ ತಿಳಿದರೂ, ಬೆಟ್ಟಗಳನ್ನು ತೆಗೆದಿಡುವದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ ನಾನು ಪ್ರೀತಿಯಿಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ.*

***ಮಾರ್ಕ 16:17–18*** *– ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; [18] ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು.*

***ಇಬ್ರಿಯರಿಗೆ 2:3–4*** *– ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯಮಾಡಿದರೆ ತಪ್ಪಿಸಿ ಕೊಳ್ಳುವದು ಹೇಗೆ? ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು; ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು; [4] ಮತ್ತು ದೇವರು ಅವರ ಕೈಯಿಂದ*

*ಸೂಚಕಕಾರ್ಯಗಳನ್ನೂ ಅದ್ಭುತ ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿ ಕೊಡುತ್ತಿದ್ದನು.*

***ಅಪೊಸ್ತಲರ ಕೃತ್ಯಗಳು 11:27–28*** *– ಆ ಕಾಲದಲ್ಲಿ ಪ್ರವಾದಿಗಳಾಗಿದ್ದ ಕೆಲವರು ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಬಂದರು. [28] ಅವರಲ್ಲಿ ಆಗಬನೆಂಬವನೊಬ್ಬನು ಎದ್ದು ಲೋಕಕ್ಕೆಲ್ಲಾ ದೊಡ್ಡ ಕ್ಷಾಮ ಬರುವದು ಎಂದು ಪವಿತ್ರಾತ್ಮ ಪ್ರೇರಣೆಯಿಂದ ಸೂಚಿಸಿದನು. ಅದು ಕ್ಲೌದ್ಯಚಕ್ರವರ್ತಿಯ ಕಾಲದಲ್ಲಿ ಉಂಟಾಯಿತು.*

***1 ಕೊರಿಂಥದವರಿಗೆ 14:3*** *– ಪ್ರವಾದಿಸುವವನಾದರೋ ಮನುಷ್ಯರ ಸಂಗಡ ಮಾತಾಡುವವನಾಗಿ ಅವರಿಗೆ ಭಕ್ತಿವೃದ್ಧಿಯನ್ನೂ ಪ್ರೋತ್ಸಾಹವನ್ನೂ ಸಂತೈಸುವಿಕೆಯನ್ನೂ ಉಂಟು ಮಾಡುತ್ತಾನೆ.*

***ಅಪೊಸ್ತಲರ ಕೃತ್ಯಗಳು 16:16–18*** *– ಬಳಿಕ ಪ್ರಾರ್ಥನೆ ನಡೆಯುವ ಆ ಸ್ಥಳಕ್ಕೆ ನಾವು ಹೋಗುತ್ತಿರುವಾಗ ಗಾರುಡಗಾತಿಯಾದ ಒಬ್ಬ ದಾಸಿಯು ನಮ್ಮೆದುರಿಗೆ ಬಂದಳು. ಅವಳು ಕಣಿ ಹೇಳುವದರಿಂದ ಅವಳ ಯಜಮಾನರಿಗೆ ಬಹು ಆದಾಯವಾಗುತ್ತಿತ್ತು. [17] ಪೌಲನೂ ನಾವೂ ಹೋಗುತ್ತಿರುವಾಗ ಅವಳು ಹಿಂದೆ ಬಂದು – ಈ ಮನಷ್ಯರು ಪರಾತ್ಪರನಾದ ದೇವರ ದಾಸರು; ನಿಮಗೆ ರಕ್ಷಣೆಯ ಮಾರ್ಗವನ್ನು ಸಾರುತ್ತಾರೆ ಎಂದು ಕೂಗುತ್ತಿದ್ದಳು. [18] ಹೀಗೆ ಅನೇಕ ದಿವಸ ಮಾಡಿದ್ದರಿಂದ ಪೌಲನು ಬಹಳವಾಗಿ ಬೇಸರಗೊಂಡು ಹಿಂತಿರುಗಿ ಆ ದೆವ್ವಕ್ಕೆ – ಅವಳನ್ನು ಬಿಟ್ಟು ಹೋಗು ಎಂದು ಯೇಸು ಕ್ರಿಸ್ತನ ಹೆಸರಿನಲ್ಲಿ ನಿನಗೆ ಅಪ್ಪಣೆಕೊಡುತ್ತೇನೆ ಎಂದು ಹೇಳಿದನು. ಅದೇ ಗಳಿಗೆಯಲ್ಲಿಯೇ ಅದು ಬಿಟ್ಟು ಹೋಯಿತು.*

***ಅಪೂಸ್ತಲರ ಕೃತ್ಯಗಳು 2:4–11*** *– ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು. [5] ಆಕಾಶದ ಕೆಳಗಿರುವ ಎಲ್ಲಾ ದೇಶದವರೊಳಗಿಂದ ಬಂದ ಸದ್ಭಕ್ತರಾದ ಯೆಹೂದ್ಯರು ಯೆರೂಸಲೇಮಿನಲ್ಲಿ ವಾಸವಾಗಿದ್ದರು. [6] ಆ ಸಪ್ಪಳವಾದಾಗ ಜನರು ಗುಂಪು ಗುಂಪಾಗಿ ಕೂಡಿಬಂದು ಪ್ರತಿಯೊಬ್ಬರು ತಮ್ಮ ತಮ್ಮ ಭಾಷೆಯಲ್ಲಿ ಇವರು ಮಾತಾಡುವದನ್ನು ಕೇಳಿ ಭ್ರಮೆಗೊಂಡರು. [7] ಎಲ್ಲರು ಆಶ್ಚರ್ಯದಿಂದ ಬೆರಗಾಗಿ ಇಗೋ, ಮಾತಾಡುತ್ತಿರುವ ಇವರೆಲ್ಲರು ಗಲಿಲಾಯದವರಲ್ಲವೇ. [8] ನಾವು ಪ್ರತಿಯೊಬ್ಬರು ನಮ್ಮ ನಮ್ಮ ಹುಟ್ಟುಭಾಷೆಯಲ್ಲಿ ಇವರು ಮಾತಾಡುವದನ್ನು ಕೇಳುತ್ತೇವಲ್ಲಾ. ಇದು ಹೇಗೆ? [9] ಪಾರ್ಥ್ಯರೂ ಮೇದ್ಯರೂ ಏಲಾಮ್ಯರೂ ಮೆಸಪೊತಾಮ್ಯ, ಯೂದಾಯ, ಕಪ್ಪದೋಕ್ಯ, ಪೊಂತ್ಯ, ಆಸ್ಯ, [10] ಪ್ರುಗ್ಯ, ಪಂಫುಲ್ಯ, ಐಗುಪ್ತ, ಕುರೇನೆಯ ಮಗ್ಗುಲಲ್ಲಿರುವ ಲಿಬ್ಯ, ಈ ಸೀಮೆಗಳಲ್ಲಿ ವಾಸವಾಗಿರುವವರೂ ರೋಮಾಪುರದಿಂದ ಬಂದು ಇಳಿದಿರುವ ಯೆಹೂದ್ಯರೂ*

*ಯೆಹೂದ್ಯ ಮತಾವಲಂಬಿಗಳೂ [11] ಕ್ರೇತ್ಯರೂ ಅರಬೀದೇಶದವರೂ ಆಗಿರುವ ನಾವು ನಮ್ಮ ನಮ್ಮ ಭಾಷೆಗಳಲ್ಲಿ ಇವರು ದೇವರ ಮಹತ್ತುಗಳ ವಿಷಯವಾಗಿ ಹೇಳುವದನ್ನು ಕೇಳುತ್ತೇವೆ ಅಂದುಕೊಂಡರು.*

***1 ಕೊರಿಂಥ 14:13–14** – ಆದದರಿಂದ ವಾಣಿಯನ್ನಾಡುವವನು ತನಗೆ ಅದರ ಅರ್ಥವನ್ನು ಹೇಳುವ ಶಕ್ತಿಯೂ ಉಂಟಾಗಬೇಕೆಂದು ದೇವರನ್ನು ಪ್ರಾರ್ಥಿಸಲಿ. [14] ಯಾಕಂದರೆ ನಾನು ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗಿರುವದು.*

# ಪಾಠ 3

# ಅದ್ಭುತಕಾರ್ಯಗಳು ದೇವರನ್ನು ಮಹಿಮೆ ಪಡಿಸುತ್ತವೆ

*ಆಂಡ್ರೂ ವ್ಹಾಮಕ್*

ದೇವರ ಬಲದಲ್ಲಿ ನಡೆಯುತ್ತ, ಆತನು ನಮಗೆ ಕೊಡುವ ವರಗಳ ಮೂಲಕವಾಗಿ ಇತರರಿಗೆ ಸಹಾಯ ಮಾಡುವುದನ್ನು ನಾವು ಚರ್ಚಿಸಿದ್ದೇವೆ. ನಾವು ಆತನಲ್ಲಿರುವ ಅನನ್ಯಬಲವನ್ನು ಉಪಯೋಗಿಸಿಕೊಳ್ಳಬೇಕೆಂದು ದೇವರು ನಿರೀಕ್ಷಿಸುತ್ತಾನೆ ಮತ್ತು ಆ ಮೂಲಕವಾಗಿ ಆತನಿಗೆ ಹೇಗೆ ಮಹಿಮೆಯಾಗುತ್ತದೆ ಎನ್ನುವುದನ್ನು ತಿಳಿಸಲು ಅಪೇಕ್ಷಿಸುತ್ತಾನೆ. ಇದರ ಕುರಿತು ದೇವರ ವಾಕ್ಯದಲ್ಲಿ ಅನೇಕ ಶಾಸ್ತ್ರವಚನಗಳಿದ್ದು ಅವುಗಳಲ್ಲಿ ಕೆಲವನ್ನು ಮಾತ್ರವೇ ನಾನಿಲ್ಲಿ ಉದಾಹರಿಸುತ್ತೇನೆ. ಮತ್ತಾಯನು ಬರೆದ ಸುವಾರ್ತೆ 9ನೇ ಅಧ್ಯಾಯದಲ್ಲಿ ಯೇಸುವು ಪಾರ್ಶ್ವವಾಯು ರೋಗಿಯನ್ನು ಗುಣಪಡಿಸುವುದನ್ನು ನೋಡುತ್ತೇವೆ, ಮಾರ್ಕನು ಬರೆದ ಸುವಾರ್ತೆ 2ನೇ ಅಧ್ಯಾಯದಲ್ಲಿರುವ ಅದೇ ಘಟನೆಯನ್ನು ಹೆಚ್ಚಿನ ವಿವರಣೆಯೊಂದಿಗೆ ನಾನು ಚರ್ಚಿಸುತ್ತೇನೆ. ಮತ್ತಾಯ 9:8ರಲ್ಲಿ, *"ಜನರು ಇದನ್ನು ನೋಡಿ ಭಯಪಟ್ಟು ದೇವರು ಮನುಷ್ಯರಿಗೆ ಅಂಥ ಅಧಿಕಾರವನ್ನು ಕೊಟ್ಟದ್ದಕ್ಕೆ ಆತನನ್ನು ಕೊಂಡಾಡಿದರು"* ಎಂದು ಬರೆದದೆ. ಪವಿತ್ರಾತ್ಮನ ವರಗಳು–ಅದ್ಭುತಕಾರ್ಯಗಳು–ದೇವರನ್ನು ಮಹಿಮೆ ಪಡಿಸುವ ಕಾರಣದಿಂದ ಆತನು ನಮಗೆ ಅದ್ಭುತಗಳನ್ನು ಮಾಡುವ ಶಕ್ತಿಯನ್ನು ಕೊಟ್ಟಿದ್ದಾನೆ ಎಂದು ನಿಮಗೆ ತಿಳಿದಿದೆಯೇ?

ನೀವು ಇತರರೊಂದಿಗೆ ಕ್ರಿಸ್ತನ ವಿಷಯವಾಗಿ ಹಂಚಿಕೊಳ್ಳುವಾಗ, ಅವರು ನಿಮ್ಮನ್ನು ಸಂದೇಹಿಸಿ, "ನೀನು ಹೇಳುತ್ತಿರುವುದು ಸತ್ಯ ಎಂದು ನಾನು ತಿಳಿದುಕೊಳ್ಳುವುದು ಹೇಗೆ?" ಎಂದು ಪ್ರಶ್ನಿಸಬಹುದು. ನೂರಾರು ಸಾವಿರ ಜನರನ್ನು ಕರ್ತನ ಬಳಿಗೆ ನಡೆಸಿದ ಟಿ. ಎಲ್. ಒಸ್‌ಬರ್ನ್ ಎನ್ನುವ ಪ್ರಸಿದ್ಧ ಸುವಾರ್ತಿಕರು ತಮ್ಮ ಪ್ರಥಮ ವಿದೇಶ ಸುವಾರ್ತಾ ಕೂಟದ ಅನುಭವವನ್ನು ಹಂಚಿಕೊಳ್ಳುವುದನ್ನು ನಾನು ಕೇಳಿದ್ದೇನೆ. ಅಲ್ಲಿ ಅವರು ಯೇಸುವಿನ ಕುರಿತಾಗಿ ಹೇಳುವಾಗ ಜನರು ಅದನ್ನು ನಂಬಲಿಲ್ಲ. ಕೊನೆಗೆ ಒಂದು ದಿನ ಅವರು ಒಬ್ಬ ಮನುಷ್ಯನೊಂದಿಗೆ ಮಾತನಾಡುತ್ತಾ, "ಬೈಬಲ್ ಹೀಗೆ ಹೇಳುತ್ತದೆ" ಎಂದಾಗ, ಆ ಮನುಷ್ಯನು, "ನಿಮ್ಮ ಆ ಪುಸ್ತಕವು ಇತರ ಪುಸ್ತಕಗಳಿಗಿಂತ ಹೇಗೆ ಭಿನ್ನವಾಗಿದೆ" ಎಂದನು. ಆಗ ಟಿ. ಎಲ್. ಒಸ್‌ಬರ್ನ್‌ರವರು, *'ಬೈಬಲ್ ಸತ್ಯವಾಗಿದೆ ಎಂದು ಈ ಜನರಿಗೆ*

*ತಿಳಿಯುವುದು ಹೇಗೆ? ಬೈಬಲ್ ಸತ್ಯವಾದದ್ದೆಂದು ನನಗೆ ನಂಬಿಕೆಯಿದೆ, ಆದರೆ ಅದನ್ನು ಅವರಿಗೆ ಮನವರಿಕೆ ಮಾಡಿಕೊಡುವುದು ಹೇಗೆ?'* ಎಂದು ಯೋಚಿಸ ತೊಡಗಿದರು.

ಅವರು ಧೈರ್ಯಗುಂದಿ ಸೋತುಹೋದಂತೆ ತಮ್ಮ ಸುವಾರ್ತಾ ಕ್ಷೇತ್ರವನ್ನು ಬಿಟ್ಟು ಹಿಂದಿರುಗಿ ಮನೆಗೆ ಬಂದು ಕರ್ತನನ್ನು ನಿರೀಕ್ಷಿಸ ತೊಡಗಿದರು. ಕರ್ತನು ತನ್ನ ಅನನ್ಯ ಬಲವನ್ನು ಉಪಯೋಗಿಸುವಂತೆ ಅವರಿಗೆ ಹೇಳಿದನು. ಸೂಚಕಕಾರ್ಯ ಮತ್ತು ಮಹತ್ಕಾರ್ಯಗಳು ದೇವರ ವಾಕ್ಯವನ್ನು ಮೌಲ್ಯಮಾಪನಕ್ಕೆ ಒಳಪಡಿಸುತ್ತವೆ, ಮತ್ತು ಇದು ಜನರ ಜೀವನವನ್ನು ಬದಲಾಯಿಸುತ್ತವೆ. 1 ಪೇತ್ರ 1:23ರಲ್ಲಿ, *"ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು. ಅದು ದೇವರ ಸದಾಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು"* ಎಂದು ಬರೆದದೆ. ಜನರನ್ನು ಬದಲಾಯಿಸುವುದು ದೇವರ ವಾಕ್ಯವೇ, ಆದರೆ ತಮ್ಮೊಡನೆ ದೇವರು ಮಾತನಾಡುತ್ತಿದ್ದಾನೆ ಎಂದು ಅವರು ನಂಬುವಂತೆ ಮಾಡುವುದು ಹೇಗೆ? ಅದ್ಭುತಗಳ ಉದ್ದೇಶವು ಅದೇ ಆಗಿದೆ. ಒಬ್ಬ ವ್ಯಕ್ತಿಯು ಸ್ವಸ್ಥವಾಗಬೇಕೆನ್ನುವುದು ದೇವರ ಚಿತ್ತವೆಂದು ಬೋಧಿಸಿ, ಯೇಸುವಿನ ನಾಮದಲ್ಲಿ ಅವರಿಗಾಗಿ ಪ್ರಾರ್ಥಿಸುವಾಗ ನಾವು ಅದನ್ನು ಪ್ರತ್ಯಕ್ಷವಾಗಿ ಸಾಕ್ಷೀಕರಿಸುತ್ತೇವೆ. ಕುರುಡರಿಗೆ ಕಣ್ಣುಬಂದು ಕಿವುಡರು ಕೇಳುವಾಗ ಅದು ದೇವರಿಂದಲೇ ಆಯಿತು ಎನ್ನುವುದು ನಿಜವಾಗುತ್ತದೆ. ಅದ್ಭುತ ಕಾರ್ಯಗಳು ಜನರನ್ನು ಬದಲಾಯಿಸುವುದಿಲ್ಲ, ಆದರೆ ನೀವು ಬೋಧಿಸಿದ್ದು ದೇವರ ವಾಕ್ಯವೇ ಆಗಿದೆ ಎನ್ನುವುದನ್ನು ನಂಬಲು ಇದರಿಂದ ಅವರಿಗೆ ಸಹಾಯವಾಗುತ್ತದೆ

ಇದರ ಉದಾಹರಣೆಯು ಸತ್ಯವೇದದ ಮಾರ್ಕನು 2:1–9ರಲ್ಲಿ, ಪಾರ್ಶ್ವವಾಯು ರೋಗಿಯು ಗುಣಹೊಂದಿದ ವಿವರಣೆಯಲ್ಲಿ ನೋಡುತ್ತೇವೆ: *"ಕೆಲವು ದಿನಗಳಾದ ಮೇಲೆ ಆತನು* (ಯೇಸುವು) *ಕಪೆರ್ನೌಮಿಗೆ ತಿರಿಗಿ ಬಂದನು. ಮನೆಯಲ್ಲಿದ್ದಾನೆಂಬ ವರ್ತಮಾನವು ಹಬ್ಬಿದಾಗ ಬಹುಜನರು ಕೂಡಿಬಂದದ್ದರಿಂದ ಬಾಗಲಿನ ಬಳಿಯಲ್ಲಾದರೂ ಸ್ಥಳವಿರಲಿಲ್ಲ. ಆತನು ಅವರಿಗೆ ದೇವರ ವಾಕ್ಯವನ್ನು ಹೇಳುತ್ತಿದ್ದನು. ಅಷ್ಟರಲ್ಲಿ ಕೆಲವರು ಒಬ್ಬ ಪಾರ್ಶ್ವವಾಯುರೋಗಿಯನ್ನು ನಾಲ್ಕು ಮಂದಿಯಿಂದ ಹೊರಿಸಿಕೊಂಡು ಆತನ ಬಳಿಗೆ ತಂದರು. ಜನರು ಗುಂಪಾಗಿದ್ದರಿಂದ ಅವರು ಆತನ ಹತ್ತರಕ್ಕೆ ಸೇರಲಾರದೆ ಆತನಿದ್ದ ಮನೆಯ ಮೇಲ್ಚಾವಣಿಯನ್ನು ಬಿಚ್ಚಿ ದ್ವಾರಮಾಡಿ ಪಾರ್ಶ್ವವಾಯುರೋಗಿಯು ಮಲಗಿದ್ದ ಹಾಸಿಗೆಯನ್ನು ಇಳಿಸಿದರು. ಯೇಸು ಅವರ ನಂಬಿಕೆಯನ್ನು ನೋಡಿ ಆ ಪಾರ್ಶ್ವವಾಯುರೋಗಿಗೆ – ಮಗನೇ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳಿದನು. ಆದರೆ ಶಾಸ್ತ್ರಿಗಳಲ್ಲಿ ಕೆಲವರು ಅಲ್ಲಿ ಕೂತುಕೊಂಡಿದ್ದು – ಇವನು ಯಾಕೆ ಹೀಗೆ ಮಾತನಾಡುತ್ತಾನೆ? ಇದು ದೇವದೂಷಣೆ. ದೇವರೊಬ್ಬನೇ ಹೊರತು ಮತ್ತಾರು ಪಾಪಗಳನ್ನು ಕ್ಷಮಿಸಬಲ್ಲರು? ಎಂದು ತಮ್ಮ ತಮ್ಮ ಮನಸ್ಸಿನಲ್ಲಿ ಅಂದುಕೊಂಡರು. ಹೀಗೆ ಅಂದುಕೊಳ್ಳುವದನ್ನು ಕೂಡಲೆ ಯೇಸು ತನ್ನ ಆತ್ಮದಲ್ಲಿ ತಿಳಿದುಕೊಂಡು ಅವರಿಗೆ – ನೀವು ನಿಮ್ಮ ಮನಸ್ಸಿನಲ್ಲಿ ಯಾಕೆ ಹೀಗೆ ಅಂದುಕೊಳ್ಳುತ್ತೀರಿ? ಯಾವದು ಸುಲಭ? ನಿನ್ನ*

*ಪಾಪಗಳು ಕ್ಷಮಿಸಲ್ಪಟ್ಟಿವೆ ಅನ್ನುವದೋ? ಎದ್ದು ನಿನ್ನ ಹಾಸಿಗೆಯನ್ನು ತೆಗೆದುಕೊಂಡು ನಡೆ ಅನ್ನುವದೋ?"* (ಆವರ್ತಗಳು ನನ್ನವು). ವಾಸ್ತವವೆಂದರೆ, ಪ್ರಾಯೋಗಿಕವಾಗಿ ಇವೆರಡೂ ಅಸಾಧ್ಯವಾದವುಗಳೇ. ಒಬ್ಬ ಮನುಷ್ಯನು ಮತ್ತೊಬ್ಬನ ಪಾಪಗಳನ್ನು ಕ್ಷಮಿಸುವುದಾಗಲೀ ಒಬ್ಬ ಪಾರ್ಶ್ವವಾಯು ರೋಗಿಯನ್ನು ಗುಣಪಡಿಸುವುದಾಗಲೀ ಅಸಾಧ್ಯವಾಗಿದೆ. ಅಂತೆಯೇ ದೇವರಿಗೆ ಒಂದನ್ನು ಮಾಡಲು ಸಾಧ್ಯವಾಗುವುದಾದರೆ ಮತ್ತೊಂದನ್ನೂ ಮಾಡಲು ಸಾಧ್ಯವಿದೆ.

ಮಾರ್ಕನು 2:10–12ರಲ್ಲಿ ಯೇಸುವು, *"ಆದರೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂಬದು ನಿಮಗೆ ತಿಳಿಯಬೇಕು ಎಂದು ಹೇಳಿ ಪಾರ್ಶ್ವವಾಯುರೋಗಿಯನ್ನು ನೋಡಿ – ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ ಅಂದನು. ಅವನು ಎದ್ದು ಕೂಡಲೆ ತನ್ನ ಹಾಸಿಗೆಯನ್ನು ತೆಗೆದುಕೊಂಡು ಎಲ್ಲರ ಮುಂದೆ ಹೊರಟುಹೋದನು. ಅದಕ್ಕೆ ಎಲ್ಲರು ಬೆರಗಾಗಿ–ಇದುವರೆಗೆ ನಾವು ಇಂಥದನ್ನು ಎಂದಿಗೂ ನೋಡಿದ್ದೇ ಇಲ್ಲವೆಂದು ಹೇಳುತ್ತಾ ದೇವರನ್ನು ಕೊಂಡಾಡಿದರು."* ಇಲ್ಲಿ ಯೇಸುವು, *"ಆದರೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂಬದು ನಿಮಗೆ ತಿಳಿಯಬೇಕು (ಎಂದು ಹೇಳಿ ಪಾರ್ಶ್ವವಾಯುರೋಗಿಯನ್ನು ನೋಡಿ)"* ಎಂದು ಸ್ಪಷ್ಟಪಡಿಸಿದನು. ಯೇಸುವು ಜನರೆದುರಿನಲ್ಲಿ ಸ್ವಸ್ಥತೆಯನ್ನು ಉಂಟುಮಾಡಿದ ಕಾರಣವೆಂದರೆ, ಕೇವಲ ತನ್ನ ಬಾಯಿಮಾತಿನಲ್ಲಿ ನುಡಿದದ್ದು ಕಣ್ಣಿಗೆ ಕಾಣುವಂತೆ ನಡೆಯುವುದು ಸಾಧ್ಯವಾದರೆ ಆತ್ಮದಲ್ಲಿ ಪಾಪಪರಿಹಾರವೂ ಉಂಟಾಗುತ್ತದೆ ಎನ್ನುವುದು ಜನರಿಗೆ ಅರಿವಾಗುತ್ತದೆ. ಯೇಸುವು ತನ್ನ ಮಾತನ್ನು ದೃಢಪಡಿಸಲು ಅದ್ಭುತಗಳನ್ನು ನಡೆಸಿದನು.

ಇದನ್ನೇ ಇಬ್ರಿಯರಿಗೆ 2:2–3 ಹೇಳುತ್ತದೆ: *"ಯಾಕಂದರೆ ದೇವದೂತರ ಮೂಲಕ ಹೇಳಲ್ಪಟ್ಟ ವಾಕ್ಯವು ಸ್ಥಿರವಾಗಿದ್ದು ಅದನ್ನು ಮೀರಿ ಮಾಡಿದ ಪ್ರತಿಯೊಂದು ತಪ್ಪಿಗೂ ಅವಿಧೇಯತ್ವಕ್ಕೂ ನ್ಯಾಯವಾದ ಪ್ರತಿಫಲವುಂಟಾದ ಮೇಲೆ [ನಮ್ಮ ಮುಂದಿಟ್ಟಿರುವ] ಈ ಅತ್ಯಂತವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯಮಾಡಿದರೆ ತಪ್ಪಿಸಿಕೊಳ್ಳುವದು ಹೇಗೆ? ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು; ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು; ಮತ್ತು ದೇವರು ಅವರ ಕೈಯಿಂದ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿ ಕೊಡುತ್ತಿದ್ದನು."* ದೇವರು ಈ ವಾಕ್ಯವನ್ನು ಪವಿತ್ರಾತ್ಮನ ಬಲದಿಂದ ದೃಢಪಡಿಸಿದನೆಂದು ಇಲ್ಲಿ ಹೇಳಲಾಗಿದೆ. ಇದನ್ನು ಮಾರ್ಕ 16:20, *"ಕರ್ತನು ಅವರ ಕೂಡ ಕೆಲಸಮಾಡುತ್ತಾ ಸೂಚಕಕಾರ್ಯಗಳಿಂದ ಸುವಾರ್ತೆಯ ವಾಕ್ಯವನ್ನು ಬಲಪಡಿಸುತ್ತಾ ಇದ್ದನು"* ಎನ್ನುವ ವಾಕ್ಯದೊಂದಿಗೆ ಹೋಲಿಸಿ ನೋಡಿರಿ. ಇಲ್ಲಿ ನಾನು ಹೇಳಬಯಸುವುದೇನೆಂದರೆ, ನೀವು ಜನರ ಮಧ್ಯೆ ಸೇವೆಮಾಡುವಾಗ ದೇವರಶಕ್ತಿಯನ್ನು ಮತ್ತು ಸಾಮರ್ಥ್ಯವನ್ನು ಉಪಯೋಗಿಸಬೇಕೆಂದು ಆತನು ಇಚ್ಛಿಸುತ್ತಾನೆ.

ದೇವರು ತಾನು ನಿಜವಾಗಿಯೂ ಜನರೊಂದಿಗೆ ಮಾತನಾಡುತ್ತಿದ್ದೇನೆ ಎನ್ನುವುದನ್ನು ಅವರಿಗೆ ಖಾತರಿಪಡಿಸಲು ಪವಿತ್ರಾತ್ಮನ ವರಗಳ ಮೂಲಕವಾಗಿ ನಡೆಯುವ ಅದ್ಭುತಗಳನ್ನು ಉಪಯೋಗಿಸುತ್ತಾನೆ. ಮನುಷ್ಯರು ತಮ್ಮ ಹೃದಯದಲ್ಲಿ ಬಿಡುಗಡೆಗೊಳ್ಳಬೇಕು ಎನ್ನುವುದೇ ಆತನ ಅಂತಿಮ ಉದ್ದೇಶ, ಆದರೆ ಮನುಷ್ಯರ ಹೃದಯವನ್ನು ಪ್ರವೇಶಿಸುವ ಮಾರ್ಗವು ಕೆಲವೊಮ್ಮೆ ಅವರ ದೈಹಿಕ ಮತ್ತು ಭಾವನಾತ್ಮಕ ವಿಷಯಗಳ ಮೂಲಕವಾಗಿ ಇರುತ್ತದೆ. ಈ ವಿಷಯಗಳಲ್ಲಿ ಅವರು ಬಿಡುಗಡೆಗೊಳ್ಳಲು ನೀವು ಸಹಾಯಮಾಡುವುದಾದರೆ, ಕರ್ತನು ಇತರ ವಿಷಯಗಳಲ್ಲಿಯೂ ತಮ್ಮನ್ನು ಬಿಡುಗಡೆ ಮಾಡುವಂತೆ ಅವರು ಆತನಿಗೆ ತೆರೆದುಕೊಳ್ಳುತ್ತಾರೆ ಮತ್ತು ತಮ್ಮ ಇಡೀ ಜೀವನವನ್ನು ಆತನಿಗೆ ಒಪ್ಪಿಸಿಬಿಡುತ್ತಾರೆ.

1 ಕೊರಿಂಥದವರಿಗೆ 2:1–5ರಲ್ಲಿ ಪೌಲನು ಕೊರಿಂಥದವರ ಬಳಿಗೆ ತಾನು ಯಾವ ರೀತಿಯಲ್ಲಿ ಬಂದನೆಂದು ಬರೆಯುತ್ತಾನೆ: *"ಸಹೋದರರೇ, ನಾನಂತೂ ದೇವರು ಹೇಳಿಕೊಟ್ಟ ಮಾತನ್ನು ತಿಳಿಸುವವನಾಗಿ ನಿಮ್ಮ ಬಳಿಗೆ ಬಂದಾಗ ವಾಕ್ಚಾತುರ್ಯದಿಂದಾಗಲಿ ಜ್ಞಾನಾಡಂಬರದಿಂದಾಗಲಿ ಬರಲಿಲ್ಲ. ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸುಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು. ಇದಲ್ಲದೆ ನಾನು ನಿಮ್ಮಲ್ಲಿಗೆ ಬಂದಾಗ ನಿಮ್ಮ ಬಳಿಯಲ್ಲಿ ಬಲಹೀನನೂ ಭಯಪಡುವವನೂ ಬಹು ನಡುಗುವವನೂ ಆಗಿದ್ದೆನು. ನಿಮ್ಮ ನಂಬಿಕೆಯು ಮಾನುಷಜ್ಞಾನವನ್ನು ಆಧಾರಮಾಡಿಕೊಳ್ಳದೆ ದೇವರ ಶಕ್ತಿಯನ್ನು ಆಧಾರಮಾಡಿಕೊಂಡಿರಬೇಕೆಂದು ನನ್ನ ಬೋಧನೆಯಲ್ಲಿಯೂ ಪ್ರಸಂಗದಲ್ಲಿಯೂ ಮನವೊಲಿಸುವ ಜ್ಞಾನವಾಕ್ಯಗಳನ್ನು ನಾನು ಪ್ರಯೋಗಿಸದೆ ದೇವರಾತ್ಮನ ಬಲವನ್ನು ತೋರ್ಪಡಿಸುವ ವಾಕ್ಯಗಳನ್ನೇ ಪ್ರಯೋಗಿಸಿದೆನು."* ತಾನು ಒತ್ತಾಯಪೂರ್ವಕವಾಗಿ ಮತ್ತು ಮಾತಿನಬಲದಿಂದ ಅವರ ಬಳಿಗೆ ಬಾರದೆ ದೇವರಾತ್ಮನ ಬಲದಿಂದ ಅವರ ಬಳಿಗೆ ಬರಲು, ಅವರು ಮನುಷ್ಯನ ಜ್ಞಾನವನ್ನು ಆಧಾರ ಮಾಡಿಕೊಳ್ಳದೆ ದೇವರಾತ್ಮನ ಬಲವನ್ನೇ ಆಧಾರ ಮಾಡಿಕೊಳ್ಳಬೇಕೆನ್ನುವುದು ಕಾರಣವಾಗಿದೆ ಎಂದು ಅವನು ಇಲ್ಲಿ ಸ್ಪಷ್ಟಪಡಿಸುತ್ತಾನೆ.

ಕ್ರೈಸ್ತತ್ವಕ್ಕೆ ಅದ್ಭುತವಾದ ತರ್ಕವಿದೆ. ಒಮ್ಮೆ ನಿಮಗೆ ಸತ್ಯದರ್ಶನವಾದರೆ, ಇಲ್ಲಿಯವರೆಗೂ ಅದನ್ನು ನೀವು ಯಾಕೆ ಕಳೆದುಕೊಂಡಿರೋ ಮತ್ತು ಇತರರು ಯಾಕೆ ಇದನ್ನು ಸ್ವೀಕರಿಸುತ್ತಿಲ್ಲವೋ ಎಂದು ನೀವು ಅಚ್ಚರಿಪಡುತ್ತೀರಿ. ಆದರೆ ಕ್ರೈಸ್ತತ್ವವು ಕೇವಲ ತರ್ಕ ಮಾತ್ರವಲ್ಲ ಅದು ದೇವರೊಂದಿಗೆ ಒಂದು ನೈಜ ಅನುಭವವಾಗಿದೆ. ಆತನು ಇಂದಿಗೂ ಜೀವಿಸುತ್ತಿದ್ದಾನೆ ಮತ್ತು ಬೈಬಲ್ ಹೇಳುವಂತೆ ಈಗಲೂ ತನ್ನನ್ನು ಬಲವಾಗಿ ಪ್ರಕಟಿಸಿಕೊಳ್ಳಬೇಕೆಂದಿದ್ದಾನೆ. ಇಬ್ರಿಯ 13:8ರಲ್ಲಿ ಹೀಗೆ ಹೇಳಲಾಗಿದೆ, *"ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು".* ಯೇಸುವು ಈ ಲೋಕಕ್ಕೆ ಬಂದನು ಮತ್ತು ಆತನು ದೇವರಿಂದ ಕಳುಹಿಸಲ್ಪಟ್ಟವನು ಎಂದು ಆತನು ನಡೆಸಿದ ಸೂಚಕಕಾರ್ಯ ಮತ್ತು ಅದ್ಭುತಕಾರ್ಯಗಳು ತಿಳಿಸುತ್ತವೆ. ಅಪೊಸ್ತಲರ ಕೃತ್ಯಗಳು 10:38ರಲ್ಲಿ, *"ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ*

*ಅಭಿಷೇಕಿಸಿದನು; ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು"* ಎಂದು ಓದುತ್ತೇವೆ. ಆತನು ಹೇಳಿದ ಮಾತು ನೆರವೇರುತ್ತಿತ್ತು ಮತ್ತು ಜನರು ಆತನ ಸಂದೇಶವನ್ನು ಕೇಳಿಸಿಕೊಳ್ಳುವಂತೆ ಆ ಅದ್ಭುತಗಳು ಗಂಟೆಬಾರಿಸಿದಂತೆ ಅವರನ್ನು ಕರೆಯುತ್ತಿತ್ತು. ಅವರು ದೇವರನ್ನು ಮಹಿಮೆಪಡಿಸಿದರು. ಈ ಅದ್ಭುತಗಳು ದೇವರನ್ನು ಮಹಿಮೆಪಡಿಸಿದವು ಎಂದು ಅನೇಕ ವಾಕ್ಯಗಳು ಹೇಳುತ್ತವೆ, ಮತ್ತು ಜನರಿಗೆ ಸಹಾಯಮಾಡಲು ಮತ್ತು ಅವರ ಜೀವಿತಗಳನ್ನು ಬದಲಾಯಿಸಲು ಯೇಸುವು ಪರಿಶುದ್ಧಾತ್ಮನ ಬಲವನ್ನು ಉಪಯೋಗಿಸುವುದಾದರೆ ಆತನಿಗಿಂತ ಉತ್ತಮವಾಗಿ ಮಾಡಲು ನಮಗೆ ಹೇಗೆ ಸಾಧ್ಯವಿದೆ? ಜನರು ತನ್ನ ಸಂದೇಶವನ್ನು ಕೇಳಬೇಕು ಎನ್ನುವ ಕಾರಣಕ್ಕೆ ಯೇಸುವು ಅದ್ಭುತಗಳನ್ನು ಉಪಯೋಗಿಸುವುದಾದರೆ, ದೇವರ ಅನನ್ಯ ಶಕ್ತಿಯನ್ನು ಉಪಯೋಗಿಸಿಕೊಳ್ಳದೆಯೆ ನಾವು ಹೇಗೆ ಲೋಕವನ್ನು ಒಡಂಬಡಿಸಲು ಸಾಧ್ಯವಾಗುತ್ತದೆ? ಅದ್ಭುತಗಳು ದೇವರನ್ನು ಮಹಿಮೆಪಡಿಸುತ್ತವೆ ಎನ್ನುವುದು ಸತ್ಯವಾದ ಮಾತು. ಅದು ಜನರನ್ನು ತನ್ನ ಕಡೆಗೆ ಸೆಳೆಯುವ ಗಂಟೆಯಂತೆ. ಊಟಕ್ಕೆ ಬರಬೇಕೆಂದು ಗಂಟೆಬಾರಿಸುತ್ತಾರೆ – ನಿಮ್ಮ ಹೊಟ್ಟೆ ತುಂಬಿಸುವುದು ಊಟವೇ ಆದರೂ ಆ ಗಂಟೆಯ ಶಬ್ಧವು ನಿಮ್ಮ ಗಮನವನ್ನು ಅತ್ತ ಸೆಳೆಯುತ್ತದೆಯಲ್ಲವೆ. ಗಂಟೆಬಾರಿಸದಿದ್ದಾಗ ಕೆಲವರಿಗೆ ಊಟ ತಪ್ಪಿಹೋಗಬಹುದು. ದೇವರ ಅದ್ಭುತವಾದ ಶಕ್ತಿಯ ದರ್ಶನವಾಗದಿದ್ದರೆ ಅನೇಕರು, ದೇವರು ವಾಸ್ತವವಾಗಿದ್ದಾನೆ ಆತನು ನಮ್ಮ ಹೃದಯಗಳನ್ನು ಬದಲಾಯಿಸುತ್ತಾನೆ ಮತ್ತು ಪಾಪಗಳನ್ನು ಕ್ಷಮಿಸುತ್ತಾನೆ ಎನ್ನುವ ಸತ್ಯವನ್ನು ತಪ್ಪಿಸಿಕೊಳ್ಳುವ ಸಾಧ್ಯತೆಯಿದೆ.

ದೇವರು ನಮ್ಮ ಮೂಲಕವಾಗಿ ಇತರರ ಜೀವಿತಗಳಿಗೆ ಹರಿಯಲು ಇಚ್ಛಿಸುತ್ತಾನೆ ಎನ್ನುವುದನ್ನು ನೀವು ತಿಳಿದುಕೊಳ್ಳಬೇಕೆಂದು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ. ನಿಮ್ಮಲ್ಲಿ ಕೆಲವರು, "ಅದು ನನ್ನನ್ನು ಕುಗ್ಗಿಸುತ್ತದೆ. ನಾನು ಯಾವ ವ್ಯಕ್ತಿಗಾದರೂ ಪ್ರಾರ್ಥನೆ ಮಾಡಿದಾಗ ಅವನಿಗೆ ಗುಣವಾಗದಿದ್ದರೆ? ಅದ್ಭುತಗಳು ಜರುಗುತ್ತವೆ ಎಂದು ನಾನು ತಿಳಿದುಕೊಳ್ಳುವುದು ಹೇಗೆ?" ಅದ್ಭುತಗಳನ್ನು ಮಾಡುವವನು ದೇವರೇ ಹೊರತು ನೀವಲ್ಲ ಎನ್ನುವುದನ್ನು ನೀವು ಗುರುತಿಸಬೇಕು. ಒಬ್ಬ ಮನುಷ್ಯನಲ್ಲಿ ಅದ್ಭುತಗಳು ನಡೆದು ಅವರಿಗೆ ಬಿಡುಗಡೆಯಾದಾಗ ನೀವು ಅದರ ಗರಿಮೆಯನ್ನು ತೆಗೆದುಕೊಳ್ಳಬೇಡಿರಿ ಮತ್ತು ಅದ್ಭುತಗಳು ನಡೆಯದೆ ಹೋದಾಗ ಬರುವ ದೂಷಣೆಯನ್ನೂ ತೆಗೆದುಕೊಳ್ಳಬೇಡಿರಿ. ನೀವು ಕೇವಲ ಪ್ರಾರ್ಥನೆ ಮಾಡಬೇಕಷ್ಟೆ; ದೇವರು ಸ್ವಸ್ಥಮಾಡುತ್ತಾನೆ, ಆದರೆ ಆತನು ನಿಮ್ಮ ಮೂಲಕವಾಗಿ ಪ್ರವಹಿಸಲು ಅನುವು ಮಾಡಿಕೊಡಬೇಕು. ದೇವರು ನಿಮ್ಮನ್ನು ಅದ್ಭುತವಾದ ರೀತಿಯಲ್ಲಿ ಉಪಯೋಗಿಸಲು ಬಯಸುತ್ತಾನೆ. ನೀವು ದೇವರ ವಾಕ್ಯವನ್ನು ಅಭ್ಯಾಸ ಮಾಡಬೇಕು, ಅದು ಬೇರೆಯವರ ಜೀವಿತದಲ್ಲಿ ಹೇಗೆ ಕೆಲಸಮಾಡಿದೆಯೆಂದು ತಿಳಿದುಕೊಳ್ಳಬೇಕು ಮತ್ತು ಅದನ್ನು ನಿಮ್ಮ ಜೀವಿತದಲ್ಲಿ ಅಳವಡಿಸಿಕೊಳ್ಳಬೇಕು. ಹೀಗೆ ಇಂದಿನ ದಿನಗಳಲ್ಲಿ ದೇವರ ಅನನ್ಯವಾದ ಅದ್ಭುತಮಾಡುವ ಶಕ್ತಿಯು ನಿಮ್ಮ ಮೂಲಕ ಹರಿಯಲು ಅವಕಾಶಮಾಡಿಕೊಡಬೇಕು.

## ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ಅದ್ಭುತಕಾರ್ಯ ಎಂದರೆ ಏನು?

2. ಮಾರ್ಕನು 2:10–12 ಓದಿರಿ. ಯೇಸುವು ಮಾಡಿದ ಅದ್ಭುತಕಾರ್ಯದಿಂದ ಆತನಿಗೆ ಯಾವ ಅಧಿಕಾರವಿದೆ ಎಂದು ತಿಳಿಯುತ್ತದೆ?

*__ಮಾರ್ಕ 2:10–12__ – ಆದರೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟೆಂಬದು ನಿಮಗೆ ತಿಳಿಯಬೇಕು ಎಂದು ಹೇಳಿ ಪಾರ್ಶ್ವವಾಯುರೋಗಿಯನ್ನು ನೋಡಿ – [11] ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ ಅಂದನು. [12] ಅವನು ಎದ್ದು ಕೂಡಲೆ ತನ್ನ ಹಾಸಿಗೆಯನ್ನು ತೆಗೆದುಕೊಂಡು ಎಲ್ಲರ ಮುಂದೆ ಹೊರಟು ಹೋದನು. ಅದಕ್ಕೆ ಎಲ್ಲರು ಬೆರಗಾಗಿ – ಇದುವರೆಗೆ ನಾವು ಇಂಥದನ್ನು ಎಂದಿಗೂ ನೋಡಿದ್ದೇ ಇಲ್ಲವೆಂದು ಹೇಳುತ್ತಾ ದೇವರನ್ನು ಕೊಂಡಾಡಿದರು.*

3. ಮಾರ್ಕನು 16:15–18 ಓದಿರಿ. ವಿಶ್ವಾಸಿಗಳಾಗಿರುವ ನಾವು ಏನು ಮಾಡಬೇಕಾಗಿದೆ?

*__ಮಾರ್ಕ 16:15–18__ – ಆ ಮೇಲೆ ಅವರಿಗೆ ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. [16] ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು. [17] ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; [18] ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು.*

4. ಅಪೊಸ್ತಲರ ಕೃತ್ಯಗಳು 8:5–8 ಮತ್ತು 12 ಓದಿರಿ. ಜನರು ಏನು ನೋಡಿದರು ಮತ್ತು ಅವರ ಪ್ರತಿಕ್ರಿಯೆ ಏನಾಗಿತ್ತು?

*__ಅಪೊಸ್ತಲರ ಕೃತ್ಯಗಳು 8:5–8__ – ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು. [6] ಗುಂಪಾಗಿ ಕೂಡಿದ ಜನಗಳು ಫಿಲಿಪ್ಪನ ಮಾತುಗಳನ್ನು ಕೇಳಿ ಅವನು ಮಾಡಿದ ಸೂಚಕ ಕಾರ್ಯಗಳನ್ನು ನೋಡಿ ಅವನು ಹೇಳಿದ ಸಂಗತಿಗಳಿಗೆ ಏಕಮನಸ್ಸಾಗಿ ಲಕ್ಷ್ಯಕೊಟ್ಟರು. [7] ಯಾಕಂದರೆ ಅನೇಕರೊಳಗಿಂದ ದೆವ್ವಗಳು ಮಹಾಶಬ್ದದಿಂದ ಕೂಗಿ ಹೊರಗೆ ಬಂದವು; ಮತ್ತು*

*ಅನೇಕ ಪಾರ್ಶ್ವವಾಯು ರೋಗಿಗಳೂ ಕುಂಟರೂ ಸ್ವಸ್ಥಮಾಡಲ್ಪಟ್ಟರು. [8] ಆ ಪಟ್ಟಣದಲ್ಲಿ ಬಹು ಸಂತೋಷವಾಯಿತು.*

5. ಅಪೊಸ್ತಲರ ಕೃತ್ಯಗಳು 3:12 ಓದಿರಿ. ಅಪೊಸ್ತಲನಾದ ಪೇತ್ರನು, ತನ್ನಿಂದಾದ ಅದ್ಭುತಕಾರ್ಯದಲ್ಲಿ ತನ್ನ ದೇವಭಕ್ತಿಯ ಕುರಿತು ಏನು ಹೇಳುತ್ತಾನೆ.

***ಅಪೊಸ್ತಲರ ಕೃತ್ಯಗಳು 8:12*** *– ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು.*

***ಅಪೊಸ್ತಲರ ಕೃತ್ಯಗಳು 3:12*** *– ಪೇತ್ರನು ಇದನ್ನು ನೋಡಿ ಜನರಿಗೆ – ಇಸ್ರಾಯೇಲ್ ಜನರೇ, ನೀವು ಯಾಕೆ ಇದಕ್ಕೆ ಆಶ್ಚರ್ಯಪಡುತ್ತೀರಿ? ನೀವು ನಮ್ಮ ಮೇಲೆ ದೃಷ್ಟಿಯಿಟ್ಟು ನೋಡುವದೇನು? ನಾವು ಸ್ವಂತ ಶಕ್ತಿಯಿಂದಾಗಲಿ ದೇವಭಕ್ತಿಯಿಂದಾಗಲಿ ಇವನನ್ನು ನಡೆಯುವಂತೆ ಮಾಡಿದೆವೆಂದು ಭಾವಿಸಬೇಡಿರಿ.*

6. ಅಪೊಸ್ತಲರ ಕೃತ್ಯಗಳು 3:16 ಓದಿರಿ. ಅದ್ಭುತಕಾರ್ಯಗಳು ಹೇಗೆ ಜರುಗುತ್ತವೆ?

***ಅಪೊಸ್ತಲರ ಕೃತ್ಯಗಳು 3:16*** *– ನೀವು ನೋಡುವಂಥ ನಿಮಗೆ ಗುರುತಿರುವಂಥ ಈ ಮನುಷ್ಯನು ನೆಟ್ಟಗಾದದ್ದಕ್ಕೆ ಆತನ ಹೆಸರಿನಲ್ಲಿ ಇಟ್ಟ ನಂಬಿಕೆಯೇ ಕಾರಣ; ಆ ಹೆಸರೇ ಇವನನ್ನು ಬಲಪಡಿಸಿತು. ಆತನ ಮೂಲಕ ಉಂಟಾಗಿರುವ ನಂಬಿಕೆಯೇ ಇವನಿಗೆ ನಿಮ್ಮೆಲ್ಲರ ಮುಂದೆ ಪೂರ್ಣಕ್ಷೇಮವನ್ನು ಕೊಟ್ಟಿತು.*

7. ಹೊಸ ಒಡಂಬಡಿಕೆಯಲ್ಲಿ, ಅಪೊಸ್ತಲರಲ್ಲದವರು ಅದ್ಭುತಕಾರ್ಯಗಳನ್ನು ಮಾಡಿದ ನಿದರ್ಶನಗಳಿವೆಯೇ?

8. 1 ಕೊರಿಂಥದವರಿಗೆ 1:7 ಓದಿರಿ. ಅದ್ಭುತಕಾರ್ಯಗಳನ್ನು ಮಾಡುವ ವರವು ಯಾವಾಗ ನಿಂತುಹೋಗುತ್ತದೆ?

***1 ಕೊರಿಂಥದವರಿಗೆ 1:7*** *– ಹೀಗೆ ನೀವು ಯಾವ ಕೃಪಾವರದಲ್ಲಿಯೂ ಕೊರತೆಯಿಲ್ಲದವರಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇದ್ದೀರಿ.*

## ಉತ್ತರಗಳು

1. ಅದ್ಭುತಕಾರ್ಯ ಎಂದರೆ ಏನು?

*ದೈವೀಕ ಶಕ್ತಿಯಿಂದಲೇ ನಡೆಯಿತೆಂದು ಅರಿವಾಗುವಂತೆ ನಡೆಯುವ ಅಸಾಧಾರಣವಾದ ಅಥವ ಅಸ್ವಾಭಾವಿಕವಾದ ಘಟನೆ*

2. ಮಾರ್ಕನು 2:10–12 ಓದಿರಿ. ಯೇಸುವು ಮಾಡಿದ ಅದ್ಭುತಕಾರ್ಯದಿಂದ ಆತನಿಗೆ ಯಾವ ಅಧಿಕಾರವಿದೆ ಎಂದು ತಿಳಿಯುತ್ತದೆ?

*ಪಾಪಗಳನ್ನು ಕ್ಷಮಿಸಿಬಿಡುವ ಅಧಿಕಾರವಿದೆ*

3. ಮಾರ್ಕನು 16:15–18 ಓದಿರಿ. ವಿಶ್ವಾಸಿಗಳಾಗಿರುವ ನಾವು ಏನು ಮಾಡಬೇಕಾಗಿದೆ?

*ಸುವಾರ್ತೆಯನ್ನು ಸಾರಬೇಕು, ನಂಬಿದವರಿಗೆ ದೀಕ್ಷಾಸ್ನಾನ ಕೊಡಬೇಕು, ದೆವ್ವಬಿಡಿಸಬೇಕು, ಅನ್ಯಭಾಷೆ ಮಾತನಾಡಬೇಕು ಮತ್ತು ರೋಗಿಗಳನ್ನು ಸ್ವಸ್ಥಮಾಡಬೇಕು.*

4. ಅಪೊಸ್ತಲರ ಕೃತ್ಯಗಳು 8:5–8 ಮತ್ತು 12 ಓದಿರಿ. ಜನರು ಏನು ನೋಡಿದರು ಮತ್ತು ಅವರ ಪ್ರತಿಕ್ರಿಯೆ ಏನಾಗಿತ್ತು?

*ಅವರು ಅದ್ಭುತಕಾರ್ಯಗಳನ್ನು ನೋಡಿದರು (ವಚನ 7), ಅವರು ಯೇಸುವನ್ನು ನಂಬಿದರು ಮತ್ತು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು (ವಚನ 12)*

5. ಅಪೊಸ್ತಲರ ಕೃತ್ಯಗಳು 3:12 ಓದಿರಿ. ಅಪೊಸ್ತಲನಾದ ಪೇತ್ರನು, ತನ್ನಿಂದಾದ ಅದ್ಭುತಕಾರ್ಯದಲ್ಲಿ ತನ್ನ ದೇವಭಕ್ತಿಯ ಕುರಿತು ಏನು ಹೇಳುತ್ತಾನೆ.

*ಸ್ವಂತ ಶಕ್ತಿಯಿಂದಾಗಲೀ ದೇವಭಕ್ತಿಯಿಂದಾಗಲೀ ಆ ಮನುಷ್ಯನು ಸ್ವಸ್ಥವಾಗಲಿಲ್ಲ, ಬದಲಾಗಿ ದೇವರ ಶಕ್ತಿಯ ನಿಮಿತ್ತದಿಂದಲೇ*

6. ಅಪೊಸ್ತಲರ ಕೃತ್ಯಗಳು 3:16 ಓದಿರಿ. ಅದ್ಭುತಕಾರ್ಯಗಳು ಹೇಗೆ ಜರುಗುತ್ತವೆ?

*ಯೇಸುವಿನ ಹೆಸರಿನಲ್ಲಿ ಇಟ್ಟ ನಂಬಿಕೆಯೇ ಕಾರಣ*

7. ಹೊಸ ಒಡಂಬಡಿಕೆಯಲ್ಲಿ, ಅಪೊಸ್ತಲರಲ್ಲದವರು ಅದ್ಭುತಕಾರ್ಯಗಳನ್ನು ಮಾಡಿದ ನಿದರ್ಶನಗಳಿವೆಯೇ?

   ***ಹೌದು. ಯೇಸುವಿನ ಒಬ್ಬ ಅನಾಮಧೇಯ ಶಿಷ್ಯನು (ಮಾರ್ಕನು 9:38:38–39), ಫಿಲಿಪ್ಪನು (ಅಪೊಸ್ತಲರ ಕೃತ್ಯಗಳು 8:5–7), ಅನನೀಯನು (ಅಪೊಸ್ತಲರ ಕೃತ್ಯಗಳು 9:10–18)***

8. 1 ಕೊರಿಂಥದವರಿಗೆ 1:7 ಓದಿರಿ. ಅದ್ಭುತಕಾರ್ಯಗಳನ್ನು ಮಾಡುವ ವರವು ಯಾವಾಗ ನಿಂತುಹೋಗುತ್ತದೆ?

   ***ಯೇಸುಕ್ರಿಸ್ತನ ಎರಡನೆಯ ಬರೋಣದಲ್ಲಿ***

## ಈ ಪಾಠದಲ್ಲಿರುವ ಹೆಚ್ಚಿನ ವಾಕ್ಯಭಾಗಗಳು

***ಮಾರ್ಕ 9:38–39*** *– ಯೋಹಾನನು ಆತನಿಗೆ – ಬೋಧಕನೇ, ಯಾವನೋ ಒಬ್ಬನು ನಿನ್ನ ಹೆಸರನ್ನು ಹೇಳಿ ದೆವ್ವ ಬಿಡಿಸುವದನ್ನು ನಾವು ಕಂಡು ಅವನು ನಮಗೆ ಸೇರಿದವನಲ್ಲವಾದ್ದರಿಂದ ಅವನಿಗೆ ಅಡ್ಡಿಮಾಡಿದೆವು ಎಂದು ಹೇಳಲಾಗಿ [39] ಯೇಸು – ಅವನಿಗೆ ಅಡ್ಡಿ ಮಾಡಬೇಡಿರಿ; ನನ್ನ ಹೆಸರಿನ ಮೇಲೆ ಮಹತ್ತನ್ನು ಮಾಡಿ ಏಕಾಏಕಿ ನನ್ನನ್ನು ದೂಷಿಸುವವನು ಒಬ್ಬನೂ ಇಲ್ಲ.*

***ಅಪೊಸ್ತಲರ ಕೃತ್ಯಗಳು 9:10–18*** *– ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನಿದ್ದನು; ಕರ್ತನು ದರ್ಶನದಲ್ಲಿ – ಅನನೀಯನೇ, ಎಂದು ಅವನನ್ನು ಕರೆಯಲು ಅವನು – ಕರ್ತನೇ, ಇಗೋ, ಇದ್ದೇನೆ ಅಂದನು. [11] ಕರ್ತನು ಅವನಿಗೆ – ನೀನೆದ್ದು ನೆಟ್ಟನೇಬೀದಿ ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬವನನ್ನು ವಿಚಾರಿಸು; [12] ಅವನು ಪ್ರಾರ್ಥನೆ ಮಾಡುತ್ತಾನೆ. ಮತ್ತು ಅನನೀಯನೆಂಬ ಒಬ್ಬ ಮನುಷ್ಯನು ಒಳಗೆ ಬಂದು ತನಗೆ ತಿರಿಗಿ ಕಣ್ಣುಕಾಣುವಂತೆ ತನ್ನ ಮೇಲೆ ಕೈಯಿಡುವದನ್ನು ನೋಡಿದ್ದಾನೆ ಎಂದು ಹೇಳಿದನು. [13] ಅದಕ್ಕೆ ಅನನೀಯನು – ಕರ್ತನೇ, ಆ ಮನುಷ್ಯನು ಯೆರೂಸಲೇಮಿನಲ್ಲಿ ನಿನ್ನನ್ನು ನಂಬಿದ ದೇವಜನರಿಗೆ ಎಷ್ಟೋ ಕೇಡನ್ನುಂಟುಮಾಡಿದನೆಂದು ಅವನ ವಿಷಯವಾಗಿ ಅನೇಕರಿಂದ ಕೇಳಿದ್ದೇನೆ; [14] ಮತ್ತು ಇಲ್ಲಿಯೂ ನಿನ್ನ ಹೆಸರನ್ನು ಸ್ಮರಿಸುವವರೆಲ್ಲರಿಗೆ ಬೇಡಿ ಹಾಕಿಸುವ ಅಧಿಕಾರವನ್ನು ಮಹಾಯಾಜಕರಿಂದ ಹೊಂದಿದ್ದಾನೆ ಅಂದನು. [15] ಕರ್ತನು ಅವನಿಗೆ – ನೀನು ಹೋಗು; ಆ ಮನುಷ್ಯನು ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ. [16] ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆ ಅನುಭವಿಸಬೇಕೆಂಬದನ್ನು ನಾನೇ ಅವನಿಗೆ ತೋರಿಸುವೆನು ಎಂದು ಹೇಳಿದನು. [17] ಆಗ ಅನನೀಯನು ಹೊರಟು ಆ ಮನೆಯೊಳಗೆ ಹೋಗಿ ಅವನ ಮೇಲೆ ತನ್ನ ಕೈಗಳನ್ನಿಟ್ಟು – ಸಹೋದರನಾದ ಸೌಲನೇ, ನೀನು ಬಂದ ದಾರಿಯಲ್ಲಿ ನಿನಗೆ ಕಾಣಿಸಿಕೊಂಡ ಕರ್ತನಾದ ಯೇಸು ನಿನಗೆ ಕಣ್ಣು ಕಾಣುವಂತೆಯೂ ನೀನು ಪವಿತ್ರಾತ್ಮಭರಿತನಾಗುವಂತೆಯೂ ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆಂದು ಹೇಳಿದನು. [18] ಕೂಡಲೆ ಅವನ ಕಣ್ಣುಗಳಿಂದ ಪರೆಗಳಂತೆ ಏನೋ ಬಿದ್ದು ಅವನ ಕಣ್ಣು ಕಾಣಿಸಿದವು. ಅವನು ಎದ್ದು ದೀಕ್ಷಾಸ್ನಾನಮಾಡಿಸಿಕೊಂಡನು. ತರುವಾಯ ಊಟಮಾಡಿ ಬಲ ಹೊಂದಿದನು.*

# ಪಾಠ 4

# ಸದ್ಭಕ್ತರ ಸಹವಾಸದಲ್ಲಿರುವ ಶಕ್ತಿ

*ಡ್ವೂಣ್ ಕ್ರೊ*

ಇಂದು ನಾವು ಸದ್ಭಕ್ತರ ಸಹವಾಸದಲ್ಲಿರುವ ಶಕ್ತಿಯ ಕುರಿತು ಮಾತನಾಡಲಿದ್ದೇವೆ. ಇಡೀ ಬೈಬಲ್ ಇದರ ಕುರಿತು ಮಾತನಾಡುತ್ತದೆ ಎನ್ನುವುದನ್ನು ನೀವು ಆಲೋಚಿಸಿರಿ. ಉದಾಹರಣೆಗೆ, ಗ್ರೀಕ್ ಭಾಷೆಯ ಎಕ್ಲಿಸಿಯಾ ಎನ್ನುವ ಪದಕ್ಕೆ "ಸಭೆ" ಎನ್ನುತ್ತೇವೆ ಮತ್ತು "ಕರೆಯಲ್ಪಟ್ಟವರ ಗುಂಪು" ಎಂದು ಅರ್ಥವಾಗುತ್ತದೆ. ನೀವು ದೇವರ ವಾಕ್ಯದಲ್ಲಿ ನೋಡುವಾಗ, ಸಭೆ ಅಥವ ದೇವಜನರು ಕೂಡಿಬರಬೇಕು ಎಂದು ಹೇಳಿಯದೆ. ಅವರು ಪ್ರತಿದಿನ ಒಟ್ಟಾಗಿ ಪ್ರಾರ್ಥಿಸಬೇಕು ಮತ್ತು ಒಬ್ಬರನ್ನೊಬ್ಬರು ಪ್ರೋತ್ಸಾಹಿಸಬೇಕು. ಅವರು ಜೊತೆಯಾಗಿ ನಡೆಯುವಾಗ ಸದ್ಭಕ್ತರ ಸಹವಾಸದ ನಿಮಿತ್ತವಾಗಿ ಪ್ರೋತ್ಸಾಹ ಹೊಂದುತ್ತಾರೆ. ನೀವು "ಹಿರಿಯರು" ಎನ್ನುವ ಪದವನ್ನು ಗಮನಿಸುವುದಾದರೆ, ಅದು ದೇವರ ವಾಕ್ಯದಲ್ಲಿ ಅನೇಕ ಬಾರಿ ಉಪಯೋಗಿಸಲ್ಪಟ್ಟಿದೆ ಮತ್ತು ಅದು ವಯಸ್ಸಿನಲ್ಲಿ ಹಿರಿಯರಾದವರನ್ನು, ಪ್ರಬುದ್ಧರನ್ನು, ಕ್ರಿಸ್ತನು ನಡೆದಂತೆ ನಡೆದವರನ್ನು ಮತ್ತು ತಮ್ಮ ಕುಟುಂಬ ಹಾಗೂ ದಾಂಪತ್ಯ ಜೀವಿತದಲ್ಲಿ ಸಫಲರಾದವರನ್ನು ಕುರಿತು ವಿವರಿಸುತ್ತದೆ. ನನ್ನ ದಾಂಪತ್ಯ ಜೀವಿತದಲ್ಲಿ ಸಮಸ್ಯೆಯಿರುವುದಾದರೆ, ದೈವಭಕ್ತರು ಮತ್ತು ಅನೇಕ ವರ್ಷಗಳಕಾಲ ದೈವಿಕ ಜ್ಞಾನವನ್ನು ಪಡೆದುಕೊಂಡವರ ಬಳಿಗೆ ಹೋಗಿ ಸಲಹೆ ಕೇಳಲು ಬಯಸುತ್ತೇನೆ.

ದೇವರ ವಾಕ್ಯವು ಕ್ರಿಸ್ತನ ದೇಹವನ್ನು ಭೌತಿಕ ದೇಹವೆಂಬಂತೆ ವಿವರಿಸುತ್ತದೆ. ಅದಕ್ಕೆ ಕೈಗಳು, ಕಿವಿಗಳು, ಮತ್ತು ಇತರ ಅಂಗಗಳು ಇವೆ. ನಾವೆಲ್ಲರು ಪರಸ್ಪರರ ಭಾಗವಾಗಿದ್ದೇವೆ. ಮತ್ತು ಇತರರ ಅಂಗವಾಗಿರುವಾಗಲೇ, ನಾವು ಪರಸ್ಪರರಿಂದ ಶಕ್ತಿಯನ್ನು ಪಡೆದುಕೊಳ್ಳುತ್ತೇವೆ. ದೇಹದ ಪ್ರತಿಯೊಂದು ಅಂಗ, ಮೂಳೆಕಟ್ಟು (ಲಿಗಮೆಂಟ್) ಮುಂತಾಗಿ ಎಲ್ಲವು ತನ್ನದೇ ಆದ ಬಲವನ್ನೂ ಜ್ಞಾನವನ್ನೂ ನೀಡಲು ಸಾಧ್ಯವಾದ ವರಗಳು ಮತ್ತು ತಲಾಂತುಗಳನ್ನು ಹೊಂದಿವೆ.

ಯಾಕೋಬನು 5:16ರಲ್ಲಿ ಹೀಗೆ ಹೇಳಿದೆ, *"...ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ".* ದೈವೀಕ

ಸಂಬಂಧಗಳಲ್ಲಿರುವ ಬಲದ ಕುರಿತು ಶಾಸ್ತ್ರಗಳು ಹೇಳುವ ಉದಾಹರಣೆಗಳಲ್ಲಿ ಇದು ಒಂದು. ಕ್ರಿಸ್ತನ ದೇಹದಲ್ಲಿ ಒಂದು ಸಂಗತಿ ತಪ್ಪಿಹೋಗಿದೆ ಎನ್ನುವುದು ನಿಮಗೆ ಗೊತ್ತೇ. ವಿಶ್ವಾಸಿಯು ಯಾಜಕತ್ವ ಹೊಂದಿರುವ ಕಾರಣ ನಾವು ಇತರರ ಬಳಿಗೆ ಹೋಗದೆ ನೇರವಾಗಿ ದೇವರ ಬಳಿಗೆ ಹೋಗಬಹುದು ಎನ್ನುವ ಮಾತಿಗೆ ನಾವು ಹೆಚ್ಚು ಪ್ರಾಶಸ್ತ್ಯ ನೀಡಿರುವ ಕಾರಣವಾಗಿ ನಾವು ಕೆಲವು ಸಂಗತಿಗಳನ್ನು ಕಳೆದುಕೊಂಡಿದ್ದೇವೆ ಎಂದು ನಾನು ಯೋಚಿಸುತ್ತೇನೆ. ನಾವು ನಮ್ಮ ಪಾಪಗಳನ್ನು ಒಬ್ಬರಿಗೋಸ್ಕರ ಒಬ್ಬರು ಅರಿಕೆ ಮಾಡಬೇಕೆಂದು ಬೈಬಲ್ ಹೇಳುತ್ತದೆ. ನನಗೆ ಡಾ॥ ಲೊರೆನ್ ಲೂಯಿಸ್ ಎಂಬ ಸ್ನೇಹಿತರಿದ್ದಾರೆ. ಅವರು ವಯಸ್ಸಿನಲ್ಲಿ ಹಿರಿಯರಾಗಿದ್ದಾರೆ ಮತ್ತು ನಾವು ಸಾಕಷ್ಟು ಸಮಯವನ್ನು ಜೊತೆಯಲ್ಲಿ ಕಳೆದಿದ್ದೇವೆ. ಅವರು ಗ್ರೀಕ್‌ಭಾಷಾಪಂಡಿತರು ಮತ್ತು ಗ್ರೀಕ್ ಬೈಬಲ್‌ಅನ್ನು ನೇರವಾಗಿ ಓದಬಲ್ಲವರಾಗಿದ್ದಾರೆ. ದೇವರ ವಾಕ್ಯದಲ್ಲಿ ನನಗೆ ತಿಳಿಯದೆ ಹೋದದ್ದನ್ನು ಅವರ ಬಳಿಯಲ್ಲಿ ಕೇಳಿ ಗ್ರೀಕ್‌ಭಾಷೆಯಲ್ಲಿ ಯಾವ ಅರ್ಥವಿದೆ ಎಂದು ತಿಳಿದುಕೊಂಡಿದ್ದೇನೆ. ಗ್ರೀಕ್‌ಭಾಷೆಯ ವ್ಯಾಕರಣದಲ್ಲಿ ಕಾಲಗಳ ಕುರಿತು ಕೇಳಿದ್ದೂ ಇದೆ ಮತ್ತು ನನ್ನ ಸತ್ಯವೇದಾಧ್ಯಯನದಲ್ಲಿ ಅವರು ನನಗೆ ಬಹಳ ಸಹಾಯ ಮಾಡಿದ್ದಾರೆ. ಅನೇಕ ತಾಸುಗಳನ್ನು ಅವರ ಬಳಿಯಲ್ಲಿ ಕಳೆದದ್ದು ಉಂಟು. ಅವರು ಜ್ಞಾನಿಗಳು, ದೈವಭಕ್ತಿಯುಳ್ಳವರು, ಮತ್ತು ದಾಂಪತ್ಯ ಜೀವಿತದಲ್ಲಿ ಸೌಹಾರ್ದತೆಂುಸವಿಯನ್ನುಂಡವರು. ಅವರಿಗೆ ಒಳ್ಳೆಯ ಕುಟುಂಬವಿದೆ. ಮತ್ತು ನಮ್ಮೆಲ್ಲರ ಜೀವಿತದಲ್ಲಿ ತಪ್ಪುಗಳನ್ನು ಒಪ್ಪಿಕೊಳ್ಳುವ ಸಂದರ್ಭಗಳು ಇರುವುದು ಸಹಜ. ನಾವು ದೇವರ ಮುಂದೆ ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಬೇಕು ಎಂದು ಬೈಬಲ್ ಹೇಳುತ್ತದೆ, ಮತ್ತು ತಪ್ಪುಗಳನ್ನು ಕ್ಷಮಿಸಲು ಸಾಧ್ಯವಿಲ್ಲದವರ ಬಳಿ ನಿಮ್ಮ ತಪ್ಪುಗಳನ್ನು ಹೇಳಿಕೊಳ್ಳಬೇಕೆಂದು ನಾನಿಲ್ಲಿ ಹೇಳುತ್ತಿಲ್ಲ, ಯಾಕೆಂದರೆ ನಾವು ದೇವರ ಬಳಿಯಲ್ಲಿ ನೇರವಾಗಿ ಹೋಗಬೇಕೆನ್ನುವುದು ಸರಿಯೇ. ಆದರೆ ನಮ್ಮ ಜೀವಿತದಲ್ಲಿ ನಾವು ಪರಸ್ಪರರಿಗೆ ಬದ್ಧರಾಗಿರಬೇಕು.

ದೈವಿಕ ಸಂಬಂಧಗಳ ಬಲವೆಂದರೆ, ನಮ್ಮ ಜೀವನದಲ್ಲಿ ಉತ್ತರದಾಯಿತ್ವವನ್ನುತರುವ ಮತ್ತು ನಮ್ಮನ್ನು ಕರ್ತನಲ್ಲಿ ಪ್ರೋತ್ಸಾಹಿಸುವ ಬಲವಾಗಿದೆ. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ನೋಡುವಂತೆ, *"ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ, ನಿಮ್ಮಲ್ಲಿ ಒಬ್ಬರಾದರೂ ಪಾಪದಿಂದ ಮೋಸಹೋಗಿ ಕಠಿಣರಾಗದಂತೆ ಪ್ರತಿನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸಿರಿ"* ಎಂದು ಬೈಬಲ್ ಹೇಳುತ್ತದೆ. ಇವೆಲ್ಲವು ಸದ್ಭಕ್ತ ಸಂಬಂಧಗಳ ಕುರಿತಾಗಿಯೇ ಮಾತನಾಡುತ್ತವೆ. ಇನ್ನೊಂದು ಮಗ್ಗುಲಲ್ಲಿ ನೋಡುವುದಾದರೆ, ದುರಾಚಾರಿಗಳ ಸಹವಾಸದ ವಿರುದ್ಧ ಬೈಬಲ್ ನಮ್ಮನ್ನು ಎಚ್ಚರಿಸುತ್ತದೆ ಮತ್ತು ಅಂಥ ಸಹವಾಸವು ಹೇಗೆ ನಮ್ಮ ಮನಸ್ಸು ಮತ್ತು ಆಲೋಚನೆಗಳನ್ನು ಕೆಡಿಸುತ್ತವೆ ಎಂದು ತಿಳಿಸುತ್ತದೆ. ನಾವು ಸದ್ಭಕ್ತರ ಸಮಾಲೋಚನೆಗಳಿಲ್ಲದೆ, ಅಜಾಗ್ರತೆಯಿಂದಿರುವ ಕಾರಣವಾಗಿ ನಮಗೆ ತಿಳಿಯುವ ಮೊದಲೇ, ನಾವು ಯಾವ ಸನ್ನಿವೇಶಗಳಲ್ಲಿ ಇರಬಾರದೋ ಅಲ್ಲಿಗೆ ನಮ್ಮನ್ನು ನಡೆಸಿಬಿಡುವಂತಹ ಸಾಧ್ಯತೆಯಿದೆ.

ನೀವು ಕ್ರೈಸ್ತಜೀವನವನ್ನು ನಡೆಸುವಾಗ, ಸದ್ಭಕ್ತ ಸಂಬಂಧಗಳ ಸಂಘದಲ್ಲಿರಲು ಮನಸ್ಸುಮಾಡಿರಿ ಮತ್ತು ನಿಮ್ಮನ್ನು ನಕಾರಾತ್ಮಕ ದಿಕ್ಕಿನಲ್ಲಿ ನಡೆಸುವವರಿಂದ ದೂರವಿರಿ. ನಮ್ಮ ಜೀವಿತದಲ್ಲಿ ಭಕ್ತರಾದ ವಿಶ್ವಾಸಿಗಳು ನಮ್ಮ ಜೀವನದ ಭಾಗವಾಗಿರುವುದು ಬಹಳ ಅವಶ್ಯವಾಗಿದೆ, ಯಾಕೆಂದರೆ ಅವರು ನಮ್ಮನ್ನು ಹರಿತ ಮಾಡುತ್ತಾರೆ (ಜ್ಞಾನೋಕ್ತಿಗಳು 27:17) ಮತ್ತು ನಾವು ಜವಾಬ್ದಾರಿಯಿಂದ ನಡೆದುಕೊಳ್ಳಲು ಸಾಧ್ಯವಾಗುತ್ತದೆ. ನೀವು ಈ ವಿಷಯಗಳನ್ನು ಧ್ಯಾನ ಮಾಡುತ್ತಾ, ಆಲೋಚಿಸುತ್ತಾ ಇರಿ ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. 1 ಕೊರಿಂಥದವರಿಗೆ 15:33 ಓದಿರಿ. ಈ ವಚನವು ನಮಗೆ ಸಹವಾಸಗಳ ಕುರಿತು ಏನು ಹೇಳುತ್ತದೆ?

   ***1 ಕೊರಿಂಥದವರಿಗೆ 15:33** – ಮೋಸ ಹೋಗಬೇಡಿರಿ; ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ.*

2. 1 ಕೊರಿಂಥದವರಿಗೆ 12:12 ಓದಿರಿ. ಈ ವಚನವು ನಮ್ಮ ಕ್ರೈಸ್ತ ನಡವಳಿಕೆಯ ಕುರಿತು ಏನು ಹೇಳುತ್ತದೆ?

   ***1 ಕೊರಿಂಥದವರಿಗೆ 12:12** – ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ, ಹೇಗೆ ದೇಹದ ಅಂಗಗಳೆಲ್ಲವೂ ಅನೇಕವಾಗಿದ್ದು ಒಂದೇ ದೇಹವಾಗಿರುವದೋ, ಹಾಗೆಯೇ ಕ್ರಿಸ್ತನು.*

3. ಇಬ್ರಿಯರಿಗೆ 10:24 ಓದಿರಿ. ಈ ವಚನದ ಪ್ರಕಾರ ನಾವು ಹೇಗೆ ಸದ್ಭಕ್ತರಾಗಿ ಒಬ್ಬರಸಂಗಡಲೊಬ್ಬರು ಇರಬೇಕೆಂದು ಹೇಳುತ್ತದೆ?

   ***ಇಬ್ರಿಯರಿಗೆ 10:24–25** – ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯ ಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ. [25] ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟು ಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ.*

4. ಇಬ್ರಿಯರಿಗೆ 10:25 ಓದಿರಿ. ಈ ವಚನದ ಆಧಾರದ ಮೇಲೆ ಇತರರೊಂದಿಗೆ ನಮ್ಮ ನಡವಳಿಕೆ ಹೇಗಿರಬೇಕೆಂದು ತಿಳಿಸುತ್ತದೆ?

5. ಜ್ಞಾನೋಕ್ತಿಗಳು 5:22–23 ಓದಿರಿ. ನಾವು ದುಷ್ಟರ ಸಹವಾಸ ಮಾಡದಂತೆ ನಮ್ಮ ಹೃದಯಗಳನ್ನು ಯಾಕೆ ಕಾಪಾಡಿಕೊಳ್ಳಬೇಕು?

   ***ಜ್ಞಾನೋಕ್ತಿಗಳು 5:22–23** – ದುಷ್ಟನ ದುಷ್ಕೃತ್ಯಗಳೇ ಅವನನ್ನು ಆಕ್ರಮಿಸುವವು, ಅವನ ಪಾಪಪಾಶಗಳೇ ಅವನನ್ನು ಬಂಧಿಸುವವು. [23] ಸದುಪದೇಶದ ಕೊರತೆಯಿಂದಲೇ ಸಾಯುವನು, ತನ್ನ ಅತಿಮೂರ್ಖತನದಿಂದ ಭ್ರಾಂತನಾಗುವನು.*

6. 2 ತಿಮೊಥೆಯನಿಗೆ 2:22 ಓದಿರಿ. ನಾವು ನೀತಿ, ವಿಶ್ವಾಸ, ಪ್ರೀತಿ ಮತ್ತು ಸಮಾಧಾನವನ್ನು ಯಾರೊಂದಿಗೆ ಸೇರಿ ಸಂಪಾದಿಸಬೇಕು?

***2 ತಿಮೊಥೆಯನಿಗೆ 2:22*** *– ನೀನು ಯೌವನದ ಇಚ್ಛೆಗಳಿಗೆ ದೂರವಾಗಿರು; ನೀತಿ ವಿಶ್ವಾಸ ಪ್ರೀತಿ ಮತ್ತು ಸಮಾಧಾನವನ್ನು ಸಂಪಾದಿಸುವದಕ್ಕೆ ಶುದ್ಧ ಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವರ ಸಂಗಡ ಪ್ರಯಾಸಪಡು.*

7. ಇಬ್ರಿಯರಿಗೆ 13:7 ಓದಿರಿ. ಇದರ ಪ್ರಕಾರ ನಾವು ಯಾರನ್ನು ಜ್ಞಾಪಕ ಮಾಡಿಕೊಳ್ಳಬೇಕು, ಯಾರ ನಡವಳಿಕೆಯನ್ನು ಅನುಸರಿಸಬೇಕು?

*ಇಬ್ರಿಯರಿಗೆ 13:7 – ಅವರು ಯಾವ ರೀತಿಯಿಂದ ನಡೆದುಕೊಂಡು ಪ್ರಾಣಬಿಟ್ಟರೆಂಬದನ್ನು ಆಲೋಚಿಸಿರಿ; ಅವರ ನಂಬಿಕೆಯನ್ನು ಅನುಸರಿಸಿರಿ.*

## ಉತ್ತರಗಳು

1. 1 ಕೊರಿಂಥದವರಿಗೆ 15:33 ಓದಿರಿ. ಈ ವಚನವು ನಮಗೆ ಸಹವಾಸಗಳ ಕುರಿತು ಏನು ಹೇಳುತ್ತದೆ?

   *ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ.*

2. 1 ಕೊರಿಂಥದವರಿಗೆ 12:12 ಓದಿರಿ. ಈ ವಚನವು ನಮ್ಮ ಕ್ರೈಸ್ತ ನಡವಳಿಕೆಯ ಕುರಿತು ಏನು ಹೇಳುತ್ತದೆ?

   *ನಮ್ಮ ಭೌತಿಕ ದೇಹದಂತೆಯೇ, ನಮಗೆಲ್ಲರಿಗೂ ಕ್ರಿಸ್ತನ ದೇಹದ ಇತರ ಅಂಗಗಳ ಅವಶ್ಯಕತೆಯಿದೆ*

3. ಇಬ್ರಿಯರಿಗೆ 10:24 ಓದಿರಿ. ಈ ವಚನದ ಪ್ರಕಾರ ನಾವು ಹೇಗೆ ಸದ್ಭಕ್ತರಾಗಿ ಒಬ್ಬರಸಂಗಡಲೊಬ್ಬರು ಇರಬೇಕೆಂದು ಹೇಳುತ್ತದೆ?

   *ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ*

4. ಇಬ್ರಿಯರಿಗೆ 10:25 ಓದಿರಿ. ಈ ವಚನದ ಆಧಾರದ ಮೇಲೆ ಇತರರೊಂದಿಗೆ ನಮ್ಮ ನಡವಳಿಕೆ ಹೇಗಿರಬೇಕೆಂದು ತಿಳಿಸುತ್ತದೆ?

   *ನಾವು ಸಭೆಯಾಗಿ ಕೂಡಿಕೊಂಡು ಅನ್ಯೋನ್ಯತೆಯಲ್ಲಿರಬೇಕು ಮತ್ತು ಒಬ್ಬರನ್ನೊಬ್ಬರು ಪ್ರೋತ್ಸಾಹಿಸಬೇಕು*

5. ಜ್ಞಾನೋಕ್ತಿಗಳು 5:22–23 ಓದಿರಿ. ನಾವು ದುಷ್ಟರ ಸಹವಾಸ ಮಾಡದಂತೆ ನಮ್ಮ ಹೃದಯಗಳನ್ನು ಯಾಕೆ ಕಾಪಾಡಿಕೊಳ್ಳಬೇಕು?

   *ಅವರ ಅತಿಮೂರ್ಖತನದಿಂದಾಗಿ ನಾವು ದಾರಿತಪ್ಪದಂತೆ*

6. 2 ತಿಮೊಥೆಯನಿಗೆ 2:22 ಓದಿರಿ. ನಾವು ನೀತಿ, ವಿಶ್ವಾಸ, ಪ್ರೀತಿ ಮತ್ತು ಸಮಾಧಾನವನ್ನು ಯಾರೊಂದಿಗೆ ಸೇರಿ ಸಂಪಾದಿಸಬೇಕು?

   *ಶುದ್ಧಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವರ ಸಂಗಡ ಪ್ರಯಾಸಪಡಬೇಕು.*

7. ಇಬ್ರಿಯರಿಗೆ 13:7 ಓದಿರಿ. ಇದರ ಪ್ರಕಾರ ನಾವು ಯಾರನ್ನು ಜ್ಞಾಪಕ ಮಾಡಿಕೊಳ್ಳಬೇಕು, ಯಾರ ನಡವಳಿಕೆಯನ್ನು ಅನುಸರಿಸಬೇಕು?

***ನಿಮಗೆ ದೇವರ ವಾಕ್ಯವನ್ನು ತಿಳಿಸುವ ನಿಮ್ಮ ಸಭಾನಾಯಕರನ್ನು ಜ್ಞಾಪಕಮಾಡಿಕೊಳ್ಳಬೇಕು.***

# ಪಾಠ 5

# ಹಿಂಸೆ

***ಡ್ವೂಣ್ ಕ್ರೊ***

ಮತ್ತಾಯ 10:16–23ರಲ್ಲಿ, ಯೇಸುವು ತನ್ನ ಶಿಷ್ಯರನ್ನು ಪ್ರತಿರೋಧ ಎದುರಿಸಲು ಸಿದ್ಧಪಡಿಸುತ್ತಾ ತಮಗೆ ಪ್ರತಿರೋಧ ಬರುತ್ತದೆಂದು ಅವರು ತಿಳಿದಿರಬೇಕು ಎಂದು ಬಯಸಿದ್ದನು. "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೆ ಒಳಗಾಗುವರು" (2 ತಿಮೊಥೆ 3:12). ನೀವು ಅದನ್ನು ಗದರಿಸಲು ಸಾಧ್ಯವಾಗುವಂತದಲ್ಲ. ಅದಕ್ಕೆ ವೈರಿಯು ಕಾರಣನಾಗಿರುವುದು ಸಾಧ್ಯವಿರುವುದಾದರೂ ನ್ಯಾಯನೀತಿಗಳ ಪರವಾಗಿ ನಿಂತಾಗ ಹಿಂಸೆ ಬಂದೇ ಬರುತ್ತದೆ. ಕ್ರಿಸ್ತೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವವರಿಗೆ ಹಿಂಸೆ ಬರುವುದೆಂದು ಬೈಬಲ್ ಹೇಳುತ್ತದೆ. ಯೇಸುವು, *"ನೋಡಿರಿ, ತೋಳಗಳ ನಡುವೆ ಕುರಿಗಳನ್ನು ಹೊಗಿಸಿದಂತೆ ನಾನು ನಿಮ್ಮನ್ನು ಕಳುಹಿಸುತ್ತೇನೆ"* ಎಂದು ಹೇಳಿದ್ದಾನೆ. "ನೋಡಿರಿ" ಎನ್ನುವ ಪದವು, "ಇಲ್ಲಿ ನನ್ನ ಮಾತಿಗೆ ಗಮನ ಕೊಡಿರಿ. ತೋಳಗಳ ನಡುವೆ ಕುರಿಗಳಂತೆ ನಾನು ನಿಮ್ಮನ್ನು ಕಳುಹಿಸುತ್ತೇನೆ ಎನ್ನುವುದು ನಿಮಗೆ ಮನದಟ್ಟಾಗಬೇಕು" ಎನ್ನುವಂತಿದೆ. ನನಗೆ ತಿಳಿದಿರುವಂತೆ, ಕುರಿಗಳು ಅತ್ಯಂತ ಅಸಹಾಯಕವಾದ ಮತ್ತು ಎಲ್ಲಕ್ಕೂ ಸಹಾಯದ ಅವಶ್ಯಕತೆಯಿರುವ ಪ್ರಾಣಿಗಳು. ಕುರಿಗಳಿಗೆ ಹಾವಿನಂತೆ ವಿಷದ ಹಲ್ಲುಗಳಿಲ್ಲ–ಅಥವ ಇನ್ನಾವುದೇ ರಕ್ಷಣಾತ್ಮಕ ಸಾಧನಗಳಿಲ್ಲ. ಅದರ ರಕ್ಷಕನು ಕುರುಬನು ಮಾತ್ರ.

ತನ್ನ ಮಂದೆಯನ್ನು ತೋಳಗಳಿಂದ ರಕ್ಷಿಸುವುದು ಒಬ್ಬ ಕುರುಬನ ಜವಾಬ್ದಾರಿಯಾಗಿದೆ, ಆದರೆ ಯೇಸುವು ಇಲ್ಲಿ ವಿರುದ್ಧವಾದದ್ದನ್ನು ಹೇಳುತ್ತಿದ್ದಾನೆ: "ತೋಳಗಳ ನಡುವೆ ಕುರಿಗಳನ್ನು ಹೊಗಿಸಿದಂತೆ ನಾನು ನಿಮ್ಮನ್ನು ಕಳುಹಿಸುತ್ತೇನೆ". ಇದು ಆಶ್ಚರ್ಯವಾಗಿದೆಯಲ್ಲವೆ? ಹೀಗೆ ಹೇಳಲು, ತನ್ನ ಶಿಷ್ಯರು ಪ್ರತಿರೋಧಕ್ಕೆ ಸಿದ್ಧರಾಗಿರಬೇಕು ಎನ್ನುವುದೇ ಕಾರಣವಾಗಿದೆ. ಎಫೆಸ 6:12ರಲ್ಲಿ, *"ನಾವು ಹೋರಾಡುವದು ಮನುಷ್ಯಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ"* ಎಂದು ಬರೆದಿದೆ. ಪ್ರತಿರೋಧವಿರುವುದು ಸಹಜ. ಪ್ರತಿರೋಧವು ಕ್ರೈಸ್ತಜೀವಿತದ ಒಂದು ಭಾಗವಾಗಿದೆ ಮತ್ತು ನೀವದನ್ನು ತಿಳಿದಿರಬೇಕೆಂದು ಯೇಸುವು ಬಯಸುತ್ತಾನೆ. *"ಆದದರಿಂದ ನೀವು ಸರ್ಪಗಳಂತೆ ಜಾಣರೂ*

*ಆಗಿರ್ರಿ"* (ಮತ್ತಾಯ 10:16) ಎಂದು ನಮ್ಮನ್ನು ಸಿದ್ಧಪಡಿಸುತ್ತಾನೆ. "ಜಾಣತನ" ಎಂದರೆ ನೀವು ಯಾವುದೇ ಸಂದರ್ಭದಲ್ಲಿಯೂ, ಸಮಸ್ಯೆಗಳನ್ನು ಮೈಮೇಲೆ ಎಳೆದುಕೊಳ್ಳದೆ ಬಹಳ ಜಾಣ್ಮೆಯಿಂದ ನಡೆದುಕೊಳ್ಳಬೇಕು ಎಂದರ್ಥ. ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ಶುದ್ಧರೂ ಆಗಿರ್ರಿ.

ಯೇಸು ಮುಂದುವರೆದು, *"ಇದಲ್ಲದೆ ಜನರ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ"* (ಮತ್ತಾಯ 10:17) ಎಂದು ಹೇಳಿದನು. ವೈರಿಯು ಜನರನ್ನು ಉಪಯೋಗಿಸುತ್ತಾನೆ. ಎಫೆಸದವರಿಗೆ 2:2ರಲ್ಲಿ, *"ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ"* ಎಂದು ಬರೆದಿದೆ. ಸೈತಾನನನು ನಮ್ಮನ್ನು ವಿರೋಧಿಸಲು, ಯೇಸು ಕ್ರಿಸ್ತನ ಉದ್ದೇಶಗಳನ್ನು ವಿರೋಧಿಸಲು ಮತ್ತು ದೇವರ ವಾಕ್ಯವನ್ನು ವಿರೋಧಿಸಲು ಜನರನ್ನು ಉಪಯೋಗಿಸುತ್ತಾನೆ. *"ಇದಲ್ಲದೆ ಜನರ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ; ಅವರು ನಿಮ್ಮನ್ನು ನ್ಯಾಯವಿಚಾರಣೆಯ ಸಭೆಗಳಿಗೆ ಎಳಕೊಂಡು ಹೋಗುವರು; ತಮ್ಮ ಸಭಾಮಂದಿರಗಳಲ್ಲಿ ನಿಮ್ಮನ್ನು ಕೊರಡೆಗಳಿಂದ ಹೊಡೆಯುವರು"* (ಮತ್ತಾಯ 10:17). ಪೌಲನು, *"ಆತನ ಸೇವೆಯಲ್ಲಿ ಮಿತಿಮೀರಿ ಪೆಟ್ಟುಗಳನ್ನು ತಿಂದೆನು ಐದುಸಾರಿ ಯೆಹೂದ್ಯರಿಂದ ನನಗೆ ಒಂದು ಕಡಿಮೆ ನಾಲ್ವತ್ತು ಏಟುಗಳು ಬಿದ್ದವು"* (2 ಕೊರಿಂಥದವರಿಗೆ 11:23–24) ಎಂದು ಹೇಳಿದ್ದಾನೆ. ಯೇಸುವು, ನಿಮ್ಮನ್ನು ಅಧಿಪತಿಗಳ ಮುಂದಕ್ಕೂ ತೆಗೆದುಕೊಂಡು ಹೋಗುವರು–ಅಂದರೆ ಯೇಸು ಕ್ರಿಸ್ತನ ಉದ್ದೇಶಗಳನ್ನು ವಿರೋಧಿಸಲು ಕೆಲವೊಮ್ಮೆ ಅಧಿಕಾರಗಳನ್ನೂ ಉಪಯೋಗಿಸುವ ಸಾಧ್ಯತೆಯಿದೆ. ಯೇಸುವಿನ ನಿಮಿತ್ತವಾಗಿ, ನಿಮ್ಮನ್ನು ಅಧಿಪತಿಗಳ ಮುಂದಕ್ಕೂ ಅರಸುಗಳ ಮುಂದಕ್ಕೂ ಅವರಿಗೆ ಅಥವ ಅವರ ವಿರುದ್ಧವಾಗಿ ಸಾಕ್ಷಿಯಾಗುವುದಕ್ಕಾಗಿ ತೆಗೆದುಕೊಂಡು ಹೋಗುವರು.

ನಾನು ಸುವಾರ್ತೆ ಸಾರುವ ವಿಷಯದಲ್ಲಿ ಕಲಿಸುತ್ತಿದ್ದಾಗ ಮತ್ತು ದೇವರಿಂದ ದೂರವಾದವರಿಗೆ ಸುವಾರ್ತೆ ಹೇಳುವ ಸಂದರ್ಭದಲ್ಲಿ ಕರಪತ್ರ ಮತ್ತು ವೈಯಕ್ತಿಕ ಸಾಕ್ಷಿಯನ್ನು ಹೇಗೆ ಉಪಯೋಗಿಸಬಹುದೆಂದು ವಿವರಿಸುತ್ತಿದ್ದೆನು. ನಾನೇ ಅದನ್ನು ಮಾಡಿತೋರಿಸುವಂತೆ, ಕರಪತ್ರಗಳನ್ನು ಮುದ್ರಿಸಿ ಅದನ್ನು ಸುಮಾರು ಐವತ್ತರಿಂದ ನೂರು ಜನರಿಗೆ ಕಳುಹಿಸಿದೆ. ಅದಾದ ಒಂದೆರಡು ದಿನಗಳಲ್ಲಿ ನಮ್ಮದೆ ಊರಿನ ಮೇರಿ ಆ್ಯನ್ ಎಂಬ ಒಬ್ಬ ಸ್ತ್ರೀಯಿಂದ ನನಗೆ ಕರೆಬಂದಿತು. ಆಕೆ ಹೇಳಿದಳು, "ನೀನು ನನ್ನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ; ನೀನು ನನಗೆ ಯೇಸು ಕ್ರಿಸ್ತನ ಕುರಿತು ಹೇಳಲಾಗದು; ನಿನಗೆ ನನ್ನ ಹೆಸರು ಹೇಗೆ ಸಿಕ್ಕಿತು?" ನಾನು, "ಫೋನ್ ಡೈರೆಕ್ಟರಿಯಿಂದ ಸಿಕ್ಕಿತು" ಎಂದೆ. ಆಕೆ, "ನೀನು ಸುಳ್ಳು ಹೇಳುತ್ತಿ! ನನ್ನ ಹೆಸರು ಮತ್ತು ವಿಳಾಸ ಅದರಲ್ಲಿಲ್ಲ!" ಎಂದಳು. ಅದಕ್ಕೆ ನಾನು, "ಖಂಡಿತವಾಗಿಯೂ ಅಲ್ಲಿಯೇ ಸಿಕ್ಕಿತು" ಎಂದುತ್ತರಿಸಿದೆನು. ಅದಕ್ಕೆ ಆಕೆಯು, "ನಾಳೆ ನಿನ್ನನ್ನು ಪೋಲೀಸರು ಸಂಪರ್ಕಿಸುತ್ತಾರೆ" ಎಂದಳು. ನಾನು ನನ್ನಷ್ಟಕ್ಕೆ, *ಬೈಬಲ್ ನಿಜವಾಗಿಯೂ ಸತ್ಯವಾಗಿದೆಯೋ?*

ಎಂದುಕೊಂಡೆ. ಪೊಲೀಸರು ನನ್ನನ್ನು ಸಂಪರ್ಕಿಸಿದ್ದು ನಿಜ, ಮತ್ತು ಅವರು ಸುಮಾರು ಎರಡು ತಾಸುಗಳ ಕಾಲ ನನ್ನನ್ನು ವಿಚಾರಣೆಗೆ ಗುರಿಪಡಿಸಿದರು.

ನಾನು ಹೇಳುತ್ತಿರುವುದು ನಿಮಗೆ ತಿಳಿಯಿತೇ? ಹೊರಗೆ ಎಷ್ಟೋ ಅಪರಾಧಿಗಳು ಓಡಾಡಿಕೊಂಡಿರುವಾಗ, ಪೊಲೀಸರು ತಮ್ಮ ಎರಡು ತಾಸುಗಳನ್ನು ನನ್ನ ಬಳಿ ಕಳೆದರು. ಯಾಕೆ? ಯೇಸುಕ್ರಿಸ್ತನ ನಿಮಿತ್ತವಾಗಿ, ಮತ್ತು ಸುವಾರ್ತೆಯ ನಿಮಿತ್ತವಾಗಿ. ದೇವರ ವಾಕ್ಯವು ಸತ್ಯವಾಗಿದೆಯೋ? ನೀವು ದೇವರ ವಾಕ್ಯದ ಪ್ರಕಾರ ನಡೆಯುವುದಾದರೆ, ನೀವು ಧೈರ್ಯವಾಗಿ ಸಾಕ್ಷಿ ನುಡಿಯುವುದಾದರೆ, ನೀವು ಧೈರ್ಯವಾಗಿ ಯೇಸುವನ್ನು ಪ್ರಖ್ಯಾತಿಗೊಳಿಸುವುದಾದರೆ, ನೀವು ಜನರ ಮುಂದೆ ನೀತಿವಂತರಾಗಿ ಬಾಳುವುದಾದರೆ, ಪ್ರತಿರೋಧವನ್ನು ಎದುರಿಸುತ್ತೀರಿ. ದುಷ್ಟಶಕ್ತಿಗಳಿವೆ; ಒಳ್ಳೆಯ ಶಕ್ತಿಯೂ ಇದೆ. ತನ್ನ ಶಿಷ್ಯರು ಇದಕ್ಕೆ ಸಿದ್ಧರಾಗಿರಬೇಕು ಎನ್ನುವುದು ಕ್ರಿಸ್ತೇಸುವಿನ ಆಶಯ.

ಮತ್ತಾಯ 10:19ರಲ್ಲಿ ಯೇಸುವು ಹೀಗೆ ಹೇಳಿದ್ದಾನೆ, *"ಆದರೆ ಅವರು ನಿಮ್ಮನ್ನು ಒಪ್ಪಿಸಿಕೊಡುವಾಗ ಹೇಗೆ ಮಾತಾಡಬೇಕು ಏನು ಹೇಳಬೇಕು ಎಂದು ಚಿಂತೆಮಾಡಬೇಡಿರಿ; ಆಡತಕ್ಕ ಮಾತು ಆ ಗಳಿಗೆಯಲ್ಲಿ ನಿಮಗೆ ಸೂಚನೆಯಾಗುವದು".* ದೇವರಾತ್ಮನ ಸಹಾಯದಿಂದ, ಸ್ತೆಫನನಿಗೆ ಇದ್ದಂತೆ ನಿಮಗೆ ಜ್ಞಾನವಿರುತ್ತದೆ. ಅವನು ಮಾತನಾಡುವುದನ್ನು ಕಂಡು ಜನರು ಆಶ್ಚರ್ಯಪಟ್ಟರು. ಯೇಸುವು 22–23 ವಚನಗಳಲ್ಲಿ ಹೀಗೆ ಹೇಳುತ್ತಾನೆ, *"ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲರೂ ಹಗೆ ಮಾಡುವರು. ಆದರೆ ಕಡೇವರೆಗೂ ತಾಳುವವನು ರಕ್ಷಣೆ ಹೊಂದುವನು. ಒಂದು ಊರಲ್ಲಿ ನಿಮ್ಮನ್ನು ಹಿಂಸೆಪಡಿಸಿದರೆ ಮತ್ತೊಂದು ಊರಿಗೆ ಓಡಿಹೋಗಿರಿ".* ನೀವು ವಾಕ್ಯವನ್ನು ಕೇಳುವವರು ಮಾತ್ರವೇ ಆಗಿರದೆ ಅದರಂತೆ ನಡೆಯುವವರು ಆಗಿರುವುದಾದರೆ ನೀತಿಗೂ ಯೇಸುಕ್ರಿಸ್ತನ ಉದ್ದೇಶಗಳಿಗೂ ಪ್ರತಿರೋಧವನ್ನು ನೀವು ಎದುರಿಸುವಿರಿ.

ಸ್ವಲ್ಪ ಸಮಯದ ಹಿಂದೆ ನಾನು ಪಾರ್ಕಿನಲ್ಲಿದ್ದೆನು ಮತ್ತು ಅಲ್ಲಿ ಒಬ್ಬ ಹಿರಿಯರಾದ ಹೆಂಗಸು ಕುಳಿತಿರುವುದನ್ನು ನೋಡಿದೆನು. ನಾನು ನನ್ನ ಮನಸ್ಸಿನಲ್ಲಿ, *ಈಕೆ ನನಗೆ ಯಾವುದೇ ತೊಂದರೆ ಮಾಡುವುದಿಲ್ಲ!* ಅಂದುಕೊಂಡು, ಆ ಉಯ್ಯಾಲೆಯಲ್ಲಿ ಆಕೆಯ ಪಕ್ಕದಲ್ಲಿ ನಾನು ಕುಳಿತುಕೊಳ್ಳಬಹುದೇ ಎಂದು ಕೇಳಿದೆ ಮತ್ತು ಹಾಗೆ ಕುಳಿತುಕೊಂಡು ಮಾತನಾಡಲು ಪ್ರಾರಂಭಿಸಿದೆ. ಆಕೆಯ ಹೆಸರು ಜೇನ್ ಎಂದು ತಿಳಿದುಕೊಂಡು ನಾನು ಕೇಳಿದೆ, "ಜೇನ್‌ರವರೇ ನೀವು ಏನು ಕೆಲಸಮಾಡುತ್ತೀರಿ?" ಆಗ ಆಕೆ, "ಈಗ ನನಗೆ ವಯಸ್ಸಾಗಿದೆ. ನಾನು ನಿವೃತ್ತಿ ಹೊಂದಿದ್ದೇನೆ" ಎಂದನು. ಮತ್ತು ಆಕೆ ಕೇಳಿದರು, "ನೀವು ಏನು ಕೆಲಸ ಮಾಡುತ್ತೀರಿ?" "ನಾನು ಚರ್ಚ್‌ಗೆ ಸಂಬಂಧಿಸಿದಂತೆ ಸೇವಾಸಂಸ್ಥೆಯಲ್ಲಿ ತೊಡಗಿಕೊಂಡಿದ್ದೇನೆ" ಎನ್ನುತ್ತಿದ್ದಂತೆಯೇ ಆಕೆಯ ಮುಖಭಾವವು ಬದಲಾಯಿತು. "ನೀವು ನನ್ನ ಬಳಿಯಲ್ಲಿ ದೇವರ ಕುರಿತು ಮಾತನಾಡಬೇಡಿರಿ! ಯೇಸುವಿನ ಕುರಿತು ಹೇಳಬೇಡಿರಿ!" ಎಂದು ನುಡಿದರು. "ಜೇನ್‌ರವರೆ ನೀವು ಯಾಕೆ ಹೀಗೆ ಹೇಳುತ್ತೀರಿ?" ಎಂದ ನನಗೆ

ಪ್ರತಿಯಾಗಿ ಆಕೆ, "ಯೇಸುವು ಈಗ ನನ್ನೆದುರಿನಲ್ಲಿ ಇದ್ದಿದ್ದರೆ, ನಾನು ಆತನ ಮುಖದ ಮೇಲೆ ಉಗುಳುತ್ತಿದ್ದೆನು" ಎಂದು ನುಡಿದರು. ನಾನು ಆಕೆಗೆ, "ನೀವು ಹೀಗೆ ಮಾತನಾಡುವುದು ಸರಿಯಲ್ಲ. ಬಹುಶಃ ಸಭೆಯಲ್ಲಿ ಅನೇಕರು ನಿಮಗೆ ನೋವನ್ನುಂಟುಮಾಡಿರುವ ಕಾರಣವಾಗಿ ನೀವು ಈ ರೀತಿಯಾಗಿ ಹೇಳುತ್ತಿರಬಹುದು. ಜೇನ್, ನೀವು ಹೀಗೆ ಮಾತನಾಡಬೇಡಿರಿ. ಹೋಗಲಿ, ನಾನು ನನ್ನ ಕುಟುಂಬದ ಕುರಿತು ನಿಮಗೆ ಹೇಳುತ್ತೇನೆ" ಎಂದೆನು. ಆದರೆ ಆಕೆ, "ಬೇಡ! ನೀವು ನನ್ನ ಜೊತೆ ಮಾತನಾಡುವ ಅವಶ್ಯಕತೆಯಿಲ್ಲ. ನೀವು ಯೇಸುಕ್ರಿಸ್ತನ ವಿಷಯದಲ್ಲಿ ಹೇಳುತ್ತೀರಿ. ಆತನು ನಿಮ್ಮ ಜೀವಿತದಲ್ಲಿ ಏನು ಮಾಡಿದ್ದಾನೆಂದು ಹೇಳುತ್ತೀರಿ, ಆದರೆ ಅದಕ್ಕೆ ನಾನು ನಿಮಗೆ ಅವಕಾಶ ಕೊಡುವುದಿಲ್ಲ" ಎಂದು ನಿರಾಕರಿಸಿದರು. ಪುನಃ ನಾನು, "ಜೇನ್, ದಯಮಾಡಿ ಕೇಳಿರಿ. ನಾನು ನಿಮಗೆ ಯೇಸುವಿನ ವಿಷಯ ಹೇಳಲೇಬೇಕಿದೆ" ಎನ್ನುತ್ತಿದ್ದಂತೆ, ಆಕೆ, "**ಸಾಧ್ಯವಿಲ್ಲ!** ಬಾಯಿಮುಚ್ಚಿಕೊಂಡು ಹೋಗಿರಿ" ಎಂದು ಬಿರುನುಡಿದರು.

ಆಕೆ ಅಲ್ಲಿಂದ ಹೊರಟು ತನ್ನ ಜೊತೆಗೆ ಹಿಡಿದುಕೊಂಡು ತಂದಿದ್ದ ಚಿಕ್ಕ ನಾಯಿಯ ಕೊರಳಿನ ಪಟ್ಟಿಯನ್ನು ಎಳೆದಾಗ ಅದು 'ಗುರ್ರ್' ಎನ್ನುತ್ತಾ ಆಕೆಯ ಹಿಂದೆ ಹೋಯಿತು. ಆ ಸ್ತ್ರೀಯಲ್ಲಿದ್ದ ಅವಿಧೇಯತೆಯ ಆತ್ಮವು ಆಕೆಯ ಬಿರುಸಾದ ನಡೆನುಡಿಗೆ ಕಾರಣವಾಗಿತ್ತು. ಆಕೆ ವೈರಿಯ ಹತೋಟಿಯಲ್ಲಿದ್ದಳು. *ಜನರು ನನಗೆ ಬಿರುಸಾಗಿ ಮಾತನಾಡಿದ ಅನುಭವವಿಲ್ಲ. ಜನರು ನನ್ನನ್ನು ವಿರೋಧಿಸಿದ ಅನುಭವ ನನಗಿಲ್ಲ* ಎಂದು ನಾನು ಆಲೋಚಿಸಿದೆ. ಆದರೂ ಜೇನ್ ಕುರಿತಾಗಿ ನನ್ನಲ್ಲಿ ಕೇವಲ ಕರುಣೆ ಮತ್ತು ಪ್ರೀತಿ ಮಾತ್ರವೇ ಇತ್ತು. ಆಕೆ ಅಂಕೆತಪ್ಪಿ ಮಾತನಾಡಿದಳಾದರೂ ನಾನು ಶಾಂತವಾಗಿಯೆ ಇದ್ದೆ. ನಾನು ಮನಗೆ ಹಿಂದಿರುಗಿ ಕರ್ತನ ಬಳಿಯಲ್ಲಿ, "ಕರ್ತನೆ, ನಾನಷ್ಟು ಸಮಾಧಾನದಲ್ಲಿದ್ದದ್ದು ದೊಡ್ಡ ಅದ್ಭುತವೇ ಸರಿ. ಅವರ್ಯಾರೋ ನನ್ನ ಮುಖದ ಮೇಲೆ ಹೊಡೆದಂತೆ ಮಾತನಾಡಿದಾಗ ಅವರಿಗಾಗಿ ನನ್ನಲ್ಲಿ ಪ್ರೀತಿ ಮತ್ತು ಕರುಣೆ ಮಾತ್ರವೇ ಇದ್ದಿತಲ್ಲ."

ನಾವು ಯೇಸುವಿನ ನಾಮದಲ್ಲಿ ಹೊರಟಾಗ ಹಿಂಸೆ ಮತ್ತು ಪ್ರತಿರೋಧಗಳು ನಮಗೆ ಎದುರಾಗುತ್ತವೆ. ನಾವು ತಿರಸ್ಕರಿಸಲ್ಪಟ್ಟಾಗಲೂ ಆತನನ್ನು ಪ್ರಖ್ಯಾತಿ ಪಡಿಸುವಂತೆ ನಮ್ಮನ್ನು ಧೈರ್ಯಗೊಳಿಸುವ ಪವಿತ್ರಾತ್ಮನು ತಾನೇ ಯಾವುದೇ ಸಂದರ್ಭದಲ್ಲಿ ನಮಗೆ ಆದರಣೆ ಹಾಗೂ ಬಲವನ್ನು ನೀಡುತ್ತಾನೆ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. 2 ತಿಮೊಥೆಯನಿಗೆ 3:12 ಓದಿರಿ. ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರಿಗೆ ಏನು ಸಂಭವಿಸುವುದು?

   ***2 ತಿಮೊಥೆಯನಿಗೆ 3:12** – ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸುಮಾಡುವವರೆಲ್ಲರೂ ಹಿಂಸೆಗೊಳಗಾಗುವರು.*

2. ನಿಮ್ಮ ಪ್ರಕಾರ 'ಹಿಂಸೆ' ಎಂದರೆ ಏನು?

3. ಮಾರ್ಕ 4:16–17 ಓದಿರಿ. ಹಿಂಸೆ ಮತ್ತು ಸಂಕಟಗಳು ಯಾವ ಕಾರಣಕ್ಕಾಗಿ ಬರುತ್ತವೆ?

   ***ಮಾರ್ಕ 4:16–17** – ಅದೇ ಪ್ರಕಾರ ಬೇರೆ ಕೆಲವರು ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾರೆ; ತಮಗೆ ಬೇರಿಲ್ಲದ ಕಾರಣ ಇವರು ಸ್ವಲ್ಪ ಕಾಲ ಮಾತ್ರವೇ ಇದ್ದು ಬಳಿಕ ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿಬೀಳುತ್ತಾರೆ; ಇವರೇ ಬೀಜಬಿದ್ದ ಬಂಡೆಯ ನೆಲವಾಗಿರುವವರು.*

4. ಅಪೊಸ್ತಲರ ಕೃತ್ಯಗಳು 8:1 ಮತ್ತು 4 ಓದಿರಿ. ಯೆರೂಸಲೇಮಿನಲ್ಲಿ ಹಿಂಸೆಯಿಂದಾದ ಪರಿಣಾಮವೇನು?

   ***ಅಪೊಸ್ತಲರ ಕೃತ್ಯಗಳು 8:1** – ಸೌಲನು ಅವನ ಕೊಲೆಗೆ ಸಮ್ಮತಿಸುವವನಾಗಿದ್ದನು. ಆ ದಿವಸದಲ್ಲಿ ಯೆರೂಸಲೇಮಿನಲ್ಲಿದ್ದ ಸಭೆಗೆ ದೊಡ್ಡ ಹಿಂಸೆ ಉಂಟಾಯಿತು. ಅಪೊಸ್ತಲರು ಹೊರತಾಗಿ ಎಲ್ಲರು ಯೂದಾಯ ಸಮಾರ್ಯ ಸೀಮೆಗಳಲ್ಲಿ ಚದರಿಹೋದರು.*

   ***ಅಪೊಸ್ತಲರ ಕೃತ್ಯಗಳು 8:4** – ಚದರಿಹೋದವರು ಅಲ್ಲಲ್ಲಿ ಹೋಗಿ ಸುವಾರ್ತಾವಾಕ್ಯವನ್ನು ಸಾರುತ್ತಿದ್ದರು.*

5. ಮತ್ತಾಯ 5:10–12 ಓದಿರಿ. ______ ನಿಮಿತ್ತ ಹಿಂಸೆಗೆ ಗುರಿಯಾಗುವವರಿಗೆ ಆಶೀರ್ವಾದವಿದೆ.

   ***ಮತ್ತಾಯ 5:10–12** – ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು; ಪರಲೋಕರಾಜ್ಯವು ಅವರದು. [11]ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. [12]ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ*

*ಬಹಳ ಫಲ ಸಿಕ್ಕುವದು; ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನೂ ಹೀಗೆಯೇ ಹಿಂಸೆಪಡಿಸಿದರಲ್ಲಾ.*

6. ಮತ್ತಾಯ 5:12 ಓದಿರಿ. ನೀತಿಯ ನಿಮಿತ್ತ ಹಿಂಸೆಗೆ ಗುರಿಯಾದ ವಿಶ್ವಾಸಿಗಳು, ಭವಿಷ್ಯದಲ್ಲಿ ಏನನ್ನು ನಿರೀಕ್ಷಿಸಬಹುದಾಗಿದೆ?

7. ಅಪೊಸ್ತಲರ ಕೃತ್ಯಗಳು 9:4–5 ಓದಿರಿ. ಸೌಲನು ಯಾರನ್ನು ಹಿಂಸಿಸುತ್ತಿದ್ದನು?

***ಅಪೊಸ್ತಲರ ಕೃತ್ಯಗಳು 9:4–5*** *– ಅವನು ನೆಲಕ್ಕೆ ಬಿದ್ದು – ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆ ಪಡಿಸುತ್ತೀ ಎಂದು ಹೇಳುವ ವಾಣಿಯನ್ನು ಕೇಳಿದನು. [5]ಅವನು – ಕರ್ತನೇ, ನೀನಾರು ಎಂದು ಕೇಳಿದ್ದಕ್ಕೆ ಕರ್ತನು – ನೀನು ಹಿಂಸೆಪಡಿಸುವ ಯೇಸುವೇ ನಾನು.*

8. ಅಪೊಸ್ತಲರ ಕೃತ್ಯಗಳು 9:1 ಓದಿರಿ. ವಾಸ್ತವವಾಗಿ ಸೌಲನು ಯಾರನ್ನು ಹಿಂಸಿಸುತ್ತಿದ್ದನು?

***ಅಪೊಸ್ತಲರ ಕೃತ್ಯಗಳು 9:1*** *– ಸೌಲನು ಇನ್ನು ಕರ್ತನ ಶಿಷ್ಯರ ಮೇಲೆ ರೌದ್ರನಾಗಿದ್ದು ಬೆದರಿಕೆಯ ಮಾತುಗಳನ್ನಾಡುತ್ತಾ ಅವರನ್ನು ಸಂಹರಿಸಬೇಕೆಂದು ಆಶೆಪಡುತ್ತಾ ಮಹಾಯಾಜಕನ ಬಳಿಗೆ ಹೋಗಿ*

9. ಗಲಾತ್ಯದವರಿಗೆ 6:12 ಓದಿರಿ. ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಯೆಹೂದ್ಯರು ಸುವಾರ್ತೆಯ ಜೊತೆಜೊತೆಗೆ ಧರ್ಮಶಾಸ್ತ್ರವನ್ನು ಕೂಡ ಅನುಸರಿಸಬೇಕು ಎನ್ನುವ ನಿಯಮವನ್ನು ಸೇರಿಸುವ ಪ್ರಯತ್ನದಲ್ಲಿದ್ದರು. ಹೀಗೆ ಮಾಡುವುದರಿಂದ ಅವರು ಏನನ್ನು ಉಪೇಕ್ಷಿಸುತ್ತಿದ್ದರು?

***ಗಲಾತ್ಯದವರಿಗೆ 6:12*** *– ಬಹಿರಾಚಾರಗಳಿಂದ ಮಾನಪಡೆಯಬೇಕೆಂದಿರುವವರು ಸುನ್ನತಿಮಾಡಿಸಿಕೊಳ್ಳಿರಿ ಎಂಬದಾಗಿ ನಿಮ್ಮನ್ನು ಬಲಾತ್ಕರಿಸುತ್ತಾರೆ. ತಮಗೆ ಕ್ರಿಸ್ತನ ಶಿಲುಬೆ ದೆಸೆಯಿಂದ ಹಿಂಸೆಯಾಗಬಾರದೆಂಬದೊಂದೇ ಅವರ ಉದ್ದೇಶ.*

# ಉತ್ತರಗಳು

1. 2 ತಿಮೊಥೆಯನಿಗೆ 3:12 ಓದಿರಿ. ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರಿಗೆ ಏನು ಸಂಭವಿಸುವುದು?

   ***ಹಿಂಸೆಗೆ ಗುರಿಯಾಗುವರು***

2. ನಿಮ್ಮ ಪ್ರಕಾರ 'ಹಿಂಸೆ' ಎಂದರೆ ಏನು?

   ***ಬೆದರಿಕೆ ಒಡ್ಡುವುದು; ನಂಬಿಕೆಯ ನಿಮಿತ್ತ ಸಂಕಟಕ್ಕೆ ಒಳಗಾಗುವುದು***

3. ಮಾರ್ಕ 4:16–17 ಓದಿರಿ. ಹಿಂಸೆ ಮತ್ತು ಸಂಕಟಗಳು ಯಾವ ಕಾರಣಕ್ಕಾಗಿ ಬರುತ್ತವೆ?

   ***ವಾಕ್ಯದ ದೆಸೆಯಿಂದ; ಅಂದರೆ, ವಾಕ್ಯವನ್ನು ತೆಗೆದುಬಿಡಬೇಕೆನ್ನುವ ಕಾರಣದಿಂದ***

4. ಅಪೊಸ್ತಲರ ಕೃತ್ಯಗಳು 8:1 ಮತ್ತು 4 ಓದಿರಿ. ಯೆರೂಸಲೇಮಿನಲ್ಲಿ ಹಿಂಸೆಯಿಂದಾದ ಪರಿಣಾಮವೇನು?

   ***ಜನರು ಚದುರಿ ಹೋದರು ಮತ್ತು ತಾವು ಹೋದಲೆಲ್ಲಾ ಸುವಾರ್ತೆ ಸಾರುತ್ತಿದ್ದರು***

5. ಮತ್ತಾಯ 5:10–12 ಓದಿರಿ. ____________ ಹಿಂಸೆಗೆ ಗುರಿಯಾಗುವವರಿಗೆ ಆಶೀರ್ವಾದವಿದೆ.

   ***ನೀತಿಯ ನಿಮಿತ್ತ***

6. ಮತ್ತಾಯ 5:12 ಓದಿರಿ. ನೀತಿಯ ನಿಮಿತ್ತ ಹಿಂಸೆಗೆ ಗುರಿಯಾದ ವಿಶ್ವಾಸಿಗಳು, ಭವಿಷ್ಯದಲ್ಲಿ ಏನನ್ನು ನಿರೀಕ್ಷಿಸಬಹುದಾಗಿದೆ?

   ***ಪರಲೋಕದಲ್ಲಿ ಬಹಳ ಫಲ ಸಿಕ್ಕುವುದು***

7. ಅಪೊಸ್ತಲರ ಕೃತ್ಯಗಳು 9:4–5 ಓದಿರಿ. ಸೌಲನು ಯಾರನ್ನು ಹಿಂಸಿಸುತ್ತಿದ್ದನು?

   ***ಯೇಸುವನ್ನು***

8. ಅಪೊಸ್ತಲರ ಕೃತ್ಯಗಳು 9:1 ಓದಿರಿ. ವಾಸ್ತವವಾಗಿ ಸೌಲನು ಯಾರನ್ನು ಹಿಂಸಿಸುತ್ತಿದ್ದನು?

   ***ಯೇಸು ಕರ್ತನ ಶಿಷ್ಯರನ್ನು (ಕ್ರೈಸ್ತರನ್ನು)***

9. ಗಲಾತ್ಯದವರಿಗೆ 6:12 ಓದಿರಿ. ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಯೆಹೂದ್ಯರು ಸುವಾರ್ತೆಯ ಜೊತೆಜೊತೆಗೆ ಧರ್ಮಶಾಸ್ತ್ರವನ್ನು ಕೂಡ ಅನುಸರಿಸಬೇಕು ಎನ್ನುವ ನಿಯಮವನ್ನು ಸೇರಿಸುವ ಪ್ರಯತ್ನದಲ್ಲಿದ್ದರು. ಹೀಗೆ ಮಾಡುವುದರಿಂದ ಅವರು ಯಾವುದರಿಂದ ತಪ್ಪಿಸಿಕೊಳ್ಳಬೇಕೆಂದಿದ್ದರು?

***ಯೇಸುಕ್ರಿಸ್ತನ ಶಿಲುಬೆಯ ನಿಮಿತ್ತ ಹಿಂಸೆಯನ್ನು ಅನುಭವಿಸುವುದನ್ನು. ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ, ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಬೇಕೆಂದು ಸಾರುವ ಕಾರಣದಿಂದ ಎದುರಾಗುವ ಹಿಂಸೆಯಿಂದ ತಪ್ಪಿಸಿಕೊಳ್ಳಬೇಕೆಂದಿದ್ದರು.***

## ಪಾಠ 6

# ರಾಜನು ಮತ್ತು ಆತನ ರಾಜ್ಯ

*ಜೂಣ್ ಕ್ರೊ*

ಹಳೆ ಒಡಂಬಡಿಕೆಯಲ್ಲಿ, ಇಸ್ರೇಲ್ ದೇಶವು ದೇವರ ಆಳ್ವಿಕೆಯ ಅಡಿಯಲ್ಲಿದ್ದುದರಿಂದ ಸುತ್ತಲಿನ ಇತರ ಜನಾಂಗಗಳಿಗಿಂತ ಭಿನ್ನವಾಗಿತ್ತು. ಇನ್ನೊಂದು ಮಾತಿನಲ್ಲಿ ಹೇಳಬೇಕೆಂದರೆ, ದೇವರು ನೇರವಾಗಿ ಅವರನ್ನು ಆಳುತ್ತಿದ್ದನು (ಯೆಶಾಯ 43:15). ಆದರೆ ಮುಂದುವರಿದಂತೆ ತಾವು ಇತರ ಜನಾಂಗಗಳಂತೆ ಇರಬೇಕೆಂದು ಬಯಸಿ, ತಮಗಾಗಿ ಒಬ್ಬ ಅರಸನನ್ನು ಕೇಳಿಕೊಂಡರು (1 ಸಮುವೇಲನು 8:5–19). ಆದಕಾರಣ ದೇವರು ಅವರ ಬೇಡಿಕೆಗೆ ಅನುಸಾರವಾಗಿ ಸೌಲನೆಂಬವನನ್ನು ಅವರಿಗೆ ಅರಸನನ್ನಾಗಿ ನೇಮಿಸಿಕೊಟ್ಟನು (1 ಸಮುವೇಲನು 10:24–25). ಅನಂತರದಲ್ಲಿ, ಸೌಲನು ಅವಿಧೇಯನಾದ ಕಾರಣ, ದೇವರು ತನಗೆ ಒಪ್ಪುವ ಮನುಷ್ಯನಾದ ದಾವೀದನನ್ನು ಅವರಿಗೆ ಅರಸನನ್ನಾಗಿ ಮಾಡಿದನು (ಅಪೊಸ್ತಲರ ಕೃತ್ಯಗಳು 13:21–22 ಮತ್ತು 1 ಅರಸುಗಳು 15:3).

ಅರಸನಾದರೋ ಅದೃಶ್ಯನಾದ ದೇವರ ಪ್ರತ್ಯಕ್ಷಪ್ರತಿನಿಧಿಯಾಗಿ ಇರಬೇಕು (ಧರ್ಮೋಪದೇಶಕಾಂಡ 17:14–20). ಅರಸನು ಕರ್ತನನ್ನು ಹಿಂಬಾಲಿಸಿ ನಡೆಯುವಾಗ, ಅವನೂ ಅವನ ರಾಜ್ಯವೂ ಅಭಿವೃದ್ಧಿ ಕಾಣುವರು. ಅರಸನು ಕರ್ತನನ್ನು ಹಿಂಬಾಲಿಸದಿದ್ದಾಗ, ಅವನು ಮತ್ತು ಅವನ ರಾಜ್ಯವು ಸೆರೆ ಒಯ್ಯಲ್ಪಟ್ಟು ಹಾಳಾಗುತ್ತದೆ (1 ಸಮುವೇಲನು 15:22–23).

ದೇವರು ತನಗಾಗಿ ಒಬ್ಬ ರಾಜನನ್ನು ಆರಿಸಿಕೊಳ್ಳುವಾಗ, ಒಬ್ಬ ಪ್ರವಾದಿಯನ್ನು ಕಳುಹಿಸಿ ಅವನನ್ನು ಎಣ್ಣೆಯಿಂದ ಅಭಿಷೇಕಿಸುತ್ತಿದ್ದನು. ಇದು, ಪರಿಶುದ್ಧಾತ್ಮನು ಅವನ ಮೇಲೆ ಇಳಿದುಬಂದು ರಾಜ್ಯವನ್ನು ಆಳಲು ಅವನನ್ನು ಸಮರ್ಥನನ್ನಾಗಿ ಮಾಡುವನು ಎನ್ನುವುದನ್ನು ಸೂಚಿಸುತ್ತದೆ. ಹೀಗಾಗುವಾಗ, ದೇವರಾತ್ಮನು ಅವನ ಮೇಲೆ ಇಳಿದು ಬರಲಾಗಿ ಅವನು ತನ್ನ ರಾಜ್ಯವನ್ನು ನೀತಿಯಿಂದ ಆಳಲು ಸಾಧ್ಯವಾಗುತ್ತಿತ್ತು, ಯಾಕಂದರೆ ದೇವರು ಅವನೊಂದಿಗೆ ಇರುತ್ತಿದ್ದನು (1 ಸಮುವೇಲನು 10:1, 6–7, ಮತ್ತು 9). ರಾಜ್ಯವಾಳಲು ಅಥವ ರಾಜನಾಗಿ ಅಭಿಷೇಕಿಸಲ್ಪಡುವುದು ಎನ್ನುವುದು 'ಮೆಸ್ಸೀಯನು' ಸಿದ್ಧಾಂತಕ್ಕೆ ಮೂಲವಾಗಿದೆ. ಅಭಿಷೇಕ ಎನ್ನುವ ಪದಕ್ಕೆ ಇಬ್ರಿಯ ಭಾಷೆಯಲ್ಲಿ ಮಶಿಯಾಕ್

(ಮೆಸ್ಸೀಯ) ಎನ್ನುವ ಪದವಿದ್ದು ಅದನ್ನು ಗ್ರೀಕ್ ಭಾಷೆಯಲ್ಲಿ ಕ್ರಿಸ್ತೊಸ್ (ಕ್ರಿಸ್ತನು) ಎಂದು ಭಾಷಾಂತರಿಸಲಾಗಿದೆ. ಹಳೆ ಒಡಂಬಡಿಕೆಯ ಪ್ರವಾದಿಗಳು, ಮೆಸ್ಸೀಯನು ಬರುವನು ಮತ್ತು ಪರಲೋಕದ ದೇವರು ಎಂದಿಗೂ ಅಳಿಯದ ರಾಜ್ಯವನ್ನು ಸ್ಥಾಪಿಸುವನು ಎಂದು ಪ್ರವಾದಿಸಿದರು (ದಾನಿಯೇಲನು 2:44, 7:14, ಮತ್ತು 27). ನೀವು ಶಾಸ್ತ್ರಗಳನ್ನು ಅಭ್ಯಾಸ ಮಾಡುವುದಾದರೆ, ಯೇಸುವು ಯೆಹೂದ್ಯರಿಗೆ ರಾಜ್ಯವನ್ನು ಕುರಿತು ವಿವರಿಸುವಾಗ ತನ್ನ ಉದ್ದೇಶವು ಏನಾಗಿದೆಯೆಂದು ವಿವರಿಸುವುದಿಲ್ಲ ಎನ್ನುವುದನ್ನು ನೀವು ಗಮನಿಸಿರಬಹುದು. ಅವರು ಹಳೆ ಒಡಂಬಡಿಕೆಯ ಪರಿಕಲ್ಪನೆಯು ನೆರವೇರುವುದನ್ನು ಎದುರು ನೋಡುತ್ತಿದ್ದರು (ಯೆಶಾಯ 9:6–7, 11:1–6; ದಾನಿಯೇಲನು 2:44, 7:13–14, 18, ಮತ್ತು 27).

ರಾಜ್ಯದ ಕುರಿತು ಮೂಲಭೂತ ತಿಳುವಳಿಕೆ ಇಲ್ಲದಿದ್ದರೆ ಯೇಸುವಿನ ಸಂದೇಶವನ್ನು ಅರಗಿಸಿಕೊಳ್ಳುವುದು ಕಷ್ಟವಾಗಬಹುದು. ಯೇಸುವು ರಾಜ್ಯವನ್ನು ಕುರಿತೇ ಮಾತನಾಡಿದನು ಮತ್ತು ತನ್ನ ಶಿಷ್ಯರು ಅದನ್ನೇ ಸಾರುವಂತೆ ಹೇಳಿದನು (ಮಾರ್ಕ 1:14–15, ಲೂಕ 9:1–2, ಅಪೊಸ್ತಲರ ಕೃತ್ಯಗಳು 28:23–31, ಲೂಕನು 16:16 ಮತ್ತು ಮತ್ತಾಯ 24:14). ಈ ಸಂದೇಶವನ್ನು "ರಕ್ಷಣೆ" ಅಥವ "ನಿತ್ಯಜೀವ" ಕೊಡುವುದು (ಇಬ್ರಿಯರಿಗೆ 2:3; ಮತ್ತಾಯ 19:16ಅನ್ನು 19:23; ಅಪೊಸ್ತಲರ ಕೃತ್ಯಗಳು 28:23–24, 28, ಮತ್ತು 30–31ರೊಂದಿಗೆ ಹೋಲಿಸಿರಿ) ಎಂದು ಹೇಳಬಹುದು. "ದೇವರ ರಾಜ್ಯ" ಎನ್ನುವ ಪದಗಳು, ದೇವರ ಆಳ್ವಿಕೆಗೆ ಒಳಪಟ್ಟ ಜನರ ಗುಂಪು ಎನ್ನುವ ಅರ್ಥ ಕೊಡುತ್ತದೆ. ದೇವರ ರಾಜ್ಯವನ್ನು ಪ್ರವೇಶಿಸಬೇಕಾದರೆ, ಕೆಲವು ನಿಯಮಗಳಿಗೆ ಒಳಪಡಬೇಕು, ಮಾನಸಾಂತರ ಆಗಬೇಕು. ಬೈಬಲ್, ಹೃದಯದ ಮಾರ್ಪಾಟವನ್ನು ಮಾನಸಾಂತರ ಎಂದು ಕರೆಯುತ್ತದೆ. ಪಶ್ಚಾತ್ತಾಪ ಎಂದರೆ ದೇವರ ಕಡೆಗೆ ಮನಸ್ಸನ್ನು ತಿರುಗಿಸುವುದು; ಅಂದರೆ ಸೈತಾನ, ಪಾಪ ಮತ್ತು ಅವನ ಮಾರ್ಗಗಳನ್ನು ಬಿಟ್ಟು, ದೇವರು, ಕ್ರಿಸ್ತನು ಮತ್ತು ಆತನ ಮಾರ್ಗಗಳ ಕಡೆಗೆ ತಿರುಗಿಕೊಳ್ಳುವುದು. ಹೀಗೆ ಒಬ್ಬರು ತಿರುಗುವಾಗ, ದೇವರು ಪಾಪದ ಪರಿಹಾರ ಮತ್ತು ನಿತ್ಯಜೀವ (ಯೇಸುವು ಸುರಿಸಿದ ರಕ್ತದ ಮೂಲಕ ನೀಡಲಾಗುವ ದಾನ) ಇವುಗಳನ್ನು ಕೊಡುತ್ತಾನೆ (ರೋಮಾಪುರದವರಿಗೆ 6:23). ಈ ಒಳ್ಳೆಯ ಸುದ್ದಿಯನ್ನು "ಕೃಪೆಯ ಸುವಾರ್ತೆ" ಅಥವ "ದೇವರ ರಾಜ್ಯ"ದ ಸಾರೋಣ ಎಂದು ಕರೆಯಲಾಗುತ್ತದೆ. ದೇವರ ರಾಜ್ಯವು ಕೃಪೆಯ ಗುಣಾಂಶಗಳನ್ನು ಹೊಂದಿದೆ (ಮತ್ತಾಯ 20:1–16) ಮತ್ತು ಅದು ಸದ್ದಿಲ್ಲದಂತೆ ಗುಪ್ತವಾಗಿ ಯೇಸುವಿನ ಸೇವೆಯಲ್ಲಿ ಕಂಡುಬರುತ್ತದೆ (ಮತ್ತಾಯ 13:33). ಮುಂದೆ ಒಂದು ದಿನ ಅದು ಮಹಿಮೆಯಿಂದ ಸದೃಶವಾಗುತ್ತದೆ (ಮತ್ತಾಯ 13:36–43).

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ದಾನಿಯೇಲನು 2:44 ಓದಿರಿ. ಹಳೆ ಒಡಂಬಡಿಕೆಯ ಪ್ರವಾದಿಗಳು ಮುಂದಣ ಯುಗಗಳ ಕುರಿತು ಹೀಗೆ ಪ್ರವಾದಿಸಿದರು: ಮೆಸ್ಸೀಯನು (ಅಭಿಷಿಕ್ತನು) ಬರುತ್ತಾನೆ ಮತ್ತು ಪರಲೋಕದ ದೇವರು ಭೂಮಿಯ ಮೇಲೆ ಸ್ಥಾಪಿಸುವ ರಾಜ್ಯವು –

   ಅ. ಸಾವಿರ ವರ್ಷಗಳ ಕಾಲ ಇರುತ್ತದೆ

   ಇ. ಎಂದಿಗೂ ಅಳಿಯುವುದಿಲ್ಲ

   ಉ. ತಾತ್ಕಾಲಿಕವಾಗಿ ಇರುತ್ತದೆ

   ***ದಾನಿಯೇಲನು 2:44*** – *ಆ ರಾಜರ ಕಾಲದಲ್ಲಿ ಪರಲೋಕದೇವರು ಒಂದು ರಾಜ್ಯವನ್ನು ಸಾಷ್ಠಿಸುವನು; ಅದು ಎಂದಿಗೂ ಅಳಿಯದು, ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವದು.*

2. ಮತ್ತಾಯ 4:17, 23. ಇಲ್ಲಿ ಯೇಸು ಯಾವ ಸಂದೇಶವನ್ನು ನೀಡಿದ್ದಾನೆ?

   ***ಮತ್ತಾಯ 4:17*** – *ಅಂದಿನಿಂದ ಯೇಸು – ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವದಕ್ಕೆ ಪ್ರಾರಂಭಿಸಿದನು.*

   ***ಮತ್ತಾಯ 4:23*** – *ಬಳಿಕ ಯೇಸು ಗಲಿಲಾಯದಲ್ಲೆಲ್ಲಾ ತಿರುಗಾಡಿ ಅಲ್ಲಿಯವರ ಸಭಾಮಂದಿರಗಳಲ್ಲಿ ಉಪದೇಶ ಮಾಡುತ್ತಾ, ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಜನರ ಎಲ್ಲಾ ತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು.*

3. ಮಾರ್ಕ 1:14–15 ಓದಿರಿ. ಯೇಸುವು ________________ ಸುವಾರ್ತೆಯನ್ನು ಸಾರುತ್ತಿದ್ದನು.

   ***ಮಾರ್ಕ 1:14–15*** – *ಯೋಹಾನನು ಸೆರೆಗೆ ಬಿದ್ದ ಮೇಲೆ ಯೇಸು ಗಲಿಲಾಯ ಸೀಮೆಗೆ ಬಂದು – [15] ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ ಎಂದು ದೇವರ ಸುವಾರ್ತೆಯನ್ನು ಸಾರಿಹೇಳಿದನು.*

4. ಲೂಕ 4:43 ಓದಿರಿ. ಯೇಸುವು ದೇವರಿಂದ ಕಳುಹಿಸಲ್ಪಟ್ಟದ್ದಕ್ಕೆ ________ ಕಾರಣವಾಗಿದೆ.

*__ಲೂಕ 4:43__ – ಆದರೆ ಆತನು ಅವರಿಗೆ– ನಾನು ದೇವರ ರಾಜ್ಯದ ಸುವಾರ್ತೆಯನ್ನು ಬೇರೆ ಊರುಗಳಿಗೂ ಸಾರಿ ಹೇಳಬೇಕಾಗಿದೆ; ಇದಕ್ಕಾಗಿಯೇ ಕಳುಹಿಸಲ್ಪಟ್ಟಿದ್ದೇನೆ ಎಂದು ಹೇಳಿದನು.*

5. ಯೋಹಾನ 4:25 ಓದಿರಿ. ಯೇಸುವು ತಾನು ರಾಜ್ಯದ ವಿಷಯವಾಗಿ ಮಾತನಾಡುವಾಗ ತನ್ನ ಉದ್ದೇಶವೇನಾಗಿದೆ ಎನ್ನುವುದನ್ನು ಯೆಹೂದ್ಯರಿಗೆ ವಿವರಿಸಲಿಲ್ಲ. ಯಾಕೆಂದರೆ ಹಳೆ ಒಡಂಬಡಿಕೆಯಲ್ಲಿ ಅದು ಬರೆಯಲ್ಪಟ್ಟದ್ದರಿಂದ ಅವರು

ಅ. ಸ್ವಲ್ಪ ತಿಳಿದಿದ್ದರು

ಇ. ರಾಜ್ಯವು ಬರುವುದೇ ಇಲ್ಲ ಎನ್ನುವ ಆಲೋಚನೆಯಲ್ಲಿದ್ದರು

ಉ. ಅವರು ಈಗಾಗಲೇ ರಾಜ್ಯವನ್ನು ಎದುರುನೋಡುತ್ತಿದ್ದರು

*__ಯೋಹಾನ 4:25__ – ಆ ಹೆಂಗಸು ಆತನಿಗೆ – ಮೆಸ್ಸೀಯನು ಅಂದರೆ ಕ್ರಿಸ್ತನು ಬರುತ್ತಾನೆಂದು ಬಲ್ಲೆನು; ಆತನು ಬಂದ ಮೇಲೆ ನಮಗೆ ಎಲ್ಲಾ ತಿಳಿಸುವನು*

6. ಲೂಕ 9:1–2 ಓದಿರಿ. ಹನ್ನೆರಡು ಶಿಷ್ಯರು ಯಾವ ಮೂರು ಸಂಗತಿಗಳನ್ನು ಮಾಡಿದರು?

*__ಲೂಕ 9:1–2__ – ಆತನು ಹನ್ನೆರಡು ಮಂದಿ ಶಿಷ್ಯರನ್ನು ಒಟ್ಟಿಗೆ ಕರೆದು ಅವರಿಗೆ ಎಲ್ಲಾ ದೆವ್ವಗಳನ್ನು ಬಿಡಿಸುವ ಮತ್ತು ರೋಗಗಳನ್ನು ವಾಸಿಮಾಡುವ ಶಕ್ತಿ ಅಧಿಕಾರಗಳನ್ನು ಕೊಟ್ಟು [2] ದೇವರ ರಾಜ್ಯದ ವಿಷಯವನ್ನು ಸಾರುವದಕ್ಕೂ ಅಸ್ವಸ್ಥರಾದವರನ್ನು ಸ್ವಸ್ಥಮಾಡುವದಕ್ಕೂ ಅವರನ್ನು ಕಳುಹಿಸಿದನು.*

7. ಲೂಕ 10:1–2, 8–9 ಓದಿರಿ. ಯೇಸುವು ತನ್ನ ಎಪ್ಪತ್ತು ಮಂದಿ ಶಿಷ್ಯರಿಗೆ ಯಾವ ಸಂದೇಶವನ್ನು ಸಾರುವಂತೆ ಹೇಳಿದನು?

*__ಲೂಕ 10:1–2__ – ಇದಾದ ಮೇಲೆ ಸ್ವಾಮಿಯು ಇನ್ನೂ ಎಪ್ಪತ್ತು ಮಂದಿಯನ್ನು ನೇಮಿಸಿ ಅವರನ್ನು ಇಬ್ಬಿಬ್ಬರಾಗಿ ತಾನು ಹೋಗಬೇಕೆಂದಿದ್ದ ಪ್ರತಿಯೊಂದೂರಿಗೂ ಪ್ರತಿಯೊಂದು ಸ್ಥಳಕ್ಕೂ ಮುಂದಾಗಿ ಕಳುಹಿಸಿದನು. [2] ಕಳುಹಿಸುವಾಗ ಅವರಿಗೆ ಹೇಳಿದ್ದೇನಂದರೆ – ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದದರಿಂದ ಬೆಳೆಯ ಯಜಮಾನನನ್ನು – ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ.*

***ಲೂಕ 10:8–9*** *– ಮತ್ತು ನೀವು ಯಾವ ಊರಿಗಾದರೂ ಹೋದ ಮೇಲೆ ಆ ಜನರು ನಿಮ್ಮನ್ನು ಸೇರಿಸಿಕೊಂಡರೆ ಅವರು ನಿಮಗೆ ಬಡಿಸಿದ್ದನ್ನು ಊಟಮಾಡಿರಿ. ಅಲ್ಲಿರುವ ರೋಗಿಗಳಿಗೆ ವಾಸಿಮಾಡಿ ಅವರಿಗೆ – ದೇವರ ರಾಜ್ಯವು ನಿಮ್ಮ ಸಮೀಪಕ್ಕೆ ಬಂದದೆ ಎಂದು ಹೇಳಿರಿ.*

8. ಲೂಕ 23:2 ಓದಿರಿ. ಯೆಹೂದ್ಯರ ಸ್ವಂತ ವ್ಯಾಖ್ಯಾನದ ಪ್ರಕಾರ 'ಕ್ರಿಸ್ತನು' ಎಂದರೆ ________________

***ಲೂಕ 23:2*** *– ಇವನು ತಾನೇ ಕ್ರಿಸ್ತನೆಂಬ ಒಬ್ಬ ಅರಸನಾಗಿದ್ದೇನೆಂದು ಹೇಳುತ್ತಾ ಕೈಸರನಿಗೆ ತೆರಿಗೆಕೊಡಬಾರದೆಂದು ಬೋಧಿಸುತ್ತಾ ನಮ್ಮ ದೇಶದವರ ಮನಸ್ಸು ಕೆಡಿಸುವದನ್ನು ನಾವು ಕಂಡೆವು ಎಂಬದಾಗಿ ಆತನ ಮೇಲೆ ದೂರು ಹೇಳುವದಕ್ಕೆ ತೊಡಗಿದರು.*

9. ಅಪೊಸ್ತಲರ ಕೃತ್ಯಗಳು 17:7 ಓದಿರಿ. ಅಪೊಸ್ತಲನಾದ ಪೌಲನು, ______________ ಬೇರೊಬ್ಬ ______________ ಇದ್ದಾನೆಂದು ಹೇಳಿ ಚಕ್ರವರ್ತಿಯ ಆಜ್ಞೆಗಳಿಗೆ ವಿರುದ್ಧವಾಗಿ ನಡೆಯುತ್ತಾರೆ ಎಂದು ಯೆಹೂದ್ಯರು ಆರೋಪಿಸಿದರು.

***ಅಪೊಸ್ತಲರ ಕೃತ್ಯಗಳು 17:7*** *– ಯಾಸೋನನು ಅವರನ್ನು ಸೇರಿಸಿಕೊಂಡಿದ್ದಾನೆ, ಅವರೆಲ್ಲರು ಯೇಸುವೆಂಬ ಬೇರೊಬ್ಬ ಅರಸನು ಇದ್ದಾನೆಂದು ಹೇಳಿ ಚಕ್ರವರ್ತಿಯ ಆಜ್ಞೆಗಳಿಗೆ ವಿರುದ್ಧವಾಗೊ ನಡೆಯುತ್ತಾರೆ ಎಂದು ಕೂಗಿದರು.*

10. ಅಪೊಸ್ತಲರ ಕೃತ್ಯಗಳು 19:8–10 ಓದಿರಿ. ಪೌಲನು ______________ ವಿಷಯಗಳನ್ನು ಕುರಿತು ವಾದಿಸುತ್ತಾ ಜನರನ್ನು ಒಡಂಬಡಿಸುತ್ತಾ ಧೈರ್ಯದಿಂದ ಮಾತಾಡಿದನು.

***ಅಪೊಸ್ತಲರ ಕೃತ್ಯಗಳು 19:8–10*** *– ಆ ಪಟ್ಟಣದಲ್ಲಿ ಪೌಲನು ಸಭಾಮಂದಿರದೊಳಗೆ ಹೋಗಿ ಮೂರು ತಿಂಗಳು ಅಲ್ಲೇ ದೇವರ ರಾಜ್ಯದ ವಿಷಯಗಳನ್ನು ಕುರಿತು ವಾದಿಸುತ್ತಾ ಜನರನ್ನು ಒಡಂಬಡಿಸುತ್ತಾ ಧೈರ್ಯದಿಂದ ಮಾತಾಡಿದನು. [9] ಕೆಲವರು ತಮ್ಮ ಮನಸ್ಸುಗಳನ್ನು ಕಠಿಣಮಾಡಿಕೊಂಡು ಒಡಂಬಡದೆ ಗುಂಪುಕೂಡಿದ ಜನರ ಮುಂದೆ ಈ ಮಾರ್ಗವು ಕೆಟ್ಟದ್ದೆಂದು ಹೇಳಲು ಅವನು ಅವರನ್ನು ಬಿಟ್ಟುಹೋಗಿ ಶಿಷ್ಯರನ್ನು ಬೇರೆಮಾಡಿ ತುರನ್ನನ ತರ್ಕ ಶಾಲೆಯಲ್ಲಿ ಪ್ರತಿದಿನವೂ ವಾದಿಸಿದನು. [10] ಇದು ಎರಡು ವರುಷಗಳವರೆಗೂ ನಡೆದದ್ದರಿಂದ ಆಸ್ಯ ಸೀಮೆಯಲ್ಲಿ ವಾಸವಾಗಿದ್ದ ಯೆಹೂದ್ಯರೂ ಗ್ರೀಕರೂ ಎಲ್ಲರೂ ಕರ್ತನ ವಾಕ್ಯವನ್ನು ಕೇಳಿದರು.*

11. ಅಪೊಸ್ತಲರ ಕೃತ್ಯಗಳು 28:23–31 ಓದಿರಿ. 31ನೇ ವಚನದಲ್ಲಿ, ಪೌಲನು ಯಾವ ವಿಷಯವಾಗಿ ಸಾರುತ್ತಿದ್ದನು ಎಂದು ಬರೆದದೆ?

*__ಅಪೊಸ್ತಲರ ಕೃತ್ಯಗಳು 28:23–31__ – ಅವರು ಅವನಿಗೆ ಒಂದು ದಿವಸವನ್ನು ಗೊತ್ತು ಮಾಡಲು ಬಹುಮಂದಿ ಅವನ ಬಿಡಾರದಲ್ಲಿ ಅವನ ಬಳಿಗೆ ಬಂದರು. ಅವನು ಬೆಳಗಿನಿಂದ ಸಾಯಂಕಾಲದವರೆಗೂ ದೇವರ ರಾಜ್ಯವನ್ನು ಕುರಿತು ಪ್ರಮಾಣವಾಗಿ ಸಾಕ್ಷಿಹೇಳುತ್ತಾ ಮೋಶೆಯ ಧರ್ಮಶಾಸ್ತ್ರವನ್ನೂ ಪ್ರವಾದಿಗಳ ಗ್ರಂಥಗಳನ್ನೂ ಆಧಾರಮಾಡಿಕೊಂಡು ಯೇಸುವಿನ ವಿಷಯದಲ್ಲಿ ಅವರನ್ನು ಒಡಂಬಡಿಸುತ್ತಾ ಇದ್ದನು. [24 ]ಅವನು ಹೇಳಿದ ಮಾತುಗಳಿಗೆ ಕೆಲವರು ಒಪ್ಪಿಕೊಂಡರು; [25] ಕೆಲವರು ನಂಬದೆ ಹೋದರು. ಅವರಲ್ಲಿ ಐಕಮತ್ಯವಿಲ್ಲದೆ ಇರುವಾಗ ಪೌಲನು ಅವರಿಗೆ– ಪವಿತ್ರಾತ್ಮನು ಪ್ರವಾದಿಯಾದ ಯೆಶಾಯನ ಬಾಯಿಂದ ನಿಮ್ಮ ಪಿತೃಗಳಿಗೆ ವಿಹಿತವಾಗಿ [26] ಹೇಳಿದ್ದೇನಂದರೆ – ನೀನು ಈ ಜನರ ಬಳಿಗೆ ಹೋಗಿ ಅವರಿಗೆ – ನೀವು ಕಿವಿಯಿದ್ದು ಕೇಳಿದರೂ ತಿಳುಕೊಳ್ಳುವುದೇ ಇಲ್ಲ; ಕಣ್ಣಿದ್ದು ನೋಡಿದರೂ ಕಾಣುವದೇ ಇಲ್ಲ ಎಂಬದಾಗಿ ಹೇಳು. [27] ಯಾಕಂದರೆ ಈ ಜನರ ಹೃದಯವು ಕೊಬ್ಬಿತು; ಇವರ ಕಿವಿ ಮಂದವಾಯಿತು; ಇವರು ಕಣ್ಣು ಮುಚ್ಚಿಕೊಂಡಿದ್ದಾರೆ; ತಾವು ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ತಿಳಿದು ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದಬಾರದೆಂದು ಮಾಡಿಕೊಂಡಿದ್ದಾರೆ ಎಂಬದೇ. [28] ಆದಕಾರಣ ದೇವರಿಂದಾದ ಈ ರಕ್ಷಣೆಯು ಅನ್ಯಜನರಿಗೆ ಹೇಳಿಕಳುಹಿಸಲ್ಪಟ್ಟಿದೆ ಎಂದು ನಿಮಗೆ ಚೆನ್ನಾಗಿ ತಿಳಿದಿರಲಿ; ಅವರಾದರೂ ಕೇಳುವರು ಎಂದು ಹೇಳಿದನು. [29] ಅವನು ಈ ಮಾತನ್ನು ಹೇಳಿದ ಮೇಲೆ ಅವರು ಹೊರಟು ಹೋದರು. [30] ತರುವಾಯ ಅವನು ತಾನೇ ಮಾಡಿಕೊಂಡ ಬಾಡಿಗೆಯ ಮನೆಯಲ್ಲಿ ಪೂರಾ ಎರಡು ವರುಷ ಇದ್ದು [31] ತನ್ನ ಬಳಿಗೆ ಬರುವವರೆಲ್ಲರನ್ನು ಸೇರಿಸಿಕೊಂಡು ಯಾವ ಅಡ್ಡಿಯೂ ಇಲ್ಲದೆ ತುಂಬಾ ಧೈರ್ಯದಿಂದ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸುತ್ತಾ ಕರ್ತನಾದ ಯೇಸುಕ್ರಿಸ್ತನ ವಿಷಯವಾಗಿ ಉಪದೇಶಮಾಡುತ್ತಾ ಇದ್ದನು.*

12. ಮತ್ತಾಯ 24:14 ಓದಿರಿ. ಪ್ರಪಂಚದಲ್ಲೆಲ್ಲ ಯಾವ ಸಂದೇಶವು ಸಾರಲ್ಪಡಬೇಕು ಎಂದು ಬರೆದದೆ?

*__ಮತ್ತಾಯ 24:14__ – ಇದಲ್ಲದೆ ಪರಲೋಕ ರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು.*

13. ಅಪೊಸ್ತಲರ ಕೃತ್ಯಗಳು 20:24–25 ಓದಿರಿ. ಕೆಲವು ಸಂದರ್ಭಗಳಲ್ಲಿ, ದೇವರ ರಾಜ್ಯದ ಸುವಾರ್ತೆಯನ್ನು ________________ ವಿಷಯವಾದ ಸುವಾರ್ತೆ ಎಂದೂ ಕರೆಯಲಾಗಿದೆ.

***ಅಪೊಸ್ತಲರ ಕೃತ್ಯಗಳು 20:24–25*** *– ಆದರೆ ಪ್ರಾಣವನ್ನು ಉಳಿಸಿಕೊಳ್ಳುವದೇ ವಿಶೇಷವೆಂದು ನಾನು ಎಣಿಸುವದಿಲ್ಲ. ದೇವರ ಕೃಪೆಯ ವಿಷಯವಾದ ಸುವಾರ್ತೆಯನ್ನು ಆಸಕ್ತಿಯಿಂದ ಪ್ರಕಟಿಸಬೇಕೆಂಬದಾಗಿ ಕರ್ತನಾದ ಯೇಸುವಿನಿಂದ ನಾನು ಹೊಂದಿರುವ ಸೇವೆಯೆಂಬ ಓಟವನ್ನು ಕಡೆಗಾಣಿಸುವದೊಂದೇ ನನ್ನ ಅಪೇಕ್ಷೆ. [25] ಇಗೋ ಇಷ್ಟು ದಿವಸ ನಿಮ್ಮಲ್ಲಿ ಸಂಚಾರಮಾಡಿ ದೇವರ ರಾಜ್ಯವನ್ನು ಸಾರಿದವನಾದ ನನ್ನ ಮುಖವನ್ನು ಇನ್ನು ಮೇಲೆ ನಿಮ್ಮಲ್ಲಿ ಒಬ್ಬರೂ ಕಾಣುವದಿಲ್ಲವೆಂದು ಬಲ್ಲೆನು.*

14. ಲೂಕ 16:16 ಓದಿರಿ. ದೇವರ ರಾಜ್ಯದ ಕುರಿತಾದ ಸಾಮಾನ್ಯ ತಿಳುವಳಿಕೆಯಿಲ್ಲದೆ ಯೇಸುವಿನ ಸಂದೇಶವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಯೇಸುವು, ತನ್ನ ಶಿಷ್ಯರಿಗೆ ರಾಜ್ಯದ ಕುರಿತಾಗಿಯೇ ಸಂದೇಶ ನೀಡಿದನು ಮತ್ತು ಅವರು ಸಹ ರಾಜ್ಯದ ವಿಷಯವಾಗಿಯೇ:

ಅ. ಸಾರಬೇಕು

ಇ. ಅಲಕ್ಷಿಸಬೇಕು

ಉ. ಧ್ಯಾನಿಸಬೇಕು

***ಲೂಕ 16:16*** *– ಧರ್ಮಶಾಸ್ತ್ರವೂ ಪ್ರವಾದಿಗಳೂ ಯೋಹಾನನ ತನಕವೇ. ಈಚೆಗೆ ದೇವರ ರಾಜ್ಯವು ಸಾರಲ್ಪಡುತ್ತಾ ಇದೆ. ಅದರಲ್ಲಿ ಸಕಲರೂ ಬಲತ್ಕಾರವಾಗಿ ನುಗ್ಗುತ್ತಾರೆ.*

15. ಮತ್ತಾಯ 6:10. ವಾಸ್ತವವಾಗಿ, ದೇವರ ರಾಜ್ಯವೆಂದರೆ ದೇವರ ಆಳ್ವಿಕೆ ಎಂದರ್ಥ. ಈ ವಚನದಲ್ಲಿ ಇದು ಹೇಗೆ ವ್ಯಕ್ತವಾಗಿದೆ?

***ಮತ್ತಾಯ 6:10*** *– ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ.*

16. ಕೊಲಸ್ಸೆಯವರಿಗೆ 1:13–14 ಮತ್ತು ರೋಮಾಪುರದವರಿಗೆ 14:9 ಓದಿರಿ. "ದೇವರ ರಾಜ್ಯ" ಎಂದರೆ, ಇಂಥವರು ಸೇರಿದ ಗುಂಪು:

ಅ. ಯೇಸುವನ್ನು ತಮ್ಮ ಹೃದಯದೊಳಗೆ ಸ್ವೀಕರಿಸಿರುವವರು

ಇ. ದೇವರ ಆಳ್ವಿಕೆಯನ್ನು ಒಪ್ಪಿಕೊಳ್ಳುವವರು (ಮತ್ತು ಸೈತಾನನ ಆಳ್ವಿಕೆಯನ್ನು ತಿರಸ್ಕರಿಸುವವರು) ಮತ್ತು ಆತನಿಂದ ಕ್ಷಮೆಯನ್ನು ಪಡೆದುಕೊಳ್ಳುವವರು

ಉ. ಸಭೆಗೆ ಸೇರುವವರು

***ಕೊಲೊಸ್ಸೆಯವರಿಗೆ 1:13–14*** *– ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. [14] ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು.*

***ರೋಮಾಪುರದವರಿಗೆ 14:9*** *– ಯಾಕಂದರೆ ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿರಬೇಕೆಂತಲೇ ಕ್ರಿಸ್ತನು ಸತ್ತು ಜೀವಿತನಾದನು.*

17. ಮತ್ತಾಯ 4:17 ಓದಿರಿ. ದೇವರ ರಾಜ್ಯಕ್ಕೆ ಸೇರಲು ಹೃದಯದಲ್ಲಿ ಬದಲಾವಣೆಯಾಗಬೇಕು. ಬೈಬಲ್ ಇದನ್ನು ಹೀಗೆ ಕರೆಯುತ್ತದೆ:

ಅ. ತಪಸ್ಸು

ಇ. ಧರ್ಮಶಾಸ್ತ್ರವನ್ನು ಕೈಗೊಳ್ಳುವುದು

ಉ. ಮಾನಸಾಂತರ

***ಮತ್ತಾಯ 4:17*** *– ಅಂದಿನಿಂದ ಯೇಸು – ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವದಕ್ಕೆ ಪ್ರಾರಂಭಿಸಿದನು.*

18. ಅಪೊಸ್ತಲರ ಕೃತ್ಯಗಳು 26:18 ಓದಿರಿ. ನೀವು ____________ ಬೆಳಕಿಗೂ ಸೈತಾನನ ____________ ____________ ಕಡೆಗೂ ತಿರುಗಿಕೊಂಡು ಪಾಪಪರಿಹಾರವನ್ನು ಹೊಂದಿಕೊಂಡಿದ್ದೀರೋ?

***ಅಪೊಸ್ತಲರ ಕೃತ್ಯಗಳು 26:18*** *– ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು ನನ್ನಲ್ಲಿ ನಂಬಿಕೆಯಿಡುವವದರಿಂದ*

*ಪಾಪಪರಿಹಾರವನ್ನೂ, ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕೆಂದು ಅವರ ಬಳಿಗೆ ನಾನು ನಿನ್ನನ್ನು ಕಳುಹಿಸುತ್ತೇನೆ ಅಂದನು.*

19. ಯೆಹೆಜ್ಕೇಲನು 36:26–27 ಮತ್ತು ಅಪೊಸ್ತಲರ ಕೃತ್ಯಗಳು 11:15–18 ಓದಿರಿ. ದೇವರ ಮಾರ್ಗದಲ್ಲಿ ನಡೆಯಲು ನಿಮಗೆ ನೂತನ ಮನಸ್ಸು ಮತ್ತು ನೂತನ ಆತ್ಮವು ಕೊಡಲ್ಪಟ್ಟಿದೆಯೇ?

***ಯೆಹೆಜ್ಕೇಲನು 36:26–27*** *– ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುವಾದ ಹೃದಯವನ್ನು ನಿಮಗೆ ದಯಪಾಲಿಸುವೆನು. [27] ನನ್ನ ಆತ್ಮವನ್ನು ನಿಮ್ಮಲ್ಲಿ ನೆಲಸಿರುವಂತೆ ಅನುಗ್ರಹಿಸಿ ನೀವು ನನ್ನ ನಿಯಮಗಳನ್ನು ಅನುಸರಿಸುವ ಹಾಗೆ ಮಾಡುವೆನು. ನೀವು ನನ್ನ ವಿಧಿಗಳನ್ನು ಕೈಕೊಂಡು ಆಚರಿಸುವಿರಿ.*

***ಅಪೊಸ್ತಲರ ಕೃತ್ಯಗಳು 11:15–18*** *– ನಾನು ಮಾತಾಡುವದಕ್ಕೆ ಪ್ರಾರಂಭಿಸಿದಾಗ ಪವಿತ್ರಾತ್ಮವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆಯೂ ಇಳಿಯಿತು. [16] ಆಗ– ಯೋಹಾನನಂತೂ ನೀರಿನ ದೀಕ್ಷಾಸ್ನಾನ ಮಾಡಿಸಿದನು; ನಿಮಗಾದರೋ ಪವಿತ್ರಾತ್ಮದಲ್ಲಿ ಸ್ನಾನವಾಗುವದು ಎಂದು ಯೇಸುಸ್ವಾಮಿ ಹೇಳಿದ ಮಾತು ನನ್ನ ನೆನಪಿಗೆ ಬಂತು. [17] ದೇವರು ಕರ್ತನಾಗಿರುವ ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಮಗೆ ಕೊಟ್ಟ ವರಕ್ಕೆ ಸರಿಯಾದ ವರವನ್ನು ಅವರಿಗೂ ಕೊಟ್ಟಿರಲಾಗಿ ದೇವರನ್ನು ತಡೆಯುವದಕ್ಕೆ ನಾನು ಶಕ್ತನೋ? [18] ಹೀಗೆಂದ ಮಾತುಗಳನ್ನು ಆ ಸುನ್ನತಿಯವರು ಕೇಳಿ ಆಕ್ಷೇಪಣೆ ಮಾಡುವದನ್ನು ಬಿಟ್ಟು – ಹಾಗಾದರೆ ದೇವರು ಅನ್ಯಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ ಎಂದು ದೇವರನ್ನು ಕೊಂಡಾಡಿದರು.*

20. ಲೂಕ 18:13–14 ಓದಿರಿ. ನಿಮ್ಮ ಪಾಪಗಳನ್ನು ಕ್ಷಮಿಸುವಂತೆ ನೀವು ದೇವರನ್ನು ಬೇಡಿಕೊಂಡಿದ್ದೀರೋ?

***ಲೂಕ 18:13–14*** *– ಆದರೆ ಆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ – ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು. [14] ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು. ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ.*

# ಉತ್ತರಗಳು

1. ದಾನಿಯೇಲನು 2:44 ಓದಿರಿ. ಹಳೆ ಒಡಂಬಡಿಕೆಯ ಪ್ರವಾದಿಗಳು ಮುಂದಣ ಯುಗಗಳ ಕುರಿತು ಹೀಗೆ ಪ್ರವಾದಿಸಿದರು: ಮೆಸ್ಸೀಯನು (ಅಭಿಷಿಕ್ತನು) ಬರುತ್ತಾನೆ ಮತ್ತು ಪರಲೋಕದ ದೇವರು ಭೂಮಿಯ ಮೇಲೆ ಸ್ಥಾಪಿಸುವ ರಾಜ್ಯವು:

   *ಇ. ಎಂದಿಗೂ ಅಳಿಯುವುದಿಲ್ಲ*

2. ಮತ್ತಾಯ 4:17, 23. ಇಲ್ಲಿ ಯೇಸುವು ಯಾವ ಸಂದೇಶವನ್ನು ನೀಡಿದ್ದಾನೆ?

   *ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ*

3. ಮಾರ್ಕ 1:14–15 ಓದಿರಿ. ಯೇಸುವು ________________ ಸುವಾರ್ತೆಯನ್ನು ಸಾರುತ್ತಿದ್ದನು?

   *ದೇವರ ರಾಜ್ಯದ*

4. ಲೂಕ 4:43 ಓದಿರಿ. ಯೇಸುವು ದೇವರಿಂದ ಕಳುಹಿಸಲ್ಪಟ್ಟದ್ದಕ್ಕೆ ___________ ಕಾರಣವಾಗಿದೆ

   *ದೇವರ ರಾಜ್ಯದ ಸುವಾರ್ತೆ ಸಾರಬೇಕು ಎನ್ನುವುದು*

5. ಯೋಹಾನ 4:25 ಓದಿರಿ. ಯೇಸುವು ತಾನು ರಾಜ್ಯದ ವಿಷಯವಾಗಿ ಮಾತನಾಡುವಾಗ ತನ್ನ ಉದ್ದೇಶವೇನಾಗಿದೆ ಎನ್ನುವುದನ್ನು ಯೆಹೂದ್ಯರಿಗೆ ವಿವರಿಸಲಿಲ್ಲ. ಯಾಕೆಂದರೆ ಹಳೆ ಒಡಂಬಡಿಕೆಯಲ್ಲಿ ಅದು ಬರೆದಿರುವುದರಿಂದ ಅವರು

   *ಉ. ಈಗಾಗಲೇ ರಾಜ್ಯವನ್ನು ಎದುರುನೋಡುತ್ತಿದ್ದರು*

6. ಲೂಕ 9:1–2 ಓದಿರಿ. ಹನ್ನೆರಡು ಶಿಷ್ಯರು ಯಾವ ಮೂರು ಸಂಗತಿಗಳನ್ನು ಮಾಡಿದರು?

   *ಎಲ್ಲಾ ದೆವ್ವಗಳನ್ನು ಬಿಡಿಸುವ, ರೋಗಗಳನ್ನು ವಾಸಿಮಾಡುವ ಶಕ್ತಿ ಅಧಿಕಾರಗಳನ್ನು ಕೊಟ್ಟು ದೇವರ ರಾಜ್ಯದ ವಿಷಯವನ್ನು ಸಾರುವುದಕ್ಕೆ ಕಳುಹಿಸಿದನು*

7. ಲೂಕ 10:1–2, 8–9 ಓದಿರಿ. ಯೇಸುವು ತನ್ನ ಎಪ್ಪತ್ತು ಮಂದಿ ಶಿಷ್ಯರಿಗೆ ಯಾವ ಸಂದೇಶವನ್ನು ಸಾರುವಂತೆ ಹೇಳಿದನು?

*ದೇವರ ರಾಜ್ಯದ ಸುವಾರ್ತೆ*

8. ಲೂಕ 23:2 ಓದಿರಿ. ಯೆಹೂದ್ಯರ ಸ್ವಂತ ವ್ಯಾಖ್ಯಾನದ ಪ್ರಕಾರ 'ಕ್ರಿಸ್ತನು' ಎಂದರೆ ________________

*ಅರಸನು*

9. ಅಪೊಸ್ತಲರ ಕೃತ್ಯಗಳು 17:7 ಓದಿರಿ. ಅಪೊಸ್ತಲನಾದ ಪೌಲನು, ______________ ಬೇರೊಬ್ಬ ____________ ಇದ್ದಾನೆಂದು ಹೇಳಿ ಚಕ್ರವರ್ತಿಯ ಆಜ್ಞೆಗಳಿಗೆ ವಿರುದ್ಧವಾಗಿ ನಡೆಯುತ್ತಾರೆ ಎಂದು ಯೆಹೂದ್ಯರು ಆರೋಪಿಸಿದರು.

*ಯೇಸುವೆಂಬ/ಅರಸನು*

10. ಅಪೊಸ್ತಲರ ಕೃತ್ಯಗಳು 19:8–10 ಓದಿರಿ. ಪೌಲನು ____________ ವಿಷಯಗಳನ್ನು ಕುರಿತು ವಾದಿಸುತ್ತಾ ಜನರನ್ನು ಒಡಂಬಡಿಸುತ್ತಾ ಧೈರ್ಯದಿಂದ ಮಾತಾಡಿದನು.

*ದೇವರ ರಾಜ್ಯದ*

11. ಅಪೊಸ್ತಲರ ಕೃತ್ಯಗಳು 28:23–31 ಓದಿರಿ. 31ನೇ ವಚನದಲ್ಲಿ, ಪೌಲನು ಯಾವ ವಿಷಯವಾಗಿ ಸಾರುತ್ತಿದ್ದನು ಎಂದು ಬರೆದದೆ?

*ದೇವರ ರಾಜ್ಯವನ್ನು, ಕುರಿತಾದ*

12. ಮತ್ತಾಯ 24:14 ಓದಿರಿ. ಪ್ರಪಂಚದಲ್ಲೆಲ್ಲ ಯಾವ ಸಂದೇಶವು ಸಾರಲ್ಪಡಬೇಕು ಎಂದು ಬರೆದದೆ?

*ಪರಲೋಕರಾಜ್ಯದ ಸುವಾರ್ತೆ*

13. ಅಪೊಸ್ತಲರ ಕೃತ್ಯಗಳು 20:24–25 ಓದಿರಿ. ಕೆಲವು ಸಂದರ್ಭಗಳಲ್ಲಿ, ದೇವರ ರಾಜ್ಯದ ಸುವಾರ್ತೆಯನ್ನು ______________ ವಿಷಯವಾದ ಸುವಾರ್ತೆ ಎಂದೂ ಕರೆಯಲಾಗಿದೆ.

*ದೇವರ ಕೃಪೆಯ*

14. ಲೂಕ 16:16 ಓದಿರಿ. ದೇವರ ರಾಜ್ಯದ ಕುರಿತಾದ ಸಾಮಾನ್ಯ ತಿಳುವಳಿಕೆಯಿಲ್ಲದೆ ಯೇಸುವಿನ ಸಂದೇಶವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಯೇಸುವು, ತನ್ನ ಶಿಷ್ಯರಿಗೆ ರಾಜ್ಯದ ಕುರಿತಾಗಿಯೇ ಸಂದೇಶ ನೀಡಿದನು ಮತ್ತು ಅವರು ಸಹ ರಾಜ್ಯದ ವಿಷಯವಾಗಿಯೇ:

***ಅ. ಸಾರಬೇಕು***

15. ಮತ್ತಾಯ 6:10. ವಾಸ್ತವವಾಗಿ, ದೇವರ ರಾಜ್ಯವೆಂದರೆ ದೇವರ ಆಳ್ವಿಕೆ ಎಂದರ್ಥ. ಈ ವಚನದಲ್ಲಿ ಇದು ಹೇಗೆ ವ್ಯಕ್ತವಾಗಿದೆ?

***ದೇವರ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿ ನೆರವೇರಬೇಕು***

16. ಕೊಲಸ್ಸೆಯವರಿಗೆ 1:13–14 ಮತ್ತು ರೋಮಾಪುರದವರಿಗೆ 14:9 ಓದಿರಿ. "ದೇವರ ರಾಜ್ಯ" ಎಂದರೆ, ಇಂಥವರು ಸೇರಿದ ಗುಂಪು:

***ಇ. ದೇವರ ಆಳ್ವಿಕೆಯನ್ನು ಒಪ್ಪಿಕೊಳ್ಳುವವರು (ಮತ್ತು ಸೈತಾನನ ಆಳ್ವಿಕೆಯನ್ನು ತಿರಸ್ಕರಿಸುವವರು) ಮತ್ತು ಆತನಿಂದ ಕ್ಷಮೆಯನ್ನು ಪಡೆದುಕೊಳ್ಳುವವರು***

17. ಮತ್ತಾಯ 4:17 ಓದಿರಿ. ದೇವರ ರಾಜ್ಯಕ್ಕೆ ಸೇರಲು ಹೃದಯದಲ್ಲಿ ಬದಲಾವಣೆಯಾಗಬೇಕು. ಬೈಬಲ್ ಇದನ್ನು ಹೀಗೆ ಕರೆಯುತ್ತದೆ:

***ಉ. ಮಾನಸಾಂತರ***

18. ಅಪೊಸ್ತಲರ ಕೃತ್ಯಗಳು 26:18 ಓದಿರಿ. ನೀವು ____________ ಬೆಳಕಿಗೂ ಸೈತಾನನ ___________ ______________ ಕಡೆಗೂ ತಿರುಗಿಕೊಂಡು ಪಾಪಪರಿಹಾರವನ್ನು ಹೊಂದಿಕೊಂಡಿದ್ದೀರೋ?

***ಕತ್ತಲೆಯಿಂದ/ಅಧಿಕಾರದಿಂದ/ದೇವರು***

19. ಯೆಹೆಜ್ಕೇಲನು 36:26–27 ಮತ್ತು ಅಪೊಸ್ತಲರ ಕೃತ್ಯಗಳು 11:15–18 ಓದಿರಿ. ದೇವರ ಮಾರ್ಗದಲ್ಲಿ ನಡೆಯಲು ನಿಮಗೆ ನೂತನ ಮನಸ್ಸು ಮತ್ತು ನೂತನ ಆತ್ಮವು ಕೊಡಲ್ಪಟ್ಟಿದೆಯೇ?

20. ಲೂಕ 18:13–14 ಓದಿರಿ. ನಿಮ್ಮ ಪಾಪಕ್ಷಮೆಗಾಗಿ ನೀವು ದೇವರನ್ನು ಬೇಡಿಕೊಂಡಿದ್ದೀರೋ?

# ಪಾಠ 7

# ನಂಬಿಕೆಯ ಮೂಲಕ ರಕ್ಷಿಸಲ್ಪಡುವ ಉದ್ದೇಶ

*ಜ್ಹೂಣ್ ಕ್ರೊ*

ಒಬ್ಬ ಮನುಷ್ಯನು ತನ್ನ ಮದುವೆಯ ದಿನ ಪಾಸ್ಟರ್‌ರವರ ಎದುರಿನಲ್ಲಿ ನಿಂತಾಗ, ಪಾಸ್ಟರ್‌ರವರು ಇದ್ದಕ್ಕಿದ್ದಂತೆ, “ಈ ಸ್ತ್ರೀಯನ್ನು ನಿನಗೆ ಅಡುಗೆ ಮಾಡುವುದಕ್ಕಾಗಿ, ಮನೆ ಸ್ವಚ್ಛಗೊಳಿಸುವುದಕ್ಕಾಗಿ, ಪಾತ್ರೆ ತೊಳೆಯುವುದಕ್ಕಾಗಿ ಸ್ವೀಕರಿಸುತ್ತೀಯೋ? ಈ ದಿನದಿಂದ ಮುಂದೆ ಮರಣವು ನಿಮ್ಮನ್ನು ಅಗಲಿಸುವತನಕ ನೆಲಗುಡಿಸಿ ಒರೆಸಲು, ಮನೆಯ ದೂಳು ತೆಗೆಯಲು ನೇಮಿಸಿಕೊಳ್ಳುತ್ತೀಯೋ?” ಎಂದು ಹೇಳಿಬಿಟ್ಟರೆ ಹೇಗೆ! ಮತ್ತು ಮದುವೆಯಾಗಲು ಬಂದವಳ ಪ್ರತಿಕ್ರಿಯೆ ಹೀಗಾಗಿಬಿಟ್ಟರೆ, “ಸಾಕು ಮಾಡಿರಿ! ಈ ಎಲ್ಲ ಕೆಲಸಗಳನ್ನು ಮಾಡುವವಳು ಬೇಕಾದಲ್ಲಿ ನೀನು ಒಬ್ಬ ಕೆಲಸದಾಕೆಯನ್ನು ನೇಮಿಸಿಕೊ. ನನ್ನನ್ನು ನಾನಿರುವಂತೆಯೇ ಸ್ವೀಕರಿಸಿ ಪ್ರೀತಿಸು. ನನ್ನನ್ನು ಇದ್ದ ಹಾಗೆಯೇ ಸ್ವೀಕರಿಸುವುದಾದರೆ, ಈ ಎಲ್ಲ ಸಂಗತಿಗಳನ್ನು ನಿನಗಾಗಿ ನಾನು ಮಾಡುತ್ತೇನೆ, ಆದರೆ ನನ್ನನ್ನು ಸಂಪೂರ್ಣವಾಗಿ ಪ್ರೀತಿಸಬೇಕು! ನನಗೆ ಸೇರಿದೆಲ್ಲವನ್ನು! ಕೇವಲ ನನ್ನಿಂದಾಗುವ ಲಾಭವನ್ನು ಮಾತ್ರ ತೆಗೆದುಕೊಂಡು ನನ್ನ ವ್ಯಕ್ತಿತ್ವವನ್ನು ಸ್ವೀಕರಿಸುವುದಿರುವುದು ನನಗೆ ಬೇಡ”.

ಎ. ಡಬ್ಲ್ಯೂ. ಟೋಜ್ಹರ್ ಎಂಬ ಭಕ್ತರು ಹೀಗೆ ಹೇಳಿದ್ದಾರೆ, “ಕೆಲವು ಬೋಧಕರು, ರಕ್ಷಿಸುವ ನಂಬಿಕೆಯ ನಿಜವಾದ ಗುರಿಯು ಕ್ರಿಸ್ತನೇ ಆಗಿದ್ದಾನೆ ಎನ್ನುವುದನ್ನು ಗುರುತಿಸದೆ ಹೋಗುವುದು ಸೋಜಿಗವೇ ಸರಿ; “ರಕ್ಷಕನು”, ಅಥವ “ಕರ್ತನು” ಆಗಿದ್ದಾನೆ ಎಂದಲ್ಲ, ಕ್ರಿಸ್ತನು ಎನ್ನುವ ಏಕಮಾತ್ರ ಕಾರಣಕ್ಕೆ. ದೇವರು, ಕ್ರಿಸ್ತನ ಯಾವುದೋ ಒಂದು ಪದವಿಯ ಮೇಲೆ ಭರವಸವಿಡುವವರಿಗೆ ರಕ್ಷಣೆಯನ್ನು ಅನುಗ್ರಹಿಸುವುದಿಲ್ಲ, ಅಥವ ರಕ್ಷಣೆಗಾಗಿ ಕ್ರಿಸ್ತನ ಆ ಪದವಿಯನ್ನು ಪ್ರದರ್ಶನಕ್ಕಿಡುವುದಿಲ್ಲ. ಯೇಸುಕ್ರಿಸ್ತನ ಪ್ರಾಯಶ್ಚಿತ್ತಯಜ್ಞ, ಕ್ರೂಜೆ, ಯಾಜಕತ್ವ ಇವುಗಳನ್ನು ನಂಬುವಂತೆ ಒತ್ತಾಯಿಸುವುದೂ ಇಲ್ಲ. ಇವೆಲ್ಲವೂ ಕ್ರಿಸ್ತನಲ್ಲಿ ಅಡಕವಾಗಿರುವುದು ನಿಜವೆ, ಅವುಗಳನ್ನು ಬೇರ್ಪಡಿಸುವುದಾಗಲೀ, ಅಥವ ಉಳಿದವುಗಳನ್ನು ಹೊರತುಪಡಿಸಿ ಒಂದನ್ನು ಮಾತ್ರವೇ ಹಿಡಿದುಕೊಳ್ಳುವುದಾಗಲೀ ಮಾಡಲಾಗದು. ಅಲ್ಲದೆ ಕ್ರಿಸ್ತನ ಒಂದು ಪದವಿಯನ್ನು ಸ್ವೀಕರಿಸಿ ಇನ್ನುಳಿದವುಗಳನ್ನು ತಿರಸ್ಕರಿಸುವುದೂ ಸಾಧ್ಯವಿಲ್ಲ. ಹಾಗೆ ಮಾಡಲು ಸಾಧ್ಯವಿದೆ ಎನ್ನುವ ಅಭಿಪ್ರಾಯವಿರುವುದಾದರೆ ಅದು ಆಧುನಿಕಕಾಲದ

ಪಾಷಂಡ ಬೋಧನೆಯಾಗಿದೆ, ಮತ್ತು ಇದರೊಂದಿಗೆ ನಾನು ಹೇಳಬಯಸುವುದೇನೆಂದರೆ ಎಲ್ಲ ಪಾಷಂಡಬೋಧನೆಗಳ ರೀತಿಯಲ್ಲಿಯೇ ಇದೂ ಸಹ ಕ್ರೈಸ್ತರೊಳಗೆ ಕೆಡುಕಿನ ಪರಿಣಾಮಗಳನ್ನು ಬೀರುತ್ತದೆ" (*The Root of the Righteousness pp. 84-86*).

ನಿಮಗಿದು ಅರ್ಥವಾಯಿತೇ? ಕ್ರಿಸ್ತನ ಒಂದು ಭಾಗವನ್ನು, ಒಂದು ಪದವಿಯನ್ನು ಮಾತ್ರ ಮಹತ್ವಪೂರ್ಣವಾಗಿ ಯಾಕೆ ನೋಡಬೇಕು? ಅದು, ಒಬ್ಬನು ಮದುವೆ ಮಾಡಿಕೊಳ್ಳುವಾಗ ತನ್ನ ಹೆಂಡತಿಯನ್ನು ಒಬ್ಬ ವ್ಯಕ್ತಿಯಾಗಿ ಸ್ವೀಕರಿಸದೆ ತನ್ನ ಅಡಿಗೆಯವಳನ್ನಾಗಿ ಸ್ವೀಕರಿಸಿದಂತೆ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ಯೋಹಾನ 1:12 ಓದಿರಿ. ಯಾರಾರು __________ ಅಂಗೀಕರಿಸಿದರೋ:

ಅ. ಆತನನ್ನು

ಇ. ಯೇಸುವನ್ನು ರಕ್ಷಕನೆಂದು

ಉ. ಯೇಸುವನ್ನು ಕರ್ತನೆಂದು

ಎ. ಯೇಸುವನ್ನು ಯಾಜಕನೆಂದು ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.

***ಯೋಹಾನ 1:12*– ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.*

2. ಅಪೊಸ್ತಲರ ಕೃತ್ಯಗಳು 16:31 ಓದಿರಿ. ನಾವು ಯಾರ ಮೇಲೆ ನಂಬಿಕೆಯಿಡಬೇಕು?

***ಅಪೊಸ್ತಲರ ಕೃತ್ಯಗಳು 16:31*– ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆಹೊಂದುವಿ, ನಿನ್ನ ಮನೆಯವರೂ ರಕ್ಷಣೆಹೊಂದುವರು ಎಂದು ಹೇಳಿ ಅವನಿಗೂ ಅವನ ಮನೆಯಲ್ಲಿದ್ದವರೆಲ್ಲರಿಗೂ ದೇವರ ವಾಕ್ಯವನ್ನು ತಿಳಿಸಿದರು.*

3. ಲೂಕ 6:46 ಓದಿರಿ. “ಕರ್ತನು” ಎಂದರೆ ಅರ್ಥವೇನು?

***ಲೂಕ 6:46* – ಇದಲ್ಲದೆ ನೀವು ನನ್ನನ್ನು ಸ್ವಾಮಿ ಸ್ವಾಮಿ ಅಂತ ಕರೆದು ನಾನು ಹೇಳುವುದನ್ನು ನಡಿಸದೆ ಇರುವುದೇಕೆ?*

4. ಮತ್ತಾಯ 1:21 ಓದಿರಿ. “ಯೇಸು” ಎಂದರೆ ಅರ್ಥವೇನು?

***ಮತ್ತಾಯ 1:21* – ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು ಅಂದನು.*

5. ಲೂಕ 23:2 ಓದಿರಿ. "ಕ್ರಿಸ್ತನು" ಎಂದರೆ ಅರ್ಥವೇನು?

*ಲೂಕ 23:2 – ಇವನು ತಾನೇ ಕ್ರಿಸ್ತನೆಂಬ ಒಬ್ಬ ಅರಸನಾಗಿದ್ದೇನೆಂದು ಹೇಳುತ್ತಾ ಕೈಸರನಿಗೆ ತೆರಿಗೆಕೊಡಬಾರದೆಂದು ಬೋಧಿಸುತ್ತಾ ನಮ್ಮ ದೇಶದವರ ಮನಸ್ಸು ಕೆಡಿಸುವದನ್ನು ನಾವು ಕಂಡೆವು ಎಂಬದಾಗಿ ಆತನ ಮೇಲೆ ದೂರು ಹೇಳುವುದಕ್ಕೆ ತೊಡಗಿದರು.*

6. ರೋಮಾಪುರದವರಿಗೆ 1:16 ಓದಿರಿ. ಈ ವಾಕ್ಯದ ಆಧಾರದ ಮೇಲೆ, ಒಳ್ಳೆಯ ವಾರ್ತೆ ಅಥವ ಸುವಾರ್ತೆ ಎಂದರೆ ____________

*ರೋಮಾಪುರದವರಿಗೆ 1:16 – ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದಾಗಿದೆ.*

7. ರೋಮಾಪುರದವರಿಗೆ 1:1–3 ಓದಿರಿ. ದೇವರ ಸುವಾರ್ತೆಯು ______________ ಕೇಂದ್ರೀಕರಿಸಿದ ವಿಷಯವಾಗಿದೆ?

ಆತನ ಮಗನ ಕೆಲವು ವಿಷಯಗಳನ್ನು ಕುರಿತಾಗಿಯೋ ಅಥವ ಪೂರ್ತಿಯಾಗಿಯೋ?

*ರೋಮಾಪುರದವರಿಗೆ 1:1–3 – ಯೇಸುಕ್ರಿಸ್ತನ ದಾಸನೂ ಅಪೊಸ್ತಲನಾಗುವದಕ್ಕೆ ಕರೆಯಲ್ಪಟ್ಟವನೂ ದೇವರ ಸುವಾರ್ತೆಯನ್ನು ಸಾರುವದಕ್ಕೆ ನೇಮಿಸಲ್ಪಟ್ಟವನೂ ಆಗಿರುವ ಪೌಲನು ರೋಮಾಪುರದಲ್ಲಿ ದೇವರಿಗೆ ಪ್ರಿಯರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರೆಲ್ಲರಿಗೆ ಬರೆಯುವದೇನಂದರೆ – ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ. [2] ಸುವಾರ್ತೆಯನ್ನು ಸಾರಿ ಹೇಳಿಸುತ್ತೇನೆಂದು ದೇವರು ಮುಂಚಿತವಾಗಿ ಪವಿತ್ರಶಾಸ್ತ್ರಗಳಲ್ಲಿ ತನ್ನ ಪ್ರವಾದಿಗಳ ಮೂಲಕ ಮಾತುಕೊಟ್ಟನು. [3] ಈ ಸುವಾರ್ತೆಯು ದೇವರ ಮಗನೂ ನಮ್ಮ ಕರ್ತನೂ ಆಗಿರುವ ಯೇಸುಕ್ರಿಸ್ತನ ವಿಷಯವಾದದ್ದು.*

8. ಯೋಹಾನ 6:54 ಓದಿರಿ. ನೀವು ಇಲ್ಲಿ ಹೇಳಿರುವ 'ತಿಂದರೆ' ಎನ್ನುವುದರ ಅರ್ಥವೇನು?

*ಯೋಹಾನ 6:54 – ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನಿತ್ಯಜೀವವನ್ನು ಹೊಂದಿದ್ದಾನೆ; ಮತ್ತು ನಾನು ಅವನನ್ನು ಕಡೇದಿವಸದಲ್ಲಿ ಎಬ್ಬಿಸುವೆನು.*

9. ಗಲಾತ್ಯದವರಿಗೆ 3:27 ಓದಿರಿ. ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡರೆ ಅವರು ________ ಧರಿಸಿಕೊಂಡರು.

ಅವರು ಕ್ರಿಸ್ತನ ಯಾವ ಭಾಗವನ್ನು ಧರಿಸಿಕೊಂಡರು?

***ಗಲಾತ್ಯದವರಿಗೆ 3:27*** *– ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ.*

10. ಅಪೊಸ್ತಲರ ಕೃತ್ಯಗಳು 9:5–6 ಓದಿರಿ. ಸೌಲನು ದೇವರ ಕಡೆಗೆ ತಿರುಗಿಕೊಂಡಾಗ, ಅವನು ಯಾವ ಎರಡು ಪ್ರಶೆಗಳನ್ನು ಕೇಳಿದನು?

***ಅಪೊಸ್ತಲರ ಕೃತ್ಯಗಳು 9:5–6*** *– ಅವನು – ಕರ್ತನೇ, ನೀನಾರು ಎಂದು ಕೇಳಿದ್ದಕ್ಕೆ ಕರ್ತನು – ನೀನು ಹಿಂಸೆಪಡಿಸುವ ಯೇಸುವೇ ನಾನು. [6] ನೀನೆದ್ದು ಊರೊಳಕ್ಕೆ ಹೋಗು, ನೀನು ಮಾಡಬೇಕಾದದ್ದು ಅಲ್ಲಿ ನಿನಗೆ ತಿಳಿಸಲ್ಪಡುವದು ಎಂದು ಹೇಳಿದನು.*

11. ರೋಮಾಪುರದವರಿಗೆ 7:4 ಓದಿರಿ. ನಾವು ಯಾರಿಗೆ ಸೇರಿದವರಾಗಿದ್ದೇವೆ?

ಆತನ ಯಾವ ಅಂಗಕ್ಕೆ ಸೇರಿದವರಾಗಿದ್ದೇವೆ?

***ರೋಮಾಪುರದವರಿಗೆ 7:4*** *– ಹಾಗೆಯೇ ನನ್ನ ಸಹೋದರರೇ, ನೀವು ಸಹ ಕ್ರಿಸ್ತನ ದೇಹದ ಮೂಲಕವಾಗಿ ಧರ್ಮಶಾಸ್ತ್ರದ ಪಾಲಿಗೆ ಸತ್ತಿರಿ. ದೇವರಿಗೆ ಫಲವಾಗುವದಕ್ಕಾಗಿ ಮತ್ತೊಬ್ಬನನ್ನು ಅಂದರೆ ಸತ್ತು ಜೀವಿತನಾಗಿ ಎದ್ದಾತನನ್ನು ಸೇರಿಕೊಂಡಿರಿ.*

12. ನೀವು ಕ್ರಿಸ್ತನೊಂದಿಗೆ ಐಕ್ಯವಾಗಿರುವುದರಿಂದ ಸಂತೋಷವಾಗಿದ್ದೀರೋ?

ನೀವು ಆತನೊಂದಿಗೆ ಮಾತನಾಡುತ್ತೀರೋ, ಸಂವಹನದಲ್ಲಿದ್ದೀರೋ, ಆತನನ್ನು ಪ್ರೀತಿಸುತ್ತೀರೋ ಮತ್ತು ಆರಾಧಿಸುತ್ತೀರೋ?

## ಉತ್ತರಗಳು

1. ಯೋಹಾನ 1:12 ಓದಿರಿ. ಯಾರಾರು __________ ಅಂಗೀಕರಿಸಿದರೋ:

*ಅ. ಆತನನ್ನು, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.*

2. ಅಪೊಸ್ತಲರ ಕೃತ್ಯಗಳು 16:31 ಓದಿರಿ. ನಾವು ಯಾರ ಮೇಲೆ ನಂಬಿಕೆಯಿಡಬೇಕು?

*ಕರ್ತನಾದ ಯೇಸುಕ್ರಿಸ್ತನ ಮೇಲೆ*

3. ಲೂಕ 6:46 ಓದಿರಿ. "ಕರ್ತನು" ಎಂದರೆ ಅರ್ಥವೇನು?

*ಯಜಮಾನನು, ಅರಸನು, ಒಡೆಯನು, ನಮ್ಮ ಜೀವನದ ಮೇಲೆ ಅಧಿಕಾರ ಹೊಂದಿರುವಾತನು. ಈ ಪದವು ದೈವತ್ವಕ್ಕೂ ಸೂಚನೆಯಾಗಿದೆ.*

4. ಮತ್ತಾಯ 1:21 ಓದಿರಿ. "ಯೇಸು" ಎಂದರೆ ಅರ್ಥವೇನು?

*ಯೇಸು ಎಂದರೆ ಪಾಪಗಳಿಂದ ಬಿಡಿಸಿ ಕಾಯುವವನು*

5. ಲೂಕ 23:2 ಓದಿರಿ. "ಕ್ರಿಸ್ತನು" ಎಂದರೆ ಏನು?

*ಯೇಸು ನಮ್ಮ ಅರಸನು ಮತ್ತು ಮೆಸ್ಸೀಯನು ಆಗಿದ್ದಾನೆ*

6. ರೋಮಾಪುರದವರಿಗೆ 1:16 ಓದಿರಿ. ಈ ವಾಕ್ಯದ ಆಧಾರದ ಮೇಲೆ, ಒಳ್ಳೆಯ ವಾರ್ತೆ ಅಥವ ಸುವಾರ್ತೆ ಎಂದರೆ

*ಕ್ರಿಸ್ತನು ತಾನೇ, ಆತನೊಂದಿಗೆ ಉಳಿದ ಎಲ್ಲ ಆಶೀರ್ವಾದಗಳೂ ಲಭಿಸುತ್ತವೆ*

7. ರೋಮಾಪುರದವರಿಗೆ 1:1–3 ಓದಿರಿ. ದೇವರ ಸುವಾರ್ತೆಯು ಯಾರನ್ನು ಕೇಂದ್ರವಾಗಿಟ್ಟುಕೊಂಡು ನುಡಿದದ್ದಾಗಿದೆ ಅಥವ ಯಾರ ವಿಷಯವಾಗಿದೆ?

*ದೇವರ ಮಗನೂ ನಮ್ಮ ಕರ್ತನೂ ಆಗಿರುವ ಯೇಸುಕ್ರಿಸ್ತನ ವಿಷಯವಾದದ್ದು*

ಆತನ ಮಗನ ಸ್ವಲ್ಪ ವಿಷಯಗಳನ್ನು ಕುರಿತಾಗಿಯೋ ಅಥವ ಪೂರ್ತಿಯಾಗಿಯೋ?

*ಆತನ ಕುರಿತು ಪೂರ್ತಿಯಾಗಿ*

8. ಯೋಹಾನ 6:54 ಓದಿರಿ. ಇಲ್ಲಿ ತಿನ್ನುವುದು ಎಂದರೆ ಅರ್ಥವೇನು?

*ನೀವು ಅದನ್ನು ಪೂರ್ತಿಯಾಗಿ ಒಳಗೆ ಸ್ವೀಕರಿಸುವುದು. ಒಂದು ಅರ್ಥದಲ್ಲಿ, ನೀವು ತಿಂದದ್ದು ನಿಮ್ಮ ಜೀವದಲ್ಲಿ ಬೆರೆಯುತ್ತದೆ, ನಿಮಗೆ ಬಲವನ್ನು ನೀಡುತ್ತದೆ*

9. ಗಲಾತ್ಯದವರಿಗೆ 3:27 ಓದಿರಿ. ಒಬ್ಬ ವ್ಯಕ್ತಿಯು ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡರೆ ಅವರು _________ ಧರಿಸಿಕೊಂಡರು.

*ಆತನನ್ನು, ಸಂಪೂರ್ಣವಾಗಿ*

10. ಅಪೊಸ್ತಲರ ಕೃತ್ಯಗಳು 9:5–6/22:8, 10 ಓದಿರಿ. ಸೌಲನು ದೇವರ ಕಡೆಗೆ ತಿರುಗಿಕೊಂಡಾಗ, ಅವನು ಯಾವ ಎರಡು ಪ್ರಶ್ನೆಗಳನ್ನು ಕೇಳಿದನು?

*ಕರ್ತನೇ, ನೀನಾರು? ಕರ್ತನೇ, ನಾನೇನು ಮಾಡಬೇಕು?*

11. ರೋಮಾಪುರದವರಿಗೆ 7:4 ಓದಿರಿ. ನಾವು ಯಾರಿಗೆ ಸೇರಿದವರಾಗಿದ್ದೇವೆ?

*ಕರ್ತನಾದ ಯೇಸು ಕ್ರಿಸ್ತನಿಗೆ*

ಆತನ ಯಾವ ಅಂಗಕ್ಕೆ ಸೇರಿದವರಾಗಿದ್ದೇವೆ?

*ಆತನಿಗೇ ಸಂಪೂರ್ಣವಾಗಿ*

12. ನೀವು ಕ್ರಿಸ್ತನೊಂದಿಗೆ ಐಕ್ಯವಾಗಿರುವುದರಿಂದ ಸಂತೋಷವಾಗಿದ್ದೀರೋ?

*ನೀವು ಆತನೊಂದಿಗೆ ಮಾತನಾಡುತ್ತೀರೋ, ಸಂವಹನದಲ್ಲಿದ್ದೀರೋ, ಪ್ರೀತಿಸುತ್ತೀರೋ ಮತ್ತು ಆರಾಧಿಸುತ್ತೀರೋ?*

# ಪಾಠ 8

# ದೇವರ ಆಜ್ಞೆಗಳನ್ನು ಸರಿಯಾಗಿ ಉಪಯೋಗಿಸುವುದು

***ಜೋನ್ ಕ್ರೊ***

ಒಂದು ದಿನ ಜೊ ಮತ್ತು ನಾನು, ಕೆರೆಯ ಬಳಿ ಬಿಲ್ ಮತ್ತು ಸ್ಟೀವ್‌ರವರೊಂದಿಗೆ ಮಾತನಾಡುತ್ತಿದ್ದೆವು. ಮಾತಿನ ಮಧ್ಯೆ, "ದೇವರು ಅಥವ ಯೇಸುಕ್ರಿಸ್ತನ ಕುರಿತು ಕೇಳಿರದ ಜನರಿಗೆ, ದೇವರ ಮುಂದೆ ಲೆಕ್ಕ ಕೊಡುವ ಹೊಣೆಗಾರಿಕೆಯನ್ನು ಹೊರಿಸುವುದು ಹೇಗೆ ಸಾಧ್ಯ?" ಎಂಬ ಪ್ರಶ್ನೆ ಬಂದಾಗ, ನಾನು, "ಬಿಲ್, ಒಂದು ವೇಳೆ ನೀನು ಸ್ಟೀವ್‌ಅನ್ನು ಭೇಟಿಯಾಗಲು ಅವನ ಮನೆಗೆ ಹೋದಾಗ, ಸ್ಟೀವ್ ಹೊರಗಡೆ ಹೋಗಿದ್ದು, ಮನೆಯಲ್ಲಿ ಅವನ ಹೆಂಡತಿ ಮಾತ್ರವೇ ಇದ್ದಳು ಎಂದುಕೊಳ್ಳೋಣ. ನೀನು ಆಕೆಯ ಸಂಗಡ ವ್ಯಭಿಚಾರ ಮಾಡಿದಲ್ಲಿ ನೀನು ದಶಾಜ್ಞೆಗಳನ್ನು ಎಂದಿಗೂ ಕೇಳಿರದಿದ್ದರೂ ಬೈಬಲ್‌ಅನ್ನು ಓದಿರದಿದ್ದರೂ, ನಿನ್ನ ಸ್ನೇಹಿತನ ಹೆಂಡತಿಯನ್ನು ಕೆಡಿಸಿದ ಪಾಪಪ್ರಜ್ಞೆ ನಿನ್ನನ್ನು ಕಾಡುವುದಲ್ಲವೇ? ಆ ಪಾಪಪ್ರಜ್ಞೆ ಮತ್ತು ಹೊಣೆಗಾರಿಕೆ ಭಾವಗಳು ಎಲ್ಲಿಂದ ಬಂದವು?" ಎಂದು ಕೇಳಿದೆ.

ದೇವರು ಪ್ರತಿ ಮನುಷ್ಯನಿಗೆ ಧರ್ಮಶಾಸ್ತ್ರ ಮತ್ತು ಮನಸ್ಸಾಕ್ಷಿಯ ಮೂಲಕ ಯಾವುದು ಸರಿ ಎನ್ನುವುದನ್ನು ತಿಳಿಯುವಂತೆಯೂ ತಪ್ಪು ಮಾಡಿದಾಗ ಪಾಪಪ್ರಜ್ಞೆ ಕಾಡುವಂತೆಯೂ ಏರ್ಪಡಿಸಿದ್ದಾನೆ. ಧರ್ಮಶಾಸ್ತ್ರ ಮತ್ತು ಮನಸ್ಸಾಕ್ಷಿಗಳು ನಮ್ಮ ನಡತೆಯನ್ನು ಖಂಡಿಸುತ್ತವೆ ಅಥವ ಅನುಮೋದಿಸುತ್ತವೆ (ರೋಮಾಪುರದವರಿಗೆ 2:14–15).

ಬಿಲ್ ತಾನು ಉತ್ತಮ ವ್ಯಕ್ತಿಯೆಂದು ತನ್ನನ್ನು ಕುರಿತು ನನ್ನ ಬಳಿ ಹೇಳಿಕೊಳ್ಳುತ್ತಿದ್ದನು. ತನಗೆ ರಕ್ಷಕನ ಅವಶ್ಯಕತೆ ಇಲ್ಲವೆಂಬುದು ಅವನ ಅಭಿಪ್ರಾಯ. ನಾನು ವಿಮೋಚನಕಾಂಡ 20ನೇ ಅಧ್ಯಾಯವನ್ನು ತೆಗೆದು ಅವನ ಮುಂದೆ ದಶಾಜ್ಞೆಗಳನ್ನು ಓದತೊಡಗಿದೆ. "ಬಿಲ್ ನಿನ್ನ ಜೀವಿತದಲ್ಲಿ ದೇವರು ಯಾವಾಗಲೂ ಪ್ರಥಮ ಸ್ಥಾನದಲ್ಲಿ ಇದ್ದಾನೋ, ಮತ್ತು ನೀನು ಈ ಪ್ರಪಂಚದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ದೇವರನ್ನೇ ಪ್ರೀತಿಸಿದ್ದೀಯೋ? ಇಲ್ಲವಾದರೆ, ನೀನು ದೇವರ ಮೊದಲನೆಯ ಆಜ್ಞೆಯನ್ನು ಮುರಿದಿದ್ದೀಯ" (ವಿಮೋ 20:3). ದೇವರಿಗಿಂತಲೂ ಮಿಗಿಲಾಗಿ ಯಾವುದಕ್ಕಾದರೂ ಪ್ರಾಮುಖ್ಯತೆ ನೀಡಿದಲ್ಲಿ, ನೀನು ಎರಡನೆಯ ಆಜ್ಞೆಯನ್ನು ಉಲ್ಲಂಘಿಸಿರುವೆ (ವಿಮೋ. 20:4). "ನೀನು ಯೇಸುವಿನ ನಾಮವನ್ನು ಅಯೋಗ್ಯವಾಗಿ ಅಥವ ಯಾರನ್ನಾದರೂ ಗದರಿಕೊಳ್ಳಲು ಉಪಯೋಗಿಸಿರುವುದಾದರೆ, ನೀನು

ಮೂರನೆಯ ಆಜ್ಞೆಯನ್ನು ಉಲ್ಲಂಘಿಸಿರುವೆ (ವಿಮೋ. 20:7). ವಾರದ ಒಂದು ದಿನವನ್ನು ದೇವಾರಾಧನೆಗಾಗಿ, ಆತನನ್ನು ಗೌರವಿಸಲು ಮೀಸಲಾಗಿರಿಸಿದ್ದೀಯೋ? ಇಲ್ಲವಾದಲ್ಲಿ ನಾಲ್ಕನೆಯ ಆಜ್ಞೆಯನ್ನು ಉಲ್ಲಂಘಿಸಿರುವೆ" (ವಿಮೋಚನಕಾಂಡ 20:8). ನೀನು ನಿನ್ನ ಯೌವನದ ದಿನಗಳಲ್ಲಿ ನಿನ್ನ ತಂದೆತಾಯಿಗಳನ್ನು ಯಾವಾಗಲೂ ಗೌರವಿಸಿರುವೆಯಾ? ಇಲ್ಲವೆಂದರೆ ನೀನು ಐದನೆಯ ಆಜ್ಞೆಯನ್ನು ಮುರಿದಂತಾಯಿತು" (ವಿಮೋಚನಕಾಂಡ 20:12). "ನೀನು ಎಂದಾದರೂ ಯಾರ ಮೇಲಾದರೂ ರೋಷಗೊಂಡಿದ್ದೆಯಾ? ನೀನು ಆರನೆಯ ಆಜ್ಞೆಯನ್ನು ಉಲ್ಲಂಘಿಸಿದಂತಾಯಿತು" (ವಿಮೋಚನಕಾಂಡ 20:13 ಮತ್ತು ಮತ್ತಾಯ 5:21–22 ಹೋಲಿಸಿ ನೋಡಿರಿ). "ನೀನು ಯಾವ ಸ್ತ್ರೀಯನ್ನಾದರೂ ನೋಡಿ ಮೋಹಿಸಿರುವೆಯಾ? ನೀನು ಏಳನೆಯ ಆಜ್ಞೆಯನ್ನು ಮೀರಿದೆ" (ವಿಮೋಚನಕಾಂಡ 20:14ನ್ನು ಮತ್ತಾಯ 5:27–28ರೊಂದಿಗೆ ಹೋಲಿಸಿರಿ). "ನಿಮಗೆ ಸೇರದಿರುವ ಏನನ್ನಾದರೂ ತೆಗೆದುಕೊಂಡಿರುವೆಯಾ? ಅಂದರೆ ಎಂಟನೆಯ ಆಜ್ಞೆಯನ್ನು ಮುರಿದಂತಾಯಿತು" (ವಿಮೋಚನಕಾಂಡ 20:15). "ನೀನು ಯಾವಾಗಲೂ ಸತ್ಯವನ್ನೇ ನುಡಿದಿರುವೆಯಾ? ಇಲ್ಲವಾದರೆ, ನೀನು ಒಂಬತ್ತನೇ ಆಜ್ಞೆಯನ್ನು ಉಲ್ಲಂಘಿಸಿದಂತಾಯಿತು" (ವಿಮೋಚನಕಾಂಡ 20:16). "ಬೇರೆಯವರಿಗೆ ಸೇರಿದ ಏನನ್ನಾದರೂ ನೀನು ಆಶಿಸಿದ್ದೀಯೋ? ಅಂದರೆ ನೀನು ಹತ್ತನೆಯ ಆಜ್ಞೆಯನ್ನೂ ಮುರಿದುಬಿಟ್ಟೆ (ವಿಮೋಚನಕಾಂಡ 20:17). "ಯೇಸುವು ಪಾಪಿಗಳನ್ನು ಬಿಡಿಸಲು ಯಾಕೆ ಬಂದನೆಂದು ಈಗ ತಿಳಿಯಿತೋ?" (ಮಾರ್ಕ 2:16–17).

ನಾನು ಒಳ್ಳೆಯವನು, ಅಥವ ಸ್ವರ್ಗಕ್ಕೆ ಹೋಗಲು ಅವಶ್ಯವಿದ್ದಷ್ಟು ಒಳ್ಳೆಯದನ್ನು ಮಾಡಲು ಪ್ರಯತ್ನಿಸುತ್ತಿದ್ದೇನೆ ಎಂದು ಅಂದುಕೊಳ್ಳುವವರಿಗೆ ಎದುರಾಗುವ ತೊಡಕೇನೆಂದರೆ, ನಾವೆಲ್ಲರೂ ದಶಾಜ್ಞೆಗಳನ್ನು ಮುರಿದಿದ್ದೇವೆ. ಯಾಕೋಬನು 2:10ರಲ್ಲಿ, "ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ" ಎಂದು ಬರೆದದೆ. "ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ" (ರೋಮಾಪುರದವರಿಗೆ 3:19–20 ನೋಡಿರಿ).

ನಮ್ಮೆಲ್ಲರಿಗೂ ರಕ್ಷಕನು ಬೇಕಾಗಿದ್ದಾನೆ! "ರಕ್ಷಕನು" ಎಂಬ ಪದಕ್ಕೆ ಪಾಪದ ಶಿಕ್ಷೆಯಿಂದ ಬಿಡಿಸಬಲ್ಲವನು ಎಂಬ ಅರ್ಥವಿದೆ. ಯೇಸುವು ನಾಶದಿಂದ ತಪ್ಪಿಸಿ ಜನರನ್ನು ನಿತ್ಯಜೀವಕ್ಕೆ ಸೇರಿಸುವನು (ಮತ್ತಾಯ 1:21).

ಪರಲೋಕಕ್ಕೆ ಹೋಗಲು, ನಮ್ಮ ನೀತಿಯು ದೇವರ ನೀತಿಗೆ ಸರಿಸಮಾನವಾಗಿರಬೇಕು (2 ಕೊರಿಂಥವರಿಗೆ 5:21). ಸುವಾರ್ತೆಯ ಒಳ್ಳೆಯ ಅಂಶವೆಂದರೆ ಯೇಸುವು ನಮ್ಮ ಪಾಪಗಳನ್ನು ಕ್ಷಮಿಸುವುದು ಮಾತ್ರವಲ್ಲದೆ ಆತನು ತನ್ನ ನೀತಿಯನ್ನು ನಮಗೆ – ಉಚಿತ ಕೊಡುಗೆಯಾಗಿ – ನೀಡುತ್ತಾನೆ (ರೋಮಾಪುರದವರಿಗೆ 5:17 – *ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು*

*ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತವಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.)*

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ಮಾರ್ಕ 2:16–17 ಓದಿರಿ. ಯೇಸು ಯಾರನ್ನು ರಕ್ಷಿಸಲು ಬಂದನು?

   ***ಮಾರ್ಕ 2:16–17 –*** *ಫರಿಸಾಯರಾದ ಶಾಸ್ತ್ರಿಗಳು ಆತನ ಹಿಂದೆ ಹೋಗಿ ಆತನು ಪಾಪಗಳ ಮತ್ತು ಸುಂಕದವರ ಸಂಗಡ ಊಟಮಾಡುವದನ್ನು ಕಂಡು ಆತನ ಶಿಷ್ಯರಿಗೆ – ಈತನು ಸುಂಕದವರ ಮತ್ತು ಪಾಪಿಗಳ ಸಂಗಡ ಊಟಮಾಡುತ್ತಾನೆ ನೋಡಿರಿ ಎಂದು ಹೇಳಿದರು. [17] ಯೇಸು ಅದನ್ನು ಕೇಳಿ – ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ; ಕ್ಷೇಮವಿಲ್ಲದವರಿಗೆ ಬೇಕು. ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು ಅಂದನು.*

2. ರೋಮಾಪುರದವರಿಗೆ 2:1 ಓದಿರಿ. ನಾವು ಇತರರಲ್ಲಿ ದೋಷವೆಣಿಸುವಾಗ, ನಮಗೆ ಏನು ತೀರ್ಪುಮಾಡಿಕೊಳ್ಳುತ್ತೇವೆ?

   ಯಾಕೆ?

   ***ರೋಮಾಪುರದವರಿಗೆ 2:1 –*** *ಆದದರಿಂದ ಎಲೈ ಮನುಷ್ಯನೇ, ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಯಾವನಾದರೂ ಸರಿಯೇ, ಉತ್ತರ ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ. ಹೇಗಂದರೆ ಮತ್ತೊಬ್ಬರಲ್ಲಿ ದೋಷವೆಣಿಸುವದರಿಂದ ನಿನ್ನನ್ನು ನೀನೇ ದೋಷಿಯೆಂದು ತೀರ್ಪುಮಾಡಿಕೊಂಡ ಹಾಗಾಯಿತು. ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಆ ದೋಷಗಳನ್ನೇ ನಡಿಸುತ್ತೀಯಲ್ಲಾ.*

3. ಯಾಕೋಬನು 2:10 ಓದಿರಿ. ಒಬ್ಬನು ದೇವರ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಷ್ಟು ವಿಷಯದಲ್ಲಿ ಅಪರಾಧಿಯಾಗುತ್ತಾನೆ?

   ***ಯಾಕೋಬನು 2:10 –*** *ಯಾಕಂದರೆ ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ.*

4. ಗಲಾತ್ಯ 3:10 ಓದಿರಿ. ದೇವರ ಧರ್ಮಶಾಸ್ತ್ರವನ್ನು ಕೈಗೊಂಡು ನೀತಿವಂತನಾಗುವುದಾದರೆ, ಅದರ ಎಷ್ಟು ಭಾಗವನ್ನು ಕೈಗೊಳ್ಳಬೇಕಾಗುತ್ತದೆ?

ಎಷ್ಟು ಸಮಯದವರೆಗೆ ಈ ಆಜ್ಞೆಗಳನ್ನು ಕೈಕೊಳ್ಳಬೇಕು?

ನಾವು ಒಳ್ಳೆಯರಾಗಿ ನಡೆದುಕೊಳ್ಳಲು ಪ್ರಯತ್ನಿಸುವುದರಿಂದ ನಮಗೆ ರಕ್ಷಣೆಯಾಗುವುದಿಲ್ಲ ಎನ್ನುವುದು ನಿಮಗೆ ತಿಳಿಯಿತೇ?

***ಗಲಾತ್ಯದವರಿಗೆ 3:10*** *– ನೇಮನಿಷ್ಠೆಗಳನ್ನು ಆಧಾರಮಾಡಿಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ. ಹೇಗಂದರೆ, ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ ನಿತ್ಯವೂ ಕೈಗೊಳ್ಳದಿರುವ ಪ್ರತಿಯೊಬ್ಬನು ಶಾಪಗ್ರಸ್ತನೆಂದು ಸಾಸ್ತ್ರದಲ್ಲಿ ಬರೆದದೆ.*

5. ಗಲಾತ್ಯದವರಿಗೆ 2:16 ಓದಿರಿ. ದೇವರ ಉಚಿತವರವಾದ ನೀತಿನಿರ್ಣಯವು ಯಾವುದೇ ಒಬ್ಬ ವ್ಯಕ್ತಿಯನ್ನು ನಿರಪರಾಧಿಯೆಂದೂ ನಿರ್ದೋಷಿಯೆಂದೂ ದೇವರ ಎದುರಿನಲ್ಲಿ ನಿಲ್ಲಿಸುತ್ತದೆ. ಒಬ್ಬ ಪಾಪಿಗೆ, ಯೇಸುಕ್ರಿಸ್ತನಲ್ಲಿ ನಂಬಿಕೆಯಿಡವುದರ ಮೂಲಕವಾಗಿ ನೀತಿನಿರ್ಣಯವು ದೊರಕುತ್ತದೆಯಲ್ಲದೆ ಯೇಸುವಿನ ಮರಣ ಮತ್ತು ಪುನರುತ್ಥಾನದ ಮೂಲಕವಾಗಿ ಅದು ಸಾಧ್ಯವಾಗಿದೆ (1 ಕೊರಿಂಥದವರಿಗೆ 15:3–4 ಮತ್ತು ರೋಮಾಪುರದವರಿಗೆ 4:25). ಹಾಗಾದರೆ ಏನು ಮಾಡುವುದರಿಂದ ಮನುಷ್ಯನಿಗೆ ನೀತಿನಿರ್ಣಯವು ದೊರಕುವುದಿಲ್ಲ?

ಒಬ್ಬ ಮನುಷ್ಯನು ರಕ್ಷಿಸಲ್ಪಡುವುದು ಹೇಗೆ?

ಧರ್ಮಶಾಸ್ತ್ರದಿಂದ ಎಷ್ಟು ಜನರು ನೀತಿನಿರ್ಣಯವನ್ನು ಹೊಂದುತ್ತಾರೆ?

***ಗಲಾತ್ಯದವರಿಗೆ 2:16*** *– ಆದರೂ ಯಾವನಾದರೂ ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲವೆಂಬದು ನಮಗೆ ತಿಳಿದಿರುವದರಿಂದ ನಾವು ಸಹ ನೇಮನಿಷ್ಠೆಗಳನ್ನು ಬಿಟ್ಟು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುವದಕ್ಕಾಗಿ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟೆವು; ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.*

6. ರೋಮಾಪುರದವರಿಗೆ 6:14 ಓದಿರಿ. ಒಬ್ಬ ಕ್ರೈಸ್ತರಾಗಿ ನೀವು,
ಅ. ಧರ್ಮಶಾಸ್ತ್ರದ ಅಧೀನದಲ್ಲಿ ಇದ್ದೀರಿ
ಇ. ಕೃಪೆಯ ಅಧೀನದಲ್ಲಿದ್ದೀರಿ

***ರೋಮಾಪುರದವರಿಗೆ 6:14*** *– ಯಾಕಂದರೆ ಪಾಪವು ನಿಮ್ಮ ಮೇಲೆ ಅಧಿಕಾರನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ.*

7. ಯೆಹೆಜ್ಕೇಲನು 18:20 ಓದಿರಿ. ನೀವು ಕೃಪೆಗೆ ಅಧೀನರಾಗಿರುವುದಾದರೆ, ನಿಮ್ಮ ಪಾಪಕ್ಕೆ ಏನು ಶಿಕ್ಷೆಯಿದೆ?

***ಯೆಹೆಜ್ಕೇಲನು 18:20** – ಪಾಪಮಾಡುವವನೇ ಸಾಯುವನು; ಮಗನು ತಂದೆಯ ದೋಷಫಲವನ್ನು ಅನುಭವಿಸನು, ತಂದೆಯು ಮಗನ ದೋಷಫಲವನ್ನು ಅನುಭವಿಸನು; ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ, ದುಷ್ಟನ ದುಷ್ಟತನದ ಫಲವು ದುಷ್ಟನದೇ.*

8. ರೋಮಾಪುರದವರಿಗೆ 4:6–8 ಓದಿರಿ. ಕೃಪೆಗೆ ಅಧೀನರಾದವರಿಗೆ, ದೇವರು ನಿಮ್ಮ ಪಾಪಗಳ ವಿಷಯದಲ್ಲಿ ಯಾವ ಮೂರು ಸಂಗತಿಗಳನ್ನು ಮಾಡುತ್ತಾನೆ?

***ರೋಮಾಪುರದವರಿಗೆ 4:6–8** – ದೇವರು ಯಾವನನ್ನು ಪುಣ್ಯಕ್ರಿಯೆಗಳಿಲ್ಲದೆ ನೀತಿವಂತನೆಂದು ಎಣಿಸುತ್ತಾನೋ ಅವನು ಧನ್ಯನೆಂದು ದಾವೀದನು ಸಹ ಹೇಳುತ್ತಾನೆ. ಹೇಗಂದರೆ – ಯಾರ ಅಪರಾಧಗಳು ಪರಿಹಾರವಾಗಿವೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು.*

9. ರೋಮಾಪುರದವರಿಗೆ 5:1 ಓದಿರಿ. ಈಗ ನಾವು ನೀತಿನಿರ್ಣಯ ಹೊಂದಿರುವಲ್ಲಿ, ನಮಗೆ ಏನೆಲ್ಲ ಆಶೀರ್ವಾದಗಳಿವೆ?

***ರೋಮಾಪುರದವರಿಗೆ 5:1** – ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ.*

10. ರೋಮಾಪುರದವರಿಗೆ 5:9 ಓದಿರಿ. ಈಗ ನಾವು ಯೇಸುವಿನ ರಕ್ತದ ಮೂಲಕವಾಗಿ ರಕ್ಷಿಸಲ್ಪಟ್ಟಿರುವಲ್ಲಿ, ನಾವು ಯಾವುದರಿಂದ ರಕ್ಷಿಸಲ್ಪಟ್ಟಿದ್ದೇವೆ?

***ರೋಮಾಪುರದವರಿಗೆ 5:9** – ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಮತ್ತೂ ನಿಶ್ಚಯವಲ್ಲವೇ.*

11. ರೋಮಾಪುರದವರಿಗೆ 10:4 ಓದಿರಿ. ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ____________ ಅಂತ್ಯವಾಯಿತು.

***ರೋಮಾಪುರದವರಿಗೆ 10:4** – ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮಮಾರ್ಗಕ್ಕೆ ಅಂತ್ಯವಾಯಿತು.*

12. 1 ಕೊರಿಂಥದವರಿಗೆ 1:30 ಓದಿರಿ. ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ________________, ___________________, ________________, ಆದನು ________________ .

***1 ಕೊರಿಂಥದವರಿಗೆ 1:30** – ನೀವು ಕ್ರಿಸ್ತ ಯೇಸುವಿನಲ್ಲಿರುವದು ಆತನಿಂದಲೇ. ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು.*

13. ಫಿಲಿಪ್ಪಿಯವರಿಗೆ 3:9 ಓದಿರಿ. ನೀವು ಮೋಶೆಯ ಧರ್ಮಶಾಸ್ತ್ರಕ್ಕೆ ಅಧೀನರಾಗಿ ನೇಮನಿಷ್ಠೆಗಳನ್ನು ಅನುಸರಿಸಿ ನಡೆದರೆ, ನೀವು ____________ ಆಶ್ರಯಿಸಿದಂತಾಗುತ್ತದೆ.

***ಫಿಲಿಪ್ಪಿಯವರಿಗೆ 3:9** – ಇದರಲ್ಲಿ ನನ್ನ ಉದ್ದೇಶವೇನಂದರೆ – ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು ನೇಮನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನಾಶ್ರಯಿಸದೆ ಕ್ರಿಸ್ತನನ್ನು ನಂಬುವದರಿಂದ ದೊರಕುವಂಥ ಅಂದರೆ ಕ್ರಿಸ್ತನ ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವಂಥ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳಬೇಕೆಂಬದೇ.*

14. 1 ಕೊರಿಂಥದವರಿಗೆ 11:1 ಓದಿರಿ. ಕ್ರೈಸ್ತರಾದ ನಾವು ಕ್ರಿಸ್ತನ ನಿಯಮಕ್ಕೆ ಒಳಪಟ್ಟಿದ್ದೇವೆ. ಕ್ರಿಸ್ತನ ನಿಯಮವು ನೇಮನಿಷ್ಠೆಗಳಿಗೆ ಒಳಪಟ್ಟಿಲ್ಲ; ಅದು ಒಬ್ಬ ವ್ಯಕ್ತಿಗೆ ಒಳಪಟ್ಟು ಜೀವಿಸುವುದಾಗಿದೆ. ಆ ವ್ಯಕ್ತಿಯು ______________ .

***1 ಕೊರಿಂಥದವರಿಗೆ 11:1** – ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ.*

15. ರೋಮಾಪುರದವರಿಗೆ 8:3 ಓದಿರಿ. ಧರ್ಮಶಾಸ್ತ್ರವು ನಮ್ಮನ್ನು ರಕ್ಷಿಸುವುದು ಅಸಾಧ್ಯವಾಗಿತ್ತು, ಅಂದರೆ ಅದು ತಪ್ಪು ಎಂದು ಅರ್ಥವಲ್ಲ, ಆದರೆ ನಮ್ಮ ______________ ನಿಮಿತ್ತ ನಮಗೆ ಅದನ್ನು ಕೈಗೊಳ್ಳಲಾಗಲಿಲ್ಲ.

***ರೋಮಾಪುರದವರಿಗೆ 8:3** – ಧರ್ಮಶಾಸ್ತ್ರವು ನಮ್ಮ ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನಂದರೆ ಆತನು ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು.*

## ಉತ್ತರಗಳು

1. ಮಾರ್ಕ 2:16–17 ಓದಿರಿ. ಯೇಸು ಯಾರನ್ನು ರಕ್ಷಿಸಲು ಬಂದನು?

   ***ಪಾಪಿಗಳನ್ನು***

2. ರೋಮಾಪುರದವರಿಗೆ 2:1 ಓದಿರಿ. ನಾವು ಇತರರಲ್ಲಿ ದೋಷವೆಣಿಸುವಾಗ, ನಮಗೆ ಏನು ಮಾಡಿಕೊಳ್ಳುತ್ತೇವೆ?

   ***ನಮ್ಮನ್ನು ದೋಷಿಗಳೆಂದು ತೀರ್ಪುಮಾಡಿಕೊಳ್ಳುತ್ತೇವೆ.***

   ಯಾಕೆ?

   ***ಯಾಕೆಂದರೆ ನಾವು ಇತರರನ್ನು ದೋಷಿಗಳೆಂದು ತೀರ್ಪು ಮಾಡಿದರೂ ಅದೇ ತಪ್ಪುಗಳನ್ನು ನಾವೂ ಮಾಡುತ್ತಿರುತ್ತೇವೆ.***

3. ಯಾಕೋಬನು 2:10 ಓದಿರಿ. ಒಬ್ಬನು ದೇವರ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಷ್ಟು ವಿಷಯದಲ್ಲಿ ಅಪರಾಧಿಯಾಗುತ್ತಾನೆ?

   ***ಎಲ್ಲಾ ವಿಷಯದಲ್ಲೂ ಅಪರಾಧಿಯಾಗುತ್ತೇವೆ***

4. ಗಲಾತ್ಯದವರಿಗೆ 3:10 ಓದಿರಿ. ದೇವರ ಧರ್ಮಶಾಸ್ತ್ರವನ್ನು ಕೈಗೊಂಡು ನೀತಿವಂತನಾಗುವುದಾದರೆ, ಅದರ ಎಷ್ಟು ಭಾಗವನ್ನು ಕೈಗೊಳ್ಳಬೇಕಾಗುತ್ತದೆ?

   ***ಎಲ್ಲವನ್ನು***

   ಎಷ್ಟು ಸಮಯದವರೆಗೆ ಈ ಆಜ್ಞೆಗಳನ್ನು ಕೈಕೊಳ್ಳಬೇಕು?

   ***ಯಾವಾಗಲೂ ಕೈಕೊಳ್ಳುತ್ತಿರಬೇಕು***

   ನಾವು ಒಳ್ಳೆಯರಾಗಿ ನಡೆದುಕೊಳ್ಳಲು ಪ್ರಯತ್ನಿಸುವುದರಿಂದ ನಮಗೆ ರಕ್ಷಣೆಯಾಗುವುದಿಲ್ಲ ಎನ್ನುವುದು ನಿಮಗೆ ತಿಳಿಯಿತೇ?

   ***ಹೌದು ತಿಳಿಯಿತು***

5. ಗಲಾತ್ಯದವರಿಗೆ 2:16 ಓದಿರಿ. ದೇವರ ಉಚಿತ ವರವಾದ ನೀತಿನಿರ್ಣಯವು ಯಾವುದೇ ಒಬ್ಬ ವ್ಯಕ್ತಿಯನ್ನು ನಿರಪರಾಧಿಯೆಂದೂ ನಿರ್ದೋಷಿಯೆಂದೂ ದೇವರ ಎದುರಿನಲ್ಲಿ ನಿಲ್ಲಿಸುತ್ತದೆ. ಒಬ್ಬನು ಯೇಸುಕ್ರಿಸ್ತನಲ್ಲಿ ನಂಬಿಕೆಯಿಡವುದರ ಮೂಲಕವಾಗಿ ಪಾಪಿಗಳಿಗೆ ನೀತಿನಿರ್ಣವು ದೊರಕುತ್ತದೆಯಲ್ಲದೆ ಯೇಸುವಿನ ಮರಣ ಮತ್ತು ಪುನರುತ್ಥಾನದ ಮೂಲಕವಾಗಿ ಅದು ಸಾಧ್ಯವಾಗಿದೆ (1 ಕೊರಿಂಥದವರಿಗೆ 15:3–4 ಮತ್ತು ರೋಮಾಪುರದವರಿಗೆ 4:25). ಹಾಗಾದರೆ ಏನು ಮಾಡುವುದರಿಂದ ಮನುಷ್ಯನಿಗೆ ನೀತಿನಿರ್ಣಯವು ದೊರಕುವುದಿಲ್ಲ?

*ನೇಮನಿಷ್ಠೆಗಳನ್ನು, ಅನುಸರಿಸುವುದರಿಂದ*

ಒಬ್ಬ ಮನುಷ್ಯನು ರಕ್ಷಿಸಲ್ಪಡುವುದು ಹೇಗೆ?

*ಯೇಸುಕ್ರಿಸ್ತನ ಮೇಲಣ ನಂಬಿಕೆಯಿಂದಲೇ*

ಧರ್ಮಶಾಸ್ತ್ರದಿಂದ ಎಷ್ಟು ಜನರು ನೀತಿನಿರ್ಣಯವನ್ನು ಹೊಂದುತ್ತಾರೆ?

*ಯಾರೂ ರಕ್ಷಣೆ ಹೊಂದಲು ಸಾಧ್ಯವಿಲ್ಲ*

6. ರೋಮಾಪುರದವರಿಗೆ 6:14 ಓದಿರಿ. ಒಬ್ಬ ಕ್ರೈಸ್ತರಾಗಿ ನೀವು,

*ಇ. ಕೃಪೆಯ ಅಧೀನದಲ್ಲಿದ್ದೀರಿ*

7. ಯೆಹೆಜ್ಕೇಲನು 18:20 ಓದಿರಿ. ನೀವು ಕೃಪೆಗೆ ಅಧೀನರಾಗಿದ್ದರೆ, ನಿಮ್ಮ ಪಾಪಕ್ಕೆ ಏನು ಶಿಕ್ಷೆಯಿದೆ?

*ಮರಣ/ಸಾವು*

8. ರೋಮಾಪುರದವರಿಗೆ 4:6–8 ಓದಿರಿ. ಕೃಪೆಗೆ ಅಧೀನರಾದವರಿಗೆ, ದೇವರು ನಿಮ್ಮ ಪಾಪಗಳ ವಿಷಯದಲ್ಲಿ ಯಾವ ಮೂರು ಸಂಗತಿಗಳನ್ನು ಮಾಡುತ್ತಾನೆ?

*ಪಾಪಗಳನ್ನು ಕ್ಷಮಿಸುತ್ತಾನೆ, ಅಪರಾಧಗಳನ್ನು ಪರಿಹರಿಸುತ್ತಾನೆ ಮತ್ತು ಪಾಪವನ್ನು ನಮ್ಮ ಲೆಕ್ಕಕ್ಕೆ ಹಾಕುವುದಿಲ್ಲ*

9. ರೋಮಾಪುರದವರಿಗೆ 5:1 ಓದಿರಿ. ಈಗ ನಾವು ನೀತಿನಿರ್ಣಯ ಹೊಂದಿರುವಲ್ಲಿ, ನಮಗೆ ಏನೆಲ್ಲ ಆಶೀರ್ವಾದಗಳಿವೆ?

*ದೇವರೊಂದಿಗೆ ಸಮಾಧಾನವಾಗಿದೆ (ದೇವರಿಗೆ ನಮ್ಮ ಮೇಲೆ ಕೋಪವಿಲ್ಲ)*

10. ರೋಮಾಪುರದವರಿಗೆ 5:9 ಓದಿರಿ. ಈಗ ನಾವು ಯೇಸುವಿನ ರಕ್ತದ ಮೂಲಕವಾಗಿ ರಕ್ಷಿಸಲ್ಪಟ್ಟಿರುವಲ್ಲಿ, ನಾವು ಯಾವುದರಿಂದ ರಕ್ಷಿಸಲ್ಪಟ್ಟಿದ್ದೇವೆ?

*ದೇವರ ಕೋಪದಿಂದ*

11. ರೋಮಾಪುರದವರಿಗೆ 10:4 ಓದಿರಿ. ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ____________ ಅಂತ್ಯವಾಯಿತು.

*ಕರ್ಮಮಾರ್ಗಕ್ಕೆ*

12. 1 ಕೊರಿಂಥದವರಿಗೆ 1:30 ಓದಿರಿ. ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ______________, ______________, __________, ಆದನು ____________ .

*ಜ್ಞಾನವೂ, ನೀತಿ, ಶುದ್ಧೀಕರಣ, ವಿಮೋಚನೆಗಳಿಗೆ, ಕಾರಣ*

13. ಫಿಲಿಪ್ಪಿಯವರಿಗೆ 3:9 ಓದಿರಿ. ನೀವು ಮೋಶೆಯ ಧರ್ಮಶಾಸ್ತ್ರಕ್ಕೆ ಅಧೀನರಾಗಿ ನೇಮನಿಷ್ಠೆಗಳನ್ನು ಅನುಸರಿಸಿ ನಡೆದರೆ, ನೀವು ________ ಆಶ್ರಯಿಸಿದಂತಾಗುತ್ತದೆ.

*ಸ್ವನೀತಿಯನ್ನು*

14. 1 ಕೊರಿಂಥದವರಿಗೆ 11:1 ಓದಿರಿ. ಕ್ರೈಸ್ತರಾದ ನಾವು ಕ್ರಿಸ್ತನ ನಿಯಮಕ್ಕೆ ಒಳಪಟ್ಟಿದ್ದೇವೆ. ಕ್ರಿಸ್ತನ ನಿಯಮವು ನೇಮನಿಷ್ಠೆಗಳಿಗೆ ಒಳಪಟ್ಟಿಲ್ಲ; ಅದು ಒಬ್ಬ ವ್ಯಕ್ತಿಗೆ ಒಳಪಟ್ಟು ಜೀವಿಸುವುದಾಗಿದೆ. ಆ ವ್ಯಕ್ತಿಯು __________.

*ಕ್ರಿಸ್ತನು ಆಗಿದ್ದಾನೆ*

15. ರೋಮಾಪುರದವರಿಗೆ 8:3 ಓದಿರಿ. ಧರ್ಮಶಾಸ್ತ್ರವು ನಮ್ಮನ್ನು ರಕ್ಷಿಸುವುದು ಅಸಾಧ್ಯವಾಗಿತ್ತು, ಅಂದರೆ ಅದು ತಪ್ಪು ಎಂದು ಅರ್ಥವಲ್ಲ, ಆದರೆ ನಮ್ಮ ______________ ನಿಮಿತ್ತ ನಮಗೆ ಅದನ್ನು ಕೈಗೊಳ್ಳಲಾಗಲಿಲ್ಲ.

*ಶರೀರಾಧೀನಸ್ವಭಾವದ*

## ಪಾಠ 9

# ಧರ್ಮಶಾಸ್ತ್ರಾಧೀನರಲ್ಲ, ಕೃಪಾಶ್ರಯದಲ್ಲಿದ್ದೇವೆ

*ಜೂಣ್ ಕೊ*

ಒಮ್ಮೆ ನನ್ನ ಕನಸಿನಲ್ಲಿ, ಒಬ್ಬ ಸ್ತ್ರೀ ತಾನು ಮಾಡಿದ ತಪ್ಪುಗಳಿಗಾಗಿ (ತನ್ನ ಪಾಪಗಳಿಗಾಗಿ) ದಂಡನೆಗೆ ಒಳಗಾಗಿದ್ದಳು. ಒಬ್ಬ ಮನುಷ್ಯನು ಅವಳನ್ನು ಹಿಂಬಾಲಿಸುತ್ತಿದ್ದು, ಅವಳು ತಪ್ಪುಮಾಡಿದಾಗಲೆಲ್ಲ ಜಿಗುಪ್ಸೆಯಿಂದ ತಲೆಯಾಡಿಸುತ್ತಾ, ತನ್ನ ಬೆಲ್ಟ್ ತೆಗೆದು ಅವಳಿಗೆ ಹೊಡೆಯುತ್ತಿದ್ದನು. ಅವಳು ತಪ್ಪಾಗಿ ಮಾತನಾಡಿದಾಗ ಅಥವ ತಪ್ಪುಮಾಡಿದಾಗ ಅವನು ಅವಳನ್ನು ಶಿಕ್ಷಿಸುತ್ತಿದ್ದನು. ಅವಳು ಕುಂಟುತ್ತಲೆ ಇತರರ ಕಡೆಗೆ ಮುಗುಳ್ನಗುತ್ತಾ, ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳಲು ಪ್ರಯತ್ನಿಸುತ್ತಿದ್ದಳಾದರೂ ತನ್ನನ್ನು ತಪ್ಪಿಗೆ ಸಿಕ್ಕಿಸುವಂತ ಸಂಗತಿಗಳನ್ನೇ ಮಾಡುತ್ತಿದ್ದಳು. ಅವುಗಳು ದೊಡ್ಡ ವಿಷಯಗಳಲ್ಲ, ಆದಾಗ್ಯೂ ಆಕೆ ಮಾಡಿದ ಸಣ್ಣ ತಪ್ಪಿಗೂ ಆ ಮನುಷ್ಯನು ಅವಳಿಗೆ ಪೆಟ್ಟುಕೊಡುತ್ತಿದ್ದನು. ಅವಳದು ನಿರಾಶಾದಾಯಕ ಪರಿಸ್ಥಿತಿಯಾಗಿತ್ತು. ತನ್ನ ತಪ್ಪುಗಳನ್ನು ಮಾಡದೆ ಇರಲು ಅವಳಿಂದಾಗುತ್ತಿರಲಿಲ್ಲ. ಅವಳಿಗಾಗಿ ನನ್ನ ಮನಮರುಗಿತು. ಅವಳನ್ನು ಯಾವಾಗಲೂ ಶಿಕ್ಷಿಸುತ್ತಿದ್ದ ಆ ನೀಚ ಮನುಷ್ಯನ ಕೈಯಿಂದ ಅವಳನ್ನು ಬಿಡಿಸಬೇಕೆಂದು ನಾನು ಆಶಿಸಿದೆನು. ಅಷ್ಟರಲ್ಲಿ ನನಗೆ ಎಚ್ಚರವಾಯಿತು.

ನಾವು ಸಂಪಾದಿಸದ, ನಮಗೆ ಅರ್ಹತೆಯಿಲ್ಲದ, ದೇವರ ಸಾಮರ್ಥ್ಯ ಮಾತ್ರದಿಂದ ಸಿಗುವ – ದೇವರ ಕೃಪೆಯ ಕುರಿತು ನಾನು ಆಲೋಚಿಸಲಾರಂಭಿಸಿದೆನು. ನಮ್ಮ ಮನಸ್ಸು ಕೃಪೆಯ ಮೇಲೆ ನೆಲೆಗೊಂಡಲ್ಲಿ, ನಾವು ನಮ್ಮ ಕ್ರಿಯೆಗಳ ಮೂಲಕ ಅಥವ ನಮ್ಮ ಸ್ವಂತ ಬಲಸಾಮರ್ಥ್ಯಗಳಿಂದ ಧರ್ಮಶಾಸ್ತ್ರವನ್ನು ಕೈಕೊಳ್ಳುವುದರ ಮೂಲಕ ದೇವರನ್ನು ಒಲಿಸಿಕೊಳ್ಳಲು ಪ್ರಯತ್ನಿಸುವುದಿಲ್ಲ. ಹೀಗೆ ನಾವು ಧರ್ಮಶಾಸ್ತ್ರವನ್ನು ಮೀರಿದ್ದರಿಂದ ಸಿಗುವ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಯೇಸು ನಮ್ಮನ್ನು ಬಿಡಿಸಿದ್ದಾನೆ.

ದಯೆ–ಇದರ ಕುರಿತು ಆಲೋಚಿಸಿರಿ. ದಯೆ ಎಂದರೆ ಮತ್ತೊಬ್ಬರ ಅನುಮೋದನೆ, ಬೆಂಬಲ ಅಥವ ಆಶೀರ್ವಾದ ದೊರೆಯುವುದು ಎಂದರ್ಥ. ನಿಮಗೆ ಮತ್ತೊಬ್ಬರ ದಯೆ ಬೇಕೆಂದರೆ ಏನು ಮಾಡುತ್ತೀರಿ? ಅವರಿಗೆ ಯಾವುದು ಸಂತೋಷವನ್ನುಂಟು ಮಾಡುತ್ತದೋ ಅದನ್ನೇ ಹೇಳುತ್ತೀರಿ ಮತ್ತು ಮಾಡುತ್ತೀರಿ ಮತ್ತು ಅವರನ್ನು ಬೇಸರ ಪಡಿಸುವಂತದ್ದನ್ನು ಮಾಡದಿರುತ್ತೀರಿ. ಇದು ಎಲ್ಲ ಸಮಯದಲ್ಲಿಯೂ ಸರಿಯಾದದ್ದನ್ನೇ

ಮಾಡುವುದಾಗಿದೆ. ಆದರೆ ಅದು ಸುಲಭಸಾಧ್ಯವೇ? ಅದು ಗುರುತ್ವಾಕರ್ಷಣಾಶಕ್ತಿಯನ್ನು ಮೀರಿದಂತೆ. ಅದನ್ನು ಸ್ವಲ್ಪ ಸಮಯದವರೆಗೆ ಮಾಡಬಹುದು, ಆದರೆ ಅಂತ್ಯದಲ್ಲಿ ಸೋಲು ಕಟ್ಟಿಟ್ಟ ಬುತ್ತಿಯಾಗುತ್ತದೆ. ಅದು ನಿಮಗಿಂತಲೂ ಬಲಶಾಲಿಯಾಗಿದೆ.

ಕನಸಿನಲ್ಲಿ ಕಂಡ ಸ್ತ್ರೀಗೆ ನಾನು ಹೋಲುತ್ತೇನೆ. ನಾನು ಸಹ ಎಲ್ಲ ವಿಷಯಗಳಲ್ಲಿ ಸರಿಯಾಗಿ ನಡೆದುಕೊಳ್ಳಲು ಪ್ರಯತ್ನಿಸಿ ಯಾವುದೋ ಒಂದು ಸಣ್ಣ ವಿಷಯದಲ್ಲಿ ತಪ್ಪಿಹೋಗಿದ್ದುಂಟು ಮತ್ತು ಹಾಗೆ ವಿಫಲನಾದಾಗ ಆಕೆಯಂತೆಯೇ ವ್ಯಥೆಪಟ್ಟಿರುವುದು ಹೌದು. ಅಂಥ ದಿನಗಳಲ್ಲಿ ನಾನು ಒಂದು ತಪ್ಪನ್ನೂ ಮಾಡಿರದಿದ್ದರೆ ಏನನ್ನೋ ಸಾಧಿಸಿದೆನಲ್ಲ ಎಂದು ಸಂತೋಷ ಪಡಬಹುದಾಗಿತ್ತು. ಆದರೆ ಹಾಗಾಗದೆ, ನನ್ನ ತಪ್ಪುಗಳು ನನ್ನ ಕೊರತೆಗಳಾಗಿ ಕಂಡುಬಂದವು. ನಾನು ನನ್ನ ಪರಲೋಕದ ತಂದೆಯನ್ನು ನಿರಾಶೆಗೊಳಿಸಿದ್ದು ಮಾತ್ರವಲ್ಲದೆ, ನಾನು ನನ್ನನ್ನೇ ದೂಷಿಸಿಕೊಂಡು ಶಿಕ್ಷಿಸಿಕೊಳ್ಳುವಂತಾಗುತ್ತಿತ್ತು. ನನ್ನ ಸೋಲಿಗೆ ಕಾರಣ ನಾನೇ. ನನ್ನ ದೃಷ್ಟಿಯು ನನ್ನದೇ ಸಬಲತೆ ಮತ್ತು ದುರ್ಬಲತೆಗಳ ಮೇಲೆ ಇತ್ತು. ನಾನು ಆ ಮಟ್ಟಕ್ಕೆ ಏರಲಾಗಲಿಲ್ಲ, ನನ್ನ ಪ್ರಯತ್ನಗಳು ಸರಿಸಾಟಿಯಾಗದಾಯಿತು, ನನಗೆ ರಕ್ಷಕನ ಅವಶ್ಯಕತೆ ಇತ್ತು!

ದೇವರು ತನ್ನ ಮಹಾ ಕರುಣೆಯಿಂದ ನನಗೆ ಸಹಾಯ ಕಳುಹಿಸಿದನು; ಆತನ ಹೆಸರು ಯೇಸು. ದೇವರು, ನಾವೇ ಹಾಕಿಕೊಂಡಿರುವ ಬಂಧನದಿಂದ ನಮ್ಮನ್ನು ಬಿಡಿಸಲು ಮತ್ತು ಧರ್ಮಶಾಸ್ತ್ರವು ಹೇಳುವ ಹಾಗೆ ನಡೆಯುವ ಬಲಹೀನ ಪ್ರಯತ್ನಗಳಿಂದ ಬಿಡುಗಡೆ ಮಾಡಲು ಯೇಸುವನ್ನು ಕಳುಹಿಸಿದನು. ನಾವು ಧರ್ಮಶಾಸ್ತ್ರವನ್ನು ಕೈಗೊಳ್ಳಲಾರದೆ, ಅದರ ನಿಮಿತ್ತ ಅನುಭವಿಸಬೇಕಾದ ಶಿಕ್ಷೆಯನ್ನು ಯೇಸುವು ತನ್ನ ಮೇಲೆ ತೆಗೆದುಕೊಂಡದ್ದರಿಂದ, ನಾವು ಮರಣದಿಂದ ಬಿಡುಗಡೆಹೊಂದಿ, ಆತನೊಂದಿಗೆ ನಿತ್ಯಜೀವವನ್ನು ಅನುಭವಿಸಲು ಸಾಧ್ಯವಾಗುವಂತೆ ಮಾಡಿದನು. ನಾವು ದೇವರ ಮುಂದೆ ನೀತಿವಂತರಾಗಿ ಮತ್ತು ಪರಿಶುದ್ಧರಾಗಿ ನಿಲ್ಲುವಂತೆ ಮತ್ತು ಧರ್ಮಶಾಸ್ತ್ರದ ಅಗತ್ಯತೆಗಳನ್ನು ಪೂರೈಸುವಂತೆ, ಯೇಸುವು ನಮಗೆ ನೀತಿಯ ವರವನ್ನು ನೀಡಿದ್ದಾನೆ. ಯೇಸುವಿನ ಮರಣ, ಹೂಣುವಿಕೆ ಮತ್ತು ಪುನರುತ್ಥಾನದ ಮೂಲಕ ನಮಗೆ ದೇವರೊಂದಿಗೆ ಸಮಾಧಾನ ಉಂಟಾಗಿದೆ. ನಾವು ಗಳಿಸದ ಮತ್ತು ನಮಗೆ ಅರ್ಹತೆಯಿಲ್ಲದ ದೇವರ ದಯೆಯು ನಮಗೆ ದೊರಕಿದೆ. ಅದೇ ಕೃಪೆ.

ಇದನ್ನು ನಂಬುವಾಗ, ಆತನು ನಿಮ್ಮನ್ನು ಪ್ರೀತಿಸುವ ಕಾರಣವಾಗಿ ಈ ರೀತಿಯಾಗಿ ಮಾಡಿದನು ಎಂದು ನಿಮ್ಮ ಹೃದಯವು ನಿಸ್ಸಂದೇಹವಾಗಿ ನಂಬಬೇಕು. ನಿಮ್ಮ ಹೃದಯವು ಚಿತ್ತಸ್ವಾಸ್ಥ್ಯದಿಂದಲೂ ದೃಢವಾಗಿಯೂ ಸಮಚಿತ್ತದಿಂದಲೂ ಆತನ ಕೃಪೆಯಲ್ಲಿ ನೆಲೆಗೊಳ್ಳುವಂತೆ ಮಾಡಿರಿ; ಅಂದರೆ, ಯಾವುದೇ ಪ್ರಶ್ನೆ ಅಥವ ಅನುಮಾನಗಳಿಲ್ಲದೆ, ಕ್ರಿಸ್ತನಲ್ಲಿ ನಾವು ಸಮೃದ್ಧಿಕರವಾದ ಜೀವನವನ್ನು ಜೀವಿಸುವಂತೆ ನಮಗೆ ಬೇಕಾದದ್ದೆಲ್ಲವನ್ನು ಆತನು ಕೊಟ್ಟಿದ್ದಾನೆ ಎಂದು ತಿಳಿದು ನೆಲೆಗೊಳ್ಳೋಣ.

ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಡದೆ, ನಮ್ಮ ಕೊರತೆಗಳು. ತಪ್ಪುಗಳು ಮತ್ತು ಪಾಪಗಳ ಮೇಲೆಯೇ ದೃಷ್ಟಿಯಿಡುತ್ತಾ ಇರುವುದಾದರೆ ನಮ್ಮ ಹೃದಯಗಳು ದುಃಖದಿಂದ ಕೂಡಿ ನಾವು ದೇವರಿಂದ ಏನನ್ನಾದರೂ ಹೊಂದುವೆವೆಂದು ನಂಬಲು ಬಲವಿಲ್ಲದವರಾಗುತ್ತೇವೆ. ನಾವು ಹೃದಯದಿಂದ ನಂಬಿ ಆತನ ನೀತಿ ಮತ್ತು ಕೃಪೆಗಳನ್ನು ಹೊಂದಿಕೊಳ್ಳುತ್ತೇವೆ. ನಮ್ಮ ಹೃದಯಗಳನ್ನು ಆತನಿಗೆ ಸಂಪೂರ್ಣವಾಗಿ ಕೊಡಬೇಕು. ಆಗ ನಮ್ಮಲ್ಲಿ ಸಾರ್ಥಕಭಾವವೂ ವಿಶ್ರಾಂತಿಯೂ ನೆಲೆಗೊಳ್ಳುತ್ತದೆ.

*"ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು"* (ಜ್ಞಾನೋಕ್ತಿಗಳು 4:23)

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ಈ ಪಾಠದಲ್ಲಿ "ಕೃಪೆ"ಯನ್ನು ಹೇಗೆ ವಿವರಿಸಲಾಗಿದೆ?

2. ನಮ್ಮ ಹೃದಯವು ಕೃಪೆಯಲ್ಲಿ ನೆಲೆಗೊಳ್ಳುವುದಾದರೆ ನಾವು ನಮ್ಮ __________ ಮೂಲಕ ದೇವರನ್ನು ಒಲಿಸಿಕೊಳ್ಳಲು ಪ್ರಯತ್ನಿಸುವುದನ್ನು ಬಿಟ್ಟುಬಿಡುತ್ತೇವೆ.

3. ಇಬ್ರಿಯರಿಗೆ 10:14 ಓದಿರಿ. ಡಾನ್‌ರವರಲ್ಲಿನ ಕೊರತೆಗಳು ಅವರು ಯಾವಾಗಲೂ ಕೊರತೆಯುಳ್ಳವರಾಗಿರುವಂತೆ ಮಾಡುತ್ತಿತ್ತು. ಈ ವಚನದ ಆಧಾರದ ಮೇಲೆ ನಾವು ಹೇಗೆ ಪರಿಪೂರ್ಣರಾಗಿರುವಂತೆ ಮಾಡಲ್ಪಡುತ್ತೇವೆ?

   ***ಇಬ್ರಿಯರಿಗೆ 10:14*** *– ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.*

4. ರೋಮಾಪುರದವರಿಗೆ 5:17 ಓದಿರಿ. ಯೇಸುವು ನಮಗೆ ಕೃಪಾದಾನವನ್ನೂ ನೀತಿಯೆಂಬ ________ ನೀಡಿದ್ದಾನೆ, ಇದರಿಂದಾಗಿ ನಾವು ದೇವರ ಮುಂದೆ ನೀತಿವಂತರೂ ಪರಿಶುದ್ಧರೂ ಆಗಿ ನಿಂತುಕೊಳ್ಳಬಹುದಲ್ಲದೆ ಧರ್ಮಶಾಸ್ತ್ರದ ಎಲ್ಲ ಅವಶ್ಯತೆಗಳನ್ನು ಪೂರೈಸಬಹುದು.

   ***ರೋಮಾಪುರದವರಿಗೆ 5:17*** *– ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.*

5. ಯೆಶಾಯ 26:3 ಓದಿರಿ. ನಾವು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆದ ಯೇಸುವಿನ ಮೇಲೆ ದೃಷ್ಟಿಯಿಡದೆ ಇನ್ನೂ ನಮ್ಮ ಕೊರತೆಗಳ, ತಪ್ಪುಗಳ ಮತ್ತು ಪಾಪಗಳ ಮೇಲೆಯೇ ಗಮನವಿಡುವುದಾದರೆ ನಮ್ಮ ಹೃದಯಗಳು ದುಃಖಭರಿತವಾಗಿದ್ದು ನಾವು ದೇವರಿಂದ ಏನನ್ನಾದರೂ ಹೊಂದಲು ಬಲಹೀನವಾಗಿ ಇರುತ್ತದೆ. ನಾವು ನಮ್ಮ ಮನಸ್ಸನ್ನು ಯಾವುದರ ಮೇಲೆ ಇಡಬೇಕು?

   ***ಯೆಶಾಯ 26:3*** *– ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ.*

6. ಎಫೆಸದವರಿಗೆ 3:17,18,19 ಓದಿರಿ. ನಮ್ಮ ಹೃದಯಗಳು ಸಂಪೂರ್ಣವಾಗಿ ಆತನಿಗೆ ಮೀಸಲಾಗಿರಬೇಕು. ಆಗ ನಾವು ______________ ನೆಲೆಗೊಳ್ಳುತ್ತೇವೆ.

***ಎಫೆಸದವರಿಗೆ 3:17,18,19*** *– ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ; ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಉದ್ದ ಅಗಲ ಆಳ ಎಷ್ಟೆಂಬದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲೂ ಪೂರ್ಣಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ.*

7. ರೋಮಾಪುರದವರಿಗೆ 4:5 ಓದಿರಿ. ರಕ್ಷಣೆಯನ್ನು ನಾವು ಸಂಪಾದಿಸಿಕೊಳ್ಳಬೇಕೋ ಅಥವ ಅದು ದೇವರ ಕೃಪಾದಾನವೋ?

***ರೋಮಾಪುರದವರಿಗೆ 4:5*** *– ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು.*

8. ರೋಮಾಪುರದವರಿಗೆ 5:17 ಓದಿರಿ. ನೀತಿಯು (ದೇವರ ಮುಂದೆ ಸರಿಯಾಗಿ ನಡೆದುಕೊಳ್ಳುವುದು) ದಾನವಾಗಿ ಕೊಡಲ್ಪಡುತ್ತದೆ. ನೀವು ದಾನಕ್ಕಾಗಿ ಕೆಲಸ ಮಾಡಬೇಕೋ?

ನಿಮಗೆ ದಾನವು ಹೇಗೆ ಸಿಗುತ್ತದೆ?

***ರೋಮಾಪುರದವರಿಗೆ 5:17*** *– ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸುಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.*

9. ರೋಮಾಪುರದವರಿಗೆ 6:23 ಓದಿರಿ. ಈ ವಚನದಲ್ಲಿ ದೇವರ ಉಚಿತಾರ್ಥವರವು ಏನಾಗಿದೆ?

***ರೋಮಾಪುರದವರಿಗೆ 6:23*** *– ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ.*

10. ತೀತನಿಗೆ 3:5 ಓದಿರಿ. ಯಾವ ಪುಣ್ಯಕ್ರಿಯೆಗಳ ನಿಮಿತ್ತ ನಿಮಗೆ ರಕ್ಷಣೆ ದೊರಕಿತು?

*__ತೀತನು 3:5__ – ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟು ಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು.*

11. ರೋಮಾಪುರದವರಿಗೆ 6:14 ಓದಿರಿ. ದೇವರ ಕೃಪೆಗೆ ಅಧೀನರಾಗುವುದೆಂದರೆ ಏನು ಎನ್ನುವುದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.

*__ರೋಮಾಪುರದವರಿಗೆ 6:14__ – ಯಾಕಂದರೆ ಪಾಪವು ನಿಮ್ಮ ಮೇಲೆ ಅಧಿಕಾರನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ. ಕೃಪೆಗೆ ಅಧೀನರಾಗಿದ್ದೀರಷ್ಟೆ.*

12. ರೋಮಾಪುರದವರಿಗೆ 11:6. ನಮಗೆ ಕೃಪೆಯ ನಿಮಿತ್ತ ದೇವರ ಆಶೀರ್ವಾದವು ದೊರಕಿರುವುದಾದರೆ, ಅವು ನಮ್ಮ ____________ಅಲ್ಲ.

*__ರೋಮಾಪುರದವರಿಗೆ 11:6__ – ಕೃಪೆಯಿಂದ ಆದುಕೊಂಡನು ಅಂದ ಮೇಲೆ ಪುಣ್ಯಕ್ರಿಯೆಗಳ ಕಾರಣದಿಂದ ಆದುಕೊಳ್ಳಲಿಲ್ಲವಷ್ಟೆ.; ಹಾಗಲ್ಲದ ಪಕ್ಷಕ್ಕೆ ಕೃಪೆಯನ್ನು ಇನ್ನು ಕೃಪೆಯನ್ನುವದಕ್ಕಾಗುವದಿಲ್ಲ.*

13. ರೋಮಾಪುರದವರಿಗೆ 3:24 ಓದಿರಿ. ನಿಮ್ಮ ಸ್ವಂತ ಮಾತುಗಳಲ್ಲಿ ಈ ವಚನವನ್ನು ವಿವರಿಸಿರಿ.

*__ರೋಮಾಪುರದವರಿಗೆ 3:24__ – ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು.*

14. ಎಫೆಸದವರಿಗೆ 1:7 ಓದಿರಿ. ದೇವರ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ______________.

*__ಎಫೆಸದವರಿಗೆ 1:7__ – ಈತನು ನಮಗೋಸ್ಕರ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ*

## ಉತ್ತರಗಳು

1. ಈ ಪಾಠದಲ್ಲಿ "ಕೃಪೆ"ಯನ್ನು ಹೇಗೆ ವಿವರಿಸಲಾಗಿದೆ?

*ನಾವು ಗಳಿಸದಿರುವ, ಅರ್ಹರಾಗದಿರುವ ದೇವರ ದಯೆ ಮತ್ತು ಸಾಮರ್ಥ್ಯ*

2. ನಮ್ಮ ಹೃದಯವು ಕೃಪೆಯಲ್ಲಿ ನೆಲೆಗೊಂಡಾಗ, ನಾವು ನಮ್ಮ __________ ಮೂಲಕ ದೇವರನ್ನು ಒಲಿಸಿಕೊಳ್ಳಲು ಪ್ರಯತ್ನಿಸುವುದನ್ನು ಬಿಟ್ಟುಬಿಡುತ್ತೇವೆ.

*ಪುಣ್ಯಕ್ರಿಯೆಗಳ*

3. ಇಬ್ರಿಯರಿಗೆ 10:14 ಓದಿರಿ. ಡಾನ್‌ರವರಲ್ಲಿನ ಕೊರತೆಗಳು ಅವರನ್ನು ನಿರಂತರವಾಗಿ ಕೊರತೆಯುಳ್ಳವರಾಗಿ ಮಾಡುತ್ತಿತ್ತು. ಈ ವಚನದ ಆಧಾರದ ಮೇಲೆ ನಾವು ಹೇಗೆ ಪರಿಪೂರ್ಣರಾಗಿರುವಂತೆ ಮಾಡಲ್ಪಡುತ್ತೇವೆ?

*ಯೇಸುವಿನ ಯಜ್ಞವು ನಮ್ಮನ್ನು ನಿರಂತರವಾಗಿ ಪರಿಪೂರ್ಣರನ್ನಾಗಿ ಮಾಡಿದೆ.*

4. ರೋಮಾಪುರದವರಿಗೆ 5:17 ಓದಿರಿ. ಯೇಸುವು ನಮಗೆ ನೀತಿಯೆಂಬ ________ ನೀಡಿದ್ದಾನೆ, ಇದರಿಂದಾಗಿ ನಾವು ದೇವರ ಮುಂದೆ ನೀತಿವಂತರೂ ಪರಿಶುದ್ಧರೂ ಆಗಿ ನಿಂತುಕೊಳ್ಳಬಹುದಲ್ಲದೆ ಧರ್ಮಶಾಸ್ತ್ರದ ಎಲ್ಲ ಅವಶ್ಯತೆಗಳನ್ನು ಪೂರೈಸಬಹುದು.

*ಕೃಪಾದಾನವನ್ನು*

5. ಯೆಶಾಯ 26:3 ಓದಿರಿ. ನಾವು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆದ ಯೇಸುವಿನ ಮೇಲೆ ಇಡದೆ ಇನ್ನೂ ನಮ್ಮ ಕೊರತೆಗಳ, ತಪ್ಪುಗಳ ಮತ್ತು ಪಾಪಗಳ ಮೇಲೆಯೇ ಗಮನವಿಡುವುದಾದರೆ ನಮ್ಮ ಹೃದಯಗಳು ದುಃಖಭರಿತವಾಗಿದ್ದು ನಾವು ದೇವರಿಂದ ಏನನ್ನಾದರೂ ಹೊಂದಲು ಬಲಹೀನವಾಗಿರುತ್ತದೆ. ನಾವು ನಮ್ಮ ಮನಸ್ಸನ್ನು ಯಾವುದರ ಮೇಲೆ ಇಡಬೇಕು?

*ನಮ್ಮ ಮನಸ್ಸು ಕರ್ತನ ಮೇಲೆ ನೆಲೆಗೊಂಡಿರಬೇಕು*

6. ಎಫೆಸದವರಿಗೆ 3:17,18,19 ಓದಿರಿ. ನಮ್ಮ ಹೃದಯಗಳು ಸಂಪೂರ್ಣವಾಗಿ ಆತನಿಗೆ ಮೀಸಲಾಗಿರಬೇಕು. ಆಗ ನಾವು ______________ .

*ಪೂರ್ಣಶಕ್ತರಾಗುತ್ತೇವೆ ಮತ್ತು ಪರಿಪೂರ್ಣರಾಗುತ್ತೇವೆ*

7. ರೋಮಾಪುರದವರಿಗೆ 4:5 ಓದಿರಿ. ರಕ್ಷಣೆಯನ್ನು ನಾವು ಸಂಪಾದಿಸಿಕೊಳ್ಳಬೇಕೋ ಅಥವ ಅದು ದೇವರ ಕೃಪಾದಾನವೋ?

*ದೇವರ ಕೃಪೆಯು ಉಚಿತಾರ್ಥವರವಾಗಿದೆ.*

8. ರೋಮಾಪುರದವರಿಗೆ 5:17 ಓದಿರಿ. ನೀತಿಯು (ದೇವರ ಮುಂದೆ ಸರಿಯಾಗಿ ನಡೆದುಕೊಳ್ಳುವುದು) ದಾನವಾಗಿ ಕೊಡಲ್ಪಡುತ್ತದೆ. ನೀವು ದಾನಕ್ಕಾಗಿ ಕೆಲಸ ಮಾಡಬೇಕೋ?

*ಇಲ್ಲ*

ನಿಮಗೆ ದಾನವು ಹೇಗೆ ಸಿಗುತ್ತದೆ?

*ಅದನ್ನು ಕೈಚಾಚಿ ತೆಗೆದುಕೊಳ್ಳುವುದರಿಂದ*

9. ರೋಮಾಪುರದವರಿಗೆ 6:23 ಓದಿರಿ. ಈ ವಚನದಲ್ಲಿ ದೇವರ ಉಚಿತಾರ್ಥವರವು ಏನಾಗಿದೆ?

*(ನಿತ್ಯ ನಾಶನಕ್ಕೆ ಬದಲಾಗಿ) ನಿತ್ಯಜೀವ*

10. ತೀತನಿಗೆ 3:5 ಓದಿರಿ. ಯಾವ ಪುಣ್ಯಕ್ರಿಯೆಗಳ ನಿಮಿತ್ತ ನಿಮಗೆ ರಕ್ಷಣೆ ದೊರಕಿತು?

*ಯಾವುದರಿಂದಲೂ ಇಲ್ಲ*

11. ರೋಮಾಪುರದವರಿಗೆ 6:14 ಓದಿರಿ. ದೇವರ ಕೃಪೆಗೆ ಅಧೀನರಾಗುವುದು ಎಂದರೆ ಏನು ಎನ್ನುವುದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.

*ನಮ್ಮ ಪಾಪಗಳ ಫಲವನ್ನು ನಾವು ಅನುಭವಿಸದೆ ಕ್ರಿಸ್ತನ ಮೂಲಕ ದೇವರ ಶ್ರೇಷ್ಠವರವನ್ನು ಪಡೆದುಕೊಳ್ಳುವುದು. ನೀತಿ, ಸ್ವೀಕಾರ ಮತ್ತು ಕ್ಷಮೆ, ಇವೆಲ್ಲವು ನಮಗೆ ಕೊಡಲ್ಪಟ್ಟಿವೆ (ಇವೆಲ್ಲವನ್ನು ದೇವರು ನಮಗೆ ಕರುಣಿಸಿದ್ದಾನೆ)*

12. ರೋಮಾಪುರದವರಿಗೆ 11:6. ನಮಗೆ ಕೃಪೆಯ ನಿಮಿತ್ತ ದೇವರ ಆಶೀರ್ವಾದವು ದೊರಕಿರುವುದಾದರೆ, ಅವು ನಮ್ಮ ____________ ಅಲ್ಲ.

*ಪುಣ್ಯಕ್ರಿಯೆಗಳಿಂದ ಅಲ್ಲ*

13. ರೋಮಾಪುರದವರಿಗೆ 3:24 ಓದಿರಿ. ನಿಮ್ಮ ಸ್ವಂತ ಮಾತುಗಳಲ್ಲಿ ಈ ವಚನವನ್ನು ವಿವರಿಸಿರಿ.

***ವಿಶ್ವಾಸಿಗಳಿಗೆ ನೀತಿವಂತರೆಂದು ನಿರ್ಣಯ ಉಂಟಾಗುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ, ಅದು ಕ್ರೂಜೆಯ ಮೇಲೆ ಕ್ರಿಸ್ತನು ಮಾಡಿದ ವಿಮೋಚನಾಕಾರ್ಯದಿಂದ ಆಗಿದೆ.***

14. ಎಫೆಸದವರಿಗೆ 1:7 ಓದಿರಿ. ದೇವರ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ____________________.

***ದೇವರ ಕೃಪೆಯ ಐಶ್ವರ್ಯ***

## ಪಾಠ 10

# ಪಾಪಪ್ರಜ್ಞೆ ಕಾಡುವುದಿಲ್ಲ

*ಡ್ಯೂಣ್ ಕ್ರೊ*

ಒಂದ ದಿನ ಮದ್ಯಪಾನ ಮಾಡಿದ್ದ ಒಬ್ಬಾತನು ತನ್ನ ವಾಹನವನ್ನು ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಾ ಇನ್ನೊಂದು ಕಾರಿಗೆ ಡಿಕ್ಕಿ ಹೊಡೆದು ಅಪಘಾತ ಮಾಡಿದನು. ಈ ದುರ್ಘಟನೆಯಲ್ಲಿ, ಹದಿನೆಂಟು ವರ್ಷದ ಒಬ್ಬ ಯೌವನಸ್ಥ ಹುಡುಗಿ ಸತ್ತುಹೋದಳು. ಆ ಹುಡುಗಿಯ ಕುಟುಂಬದವರು ಅವನ ಮೇಲೆ 1.5 ಮಿಲಿಯನ್ ಡಾಲರ್ (11,09,38,500/– ರೂಗಳು) ಪರಿಹಾರ ನೀಡುವಂತೆ ದಾವೆ ಹೂಡಿದರು.

ಆ ಮೊತ್ತವನ್ನು ತೆಗೆದುಕೊಳ್ಳುವ ಬದಲು ಆ ಕುಟುಂಬವು ಕೇವಲ 936 ಡಾಲರ್‌ಗಳನ್ನು ಮಾತ್ರ ತೆಗೆದುಕೊಂಡಿತು. ಅದಕ್ಕೆ ಕಾರಣ ಹೀಗಿದೆ: ಆ ಮನುಷ್ಯನು ಆ ಹಣವನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಕೊಡಬೇಕಾಗಿತ್ತು. ಮದ್ಯಪಾನದ ಅಮಲಿನಲ್ಲಿ ತಾನು ಏನು ಮಾಡಿದನೆಂದು ಆ ಮನುಷ್ಯನಿಗೆ ಅರಿವಾಗಬೇಕೆನ್ನುವುದು ಅವರ ಉದ್ದೇಶವಾಗಿತ್ತು. ಪ್ರತಿ ವಾರಕ್ಕೆ ಒಂದರಂತೆ ತಾನು ಅಪಘಾತ ಮಾಡಿ ಕೊಂದ ಆ ಹುಡುಗಿಯ ಹೆಸರಿಗೆ ಒಂದು ಡಾಲರ್‌ನ ಚೆಕ್ ಬರೆದು ಅವಳ ಕುಟುಂಬಕ್ಕೆ ಕಳುಹಿಸಬೇಕಾಗಿತ್ತು. ಹೌದಲ್ಲ, $1.5 ಮಿಲಿಯನ್ ಬದಲಿಗೆ ಕೇವಲ $936/– ಕೊಟ್ಟು ಕೈತೊಳೆದುಕೊಳ್ಳುವುದು ಒಳ್ಳೆಯದೇ ಆಯಿತಲ್ಲವೆ ಎಂದು ನೀವಂದುಕೊಳ್ಳಬಹುದು. ಮೊದಲಿಗೆ ವಾರಕ್ಕೆ ಒಂದು ಡಾಲರ್ ಕೊಡುವುದು ಬಹಳ ಸುಲಭವೆನಿಸಿತು, ಆದರೆ ವಾರಗಳು ಕಳೆದಂತೆ, ತಾನೇ ಕೊಂದ ಹುಡುಗಿಯ ಹೆಸರನ್ನು ಚೆಕ್ ಮೇಲೆ ಬರೆಯುವುದು ಅವನ ಮನಸ್ಸನ್ನು ಪ್ರಕ್ಷುಬ್ಧ ಮಾಡುತ್ತಿತ್ತು. ಪ್ರತಿವಾರ ತಾನು ಕೊಂದ ಹುಡುಗಿಯನ್ನು ನೆನೆನೆನೆದು ಅವನು ಮಾನಸಿಕವಾಗಿ ಕುಗ್ಗಿಹೋಗುತ್ತಿದ್ದನು.

ಅನೇಕ ವರ್ಷಗಳ ನಂತರ ಅವನು ಹಣಸಂದಾಯ ಮಾಡುವುದನ್ನು ನಿಲ್ಲಿಸಿಬಿಟ್ಟನು. ಆ ಕುಟುಂಬವು ತಿರುಗಿ ಅವನನ್ನು ಕೋರ್ಟ್‌ಗೆ ಎಳೆದು ಅವನು ಪುನಃ ಹಣಕಳುಹಿಸುವಂತೆ ಏರ್ಪಾಡು ಮಾಡಿತು. ಕಳೆದ ಏಳು ವರ್ಷಗಳಲ್ಲಿ ನಾಲ್ಕೈದು ಬಾರಿ ಅವನು ಹಣ ಕಳುಹಿಸುವುದನ್ನು ಬಿಟ್ಟುಬಿಟ್ಟಿದ್ದನು. ಆದರೂ ಪ್ರತಿಬಾರಿಯೂ ಅವನು ಹಣಕಳುಹಿಸುವ ಏರ್ಪಾಡನ್ನು ಪೂರೈಸುವಂತೆ ಕೋರ್ಟ್‌ನಿಂದ ಆದೇಶ ಹೊಂದುತ್ತಿದ್ದನು.

ಆ ಕುಟುಂಬದವರಾದರೋ, ತಮಗೆ ಅವನ ಮೇಲೆ ಕೋಪವೇನೂ ಇಲ್ಲವೆಂದೂ ಆದರೆ ತಾನು ಮಾಡಿದ ತಪ್ಪು ಅವನ ನೆನಪಿನಲ್ಲಿ ಉಳಿಯಬೇಕು ಎನ್ನುವ ಉದ್ದೇಶ ಮಾತ್ರ ಇದೆಯೆಂದೂ ತಿಳಿಸಿದರು.

ನೀವು ಇದನ್ನು ಯೋಚಿಸುವುದಾದರೆ – ಆ ಕುಟುಂಬ ಮತ್ತು ಹಣ ಕಳುಹಿಸುತ್ತಿದ್ದ ಅವನು – ಇಬ್ಬರೂ ಕಟ್ಟಿಹಾಕಲ್ಪಟ್ಟಿದ್ದರು. ಪ್ರತಿವಾರ ತಮ್ಮ ಕೈಸೇರುತ್ತಿದ್ದ ಆ ಚೆಕ್ ತಮಗಾದ ನಷ್ಟವನ್ನು ನೆನಪಿಸುತ್ತಿದ್ದದರಿಂದ ಕುಟುಂಬದವರು ತಮ್ಮ ಮಗಳ ಸಾವನ್ನು ಹಿಂದೆಹಾಕಿ ಮುಂದೆ ಸಾಗಲಾಗಲಿಲ್ಲ.

ಆ ಮನುಷ್ಯನು, ಇದು 'ಕ್ರೂರವಾದ ಅಸ್ವಾಭಾವಿಕ ಶಿಕ್ಷೆ' ಎಂದು ಆ ಕುಟುಂಬದ ಮೇಲೆ ಮೊಕದ್ದಮೆ ಹೂಡಿದ್ದಾನೆ. ಅವನು, "ಇದು ನನ್ನನ್ನು ಕೊಲ್ಲುತ್ತಿದೆ! ನನ್ನ ಜೀವನವನ್ನೇ ಹಾಳು ಮಾಡುತ್ತಿದೆ! ನನಗೆ ನನ್ನ ಪೂರ್ವವನ್ನು ಹಿಂದಿಟ್ಟು ಜೀವನವನ್ನು ಮುಂದುವರಿಸಲಾಗುತ್ತಿಲ್ಲ" ಎಂದು ಅವಲತ್ತು ಕೊಂಡನು.

ಈ ದೃಷ್ಟಾಂತದ ಬೆಳಕಿನಲ್ಲಿ, ಇದೇ ರೀತಿಯ ತೀರ್ಪಿನಿಂದ ಬಳಲುತ್ತಿರುವ ಅನೇಕ ಕ್ರೈಸ್ತರನ್ನು ನಾನು ಭೇಟಿ ಮಾಡಿದ್ದೇನೆ. "ಯೇಸು ಎಲ್ಲವನ್ನು ಕೊಟ್ಟು ತೀರಿಸಿದ್ದಾನೆ" ಎಂದು ತಿಳಿಸಲಾಗಿದ್ದರೂ, ಅವರು ತಾವು ಪ್ರತಿವಾರವೂ ಧಾರ್ಮಿಕ ಕಾರ್ಯಗಳ ಮೂಲಕ ಬಾಕಿ ಚುಕ್ತಾಮಾಡಬೇಕು ಇಲ್ಲದಿದ್ದರೆ ದೇವರು ತಮ್ಮನ್ನು ಸ್ವೀಕರಿಸುವುದಿಲ್ಲ ಎಂದುಕೊಳ್ಳುತ್ತಾರೆ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಮನುಷ್ಯನು ಆ ಕುಟುಂಬದೊಂದಿಗೆ ಎಂತಹ ಸಂಬಂಧವನ್ನು ಹೊಂದಿಕೊಳ್ಳಲು ಸಾಧ್ಯವಿದೆ?

2. ಇಬ್ರಿಯರಿಗೆ 10:1 ಓದಿರಿ. ಧರ್ಮಶಾಸ್ತ್ರವು ಏನು ಮಾಡಲು ಸಾಧ್ಯವಾಯಿತು?

   ***ಇಬ್ರಿಯರಿಗೆ 10:1–2*** *– ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜಸ್ವರೂಪವಲ್ಲವಾದದರಿಂದ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾರದು. [2] ತಂದಿದ್ದ ಪಕ್ಷದಲ್ಲಿ ಆ ಯಜ್ಞ ಸಮರ್ಪಣೆಯು ನಿಂತುಹೋಗುತ್ತಿತ್ತಲ್ಲಾ. ಯಾಕಂದರೆ ದೇವಾರಾಧನೆ ಮಾಡುವವರು ಒಂದೇ ಸಾರಿ ಶುದ್ಧೀಕರಿಸಲ್ಪಟ್ಟ ಮೇಲೆ ಅವರಿಗೆ ಪಾಪವುಂಟೆಂದು ಅವರ ಮನಸ್ಸು ಇನ್ನೂ ಸಾಕ್ಷಿ ಕೊಡುವದು ಹೇಗೆ?*

3. ಇಬ್ರಿಯರಿಗೆ 10:1 ಓದಿರಿ. ನಮ್ಮನ್ನು ಪರಿಪೂರ್ಣವಾಗಿ ಮಾಡಲು ಹಳೆ ಒಡಂಬಡಿಕೆಯ ಯಜ್ಞಗಳು ಸಾಕಾಗುವುದಿಲ್ಲ ಎನ್ನುವುದನ್ನು ಈ ವಾಕ್ಯವು ಹೇಗೆ ಹೇಳುತ್ತದೆ?

4. ಇಬ್ರಿಯರಿಗೆ 10:2 ಓದಿರಿ. ಪಾಪವನ್ನು ಪರಿಹರಿಸಬಲ್ಲ ಯಜ್ಞವು ಇದ್ದಲ್ಲಿ ಅದನ್ನು ಅರ್ಪಿಸುವವರು ಏನು ಮಾಡುತ್ತಿದ್ದರು?

5. ಕುಡಿದು ವಾಹನ ಚಲಿಸುತ್ತಿದ್ದವನು ಏನು ಮಾಡಬೇಕೆನ್ನುವ ನಿಬಂಧನೆಯಿತ್ತು?

6. ಇಬ್ರಿಯರಿಗೆ 10:14 ಓದಿರಿ. ದೇವರು ತನ್ನ ಜನರನ್ನು ಹೀಗೆ ಪರಿಪೂರ್ಣರನ್ನಾಗಿ ಮಾಡುತ್ತಾನೆ:

   ಅ. ಒಳ್ಳೆಯ ಕಾರ್ಯಗಳು

   ಇ. ಸಭೆಗೆ ಹೋಗುವುದರ ಮೂಲಕ

   ಉ. ದಶಾಜ್ಞೆಗಳನ್ನು ಕೈಕೊಳ್ಳುವುದರಿಂದ

   ಎ. ಯೇಸುವಿನ ಯಜ್ಞದಿಂದ

   ***ಇಬ್ರಿಯರಿಗೆ 10:14*** *– ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.*

7. ಇಬ್ರಿಯರಿಗೆ 10:14 ಓದಿರಿ. (ನಂಬಿಕೆಯಿಂದ) ಯೇಸುವಿನ ಯಜ್ಞವನ್ನು ಸ್ವೀಕರಿಸುವವರು ಪರಿಪೂರ್ಣರಾಗಿರುವರು:

ಅ. ಅವರು ಮತ್ತೆ ಪಾಪ ಮಾಡುವವರೆಗೆ

ಇ. ಪಾಪದ ಪೂರ್ವಸ್ಥಿತಿಯಿಂದ

ಉ. ನಿರಂತರವು

8. ಆದಿಕಾಂಡ 20:1–18 ಓದಿರಿ. ಈ ಕತೆಯಲ್ಲಿ ಉಲ್ಲೇಖವಾಗಿರುವ ಇಬ್ಬರು ಪುರುಷರು ಯಾರು?

***ಆದಿಕಾಂಡ 20:1–18*** *– ಅಬ್ರಹಾಮನು ಅಲ್ಲಿಂದ ಕಾನಾನ್ ದೇಶದ ದಕ್ಷಿಣ ಸೀಮೆಗೆ ಹೋಗುತ್ತಾ ಹೋಗುತ್ತಾ ಕಾದೇಶಿಗೂ ಶೂರಿಗೂ ನಡುವೆ ವಾಸಮಾಡಿಕೊಂಡು ಕೆಲವು ಕಾಲ ಗೆರಾರಿನಲ್ಲಿ ಇದ್ದನು. [2] ಅವನು ತನ್ನ ಹೆಂಡತಿಯಾದ ಸಾರಳನ್ನು ತಂಗಿಯೆಂದು ಹೇಳಿದನಾದ್ದರಿಂದ ಗೆರಾರಿನ ಅರಸನಾದ ಅಬೀಮೆಲೆಕನು ಕರೆಕಳುಹಿಸಿ ಆಕೆಯನ್ನು ತನ್ನ ಮನೆಯಲ್ಲಿ ಸೇರಿಸಿಕೊಂಡನು. [3] ಆದರೆ ರಾತ್ರಿಯಲ್ಲಿ ದೇವರು ಅಬೀಮೆಲೆಕನ ಕನಸಿನಲ್ಲಿ ಬಂದು – ನೀನು ಆ ಸ್ತ್ರೀಯನ್ನು ಸೇರಿಸಿಕೊಂಡದರಿಂದ ಸಾಯತಕ್ಕವನಾಗಿದ್ದಿ; [4] ಆಕೆ ಮುತ್ತೈದೆ ಅಂದನು. ಅಬೀಮೆಲೆಕನು ಆಕೆಯನ್ನು ಕೂಡಲಿಲ್ಲವಾದ್ದರಿಂದ ಅವನು – ಸ್ವಾಮೀ, ನಿರಪರಾಧಿಯಾದ ಜನವನ್ನೂ ನಾಶಮಾಡುವಿಯಾ? [5] ಆ ಮನುಷ್ಯನು ಈಕೆ ತನಗೆ ತಂಗಿಯಾಗಬೇಕೆಂದು ತಾನೇ ಹೇಳಲಿಲ್ಲವೇ, ಈಕೆಯೂ ಅವನು ತನಗೆ ಅಣ್ಣನಾಗಬೇಕೆಂದು ಹೇಳಿದಳು. ನಾನು ಯಥಾರ್ಥ ಮನಸ್ಸಿನಿಂದಲೂ ಶುದ್ಧಹಸ್ತದಿಂದಲೂ ಇದನ್ನು ಮಾಡಿದೆನು ಅಂದನು. [6] ಅದಕ್ಕೆ ದೇವರು – ನೀನು ಇದನ್ನು ಯಥಾರ್ಥ ಮನಸ್ಸಿನಿಂದ ಮಾಡಿದೆ ಎಂಬುದನ್ನು ನಾನು ಬಲ್ಲೆ; ಆದಕಾರಣ ನಾನಂತೂ ನೀನು ನನಗೆ ವಿರುದ್ಧವಾಗಿ ಪಾಪಮಾಡದಂತೆ ನಿನ್ನನ್ನು ತಡೆದು ಆಕೆಯನ್ನು ಮುಟ್ಟಗೊಡಿಸಲಿಲ್ಲ. [7] ಹೀಗಿರುವಲ್ಲಿ ಆ ಮನುಷ್ಯನ ಹೆಂಡತಿಯನ್ನು ತಿರಿಗಿ ಅವನಿಗೆ ಒಪ್ಪಿಸಿ ಬಿಡು. ಅವನು ಪ್ರವಾದಿ, ನಿನಗೋಸ್ಕರ ನನಗೆ ಪ್ರಾರ್ಥಿಸುವನು, ಮತ್ತು ನೀನು ಬದುಕುವಿ. ಆಕೆಯನ್ನು ಒಪ್ಪಿಸುವದಿಲ್ಲವೆಂದರೆ ನೀನೂ ನಿನ್ನವರೆಲ್ಲರೂ ಸತ್ತೇ ಸಾಯುವಿರೆಂದು ತಿಳಿದುಕೋ ಎಂದು ಕನಸ್ಸಿನಲ್ಲಿ ಹೇಳಿದನು. [8] ಬೆಳಿಗ್ಗೆ ಅಬೀಮೆಲೆಕನು ತನ್ನ ಸೇವಕರೆಲ್ಲರನ್ನು ಕೂಡಿಸಿ ಈ ಸಂಗತಿಗಳನ್ನೆಲ್ಲಾ ತಿಳಿಸಲೂ ಅವರು ಬಹು ಭಯಪಟ್ಟರು. [9] ಆಮೇಲೆ ಅವನು ಅಬ್ರಹಾಮನನ್ನು ಕರಿಸಿ – ನೀನು ನಮಗೆ ಮಾಡಿದ್ದೇನು? ನಾನು ಯಾವ ತಪ್ಪು ಮಾಡಿದ್ದರಿಂದ ನೀನು ನನ್ನನ್ನೂ ನನ್ನ ರಾಜ್ಯವನ್ನೂ ಮಹಾಪಾತಕಕ್ಕೆ ಒಳಪಡಿಸಿದಿ? ಮಾಡಬಾರದ ಕಾರ್ಯಗಳನ್ನು ನನಗೆ ಮಾಡಿದೆ ಎಂದು ಹೇಳಿ [10] – ನೀನು ಯಾವ ಉದ್ದೇಶದಿಂದ ಈ ಕಾರ್ಯವನ್ನು ಮಾಡಿದೆ ಅಂದು ಅಬ್ರಹಾಮನನ್ನು ಕೇಳಿದನು. [11] ಅದಕ್ಕೆ –*

*ಅಬ್ರಹಾಮನು – ಈ ಸ್ಥಳದವರು ದೇವರ ಭಯವಿಲ್ಲದವರಾಗಿ ನನ್ನ ಹೆಂಡತಿಯ ನಿಮಿತ್ತ ನನ್ನನ್ನು ಕೊಂದಾರೆಂದು ನೆನಸಿದೆನು. [12] ಅದಲ್ಲದೆ ಆಕೆ ನಿಜವಾಗಿ ನನ್ನ ತಂಗಿ, ನನ್ನ ತಂದೆಯ ಮಗಳೇ; ಆದರೆ ನನ್ನ ತಾಯಿಯ ಮಗಳಲ್ಲವಾದದರಿಂದ ನನಗೆ ಹೆಂಡತಿಯಾದಳು. [13] ನಾನು ದೇವಸಂಕಲ್ಪದಿಂದ ತಂದೆಯ ಮನೆಯನ್ನು ಬಿಟ್ಟು ದೇಶಾಂತರ ಹೋಗುವದಕ್ಕೆ ಹೊರಟಾಗ ನಾನು ಆಕೆಗೆ– ನಾವು ಹೋಗುವ ಎಲ್ಲಾ ಸ್ಥಳಗಳಲ್ಲಿಯೂ ನನಗೆ ನಿನ್ನಿಂದ ಒಂದು ಉಪಕಾರವಾಗಬೇಕು, ಏನಂದರೆ ನೀನು ನನ್ನನ್ನು ಅಣ್ಣನೆಂಬದಾಗಿ ಹೇಳಬೇಕೆಂದು ಬೋಧಿಸಿದೆನು ಅಂದನು. [14] ಆಗ ಅಬೀಮೆಲೆಕನು ಅಬ್ರಹಾಮನಿಗೆ ಕುರಿದನಗಳನ್ನೂ, ದಾಸದಾಸಿಯರನ್ನೂ ಕೊಟ್ಟು ಅವನ ಹೆಂಡತಿಯಾದ ಸಾರಳನ್ನು ಅವನಿಗೆ ಒಪ್ಪಿಸಿ [15] – ಇಗೋ ನನ್ನ ದೇಶವು; ಇದರೊಳಗೆ ನಿನಗೆ ಇಷ್ಟವಿದ್ದ ಕಡೆಯಲ್ಲಿ ವಾಸಮಾಡಬಹುದು ಅಂದನು. [16] ಇದಲ್ಲದೆ ಅವನು ಸಾರಳಿಗೆ – ನಿನ್ನ ಅಣ್ಣನಿಗೆ ಸಾವಿರ ರೂಪಾಯಿ ಕೊಟ್ಟಿದ್ದೇನೆ; ನಡೆದದ್ದನ್ನು ನಿನ್ನ ಕಡೆಯವರು ಲಕ್ಷ್ಯಕ್ಕೆ ತೆಗೆದುಕೊಳ್ಳದಂತೆ ಇದು ಪ್ರಾಯಶ್ಚಿತ್ತವಾಗಿರಲಿ; ನೀನು ಮಾನಸ್ಥಳೆಂದು ಇದರಿಂದ ಎಲ್ಲರೂ ತಿಳಿದುಕೊಳ್ಳುವರು ಎಂದು ಹೇಳಿದನು. [17] ತರುವಾಯ ಅಬ್ರಹಾಮನು ದೇವರನ್ನು ಬೇಡಿಕೊಳ್ಳಲು ದೇವರು ಅಬೀಮೆಲೆಕನನ್ನು ಅವನ ಪತ್ನಿಯನ್ನೂ, ದಾಸಿಯರನ್ನೂ, ವಾಸಿಮಾಡಿದ್ದರಿಂದ ಅವರಿಗೆ ಮಕ್ಕಳಾದರು. [18] ಮುಂಚೆ ಅಬ್ರಹಾಮನ ಹೆಂಡತಿಯಾದ ಸಾರಳ ನಿಮಿತ್ತ ಯೆಹೋವನು ಅಬೀಮೆಲೆಕನ ಮನೆಯಲ್ಲಿದ್ದ ಸ್ತ್ರೀಯರೆಲ್ಲರೂ ಬಂಜೆಯರಾಗುವಂತೆ ಮಾಡಿದ್ದನು.*

9. ಆದಿಕಾಂಡ 20:2 ಮತ್ತು 5 ಓದಿರಿ. ಈ ಸನ್ನಿವೇಶದಲ್ಲಿ ಯಾರು ಯಾರಿಗೆ ಸುಳ್ಳು ಹೇಳಿ ಮೋಸಪಡಿಸಿದರು?

***ಆದಿಕಾಂಡ 20:2*** *– ಅವನು ತನ್ನ ಹೆಂಡತಿಯಾದ ಸಾರಳನ್ನು ತಂಗಿಯೆಂದು ಹೇಳಿದನಾದ್ದರಿಂದ ಗೆರಾರಿನ ಅರಸನಾದ ಅಬೀಮೆಲೆಕನು ಕರೇಕಳುಹಿಸಿ ಆಕೆಯನ್ನು ತನ್ನ ಮನೆಯಲ್ಲಿ ಸೇರಿಸಿಕೊಂಡನು.*

***ಆದಿಕಾಂಡ 20:5*** *– ಆ ಮನುಷ್ಯನು ಈಕೆ ತನಗೆ ತಂಗಿಯಾಗಬೇಕೆಂದು ತಾನೇ ಹೇಳಲಿಲ್ಲವೇ. ಈಕೆಯೂ ಅವನು ತನಗೆ ಅಣ್ಣನಾಗಬೇಕೆಂದು ಹೇಳಿದಳು. ನಾನು ಯಥಾರ್ಥಮನಸ್ಸಿನಿಂದಲೂ ಶುದ್ಧಹಸ್ತದಿಂದಲೂ ಇದನ್ನು ಮಾಡಿದೆನು ಅಂದನು.*

10. ಆದಿಕಾಂಡ 20:7 ಓದಿರಿ. ದೇವರು ಅಬ್ರಹಾಮನ ನಡೆಯನ್ನು ಒಪ್ಪಿಕೊಳ್ಳಲಿಲ್ಲ. ಆದರೂ ದೇವರು ಯಾರ ಪರವಾಗಿ ನಿಂತನು, ಅಬ್ರಹಾಮನೋ ಅಥವ ಅಬೀಮೆಲೆಕನೋ

ಯಾಕೆ? ಆದಿಕಾಂಡ 15:1, 18; ಮತ್ತು ಯಾಕೋಬನು 2:23 ಓದಿರಿ.

***ಆದಿಕಾಂಡ 20:7*** *– ಹೀಗಿರುವಲ್ಲಿ ಆ ಮನುಷ್ಯನ ಹೆಂಡತಿಯನ್ನು ತಿರಿಗಿ ಅವನಿಗೆ ಒಪ್ಪಿಸಿ ಬಿಡು. ಅವನು ಪ್ರವಾದಿ, ನಿನಗೋಸ್ಕರ ನನಗೆ ಪ್ರಾರ್ಥಿಸುವನು, ಮತ್ತು ನೀನು ಬದುಕುವಿ. ಆಕೆಯನ್ನು ಒಪ್ಪಿಸುವದಿಲ್ಲವೆಂದರೆ ನೀನೂ ನಿನ್ನವರೆಲ್ಲರೂ ಸತ್ತೇ ಸಾಯುವಿರೆಂದು ತಿಳಿದುಕೋ ಎಂದು ಕನಸಿನಲ್ಲಿ ಹೇಳಿದನು.*

***ಆದಿಕಾಂಡ 15:1*** *– ಈ ಸಂಗತಿಗಳು ನಡೆದ ಮೇಲೆ ಅಬ್ರಾಮನಿಗೆ ದರ್ಶನದಲ್ಲಿ ಯೆಹೋವನ ವಾಕ್ಯವುಂಟಾಯಿತು; ಏನಂದರೆ – ಅಬ್ರಾಮನೇ, ಭಯಪಡಬೇಡ, ನಾನು ನಿನಗೆ ಗುರಾಣಿಯಾಗಿದ್ದೇನೆ; ನಿನಗೋಸ್ಕರ ಅತ್ಯಧಿಕ ಬಹುಮಾನವು ಇಟ್ಟಿದೆ ಎಂಬುದೇ.*

***ಆದಿಕಾಂಡ 15:18*** *– ಆ ದಿನದಲ್ಲಿ ಯೆಹೋವನು ಅಬ್ರಾಮನ ಸಂಗಡ ಒಡಂಬಡಿಕೆಮಾಡಿಕೊಂಡು – ಐಗುಪ್ತದೇಶದ ನದಿಯಿಂದ ಯೂಫ್ರೇಟೀಸ್ ಮಹಾನದಿಯವರೆಗೂ ಈ ದೇಶವನ್ನೆಲ್ಲಾ ನಿನ್ನ ಸಂತತಿಯವರಿಗೆ ಕೊಟ್ಟಿದ್ದೇನೆ ಅಂದನು.*

***ಯಾಕೋಬನು 2:23*** *– ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು ಎಂಬ ಶಾಸ್ತ್ರದ ಮಾತು ಹೀಗೆ ನೆರವೇರಿತು, ಮತ್ತು ದೇವರ ಸ್ನೇಹಿತನೆಂಬ ಹೆಸರು ಅವನಿಗೆ ಉಂಟಾಯಿತು.*

11. ಆದಿಕಾಂಡ 20:7, 17–18 ಓದಿರಿ. ಅಬ್ರಹಾಮನು ತಪ್ಪು ಮಾಡಿದಾಗಲೂ ಯಾರು ಯಾರಿಗಾಗಿ ಪ್ರಾರ್ಥನೆ ಮಾಡಬೇಕೆಂದು ದೇವರು ಹೇಳಿದನು?

ಅ. ಅಬ್ರಹಾಮನು ಅಬೀಮೆಲೆಕನಿಗಾಗಿ ಪ್ರಾರ್ಥನೆ ಮಾಡಬೇಕೆಂದು ದೇವರು ಹೇಳಿದನು

ಇ. ಅಬೀಮೆಲೆಕನು ಅಬ್ರಹಾಮನಿಗಾಗಿ ಪ್ರಾರ್ಥನೆ ಮಾಡಬೇಕೆಂದು ದೇವರು ಹೇಳಿದನು

ಇ. ಅವರು ಪರಸ್ಪರರಿಗಾಗಿ ಪ್ರಾರ್ಥಿಸಬೇಕೆಂದು ಹೇಳಿದನು

***ಆದಿಕಾಂಡ 20:7*** *– ಹೀಗಿರುವಲ್ಲಿ ಆ ಮನುಷ್ಯನ ಹೆಂಡತಿಯನ್ನು ತಿರಿಗಿ ಅವನಿಗೆ ಒಪ್ಪಿಸಿ ಬಿಡು. ಅವನು ಪ್ರವಾದಿ, ನಿನಗೋಸ್ಕರ ನನಗೆ ಪ್ರಾರ್ಥಿಸುವನು, ಮತ್ತು ನೀನು ಬದುಕುವಿ. ಆಕೆಯನ್ನು ಒಪ್ಪಿಸುವದಿಲ್ಲವೆಂದರೆ ನೀನೂ ನಿನ್ನವರೆಲ್ಲರೂ ಸತ್ತೇ ಸಾಯುವಿರೆಂದು ತಿಳಿದುಕೋ ಎಂದು ಕನಸಿನಲ್ಲಿ ಹೇಳಿದನು.*

***ಆದಿಕಾಂಡ 20:17–18*** *– ತರುವಾಯ ಅಬ್ರಹಾಮನು ದೇವರನ್ನು ಬೇಡಿಕೊಳ್ಳಲು ದೇವರು ಅಬೀಮೆಲೆಕನನ್ನೂ ಅವನ ಪತ್ನಿಯನ್ನೂ ದಾಸಿಯರನ್ನೂ ವಾಸಿಮಾಡಿದ್ದರಿಂದ ಅವರಿಗೆ ಮಕ್ಕಳಾದರು. [18] ಮುಂಚೆ ಅಬ್ರಹಾಮನ ಹೆಂಡತಿಯಾದ ಸಾರಳ ನಿಮಿತ್ತ ಯೆಹೋವನು ಅಬೀಮೆಲೆಕನ ಮನೆಯಲ್ಲಿದ್ದ ಸ್ತ್ರೀಯರೆಲ್ಲರೂ ಬಂಜೆಯರಾಗುವಂತೆ ಮಾಡಿದ್ದನು.*

12. ರೋಮಾಪುರದವರಿಗೆ 8:31 ಓದಿರಿ. ಕೆಲವೊಮ್ಮೆ ನಾವು ಸೋತುಹೋದಾಗಲೂ, ನಮ್ಮ ಸಂಗಡ ಯಾರಿದ್ದಾರೆ?

***ರೋಮಾಪುರದವರಿಗೆ 8:31*** *– ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?*

13. ರೋಮಾಪುರದವರಿಗೆ 4:8 ಓದಿರಿ. ನಾವು ತಪ್ಪು ಮಾಡಿದಾಗಲೂ ದೇವರು ತಾನು ಏನು ಮಾಡುವುದಿಲ್ಲವೆಂದು ಹೇಳಿದ್ದಾನೆ?

***ರೋಮಾಪುರದವರಿಗೆ 4:8*** *– ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು.*

14. ಇಬ್ರಿಯರಿಗೆ 8:12–13 ಓದಿರಿ. ಹೊಸ ಒಡಂಬಡಿಕೆಯಲ್ಲಿ, ದೇವರು ತಾನು ಏನು ಮಾಡುವುದಿಲ್ಲವೆಂದು ಹೇಳಿದ್ದಾನೆ?

***ಇಬ್ರಿಯದವರಿಗೆ 8:12–13*** *– ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು, ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಎಂದು ಕರ್ತನು ನುಡಿಯುತ್ತಾನೆ. [13] ಇಲ್ಲಿ ಹೊಸ ಒಡಂಬಡಿಕೆಯೆಂದು ಹೇಳಿದ್ದರಲ್ಲಿ ಮೊದಲಿದ್ದದ್ದನ್ನು ಹಳೇದಾಗಿ ಮಾಡಿದ್ದಾನೆ. ಆದರೆ ಹಳೇದಾಗುತ್ತಾ ಮುದಿಯಾಗುವಂಥದಕ್ಕೆ ಅಂತ್ಯವು ಸಮೀಪವಾಗಿದೆ.*

15. ಎಫೆಸದವರಿಗೆ 2:5 ಮತ್ತು 8,9 ಓದಿರಿ. ನಮಗೆ ಹೇಗೆ ರಕ್ಷಣೆ ಉಂಟಾಗುತ್ತದೆ?

***ಎಫೆಸದವರಿಗೆ 2:5*** *– ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು.*

***ಎಫೆಸದವರಿಗೆ 2:8–9*** *– ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ. ಅದು ದೇವರ ವರವೇ. [9] ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ.*

16. ತೀತನು 3:5 ಓದಿರಿ. ನಮಗೆ ರಕ್ಷಣೆಯಾಗದಿರುವುದು ಹೇಗೆ?

ನಮಗೆ ರಕ್ಷಣೆಯಾಗುವುದು ಹೇಗೆ?

***ತೀತನು 3:5** – ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟು ಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು.*

17. ಎಫೆಸದವರಿಗೆ 1:6 ಓದಿರಿ. ದೇವರು ನಮ್ಮನ್ನು ತನ್ನ __________ ರಕ್ಷಿಸಿದ್ದಕ್ಕಾಗಿ ನಾವು ನಿತ್ಯಕಾಲಕ್ಕೂ ಆತನನ್ನು ಸ್ತುತಿಸುತ್ತೇವೆ. ಯಾಕೆಂದರೆ ಆತನು ತನ್ನ ಪ್ರಿಯನಲ್ಲಿ (ಕ್ರಿಸ್ತೇಸುವಿನಲ್ಲಿ) ನಮ್ಮನ್ನು ಅಂಗೀಕರಿಸಿದ್ದಾನೆ.

***ಎಫೆಸದವರಿಗೆ 1:6** – ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪಮಾಡಿದ್ದನು. ಈ ಕೃಪಾದಾನವು ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು.*

# ಉತ್ತರಗಳು

1. ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಮನುಷ್ಯನು ಆ ಕುಟುಂಬದೊಂದಿಗೆ ಎಂತಹ ಸಂಬಂಧವನ್ನು ಹೊಂದಿಕೊಳ್ಳಲು ಸಾಧ್ಯವಿದೆ?

   *ಕ್ಷಮೆಯಿಲ್ಲದ, ಕಹಿಮನಸ್ಸಿನ ಮತ್ತು ಘರ್ಷಣೆಗೊಳಗಾದ ಸಂಬಂಧ*

2. ಇಬ್ರಿಯರಿಗೆ 10:1 ಓದಿರಿ. ಧರ್ಮಶಾಸ್ತ್ರವು ಏನು ಮಾಡಲು ಸಾಧ್ಯವಾಯಿತು?

   *ಯಜ್ಞಗಳನ್ನು ಅರ್ಪಿಸಿ ದೇವರ ಬಳಿಗೆ ಬರುವವರನ್ನು ಸಿದ್ಧಿಗೆ ತರಲಾರದು*

3. ಇಬ್ರಿಯರಿಗೆ 10:1 ಓದಿರಿ. ನಮ್ಮನ್ನು ಪರಿಪೂರ್ಣವಾಗಿ ಮಾಡಲು ಹಳೆ ಒಡಂಬಡಿಕೆಯ ಯಜ್ಞಗಳು ಸಾಕಾಗುವುದಿಲ್ಲ ಎನ್ನುವುದನ್ನು ಈ ವಾಕ್ಯವು ಹೇಗೆ ಹೇಳುತ್ತದೆ?

   *ಅವು ಪದೇ ಪದೇ ಅರ್ಪಿತವಾಗುತ್ತಿದ್ದವು – ದಿನಾಲೂ ಪ್ರತಿವಾರವೂ ಪ್ರತಿತಿಂಗಳೂ. ಅವು ಪದೇ ಪದೇ ಅರ್ಪಿಸಲ್ಪಡುತ್ತಿದ್ದದರಿಂದಲೇ ಅದು ಎಲ್ಲಾಕಾಲಕ್ಕೂ ಸಾಕಾಗುವ ಒಂದೇ ಯಜ್ಞವಾಗಲಿಲ್ಲವೆಂದು ತಿಳಿಯುತ್ತದೆ.*

4. ಇಬ್ರಿಯರಿಗೆ 10:2 ಓದಿರಿ. ಪಾಪವನ್ನು ಪರಿಹರಿಸಬಲ್ಲ ಯಜ್ಞವು ಇದ್ದಲ್ಲಿ ಅದನ್ನು ಅರ್ಪಿಸುವವರು ಏನು ಮಾಡುತ್ತಿದ್ದರು?

   *ಪಾಪವುಂಟೆಂದು ಅವರ ಮನಸ್ಸು ಸಾಕ್ಷಿ ಕೊಡುತ್ತಿರಲಿಲ್ಲ*

5. ಕುಡಿದು ವಾಹನ ಚಲಿಸುತ್ತಿದ್ದವನು ಏನು ಮಾಡಬೇಕೆನ್ನುವ ನಿಬಂಧನೆಯಿತ್ತು?

   *ಅವನ ಪಾಪಗಳು ಯಾವಾಗಲೂ ಅವನ ನೆನಪಿಗೆ ಬರುತಿತ್ತು*

6. ಇಬ್ರಿಯರಿಗೆ 10:14 ಓದಿರಿ. ದೇವರು ತನ್ನ ಜನರನ್ನು ಹೀಗೆ ಪರಿಪೂರ್ಣರನ್ನಾಗಿ ಮಾಡುತ್ತಾನೆ:

   *ಎ. ಯೇಸುವಿನ ಯಜ್ಞದಿಂದ*

7. ಇಬ್ರಿಯರಿಗೆ 10:14 ಓದಿರಿ. (ನಂಬಿಕೆಯಿಂದ) ಯೇಸುವಿನ ಯಜ್ಞವನ್ನು ಸ್ವೀಕರಿಸುವವರು ಪರಿಪೂರ್ಣರಾಗಿರುವರು:

   *ಉ. ನಿರಂತರವು*

8. ಆದಿಕಾಂಡ 20:1–18 ಓದಿರಿ. ಈ ಕತೆಯಲ್ಲಿ ಉಲ್ಲೇಖವಾಗಿರುವ ಇಬ್ಬರು ಪುರುಷರು ಯಾರು?

*ಅಬ್ರಹಾಮನು ಮತ್ತು ಅಬೀಮೆಲೆಕನು*

9. ಆದಿಕಾಂಡ 20:2 ಮತ್ತು 5 ಓದಿರಿ. ಈ ಸನ್ನಿವೇಶದಲ್ಲಿ ಯಾರು ಯಾರಿಗೆ ಸುಳ್ಳು ಹೇಳಿ ಮೋಸಪಡಿಸಿದರು?

*ಅಬ್ರಹಾಮನು*

10. ಆದಿಕಾಂಡ 20:7 ಓದಿರಿ. ದೇವರು ಅಬ್ರಹಾಮನ ನಡೆಯನ್ನು ಒಪ್ಪಿಕೊಳ್ಳಲಿಲ್ಲ. ಆದರೂ ದೇವರು ಯಾರ ಪರವಾಗಿ ನಿಂತನು, ಅಬ್ರಹಾಮನೋ ಅಥವ ಅಬೀಮೆಲೆಕನೋ?

*ಅಬ್ರಹಾಮನ ಪರವಾಗಿ*

ಯಾಕೆ? ಆದಿಕಾಂಡ 15:1, 18; ಮತ್ತು ಯಾಕೋಬನು 2:23 ಓದಿರಿ.

*ದೇವರು ಅಬ್ರಹಾಮನೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದನು ಮತ್ತು ಅವನು ದೇವರ ಸ್ನೇಹಿತನಾಗಿದ್ದನು.*

11. ಆದಿಕಾಂಡ 20:7 ಮತ್ತು 17–18 ಓದಿರಿ. ಅಬ್ರಹಾಮನು ತಪ್ಪು ಮಾಡಿದಾಗಲೂ ಯಾರು ಯಾರಿಗಾಗಿ ಪ್ರಾರ್ಥನೆ ಮಾಡಬೇಕೆಂದು ದೇವರು ಹೇಳಿದನು?

*ಅ. ಅಬ್ರಹಾಮನು ಅಬೀಮೆಲೆಕನಿಗಾಗಿ ಪ್ರಾರ್ಥನೆ ಮಾಡಬೇಕೆಂದು ದೇವರು ಹೇಳಿದನು.*

12. ರೋಮಾಪುರದವರಿಗೆ 8:31 ಓದಿರಿ. ಕೆಲವೊಮ್ಮೆ ನಾವು ಸೋತುಹೋದಾಗಲೂ, ನಮ್ಮ ಸಂಗಡ ಯಾರಿದ್ದಾರೆ?

*ದೇವರು*

13. ರೋಮಾಪುರದವರಿಗೆ 4:8 ಓದಿರಿ. ನಾವು ತಪ್ಪು ಮಾಡಿದಾಗಲೂ ದೇವರು ತಾನು ಏನು ಮಾಡುವುದಿಲ್ಲವೆಂದು ಹೇಳಿದ್ದಾನೆ?

*ನಮ್ಮ ಪಾಪವನ್ನು ನಮ್ಮ ಲೆಕ್ಕಕ್ಕೆ ಹಾಕುವುದಿಲ್ಲವೆನ್ನುತ್ತಾನೆ.*

14. ಇಬ್ರಿಯರಿಗೆ 8:12–13 ಓದಿರಿ. ಹೊಸ ಒಡಂಬಡಿಕೆಯಲ್ಲಿ, ದೇವರು ತಾನು ಏನು ಮಾಡುವುದಿಲ್ಲವೆಂದು ಹೇಳಿದ್ದಾನೆ?

*ದೇವರು ನಮ್ಮ ಪಾಪಗಳನ್ನು ತನ್ನ ನೆನಪಿಗೆ ಎಂದಿಗೂ ತರುವುದಿಲ್ಲವೆಂದು ಹೇಳಿದ್ದಾನೆ*

15. ಎಫೆಸದವರಿಗೆ 2:5 ಮತ್ತು 8,9 ಓದಿರಿ. ನಮಗೆ ಹೇಗೆ ರಕ್ಷಣೆ ಉಂಟಾಗುತ್ತದೆ?

*ದೇವರ ಕೃಪೆಯಿಂದ; ಆತನು ನಮ್ಮ ಕಡೆಗೆ ಕರುಣೆಯಿಟ್ಟು ದಯೆತೋರಿದ್ದರಿಂದ*

16. ತೀತನು 3:5 ಓದಿರಿ. ನಮಗೆ ರಕ್ಷಣೆಯಾಗದಿರುವುದು ಹೇಗೆ?

*ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತ ರಕ್ಷಣೆಯಾಗುವುದಿಲ್ಲ*

ನಮಗೆ ರಕ್ಷಣೆಯಾಗುವುದು ಹೇಗೆ?

*ತನ್ನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕ ಮತ್ತು ಪವಿತ್ರಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟುಮಾಡುವದರ ಮೂಲಕ ಆತನು ನಮ್ಮನ್ನು ರಕ್ಷಿಸಿದನು.*

17. ಎಫೆಸದವರಿಗೆ 1:6 ಓದಿರಿ. ದೇವರು ನಮ್ಮನ್ನು ತನ್ನ __________ ರಕ್ಷಿಸಿದ್ದಕ್ಕಾಗಿ ನಾವು ನಿತ್ಯಕಾಲಕ್ಕೂ ಆತನನ್ನು ಸ್ತುತಿಸುತ್ತೇವೆ. ಯಾಕೆಂದರೆ ಆತನು ತನ್ನ ಪ್ರಿಯನಲ್ಲಿ (ಕ್ರಿಸ್ತೇಸುವಿನಲ್ಲಿ) ನಮ್ಮನ್ನು ____________.

*ಕೃಪೆಯಿಂದ/ ಅಂಗೀಕರಿಸಿದ್ದಾನೆ*

# ಪಾಠ 11

# ನಾನು ಪ್ರಿಯನು/ಳು ನಾನು ಸುಂದರನು/ಳು

***ಡ್ಯೂಣ್ ಕ್ರೊ***

ಒಂದು ದಿನ ಮೈಕಲ್, ನನ್ನ ಕಚೇರಿಗೆ ಬಂದು ತನ್ನ ಸಹಪಾಠಿಯ ವೈಯಕ್ತಿಕವಾದ ವಿಷಯವೊಂದನ್ನು ಹೇಳಿದನು. ನಾನು ಕ್ಯಾರಿಸ್ ಬೈಬಲ್ ಕಾಲೇಜಿನಲ್ಲಿ ನನ್ನ ತರಗತಿಯಲ್ಲಿ ಬೋಧಿಸುತ್ತಿರುವಾಗ, ಪೆಟ್ರಿಷಿಯ ಎಂಬಾಕೆಯು ತನ್ನ ಪುಸ್ತಕದಲ್ಲಿ: "ನಾನು ಪ್ರೀತಿಪಾತ್ರಳು, ನಾನು ಸುಂದರವಾಗಿದ್ದೇನೆ" ಮುಂತಾಗಿ ಬರೆಯುತ್ತಿದ್ದಳು. ಮೇಲಾಗಿ, ಪೆಟ್ರಿಷಿಯಳು ಇತರರ ಗಮನ ಸೆಳೆಯುವಂತೆ ತನ್ನನ್ನು ಅಲಂಕರಿಸಿಕೊಳ್ಳುತ್ತಿದ್ದಳು. ಪೆಟ್ರಿಷಿಯಳ ಈ ನಡತೆಗೆ ಕಾರಣ, ತಾನು ಸುಂದರವಾಗಿಲ್ಲ ತನ್ನನ್ನು ಪ್ರೀತಿಸುವವರಿಲ್ಲ ಎಂದು ಅಂದುಕೊಳ್ಳುವುದೇ ಆಗಿದ್ದದರಿಂದ ಅವಳಲ್ಲಿ ತಿರಸ್ಕೃತ ಭಾವನೆಯಿತ್ತು.

ಮಾನವರಾದ ನಮಗೆ ಕೆಲವು ಮೂಲಭೂತ ಅಗತ್ಯತೆಗಳಿವೆ–ಇತರರು ನಮ್ಮನ್ನು ಪ್ರೀತಿಸಬೇಕು, ನಮ್ಮನ್ನು ಸ್ವೀಕರಿಸಬೇಕು ಮತ್ತು ಗೌರವಿಸಬೇಕು, ಇದಲ್ಲದೆ ನಮಗೊಂದು ಬೆಲೆಯಿರಬೇಕು ಮತ್ತು ನಾವು ದೇವರೊಂದಿಗೆ ಸರಿಯಾದ ಸಂಬಂಧವನ್ನು ಹೊಂದಿರಬೇಕು. ಇಂದಿನ ಧಾರ್ಮಿಕ ಪರಿಸರವು, ನಾವು ಪ್ರೀತಿಗೆ ಅಪಾತ್ರರು, ಗಣನೆಗೆ ಬಾರದವರು ಮತ್ತು ಅಸ್ವೀಕೃತರು ಎನ್ನುವ ಭಾವವನ್ನು ನಮ್ಮಲ್ಲಿ ಬಿತ್ತುತ್ತದೆ. ಸೈತಾನನು ವಿಶ್ವಾಸಿಗಳ ವಿರುದ್ಧ ಉಪಯೋಗಿಸುವ ಬಲವಾದ ಆಯುಧಗಳಲ್ಲಿ ಅಪರಾಧಿಭಾವ ಮತ್ತು ತಿರಸ್ಕೃತಭಾವಗಳು ಸೇರಿದ್ದು, ಅದರೊಂದಿಗೆ ಅದು ಭಕ್ತಿಯ ಒಂದು ಭಾಗವೆಂದು ತೋರುತ್ತಿರುತ್ತಾನೆ.

ಇಲ್ಲಿ ಒಂದು ಪ್ರಶ್ನೆ: ನಿಮ್ಮಲ್ಲಿ ಎಷ್ಟು ಜನರಿಗೆ, ನೀವು ಯೇಸುವಿನ ಬಳಿಗೆ ಬಂದ ಪ್ರಾರಂಭದಲ್ಲಿಯೇ ಆತನು ನಿಮ್ಮನ್ನು ಪ್ರೀತಿಸುತ್ತಾನೆ, ಮತ್ತು ನೀವು ಆತನನ್ನು ಸ್ವೀಕರಿಸಿದಾಗ ಆತನು ನಿಮ್ಮ ನೀತಿಯಾಗಿ ಮಾರ್ಪಡುತ್ತಾನೆ ಎಂದು ಹೇಳಲಾಗಿದೆ? ವಾಸ್ತವವೆಂದರೆ, ನಿಮಗೆ ಅವಶ್ಯವಿರುವ ಎಲ್ಲ ನೀತಿಯನ್ನು ಆತನೇ ನಿಮಗೆ ಒದಗಿಸುವನು (1 ಕೊರಿಂಥದವರಿಗೆ 1:30ರಲ್ಲಿ, *"ನೀವು ಕ್ರಿಸ್ತ ಯೇಸುವಿನಲ್ಲಿರುವದು ಆತನಿಂದಲೇ. ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು). ಇದು ಸುವಾರ್ತೆಯ ಒಳ್ಳೆಯ ಭಾಗವಾಗಿದೆ: ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಅಂತೂ*

*ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದಾಗಿದೆ. ಹೇಗಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ"* (ರೋಮಾಪುರದವರಿಗೆ 1:16–17). *"ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು"* (ರೋಮಾಪುರದವರಿಗೆ 4:5). ದೇವರು ನಮ್ಮನ್ನು ನಂಬಿಕೆಯಲ್ಲಿ ನಂಬಿಕೆ ಇಡುವಂತೆ ಅಥವ ಏನೋ ಒಂದು ವಸ್ತುವಿಗಾಗಿ ನಂಬಿಕೆಯಿಡದೆ, ಆತನ ಮೇಲೆ ದೃಢವಾದ, ನಂಬಲರ್ಹವಾದ ಭರವಸವಿಡುವಂತೆ ಹೇಳುತ್ತಾನೆ.

ದೇವರು ನಿಮ್ಮನ್ನು ತಾನು ಈಗಾಗಲೇ ಪ್ರೀತಿಸಿದ್ದಕ್ಕಿಂತ ಹೆಚ್ಚಾಗಿ ಪ್ರೀತಿಸಲಾರನು. ದೇವರು ಪ್ರೀತಿಸ್ವರೂಪಿಯಾಗಿದ್ದಾನೆ (1 ಯೋಹಾನ 4:8). ಆದರೆ ನೀವದನ್ನು ಹೆಚ್ಚಾಗಿ ಸ್ವೀಕರಿಸಲು ಸಾಧ್ಯವಿದೆ ಮತ್ತು ಅನುಭವಿಸಲು ಸಾಧ್ಯವಿದೆ. ನೀವು ಹೆಚ್ಚುಹೆಚ್ಚಾಗಿ ನಂಬುತ್ತಿದ್ದಂತೆ, ದೇವರ ಕಡೆಗೆ ನಿಮ್ಮ ಪ್ರೀತಿ ಹೆಚ್ಚುತ್ತಾ ಹೋಗುತ್ತದೆ. ದೇವರ ವಾಕ್ಯವು, "ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" (1 ಯೋಹಾನ 4:19) ಎನ್ನುತ್ತದೆ. ಇದನ್ನು ಆಲೋಚಿಸಿರಿ, ನಂಬಿರಿ ಮತ್ತು ಸ್ವೀಕರಿಸಿರಿ!

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ರೋಮಾಪುರದವರಿಗೆ 8:38–39 ಓದಿರಿ. ಅಪೊಸ್ತಲನಾದ ಪೌಲನಿಗೆ ಯಾವ ನಿಶ್ಚಯವಿತ್ತು?

   ***ರೋಮಾಪುರದವರಿಗೆ 8:38–39*** *– ಹೇಗಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ [39] ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು.*

2. ನಾನು ಬೈಬಲ್ ಕಾಲೇಜಿನಲ್ಲಿರುವಾಗ, ನನ್ನ ಅಧ್ಯಾಪಕರೊಬ್ಬರು ಈ ರೀತಿಯಾದ ಟಿಪ್ಪಣಿಯನ್ನು ಬರೆದು ಹಂಚಿದರು: "ನೀತಿನಿರ್ಣಯವೆನ್ನುವುದು, ದೇವರು ತನ್ನನ್ನು ನಂಬುವ ಯಾರನ್ನೇ ಆದರೂ ನೀತಿವಂತನೆಂದು ಹೇಳುವಂತಹ ಕಾನೂನು ಪ್ರಕ್ರಿಯೆಯಾಗಿದೆ, ಆದರೆ ಅವರು ನೀತಿವಂತರಾಗುವುದಿಲ್ಲ". ಆದರೆ ನಾನು ದೇವರ ವಾಕ್ಯವನ್ನು ಅಭ್ಯಾಸ ಮಾಡುತ್ತಾ ಬಂದ ಹಾಗೆ, ನೀತಿನಿರ್ಣಯವು ಒಂದು ಉಚಿತವಾದ ವರವಾಗಿದ್ದು, ನಮ್ಮನ್ನು ದೇವರ ಸನ್ನಿಧಿಯಲ್ಲಿ ನೀತಿವಂತರನ್ನಾಗಿ ಮಾಡುತ್ತದೆ ಎನ್ನುವುದು ನನಗೆ ನಿಶ್ಚಯವಾಯಿತು. ರೋಮಾಪುರದವರಿಗೆ 5:19 ಓದಿರಿ. ಯೇಸುಕ್ರಿಸ್ತನ ವಿಧೇಯತೆಯ ಮೂಲಕ (ಧರ್ಮಶಾಸ್ತ್ರಕ್ಕೆ ವಿಧೇಯನಾಗಿ ಕ್ರೂಜೆಗೆ ಹೋದದ್ದು) ಅನೇಕರು:

   ಅ. ನೀತಿವಂತರೆಂದು ನಿರ್ಣಯಿಸಲಾಯಿತು

   ಇ. ನೀತಿವಂತರೆಂದು ಅಂದುಕೊಳ್ಳಲಾಯಿತು

   ಉ. ನೀತಿವಂತರಾಗಿ ಮಾಡಲ್ಪಡುವರು

   ***ರೋಮಾಪುರದವರಿಗೆ 5:19*** *– ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ ಪಾಪಿಗಳಾದರೋ ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ ನೀತಿವಂತರಾಗುವರು.*

3. 2 ಕೊರಿಂಥದವರಿಗೆ 5:21 ಓದಿರಿ. "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ______________ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು"

*__2 ಕೊರಿಂಥದವರಿಗೆ 5:21__ – ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು.*

4. ಕೊಲಸ್ಸೆಯವರಿಗೆ 1:21–22 ಓದಿರಿ. ಯೇಸುಕ್ರಿಸ್ತನು ಈ ಲೋಕಕ್ಕೆ ಬಂದು ನಮ್ಮ ಪಾಪಗಳಿಗಾಗಿ ಸತ್ತನು. ಈ ಕಾರಣದಿಂದ, ನಮ್ಮನ್ನು ಪರಿಶುದ್ಧರೂ, ನಿರ್ದೋಷಿಗಳೂ ನಿರಪರಾಧಿಗಳೂ ಆಗಿ ನಿಲ್ಲಿಸಿಕೊಳ್ಳುತ್ತಾನೆ

ಅ. ನಿಮ್ಮ ಬಾಳಸಂಗಾತಿಯ ಎದುರಿನಲ್ಲಿ

ಇ. ನಿಮ್ಮ ಸ್ನೇಹಿತರ ಎದುರಿನಲ್ಲಿ

ಉ. ದೇವರ ಎದುರಿನಲ್ಲಿ

*__ಕೊಲೊಸ್ಸೆಯವರಿಗೆ 1:21–22__ – ಇದಲ್ಲದೆ ನೀವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರಾಗಿ ದ್ವೇಷಮನಸ್ಸುಳ್ಳವರೂ ಆಗಿದ್ದರೂ [22] ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೂಲ ದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನಪಡಿಸಿಕೊಂಡಿದ್ದಾನೆ. ಮತ್ತು ನಿಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ.*

5. ಎಫೆಸದವರಿಗೆ 1:6 ಓದಿರಿ. ದೇವರು ನಮಗೆ ನೀಡಿರುವ ಕೃಪೆಗಾಗಿ ನಾವು ನಿತ್ಯಕಾಲಕ್ಕೂ ಆತನನ್ನು ಸ್ತುತಿಸುತ್ತೇವೆ, ಯಾಕೆಂದರೆ ಆತನು ನಮ್ಮನ್ನು ______________________ ಸ್ವೀಕರಿಸಿದ್ದಾನೆ.

*__ಎಫೆಸದವರಿಗೆ 1:6__ – ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪಮಾಡಿದ್ದನು. ಈ ಕೃಪಾದಾನವು ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು.*

6. ಇಬ್ರಿಯರಿಗೆ 10:14 ಓದಿರಿ. ಯೇಸುವಿನ ಮತ್ತು ಆತನ ಕ್ರೂಜೆಯ ಸಮರ್ಪಣೆಯಿಂದ ನಮ್ಮನ್ನು ಎಷ್ಟು ಕಾಲದವರೆಗೆ ಸಿದ್ಧಿಗೆ ತಂದಿದ್ದಾನೆ:

ಅ. ಮತ್ತೆ ಪಾಪ ಮಾಡುವವರೆಗೆ

ಇ. ನೀವು ತಿರುಗಿ ಸಭೆಗೆ ಹೋಗುವವರೆಗೆ

ಉ. ನಿರಂತರವಾಗಿ

***ಇಬ್ರಿಯರಿಗೆ 10:14–17*** *– ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ. [15] ಪವಿತ್ರಾತ್ಮನು ಸಹ ನಮಗೆ ಸಾಕ್ಷಿಕೊಡುವವನಾಗಿ– [16] ಆ ದಿನಗಳು ಬಂದ ಮೇಲೆ ನಾನು ಅವರ ಸಂಗಡ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು– ನನ್ನ ಆಜ್ಞೆಗಳನ್ನು ಅವರ ಹೃದಯದಲ್ಲಿ ಇಡುವೆನು, ಅವರ ಮನಸ್ಸಿನ ಮೇಲೆ ಅವುಗಳನ್ನು ಬರೆಯುವೆನು ಎಂದು ಕರ್ತನು ನುಡಿಯುತ್ತಾನೆ ಎಂಬದಾಗಿ ಹೇಳಿದ ಮೇಲೆ ಇನ್ನು– [17] ಅವರ ಪಾಪಗಳನ್ನೂ ಅವರ ದುಷ್ಕೃತ್ಯಗಳನ್ನೂ ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಎಂದು ಹೇಳುತ್ತಾನೆ.*

7. ಇಬ್ರಿಯರಿಗೆ 10:15–17 ಓದಿರಿ. ಹೊಸ ಒಡಂಬಡಿಕೆಯಲ್ಲಿ, ದೇವರು ನಮ್ಮ ಪಾಪಗಳನ್ನು:

ಅ. ಒಂದು ಪಾಪಮಾಡಿದ ಕೂಡಲೆ ಎಲ್ಲವನ್ನು ನೆನಪು ಮಾಡಿಕೊಳ್ಳುತ್ತಾನೆ

ಇ. ನಾವು ದಶಾಂಶ ಕೊಡದೆ ಇದ್ದಾಗ ನೆನಪು ಮಾಡಿಕೊಳ್ಳುತ್ತಾನೆ

ಉ. ಎಂದಿಗೂ ನೆನಪಿಗೆ ತರುವುದಿಲ್ಲ

8. ರೋಮಾಪುರದವರಿಗೆ 6:1–2. ದೇವರ ಕೃಪೆಯು ನಮ್ಮ ಎಲ್ಲಾ ಪಾಪಗಳಿಗಿಂತಲೂ ದೊಡ್ಡದ್ದಾಗಿದೆ. ಹಾಗಾದರೆ, ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ?

***ರೋಮಾಪುರದವರಿಗೆ 6:1–2*** *– ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ?*

9. ಇಬ್ರಿಯರಿಗೆ 9:12 ಓದಿರಿ. ಯೇಸುವು ನಮಗಾಗಿ ಎಂತಹ ವಿಮೋಚನೆಯನ್ನು ಸಂಪಾದಿಸಿದ್ದಾನೆ?

ಅ. ತಾತ್ಕಾಲಿಕವಾದ ವಿಮೋಚನೆ

ಇ. ಭಾಗಶಃ ವಿಮೋಚನೆ

ಉ. ನಿತ್ಯ ವಿಮೋಚನೆ

***ಇಬ್ರಿಯರಿಗೆ 9:12*** *– ಹೋತಗಳ ಮತ್ತು ಹೋರಿಕರಗಳ ರಕ್ತವನ್ನು ತೆಗೆದುಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು.*

10. ರೋಮಾಪುರದವರಿಗೆ 8:33 ಓದಿರಿ. ದೇವರು ಆದುಕೊಂಡವರ ಮೇಲೆ ತಪ್ಪುಹೊರಿಸುವವರನ್ನು ಹೆಸರಿಸಿರಿ.

***ರೋಮಾಪುರದವರಿಗೆ 8:33*** *– ದೇವರು ಆದುಕೊಂಡವರ ಮೇಲೆ ಯಾರು ತಪ್ಪು ಹೊರಿಸಾರು? ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ.*

11. ರೋಮಾಪುರದವರಿಗೆ 8:34 ಓದಿರಿ. ದೇವಜನರನ್ನು ಅಪರಾಧಿಗಳೆಂದು ನಿರ್ಣಯಿಸುವವರನ್ನು ಹೆಸರಿಸಿರಿ.

***ರೋಮಾಪುರದವರಿಗೆ 8:34–35*** *– ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ. [35] ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ?*

12. ರೋಮಾಪುರದವರಿಗೆ 8:35 ಓದಿರಿ. ಒಬ್ಬ ಕ್ರೈಸ್ತನನ್ನು ದೇವರ ಪ್ರೀತಿಯಿಂದ ಅಗಲಿಸುವವರು ಯಾರೆಂದು ಹೆಸರಿಸಿರಿ.

13. ರೋಮಾಪುರದವರಿಗೆ 8:31 ಓದಿರಿ. ಈ ಶಿಷ್ಯತ್ವದ ಪಾಠದ ಸಿದ್ಧಾಂತವೇನು?

***ರೋಮಾಪುರದವರಿಗೆ 8:31*** *– ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?*

# ಉತ್ತರಗಳು

1. ರೋಮಾಪುರದವರಿಗೆ 8:38–39 ಓದಿರಿ. ಅಪೊಸ್ತಲನಾದ ಪೌಲನಿಗೆ ಯಾವ ನಿಶ್ಚಯವಿತ್ತು?

*ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ತನ್ನನ್ನು ದೇವರ ಪ್ರೀತಿಯಿಂದ ಅಗಲಿಸಲಾರವೆಂದು ಪೌಲನಿಗೆ ನಿಶ್ಚಯವಿತ್ತು. ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ಕಂಡುಬಂದ ದೇವರ ಪ್ರೀತಿಯಿಂದ ನಮ್ಮನ್ನು ಅಗಲಿಸಲು ಯಾರಿಗೂ ಯಾವುದಕ್ಕೂ ಸಾಧ್ಯವಿಲ್ಲ.*

2. ನಾನು ಬೈಬಲ್ ಕಾಲೇಜಿನಲ್ಲಿರುವಾಗ, ನನ್ನ ಅಧ್ಯಾಪಕರೊಬ್ಬರು ಈ ರೀತಿಯಾದ ಟಿಪ್ಪಣಿಯನ್ನು ಬರೆದು ಹಂಚಿದರು: "ನೀತಿನಿರ್ಣಯವೆಂದರೆ, ದೇವರು ತನ್ನನ್ನು ನಂಬುವ ಯಾರನ್ನೇ ಆದರೂ ನೀತಿವಂತನೆಂದು ಹೇಳುವಂತಹ ಕಾನೂನು ಪ್ರಕ್ರಿಯೆಯಾಗಿದೆ, ಆದರೆ ಅವರು ನೀತಿವಂತರಾಗುವುದಿಲ್ಲ". ಆದರೆ ನಾನು ದೇವರ ವಾಕ್ಯವನ್ನು ಅಭ್ಯಾಸ ಮಾಡುತ್ತಾ ಬಂದ ಹಾಗೆ, ನೀತಿನಿರ್ಣಯವು ಒಂದು ಉಚಿತವಾದ ವರವಾಗಿದ್ದು, ನಮ್ಮನ್ನು ದೇವರ ಸನ್ನಿಧಿಯಲ್ಲಿ ನೀತಿವಂತರನ್ನಾಗಿ ಮಾಡುತ್ತದೆ ಎನ್ನುವುದು ನನಗೆ ನಿಶ್ಚಯವಾಯಿತು. ರೋಮಾಪುರದವರಿಗೆ 5:19 ಓದಿರಿ. ಯೇಸುಕ್ರಿಸ್ತನ ವಿಧೇಯತೆಯ ಮೂಲಕ (ಧರ್ಮಶಾಸ್ತ್ರಕ್ಕೆ ವಿಧೇಯನಾಗಿ ಕ್ರೂಜೆಗೆ ಹೋದದ್ದು) ಅನೇಕರು:

*ಉ. ನೀತಿವಂತರಾಗಿ ಮಾಡಲ್ಪಡುವರು*

3. 2 ಕೊರಿಂಥದವರಿಗೆ 5:21 ಓದಿರಿ. "ನಾವು ಆತನಲ್ಲಿ ______ __________ __________ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು"

*"ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ"*

4. ಕೊಲಸ್ಸೆಯವರಿಗೆ 1:21–22 ಓದಿರಿ. ಯೇಸುಕ್ರಿಸ್ತನು ಈ ಲೋಕಕ್ಕೆ ಬಂದು ನಮ್ಮ ಪಾಪಗಳಿಗಾಗಿ ಸತ್ತನು. ಇದರಿಂದಾಗಿ, ನಮ್ಮನ್ನು ಪರಿಶುದ್ಧರೂ, ನಿರ್ದೋಷಿಗಳೂ ನಿರಪರಾಧಿಗಳೂ ಆಗಿ ನಿಲ್ಲಿಸಿಕೊಳ್ಳುತ್ತಾನೆ

*ಉ. ದೇವರ ಎದುರಿನಲ್ಲಿ*

5. ಎಫೆಸದವರಿಗೆ 1:6 ಓದಿರಿ. ದೇವರು ನಮಗೆ ನೀಡಿರುವ ಕೃಪೆಗಾಗಿ ನಾವು ನಿತ್ಯಕಾಲಕ್ಕೂ ಆತನನ್ನು ಸ್ತುತಿಸುತ್ತೇವೆ, ಯಾಕೆಂದರೆ ಆತನು ನಮ್ಮನ್ನು ________________ ಸ್ವೀಕರಿಸಿದ್ದಾನೆ.

*ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ*

6. ಇಬ್ರಿಯರಿಗೆ 10:14 ಓದಿರಿ. ಯೇಸುವಿನ ಮತ್ತು ಆತನ ಕ್ರೂಜೆಯ ಸಮರ್ಪಣೆಯಿಂದ ನಮ್ಮನ್ನು ಎಷ್ಟು ಕಾಲದವರೆಗೆ ಸಿದ್ಧಿಗೆ ತಂದಿದ್ದಾನೆ:

*ಉ. ನಿರಂತರವಾಗಿ*

7. ಇಬ್ರಿಯರಿಗೆ 10:15–17 ಓದಿರಿ. ಹೊಸ ಒಡಂಬಡಿಕೆಯಲ್ಲಿ, ದೇವರು ನಮ್ಮ ಪಾಪಗಳನ್ನು:

*ಉ. ಎಂದಿಗೂ ನೆನಪಿಗೆ ತರುವುದಿಲ್ಲ*

8. ರೋಮಾಪುರದವರಿಗೆ 6:1–2. ದೇವರ ಕೃಪೆಯು ನಮ್ಮ ಎಲ್ಲಾ ಪಾಪಗಳಿಗಿಂತಲೂ ದೊಡ್ಡದ್ದಾಗಿದೆ. ಹಾಗಾದರೆ, ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ?

*ಎಂದಿಗೂ ಇರಬಾರದು*

9. ಇಬ್ರಿಯರಿಗೆ 9:12 ಓದಿರಿ. ಯೇಸುವು ನಮಗಾಗಿ ಎಂತಹ ವಿಮೋಚನೆಯನ್ನು ಸಂಪಾದಿಸಿದ್ದಾನೆ?

*ಉ. ನಿತ್ಯ ವಿಮೋಚನೆ*

10. ರೋಮಾಪುರದವರಿಗೆ 8:33 ಓದಿರಿ. ದೇವರು ಆದುಕೊಂಡವರ ಮೇಲೆ ತಪ್ಪುಹೊರಿಸುವವರನ್ನು ಹೆಸರಿಸಿರಿ.

*ಯಾರೂ ಇಲ್ಲ*

11. ರೋಮಾಪುರದವರಿಗೆ 8:34 ಓದಿರಿ. ದೇವಜನರನ್ನು ಅಪರಾಧಿಗಳೆಂದು ನಿರ್ಣಯಿಸುವವರನ್ನು ಹೆಸರಿಸಿರಿ.

*ಯಾರೂ ಇಲ್ಲ*

12. ರೋಮಾಪುರದವರಿಗೆ 8:35 ಓದಿರಿ. ಒಬ್ಬ ಕ್ರೈಸ್ತನನ್ನು ದೇವರ ಪ್ರೀತಿಯಿಂದ ಅಗಲಿಸುವವರು ಯಾರೆಂದು ಹೆಸರಿಸಿರಿ.

*ಯಾರೂ ಇಲ್ಲ*

13. ರೋಮಾಪುರದವರಿಗೆ 8:31 ಓದಿರಿ. ಈ ಶಿಷ್ಯತ್ವದ ಪಾಠದ ಸಿದ್ಧಾಂತವೇನು?

*ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು*

## ಪಾಠ 12

# ರಕ್ಷಣೆಯ ಫಲ – ಭಾಗ 1

*ಜ್ರೂಣ್ ಕ್ರೊ*

ಒಂದು ಸಾರಿ ನಂಬಿಕೆಯನ್ನು ಅರಿಕೆಮಾಡಿ ಅದರಲ್ಲಿ ಮುಂದುವರಿಯದಿದ್ದರೆ "ರಕ್ಷಣೆ"ಯು ಖಚಿತವಾಗಿ ಉಳಿಯುವುದೇ? ವಾಗ್ದಾನವನ್ನು ಹೊಂದಿದವರಿಗೆ ರಕ್ಷಣೆಯು ನಿಂತುಹೋಗುವುದೇ? ಅಬ್ರಾಮನು ಯೆಹೋವನನ್ನು ನಂಬಿದನು. ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು (ಆದಿಕಾಂಡ 15:6). ಅಬ್ರಹಾಮನು ನಂಬಿಕೆಯನ್ನು ಕಳೆದುಕೊಂಡರೆ, ಅವನಿಗೆ ದೊರೆತ ನೀತಿಯು ನಿಂತುಹೋಗುವುದೇ?

ದೇವರ ವಾಕ್ಯದಲ್ಲಿ, "ನಂಬಿಕೆಯು" ಒಮ್ಮೆ ಪ್ರಾರಂಭಗೊಂಡು (ಗ್ರೀಕ್ ಭಾಷೆಯ ವ್ಯಾಕರಣದಲ್ಲಿ 'ಆಒರಿಸ್ಟ್' ಕಾಲ) ಮುಂದುವರಿದು ಹೋಗುವ ಪರಿಪೂರ್ಣವಾದ ಕ್ರಿಯೆಯಾಗಿದೆ ಮತ್ತು ಅದು ಕ್ರಿಸ್ತೀಯ ಜೀವಿತದಲ್ಲಿ ನಿರಂತರವಾಗಿ (ವರ್ತಮಾನಕಾಲ) ಸಾಗುತ್ತಾ ಬರುತ್ತದೆ. ವರ್ತಮಾನಕಾಲದಲ್ಲಿ ನುಡಿಯಲ್ಪಟ್ಟ ಆಜ್ಞೆಗಳು ನಿರಂತರವಾಗಿ, ಅಥವ ಪುನರಾವರ್ತನೆಗೊಂಡು ನಿಲ್ಲುತ್ತವೆ. ಬೈಬಲ್‌ನಲ್ಲಿ ವರ್ತಮಾನಕಾಲವನ್ನು ಬಳಸುತ್ತಿರುವ ಕಡೆಗಳಲ್ಲಿ, ನಾವು ಈ ಕೆಳಗಿನ ಪದಗಳನ್ನು ಅಥವ ಪದಪುಂಜಗಳನ್ನು ಓದುಗರಿಗೆ ಕೊಡುವುದಾದಲ್ಲಿ ಅವರು ಬೈಬಲ್‌ನ ಭಾಗಗಳನ್ನು ಗ್ರಹಿಸಿಕೊಳ್ಳುವ ಪರಿಧಿಯನ್ನು ನಾವು ಬಹುಮಟ್ಟಿಗೆ ವಿಸ್ತರಿಸಬಹುದಾಗಿದೆ. ಈ ಪದಗಳೆಂದರೆ: ***ತಡೆರಹಿತ, ಮೇಲಿಂದಮೇಲೆ, ಎಡೆಬಿಡದೆ, ಅವಿರತ, ರೂಢಿಪ್ರಕಾರ, ಅಭ್ಯಾಸಬಲ ಅಥವ ಜೀವನಶೈಲಿ.***

ಈ ಕೆಳಗಿನ ಭಾಗಗಳನ್ನು ಗಮನಿಸಿರಿ ಮತ್ತು ಅವುಗಳ ಮೇಲೆ ಗ್ರೀಕ್ ಭಾಷೆಯ ವರ್ತಮಾನಕಾಲದ ಪ್ರಭಾವವೇನೆಂದು ಗಮನಿಸಿರಿ:

**ಯೋಹಾನ 3:16 – ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ** [ವರ್ತಮಾನಕಾಲ: ನಂಬುವ ಮತ್ತು ನಂಬುತ್ತಾ ಇರುವ] **ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.** (ಆವರ್ತಗಳು ನನ್ನವು)

ಇಬ್ರಿಯರಿಗೆ 10:14 – **ಪವಿತ್ರರಾಗುವವರನ್ನು** *[ವರ್ತಮಾನಕಾಲ: ಪ್ರತ್ಯೇಕಿಸಲ್ಪಟ್ಟವರು ಮತ್ತು ಪ್ರತ್ಯೇಕವಾಗಿಯೆ ಇಡಲ್ಪಡುವವರು, ಆ ಒಂದು ಸಮರ್ಪಣೆಯು ನಿರಂತರವಾಗಿ ಸಿದ್ಧಿಗೆ ತಂದಿರುವವರು]* **ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.**

**1 ಯೋಹಾನ 3:9 – ದೇವರಿಂದ ಹುಟ್ಟಿದವನು ಪಾಪಮಾಡನು;** *[ವರ್ತಮಾನಕಾಲ: ಅವನು ಪಾಪವನ್ನು ತನ್ನ ಜೀವನಶೈಲಿಯಾಗಿ ಮಾಡಿಕೊಳ್ಳುವುದಿಲ್ಲ, ಮಾನಸಾಂತರ ಹೊಂದದೆ ಇರುವುದಿಲ್ಲ]* **ದೇವರ ಜೀವವು** *[ವರ್ತಮಾನಕಾಲ: ದೇವರ ಜೀವವು ಇರುವಂತದು ಆಗಿದೆ ಮತ್ತು ಯಾವಾಗಲೂ ಇರುತ್ತದೆ]* **ಅವನಲ್ಲಿ ನೆಲೆಗೊಂಡದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು** *[ವರ್ತಮಾನಕಾಲ: ಅದು ಅವನ ಜೀವನಶೈಲಿ ಆಗುವುದಿಲ್ಲ ಅಥವ ಪಾಪಮಾಡಿಕೊಂಡೇ ಇರುವುದಿಲ್ಲ].* (ಆವರ್ತಗಳು ನನ್ನವು)

**ಮಾರ್ಕ 1:15 – ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯ ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು** *[ವರ್ತಮಾನಕಾಲ: ಪಶ್ಚಾತ್ತಾಪ/ಮಾನಸಾಂತರ ಪಡಬೇಕು ಮತ್ತು ಸಂದರ್ಭಗಳು ಬಯಸಿದಾಗಲೆಲ್ಲ ಅಥವ ಅಗತ್ಯಬಿದ್ದಾಗಲೆಲ್ಲ ಅದನ್ನು ಮಾಡಬೇಕು]* **ಸುವಾರ್ತೆಯನ್ನು ನಂಬಿರಿ** *[ವರ್ತಮಾನಕಾಲ: ನಂಬಿರಿ ಮತ್ತು ನಂಬುತ್ತಲೇ ಇರಿ].* (ಆವರ್ತಗಳು ನನ್ನವು)

**ಯೋಹಾನ 5:24 – ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು** *[ವರ್ತಮಾನಕಾಲ: ಮತ್ತು ನಂಬುತ್ತಾ ಇರುವವನು]* **ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ.** (ಆವರ್ತಗಳು ನನ್ನವು)

**ಲೂಕನು 15:7 – ಅದರಂತೆ ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವಶ್ಯವಿಲ್ಲದ ತೊಂಭತ್ತೊಂಭತ್ತು ಮಂದಿ ನೀತಿವಂತರಿಗಿಂತ ದೇವರ ಕಡೆಗೆ ತಿರುಗಿಕೊಳ್ಳುವ** *[ವರ್ತಮಾನಕಾಲ: ಮತ್ತು ತಿರುಗಿಕೊಳ್ಳುತ್ತಲೆ ಇರುವ (ಮಾನಸಾಂತರಪಡುತ್ತಿರುವ)]* **ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುವದೆಂದು ನಿಮಗೆ ಹೇಳುತ್ತೇನೆ.** (ಆವರ್ತಗಳು ನನ್ನವು)

**ಅಪೊಸ್ತಲರ ಕೃತ್ಯಗಳು 17:30 – ಆ ಅಜ್ಞಾನಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು** *[ವರ್ತಮಾನಕಾಲ: ಮತ್ತು ತಿರುಗಿಕೊಳ್ಳುತ್ತ/ ಮಾನಸಾಂತರಪಡುತ್ತ ಇರುವ]* **ಅಪ್ಪಣೆಕೊಡುತ್ತಾನೆ** *[ವರ್ತಮಾನಕಾಲ: ಮತ್ತು ಅಪ್ಪಣೆ ಕೊಡುತ್ತಿದ್ದಾನೆ].* (ಆವರ್ತಗಳು ನನ್ನವು)

**ಯೋಹಾನ 6:47 – ನಂಬಿರುವವನು** *[ವರ್ತಮಾನಕಾಲ: ಮತ್ತು ನಂಬುತ್ತಾ ಇರುವವನು]* **ನಿತ್ಯಜೀವವನ್ನು ಹೊಂದಿದ್ದಾನೆಂದು ನಿಮಗೆ ನಿಜನಿಜವಾಗಿ ಹೇಳುತ್ತೇನೆ.** (ಆವರ್ತಗಳು ನನ್ನವು)

**ರೋಮಾಪುರದವರಿಗೆ 4:5 – ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ** *[ವರ್ತಮಾನಕಾಲ: ಮತ್ತು ನಂಬುತ್ತಾ ಇರುವನೋ]* **ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು.** (ಆವರ್ತಗಳು ನನ್ನವು)

**ಅಪೊಸ್ತಲರ ಕೃತ್ಯಗಳು 26:20 – ಮೊದಲು ದಮಸ್ಕದವರಿಗೆ, ಆಮೇಲೆ ಯೆರೂಸಲೇಮಿನಲ್ಲಿಯೂ ಯೂದಾಯದ ಎಲ್ಲಾ ಸೀಮೆಯಲ್ಲಿಯೂ ಇರುವವರಿಗೆ ಮತ್ತು ಅನ್ಯಜನರಿಗೆ ಸಹ – ನೀವು ದೇವರ ಕಡೆಗೆ ತಿರುಗಿಕೊಳ್ಳಬೇಕೆಂತಲೂ** *[ವರ್ತಮಾನಕಾಲ: ಮತ್ತು ತಿರುಗಿಕೊಳ್ಳುತ್ತಾ/ಮಾನಸಾಂತರಪಡುತ್ತಾ ಇರಬೇಕೆಂದು)]* **ಮಾನಸಾಂತರಕ್ಕೆ ಯೋಗ್ಯವಾದ ಕೃತ್ಯಗಳನ್ನು ಮಾಡಬೇಕೆಂತಲೂ** *[ವರ್ತಮಾನಕಾಲ: ಮಾನಸಾಂತರಕ್ಕೆ ಯೋಗ್ಯವಾದ ಕಾರ್ಯಗಳನ್ನು ಮಾಡುತ್ತಾ ಇದ್ದುಕೊಂಡು]* **ಸಾರಿದೆನು.** (ಆವರ್ತಗಳು ನನ್ನವು)

***ಮುಕ್ತಾಯ:*** ದೇವರವಾಕ್ಯದಲ್ಲಿ ವರ್ತಮಾನಕಾಲವು ಅನೇಕಬಾರಿ ಉಪಯೋಗಿಸಲ್ಪಟ್ಟಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸತ್ಯವೇದದಲ್ಲಿರುವ ಎಲ್ಲ ವಾಕ್ಯಭಾಗಗಳನ್ನು ತೋರಿಸಬೇಕೆನ್ನುವುದು ನನ್ನ ಉದ್ದೇಶವಲ್ಲ. ರಕ್ಷಣೆಯ ನಿಜಗುರುತೇನೆಂದರೆ ಅದು ನಿರಂತರವಾದದ್ದು ಮತ್ತು ಅರ್ಮಿನಿಯನಿಸಂ ಹಾಗೂ ಕ್ಯಾಲ್ವಿನ್‌ಇಸಂ ಎಂಬ ಎರಡು ಗುಂಪಿಗೆ ದೈವಶಾಸ್ತ್ರ ಪಂಡಿತರು ತಾವು ಎರಡು ದೃಷ್ಟಿಕೋನಗಳನ್ನು ಹೊಂದಿದವರಾಗಿದ್ದರೂ ಕೂಡ ಇದನ್ನು ಬೋಧಿಸುತ್ತಾರೆ.

ಕ್ಯಾಲ್ವಿನ್‌ಇಸಂ, ರಕ್ಷಣೆಯ ನಿತ್ಯಭದ್ರತೆಯನ್ನು ಬೋಧಿಸುತ್ತದೆ ಮತ್ತು ಪ್ರಾಮಾಣಿಕ ವಿಶ್ವಾಸಿಗಳು ಎಡವಬಹುದು ಅಥವ ಬೀಳಬಹುದು ಆದರೆ ಅವರು ಕ್ರೈಸ್ತ ನಂಬಿಕೆಗೆ ಬದ್ಧರಾಗಿರುತ್ತಾರೆ (1 ಕೊರಿಂಥದವರಿಗೆ 1:8 ನೋಡಿರಿ) ಎಂದು ಬೋಧಿಸುತ್ತದೆ. 'ರಕ್ಷಣೆಯ ನಿತ್ಯಭದ್ರತೆ'ಯಲ್ಲಿ ನಂಬಿಕೆ ಇಡುವವರು ಹೀಗೆ ಹೇಳುತ್ತಾರೆ: ನಿಜಕ್ರೈಸ್ತರಾದವರು 'ಪಾಪದ ಪಾಲಿಗೆ ಸತ್ತು' ಎಂಬಂತಹ ಅನುಭವದಲ್ಲಿರುತ್ತಾರೆ ಮತ್ತು ಪಾಪದಲ್ಲಿ ಮುಂದುವರಿಯುವುದಿಲ್ಲ (ರೋಮಾಪುರದವರಿಗೆ 6:1–3). ಕಾಲಾಂತರದಲ್ಲಿ ಕ್ರಿಸ್ತನನ್ನು ಪೂರ್ತಿಯಾಗಿ ಬಿಟ್ಟುಬಿಟ್ಟವರು ತಮ್ಮ ನಡತೆಯಿಂದಾಗಿ ತಾವು ಎಂದೂ ಹೊಸದಾಗಿ ಹುಟ್ಟಲಿಲ್ಲವೆಂದು ತೋರಿಸುತ್ತಾರೆ (1 ಯೋಹಾನನು 2:19).

ಆರ್ಮಿನಿಯನ್ ದೈವಶಾಸ್ತ್ರದ ಧಾಟಿಹಿಡಿದವರು – ಪ್ರಾಮಾಣಿಕರಾದ ಕ್ರೈಸ್ತರು ಕೂಡ ಕ್ರೈಸ್ತನಂಬಿಕೆಯಿಂದ ಬಿದ್ದುಹೋಗುವ ಸಾಧ್ಯತೆಯಿದೆ ಎಂದು ಬೋಧಿಸುತ್ತಾರೆ.

ಹೀಗೆ ಬಿದ್ದುಹೋದವರು ರಕ್ಷಣೆಯನ್ನು ಕಳೆದುಕೊಳ್ಳುತ್ತಾರೆ ಅಥವ ತಾವಾಗಿಯೇ ಅದನ್ನು ಬಿಟ್ಟುಕೊಡುತ್ತಾರೆ ಎನ್ನುವುದು ಅವರಲ್ಲಿರುವ ಹುದುವಾದ ನಂಬಿಕೆ ಮತ್ತು ಬೋಧನೆ. ಅವರ ಪ್ರಕಾರ ನಾಮಧೇಯ ಕ್ರೈಸ್ತರೆನಿಸಿಕೊಳ್ಳುವವರು ಇಲ್ಲವೆ ಇಲ್ಲ – ಮಾನಸಾಂತರದ ಫಲವನ್ನು ತೋರದೆ ಉದ್ದೇಶಪೂರ್ವಕವಾಗಿ ಪಾಪಮಾಡುವ ಅಥವ ಕ್ರೈಸ್ತನಂಬಿಕೆಗೆ ವಿರುದ್ಧವಾದ ಪಾಪದಲ್ಲಿ ಜೀವಿಸುವುದನ್ನು ಬಿಡದಿರುವವರನ್ನು ಕ್ರೈಸ್ತರೆಂದು ಕರೆಯಲಾಗದು ಎನ್ನುವ ಸಿದ್ಧಾಂತ ಅವರದು.

ಅಪೊಸ್ತಲನಾದ ಯೋಹಾನನು, *"ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ"* (1 ಯೋಹಾ 1:8), ಎಂದು ಹೇಳಿದ್ದಲ್ಲದೆ, *"ದೇವರಿಂದ ಹುಟ್ಟಿದವನು ಪಾಪಮಾಡನು"* (1 ಯೋಹಾನ 3:9) ಎಂದೂ ನುಡಿದಿದ್ದಾನೆ. ಈ ವಾಕ್ಯಗಳು ವಿರೋಧಾಭಾಸದಿಂದ ಕೂಡಿದೆ ಎನ್ನುವಂತೆ ಕಂಡುಬಂದರೂ ಅದು ದೇವರ ವಾಕ್ಯದ ಬೆಳಕಿನಲ್ಲಿ ಸಾಮರಸ್ಯವಿಲ್ಲವೆಂಬಂತೆ ತೋರುವದಿಲ್ಲ. ಹೌದು, ಎಲ್ಲ ಕ್ರೈಸ್ತರು ಪಾಪಮಾಡುತ್ತಾರೆ (1 ಯೋಹಾನನು 1:8); ಆದರೆ ಎಲ್ಲ ಕ್ರೈಸ್ತರು ವಿಧೇಯರಾಗುತ್ತಾರೆ (1 ಯೋಹಾನನು 2:3) ಎನ್ನುವುದು ಕೂಡ ಸರಿಯಾಗಿದೆ. ಕ್ರೈಸ್ತರಲ್ಲಿ ಪಾಪ ಮತ್ತು ಶರೀರಭಾವಗಳು ಇಂದಿಗೂ ಇರುವುದಾದರೂ ಪಾಪವು ಅವರ ಮೇಲೆ ಅಧಿಕಾರ ನಡೆಸಲಾಗದು ಅಥವ ಪಾಪವನ್ನು ಅವರ ವ್ಯಕ್ತಿತ್ವದ ಗುಣವಿಶೇಷಣಗಳೆಂದು ಗುರುತಿಸಲಾಗದು (1 ಯೋಹಾನ 3:9). ನಿಜವಾದ ಮಾನಸಾಂತರ ಮತ್ತು ನಂಬಿಕೆಯು ಪರಿಪೂರ್ಣವಾಗಿರದಿದ್ದರೂ – ಮನಸ್ಸಿನ ಬದಲಾವಣೆ, ಹೃದಯದ ಬದಲಾವಣೆ, ದಿಕ್ಕಿನ ಬದಲಾವಣೆ (ಅಪೊಸ್ತಲರ ಕೃತ್ಯಗಳು 26:18 ಮತ್ತು 1 ಯೋಹಾನ 1:8) – ಇವುಗಳನ್ನು ನಿರೀಕ್ಷಿಸುತ್ತದೆ. ನಂಬಿಕೆಯ ನಿಜಗುರುತು ಮತ್ತು ಪ್ರಾಮಾಣಿಕತೆಯು ಅದರ "ಫಲ"ದಿಂದಲೇ ತಿಳಿದುಬರುತ್ತದೆ. ನಂಬಿಕೆಯು ದೃಢವಾದ ದೈವೀಕ ನಿರ್ಧಾರವಾಗಿದ್ದು ನಿಜವಾದ ವಿಶ್ವಾಸಿಯ ನಡವಳಿಕೆಯನ್ನು ಮತ್ತು ಅದಕ್ಕೆ ಪೂರಕವಾದ ಕ್ರಿಯೆಗಳನ್ನು ನಿರ್ಣಯಿಸುತ್ತದೆ. ಇದನ್ನು ಇಬ್ರಿಯರಿಗೆ ಬರೆದ ಪತ್ರಿಕೆ ಹನ್ನೊಂದನೆಯ ಅಧ್ಯಾಯದಲ್ಲಿರುವ ನಂಬಿಕೆಯ ನಿದರ್ಶನಗಳಲ್ಲಿ ಮತ್ತು ನಂಬಿಕೆಯ ಫಲವಾದ ಅವರ ಕ್ರಿಯೆಗಳಲ್ಲಿ ನೀಡಲಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ನಮ್ಮ ಕ್ರಿಯೆಗಳು ನಮ್ಮ ನಂಬಿಕೆಯ ಫಲವಾಗಿದೆ. ಯಾಕೋಬನು 2:18ರಲ್ಲಿ, *"ನಾನು ನನ್ನ ಕ್ರಿಯೆಗಳ ಮುಖಾಂತರ ನನ್ನ ನಂಬಿಕೆಯನ್ನು ನಿನಗೆ ತೋರಿಸುತ್ತೇನೆ; ನೀನು ಕ್ರಿಯೆಗಳಿಲ್ಲದೆ ನಿನ್ನ ನಂಬಿಕೆಯನ್ನು ನನಗೆ ತೋರಿಸು ನೋಡೋಣ"* ಎಂದು ಹೇಳಿದೆ.

ಅಪೊಸ್ತಲರು ಕ್ರಿಯೆಗಳ ಕುರಿತು ನಕಾರಾತ್ಮಕವಾಗಿ ಮಾತನಾಡುವುದರ ಕಾರಣ – ಅವು "ಧರ್ಮಶಾಸ್ತ್ರವನ್ನು ನೆರವೇರಿಸುವ ಕ್ರಿಯೆಗಳು"; ಅಂದರೆ, ತಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಅಥವ ಹೊಂದಿಕೊಳ್ಳಲು ನಡೆಸುವ ಕ್ರಿಯೆಗಳನ್ನು ಅವರು ಅನುಮೋದಿಸುತ್ತಿರಲಿಲ್ಲ.

ದೇವರ ವಾಕ್ಯವು ರಕ್ಷಣೆಯ ಫಲವಾದ – ಸತ್ಕಾರ್ಯಗಳು, ನಂಬಿಕೆಯ ಕ್ರಿಯೆಗಳು – ಕುರಿತಾಗಿಯೂ ಮಾತನಾಡುತ್ತದೆ. ಈ ಕ್ರಿಯೆಗಳು ಮಾನಸಾಂತರ ಮತ್ತು ನಂಬಿಕೆಯ ಫಲವಾಗಿ ಕಂಡುಬರುವ ಕಾರ್ಯಗಳಾಗಿವೆ (ಅಪೊಸ್ತಲರ ಕೃತ್ಯಗಳು 26:20, ಮತ್ತಾಯ 3:7–10, 1 ಥೆಸಲೊನೀಕದವರಿಗೆ 1:3 ಮತ್ತು ಯಾಕೋಬನು 2:14–26), ಮತ್ತು ಅವು ರಕ್ಷಣೆಯನ್ನು ಸಾಕ್ಷೀಕರಿಸುವಂತದ್ದಾಗಿದೆ. ಮಾನಸಾಂತರ ಮತ್ತು ನಂಬಿಕೆ ಇವುಗಳ ನಡುವೆ ಇರುವ ಸಮೈಕ್ಯವೆಂದರೆ ಇವೆರಡೂ ಒಂದೇ ರೀತಿಯ – ಸತ್ಕಾರ್ಯಗಳ – ಫಲವನ್ನು ನೀಡುತ್ತವೆ. ನಾವು ಸತ್ಕಾರ್ಯಗಳ ನಿಮಿತ್ತ ರಕ್ಷಣೆ ಹೊಂದಿಲ್ಲ, ಆದರೆ ಸತ್ಕಾರ್ಯಗಳನ್ನು ಮಾಡುವುದಕ್ಕೆ ರಕ್ಷಿಸಲ್ಪಡುತ್ತೇವೆ (ಎಫೆಸದವರಿಗೆ 2:8–10ರಲ್ಲಿ ಕೃಪೆಯಿಂದಲೇ ಮತ್ತು ಸತ್ಕಾರ್ಯಗಳನ್ನು ಮಾಡುವುದಕ್ಕಾಗಿ ಎನ್ನುವುದನ್ನು ಗಮನಿಸಿರಿ). ಸತ್ಕಾರ್ಯಗಳು ನಂಬಿಕೆಯನ್ನು ಪರೀಕ್ಷಿಸುವ ಉಪಕರಣವಾಗಿದೆ ಮತ್ತು ಒಬ್ಬರ ಜೀವನ ಮತ್ತು ಕ್ರಿಯೆಗಳ ಮೇಲೆ ಪರಿಣಾಮ ಬೀರದಿರುವ ಕೃಪೆಯು ನಿಜವಾದ ದೇವರ ಕೃಪೆಯಾಗಿದೆ ಎಂದು ಹೇಳಲಾಗದು (ತೀತನು 2:11–12). ನಿಜವಾದ ಶಿಷ್ಯರನ್ನು ಅವರ ಫಲಗಳಿಂದಲೇ (ಕ್ರಿಯೆಗಳಿಂದಲೇ) ಗುರುತಿಸಬಹುದಾಗಿದೆ ಎಂದು ಯೇಸುವು ಬೋಧಿಸುತ್ತಾನೆ (ಮತ್ತಾಯ 3:8, 7:16–20, 25:34–40; ಯೋಹಾನನು 13:35, 14:23; ಅಪೊಸ್ತಲರ ಕೃತ್ಯಗಳು 26:20; ರೋಮಾಪುರದವರಿಗೆ 2:14–18; ಮತ್ತು 1 ಯೋಹಾನ 3:10).

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ವರ್ತಮಾನಕಾಲದಲ್ಲಿ ಕೊಡಲಾಗಿರುವ ಆಜ್ಞೆಗಳು ______________ ಇರುವಂತವು.

2. ಯೋಹಾನ 3:16 ಓದಿರಿ. ಗ್ರೀಕ್ ಭಾಷೆಯ ವ್ಯಾಕರಣದ ಪ್ರಕಾರ ವರ್ತಮಾನಕಾಲದ ಯೋಹಾನ 3:16 ಏನನ್ನು ಹೇಳುತ್ತದೆ?

   ***ಯೋಹಾನ 3:16*** *– ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.*

3. 1 ಯೋಹಾನ 3:9 ಓದಿರಿ. ದೇವರಿಂದ ಹುಟ್ಟಿದವನು ಪಾಪ ಮಾಡನು. ಇದರ ಅರ್ಥವೇನು?

   ***1 ಯೋಹಾನನು 3:9*** *– ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು.*

4. ಲೂಕ 15:7 ಓದಿರಿ. ______________ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುವದು.

   ***ಲೂಕ 15:7*** *– ಅದರಂತೆ ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವಶ್ಯವಿಲ್ಲದ ತೊಂಭತ್ತೊಂಭತ್ತು ಮಂದಿ ನೀತಿವಂತರಿಗಿಂತ ದೇವರ ಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುವದೆಂದು ನಿಮಗೆ ಹೇಳುತ್ತೇನೆ.*

5. ಅಪೊಸ್ತಲರ ಕೃತ್ಯಗಳು 17:30 ಓದಿರಿ. ಈಗಲಾದರೋ ಆತನು (ದೇವರು) ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ______________ ಅಪ್ಪಣೆಕೊಡುತ್ತಾನೆ. (ಆವರಣಗಳು ನನ್ನವು)

   ***ಅಪೊಸ್ತಲರ ಕೃತ್ಯಗಳು 17:30*** *– ಆ ಅಜ್ಞಾನಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ.*

6. ಅಪೊಸ್ತಲರ ಕೃತ್ಯಗಳು 26:20 ಓದಿರಿ. ಈ ವಚನವು ಏನನ್ನು ಹೇಳುತ್ತದೆ?

***ಅಪೊಸ್ತಲರ ಕೃತ್ಯಗಳು 26:20*** *– ಮೊದಲು ದಮಸ್ಕದವರಿಗೆ, ಆ ಮೇಲೆ ಯೆರೂಸಲೇಮಿನಲ್ಲಿಯೂ ಯೂದಾಯದ ಎಲ್ಲಾ ಸೀಮೆಯಲ್ಲಿಯೂ ಇರುವವರಿಗೆ ಮತ್ತು ಅನ್ಯಜನರಿಗೆ ಸಹ–ನೀವು ದೇವರ ಕಡೆಗೆ ತಿರುಗಿಕೊಳ್ಳಬೇಕೆಂತಲೂ ಮಾನಸಾಂತರಕ್ಕೆ ಯೋಗ್ಯವಾದ ಕೃತ್ಯಗಳನ್ನು ಮಾಡಬೇಕಂತಲೂ ಸಾರಿದೆನು.*

7. 1 ಯೋಹಾನ 2:3 ಓದಿರಿ. ದೇವರೊಂದಿಗೆ ವೈಯಕ್ತಿಕವಾದ ಸಂಬಂಧವನ್ನು ಹೊಂದಿಕೊಳ್ಳುವುದು ಅಂದರೆ ಆತನನ್ನು ತಿಳಿದುಕೊಳ್ಳುವುದರ ಫಲ ಏನಾಗಿದೆ?

***1 ಯೋಹಾನ 2:3*** *– ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳುಕೊಳ್ಳುತ್ತೇವೆ.*

8. ಯಾಕೋಬನು 2:18 ಓದಿರಿ. ಯಾಕೋಬನು ಹೀಗೆ ಹೇಳುತ್ತಾನೆ, 'ನಾನು ನನ್ನ ____________ ಮುಖಾಂತರ ನನ್ನ ನಂಬಿಕೆಯನ್ನು ನಿನಗೆ ತೋರಿಸುತ್ತೇನೆ; ನೀನು ಕ್ರಿಯೆಗಳಿಲ್ಲದೆ ನಿನ್ನ ನಂಬಿಕೆಯನ್ನು ನನಗೆ ತೋರಿಸು (ಅದು ಸಾಧ್ಯವೇ ಇಲ್ಲ) ನೋಡೋಣ ಎಂದು ಹೇಳುವನಲ್ಲವೇ'. (ಆವರಣಗಳು ನನ್ನವು)

***ಯಾಕೋಬನು 2:18*** *– ಹೀಗಲ್ಲವಾದರೆ ಒಬ್ಬ ಮನುಷ್ಯನು–ನಿನಗೆ ನಂಬಿಕೆಯುಂಟು, ನನಗೆ ಕ್ರಿಯೆಗಳುಂಟು, ನಾನು ನನ್ನ ಕ್ರಿಯೆಗಳ ಮುಖಾಂತರ ನನ್ನ ನಂಬಿಕೆಯನ್ನು ನಿನಗೆ ತೋರಿಸುತ್ತೇನೆ. ನೀನು ಕ್ರಿಯೆಗಳಿಲ್ಲದೆ ನಿನ್ನ ನಂಬಿಕೆಯನ್ನು ನನಗೆ ತೋರಿಸು ನೋಡೋಣ ಎಂದು ಹೇಳುವನಲ್ಲವೇ.*

9. 1 ಥೆಸಲೊನೀಕದವರಿಗೆ 1:3 ಓದಿರಿ. ನಂಬಿಕೆಯ ಮೂಲದಿಂದ ನಡೆಯುವ ಕೆಲಸಗಳು ಅಥವ ಕ್ರಿಯೆಗಳನ್ನು ______________________ ಎಂದು ಕರೆಯಲಾಗಿದೆ.

***1 ಥೆಸಲೊನೀಕದವರಿಗೆ 1:3*** *– ನಾವು ನಂಬಿಕೆಯ ಫಲವಾದ ಕೆಲಸವನ್ನೂ ಪ್ರೀತಿಪೂರ್ವಕವಾದ ನಿಮ್ಮ ಪ್ರಯಾಸವನ್ನೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲಣ ನಿರೀಕ್ಷೆಯಿಂದುಂಟಾದ ನಿಮ್ಮ ಸೈರಣೆಯನ್ನೂ ನಮ್ಮ ತಂದೆಯಾದ ದೇವರ ಮುಂದೆ ಎಡೆಬಿಡದೆ ಜ್ಞಾಪಕಮಾಡಿಕೊಂಡು ನಮ್ಮ ಪ್ರಾರ್ಥನೆಗಳಲ್ಲಿ ನಿಮಗೋಸ್ಕರ ವಿಜ್ಞಾಪನೆಮಾಡುವಾಗ ನಿಮ್ಮೆಲ್ಲರ ವಿಷಯದಲ್ಲಿ ದೇವರಿಗೆ ಯಾವಾಗಲೂ ಕೃತಜ್ಞತಾಸ್ತುತಿ ಸಲ್ಲಿಸುತ್ತೇವೆ.*

10. ಗಲಾತ್ಯದವರಿಗೆ 2:16,21 ಓದಿರಿ. ಧರ್ಮಶಾಸ್ತ್ರವನ್ನು ಕೈಗೊಳ್ಳುವುದು, ಜನರು ರಕ್ಷಣೆಯನ್ನು ಅಥವ ________________ (ವಚನ 21) ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುವ ಕ್ರಿಯೆಗಳಾಗಿವೆ. ಅವು ರಕ್ಷಣೆ ನೀಡುವುದಿಲ್ಲ, ಅವುಗಳಿಗೆ ಆ ಸಾಮರ್ಥ್ಯವಿಲ್ಲ.

***ಗಲಾತ್ಯದವರಿಗೆ 2:16*** *– ಆದರೂ ಯಾವನಾದರೂ ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲವೆಂಬದು ನಮಗೆ ತಿಳಿದಿರುವದರಿಂದ ನಾನು ಸಹ ನೇಮನಿಷ್ಠೆಗಳನ್ನು ಬಿಟ್ಟು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುವದಕ್ಕಾಗಿ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟೆವು; ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.*

***ಗಲಾತ್ಯದವರಿಗೆ 2:21*** *– ನಾನು ದೇವರ ಕೃಪೆಯನ್ನು ನಿರರ್ಥಕಮಾಡುವದಿಲ್ಲ. ಕರ್ಮಮಾರ್ಗದಿಂದ ನೀತಿಯುಂಟಾಗುವದಾದರೆ ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲ.*

11. ರೋಮಾಪುರದವರಿಗೆ 2:7–10 ಓದಿರಿ. ಈ ವಚನಗಳು ಯಾವ ಎರಡು ಜನರ ಗುಂಪುಗಳನ್ನು ವಿವರಿಸುತ್ತವೆ?

***ರೋಮಾಪುರದವರಿಗೆ 2:7–10*** *– ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು. [8] ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವವು. [9] ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ ಸಂಕಟವೂ ಬರುವವು– ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ. [10] ಆದರೆ ಒಳ್ಳೇದನ್ನು ನಡಿಸುವ ಪ್ರತಿಯೊಬ್ಬನಿಗೆ ಪ್ರಭಾವವೂ ಮಾನವೂ ಮನಶ್ಶಾಂತಿಯೂ ಉಂಟಾಗುವವು– ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ.*

# ಉತ್ತರಗಳು

1. ವರ್ತಮಾನಕಾಲದಲ್ಲಿ ಕೊಡಲಾಗಿರುವ ಆಜ್ಞೆಗಳು ______________ ಇರುವಂತವು.

   ***ನಿರಂತರವಾಗಿ ಕೈಗೊಳ್ಳಲು/ಪುನರಾವರ್ತನೆಗೊಳ್ಳುವಂತೆ***

2. ಯೋಹಾನ 3:16 ಓದಿರಿ. ಗ್ರೀಕ್ ಭಾಷೆಯ ವ್ಯಾಕರಣದ ಪ್ರಕಾರ ವರ್ತಮಾನಕಾಲದ ಯೋಹಾನ 3:16 ಏನನ್ನು ಹೇಳುತ್ತದೆ?

   ***ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.***

3. 1 ಯೋಹಾನ 3:9 ಓದಿರಿ. ದೇವರಿಂದ ಹುಟ್ಟಿದವನು ಪಾಪ ಮಾಡನು. ಇದರ ಅರ್ಥವೇನು?

   ***ದೇವರಿಂದ ಹುಟ್ಟಿದವನು ಪಾಪಮಾಡನು (ವರ್ತಮಾನಕಾಲ: ಅಂದರೆ ಅವನು ಪಾಪವನ್ನು ತನ್ನ ಜೀವನಕ್ರಮವನ್ನಾಗಿ ಮಾಡಿಕೊಳ್ಳುವುದಿಲ್ಲ, ಪಶ್ಚಾತ್ತಾಪ ಪಡದಿರುವ ನಡವಳಿಕೆಯನ್ನು ತೋರುವುದಿಲ್ಲ)***

4. ಲೂಕ 15:7 ಓದಿರಿ. ______________ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುವದು.

   ***ದೇವರ ಕಡೆಗೆ ತಿರುಗಿಕೊಳ್ಳುವ (ತಿರುಗಿಕೊಂಡೇ ಇರುವ)***

5. ಅಪೊಸ್ತಲರ ಕೃತ್ಯಗಳು 17:30 ಓದಿರಿ. ಈಗಲಾದರೋ ಆತನು (ದೇವರು) ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ______________ ಅಪ್ಪಣೆಕೊಡುತ್ತಾನೆ. (ಆವರಣಗಳು ನನ್ನವು)

   ***ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು (ತಿರುಗಿಕೊಂಡೇ ಇರಬೇಕೆಂದು)***

6. ಅಪೊಸ್ತಲರ ಕೃತ್ಯಗಳು 26:20 ಓದಿರಿ. ಈ ವಚನವು ಏನನ್ನು ಹೇಳುತ್ತದೆ?

   ***ಮೊದಲು ದಮಸ್ಕದವರಿಗೆ, ಆಮೇಲೆ ಯೆರೂಸಲೇಮಿನಲ್ಲಿಯೂ ಯೂದಾಯದ ಎಲ್ಲಾ ಸೀಮೆಯಲ್ಲಿಯೂ ಇರುವವರಿಗೆ ನೀವು ದೇವರ ಕಡೆಗೆ ತಿರುಗಿಕೊಳ್ಳಬೇಕೆಂತಲೂ (ವರ್ತಮಾನಕಾಲ: ತಿರುಗಿಕೊಂಡೇ ಇರಬೇಕೆಂತಲೂ) ಮಾನಸಾಂತರಕ್ಕೆ ಯೋಗ್ಯವಾದ***

*ಕೃತ್ಯಗಳನ್ನು ಮಾಡಬೇಕೆಂತಲೂ (ವರ್ತಮಾನಕಾಲ: ಮಾಡುತ್ತಲೇ ಇರಬೇಕೆಂತಲೂ) ಸಾರಿದೆನು.*

7. 1 ಯೋಹಾನ 2:3 ಓದಿರಿ. ದೇವರೊಂದಿಗೆ ವೈಯಕ್ತಿಕವಾದ ಸಂಬಂಧವನ್ನು ಹೊಂದಿಕೊಳ್ಳುವುದು ಅಂದರೆ ಆತನನ್ನು ತಿಳಿದುಕೊಳ್ಳುವುದರ ಫಲ ಏನಾಗಿದೆ?

*ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳಿದುಕೊಳ್ಳುತ್ತೇವೆ*

8. ಯಾಕೋಬನು 2:18 ಓದಿರಿ. ಯಾಕೋಬನು ಹೀಗೆ ಹೇಳುತ್ತಾನೆ, ‘ ನಾನು ನನ್ನ ____________ ಮುಖಾಂತರ ನನ್ನ ನಂಬಿಕೆಯನ್ನು ನಿನಗೆ ತೋರಿಸುತ್ತೇನೆ; ನೀನು ಕ್ರಿಯೆಗಳಿಲ್ಲದೆ (ಅದು ಸಾಧ್ಯವೇ ಇಲ್ಲ) ನಿನ್ನ ನಂಬಿಕೆಯನ್ನು ನನಗೆ ತೋರಿಸು ನೋಡೋಣ ಎಂದು ಹೇಳುವನಲ್ಲವೇ’. (ಆವರಣಗಳು ನನ್ನವು)

*ಕ್ರಿಯೆಗಳು, ಅಂದರೆ ನಾವು ಮಾಡುವಂಥವುಗಳು*

9. 1 ಥೆಸಲೊನೀಕದವರಿಗೆ 1:3 ಓದಿರಿ. ನಂಬಿಕೆಯ ಮೂಲದಿಂದ ನಡೆಯುವ ಕೆಲಸಗಳು ಅಥವ ಕ್ರಿಯೆಗಳನ್ನು ____________________ ಎಂದು ಕರೆಯಲಾಗಿದೆ.

*ನಂಬಿಕೆಯ ಕ್ರಿಯೆಗಳು*

10. ಗಲಾತ್ಯದವರಿಗೆ 2:16,21 ಓದಿರಿ. ಧರ್ಮಶಾಸ್ತ್ರವನ್ನು ಕೈಗೊಳ್ಳುವುದು, ಜನರು ರಕ್ಷಣೆಯನ್ನು ಅಥವ ________________ (ವಚನ 21) ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುವ ಕ್ರಿಯೆಗಳಾಗಿವೆ. ಅವು ರಕ್ಷಣೆ ನೀಡುವುದಿಲ್ಲ, ಅವುಗಳಿಗೆ ಆ ಸಾಮರ್ಥ್ಯವಿಲ್ಲ.

*ನೀತಿಯನ್ನು*

11. ರೋಮಾಪುರದವರಿಗೆ 2:7–10 ಓದಿರಿ. ಈ ವಚನಗಳು ಯಾವ ಎರಡು ಜನರ ಗುಂಪುಗಳನ್ನು ವಿವರಿಸುತ್ತವೆ?

*ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳು*

# ಪಾಠ 13

# ರಕ್ಷಣೆಯ ಫಲ – ಭಾಗ 2

***ಡ್ರೂಣ್ ಕ್ರೊ***

ದೇವರವಾಕ್ಯದ ಈ ಭಾಗವನ್ನು ಗಮನಿಸಿರಿ: *"ಇವರು ದೇವರ ಮಕ್ಕಳೆಂಬದೂ ಅವರು ಸೈತಾನನ ಮಕ್ಕಳೆಂಬದೂ ಇದರಿಂದ ವ್ಯಕ್ತವಾಗುತ್ತದೆ. ನೀತಿಯನ್ನು ಅನುಸರಿಸದವನೂ ತನ್ನ ಸಹೋದರನನ್ನು ಪ್ರೀತಿಸದವನೂ ದೇವರಿಂದ ಹುಟ್ಟಿದವರಲ್ಲ"* (1 ಯೋಹಾನ 3:10). ಈ ವಚನವು "ಹೀಗೆ ನಾವು ನಮ್ಮನ್ನು ರಕ್ಷಿಸಿಕೊಳ್ಳಬಹುದು" ಎಂದು ಹೇಳುವುದಿಲ್ಲ". ಈ ವಚನವು, *"ಇವರು ದೇವರ ಮಕ್ಕಳೆಂಬದು **ಇದರಿಂದ ವ್ಯಕ್ತವಾಗುತ್ತದೆ**"* ಎಂದು (1 ಯೋಹಾನನು 3:10, ಕೆಲವು ಪದಗಳನ್ನು ಒತ್ತುಕೊಟ್ಟು ಹೇಳಿರುವುದು ನನ್ನ ಆಶಯವಾಗಿದೆ) ಎಂದು ಹೇಳುತ್ತದೆ.

ಯೇಸುವು, *"ಹೀಗಿರಲಾಗಿ ಅವರ ಫಲಗಳಿಂದ **ಅವರನ್ನು ತಿಳಿದುಕೊಳ್ಳುವಿರಿ**"* (ಮತ್ತಾಯ 7:20; ಒತ್ತಿ ಹೇಳಿರವುದು ನನ್ನ ಆಶಯವಾಗಿದೆ).

ದೇವರ ವಾಕ್ಯದಲ್ಲಿ, ದೇವರು ರಕ್ಷಣೆಯ ಕುರಿತು ಎರಡು ವಿಧವಾಗಿ ಮಾತನಾಡಿದ್ದಾನೆ: (1) ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದುವುದು (ಎಪೆಸದವರಿಗೆ 2:8–9) ಮತ್ತು (2) ರಕ್ಷಿಸಲ್ಪಟ್ಟ ಪ್ರತಿ ವ್ಯಕ್ತಿಯು ಸತ್ಕಾರ್ಯಗಳನ್ನು ಮಾಡುವುದು (ಎಫೆಸದವರಿಗೆ 2:10). ರಕ್ಷಿಸಲ್ಪಟ್ಟ ಒಬ್ಬ ವಿಶ್ವಾಸಿಯ ರಕ್ಷಣಾಫಲದ ಕುರಿತು ಮಾತನಾಡಲು ನಾವು ಹೆದರುವುದೇಕೆ? ಈ ವಿಷಯದ ಕುರಿತು ಮಾತನಾಡಲು ಬೈಬಲ್ ಹಿಂತೆಗೆಯುವುದಿಲ್ಲ. ನಾವು ದೇವರ ರಾಜ್ಯದಲ್ಲಿ ಇದ್ದೇವೆ ಮತ್ತು ದೇವರ ಆಳ್ವಿಕೆಗೆ ಒಳಪಟ್ಟಿದ್ದೇವೆ ಎನ್ನುವುದನ್ನು ಈ ರೀತಿಯಾಗಿ ತಿಳಿದುಕೊಳ್ಳಬಹುದಾಗಿದೆ:

**1 ಯೋಹಾನ 2:3–5 – ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು** *ಬಲ್ಲವರಾಗಿದ್ದೇವೆಂದು ತಿಳುಕೊಳ್ಳುತ್ತೇವೆ.* **ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬದು ಅವನಲ್ಲಿ ಇಲ್ಲ. ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ**

**ಪ್ರೀತಿಯು ಪರಿಪೂರ್ಣವಾಗಿದೆ.** *ಇದರಿಂದಲೇ ಆತನಲ್ಲಿದ್ದೇವೆಂಬದನ್ನು ತಿಳುಕೊಳ್ಳುತ್ತೇವೆ.* (ಒತ್ತುಕೊಟ್ಟು ಹೇಳಿರುವುದು ನನ್ನ ಆಶಯವಾಗಿದೆ)

ಆತನು ನೀತಿವಂತನಾಗಿದ್ದಾನೆಂಬದು *ನಿಮಗೆ ಗೊತ್ತಾಗಿದ್ದರೆ* ನೀತಿಯನ್ನು ಅನುಸರಿಸುವ ಪ್ರತಿಯೊಬ್ಬನು ಆತನಿಂದ ಹುಟ್ಟಿದ್ದಾನೆಂದು *ನೀವು ತಿಳಿದಿದ್ದೀರಿ* (1 ಯೋಹಾನನು 2:29). (ಇದರಲ್ಲಿ ಅರ್ಥವಿದೆ ಎನಿಸುವುದಿಲ್ಲವೇ? ನೀತಿವಂತಿಕೆಯು ದೇವರ ಮತ್ತು ಕ್ರಿಸ್ತನ ಗುಣಲಕ್ಷಣವಾಗಿದೆ ಮತ್ತು ನೀತಿಯನ್ನು ಅಭ್ಯಾಸಿಸುವ ಪ್ರತಿಯೊಬ್ಬನು ತಾನು ಕ್ರಿಸ್ತನ ಗುಣವನ್ನು ಹೊಂದಿದ್ದೇನೆಂದು ಸಾಕ್ಷೀಕರಿಸುತ್ತಾನೆ – ಯೋಹಾನನು ಹೇಳುವಂತೆ ಆತನಿಂದ ಹುಟ್ಟಿದವನಾಗಿದ್ದಾನೆ).

**1 ಯೋಹಾನ 3:5–10 – ಪಾಪಗಳನ್ನು ಹೋಗಲಾಡಿಸುವದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ. ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡನು.** *[ಗ್ರೀಕ್ ಭಾಷೆಯಲ್ಲಿ, ಇದು ವರ್ತಮಾನಕಾಲದಲ್ಲಿದೆ; ಇದು ನಿರಂತರವಾದ ಅಥವ ರೂಢಿಯಲ್ಲಿರುವ ಕ್ರಿಯೆಯಾಗಿದೆ ಎನ್ನುವುದನ್ನು ತಿಳಿಸುತ್ತದೆ. ಬೈಬಲ್ ಓದುವವರು ವರ್ತಮಾನಕಾಲವನ್ನು ಬಳಸುತ್ತಿರುವಾಗ, ಅವರಿಗೆ ನಾವು ಈ ಕೆಳಗಿನ ಪದಗಳನ್ನು ಅಥವ ಪದಪುಂಜಗಳನ್ನು ಕೊಡುವುದಾದಲ್ಲಿ ಅವರು ಬೈಬಲ್‌ನ ಭಾಗಗಳನ್ನು ಗ್ರಹಿಸಿಕೊಳ್ಳುವ ಪರಿಧಿಯನ್ನು ನಾವು ಬಹುಮಟ್ಟಿಗೆ ವಿಸ್ತರಿಸಬಹುದಾಗಿದೆ. ಈ ಪದಗಳೆಂದರೆ: ತಡೆರಹಿತ, ಮೇಲಿಂದಮೇಲೆ, ಎಡೆಬಿಡದೆ, ಅವಿರತ, ರೂಢಿಪ್ರಕಾರ, ಅಭ್ಯಾಸಬಲ ಅಥವ ಜೀವನಶೈಲಿ]* **ಪಾಪಮಾಡುವವನು** *[ವರ್ತಮಾನಕಾಲ]* **ಆತನನ್ನು ಕಂಡವನೂ ಅಲ್ಲ, ತಿಳಿದವನೂ ಅಲ್ಲ. ಪ್ರಿಯರಾದ ಮಕ್ಕಳೇ, ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸುವದಕ್ಕೆ ಯಾರಿಗೂ ಅವಕಾಶಕೊಡಬೇಡಿರಿ. ಕ್ರಿಸ್ತನು ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನನುಸರಿಸುವವನು** *[ವರ್ತಮಾನಕಾಲ: ಎಡೆಬಿಡದೆ, ಮೇಲಿಂದ ಮೇಲೆ ಅನುಸರಿಸುವವನು]* **ನೀತಿವಂತನಾಗಿದ್ದಾನೆ. ಪಾಪಮಾಡುವವನು** *[ವರ್ತಮಾನಕಾಲ: ಅಭ್ಯಾಸಬಲ, ಜೀವನಶೈಲಿ ಯಾಕೆಂದರೆ ಅದು ಅವನ ಸ್ವಭಾವದಲ್ಲಿಯೆ ಇದೆ]* **ಸೈತಾನನಿಂದ ಹುಟ್ಟಿದವನಾಗಿದ್ದಾನೆ; ಆದಿಯಿಂದಲೂ ಸೈತಾನನು ಪಾಪಮಾಡುವವನಾಗಿದ್ದಾನಲ್ಲಾ. ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು. ದೇವರಿಂದ ಹುಟ್ಟಿದವನು ಪಾಪಮಾಡನು** *[ವರ್ತಮಾನಕಾಲ: , ಅದು ಅವನ ಜೀವನ ಶೈಲಿಯಲ್ಲ, ಮಾನಸಾಂತರವಿಲ್ಲದ ನಡತೆಯಲ್ಲ]* **ದೇವರ ಜೀವವು ಅವನಲ್ಲಿ ನೆಲೆಗೊಂಡದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು** *[ವರ್ತಮಾನಕಾಲ: ಎಡೆಬಿಡದೆ].* **ಇವರು ದೇವರ ಮಕ್ಕಳೆಂಬದೂ ಅವರು ಸೈತಾನನ ಮಕ್ಕಳೆಂಬದೂ ಇದರಿಂದ ವ್ಯಕ್ತವಾಗುತ್ತದೆ. ನೀತಿಯನ್ನು ಅನುಸರಿಸದವನೂ** *[ವರ್ತಮಾನಕಾಲ]* **ತನ್ನ ಸಹೋದರನನ್ನು ಪ್ರೀತಿಸದವನೂ** *[ವರ್ತಮಾನಕಾಲ]* **ದೇವರಿಂದ ಹುಟ್ಟಿದವರಲ್ಲ.** (ಆವರ್ತಗಳು ಮತ್ತು ಒತ್ತುಕೊಟ್ಟು ಹೇಳುವುದು ನನ್ನ ಆಲೋಚನೆಯಾಗಿದೆ). *(ಯೋಹಾನನು ಹೀಗೆ ಹೇಳುತ್ತಾನೆ, "ಇವರು ದೇವರ ಮಕ್ಕಳೆಂಬದೂ ಅವರು ಸೈತಾನನ ಮಕ್ಕಳೆಂಬದೂ ಇದರಿಂದ ವ್ಯಕ್ತವಾಗುತ್ತದೆ."*

*ಯಾರು ನೀತಿಯನ್ನು ಅನುಸರಿಸುವುದಿಲ್ಲವೋ ಪ್ರೀತಿ ತೋರಿಸುವುದಿಲ್ಲವೋ ಅವರು ತಮ್ಮಲ್ಲಿ ತಂದೆಯ ಸ್ವಭಾವವು ಇಲ್ಲವೆಂದು ತೋರಿಸುತ್ತಾರೆ. ಹಾಗಾದರೆ ಹೊಸಹುಟ್ಟುವಿಕೆಯನ್ನು ಸಾಕ್ಷೀಕರಿಸುವುದು ಬಹಳ ಮುಖ್ಯವಲ್ಲವೇ?)*

**1 ಯೋಹಾನನು 3:14 – ನಾವಂತೂ ಕ್ರೈಸ್ತಸಹೋದರರನ್ನು ಪ್ರೀತಿಸುವವರಾಗಿರುವದರಿಂದ ಮರಣದಿಂದ** *ಪಾರಾಗಿ* **ಜೀವದಲ್ಲಿ ಸೇರಿದ್ದೇವೆಂಬದು** *ನಮಗೆ ಗೊತ್ತಾಗಿದೆ.* **ಪ್ರೀತಿಸದೆ ಇರುವವನು ಮರಣದಲ್ಲೇ ಇದ್ದಾನೆ.** (ಒತ್ತುಕೊಟ್ಟು ಹೇಳಿರುವುದು ನನ್ನ ಆಲೋಚನೆಯಾಗಿದೆ)

**1 ಯೋಹಾನನು 4:6 – ನಾವಂತೂ ದೇವರಿಂದ ಹುಟ್ಟಿದವರಾಗಿದ್ದೇವೆ; ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ** *[ಅಪೊಸ್ತಲರು];* **ದೇವರಿಂದ ಹುಟ್ಟದವನು ನಮ್ಮ ಮಾತನ್ನು ಕೇಳುವದಿಲ್ಲ** *[ಅಪೊಸ್ತಲರ].* **ಇದು ಸತ್ಯವನ್ನು ಬೋಧಿಸುವ ಆತ್ಮ. ಅದು ಸುಳ್ಳನ್ನು ಬೋಧಿಸುವ ಆತ್ಮ ಎಂದು ಇದರಿಂದಲೇ** *ತಿಳುಕೊಳ್ಳುತ್ತೇವೆ.* (ಒತ್ತುಕೊಟ್ಟು ಹೇಳಿರುವುದು ನನ್ನ ಆಲೋಚನೆಯಾಗಿದೆ)

**1 ಯೋಹಾನನು 4:8 – ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕೆಂದರೆ ದೇವರು ಪ್ರೀತಿಸ್ವರೂಪಿಯು.** *(ಪ್ರೀತಿಯು ವಿಶ್ವಾಸಿಯ ಗುರುತಾಗಿದೆ, ಯಾಕೆಂದರೆ ದೇವರು ಪ್ರೀತಿಸ್ವರೂಪಿಯಾಗಿದ್ದಾನೆ)*

**1 ಯೋಹಾನನು 5:2 – ನಾವು ದೇವರ ಮಕ್ಕಳನ್ನು ಪ್ರೀತಿಸುತ್ತೇವೆಂಬದನ್ನು ದೇವರನ್ನು ಪ್ರೀತಿಸಿ** *[ವರ್ತಮಾನಕಾಲ: ಮತ್ತು ಆತನನ್ನು ಎಡಬಿಡದೆ ಪ್ರೀತಿಸುವುದು]* **ಆತನ ಆಜ್ಞೆಗಳನ್ನು ಅನುಸರಿಸುವದರಿಂದಲೇ** *ತಿಳಿದುಕೊಳ್ಳುತ್ತೇವೆ.* (ಒತ್ತುಕೊಟ್ಟು ಹೇಳಿರುವುದು ನನ್ನ ಆಲೋಚನೆಯಾಗಿದೆ)

**1 ಯೋಹಾನನು 5:18–19 – ದೇವರಿಂದ ಹುಟ್ಟಿರುವವನು ಪಾಪಮಾಡುವವನಲ್ಲವೆಂಬದು** *[ವರ್ತಮಾನಕಾಲ: ಮಾನಸಾಂತರವಿಲ್ಲವೆಂದು ತೋರಿಸುವ ಜೀವನ ಶೈಲಿ] ನಮಗೆ ಗೊತ್ತದೆ.* **ದೇವರಿಂದ ಹುಟ್ಟಿದಾತನು ಅವನನ್ನು ಕಾಪಾಡುವನು** *[ವರ್ತಮಾನಕಾಲ: ಕಾಪಾಡುತ್ತಲೇ ಇರುವನು];* **ಕೆಡುಕನು ಅವನನ್ನು ಹಿಡಿಯುವದಿಲ್ಲ. ನಾವು ದೇವರಿಂದ ಹುಟ್ಟಿದವರೆಂದೂ ಲೋಕವೆಲ್ಲವೂ ಕೆಡುಕನ ವಶದಲ್ಲಿ ಬಿದ್ದಿದೆ ಎಂದೂ** *ನಮಗೆ ಗೊತ್ತದೆ.*

**ಅಪೊಸ್ತಲನಾದ ಯೋಹಾನನು ಈ ಎಲ್ಲ ಸಂಗತಿಗಳನ್ನು ನಮ್ಮೊಂದಿಗೆ ಯಾಕೆ ಹಂಚಿಕೊಳ್ಳುತ್ತಿದ್ದಾನೆ?** ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು *ನಿಮಗೆ ಗೊತ್ತಾಗುವಂತೆ* ಈ ಮಾತುಗಳನ್ನು ಬರೆದಿದ್ದೇನೆ (1 ಯೋಹಾನನು 5:13).

*ಮುಕ್ತಾಯ:* ದೇವರಾತ್ಮನ ಫಲಗಳಾದ ನೀತಿ, ಪರಿಶುದ್ಧತೆ, ಪ್ರೀತಿ ಇವುಗಳು ಹೊಸಹುಟ್ಟುವಿಕೆಯನ್ನು ಸಾಕ್ಷೀಕರಿಸುತ್ತವೆ. ನೀವು ಭಕ್ತಿಹೀನರಾಗಿ ಜೀವಿಸುತ್ತಿದ್ದಲ್ಲಿ, ನೀವು ಆತನಿಗೆ (ದೇವರಿಗೆ) ಸೇರಿದವರಾಗಿದ್ದೀರಿ ಎನ್ನುವ ಭರವಸೆ ನಿಮ್ಮ ಮೇಲೆಯೇ ನಿಮಗಿರುವುದಿಲ್ಲ. ನಿಮ್ಮ ಮನಸ್ಸಾಕ್ಷಿಯು ನಿಮ್ಮನ್ನು ಹಂಗಿಸುವುದಲ್ಲದೆ ನಿಮಗೆ ದೇವರಲ್ಲಿ ಯಾವುದೇ ಭರವಸವಿರುವುದಿಲ್ಲ. ಅಪೊಸ್ತಲನಾದ ಪೇತ್ರನು, ದೇವರು ನಿಮ್ಮನ್ನು ಕರೆದದ್ದನ್ನೂ, ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ (1 ಪೇತ್ರ 1:10 ನೋಡಿರಿ); ಅಂದರೆ, ದೇವರ ಮಹಿಮೆಯುಳ್ಳ ಸುವಾರ್ತೆಯನ್ನು ಹೋಲುವಂತಹ ಜೀವನ ಶೈಲಿಯ ಮೂಲಕವಾಗಿ ನೀವು ಆತನಿಗೆ ಸೇರಿದವರಾಗಿದ್ದೀರೆಂದು ನಿಮ್ಮ ಹೃದಯದಲ್ಲಿ ದೃಢಮಾಡಿಕೊಳ್ಳಿರಿ ಎಂದು ಎಚ್ಚರಿಸುತ್ತಾನೆ. ಇಲ್ಲಿ ನಾನು, "ನಾವು ಹೀಗೆ ರಕ್ಷಣೆ ಹೊಂದುತ್ತೇವೆ" ಎಂದು ಹೇಳಲಿಲ್ಲ; ನಾನು, *"ನಾವು ಆತನಿಗೆ ಸೇರಿದವರಾಗಿದ್ದೇವೆಂದು ಹೀಗೆ ನಮಗೆ ತಿಳಿದು ಬರುತ್ತದೆ* ಎಂದು ಹೇಳಿದೆನು."

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ಅಪೊಸ್ತಲರ ಕೃತ್ಯಗಳು 8:13 ಮತ್ತು 18–22 ಓದಿರಿ. ಯೋಹಾನನು, ಮೊದಲನೆಯದಾಗಿ ಒಬ್ಬ ಕ್ರೈಸ್ತ ವಿಶ್ವಾಸಿಯ ಸಾಕ್ಷಿ ಅಥವ "ಫಲ"ದ ಕುರಿತಾಗಿ ಮಾತನಾಡುತ್ತಿದ್ದಾನೆ. ಇವುಗಳು ಹೃದಯದೊಳಗಿಂದ ಹೊರಡುವ ಒರತೆಗಳಂತಿವೆ. ಒಬ್ಬ ವಿಶ್ವಾಸಿಯ ಹೃದಯವು (ಸೀಮೋನನ ಹೃದಯದಂತೆ) ಸರಿಯಾಗಿಲ್ಲದಿದ್ದರೆ ಅವರು ಏನು ಮಾಡಬೇಕು?

   ***ಅಪೊಸ್ತಲರ ಕೃತ್ಯಗಳು 8:13*** *– ಆಗ ಸೀಮೋನನು ಕೂಡ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು ಫಿಲಿಪ್ಪನ ಸಂಗಡ ಯಾವಾಗಲೂ ಇದ್ದು ಸೂಚಕಕಾರ್ಯಗಳೂ ಮಹತ್ಕಾರ್ಯಗಳೂ ಉಂಟಾಗುವದನ್ನು ನೋಡಿ ಬೆರಗಾದನು.*

   ***ಅಪೊಸ್ತಲರ ಕೃತ್ಯಗಳು 8:18–22*** *– ಅಪೊಸ್ತಲರು ಕೈಗಳನ್ನಿಡುವದರ ಮೂಲಕವಾಗಿ ಪವಿತ್ರಾತ್ಮ ದಾನವಾಗುವದನ್ನು ಸೀಮೋನನು ನೋಡಿ ಹಣವನ್ನು ತಂದು ಅವರ ಮುಂದಿಟ್ಟು [19]– ನಾನು ಯಾರ ಮೇಲೆ ಕೈಗಳನ್ನಿಡುತ್ತೇನೋ ಅವರು ಪವಿತ್ರಾತ್ಮ ವರವನ್ನು ಹೊಂದುವಂತೆ ಈ ಅಧಿಕಾರವನ್ನು ನನಗೂ ಕೊಡಿರಿ ಅಂದನು. [20] ಆದರೆ ಪೇತ್ರನು ಅವನಿಗೆ – ನಿನ್ನ ಬೆಳ್ಳಿಯು ನಿನ್ನ ಕೂಡ ಹಾಳಾಗಿಹೋಗಲಿ. ದೇವರ ವರವನ್ನು ಹಣಕ್ಕೆ ಕೊಂಡುಕೊಳ್ಳಬಹುದೆಂದು ಭಾವಿಸುತ್ತೀಯೋ? [21] ಈ ಕಾರ್ಯದಲ್ಲಿ ನಿನಗೆ ಭಾಗವೂ ಇಲ್ಲ, ಪಾಲೂ ಇಲ್ಲ; [22] ನಿನ್ನ ಹೃದಯವು ದೇವರ ಮುಂದೆ ಸರಿಯಿಲ್ಲ. ಆದದರಿಂದ ಈ ನಿನ್ನ ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಕರ್ತನು ನಿನ್ನ ಮನಸ್ಸಿನ ಆಲೋಚನೆಯನ್ನು ಕ್ಷಮಿಸುವನೋ ಏನೋ ಆತನನ್ನು ಬೇಡಿಕೋ.*

2. 2 ಪೇತ್ರ 1:5–11 ಓದಿರಿ. ಒಬ್ಬ ವ್ಯಕ್ತಿಯು ದೇವರಿಂದ ಕರೆಯಲ್ಪಟ್ಟಿದ್ದಾನೆ ಅಥವ ಆರಿಸಲ್ಪಟ್ಟಿದ್ದಾನೆ ಎನ್ನುವುದಕ್ಕೆ ಆಧಾರವೇನು ಅಥವ ಸಾಕ್ಷ್ಯವೇನು?

   ***2 ಪೇತ್ರ 1:5–11*** *– ಈ ಕಾರಣದಿಂದಲೇ ನೀವು ಪೂರ್ಣಾಸಕ್ತಿಯುಳ್ಳವರಾಗಿ ನಿಮಗಿರುವ ನಂಬಿಕೆಗೆ ಸದ್ಗುಣವನ್ನೂ, [6] ಸದ್ಗುಣಕ್ಕೆ ಜ್ಞಾನವನ್ನೂ, ಜ್ಞಾನಕ್ಕೆ ದಮೆಯನ್ನೂ, [7] ದಮೆಗೆ ತಾಳ್ಮೆಯನ್ನೂ, ತಾಳ್ಮೆಗೆ ಭಕ್ತಿಯನ್ನೂ, ಭಕ್ತಿಗೆ ಸಹೋದರಸ್ನೇಹವನ್ನೂ, ಸಹೋದರಸ್ನೇಹಕ್ಕೆ ಪ್ರೀತಿಯನ್ನೂ, ಕೂಡಿಸಿರಿ.[8] ಇವು ನಿಮ್ಮಲ್ಲಿದ್ದು ಹೆಚ್ಚುತ್ತಾ ಬಂದರೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಸಂಬಂಧವಾದ ಪರಿಜ್ಞಾನವನ್ನು ಹೊಂದುವ ವಿಷಯದಲ್ಲಿ ನಿಮ್ಮನ್ನು ಆಲಸ್ಯಗಾರರೂ ನಿಷ್ಫಲರೂ ಆಗದಂತೆ ಮಾಡುತ್ತವೆ. [9] ಇವುಗಳಿಲ್ಲದವನು ಕುರುಡನಾಗಿದ್ದಾನೆ; ಅವನು ದೂರದೃಷ್ಟಿಯಿಲ್ಲದವನಾಗಿದ್ದು ತನ್ನ ಹಿಂದಣ ಪಾಪಗಳು ಪರಿಹಾರವಾಗಿ ತಾನು ಶುದ್ಧನಾದದ್ದನ್ನು ಮರೆತುಬಿಟ್ಟಿದ್ದಾನೆ. [10] ಆದದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ*

*ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವದಿಲ್ಲ. [11] ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು.*

3. ಮತ್ತಾಯ 25:34–40 ಓದಿರಿ. ಈ ವಾಕ್ಯದಲ್ಲಿ ವಿಶ್ವಾಸಿಯ ಯಾವ ಗುಣಗಳು ವ್ಯಕ್ತವಾಗಿವೆ?

***ಮತ್ತಾಯ 25:34–40** – ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ– ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. [35] ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; [36] ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು. [37] ಅದಕ್ಕೆ ನೀತಿವಂತರು– ಸ್ವಾಮಿ, ಯಾವಾಗ ನೀನು ಹಸಿದದ್ದನ್ನು ಕಂಡು ನಿನಗೆ ಊಟಕ್ಕೆ ಕೊಟ್ಟೆವು? ಇಲ್ಲವೆ ನೀನು ಬಾಯಾರಿದ್ದನ್ನು ಕಂಡು ಕುಡಿಯುವದಕ್ಕೆ ಕೊಟ್ಟೆವು? [38] ಯಾವಾಗ ನೀನು ಪರದೇಶಿಯಾಗಿರುವದನ್ನು ಕಂಡು ಸೇರಿಸಿಕೊಂಡೆವು? ಇಲ್ಲವೆ ನಿನಗೆ ಬಟ್ಟೆಯಿಲ್ಲದ್ದನ್ನು ಕಂಡು ಉಡುವದಕ್ಕೆ ಕೊಟ್ಟೆವು? [39] ಯಾವಾಗ ನೀನು ರೋಗದಲ್ಲಿ ಬಿದ್ದದ್ದನ್ನು ಅಥವಾ ಸೆರೆಮನೆಯಲ್ಲಿ ಇದ್ದದ್ದನ್ನು ಕಂಡು ನಿನ್ನನ್ನು ನೋಡುವದಕ್ಕೆ ಬಂದೆವು ಎಂದು ಉತ್ತರವಾಗಿ ಹೇಳುವರು. [40] ಅದಕ್ಕೆ ಅರಸನು – ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು.*

4. ಯೋಹಾನ 13:35 ಓದಿರಿ. ಯೇಸುವಿನ ಶಿಷ್ಯರು ಯಾವುದರಿಂದ ಗುರುತಿಸಲ್ಪಡುತ್ತಾರೆ?

***ಯೋಹಾನ 13:35** – ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು ಅಂದನು.*

5. ಮತ್ತಾಯ 7:21–23 ಓದಿರಿ. ಈ ವ್ಯಕ್ತಿಗಳು ದೇವರ ರಾಜ್ಯದಿಂದ ಯಾಕೆ ಹೊರಗೆ ಕಳುಹಿಸಲ್ಪಟ್ಟರು?

***ಮತ್ತಾಯ 7:21–23*** *– ನನ್ನನ್ನು ಸ್ವಾಮಿ, ಸ್ವಾಮಿ ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು. [22] ಸ್ವಾಮಿ, ಸ್ವಾಮಿ ನಿನ್ನ ಹೆಸರಿನ ಮೇಲೆ ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. [23] ಆಗ ನಾನು ಅವರಿಗೆ – ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿನಡೆಯುವವರೇ, ನನ್ನಿಂದ ತೊಲಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು.*

6. ಯೋಹಾನ 14:23 ಓದಿರಿ. ಒಬ್ಬ ವ್ಯಕ್ತಿಯು ಯೇಸುವನ್ನು ಪ್ರೀತಿಸುವುದಾದರೆ, ಅವರು ಏನು ಮಾಡುತ್ತಾರೆ?

***ಯೋಹಾನ 14:23*** *– ಯೇಸು ಅವನಿಗೆ – ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು.*

7. ಅಪೊಸ್ತಲರ ಕೃತ್ಯಗಳು 26:20 ಓದಿರಿ. ಈ ವಚನವು ಏನು ಹೇಳುತ್ತದೆ?

***ಅಪೊಸ್ತಲರ ಕೃತ್ಯಗಳು 26:20*** *– ಮೊದಲು ದಮಸ್ಕದವರಿಗೆ, ಆ ಮೇಲೆ ಯೆರೂಸಲೇಮಿನಲ್ಲಿಯೂ ಯೂದಾಯದ ಎಲ್ಲಾ ಸೀಮೆಯಲ್ಲಿಯೂ ಇರುವವರಿಗೆ ಮತ್ತು ಅನ್ಯಜನರಿಗೆ ಸಹ– ನೀವು ದೇವರ ಕಡೆಗೆ ತಿರುಗಿಕೊಳ್ಳಬೇಕೆಂತಲೂ ಮಾನಸಾಂತರಕ್ಕೆ ಯೋಗ್ಯವಾದ ಕೃತ್ಯಗಳನ್ನು ಮಾಡಬೇಕಂತಲೂ ಸಾರಿದೆನು.*

8. ಯಾಕೋಬನು 2:17 ಓದಿರಿ. ನಿಮ್ಮ ನಂಬಿಕೆಯು ಒಳ್ಳೆಯ ಕಾರ್ಯದಲ್ಲಿ ಫಲಿಸದಿದ್ದರೆ, ಅದು ಎಂತಹ ನಂಬಿಕೆಯಾಗಿದೆ?

***ಯಾಕೋಬನು 2:17*** *– ಹಾಗೆಯೇ ಕ್ರಿಯೆಗಳಿಲ್ಲದದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು.*

## ಉತ್ತರಗಳು

1. ಅಪೊಸ್ತಲರ ಕೃತ್ಯಗಳು 8:13 ಮತ್ತು 18–22 ಓದಿರಿ. ಯೋಹಾನನು, ಮೊದಲನೆಯದಾಗಿ ಒಬ್ಬ ಕ್ರೈಸ್ತ ವಿಶ್ವಾಸಿಯ ಸಾಕ್ಷಿ ಅಥವ "ಫಲ"ದ ಕುರಿತಾಗಿ ಮಾತನಾಡುತ್ತಿದ್ದಾನೆ. ಇವುಗಳು ಹೃದಯದೊಳಗಿಂದ ಹೊರಡುವ ಒರತೆಗಳಂತೆ. ಒಬ್ಬ ವಿಶ್ವಾಸಿಯ ಹೃದಯವು (ಸೀಮೋನನ ಹೃದಯದಂತೆ) ಸರಿಯಾಗಿಲ್ಲದಿದ್ದರೆ ಅವರು ಏನು ಮಾಡಬೇಕು?

   *ನಿಮ್ಮ ಪಾಪಕ್ಕಾಗಿ ಪಶ್ಚಾತ್ತಾಪ ಪಡಬೇಕು ಮತ್ತು ಕರ್ತನು ನಿಮ್ಮ ಮನಸ್ಸಿನ ಆಲೋಚನೆಯನ್ನು ಕ್ಷಮಿಸುವಂತೆ ಆತನನ್ನು ಬೇಡಿಕೊಳ್ಳಬೇಕು*

2. 2 ಪೇತ್ರ 1:5–11 ಓದಿರಿ. ಒಬ್ಬ ವ್ಯಕ್ತಿಯು ದೇವರಿಂದ ಕರೆಯಲ್ಪಟ್ಟಿದ್ದಾರೆ ಅಥವ ಆರಿಸಲ್ಪಟ್ಟಿದ್ದಾರೆ ಎನ್ನುವುದಕ್ಕೆ ಆಧಾರವೇನು ಅಥವ ಸಾಕ್ಷ್ಯವೇನು?

   *ಅವರು ತಮ್ಮ ನಂಬಿಕೆಗೆ ಆತ್ಮನ ಎಲ್ಲ ಗುಣಗಳನ್ನು, ಅಂದರೆ ತಮ್ಮ ನೂತನ ಸ್ವಭಾವವನ್ನು ಸೇರಿಸುವರು*

3. ಮತ್ತಾಯ 25:34–40 ಓದಿರಿ. ಈ ವಾಕ್ಯದಲ್ಲಿ ವಿಶ್ವಾಸಿಯ ಯಾವ ಗುಣಗಳು ವ್ಯಕ್ತವಾಗಿವೆ?

   *ನಂಬಿಕೆಯ ಕ್ರಿಯೆಗಳು – ಹಸಿದವರಿಗೆ ಊಟ ಕೊಡುವುದು, ಇತರರಿಗೆ ಅತಿಥಿ ಸತ್ಕಾರ ಮಾಡುವುದು, ಬಟ್ಟೆಯಿಲ್ಲದವರಿಗೆ ಬಟ್ಟೆ ಕೊಡುವುದು, ರೋಗಿಗಳ ಆರೈಕೆ ಮಾಡುವುದು, ಸೆರೆಯಲ್ಲಿರುವವರನ್ನು ಸಂಧಿಸುವುದು ಮುಂತಾಗಿ.*

4. ಯೋಹಾನ 13:35 ಓದಿರಿ. ಯೇಸುವಿನ ಶಿಷ್ಯರು ಯಾವುದರಿಂದ ಗುರುತಿಸಲ್ಪಡುತ್ತಾರೆ?

   *ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಗುರುತಿಸಲ್ಪಡುತ್ತಾರೆ*

5. ಮತ್ತಾಯ 7:21–23 ಓದಿರಿ. ಈ ವ್ಯಕ್ತಿಗಳು ದೇವರ ರಾಜ್ಯದಿಂದ ಯಾಕೆ ಹೊರಗೆ ಕಳುಹಿಸಲ್ಪಟ್ಟರು?

   *ಯಾಕೆಂದರೆ ಅವರು ಧರ್ಮವನ್ನು ಮೀರಿ ನಡೆಯುವವರು. ಗ್ರೀಕ್ ಭಾಷೆಯಲ್ಲಿ ಅದು ವರ್ತಮಾನ ಕಾಲದಲ್ಲಿ ಬರೆಯಲ್ಪಟ್ಟಿದೆ, ಅಂದರೆ ಅದು ಅವರ ಸ್ವಭಾವ ಮತ್ತು ಜೀವನಶೈಲಿಯಾಗಿತ್ತು. ಅವರು ಮಾನಸಾಂತರ ಹೊಂದದ, ದೇವರ ಕಡೆಗೆ ಮನಸ್ಸನ್ನು ತಿರುಗಿಸಿಕೊಳ್ಳದ ಧಾರ್ಮಿಕರಾಗಿದ್ದರು.*

6. ಯೋಹಾನ 14:23 ಓದಿರಿ. ಒಬ್ಬ ವ್ಯಕ್ತಿಯು ಯೇಸುವನ್ನು ಪ್ರೀತಿಸುವುದಾದರೆ, ಅವರು ಏನು ಮಾಡುತ್ತಾರೆ?

*ಆತನ ಮಾತನ್ನು ಕೈಗೊಳ್ಳಿರಿ ಅಥವ ಆತನು ಹೇಳಿದಂತೆ ಮಾಡಿರಿ*

7. ಅಪೊಸ್ತಲರ ಕೃತ್ಯಗಳು 26:20 ಓದಿರಿ. ಈ ವಚನವು ಏನು ಹೇಳುತ್ತದೆ?

*ನೀವು ಮಾನಸಾಂತರ ಹೊಂದಿದ್ದೀರೆಂದು ನಿಮ್ಮ ಕ್ರಿಯೆಗಳಿಂದ ತೋರಿಸಿರಿ*

8. ಯಾಕೋಬನು 2:17 ಓದಿರಿ. ನಿಮ್ಮ ನಂಬಿಕೆಯು ಒಳ್ಳೆಯ ಕಾರ್ಯದಲ್ಲಿ ಫಲಿಸದಿದ್ದರೆ, ಅದು ಎಂತಹ ನಂಬಿಕೆಯಾಗಿದೆ?

*ಕ್ರಿಯೆಗಳಿಲ್ಲದ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು*

# ಪಾಠ 14

# ಶಿಷ್ಯತ್ವಕ್ಕೆ ಕರೆ

*ಆಂಡ್ರೂ ವಾಮಕ್*

ಈದಿನ, ನಾವು ಶಿಷ್ಯರಾಗಿರುವುದು ಮತ್ತು ಇತರರನ್ನು ಶಿಷ್ಯತ್ವದಲ್ಲಿ ನಡೆಸುವುದು ಹೇಗೆ ಎಂದು ನೋಡೋಣ. ಜನರು ಕೇವಲ ಮಾನಸಾಂತರ ಹೊಂದುವುದು ಮತ್ತು ಯೇಸುವನ್ನು ಕರ್ತನೆಂದು ಅರಿಕೆಮಾಡಿ, ಪಾಪಪರಿಹಾರವನ್ನು ಹೊಂದಿಕೊಳ್ಳುವುದಷ್ಟೆ ಅಲ್ಲ, ಅವರು ತನ್ನ ಶಿಷ್ಯರಾಗುವಂತೆ ಮಾಡಬೇಕೆಂದು ಕರ್ತನು ನಮಗೆ ಅಪ್ಪಣೆಕೊಟ್ಟಿದ್ದಾನೆಂದು ಇಲ್ಲಿ ನಾನು ನಿಮ್ಮ ನೆನಪಿಗೆ ತರಲಿಚ್ಚಿಸುತ್ತೇನೆ. ಮೊದಲೆರಡು ಸಂಗತಿಗಳು ಬಹಳ ಮುಖ್ಯವಾದವುಗಳು ಮತ್ತು ನಾನು ಅದನ್ನು ಅಲ್ಪವೆಂದು ಎಣಿಸುವುದಿಲ್ಲ, ಆದಾಗ್ಯೂ ಅದರ ನಿಜವಾದ ಉದ್ದೇಶವು ಹೊಸದಾಗಿ ಹುಟ್ಟುವುದನ್ನು ಮೀರಿದ್ದಾಗಿದ್ದು ಅಂಥವರು ಸಿದ್ಧಿಗೆ ಬರಬೇಕು, ಮತ್ತು ಯೇಸು ಕ್ರಿಸ್ತನ ಶಿಷ್ಯನಾದವನು ತಾನು ಹೊರಟು ಹೋಗಿ ಇತರರನ್ನು ಶಿಷ್ಯರನ್ನಾಗಿ ಮಾಡುವ ಗುರಿ ಹೊಂದಿರಬೇಕು.

ಯೇಸುವು ಶಿಷ್ಯರಿಗೆ, ನೀವು ಹೊರಟುಹೋಗಿ ಶಿಷ್ಯರನ್ನಾಗಿ ಮಾಡಿರಿ, ಅವರನ್ನು ಸಿದ್ಧಿಗೆ ತನ್ನಿರಿ, ಮತ್ತು ಬಹಳವಾಗಿ ಹೆಚ್ಚಿರಿ ಎಂದು ಹೇಳಿದನು. ಇಂದು ಕ್ರೈಸ್ತ ಸಭೆಯು ಹೀಗೆ ಮಾಡಲು ವಿಫಲಗೊಂಡಿದೆ. ಜನರು ಹೊಸದಾಗಿ ಹುಟ್ಟುವಂತೆ ಮಾಡುವ ಜವಾಬ್ದಾರಿಯನ್ನು ನಾವು ಸಭಾಪಾಲಕರು ಅಥವ ದೇವರ ಸೇವಕರಿಗೆ ಒಪ್ಪಿಸಿಬಿಟ್ಟಿದ್ದೇವೆ. ಸುವಾರ್ತಿಕರೆನಿಸಿಕೊಂಡ ಕೆಲವರು ಇಂದು ಪ್ರಪಂಚ ಸುತ್ತುತ್ತಾ, ದೊಡ್ಡ ದೊಡ್ಡ ಸುವಾರ್ತಾ ಕೂಟಗಳನ್ನು ನಡೆಸುತ್ತಾ ಸಾವಿರಾರು ಜನರು ಕರ್ತನನ್ನು ಸ್ವೀಕರಿಸುವಂತೆ ಮಾಡುತ್ತಾರೆ. ಅವರಲ್ಲಿ ಕೆಲವರು ನಿಜವಾದ ರಕ್ಷಣೆ ಹೊಂದದೆ ಕೇವಲ ಭಾವಲೋಕಕ್ಕೆ ಸೀಮಿತಗೊಂಡರೂ, ಇತರ ಎಷ್ಟೋ ಜನರು ನಿಜವಾದ ರಕ್ಷಣೆಯ ಅನುಭವವನ್ನು ಹೊಂದಿ ಕರ್ತನೊಡನೆ ಸಂಬಂಧವೇರ್ಪಡಿಸಿಕೊಂಡಿರುತ್ತಾರೆಂದು ನನಗೆ ಗೊತ್ತಿದೆ. ಅವರಲ್ಲಿ ಅನೇಕರು ತಾವು ಶಿಷ್ಯರಾಗಿ ಬೆಳೆಯುತ್ತಾ ಸಿದ್ಧಿಗೆ ಬರುವುದಕ್ಕೆ ಹೆಚ್ಚಿನ ಮಹತ್ವ ನೀಡದೆ ಹೋಗುತ್ತಾರೆ, ಆದರೆ ಇದು ದೇವರು ನೇಮಿಸಿದ ಮಾರ್ಗವಲ್ಲ.

ಇದನ್ನು ನಾನು, ಮಕ್ಕಳನ್ನು ಬಹಳವಾಗಿ ಪ್ರೀತಿಸುವ ವ್ಯಕ್ತಿಗೆ ಹೋಲಿಸುತ್ತೇನೆ. ಒಂದು ಮಗು ಹುಟ್ಟುವ ಸಂದರ್ಭದಲ್ಲಿ ಅವರ ತೋರುವ ಉತ್ಸಾಹವು ಅದನ್ನು

ಕಣ್ಣಿಂದ ನೋಡುವವರೆಗೆ ಮಾತ್ರ ಇರುವುದಾಗಿದ್ದರೆ ಅಂಥವರನ್ನು ಸಂಪೂರ್ಣವಾಗಿ ಬೇಜವಾಬ್ದಾರರೆನ್ನಬಹುದು. ನಿಮಗೊಂದು ಮಗು ಇದ್ದಲ್ಲಿ, ಅದನ್ನು ಬೆಳೆಸಿ ಶಿಕ್ಷಣ ನೀಡುವ ಜವಾಬ್ದಾರಿಯು ನಿಮಗಿರುತ್ತದೆ. ನಾವು ಜನರಿಗೆ, "ಜನರು ರಕ್ಷಣೆ ಹೊಂದಿ ಯೇಸುವನ್ನು ಕರ್ತನೆಂದು ಅರಿಕೆ ಮಾಡುವುದು ಬಹು ಪ್ರಮುಖವಾದ ವಿಷಯವಾಗಿದೆ" ಎಂದು ಹೇಳುತ್ತೇವೆ. ಅದಾಗುವಾಗ ನಾವು ಅವರ ಬೆನ್ನುತಟ್ಟಿ, 'ಈಗ ನೀನು ಕ್ರೈಸ್ತನಾಗಿದ್ದಿ. ದೇವರಲ್ಲಿ ನಂಬಿಕೆಯಿಡು, ಸತ್ಯವೇದವನ್ನು ಓದು, ಎಲ್ಲವು ಒಳ್ಳೆಯದಾಗುತ್ತದೆ' ಎನ್ನುತ್ತೇವೆ. ಆದರೆ ಕೇವಲ ಇಂತಿಷ್ಟಕ್ಕೆ ಮಾತ್ರವೇ ಕರ್ತನು ಪ್ರಾಮುಖ್ಯತೆ ಕೊಡುವುದಿಲ್ಲ.

ಈ ಕಾರಣದಿಂದಾಗಿ, ಅನೇಕರು ಕರ್ತನಿಗಾಗಿ ಹೃದಯಪೂರ್ವಕ ತೀರ್ಮಾನಗಳನ್ನು ಮಾಡಿದ್ದರೂ ಪರಿಪಕ್ವತೆಯಿಲ್ಲದವರಾಗಿದ್ದಾರೆ. ಅವರು ತಮ್ಮಲ್ಲಿರುವ ನಂಬಿಕೆಯನ್ನು ಇತರರು ಅನುಸರಿಸುವಂತೆ ಮಾಡಲಾರದವರಾಗಿದ್ದಾರೆ ಯಾಕೆಂದರೆ ಅವರ ಬಳಿ ಅದಕ್ಕೆ ಬೇಕಾದ ಸಂಗತಿಗಳಿಲ್ಲವಾಗಿದೆ. ಅವರು ಯೇಸುವಿಗಾಗಿ ಸಕಾರಾತ್ಮಕ ಸಾಕ್ಷಿಗಳಾಗದೆ ನಕಾರಾತ್ಮಕ ಸಾಕ್ಷಿಗಳಾಗಿ ಮಾರ್ಪಡುತ್ತಾರೆ. ನಾವು ಹೊರಟುಹೋಗಿ ಆತನಿಗಾಗಿ ಇತರರನ್ನು ಪೂರ್ಣಪ್ರಮಾಣದ ಶಿಷ್ಯರಾಗಿ ಮಾಡುವುದಲ್ಲದೆ ಅವರು ಮುಂದುವರಿದು ತಮ್ಮಲ್ಲಿರುವ ನಂಬಿಕೆಯು ಇನ್ನಿತರರಲ್ಲಿ ಹುಟ್ಟುವಂತೆ ಮಾಡಬೇಕೆನ್ನುವುದು ಆತನ ಉದ್ದೇಶವಾಗಿದೆ.

ನೀವು ಆರು ತಿಂಗಳಿಗೊಮ್ಮೆ ಒಬ್ಬ ವ್ಯಕ್ತಿಯನ್ನು ಕರ್ತನ ಬಳಿಗೆ ತಂದು, ನಿಮ್ಮನ್ನು ಅವರಿಗಾಗಿಯೇ ಮೀಸಲಿಟ್ಟು ಅವರನ್ನು ಶಿಷ್ಯತ್ವದಲ್ಲಿ ನಡಿಸಿದ ಮೇಲೆ ಅವರು ಪ್ರವೀಣರಾದ ಕ್ರೈಸ್ತರಾದರೆನ್ನಿ, ಆಗ ಆರು ತಿಂಗಳ ಅಂತ್ಯದಲ್ಲಿ ಕೇವಲ ಇಬ್ಬರು ಕ್ರೈಸ್ತರಿರುತ್ತಾರೆ. ಆಮೇಲೆ ನೀವಿಬ್ಬರು ಮತ್ತೆ ಒಬ್ಬೊಬ್ಬರನ್ನು ಕರ್ತನ ಬಳಿಗೆ ನಡಿಸಿ, ನಿಮ್ಮನ್ನು ಅವರಿಗಾಗಿಯೇ ಪ್ರತ್ಯೇಕಿಸಿಕೊಂಡು ಆರು ತಿಂಗಳ ಕಾಲ ಅವರನ್ನು ಶಿಷ್ಯತ್ವದಲ್ಲಿ ನಡಿಸಿದಿರೆನ್ನಿರಿ. ಆಗ ಒಂದು ವರ್ಷದ ಅಂತ್ಯಕ್ಕೆ ನಾಲ್ಕು ಕ್ರೈಸ್ತರಿರುತ್ತಾರೆ. ಇದನ್ನು, ಒಂದು ಸುವಾರ್ತಾ ಕೂಟದಲ್ಲಿ ಸಾವಿರ ಜನರನ್ನು ಕರ್ತನ ಬಳಿಗೆ ನಡಿಸಿ ಅವರು ಯೇಸುವನ್ನು ಅಂಗೀಕಾರ ಮಾಡುವುದರೊಂದಿಗೆ ಹೋಲಿಸಲಾಗುವುದಿಲ್ಲ. ಅನೇಕರು, "ಈ ರೀತಿಯ ಶಿಷ್ಯತ್ವವು ಕೇವಲ ನಾಲ್ಕು ಜನ ಶಿಷ್ಯರನ್ನು ಸಿದ್ಧಪಡಿಸುತ್ತದೆ ಆದರೆ ದೊಡ್ಡ ಸುವಾರ್ತಾ ಕೂಟದ ಮೂಲಕ ಸಾವಿರಾರು ಜನರು ಪರಿವರ್ತಿತರಾಗುತ್ತಾರಲ್ಲ. ಆದದರಿಂದ ನಾವು ಕೂಟವನ್ನು ಏರ್ಪಡಿಸುವುದನ್ನು ಅನುಮೋದಿಸುತ್ತೇವೆ" ಎನ್ನುವ ಸಾಧ್ಯತೆಯಿದೆ. ಒಮ್ಮೆಗೆ ಸಾವಿರ ಜನರನ್ನು ಕರ್ತನ ಬಳಿಗೆ ನಡಿಸಲಾಗುವವರು ಅಲ್ಲಿಯತನಕ 35,000 ಸಾವಿರ ಜನರನ್ನು ಕರ್ತನ ಬಳಿಗೆ ನಡೆಸಿರಬಹುದು. ಅದು ಒಳ್ಳೆಯದೆ, ಮತ್ತು ಅದನ್ನು ಯಾರೂ ಟೀಕಿಸುವುದಿಲ್ಲ; ಆದರೆ ಲೋಕದ ಜನಸಂಖ್ಯೆಗೆ ಹೋಲಿಸಿದಲ್ಲಿ ಅದು ಸಮುದ್ರದಲ್ಲಿ ಒಂದು ಹನಿ ನೀರಿನಂತೆ ಮಾತ್ರ. ಸರಳವಾಗಿ ಹೇಳುವುದಾದರೆ, ಸಭೆಯು ಈ ರೀತಿಯಾಗಿಯೇ ಕಾರ್ಯನಿರ್ವಹಿಸುತ್ತಿದೆ.

ನಾವು ಶಿಷ್ಯರನ್ನಾಗಿ ಮಾಡಲು ಒತ್ತು ಕೊಡುವುದಾದರೆ, ಒಬ್ಬ ವ್ಯಕ್ತಿಯು ಪ್ರತಿ ಆರು ತಿಂಗಳ ಅವಧಿಯಲ್ಲಿ ಇನ್ನೊಬ್ಬರನ್ನು ಕರ್ತನ ಬಳಿಗೆ ನಡಿಸಿ, ಅನಂತರ ಅವರಿಬ್ಬರೂ

ಹಾಗೆ ಮಾಡುವುದನ್ನು ಮುಂದುವರಿಸುತ್ತಾ ಈ ಸರಪಳಿಯು ಮುಂದುವರಿದಲ್ಲಿ, ಸುಮಾರು ಹನ್ನೆರಡುವರೆ ವರ್ಷಗಳಲ್ಲಿ ಪ್ರಪಂಚದ ಜನಸಂಖ್ಯೆಗೂ ಮೀರುವಷ್ಟು ಜನರನ್ನು ಶಿಷ್ಯರನ್ನಾಗಿ ಮಾಡಲು ಸಾಧ್ಯವಿದೆ. ಕೆಲವರು, ಹೀಗೆ ಮಾಡಲು ಸಾಧ್ಯವಿಲ್ಲ ಎನ್ನಬಹುದು, ಆದರೆ ನೀವೇ ಇದರ ಲೆಕ್ಕಾಚಾರ ಮಾಡಿರಿ. ನಾನು ಗುಣಾಕಾರ ಮಾಡಿ ನೋಡಿದ್ದೇನೆ, ಮತ್ತು ಪ್ರತಿ ಆರು ತಿಂಗಳಿಗೆ ಪ್ರತಿಯೊಬ್ಬರು ಮತ್ತೊಬ್ಬರನ್ನು ಶಿಷ್ಯತ್ವದಲ್ಲಿ ನಡಿಸುತ್ತಾ ಹೋದಲ್ಲಿ, ಮತ್ತು ಆ ಮತ್ತೊಬ್ಬರು ಸಹ ಶಿಷ್ಯರನ್ನು ಮಾಡುವವರೇ ಆಗಿದ್ದಲ್ಲಿ ಹನ್ನೆರಡು ವರ್ಷಗಳಿಗಿಂತ ಸ್ವಲ್ಪ ಹೆಚ್ಚಿನ ಸಮಯದಲ್ಲಿ, ಐದುವರೆ ಬಿಲಿಯನ್ ಶಿಷ್ಯರಿರುತ್ತಾರೆ ಆದರೆ ಆ ಮತ್ತೊಂದು ವಿಧಾನದಲ್ಲಿ ಕೇವಲ ಹನ್ನೆರಡು ಸಾವಿರ ಜನರು ಮಾತ್ರವೇ ಇರುತ್ತಾರೆ.

ವೈಯಕ್ತಿಕವಾಗಿ ನೀವು ಜಯವನ್ನು ಮತ್ತು ಪರಿಪಕ್ವತೆಯನ್ನು ಅನುಭವಿಸುವುದಲ್ಲದೆ ಇತರರಲ್ಲಿಯೂ ಅದು ಫಲಕೊಡುವಂತೆ ಮಾಡಲು ನಿಮಗೆ ಸಾಧ್ಯವಾಗುವುದಾದರೆ, ನೀವು ಪರಿಣಿತಿ ಪಡೆಯುವವರಾಗಿರದೆ ತರಬೇತುದಾರರಾಗುವಿರಿ. ಹಾಗಾದಲ್ಲಿ ಈ ತತ್ವವನ್ನು ಅರ್ಥಮಾಡಿಕೊಂಡ ಒಬ್ಬ ಮನುಷ್ಯನು, ಕರ್ತನಲ್ಲಿ ಬೆಳೆಯುತ್ತಾ ಸಿದ್ಧಿಗೆ ಬಂದವನಾಗಿ ಮತ್ತೊಬ್ಬರನ್ನು ಶಿಷ್ಯತ್ವದಲ್ಲಿ ನಡೆಸಲು ಪ್ರಾರಂಭಿಸುತ್ತಾನೆ. ಹೀಗೆ ನೀವು ವರ್ಷಕ್ಕೆ ಒಬ್ಬರನ್ನು ಶಿಷ್ಯರನ್ನಾಗಿ ಮಾಡಿದರೆ ವರ್ಷಾಂತ್ಯದಲ್ಲಿ ನೀವು ಮತ್ತು ಆ ವ್ಯಕ್ತಿ, ಅಂದರೆ ಇಬ್ಬರು ಶಿಷ್ಯರಿರುತ್ತೀರಿ. ಎರಡು ವರ್ಷಗಳ ಅಂತ್ಯದಲ್ಲಿ ನಾಲ್ಕು ಜನರಾಗುತ್ತೀರಿ. ಆದರೆ, ನೀವು ಈ ಸರಪಳಿಯನ್ನು ಮುಂದುವರಿಸಿಕೊಂಡು ಹೋದಂತೆ ಹತ್ತು ವರ್ಷಗಳ ಅಂತ್ಯದಲ್ಲಿ ಶಿಷ್ಯತ್ವದಲ್ಲಿ ನಡಯುತ್ತಿರುವ ಕ್ರಿಸ್ತನ ದೇಹಕ್ಕೆ ಅಂಗಗಳಾಗಿರುವ 1,024 ಜನರಿರುತ್ತಾರೆ. ನೀವು ಮುಂದುವರಿಯುತ್ತಾ ಹೋದಂತೆ, ಮೂಲತ: ಒಬ್ಬ ವ್ಯಕ್ತಿಯಿಂದ ಪ್ರಾರಂಭವಾದದ್ದು 20 ವರ್ಷಗಳಲ್ಲಿ 10 ಲಕ್ಷ ಜನರನ್ನು ಉತ್ಪಾದಿಸಿರುತ್ತದೆ. ಅದೆಂಥ ಅದ್ಭುತ! ನೀವು ಹೊರಟು ಹೋಗಿ ಶಿಷ್ಯರನ್ನಾಗಿ ಮಾಡಿರಿ ಎಂದು ಕರ್ತನು ಹೇಳುವಾಗ ಇದುವೇ ಆತನ ಉದ್ದೇಶವಾಗಿತ್ತು, ದೇವರ ರಾಜ್ಯವು ವಿಸ್ತರಿಸಲ್ಪಡಲು ಇರುವ ಅತ್ಯುತ್ತಮ ಮಾರ್ಗವು ಇದೇ ಆಗಿದೆ, ಆದರೆ, ನಮ್ಮ ಮನಸ್ಸು ತತ್‌ಕ್ಷಣದ ಫಲಿತಾಂಶದ ಮಾರ್ಗ ಹುಡುಕುತ್ತದೆ.

ದೊಡ್ಡ ಸುವಾರ್ತಾ ಕೂಟಗಳಿಗೆ ಹೋದ ಎಷ್ಟೋ ಜನರು ತೀರ್ಮಾನಗಳನ್ನು ಮಾಡುತ್ತಾರೆ, ತಾವು ಕ್ರೈಸ್ತರಾದೆವೆಂದು ಹೇಳುತ್ತಾರೆ, ಆದರೆ ಇನ್ನೂ ಕೋಪ, ಕಹಿಮನೋಭಾವ, ಹೊಟ್ಟೆಕಿಚ್ಚುಗಳಿಂದ ಕರ್ತನಿಗೆ ಪ್ರತಿಕೂಲವಾದ ಸಾಕ್ಷಿಯಾಗಿಬಿಡುತ್ತಾರೆ. ನಾವು ಅಂಕಿಅಂಶಗಳನ್ನು ನೋಡುವಾಗ, ಹೀಗೆ ಕ್ರೈಸ್ತರೆಂದು ಹೇಳಿಕೊಂಡವರು ಕೆಟ್ಟ ನಡತೆ ತೋರಿದದರಿಂದ *'ಆ ಸಭೆಯಲ್ಲಿ ಇರುವ ಕಪಟಿಗಳಿಗಿಂತ ನಾನು ಬೇರೆಯಲ್ಲ, ನನಗೆ ಅವರ ಸಹವಾಸ ಬೇಡ'* ಎಂದು ಕೊಂಡ ಅದೆಷ್ಟು ಜನರು ನಿಜವಾದ ಸುವಾರ್ತೆಗೆ ಬೆನ್ನುಹಾಕಿರುವುದು ಕಂಡುಬರುತ್ತದೆ.

ಇದರ ಸಮಗ್ರ ಗುರಿ, ಪ್ರಪಂಚವನ್ನು ಸುವಾರ್ತೆಗೆ ಒಳಪಡಿಸಲು ದೇವರು ಏರ್ಪಡಿಸಿದ ಮಾರ್ಗವು ಶಿಷ್ಯತ್ವವೇ ಆಗಿದೆ. ನೀವು ದೇವರ ವಾಕ್ಯಕ್ಕೆ ಒಳಪಡುವವರೆಗೂ

(ಯೋಹಾನ 8:31–32) ಸತ್ಯವು ನಿಮ್ಮನ್ನು ಬಿಡುಗಡೆ ಮಾಡಲಾಗದು. ಪ್ರತಿಯೊಬ್ಬರೂ ಆತನ ಪರಿಪೂರ್ಣತೆಯನ್ನು ಅನುಭವಿಸಬೇಕು ಎನ್ನುವುದು ಆತನ ಚಿತ್ತವಾಗಿದೆ ಆದರೆ ಅದು ಸುವಾರ್ತೆಯನ್ನು ಸಾರುವ ಮೂಲಕ ನಡೆಯಬೇಕು ಎಂದು ಆತನು ನೇಮಿಸಿದ್ದಾನೆ. ಈ ಮಾರ್ಗವು ಸರಿಯಲ್ಲ ಎಂದು ತೀರ್ಮಾನಿಸಿ ಮತ್ತೊಂದು ಮಾರ್ಗವನ್ನು ಅನುಸರಿಸಿದವರು ಕೊನೆಗೆ ಫಲವಿಲ್ಲವೆಂದು ಕೈಚೆಲ್ಲಿದ್ದಾರೆ.

ಶಿಷ್ಯತ್ವದ ಬೆಲೆ ಏನೆಂಬುದನ್ನು ನಿಮಗೆ ತಿಳಿಯಪಡಿಸುವಂತೆ ದೇವರು ನಿಮ್ಮೊಂದಿಗೆ ಮಾತನಾಡಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ನೀವು ಹೊರಟುಹೋಗಿ ಶಿಷ್ಯರಾಗಿರಿ ಮತ್ತು ಇತರರನ್ನು ಶಿಷ್ಯರನ್ನಾಗಿ ಮಾಡುವವರಾಗಿರಿ ಎಂದು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ಯೇಸುವು ಯಾರನ್ನೂ "ಕ್ರೈಸ್ತರಾಗಿರಿ" ಎಂದು ಕರೆಯಲಿಲ್ಲ, ಆದರೆ ಆತನು ಜನರನ್ನು ತನ್ನ "ಶಿಷ್ಯರಾಗಿರಿ" ಎಂದು ಕರೆದನು ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಸುವಾರ್ತೆಗಳನ್ನು (ಮತ್ತಾಯ, ಮಾರ್ಕ, ಲೂಕ, ಯೋಹಾನ) ಓದಿರಿ ಮತ್ತು ಒಂದು ಪ್ರತ್ಯೇಕವಾದ ಹಾಳೆಯಲ್ಲಿ, ಯೇಸುವು ತನ್ನ ಶಿಷ್ಯರಾಗಲು ಆಹ್ವಾನಿಸಿರುವ ವಾಕ್ಯಭಾಗಗಳನ್ನು ಬರೆಯಿರಿ.

2. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ, ಜನರನ್ನು "ಕ್ರೈಸ್ತರಾಗುವುದಕ್ಕೆ" ಕರೆಯಲಿಲ್ಲ ಬದಲಾಗಿ "ಶಿಷ್ಯರಾಗುವುದಕ್ಕೆ" ಕರೆಯಲಾಗಿದೆ. ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ಓದಿರಿ ಮತ್ತು ಒಂದು ಪ್ರತ್ಯೇಕವಾದ ಹಾಳೆಯಲ್ಲಿ, ಜನರನ್ನು ಶಿಷ್ಯರಾಗುವುದಕ್ಕೆ ಕರೆದ ವಾಕ್ಯಭಾಗಗಳನ್ನು ಪಟ್ಟಿಮಾಡಿರಿ.

3. ದೇವರ ವಾಕ್ಯದಲ್ಲಿ "ಶಿಷ್ಯ/ಶಿಷ್ಯರು" ಎನ್ನುವ ಪದವು 273 ಸಾರಿ ಉಪಯೋಗಿಸಲ್ಪಟ್ಟಿದೆ. ಇಡೀ ಬೈಬಲ್‌ನಲ್ಲಿ "ಕ್ರೈಸ್ತ" ಎನ್ನುವ ಪದವು ಕೇವಲ ಮೂರು ಬಾರಿ ಉಪಯೋಗಿಸಲ್ಪಟ್ಟಿದೆ. ಬೈಬಲ್‌ನಲ್ಲಿ ಕ್ರೈಸ್ತ/ರು ಎನ್ನುವ ಪದವು ಎಲ್ಲೆಲ್ಲಿ ಬಳಕೆಯಾಗಿದೆ ಎನ್ನುವುದನ್ನು ಒಂದು ಹಾಳೆಯಲ್ಲಿ ಬರೆಯಿರಿ.

4. ಮತ್ತಾಯ 10:25 ಓದಿರಿ. ಈ ವಚನದ ಪ್ರಕಾರ ಶಿಷ್ಯರೆಂದರೆ ಯಾರು?

   ***ಮತ್ತಾಯ 10:25** – ಗುರುವಿನಂತೆ ಆಗುವದು ಶಿಷ್ಯನಿಗೆ ಸಾಕು, ಧಣಿಯಂತೆ ಆಗುವದು ಆಳಿಗೆ ಸಾಕು. ಅವರು ಮನೆಯ ಯಜಮಾನನಿಗೆ ಬೆಲ್ಜೆಬೂಲನೆಂದು ಹೆಸರಿಟ್ಟ ಮೇಲೆ ಆತನ ಮನೆಯವರನ್ನು ಏನಾಂದರೂ?*

5. ಲೂಕ 14:26 ಓದಿರಿ. ಸರಿ/ತಪ್ಪು ಹೇಳಿರಿ: ಯೇಸುವಿನ ಶಿಷ್ಯರೆನಿಸಿಕೊಳ್ಳುವವರು ಮತ್ತೊಬ್ಬರಿಗಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಣೆ ಮಾಡಿಕೊಳ್ಳುವರು.

   ***ಲೂಕ 14:26** – ಯಾವಾನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣ ತಮ್ಮಂದಿರು ಅಕ್ಕತಂಗಿಯರು ಇವರನ್ನೂ, ತನ್ನ ಪ್ರಾಣವನ್ನು ಸಹ ಹಗೆಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು.*

6. ಲೂಕ 14:33 ಓದಿರಿ. ಸರಿ/ತಪ್ಪು ಹೇಳಿರಿ: ಕೆಲವು ಸಂದರ್ಭಗಳಲ್ಲಿ, ಯೇಸುವಿನ ಶಿಷ್ಯರಾಗ ಬೇಕೆಂದಿರುವವರು ತಮ್ಮದೆಲ್ಲವನ್ನು ಬಿಟ್ಟುಬಿಟ್ಟು ಯೇಸುವನ್ನು ಹಿಂಬಾಲಿಸಬೇಕು.

***ಲೂಕ 14:33** – ಹಾಗೆಯೇ ನಿಮ್ಮಲ್ಲಿ ಯಾವನೇ ಆಗಲಿ ತನಗಿರುವದನ್ನೆಲ್ಲಾ ಬಿಟ್ಟುಬಿಡದೆ ಹೋದರೆ ಅವನು ತನ್ನ ಶಿಷ್ಯನಾಗಿರಲಾರನು.*

7. ಮತ್ತಾಯ 19:29 ಓದಿರಿ. ಸರಿ/ತಪ್ಪು ಹೇಳಿರಿ: ಯಾರು ಯೇಸುವಿನ ನಿಮಿತ್ತ ಮನೆಗಳು, ಅಣ್ಣತಮ್ಮಂದಿರು, ಅಕ್ಕತಂಗಿಯರು, ತಂದೆ, ತಾಯಿ, ಹೆಂಡತಿ, ಮಕ್ಕಳು, ಅಥವ ಹೊಲ ಇವುಗಳನ್ನು ಬಿಟ್ಟುಬಿಟ್ಟಿರುವವರಿಗೆ ಅನೇಕ ಪಾಲು ಹೆಚ್ಚಾಗಿ ಸಿಕ್ಕುವದು ಮತ್ತು ಅವರು ನಿತ್ಯಜೀವಕ್ಕೆ ಬಾಧ್ಯರಾಗುವರು.

***ಮತ್ತಾಯ 19:29** – ಮತ್ತು ನನ್ನ ಹೆಸರಿನ ನಿಮಿತ್ತ ಮನೆಗಳನ್ನಾಗಲಿ ಅಣ್ಣತಮ್ಮಂದಿರನ್ನಾಗಲಿ ಅಕ್ಕತಂಗಿಯರನ್ನಾಗಲಿ ತಂದೆಯನ್ನಾಗಲಿ ತಾಯಿಯನ್ನಾಗಲಿ ಮಕ್ಕಳನ್ನಾಗಲಿ ಭೂಮಿಯನ್ನಾಗಲಿ ಬಿಟ್ಟುಬಿಟ್ಟಿರುವವರೆಲ್ಲರಿಗೆ ಅನೇಕ ಪಾಲು ಹೆಚ್ಚಾಗಿ ಸಿಕ್ಕುವದು; ಮತ್ತು ಅವರು ನಿತ್ಯಜೀವಕ್ಕೆ ಬಾಧ್ಯರಾಗುವರು.*

8. ಅಪೊಸ್ತಲರ ಕೃತ್ಯಗಳು 14:22 ಓದಿರಿ. ಸರಿ/ತಪ್ಪು ಹೇಳಿರಿ: ಶಿಷ್ಯರು ಕ್ರಿಸ್ತನಂಬಿಕೆಯಲ್ಲಿ ಸ್ಥಿರವಾಗಿರಬೇಕು.

***ಅಪೊಸ್ತಲರ ಕೃತ್ಯಗಳು 14:22** – ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ ಎಚ್ಚರಿಕೆಯ ಮಾತನ್ನು ಹೇಳಿ ಕ್ರಿಸ್ತನಂಬಿಕೆಯಲ್ಲಿ ಸ್ಥಿರವಾಗಿರ್ರಿ ಎಂದು ಅವರನ್ನು ಧೈರ್ಯಗೊಳಿಸಿದರು.*

9. ಇಬ್ರಿಯರಿಗೆ 10:14 ಓದಿರಿ. ಸರಿ/ತಪ್ಪು ಹೇಳಿರಿ: ಶಿಷ್ಯತ್ವವನ್ನು ಒತ್ತಿಹೇಳುವ ಕೆಲವು ವಾಕ್ಯಭಾಗಗಳ ಕುರಿತಾಗಿ ಕೆಲವರಿಗೆ ಇರುವ ಆಕ್ಷೇಪವೇನೆಂದರೆ, "ಕ್ರೈಸ್ತರಾಗಲು" ನಮ್ಮಿಂದ ಯಾವುದೇ ಪ್ರಯತ್ನಗಳನ್ನು ಮಾಡುವ ಅಗತ್ಯವಿಲ್ಲ (ಅದು ಕೃಪೆಯ ನಿಮಿತ್ತ) ಆದರೆ "ಶಿಷ್ಯರಾಗಲು" ನಿಜವಾದ ಸಮರ್ಪಣೆ ಮತ್ತು ಬದ್ಧತೆ ಬೇಕಾಗುತ್ತದೆ. ನಿಜಸಂಗತಿಯೇನೆಂದರೆ, ಕ್ರಿಸ್ತನು ನಮ್ಮನ್ನು ವಿಮೋಚಿಸುವಾಗ ನಾವು ಏನನ್ನೂ ಮಾಡಬೇಕಾಗಿರಲಿಲ್ಲ, ಆದರೆ ಕ್ರಿಸ್ತನು ನಮ್ಮನ್ನು ಸಂಪೂರ್ಣವಾಗಿ ತನ್ನವರನ್ನಾಗಿರಲು ಕರೆದಿದ್ದಾನೆ.

***ಇಬ್ರಿಯರಿಗೆ 10:14** – ಪವಿತ್ರರಾಗುತ್ತಿರುವವನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.*

10. ಅಪೊಸ್ತಲರ ಕೃತ್ಯಗಳು 11:26 ಓದಿರಿ. ಸರಿ/ತಪ್ಪು ಹೇಳಿರಿ: ಕ್ರಿಸ್ತನು ಎರಡು ರೀತಿಯ ವಿಶ್ವಾಸಿಗಳನ್ನು ಕರೆಯಲಿಲ್ಲ – ಕೆಲವರು ಪ್ರಾಪಂಚಿಕರಾದ ಕ್ರೈಸ್ತರು ಕೆಲವರು ಶಿಷ್ಯರು. ವಾಸ್ತವವಾಗಿ, ಕ್ರೈಸ್ತರು ಮತ್ತು ಶಿಷ್ಯರು ಒಂದೇ ಆಗಿದ್ದಾರೆ.

***ಅಪೊಸ್ತಲರ ಕೃತ್ಯಗಳು 11:26*** *– ಆ ಮೇಲೆ ಅವರು ಪೂರಾ ಒಂದು ಪುರುಷ ಸಭೆಯವರ ಸಂಗಡ ಕೂಡಿದ್ದು ಬಹು ಜನರಿಗೆ ಉಪದೇಶಮಾಡಿದರು. ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು.*

11. ಮತ್ತಾಯ 28:19 ಓದಿರಿ. ಯೇಸುವು ಶಿಷ್ಯರಿಗೆ ಕೊಟ್ಟ ಅಪ್ಪಣೆಯು– ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು:

ಅ. ಶಿಷ್ಯರನ್ನಾಗಿ ಮಾಡಿರಿ

ಇ. ನನ್ನ ಮೇಲೆ ನಂಬಿಕೆಯಿಡುವಂತೆ ಮಾಡಿರಿ

***ಮತ್ತಾಯ 28:19–20*** *– ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ [20] ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.*

12. ಮತ್ತಾಯ 28:20 ಓದಿರಿ. ಸರಿ/ತಪ್ಪು ಹೇಳಿರಿ: ಯೇಸು ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವಂತೆ ವಿಶ್ವಾಸಿಗಳು ಇತರರಿಗೆ ಬೋಧಿಸಬೇಕು.

13. ಯೋಹಾನ 1:12 ಓದಿರಿ. ಸರಿ/ತಪ್ಪು ಹೇಳಿರಿ. ಯೇಸುವು ಅನೇಕ ವರಗಳನ್ನು ಕೊಟ್ಟನು (ಕ್ಷಮಾಪಣೆ, ನೀತಿನಿರ್ಣಯ ಮುಂತಾಗಿ) ಆದರೆ ಆತನನ್ನು ಸಂಪೂರ್ಣವಾಗಿ ಸ್ವೀಕರಿಸಬೇಕು.

***ಯೋಹಾನ 1:12*** *– ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.*

# ಉತ್ತರಗಳು

1. ಯೇಸುವು ಯಾರನ್ನೂ "ಕ್ರೈಸ್ತರಾಗಿರಿ" ಎಂದು ಕರೆಯಲಿಲ್ಲ, ಆದರೆ ಆತನು ಜನರನ್ನು ತನ್ನ "ಶಿಷ್ಯರಾಗಿರಿ" ಎಂದು ಕರೆದನು ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಸುವಾರ್ತೆಗಳನ್ನು (ಮತ್ತಾಯ, ಮಾರ್ಕ, ಲೂಕ, ಯೋಹಾನ) ಓದಿರಿ ಮತ್ತು ಒಂದು ಪ್ರತ್ಯೇಕವಾದ ಹಾಳೆಯಲ್ಲಿ, ಯೇಸುವು ತನ್ನ ಶಿಷ್ಯರಾಗಲು ಆಹ್ವಾನಿಸಿರುವ ವಾಕ್ಯಭಾಗಗಳನ್ನು ಬರೆಯಿರಿ.

2. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ, ಜನರನ್ನು "ಕ್ರೈಸ್ತರಾಗುವುದಕ್ಕೆ" ಕರೆಯಲಿಲ್ಲ ಬದಲಾಗಿ "ಶಿಷ್ಯರಾಗುವುದಕ್ಕೆ" ಕರೆಯಲಾಗಿದೆ. ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ಓದಿರಿ ಮತ್ತು ಒಂದು ಪ್ರತ್ಯೇಕವಾದ ಹಾಳೆಯಲ್ಲಿ, ಜನರನ್ನು ಶಿಷ್ಯರಾಗುವುದಕ್ಕೆ ಕರೆದ ವಾಕ್ಯಭಾಗಗಳನ್ನು ಪಟ್ಟಿಮಾಡಿರಿ.

3. ದೇವರ ವಾಕ್ಯದಲ್ಲಿ "ಶಿಷ್ಯ/ಶಿಷ್ಯರು" ಎನ್ನುವ ಪದವು 273 ಸಾರಿ ಉಪಯೋಗಿಸಲ್ಪಟ್ಟಿದೆ. ಇಡೀ ಬೈಬಲ್‌ನಲ್ಲಿ "ಕ್ರೈಸ್ತ" ಎನ್ನುವ ಪದವು ಕೇವಲ ಮೂರು ಬಾರಿ ಉಪಯೋಗಿಸಲ್ಪಟ್ಟಿದೆ. ಬೈಬಲ್‌ನಲ್ಲಿ ಕ್ರೈಸ್ತ/ರು ಎನ್ನುವ ಪದವು ಎಲ್ಲೆಲ್ಲಿ ಬಳಕೆಯಾಗಿದೆ ಎನ್ನುವುದನ್ನು ಒಂದು ಹಾಳೆಯಲ್ಲಿ ಬರೆಯಿರಿ.

   ***ಅಪೊಸ್ತಲರ ಕೃತ್ಯಗಳು 11:26; ಮತ್ತು 1 ಪೇತ್ರ 4:16***

4. ಮತ್ತಾಯ 10:25 ಓದಿರಿ. ಈ ವಚನದ ಪ್ರಕಾರ ಶಿಷ್ಯರೆಂದರೆ ಯಾರು?

   ***ಗುರುವಿನಂತೆ ಆಗುವವನೇ ಶಿಷ್ಯ***

5. ಲೂಕ 14:26 ಓದಿರಿ. ಸರಿ/ತಪ್ಪು ಹೇಳಿರಿ: ಯೇಸುವಿನ ಶಿಷ್ಯರೆನಿಸಿಕೊಳ್ಳುವವರು ಮತ್ತೊಬ್ಬರಿಗಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಣೆ ಮಾಡಿಕೊಳ್ಳುವರು.

   ***ಸರಿ***

6. ಲೂಕ 14:33 ಓದಿರಿ. ಸರಿ/ತಪ್ಪು ಹೇಳಿರಿ: ಕೆಲವು ಸಂದರ್ಭಗಳಲ್ಲಿ, ಯೇಸುವಿನ ಶಿಷ್ಯರಾಗ ಬೇಕೆಂದಿರುವವರು ತಮ್ಮದೆಲ್ಲವನ್ನು ಬಿಟ್ಟುಬಿಟ್ಟು ಯೇಸುವನ್ನು ಹಿಂಬಾಲಿಸಬೇಕು.

   ***ಸರಿ.***

7. ಮತ್ತಾಯ 19:29 ಓದಿರಿ. ಸರಿ/ತಪ್ಪು ಹೇಳಿರಿ: ಯೇಸುವಿನ ನಿಮಿತ್ತ ಮನೆಗಳು, ಅಣ್ಣತಮ್ಮಂದಿರು, ಅಕ್ಕತಂಗಿಯರು, ತಂದೆ, ತಾಯಿ, ಹೆಂಡತಿ, ಮಕ್ಕಳು, ಅಥವ ಹೊಲ ಇವುಗಳನ್ನು ಬಿಟ್ಟುಬಿಟ್ಟಿರುವವರಿಗೆ ಅನೇಕ ಪಾಲು ಹೆಚ್ಚಾಗಿ ಸಿಕ್ಕುವದು ಮತ್ತು ಅವರು ನಿತ್ಯಜೀವಕ್ಕೆ ಬಾಧ್ಯರಾಗುವರು.

*ಸರಿ*

8. ಅಪೊಸ್ತಲರ ಕೃತ್ಯಗಳು 14:22 ಓದಿರಿ. ಸರಿ/ತಪ್ಪು ಹೇಳಿರಿ: ಶಿಷ್ಯರು ಕ್ರಿಸ್ತನಂಬಿಕೆಯಲ್ಲಿ ಸ್ಥಿರವಾಗಿರಬೇಕು.

*ಸರಿ.*

9. ಇಬ್ರಿಯರಿಗೆ 10:14 ಓದಿರಿ. ಸರಿ/ತಪ್ಪು ಹೇಳಿರಿ: ಶಿಷ್ಯತ್ವವನ್ನು ಒತ್ತಿಹೇಳುವ ಕೆಲವು ವಾಕ್ಯಭಾಗಗಳ ಕುರಿತಾಗಿ ಕೆಲವರಿಗೆ ಇರುವ ಆಕ್ಷೇಪವೇನೆಂದರೆ, "ಕ್ರೈಸ್ತರಾಗಲು" ನಮ್ಮಿಂದ ಯಾವುದೇ ಪ್ರಯತ್ನಗಳನ್ನು ಮಾಡುವ ಅಗತ್ಯವಿಲ್ಲ (ಅದು ಕೃಪೆಯ ನಿಮಿತ್ತ) ಆದರೆ "ಶಿಷ್ಯರಾಗಲು" ನಿಜವಾದ ಸಮರ್ಪಣೆ ಮತ್ತು ಬದ್ಧತೆ ಬೇಕಾಗುತ್ತದೆ. ನಿಜಸಂಗತಿಯೇನೆಂದರೆ, ಕ್ರಿಸ್ತನು ನಮ್ಮನ್ನು ವಿಮೋಚಿಸುವಾಗ ನಾವು ಏನನ್ನೂ ಮಾಡಬೇಕಾಗಿರಲಿಲ್ಲ, ಆದರೆ ಕ್ರಿಸ್ತನು ನಮ್ಮನ್ನು ಸಂಪೂರ್ಣವಾಗಿ ತನ್ನವರನ್ನಾಗಿರಲು ಕರೆದಿದ್ದಾನೆ.

*ಸರಿ.*

10. ಅಪೊಸ್ತಲರ ಕೃತ್ಯಗಳು 11:26 ಓದಿರಿ. ಸರಿ/ತಪ್ಪು ಹೇಳಿರಿ: ಕ್ರಿಸ್ತನು ಎರಡು ರೀತಿಯ ವಿಶ್ವಾಸಿಗಳನ್ನು ಕರೆಯಲಿಲ್ಲ – ಕೆಲವರು ಪ್ರಾಪಂಚಿಕರಾದ ಕ್ರೈಸ್ತರು ಕೆಲವರು ಶಿಷ್ಯರು. ವಾಸ್ತವವಾಗಿ, ಕ್ರೈಸ್ತರು ಮತ್ತು ಶಿಷ್ಯರು ಒಂದೇ ಆಗಿದ್ದಾರೆ.

*ಸರಿ.*

11. ಮತ್ತಾಯ 28:19 ಓದಿರಿ. ಯೇಸುವು ಶಿಷ್ಯರಿಗೆ ಕೊಟ್ಟ ಅಪ್ಪಣೆಯು–ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು:

*ಅ. ಶಿಷ್ಯರನ್ನಾಗಿ ಮಾಡಿರಿ*

12. ಮತ್ತಾಯ 28:20 ಓದಿರಿ. ಸರಿ/ತಪ್ಪು ಹೇಳಿರಿ: ಯೇಸು ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವಂತೆ ವಿಶ್ವಾಸಿಗಳು ಇತರರಿಗೆ ಬೋಧಿಸಬೇಕು.

*ಸರಿ.*

13. ಯೋಹಾನ 1:12 ಓದಿರಿ. ಸರಿ/ತಪ್ಪು ಹೇಳಿರಿ. ಯೇಸುವು ಅನೇಕ ವರಗಳನ್ನು ಕೊಟ್ಟನು (ಕ್ಷಮಾಪಣೆ, ನೀತಿನಿರ್ಣಯ ಮುಂತಾಗಿ) ಆದರೆ ಆತನನ್ನು ಸಂಪೂರ್ಣವಾಗಿ ಸ್ವೀಕರಿಸಬೇಕು.

*ಸರಿ.*

# ಪಾಠ 15

# ನಿಮ್ಮ ಸಾಕ್ಷಿಯನ್ನು ಹೇಗೆ ಉಪಯೋಗಿಸಬೇಕು

***ಡ್ಯೂಣ್ ಕ್ರೊ***

ನೀವು ನಿಮ್ಮ ವೈಯಕ್ತಿಕ ಸಾಕ್ಷಿಯನ್ನು ಹೇಗೆ ಉಪಯೋಗಿಸಬೇಕೆಂದು ನಾನು ನಿಮಗೆ ತಿಳಿಸಿಕೊಡುತ್ತೇನೆ. ಅಪೊಸ್ತಲರ ಕೃತ್ಯಗಳು 5:42, *"ಪ್ರತಿದಿನ ಎಡೆಬಿಡದೆ ದೇವಾಲಯದಲ್ಲಿಯೂ ಮನೆಮನೆಯಲ್ಲಿಯೂ ಉಪದೇಶಮಾಡುತ್ತಾ ಕ್ರಿಸ್ತನಾದ ಯೇಸುವಿನ ಶುಭವರ್ತಮಾನವನ್ನು ಸಾರುತ್ತಾ ಇದ್ದನು."* ಆದಿ ಕ್ರೈಸ್ತಸಭೆಯು ಪ್ರತಿದಿನ ದೇವಾಲಯದಲ್ಲಿಯೂ ಮನೆಮನೆಗಳಲ್ಲಿಯೂ ಕೂಡುತ್ತಾ ಯೇಸುವೇ ಕ್ರಿಸ್ತನೆಂದು ಸಾರುತ್ತ ಬೋಧಿಸುತ್ತ ಇದ್ದಿತು ಎನ್ನುವುದನ್ನು ಗುರುತಿಸಿರಿ. ಅನೇಕರು ಮನೆಯಿಂದ ಮನೆಗೆ ಬಾಗಿಲಿನಿಂದ ಬಾಗಿಲಿಗೆ ಹೋಗುವ ರೀತಿಯು ಅಷ್ಟೊಂದು ಸಾಧುವಲ್ಲ ಅಥವ ಸಮಂಜಸವಲ್ಲ ಎಂದುಕೊಳ್ಳುತ್ತಾರೆ. ಆದರೆ ಹೊರಗೆ ಹೋಗುವುದು, ಶಿಷ್ಯತ್ವಕ್ಕೋಸ್ಕರ ಬಾಗಿಲುಗಳನ್ನು ತೆರೆಯುವುದು ಮತ್ತು ಜನರು ಕ್ರಿಸ್ತನ ಕಡೆಗೆ ತಿರುಗಿಕೊಂಡು ಮಾರ್ಪಾಟು ಹೊಂದುವುದರ ಕುರಿತು ನಾವು ಕಲಿತುಕೊಂಡದ್ದನ್ನು ನಿಮ್ಮ ಬಳಿ ಹೇಳಲು ಇಷ್ಟಪಡುತ್ತೇನೆ.

ಹೀಗೆ ಮಾಡುವುದು ಕಷ್ಟವೆಂದು ನಿಮಗೆ ಯಾರಾದರೂ ಹೇಳಿದ್ದರೂ ಅದು ನಿಜವಲ್ಲ, ಮತ್ತು ಅಪೊಸ್ತಲನಾದ ಪೌಲನು ಕ್ರಿಸ್ತನವರಲ್ಲದವರ ಮುಂದೆ ಮೂರು ಬಾರಿ ತನ್ನ ಸಾಕ್ಷಿಯನ್ನು ಹೇಳಿದ್ದನ್ನು ನಾನು ದೇವರವಾಕ್ಯದಲ್ಲಿ ನೋಡಿದ್ದೇನೆ. ಅಪೊಸ್ತಲರ ಕೃತ್ಯಗಳು 9,22 ಮತ್ತು 26ರಲ್ಲಿ ಅವನು ಅವಿಶ್ವಾಸಿಗಳ ಮುಂದೆ ಮಾತನಾಡುವಾಗ ತನ್ನ ಸಾಕ್ಷಿ, ತನ್ನ ಅನುಭವ ಮತ್ತು ತನಗಾದದ್ದನ್ನೆಲ್ಲ ವಿವರಿಸಿದನು. "ಪ್ರಾರ್ಥನಾ ನಡಿಗೆ"ಯು ಯೇಸುಕ್ರಿಸ್ತನ ಸಂದೇಶವನ್ನು ಇತರರಿಗೆ ತಿಳಿಸುವ ಅತ್ಯುತ್ತಮ ಮಾರ್ಗಗಳಲ್ಲಿ ಒಂದೆಂದು ನಾವು ಕಂಡುಕೊಂಡಿದ್ದೇವೆ. ನಾವು ಒಂದು ಮನೆಯ ಬಾಗಿಲಿಗೆ ಹೋಗಿ, ಬಾಗಿಲು ತಟ್ಟಿ ಅವರಿಗೆ, "ನಾವು ಈ ಪ್ರದೇಶದಲ್ಲಿರುವ ಜನರಿಗಾಗಿ ಪ್ರಾರ್ಥನೆ ಮಾಡುತ್ತಿದ್ದೇವೆ. ದೇವರು ಪ್ರಾರ್ಥನೆ ಕೇಳುತ್ತಾನೆ ಮತ್ತು ಪ್ರಾರ್ಥನೆಗೆ ಉತ್ತರಿಸುತ್ತಾನಾದ್ದರಿಂದ ನಿಮ್ಮ ಮನೆಯಲ್ಲಿ ಏನಾದರೂ ಸಮಸ್ಯೆಯಿದ್ದರೆ–ಅನಾರೋಗ್ಯ ಅಥವ ಇನ್ಯಾವುದೇ ಸಮಸ್ಯೆಯಿದ್ದು – ನಾವು ನಿಮಗಾಗಿ ಪ್ರಾರ್ಥಿಸಬೇಕೆಂದು ನೀವು ಬಯಸುವಿರಾದರೆ ನಾವು ಪ್ರಾರ್ಥಿಸುತ್ತೇವೆ" ಎಂದು ಹೇಳುತ್ತಿದ್ದೆವು. ಕೆಲವೊಮ್ಮೆ ಅವರು, "ಹೌದು, ನನಗೆ ಸಮಸ್ಯೆಯಿದೆ" ಎಂದು ಹೇಳಿ ನಾವು ಅವರಿಗೋಸ್ಕರ ಪ್ರಾರ್ಥನೆ ಮಾಡುವಂತೆ ಕೇಳಿಕೊಳ್ಳುತ್ತಿದ್ದರು; ಕೆಲವು ಸಲ ಅವರು ಸ್ವಲ್ಪ

ಗಲಿಬಿಲಿಗೊಂಡಂತೆ ಕಂಡುಬಂದು, "ಇಲ್ಲ, ಈ ಸದ್ಯದಲ್ಲಿ ನಮಗೆ ಯಾವುದೇ ಪ್ರಾರ್ಥನಾ ಮನವಿಗಳಿಲ್ಲ" ಎನ್ನುತ್ತಿದ್ದರು. ಆಗ ನಾವು ಅವರಿಗೆ ನಮ್ಮ ಸ್ವಂತ ಸಾಕ್ಷಿಯನ್ನು ಹೇಳುತ್ತಿದ್ದೆವು.

ನಾನು ಹೀಗೆ ಹೇಳಿದೆ, "ನಿಮಗೆ ಮಕ್ಕಳಿರುವರೆಂದು ತಿಳಿಯುತ್ತೇನೆ. ನನಗೆ ಮೂರು ಮಕ್ಕಳಿರುವರು. 14ನೇ ಡಿಸೆಂಬರ್ 1981ರಂದು, ನನಗೆ ಅವಳಿ ಹೆಣ್ಣುಮಕ್ಕಳು ಜನಿಸಿದರು. ಅವುಗಳಲ್ಲಿ ಎರಡನೆಯದು ಹುಟ್ಟುವಾಗಲೇ ಸತ್ತಿತ್ತು" ಅನ್ನುತ್ತಿದ್ದಂತೆ ಅವರು, "ಓ, ಬಹಳ ದುಃಖಕರವಾದ ವಿಷಯ" ಎಂದರು. ಆಗ ನಾನು, "ವ್ಯಸನಪಡುವ ಅವಶ್ಯಕತೆಯಿಲ್ಲ. ಪೂರ್ತಿ ವಿಷಯ ಹೇಳುತ್ತೇನೆ ಕೇಳಿರಿ" ಎಂದು ಪೂರ್ತಿಯಾಗಿ ಹೇಳತೊಡಗಿದೆ. "ಎರಡನೆಯ ಮಗಳು ಕಾಲು ಮುಂದಾಗಿ ಹುಟ್ಟಿದಳು. ಹೆರಿಗೆಯಾಗುವಾಗ ಅವಳಿಗೆ ಸಾಕಷ್ಟು ಆಮ್ಲಜನಕ ಸಿಗದಾಗಿತ್ತು. ಆದ್ದರಿಂದಲೇ ಆಕೆ ಸತ್ತು ಹುಟ್ಟಿದಳು."

ಸೂಲಗಿತ್ತಿಯು ಆಕೆಯನ್ನು ಎತ್ತಿಕೊಂಡು, ಕೈಯಿಂದ ಬಲವಾಗಿ ಹೊಡೆದು, ಆಕೆಯ ಶ್ವಾಸಕೋಶದೊಳಗೆ ನೀರಿನಂತ ದ್ರವವೇನಾದರೂ ತುಂಬಿಕೊಂಡಿರಬಹುದೆಂದು suction ಮಾಡಿ ನೋಡಿದಳು. ಕೊನೆಗೆ ಫಲಕಾಣದೆ ಕೈಚೆಲ್ಲಿದಳು. ನಾನು ಇತರ ಎಲ್ಲ ತಂದೆಗಳಂತೆ ಹತಾಶನಾದೆ. ನನ್ನ ಮಗಳು ಸತ್ತು ಹೋಗಿದ್ದಳು–ನಾನೇನು ಮಾಡಬಲ್ಲೆ? ಈ ಸಂದರ್ಭದಲ್ಲಿ, ನಾನು ಬಾಗಿಲಿನ ಬಳಿಯಲ್ಲಿ ನಿಂತ ಜನರಿಗೆ, "ನೀವು ಬೈಬಲ್ ಓದಿರುವಿರಾ ಎಂದು ಕೇಳಬಯಸುತ್ತೇನೆ" ಎಂದಾಗ ಅವರು, "ಅಲ್ಪಸ್ವಲ್ಪ ಓದಿದ್ದೇನೆ" ಎಂದೋ ಅಥವ "ಇಲ್ಲ, ನಾನೆಂದೂ ಓದಿಲ್ಲ" ಎನ್ನಬಹುದು. ಆಗ ನಾನು, "ನಾನು ಹೀಗೆ ನಿಮ್ಮನ್ನು ಕೇಳಲು ಕಾರಣವೇನೆಂದರೆ, ಬೈಬಲ್‌ನಲ್ಲಿ ಅ.ಕೃ 10:38ರಲ್ಲಿ, ದೇವರು ಯೇಸುವಿನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು ಎಂದು ಬರೆದದೆ. ಏನು ನಡೆಯತೆನ್ನುವುದನ್ನು ನಾನು ನಿಮಗೆ ಹೇಳುತ್ತೇನೆ. ನೀವು ನಂಬಬಹುದು ಇಲ್ಲವೆ ಬಿಡಬಹುದು, ಆದರೆ ನನ್ನ ಮಗು ಸತ್ತು ಹೋಗಿದ್ದದ್ದು ನಿಜ. ಮತ್ತು ಅದನ್ನು ಸಮಾಧಿ ಮಾಡುವ ವಿಷಯದಲ್ಲಿ ನಾನು ಯೋಚಿಸುತ್ತಿದ್ದೆನು. ನಾನು ಅವಳನ್ನು ಸ್ವಲ್ಪಸಮಯ ಹಿಡಿದುಕೊಳ್ಳಬೇಕು ಎಂದು ನನ್ನಷ್ಟಕ್ಕೆ ನಾನಂದುಕೊಂಡೆನು. ನಾನು ಅವಳನ್ನು ಎತ್ತಿಕೊಳ್ಳಲು ಹೋದಾಗ, ಅವಳ ಸುತ್ತಲೂ ಒಂದು ರೀತಿಯ ಕರಾಳ ಛಾಯೆ ಕಂಡಿತು, ಬೈಬಲ್ ಇದನ್ನು ದುರಾತ್ಮ ಎಂದು ಕರೆಯುತ್ತದೆ. ಅದು ನನ್ನ ಮೇಲೆ ಎರಗಿದಂತಾಗಿ ಕ್ಷಣಕಾಲ ಸ್ತಬ್ಧನಾದೆ. ಕೂಡಲೆ, ನಾನು ಹೇಳಿದೆ, "ಅಶುದ್ಧ ಆತ್ಮವೇ, ಈ ಕೂಡಲೆ ಈ ಮಗುವನ್ನು ಬಿಟ್ಟು ತೊಲಗು, ಮತ್ತು ಈ ಮಗುವಿನಲ್ಲಿ ಜೀವವು ಪ್ರವೇಶಿಸಲಿ ಎಂದು ಯೇಸುವಿನ ನಾಮದಲ್ಲಿ ಅಪ್ಪಣೆ ಕೊಡುತ್ತೇನೆ'. ಉಸಿರಾಡದಿದ್ದ ಆ ಮಗುವು, ಒಮ್ಮೆಲೆ ಉಸಿರೆಳೆದುಕೊಂಡಂತೆ ಮಾಡಿ ಮತ್ತೆ ಉಸಿರಾಡುವುದನ್ನು ನಿಲ್ಲಿಸಿತು. ನಾನು ತಿರುಗಿ ಹೇಳಿದೆ, 'ಯೇಸು ಕ್ರಿಸ್ತನ ನಾಮದಲ್ಲಿ, ಅಶುದ್ಧ ಆತ್ಮವೇ ನಿನಗೆ ಅಪ್ಪಣೆ ಕೊಡುತ್ತೇನೆ, ಈ ಕೂಡಲೇ ನೀನು ಈ ಮಗುವನ್ನು ಬಿಟ್ಟು ತೊಲಗು ಮತ್ತು ಜೀವವು ಈ ಮಗುವಿನಲ್ಲಿ ಪ್ರವೇಶಿಸಲಿ!' ಈ ಬಾರಿ ಮಗಳು ಅನೇಕ ಬಾರಿ ನಿಡಿದಾದ ಉಸಿರೆಳೆದುಕೊಂಡು ಸರಾಗವಾಗಿ ಉಸಿರಾಡತೊಡಗಿದಳು."

ನಾನು ಮಾತನಾಡುತ್ತಿರುವ ವ್ಯಕ್ತಿಯ ಹೆಸರಿಡಿದು ಹೀಗೆ ಹೇಳಿದೆನು, "ನಿಮಗೆ ಗೊತ್ತೇ, ಒಬ್ಬ ವ್ಯಕ್ತಿಗೆ ಮೂರು ನಿಮಿಷಗಳ ಕಾಲ ಮೆದುಳಿಗೆ ಆಮ್ಲಜನಕದ ಸರಬರಾಜಿಲ್ಲದಿದ್ದರೆ ಅವರ ಮೆದುಳು ನಿಷ್ಕ್ರಿಯಗೊಳ್ಳುತ್ತದೆ. ಆದರೆ ನನ್ನ ಮಗಳು ಎಲ್ಲ ವಿಧದಲ್ಲಿಯೂ ಸಂಪೂರ್ಣವಾಗಿ ಆರೋಗ್ಯವಾಗಿದ್ದಾಳೆ. ದೇವರು ಅವಳ ಜೀವನದಲ್ಲಿ ಏನು ಮಾಡಿದನೆಂದು ಹೇಳಬೇಕೆನ್ನುವ ಆಶೆಯಿಂದ ನಾವು ಅವಳಿಗೆ 'ವೀಟಾ' ಎಂದು ಹೆಸರಿಟ್ಟೆವು. ಲ್ಯಾಟೀನ್ ಭಾಷಯಲ್ಲಿ ವೀಟಾ ಎಂದರೆ 'ಜೀವ', ದೇವರು ಅವಳಿಗೆ ಪುನರ್‌ಜೀವ ನೀಡಿದನು. ಅಂದಿನಿಂದ, ನಾನು ಅನೇಕ ಬಾರಿ ಬೈಬಲ್ ಓದುತ್ತೇನೆ, ಮತ್ತು ಅದರಿಂದ ನಾನು ತಿಳಿದುಕೊಂಡಿರುವುದೇನೆಂದರೆ: ನನ್ನ ಮಗುವಿನ ಮೇಲೆ ಅಶುದ್ಧ ಆತ್ಮವಿದ್ದಂತೆ ಕತ್ತಲೆಯ ರಾಜ್ಯವೊಂದಿದೆ, ಅಲ್ಲಿ ಸೈತಾನನು ಆಡಳಿತ ನಡೆಸುತ್ತಾನೆ, ಅದರಂತೆ ದೇವರ ಮಗನ ರಾಜ್ಯವು ಸಹ ಇರುತ್ತದೆ.

"ಯೇಸುವು ಈ ಲೋಕಕ್ಕೆ ಬಂದಾಗ, ಆತನು ಜನರನ್ನು, ಮಾನಸಾಂತರ ಮತ್ತು ನಂಬಿಕೆಯ ಮೂಲಕ – ಪಾಪಕ್ಷಮೆಯನ್ನು ಹೊಂದಿಕೊಂಡು ಯೇಸುವನ್ನು ಹಿಂಬಾಲಿಸಿ – ಕತ್ತಲೆಯ ರಾಜ್ಯದಿಂದ ತನ್ನ ರಾಜ್ಯಕ್ಕೆ ಬರುವಂತೆ ಕರೆಯತೊಡಗಿದನು. ನೀವು ಏನು ನಂಬುತ್ತೀರೋ ನನಗೆ ತಿಳಿಯದು, ಆದರೆ ನಾನು ನನ್ನ ಕುಟುಂಬದಲ್ಲಿ ಮತ್ತು ನನ್ನ ಜೀವನದಲ್ಲಿ ನಡೆದ ಸತ್ಯಸಂಗತಿಯನ್ನು ನಿಮ್ಮ ಮುಂದೆ ಹೇಳಿದ್ದೇನೆ. ನಾವು ನಿಮ್ಮ ಮನೆಯ ಬಾಗಿಲಿಗೆ ಬಂದಿರುವ ನಿಜವಾದ ಕಾರಣವನ್ನು ತಿಳಿಸುವೆನು. ಯೇಸುವು ನಮಗೆ, ಹೊರಟುಹೋಗಿ ಶಿಷ್ಯರನ್ನು ಮಾಡಬೇಕೆಂದು ಹೇಳಿದನು. ಅನೇಕ ಜನರು ಬಹಳ ಬ್ಯುಸಿಯಾಗಿರುವುದರಿಂದ ಅವರಿಗೆ ಚರ್ಚ್‌ಗೆ ಹೋಗಲು ಸಮಯವಿರುವುದಿಲ್ಲ ಅಥವ ಹೋಗಲು ಮನಸ್ಸಿರುವುದಿಲ್ಲ. ಚರ್ಚ್‌ನಲ್ಲಿ ಕುಳಿತಾಗ ನಿಮಗೇನಾದರೂ ಪ್ರಶ್ನೆಯಿದ್ದರೆ ನೀವು ಕೈಯೆತ್ತಿ, 'ಪಾಸ್ಟರ್, ನೀವು ಈಗಲೇ ಹೇಳಿದ ಮಾತಿನ ಅರ್ಥವೇನು?' ಎಂದು ಕೇಳಲಾಗುವುದಿಲ್ಲ. ಆದ್ದರಿಂದ ನಾವು ನಿಮ್ಮ ಮನೆ ಬಾಗಿಲಿಗೆ ಬಂದಿದ್ದೇವೆ." ಕೇವಲ ಹತ್ತು ನಿಮಿಷಗಳಲ್ಲಿ, ಅವರಿಗೆ ನಾವು ದೇವರ ವಾಕ್ಯದಿಂದ ಘನವಾದ ಬೋಧನೆ ಹೇಳಲು ಸಾಧ್ಯವಾಗುತ್ತದೆ. ಮತ್ತು ನಾವು ದೇವರವಾಕ್ಯದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುತ್ತ, ಎಲ್ಲರಿಗೂ ಅರ್ಥವಾಗಿದೆಯೆನ್ನುವುದನ್ನು ಖಚಿತ ಮಾಡಿಕೊಳ್ಳುತ್ತೇವೆ. ಇದೊಂದು ಸಂವಾದದಂತೆ ನಡೆಯುತ್ತದೆ. ನಾವು ಅವರಿಗೆ ಉಪದೇಶ ಮಾಡುವುದಿಲ್ಲ ಆದರೆ ಕೆಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಅವರಾಗಿಯೇ ಅದನ್ನು ಕಂಡುಹಿಡಿದುಕೊಳ್ಳುವಂತೆ ಮಾಡುತ್ತೇವೆ.

"ನಿಮಗೆ ಆಸಕ್ತಿಯಿದೆಯೋ? ಇದ್ದಲ್ಲಿ ನಿಮಗೆ ಅನುಕೂಲಕರವಾದ ಸಮಯವೊಂದನ್ನು ಗೊತ್ತುಮಾಡೋಣ, ಮತ್ತು ನಿಮ್ಮ ಮನಯಲ್ಲಿಯೇ ಕುಳಿತು ಪಾಠವನ್ನು ಅಧ್ಯಯನ ಮಾಡೋಣ. ಮೊದಲನೆಯ ಪಾಠದಿಂದ ನಿಮಗೆ ಲಾಭವಾಗದಿದ್ದರೆ, ನಿಮಗೆ ಯಾವುದೇ ರೀತಿಯ ಸಹಾಯ, ಪ್ರೋತ್ಸಾಹ, ಇಲ್ಲವೇ ನಿಮ್ಮನ್ನು ಬಲಪಡಿಸುವಂತದ್ದು ಇಲ್ಲದಿರುವುದಾದರೆ ನೀವೆಂದೂ ನಮ್ಮ ಮುಖ ನೋಡುವ ಅಗತ್ಯವಿರುವುದಿಲ್ಲ. ನಿಮಗೆ ತೊಂದರೆ ಕೊಡಬೇಕು, ನಿಮ್ಮನ್ನು ಯಾವುದೇ ಸಭೆ ಅಥವ ಸಂಸ್ಥೆಗೆ ಸೇರಿಸಬೇಕು ಎನ್ನುವಂತ ಯಾವುದೇ ಉದ್ದೇಶ ನಮಗಿಲ್ಲ. ಕೇವಲ, ಯೇಸುಕ್ರಿಸ್ತನು ನಿಮಗಾಗಿ ಏನು ಮಾಡಿದ್ದಾನೆ

ಎಂದು ತಿಳಿಸುವುದಕ್ಕೆ ಮತ್ತು ನೀವಾಗಿ ದೇವರ ವಾಕ್ಯವನ್ನು ತಿಳಿದುಕೊಳ್ಳುವಂತೆ ಸಹಾಯ ಮಾಡಬೇಕೆಂದು ನಾವು ನಿಮ್ಮಲ್ಲಿಗೆ ಬಂದಿದ್ದೇವೆ. ಬೈಬಲ್‌ನಲ್ಲಿರುವ ಅನೇಕ ವಿಷಯಗಳನ್ನು ಸಂಪೂರ್ಣವಾಗಿ ಗ್ರಹಿಸಲು ಅಥವ ತಿಳಿದುಕೊಳ್ಳಲು ಸಾಧ್ಯವಾಗದಿರಬಹುದು, ಆದರೆ ನಾವು ನಿಮಗೆ ಒಂದು ಚಿಕ್ಕ ಅಧ್ಯಯನವನ್ನು ನೀಡುತ್ತೇವೆ. ನಿಮಗೆ ಆಸಕ್ತಿಯಿದೆಯೇ?" ಅನೇಕರು, "ನಮಗೆ ಆಸಕ್ತಿಯಿದೆ" ಎಂದು ಉತ್ತರಿಸಿದ್ದಾರೆ. ನಾವು ಅಂಥವರ ಮನೆಗೆ ಹೋಗಿ ಈ ಪಾಠಗಳನ್ನು ಪ್ರಾರಂಭಿಸಿದ್ದೇವೆ. ನಾವು "ಮೈಕ್ರೋವೇವ್ ಇವ್ಯಾಂಜೆಲಿಸಂ ಅಥವ ಧಿಡೀರ್ ಸುವಾರ್ತಾಸೇವೆ" ಮಾಡಲು ಇಲ್ಲಿ ಇಲ್ಲ. ಜನರನ್ನು ಒತ್ತಾಯಪಡಿಸಿ, ಅವರಿಗೆ ತಾವು ಏನು ಮಾಡುತ್ತಿದ್ದೇವೆಂದು ತಿಳಿಯದೆ ಇರುವಾಗಲೂ ಅವರಿಂದ ಒಂದು ಪ್ರಾರ್ಥನೆಯನ್ನು ಮಾಡಿಸಿಬಿಡಬೇಕು ಎನ್ನುವುದು ನಮ್ಮ ಮನೋಧರ್ಮವಲ್ಲ. ನಾವು ಶಿಷ್ಯತ್ವದ ಪಾಠಗಳನ್ನು ಉಪಯೋಗಿಸಿ ಅವರು ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನನ್ನು ಅರ್ಥಮಾಡಿಕೊಳ್ಳುವಂತೆ ಸಹಾಯ ಮಾಡುತ್ತೇವೆ.

ನಾನು ಒಬ್ಬ ಪಾಸ್ಟರ್‌ರವರಿಗೆ ಶಿಷ್ಯತ್ವದ ಪಾಠಗಳ ಕುರಿತು ಹೇಳಿದೆ. ಆಗ ಅವರು, "ಡಾನ್, ಮೊದಲನೆಯ ಪಾಠ ಮುಗಿದ ನಂತರ ಏನಾಗುತ್ತದೆ?" ಎಂದು ಕೇಳಿದರು. ಮೊದಲನೆಯ ಪಾಠದ ನಂತರ, ಯೇಸುಕ್ರಿಸ್ತನ ಕರೆಗೆ ಹೇಗೆ ಪ್ರತಿಕ್ರಿಯಿಸಬೇಕು ಮತ್ತು ಆತನ ಕೃಪೆಯನ್ನೂ, ದಯೆಯನ್ನೂ ಹೇಗೆ ಸ್ವೀಕರಿಸಬೇಕು ಎನ್ನುವುದು ಆ ವ್ಯಕ್ತಿಗೆ ಮನವರಿಕೆಯಾಗುತ್ತದೆ. ನಾವು ಒತ್ತಾಯ ಹೇರಿ ಮಾರಾಟ ಮಾಡುವ ಮಾರಾಟಗಾರರಂತಲ್ಲ. ಅದು ನಮ್ಮ ಶೈಲಿಯಲ್ಲ, ಆದರೆ ಆ ವ್ಯಕ್ತಿ ಮೊದಲನೆಯ ಪಾಠ ಮಾಡುತ್ತಿರುವಾಗಲೇ ತಾನು ಹೃದಯಪೂರ್ವಕವಾಗಿ ಏನು ಮಾಡಬೇಕೆಂದು ಮನವರಿಕೆ ಆಗಿಬಿಡುತ್ತದೆ. ಆಗ ಅವರು, "ಹಾಗಿದ್ದಲ್ಲಿ, ಪಾಠ 15 ಮುಗಿಸಿದಾಗ ಏನಾಗುತ್ತದೆ?" ಎಂದು ಕೇಳಿದರು. ನಾನು, "ಪಾಠ 15 ಮುಗಿದ ನಂತರ, ಒಬ್ಬ ವ್ಯಕ್ತಿ ಇನ್ನೂ ನಮ್ಮೊಂದಿಗೆ ಇರುವುದಾದರೆ, ಅವರು ತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ನೀರಿನಲ್ಲಿ ದೀಕ್ಷಾಸ್ನಾನ ಪಡೆದು ಪವಿತ್ರಾತ್ಮನ ಅಭಿಷೇಕ ಹೊಂದಿರುತ್ತಾನೆ. ಅವರು ಈ ರೀತಿಯಾಗಿ ಮಾರ್ಪಾಟು ಹೊಂದಲು ಪಾಠ 15 ಮುಗಿಸಬೇಕಾಗಿಲ್ಲ, ಪಾಠ 6 ಮುಗಿಸುವಾಗಲೇ ಅವರು ಮಾನಸಾಂತರ ಹೊಂದಿರುತ್ತಾರೆ."

ಮತ್ತಾಯ 28ರಲ್ಲಿ, ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ ಎಂದು ಹೇಳಿದನು. ಶಿಷ್ಯರನ್ನಾಗಿ ಮಾಡುತ್ತಿರುವಾಗಲೇ, ಅಲ್ಲಿರುವ ಅವಿಶ್ವಾಸಿಗೆ, ಶಿಲುಬೆಗೆ ಹಾಕಲ್ಪಟ್ಟ ಯೇಸು ಕ್ರಿಸ್ತನ ಪರಿಚಯವಾಗುವಂತೆ ಮಾಡುತ್ತೇವೆ. ವಾರಗಳು ಕಳೆದಂತೆ ಅವರು ತಿಳುವಳಿಕೆಯನ್ನು ಹೊಂದುತ್ತಿರುವಾಗಲೇ ನಾವು ಅವರೊಂದಿಗೆ ಸ್ನೇಹಸಂಬಂಧ ಬೆಳೆಸುತ್ತಾ ಬರುತ್ತೇವೆ. ಅವರು ನಮ್ಮನ್ನು ಪ್ರೀತಿಸಿ ನಮ್ಮ ಮೇಲೆ ಭರವಸವಿಡುತ್ತಾರೆ. ನಾವು ಅವರಿಗೆ ದೇವರ ವಾಕ್ಯವನ್ನು ತಿಳಿಸಿಕೊಡುತ್ತೇವೆ ಹೊರತು ಅವರಿಗೆ ಬೋಧಿಸುವುದಿಲ್ಲ. ನಾವು ಬೈಬಲ್ ವಾಕ್ಯಗಳನ್ನು ಓದುತ್ತೇವೆ, ಅವರಿಂದಲೂ ಓದಿಸುತ್ತೇವೆ, ಮತ್ತು ಪ್ರಶ್ನೆಗಳನ್ನು

ಕೇಳುವಾಗ, ತಾವಾಗಿಯೇ ದೇವರ ವಾಕ್ಯದಿಂದ ಉತ್ತರಗಳನ್ನು ಕಂಡುಕೊಳ್ಳಲು ಸಹಾಯ ಮಾಡುತ್ತೇವೆ. ವಾರಗಳು ಉರುಳುತ್ತಿರುವಂತೆ ಅವರು, ಕ್ರಿಸ್ತನನ್ನು ಅಂಗೀಕರಿಸುವುದೆಂದರೆ ಏನು, ಆತನನ್ನು ಹಿಂಬಾಲಿಸುವುದು ಎಂದರೇನು ಮತ್ತು ಆತನಿಗಾಗಿ ಜೀವಿಸುವುದು ಎಂದರೆ ಏನು ಎಂದು ತಿಳಿದುಕೊಂಡು ತಾವಾಗಿಯೇ ಬಹಿರಂಗವಾಗಿ ಆತನನ್ನು ಸ್ವೀಕರಿಸುತ್ತಾರೆ. ಇದು ಈ ಕಾಲದ ಸುವಾರ್ತಾ ವಿಧಾನಗಳಿಗಿಂತ ಬಹಳ ಭಿನ್ನವಾಗಿದೆ.

ನಾವು ನಮ್ಮ ವೈಯಕ್ತಿಕ ಸಾಕ್ಷಿಯೊಂದಿಗೆ ಪಾಪದಲ್ಲಿ ಕಳೆದುಹೋದವರ ಬಳಿ ಕ್ರಿಸ್ತನ ಸಂದೇಶವನ್ನು ತೆಗೆದುಕೊಂಡು ಹೋಗುತ್ತೇವೆ. ಅನೇಕಬಾರಿ ನಮ್ಮ ಕರಪತ್ರವನ್ನು ನಾವೇ ಬರೆಯುತ್ತೇವೆ. ನಾನು "ನನ್ನ ಮಗಳ ಸಾವು" ಎನ್ನುವ ಒಂದು ಕರಪತ್ರವನ್ನು ಬರೆದು, ಅದನ್ನು ಮನೆಮನೆಯ ಬಾಗಿಲಿನ ಬಳಿಯಲ್ಲಿ ಬಿಟ್ಟುಹೋಗುತ್ತಿದ್ದೆ. ನಮ್ಮ "ಶಿಷ್ಯತ್ವದ ಸುವಾರ್ತೆ" ತಂಡದ ಇತರ ಕೆಲವು ಸದಸ್ಯರಲ್ಲಿ, ಜೋ ರೋಸ್ ಎಂಬುವವರು "ದಾಸನು ಬಿಡುಗಡೆಗೊಂಡನು" ಎನ್ನುವ ಕರಪತ್ರ ಬರೆದಿದ್ದಾರೆ. ಅವರು ಮದ್ಯಪಾನ ಮತ್ತು ಮಾದಕ ದ್ರವ್ಯಗಳಿಂದ ಬಿಡುಗಡೆ ಹೊಂದಿದ ತಮ್ಮ ಸಾಕ್ಷಿಯನ್ನು ಅದರಲ್ಲಿ ಬರೆದಿದ್ದರು. "ಮಾದಕ ವ್ಯಸನಿಯ ಅಂತ್ಯ" ಎನ್ನುವ ಕರಪತ್ರವನ್ನು ರಾಕಿ ಫಾರಿ ಎನ್ನುವವರು ಬರೆದಿದ್ದರು. ಅವರು ತಮ್ಮ ಹದಿನೈದನೆಯ ವಯಸ್ಸಿನಿಂದ ಈ ಚಟಕ್ಕೆ ಬಿದ್ದಿದ್ದರು ಮತ್ತು ಯೇಸು ಅವರನ್ನು ಬಿಡಿಸಿದನು. ಈ ಸಾಕ್ಷಿಗಳನ್ನು ನಾವು ಜನರ ಮನೆಯ ಬಾಗಿಲುಗಳಲ್ಲಿ ಹೇಳುತ್ತೇವೆ.

ಕೆಲವು ಜನರು, "ಆದರೆ ನಮಗೆ ಹೇಳಲು ಅಂತಹ ತೀವ್ರವಾದ ಸಾಕ್ಷಿಯಿಲ್ಲ. ನನ್ನ ಮಗುವು ಹುಟ್ಟಿದ ಎಂಟು ನಿಮಿಷಗಳ ನಂತರ ಉಸಿರಾಡಿದ್ದನ್ನು ನಾನು ನೋಡಲಿಲ್ಲ" ಎಂದು ಹೇಳಬಹುದು. ಅನೇಕರಿಗೆ ಸಾಕ್ಷಿ ನುಡಿಯಲು ಇಂಥ ವಿಷಯಗಳಿಲ್ಲದಿರಬಹುದು. ಮತ್ತು ನಿಮಗೆ ಆಂಡ್ರ್ಯೂ ವಾಮ್ಮಕ್ ಅವರಂತೆ ದೇವರ ಬಲದಿಂದ ಚಿಕ್ಕ ವಯಸ್ಸಿನಿಂದಲೂ ಪಾಪ, ಅನಾಚಾರ, ಭಕ್ತಿಹೀನತೆ ಮುಂತಾದವುಗಳಿಂದ ದೂರವಿದ್ದು ಶುದ್ಧವಾದ ಜೀವನವನ್ನು ನಡೆಸಲು ಸಾಧ್ಯವಾಗಿರಬಹುದು. ಆದಾಗ್ಯೂ ಪ್ರತಿಯೊಬ್ಬರಿಗೂ ಒಂದು ಸಾಕ್ಷಿಯಿರುತ್ತದೆ ಮತ್ತು ನಿಮ್ಮದು ಅಷ್ಟು ತೀವ್ರವಲ್ಲವೆಂದು ನಿಮ್ಮ ಭಾವನೆಯಾಗಿರುವುದಾದರೆ ನನ್ನ ಸಾಕ್ಷಿಯನ್ನೆ ಉಪಯೋಗಿಸಿರಿ. ನಾವು ನಮ್ಮ "ಶಿಷ್ಯತ್ವದ ಸುವಾರ್ತೆ" ತಂಡವನ್ನು ಪ್ರಾರಂಭಿಸಿ ಜನರ ಬಳಿಗೆ ಹೋದಾಗ ಜೋ ರೋಸ್ ನನ್ನ ಸಾಕ್ಷಿಯನ್ನೇ ಉಪಯೋಗಿಸಿದರು. ಕೆಲವು ಸಮಯದ ನಂತರ ಅವರು ಅದನ್ನು ನನಗಿಂತಲೂ ಪರಿಣಾಮಕಾರಿಯಾಗಿ ಹೇಳುತ್ತಿದ್ದರು. ಆಗ ನಾನು, "ಅಯ್ಯಾ ಜೋ, ನನ್ನ ಜೀವಿತದಲ್ಲಿ ಏನಾಯಿತೆಂದು ಅವರಿಗೆ ಸ್ವಲ್ಪ ಹೇಳು" ಎಂದು ಅವರಿಗೆ ಹೇಳುತ್ತಿದ್ದೆ.

ಹೊಸ ಒಡಂಬಡಿಕೆಯಲ್ಲಿ ಅಪೊಸ್ತಲನಾದ ಪೌಲನು ಕ್ರಿಸ್ತನನ್ನು ಅರಿಯದವರಲ್ಲಿ ಮೂರುಸಾರಿ ತನ್ನ ಸಾಕ್ಷಿಯನ್ನು ಉಪಯೋಗಿಸಿದಲ್ಲಿ, ನೀನು ಮತ್ತು ನಾನು ಸಹ ಹಾಗೆ ಮಾಡಬಹುದಾಗಿದೆ. ನಮ್ಮ ಕಂಪ್ಯೂಟರ್‌ಗಳಲ್ಲಿ ಮೈಕ್ರೋ ಸಾಫ್ಟ್, ವರ್ಡ್ ಪರ್ಫೆಕ್ಟ್ ಮುಂತಾಗಿ ಅನೇಕ ರೀತಿಯ ಪ್ರೋಗ್ರಾಂಗಳಿವೆ. ನಿಮ್ಮ ಸಾಕ್ಷಿಯಿರುವ ಕರಪತ್ರವನ್ನು

ನೀವೇ ಮುದ್ರಿಸಬಹುದಾಗಿದೆ. ನೀವದನ್ನು ಹಿಡಿದು, "ಇದನ್ನು ನಾನು ಯಾವುದೇ ಪುಸ್ತಕದ ಅಂಗಡಿಯಲ್ಲಿ ಕೊಂಡು ತಂದದ್ದಲ್ಲ. ಇದರಲ್ಲಿರುವುದು ನನ್ನ ಜೀವನದಲ್ಲಿಯೇ ನಡೆದದ್ದಾಗಿದೆ" ಎಂದು ಹೇಳುವಾಗ ಅದು ಅಹಳ ಪರಿಣಾಮಕಾರಿಯಾಗಿರುತ್ತದೆ.

ನೀವು ನಿಮ್ಮ ಸಾಕ್ಷಿಯನ್ನು ಬರೆಯಬೇಕೆನ್ನುವುದು ನನ್ನ ಆಶಯವಾಗಿದೆ–ನಿಮಗೆ ಏನು ಸಂಭವಿಸಿತು, ನೀವು ಕ್ರಿಸ್ತನ ಬಳಿಗೆ ಹೇಗೆ ಬಂದಿರಿ – ಮುಂತಾಗಿ. ನೀವು ಅದನ್ನು ಯಾರದೋ ಬಾಗಿಲಿನಲ್ಲಿ ಕೊಡುತ್ತಿದ್ದೀರೇನೋ ಎಂಬಂತೆ ಮತ್ತೊಬ್ಬರಿಗೆ ಕೊಡಿರಿ.

ಈ ವಿಷಯದ ಕುರಿತು ಹೆಚ್ಚಿನ ಮಾಹಿತಿ ಬೇಕಾದಲ್ಲಿ www.krowtracts.com ಎನ್ನುವ ನನ್ನ ವೆಬ್‌ಸೈಟ್‌ಗೆ ಹೋಗಿರಿ ಮತ್ತು "Tips on Sharing Your Faith" ನಲ್ಲಿ ಮಾಹಿತಿಯನ್ನು ಹೊಂದಿಕೊಳ್ಳಿರಿ. ನಿಮ್ಮ ವೈಯಕ್ತಿಕ ಸಾಕ್ಷಿಯನ್ನು ಬರೆಯಿರಿ, ಅದನ್ನು ಹೇಗೆ ಹೇಳಬಹುದೆಂದು ಅಭ್ಯಾಸ ಮಾಡಿರಿ ಮತ್ತು "Tips on Sharing Your Faith" ಅನ್ನು ಓದಿ ತಿಳಿದುಕೊಳ್ಳಿರಿ. ಕೇವಲ ಓದುವುದು ಮಾತ್ರವಲ್ಲ, ತಿಳಿದುಕೊಳ್ಳಿರಿ. ಹೀಗೆ ನೀವು ಒಂದು ಸಮಯದಲ್ಲಿ ಒಬ್ಬ ವ್ಯಕ್ತಿಗೆ ಸುವಾರ್ತೆ ಸಾರುತ್ತಾ ಅನೇಕರನ್ನು ಶಿಷ್ಯರನ್ನಾಗಿ ಮಾಡಲು ಸಾಧ್ಯವಿದೆ. ದೇವರು ನಿಮ್ಮನ್ನು ಆಶೀರ್ವದಿಸಲಿ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ಮಾರ್ಕ 16:15 ಓದಿರಿ. ಸುವಾರ್ತೆಯನ್ನು ಯಾರಿಗೆ ಸಾರಬೇಕು?

*ಮಾರ್ಕ 16:15* – *ಆ ಮೇಲೆ ಅವರಿಗೆ – ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ.*

2. ಮತ್ತಾಯ 28:19–20 ಓದಿರಿ. ಯಾರನ್ನು ಶಿಷ್ಯರನ್ನಾಗಿ ಮಾಡಬೇಕು?

***ಮತ್ತಾಯ 28:19–20*** – *ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ [20] ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.*

3. ಅಪೊಸ್ತಲರ ಕೃತ್ಯಗಳು 8:5,26; 16:13–15,23; ಮತ್ತು 20:20–21 ಓದಿರಿ. ಸುವಾರ್ತೆಯು ಎಲ್ಲೆಲ್ಲಿ ಸಾರಲ್ಪಟ್ಟಿತು?

***ಅಪೊಸ್ತಲರ ಕೃತ್ಯಗಳು 8:5*** – *ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು.*

***ಅಪೊಸ್ತಲರ ಕೃತ್ಯಗಳು 8:26*** – *ಅಷ್ಟರಲ್ಲಿ ಕರ್ತನ ದೂತನು ಫಿಲಿಪ್ಪನಿಗೆ– ನೀನು ಎದ್ದು ದಕ್ಷಿಣ ಕಡೆಗೆ ಯೆರೂಸಲೇಮಿನಿಂದ ಗಾಜಕ್ಕೆ ಹೋಗುವ ದಾರಿಯಲ್ಲಿ ಹೋಗು, ಅದು ಅಡವಿ ಎಂದು ಹೇಳಿದನು.*

***ಅಪೊಸ್ತಲರ ಕೃತ್ಯಗಳು 16:13–15*** – *ನದಿತೀರದಲ್ಲಿ ದೇವರ ಪ್ರಾರ್ಥನೆ ನಡೆಯುವ ಸ್ಥಳ ಇರುವದೆಂದು ನೆನಸಿ ಸಬ್ಬತ್‌ದಿನದಲ್ಲಿ ಊರಬಾಗಿಲಿನ ಹೊರಗೆ ಹೋಗಿ ಅಲ್ಲಿ ಕೂಡಿಬಂದಿದ್ದ ಸ್ತ್ರೀಯರ ಸಂಗಡ ಕೂತುಕೊಂಡು ಮಾತಾಡಿದೆವು. [14] ನಮ್ಮ ಮಾತುಗಳನ್ನು ಕೇಳಿದವರಲ್ಲಿ ಲುದ್ಯಳೆಂಬ ಒಬ್ಬ ಸ್ತ್ರೀಯು ಇದ್ದಳು. ಆಕೆ ಧೂಮವರ್ಣದ ವಸ್ತ್ರಗಳನ್ನು ಮಾರುವವಳೂ ಥುವತ್ತೈರ ಎಂಬ ಊರಿನವಳೂ ದೇವಭಕ್ತಳೂ ಆಗಿದ್ದಳು. ಪೌಲನು ಹೇಳಿದ ಮಾತುಗಳಿಗೆ ಲಕ್ಷ್ಯಕೊಡುವದಕ್ಕೆ ಕರ್ತನು ಆಕೆಯ ಹೃದಯವನ್ನು ತೆರೆದನು. [15] ಆಕೆಯೂ ಆಕೆಯ ಮನೆಯವರೂ ದೀಕ್ಷಾಸ್ನಾನ ಮಾಡಿಸಿಕೊಂಡ ಮೇಲೆ ಆಕೆ – ನಾನು ಕರ್ತನನ್ನು ನಂಬಿದವಳೆಂದು ನಿಶ್ಚಯಿಸಿಕೊಂಡಿದ್ದರೆ ನನ್ನ ಮನೆಯಲ್ಲಿ ಬಂದು ಇರ್ರಿ ಎಂದು ಬೇಡಿಕೊಂಡು ನಮ್ಮನ್ನು ಬಲವಂತ ಮಾಡಿದಳು.*

***ಅಪೊಸ್ತಲರ ಕೃತ್ಯಗಳು 16:23*** *– ಅವರಿಗೆ ಬಹಳ ಪೆಟ್ಟುಗಳನ್ನು ಹೊಡಿಸಿದ ಮೇಲೆ ಸೆರೆಮನೆಯೊಳಗೆ ಹಾಕಿಸಿ – ಇವರನ್ನು ಭದ್ರವಾಗಿ ಕಾಯಬೇಕೆಂದು ಸೆರೆಯ ಯಜಮಾನನಿಗೆ ಖಂಡಿತವಾಗಿ ಹೇಳಿದರು.*

***ಅಪೊಸ್ತಲರ ಕೃತ್ಯಗಳು 20:20–21*** *– ನಾನು ನಿಮಗೆ ಹಿತಕರವಾದದ್ದೆಲ್ಲವನ್ನು ಹೇಳುವದಕ್ಕೂ ಸಭೆಯಲ್ಲಿಯೂ ಮನೆಮನೆಯಲ್ಲಿಯೂ ಉಪದೇಶಿಸುವದಕ್ಕೂ ಹಿಂತೆಗಿಯದೆ [21] ಯೆಹೂದ್ಯರಿಗೂ ಗ್ರೀಕರಿಗೂ ದೇವರ ಕಡೆಗೆ ತಿರುಗಬೇಕೆಂತಲೂ ನಮ್ಮ ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡಬೇಕೆಂತಲೂ ಖಂಡಿತವಾಗಿ ಬೋಧಿಸುವವನಾಗಿದ್ದೇನೆ.*

4. ಮಾರ್ಕ 4:11–12 ಓದಿರಿ. ನಿಜವಾದ ಮಾನಸಾಂತರ ಹೊಂದುವ ಮೊದಲು ಒಬ್ಬ ವ್ಯಕ್ತಿಯು:

   ಅ. ನೋಡಬೇಕು

   ಇ. ಗ್ರಹಿಸಬೇಕು

   ಉ. ಕೇಳಬೇಕು

   ಎ. ತಿಳಿದುಕೊಳ್ಳಬೇಕು

   ಐ. ಮೇಲಿನ ಎಲ್ಲವುಗಳನ್ನು ಮಾಡಬೇಕು

***ಮಾರ್ಕ 4:11–12*** *– ಆತನು ಅವರಿಗೆ – ದೇವರ ರಾಜ್ಯದ ಗುಟ್ಟು ನಿಮಗೇ ಕೊಟ್ಟಿದೆ; ಹೊರಗಿನವರಿಗೆ ಎಲ್ಲವೂ ಸಾಮ್ಯದ ಮರೆಯಲ್ಲಿವೆ. [12] ಅವರು ಕಣ್ಣಿದ್ದು ನೋಡಿದರೂ ಕಾಣಬಾರದು, ಕಿವಿಯಿದ್ದು ಕೇಳಿದರೂ ತಿಳುಕೊಳ್ಳಬಾರದು, ಹಾಗೆ ಕಂಡು ತಿಳುಕೊಂಡರೆ ಅವರು ದೇವರ ಕಡೆಗೆ ತಿರುಗಿಕೊಂಡು ಪಾಪಕ್ಷಮೆಯನ್ನು ಹೊಂದಾರು ಎಂದೇ ಮರೆಮಾಡಲಾಗಿದೆ.*

5. ಅಪೊಸ್ತಲರ ಕೃತ್ಯಗಳು 28:23–24 ಓದಿರಿ. ಪೌಲನು ಸುವಾರ್ತೆಯನ್ನು ವಿವರಿಸಿ ಸಾಕ್ಷಿಹೇಳುವಾಗ, ಯೇಸುವು ಯಾರಾಗಿದ್ದಾನೆ ಎಂದು ಜನರಿಗೆ ತಿಳಿಸಲು ಎಷ್ಟು ಸಮಯ ತೆಗೆದುಕೊಂಡನು?

***ಅಪೊಸ್ತಲರ ಕೃತ್ಯಗಳು 28:23–24*** *– ಅವರು ಅವನಿಗೆ ಒಂದು ದಿವಸವನ್ನು ಗೊತ್ತು ಮಾಡಲು ಬಹುಮಂದಿ ಅವನ ಬಿಡಾರದಲ್ಲಿ ಅವನ ಬಳಿಗೆ ಬಂದರು. ಅವನು ಬೆಳಗಿನಿಂದ ಸಾಯಂಕಾಲದವರೆಗೂ ದೇವರ ರಾಜ್ಯವನ್ನು ಕುರಿತು ಪ್ರಮಾಣವಾಗಿ ಸಾಕ್ಷಿಹೇಳುತ್ತಾ*

*ಮೋಶೆಯ ಧರ್ಮಶಾಸ್ತ್ರವನ್ನೂ ಪ್ರವಾದಿಗಳ ಗ್ರಂಥಗಳನ್ನೂ ಆಧಾರಮಾಡಿಕೊಂಡು ಯೇಸುವಿನ ವಿಷಯದಲ್ಲಿ ಅವರನ್ನು ಒಡಂಬಡಿಸುತ್ತಾ ಇದ್ದನು. [24] ಅವನು ಹೇಳಿದ ಮಾತುಗಳಿಗೆ ಕೆಲವರು ಒಪ್ಪಿಕೊಂಡರು; ಕೆಲವರು ನಂಬದೆ ಹೋದರು.*

6. ಅಪೊಸ್ತಲರ ಕೃತ್ಯಗಳು 16:14 ಓದಿರಿ. ಒಬ್ಬರು ಯೇಸುವಿನ ಕಡೆಗೆ ಸಂಪೂರ್ಣವಾಗಿ ತಿರುಗಿದಾಗ ಏನು ತೆರೆಯಲ್ಪಡಬೇಕು?

***ಅಪೊಸ್ತಲರ ಕೃತ್ಯಗಳು 16:14*** *– ನಮ್ಮ ಮಾತುಗಳನ್ನು ಕೇಳಿದವರಲ್ಲಿ ಲುದ್ಯಳೆಂಬ ಒಬ್ಬ ಸ್ತ್ರೀಯು ಇದ್ದಳು. ಆಕೆ ಧೂಮ್ರವರ್ಣದ ವಸ್ತ್ರಗಳನ್ನು ಮಾರುವವಳೂ ಥುವತೈರ ಎಂಬ ಊರಿನವಳೂ ದೇವಭಕ್ತಳೂ ಆಗಿದ್ದಳು. ಪೌಲನು ಹೇಳಿದ ಮಾತುಗಳಿಗೆ ಲಕ್ಷ್ಯಕೊಡುವದಕ್ಕೆ ಕರ್ತನು ಆಕೆಯ ಹೃದಯವನ್ನು ತೆರೆದನು.*

7. ಅಪೊಸ್ತಲರ ಕೃತ್ಯಗಳು 2:37 ಓದಿರಿ. ಒಬ್ಬ ಮನುಷ್ಯನು ಸುವಾರ್ತೆಗೆ ತನ್ನ ಹೃದಯವನ್ನು ತೆರೆದಾಗ ಮತ್ತು ಅವನಲ್ಲಿ ಮಾನಸಾಂತರ ಉಂಟಾದಾಗ ಏನಾಗುತ್ತದೆ?

***ಅಪೊಸ್ತಲರ ಕೃತ್ಯಗಳು 2:37*** *– ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗು ನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ – ಸಹೋದರರೇ, ನಾವೇನು ಮಾಡಬೇಕು ಎಂದು ಕೇಳಲು*

8. ಅಪೊಸ್ತಲರ ಕೃತ್ಯಗಳು 16:31 ಮತ್ತು 2:38 ಓದಿರಿ. ಒಬ್ಬ ಮನುಷ್ಯನು ಏನು ಮಾಡಬೇಕು?

***ಅಪೊಸ್ತಲರ ಕೃತ್ಯಗಳು 16:31*** *– ಅವರು – ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆಹೊಂದುವಿ, ನಿನ್ನ ಮನೆಯವರೂ ರಕ್ಷಣೆಹೊಂದುವರು ಎಂದು ಹೇಳಿ ಅವನಿಗೂ ಅವನ ಮನೆಯಲ್ಲಿದ್ದವರೆಲ್ಲರಿಗೂ ದೇವರ ವಾಕ್ಯವನ್ನು ತಿಳಿಸಿದರು.*

***ಅಪೊಸ್ತಲರ ಕೃತ್ಯಗಳು 2:38*** *– ಪೇತ್ರನು ಅವರಿಗೆ – ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ;*

9. ಅಪೊಸ್ತಲರ ಕೃತ್ಯಗಳು 2:42 ಮತ್ತು 8:31–32 ಓದಿರಿ. ಮತ್ತು ಒಬ್ಬ ಮನುಷ್ಯನು ಏನು ಮಾಡಬೇಕು?

*__ಅಪೊಸ್ತಲರ ಕೃತ್ಯಗಳು 2:42__ – ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು.*

*__ಯೋಹಾನ 8:31–32__ – ಆಗ ಯೇಸು ತನ್ನನ್ನು ನಂಬಿದ ಯೆಹೂದ್ಯರಿಗೆ – ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು [32] ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವದು ಎಂದು ಹೇಳಿದನು.*

10. ರೋಮಾಪುರದವರಿಗೆ 10:14–15 ಓದಿರಿ. ಈ ವಾಕ್ಯಭಾಗದ ಪ್ರಕಾರ, ಒಬ್ಬ ಮನುಷ್ಯನು ಕ್ರಿಸ್ತನ ಬಳಿಗೆ ಹೇಗೆ ಬರುತ್ತಾನೆ?

*__ರೋಮಾಪುರದವರಿಗೆ 10:14–15__ – ಆದರೆ ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವದು ಹೇಗೆ? ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವದು ಹೇಗೆ? ಸಾರಿ ಹೇಳುವವನಿಲ್ಲದೆ ಕೇಳುವದು ಹೇಗೆ? ಸಾರುವವರು ಕಳುಹಿಸಲ್ಪಡದೆ ಸಾರುವದೆಲ್ಲಿ? [15] ಇದಕ್ಕೆ ಸರಿಯಾಗಿ ಶುಭದ ಸುವಾರ್ತೆಯನ್ನು ಸಾರುವವರ ಪಾದಗಳು ಎಷ್ಟೋ ಅಂದವಾಗಿವೆ ಎಂದು ಬರೆದದೆ. ಆದರೂ ಆ ಶುಭವರ್ತಮಾನಕ್ಕೆ ಎಲ್ಲರೂ ಕಿವಿಗೊಡಲಿಲ್ಲ.*

# ಉತ್ತರಗಳು

1. ಮಾರ್ಕ 16:15 ಓದಿರಿ. ಸುವಾರ್ತೆಯನ್ನು ಯಾರಿಗೆ ಸಾರಬೇಕು?

   ***ಪ್ರತಿಯೊಬ್ಬರಿಗೆ, ಎಲ್ಲರಿಗೆ***

2. ಮತ್ತಾಯ 28:19–20 ಓದಿರಿ. ಯಾರನ್ನು ಶಿಷ್ಯರನ್ನಾಗಿ ಮಾಡಬೇಕು?

   ***ಎಲ್ಲ ದೇಶಗಳ ಜನರನ್ನು***

3. ಅಪೊಸ್ತಲರ ಕೃತ್ಯಗಳು 8:5, 26; 16:13–15, 23; ಮತ್ತು 20:20–21 ಓದಿರಿ. ಸುವಾರ್ತೆಯು ಎಲ್ಲೆಲ್ಲಿ ಸಾರಲ್ಪಟ್ಟಿತು?

   ***ಪಟ್ಟಣ, ಅಡವಿ (ಮರುಭೂಮಿ), ನದೀತೀರದಲ್ಲಿ, ಸೆರೆಮನೆಯಲ್ಲಿ, ಬಹಿರಂಗವಾಗಿ ಮತ್ತು ಮನೆಮನೆಗಳಲ್ಲಿ***

4. ಮಾರ್ಕ 4:11–12 ಓದಿರಿ. ನಿಜವಾದ ಮಾನಸಾಂತರ ಹೊಂದುವ ಮೊದಲು ಒಬ್ಬ ವ್ಯಕ್ತಿಯು:

   ***ಐ. ಮೇಲಿನ ಎಲ್ಲವುಗಳನ್ನು ಮಾಡಬೇಕು***

5. ಅಪೊಸ್ತಲರ ಕೃತ್ಯಗಳು 28:23–24 ಓದಿರಿ. ಪೌಲನು ಸುವಾರ್ತೆಯನ್ನು ವಿವರಿಸಿ ಸಾಕ್ಷಿಹೇಳುವಾಗ, ಯೇಸುವು ಯಾರಾಗಿದ್ದಾನೆ ಎಂದು ಜನರಿಗೆ ತಿಳಿಸಲು ಎಷ್ಟು ಸಮಯ ತೆಗೆದುಕೊಂಡನು?

   ***ಮುಂಜಾನೆಯಿಂದ ಸಂಜೆಯವರೆಗೆ, ಬಹುಶಃ ಆರರಿಂದ ಎಂಟು ತಾಸುಗಳವರೆಗೆ***

6. ಅಪೊಸ್ತಲರ ಕೃತ್ಯಗಳು 16:14 ಓದಿರಿ. ಒಬ್ಬರು ಯೇಸುವಿನ ಕಡೆಗೆ ಸಂಪೂರ್ಣವಾಗಿ ತಿರುಗಿದಾಗ ಏನು ತೆರೆಯಲ್ಪಡಬೇಕು?

   ***ಹೃದಯ, ಮನುಷ್ಯನ ಅಂತರಾತ್ಮ***

7. ಅಪೊಸ್ತಲರ ಕೃತ್ಯಗಳು 2:37 ಓದಿರಿ. ಒಬ್ಬ ಮನುಷ್ಯನುಸುವಾರ್ತೆಗೆ ತನ್ನ ಹೃದಯವನ್ನು ತೆರೆದಾಗ ಮತ್ತು ಅವರಲ್ಲಿ ಮಾನಸಾಂತರ ಉಂಟಾದಾಗ ಏನಾಗುತ್ತದೆ?

*ಅವರು ಸರಿಯಾದ ಪ್ರತಿಕ್ರಿಯೆಯನ್ನು ತೋರುವುದಾದರೆ, "ನಾನೇನು ಮಾಡಬೇಕು?" ಎಂದು ಕೇಳುವರು*

8. ಅಪೊಸ್ತಲರ ಕೃತ್ಯಗಳು 16:31 ಮತ್ತು 2:38 ಓದಿರಿ. ಒಬ್ಬ ಮನುಷ್ಯನು ಏನು ಮಾಡಬೇಕು?

*ಮಾನಸಾಂತರಪಟ್ಟು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡು, ಮತ್ತು ದೀಕ್ಷಾಸ್ನಾನ ಮಾಡಿಸಿಕೊ*

9. ಅಪೊಸ್ತಲರ ಕೃತ್ಯಗಳು 2:42 ಮತ್ತು 8:31–32 ಓದಿರಿ. ಮತ್ತು ಒಬ್ಬ ಮನುಷ್ಯನು ಏನು ಮಾಡಬೇಕು?

*ಅಪೊಸ್ತಲರ ಬೋಧನೆಯಲ್ಲಿ ಮುಂದುವರಿಯಿರಿ. ಯೇಸುವಿನ ಮಾತುಗಳನ್ನು ತಿಳಿದುಕೊಂಡು ಅದನ್ನು ಅಭ್ಯಾಸ ಮಾಡುವುದನ್ನು ಮುಂದುವರಿಸಿರಿ*

10. ರೋಮಾಪುರದವರಿಗೆ 10:14–15 ಓದಿರಿ. ಈ ವಾಕ್ಯಭಾಗದ ಪ್ರಕಾರ, ಒಬ್ಬ ಮನುಷ್ಯನು ಕ್ರಿಸ್ತನ ಬಳಿಗೆ ಹೇಗೆ ಬರುತ್ತಾನೆ?

*ಯಾರಾದರೂ ಕಳುಹಿಸುವುದರಿಂದ, ಕಳುಹಿಸಲ್ಪಟ್ಟವರು ಹೋಗಿ ಯಾರಿಗಾದರೂ ಬೋಧಿಸುವುದರಿಂದ, ಬೋಧಿಸಲ್ಪಟ್ಟವರು ಯೇಸುವಿನ ಸುವಾರ್ತೆಯನ್ನು ಕೇಳಿದ್ದರಿಂದ ನಂಬುತ್ತಾರೆ. ಅವರು ನಂಬುವುದರಿಂದ ಅವರು ತಮ್ಮ ಆತ್ಮದ ರಕ್ಷಣೆಗಾಗಿ ಯೇಸುವನ್ನು ಪ್ರಾರ್ಥಿಸುವರು*

# ಪಾಠ 16

# ಶಿಷ್ಯತ್ವದ ತರಬೇತಿಯಲ್ಲಿ ಎಲ್ಲರ ವರಗಳನ್ನೂ ಉಪಯೋಗಿಸುವುದು

*ಡೂಣ್ ಕ್ರೊ*

ಶಿಷ್ಯರನ್ನು ಮಾಡುವಾಗ ಎಲ್ಲರ ವರಗಳೂ ಉಪಯೋಗಕ್ಕೆ ಬರುತ್ತವೆ. ಈ ಶಿಷ್ಯತ್ವದ ಸುವಾರ್ತೆಯ ಯೋಜನೆಯನ್ನು ನಾವು ಬಹಳ ಯಶಸ್ವಿಯಾಗಿ ಕಾರ್ಯಗತಗೊಳಿಸಿದ್ದೇವೆ. ಜನರು ರಕ್ಷಣೆ ಹೊಂದಿ, ಪವಿತ್ರಾತ್ಮನ ಅಭಿಷೇಕ ಪಡೆದು ನೀರಿನಲ್ಲಿ ದೀಕ್ಷಾಸ್ನಾನ ತೆಗೆದುಕೊಂಡಿದ್ದನ್ನು ನೋಡಿದ್ದೇವೆ. ಒಂದು ದಿನ ನಾನು ನನ್ನ ಸ್ನೇಹಿತರೊಂದಿಗೆ ಮಾತನಾಡುತ್ತಾ ಹೇಳಿದೆ, "ನಾವು ಏನನ್ನೋ ಕಳಕೊಂಡಿದ್ದೇವೆ–ಅದು ಸಂದಿನೊಳಗಿಂದ ಸೋರಿಹೋದಂತೆ ಭಾಸವಾಗುತ್ತಿದೆ". ಅವನು ಹೇಳಿದ, "ಎಲ್ಲವೂ ಚೆನ್ನಾಗಿಯೇ ನಡೆಯುತ್ತಿದೆ ಎಂದು ನೆನಸುತ್ತೇನೆ. ನಿನ್ನ ಮಾತಿನ ಅರ್ಥವೇನು?"

ನಾನು ಹೇಳುವುದೇನೆಂದರೆ, ಒಳಾಂಗಣದ ಸಭೆಯನ್ನು–ಜನರು ಒಳಗೆ ಬಂದು, ಕೂತುಕೊಂಡು, ಪಾಸ್ಟರ್‌ರವರು ಹೇಳುವುದನ್ನು ಕೇಳಿಕೊಂಡು ಮನೆಗೆ ಹೋಗುವುದು – ಹೊರಗಣ ಸಭೆಯನ್ನಾಗಿ, ಅಂದರೆ ಜನರು ತಮ್ಮ ಚರ್ಚ್‌ನ ನಾಲ್ಕು ಗೋಡೆಗಳಿಂದಾಚೆ ಇತರರನ್ನು ಮುಟ್ಟುವಂತ ಸಭೆಯನ್ನಾಗಿ ಮಾಡುವುದು ಹೇಗೆ ಎಂದು. ಇಲ್ಲಿರುವುದು ನಿಜವಾದ ಅಂಕಿಅಂಶಗಳು: ಶೇಕಡ 95ರಷ್ಟು ಕ್ರೈಸ್ತರು ಒಬ್ಬರನ್ನೂ ಕ್ರಿಸ್ತನ ಬಳಿಗೆ ನಡೆಸಿಲ್ಲ ಮತ್ತು ಶೇಕಡ 90ರಷ್ಟು ಸುವಾರ್ತಾಸೇವೆಯು ಕ್ರೈಸ್ತರ ಮಧ್ಯದಲ್ಲಿಯೇ ನಡೆಯುತ್ತದೆ. ಇಡೀ ಪ್ರಪಂಚದಲ್ಲಿ ಸುವಾರ್ತೆಯು ಚರ್ಚ್ ಕಟ್ಟಡದ ಒಳಗಡೆಯೇ ಹೆಚ್ಚಾಗಿ ನಡೆದಿದೆ. ನಾವು ಸಬ್ಬತ್ ಶಾಲೆಯಲ್ಲಿ ಸುವಾರ್ತೆ ಹೇಳುತ್ತೇವೆ, ಮತ್ತು ಚರ್ಚ್‌ನ ಸಭಾಂಗಣದಲ್ಲಿಯೂ ಸುವಾರ್ತೆ ಹೇಳುತ್ತೇವೆ. ನಾವು ಸಭೆಯ ಕಟ್ಟಡದಲ್ಲಿ ಸುವಾರ್ತೆ ಸಾರುವ ರೀತಿಯನ್ನು ನೋಡಿದರೆ, ಸಭೆಯು ಮಾನಸಾಂತರ ಹೊಂದಬೇಕಾದ ಅವಶ್ಯಕತೆಯಿದೆ ಎನಿಸುತ್ತದೆ.

ಚರಿತ್ರೆಯಲ್ಲಿ ನೋಡುವಾಗ, ಮೂರನೆಯ ಶತಮಾನದಲ್ಲಿ ಕಾನ್ಸಟಂಟೈನ್ ಚಕ್ರವರ್ತಿಯ ಆಳ್ವಿಕೆಗೆ ಮುನ್ನ ಚರ್ಚ್ ಕಟ್ಟಡಗಳು ಇರಲಿಲ್ಲ. ಅಲ್ಲಿಂದ ಪ್ರಾರಂಭವಾಗಿ, ಪಾಪದಲ್ಲಿಯೇ ಜೀವಿಸಿ ನಾಶವಾಗುತ್ತಿರುವವರ ವಿಚಾರದಲ್ಲಿ ಸಭೆಯು ಉದಾಸೀನವಾಗಿದೆ ಮತ್ತು ಅದು ಚರ್ಚ್‌ನ ಕಟ್ಟಡದ ಗೋಡೆಗಳ ಹಿಂದೆ ಅಡಗಿಕೊಂಡಿರುವುದೋ

ಎಂಬಂತಾಗಿದೆ. ನಾವು ಆ ಗೋಡೆಗಳ ಆಚೆ ಹೊರಟುಬಂದು, ಒಳಗಣ ಸಭೆಯನ್ನು ಹೊರಗಣ ಸಭೆಯಾಗಿ ಮಾರ್ಪಡಿಸಬೇಕು. ಅಂಕಿಅಂಶಗಳ ಪ್ರಕಾರ ಕೇವಲ ಶೇಕಡ 0.5ರಷ್ಟು (ಶೇಕಡ 1ಕ್ಕಿಂತ ಕಡಿಮೆ) ಕಾರ್ಯಕ್ರಮಗಳು ಮಾತ್ರ ನಮ್ಮ ಸಭೆಯ ಕಟ್ಟಡಗಳ ನಾಲ್ಕು ಗೋಡೆಗಳಾಚೆ ಹೋಗುತ್ತವೆ. ಅಂದರೆ ಇಂದು ಅಮೆರಿಕಾ ದೇಶದ ಯಾವುದೇ ಕ್ರೈಸ್ತ ಪಂಗಡಗಳ ಬಳಿ ದೇವರಿಂದ ದೂರವಾದವರನ್ನು ಕ್ರಿಸ್ತನ ಬಳಿಗೆ ಕರೆತರಲು ಯಾವುದೇ ನಿರ್ದಿಷ್ಟ ಯೋಜನೆಗಳಿಲ್ಲ. ನಮ್ಮ ಸಭಾಕಟ್ಟಡಗಳ ಹೊರಗಿರುವ ಜನರನ್ನು ಯೇಸುವಿನ ಬಳಿಗೆ ನಡಿಸಿ ಅವರನ್ನು ಶಿಷ್ಯರನ್ನಾಗಿ ಮಾಡುವುದು ಕ್ರೈಸ್ತತ್ವದ ಒಂದು ಭಾಗವಾಗಿದ್ದು ಅದನ್ನು ನಾವು ಕಂಡುಹಿಡಿದುಕೊಳ್ಳಬೇಕಾಗಿದೆ.

ರೆಫರ್‌ಮೇಶನ್ ಕಾಲದಲ್ಲಿ ಮಾರ್ಟಿನ್ ಲೂಥರ್‌ನು ನಂಬಿಕೆಯಿಂದಲೇ ನೀತಿನಿರ್ಣಯ ಎನ್ನುವ ಪ್ರಕಟಣೆಯನ್ನು ಸಭೆಯ ಗಮನಕ್ಕೆ ತಂದನು. ಹಾಗೆಯೇ 1800 ಸುಮಾರಿಗೆ ಜ಼ಾನ್ ವೆಸ್ಲಿಯ ಮೂಲಕ ದೊಡ್ಡ ಸಮೂಹಕ್ಕೆ ಸುವಾರ್ತೆ ಸಾರುವುದು ಪ್ರಾರಂಭವಾಯಿತು. ಆದರೆ ಅಪೊಸ್ತಲರ ಕಾಲದಿಂದಾಚೆಗೆ ವೈಯಕ್ತಿಕವಾಗಿ ಸುವಾರ್ತೆ ಸಾರುವುದು ಮತ್ತು ಶಿಷ್ಯತ್ವದಲ್ಲಿ ನಡಿಸುವುದು ಮತ್ತೆ ಬಳಕೆಗೆ ಬರಲಿಲ್ಲ. “ಇದು ನನಗೆ ಗೊತ್ತಿಲ್ಲ” ಎಂದು ನೀವು ಹೇಳಬಹುದು. ಈ ಯೋಜನೆಯ ಮೂಲಕ ಇದೆಷ್ಟು ಸುಲಭವೆಂದು ನಿಮಗೆ ಖಂಡಿತವಾಗಿ ತಿಳಿಸಿಕೊಡುತ್ತೇವೆ. ನಿಮ್ಮ ಸಾಕ್ಷಿಯ ಮೂಲಕ ಜನರೊಂದಿಗೆ ಕೆಲಸ ಮಾಡುವುದು ಮತ್ತು ಹೊಸಬರನ್ನು ಅವರ ಮನೆಯ ಬಾಗಿಲಿನಲ್ಲಿ ಭೇಟಿ ಮಾಡುವುದು ಎಷ್ಟು ಸುಲಭವೆಂದು ತೋರಿಸಿಕೊಡುತ್ತೇವೆ. ಇದು ನನ್ನ ಗುರಿಯಾಗಿದೆ. ಇದು ಒಳ್ಳೆಯ ಸುದ್ದಿ.

ನೀವು ಏನು ಮಾಡಬೇಕೆಂದು (ಅದನ್ನು ಮಾಡಲು ನಿಮಗೆ ಮನಸ್ಸಿಲ್ಲ) ಇತರರು ಹೇಳುತ್ತಾರೋ ಅದನ್ನು ಬಿಟ್ಟು ಏನು ಮಾಡಬೇಕೆಂದು ನಿಮಗನಿಸುವುದೋ ಅದನ್ನು ಮಾಡುವುದು ಹೇಗೆ? ಅದನ್ನು ನಾವು ಮಾತನಾಡೋಣ. ಶಿಷ್ಯತ್ವದ ಸುವಾರ್ತೆ ಹೇಗೆ ಕೆಲಸ ಮಾಡುವುದೆಂದು ನಾನು ಜನರಿಗೆ ತೋರಿಸುತ್ತ, “ನೋಡಿರಿ, ನಾವು ಮಾಡುವುದು ಹೀಗೆ: ನಾವು ಜನರ ಬದುಕನ್ನು ಸ್ಪರ್ಶಿಸುತ್ತೇವೆ. ಅವರು ರಕ್ಷಿಸಲ್ಪಟ್ಟು, ಮಾನಸಾಂತರ ಹೊಂದಿ, ಪರಿಶುದ್ಧಾತ್ಮಭರಿತರಾಗಿ ನೀರಿನಲ್ಲಿ ದೀಕ್ಷಾಸ್ನಾನ ತೆಗೆದುಕೊಳ್ಳುತ್ತಾರೆ.” ಜನರು, “ಅದು ಬಹಳ ವಿಶೇಷವಾಗಿದೆ!” ಎಂದು ಹೇಳುತ್ತಾರೆ. ಆದರೆ ಅದೇ ಸಮಯದಲ್ಲಿ, “ಈಗ, ಎಷ್ಟು ಜನರು ನನ್ನೊಂದಿಗೆ ಹೋಗಲು ಸಿದ್ಧರಿದ್ದೀರಿ” ಎಂದರೆ ಇನ್ನೂರರಲ್ಲಿ ಕೇವಲ ಮೂರು ಜನರು ಬರಲೊಪ್ಪಬಹುದು, ಯಾಕೆಂದರೆ ಉಳಿದವರಿಗೆ ಭಯ ಅಥವ ಅದನ್ನು ಮಾಡುವ ವಿಧಾನ ತಿಳಿಯದು. ಇಲ್ಲವಾದರೆ ನಾನು, “ಅದನ್ನು ಬಿಡಿರಿ. ಅದರ ಚಿಂತೆ ಬೇಡ; ನೀವು ಭಯಪಡುವ ಅವಶ್ಯಕತೆಯಿಲ್ಲ. ನಾವ ಹೊರಟು ಹೋಗಿ ಬೈಬಲ್ ಅಧ್ಯಯನ ಮಾಡೋಣ ಮತ್ತು ಶಿಷ್ಯತ್ವದ ಪಾಠಗಳನ್ನು ಮಾಡೋಣ. ಎಷ್ಟು ಜನರಿಗೆ ಶಿಕ್ಷಕರಾಗಲು ಮನಸ್ಸಿದೆ?” ಆಗ ಇನ್ನೊಂದಷ್ಟು ಜನರು–ಹತ್ತು ಅಥವ ಹನ್ನೆರಡು–ಜನರು, “ನನಗೆ ಪಾಠ ಹೇಳಲು ಮನಸ್ಸಿದೆ” ಎನ್ನುತ್ತಾರೆ. ಆದರೆ ಅದೂ ಸಹ ನಿರೀಕ್ಷಿತ ಮಟ್ಟಕ್ಕೆ ಏರುವುದಿಲ್ಲ.

ನಾನು ನಿಮಗೆ ತೋರಿಸಲು ಇಚ್ಚಿಸುವುದೇನೆಂದರೆ, ಕ್ರಿಸ್ತನ ದೇಹದಲ್ಲಿ ಇರುವ ಪ್ರತಿ ವರವನ್ನು, ದೇವರನ್ನರಿಯದವರು ಕರ್ತನ ಬಳಿಗೆ ನಡಿಸಲ್ಪಡುವ ಕಾರ್ಯದಲ್ಲಿ, ಅವರನ್ನು ಪ್ರೀತಿಸಿ, ಶಿಷ್ಯತ್ವದಲ್ಲಿ ನಡಿಸಬೇಕಾದಾಗ ಬಳಸಬೇಕು. ಕ್ರಿಸ್ತನ ದೇಹದಲ್ಲಿರುವ ಪ್ರತಿಯೊಂದು ವರವನ್ನು–ಮತ್ತು ಅದು ಸ್ಥಳೀಯ ಸಭೆಯಲ್ಲಿ ಮಾತ್ರವೇ ಇರುತ್ತದೆ– ಅವುಗಳನ್ನು ಉಪಯೋಗಿಸಬೇಕು. ಆಗ ಕೆಲವು, "ನಾನು ಪವಿತ್ರಾತ್ಮನ ಅಭಿಷೇಕಕ್ಕಾಗಿ, ರೋಗವಾಸಿ ಮಾಡುವ ವರಕ್ಕಾಗಿ ಪ್ರಾರ್ಥಿಸುತ್ತೇನೆ". ಅಂಥ ಸಂದರ್ಭಗಳು ಎದುರಾದಾಗ ನಾವು ಖಂಡಿತವಾಗಿಯೂ ನಿಮ್ಮನ್ನು ಕರೆಯುತ್ತೇವೆ. ಇನ್ನು ಕೆಲವರು, "ನನಗೆ ಹಾಗೆ ಮಾಡಲಾಗುವುದಿಲ್ಲ" ಎಂದು ಹೇಳುವಿರಾ, ಹಾಗಿದ್ದಲ್ಲಿ, ಯಾರಿಗಾದರೂ ಅಡಿಗೆ ಮಾಡಿ ಕಳುಹಿಸುವಿರಾ? ಯಾರಿಗಾದರೂ ಒಂದು ಪತ್ರವನ್ನು ಬರೆಯುವಿರಾ? ಫೋನ್ ಮಾಡುವಿರಾ? ಒಬ್ಬರ ಮನೆಯ ಮರದಬೇಲಿಗೆ ಬಣ್ಣ ಹಚ್ಚಿಕೊಡುವಿರಾ? ನಾವು ಶಿಷ್ಯತ್ವದಲ್ಲಿ ನಡೆಸುತ್ತಿರುವ ಒಬ್ಬ ಏಕಾಂಗಿ ತಾಯಿಯ ಮಗುವನ್ನು ನೋಡಿಕೊಳ್ಳುವುದಾದರೆ ಆಕೆಗೆ ಹೊರಹೋಗಿ ಬರುವುದಕ್ಕಾಗುವುದಲ್ಲವೇ? ಏನಾದರೂ ಒಂದು ಕೆಲಸ, ಸಹಾಯ ಮಾಡಲು ಸಿದ್ಧರಿದ್ದೀರಾ? ಪರಾರ್ಥ/ಇತರರಿಗಾಗಿ ಪ್ರಾರ್ಥನೆ ಮಾಡುವಿರಾ? ನಿಮ್ಮಲ್ಲಿ ಕೆಲವರು ಪ್ರಾರ್ಥನೆ ಮಾಡಲು ಕರೆಯಲ್ಪಟ್ಟಿದ್ದೀರಿ. ನಾವು ಶಿಷ್ಯತ್ವದಲ್ಲಿ ನಡಿಸುತ್ತಿರುವವರ ಹೆಸರುಗಳನ್ನು ನಿಮಗೆ ನೀಡುತ್ತೇವೆ. ನೀವು ಅವರಿಗಾಗಿ ಪಾರ್ಥನೆ ಮಾಡಿರಿ. ಏಕಾಂಗಿಯಾಗಿ ಅಥವ ಗುಂಪಾಗಿ ಅವರಿಗಾಗಿ ಮತ್ತು ಪ್ರತಿವಾರ ಹೊರಗೆ ಹೋಗುವ ನಮ್ಮ ಶಿಷ್ಯತ್ವದ ಸುವಾರ್ತಾ ತಂಡಕ್ಕಾಗಿ ಪ್ರಾರ್ಥಿಸಿರಿ.

ಇತರರನ್ನು ಶಿಷ್ಯತ್ವದಲ್ಲಿ ನಡಿಸುವುದರಲ್ಲಿ ಎಲ್ಲರ ಪಾತ್ರವೂ ಇದೆ. ಎಲ್ಲರ ವರಗಳನ್ನು ಉಪಯೋಗಿಸುವ ಯೋಜನೆ ನಮ್ಮ ಬಳಿ ಇದೆ. ದೇವರ ಸೇವಕರ ಮಟ್ಟದಲ್ಲಿ, ಒಬ್ಬ ಶಿಕ್ಷಕರು ಮತ್ತು ಅವರಿಗೊಬ್ಬ ಸಹಾಯಕರು ಜೊತೆಯಾಗಿ ಸೇವೆ ಮಾಡಲು ಹೋಗಲು ಸಾಧ್ಯವಾಗುವಂತೆ ನಾವು ತಂಡಗಳನ್ನು ರಚಿಸುತ್ತಿದ್ದೇವೆ. ಅವರಿಗೆ ಪೂರಕವಾಗಿ ಪ್ರಾಯೋಗಿಕ ಸಹಾಯಗಳನ್ನು ಮಾಡಲು ಸಾಧ್ಯವಾಗುವಂತ ತಂಡಗಳನ್ನು ಅವರ ಹಿಂದೆ ಕಳುಹಿಸುತ್ತೇವೆ. ಅವರು ಮೇಲೆ ಹೇಳಿದಂತ ಮನೆಯ ಕೆಲಸಗಳಾಗಲಿ, ಅಡಿಗೆ, ಊಟ ಕಳುಹಿಸುವುದು, ಇನ್ನಿತರ ಸಹಾಯಗಳನ್ನು ಮಾಡುತ್ತಾರೆ. ಅದರೊಂದಿಗೆ ಅವರಿಗಾಗಿ ಮತ್ತು ಅವರ ನಡುವೆ ಸೇವೆ ಮಾಡುವವರಿಗಾಗಿ ಪ್ರಾರ್ಥಿಸುವ ತಂಡವೂ ಇರುತ್ತದೆ.

ನಿಮಗೆ ಇದರ ಫಲವು ಕಾಣುತ್ತಿದೆಯೇ? ಜನರಿಗೆ ದೇವರ ಪ್ರೀತಿಯನ್ನು ಉಣಬಡಿಸುವುದರಿಂದ, ಅವರಿಗೆ ಪಾಲನೆ ಮತ್ತು ನೆಮ್ಮದಿ ಸಿಗುವುದರಿಂದ ದೇವರು ಅವರನ್ನು ರೂಪಾಂತರ ಪಡಿಸುವುದನ್ನು ನಾವು ನೋಡುತ್ತೇವೆ. ಇಲ್ಲಿ ಸೇವೆ ಮಾಡುತ್ತಿರುವವರು ಯಾರು ಎಂದು ನಿಮಗೆ ತಿಳಿದಿದೆಯೇ? ಯಾರು ಸೇವೆ ಮಾಡಬೇಕಾಗಿದೆಯೋ ಅವರೇ–ಅಂದರೆ ಜನರು–ಸೇವೆ ಮಾಡುತ್ತಿದ್ದಾರೆ. ಎಫೆಸದವರಿಗೆ 4:11ದಲ್ಲಿ, "ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ

ಅನುಗ್ರಹಿಸಿದನು. ನಾವೆಲ್ಲರೂ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು" ಎಂದು ನೋಡುತ್ತೇವೆ. ಇಲ್ಲಿ ಸಭೆಯು ಸೇವೆಯಲ್ಲಿ ತೊಡಗಿಸಿಕೊಂಡಿದೆ, ಕೇವಲ ಮುಂದೆ ನಿಂತುಕೊಳ್ಳುವ "ಸಭಾಪಾಲಕರು" ಅಲ್ಲ. ಸಭಾಪಾಲಕರು ಸಭೆಗೆ ಬೋಧಿಸಿ, ಸೇವೆಗಾಗಿ ಸಭೆಯನ್ನು ಸಜ್ಜುಗೊಳಿಸಿ, ಅವರು ಹೋಗಿ ಸೇವೆಯಲ್ಲಿ ತೊಡಗಿಕೊಂಡರೆ ಅದು ನಿಜವಾದ ಸಾಫಲ್ಯತೆ.

ದೃಷ್ಟಾಂತದೊಂದಿಗೆ ಹೇಳುತ್ತೇನೆ. ನಮ್ಮ ದೇಶವು ಮತ್ತೊಂದು ದೇಶದೊಂದಿಗೆ ಯುದ್ಧ ಘೋಷಿಸಿತೆನ್ನಿರಿ ಮತ್ತು ನಮ್ಮ ರಾಷ್ಟ್ರಪತಿಗಳು, "ನಾವು ಯುದ್ಧದಲ್ಲಿ ಅನೇಕ ಸೈನಿಕರನ್ನು ಕಳೆದುಕೊಳ್ಳುತ್ತೇವೆ. ಆದ್ದರಿಂದ ನಾನು ಸೈನ್ಯವನ್ನು ಕಳುಹಿಸದೆ ಕೇವಲ ಸೈನ್ಯಾಧಿಕಾರಿಗಳನ್ನು ಮಾತ್ರ ಹೋರಾಡಲು ಕಳುಹಿಸುತ್ತೇವೆ" ಎಂದು ಹೇಳಿದರೆನ್ನಿ. ಆಗ ಇನ್ನುಳಿದ ಪ್ರಪಂಚವು ನಮ್ಮನ್ನು ನೋಡಿ ನಗುವುದಿಲ್ಲವೇ, ಆದರೆ ವಾಸ್ತವದಲ್ಲಿ ನಡೆಯುತ್ತಿರುವುದು ಅದುವೇ ಆಗಿದೆ. ನಾವು ಕೇವಲ ಎಫೆಸ 4:11ರಲ್ಲಿರುವ ಐದು-ಹಂತಗಳ ಸೇವೆ ಮಾಡಲು ಕೇವಲ ಸೈನ್ಯಾಧಿಕಾರಿಗಳನ್ನು ಮಾತ್ರವೇ ಕಳುಹಿಸಿರುವುದರಿಂದ ಸೈತಾನನು ನಮ್ಮನ್ನು ನೋಡಿ ನಗುತ್ತಿದ್ದಾನೆ. ನಾವು ಒಂದು ಸೈನ್ಯವನ್ನು ಕಟ್ಟಲು ವಿಫಲರಾಗಿದ್ದೇವೆ. ಅಂತಹ ಒಂದು ತಂಡವನ್ನು ಕಟ್ಟಬೇಕೆಂದು, ಶಿಷ್ಯತ್ವದ ಸುವಾರ್ತೆ ಯೋಜನೆಯಲ್ಲಿ ಎಲ್ಲರ ವರಗಳು ಉಪಯೋಗಿಸಲ್ಪಡಬೇಕೆನ್ನುವುದು ದೇವರ ಉದ್ದೇಶವಾಗಿದೆ.

ಕೇವಲ ನಮ್ಮ ಪಟ್ಟಣದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿ ಶಿಷ್ಯತ್ವವನ್ನು ಬೆಳೆಸಲು ನಾವು ಸುಸಜ್ಜಿತವಾದ ತಂಡವನ್ನು ಕಟ್ಟಬೇಕಾಗಿದೆ. ನಾವು ಸಿದ್ಧಪಡಿಸಿರುವ ಯೋಜನೆಗಳು, ಶಿಷ್ಯತ್ವದ ಪಾಠಗಳು ಮತ್ತು ದೇವರು ನಮಗೆ ಕೊಟ್ಟಿರುವ ಇತರ ಕೌಶಲಗಳ ಮೂಲಕವಾಗಿ ಅದನ್ನು ಮಾಡಬಹುದಾಗಿದೆ. ಪಾಪದಲ್ಲಿದ್ದು ದೇವರಿಂದ ದೂರವಾದವರನ್ನು ಕ್ರಿಸ್ತನ ಬಳಿಗೆ ನಡೆಸುವಾಗ ಇತರರೊಡನೆ ಸೇರಿ ನೀವು ನಿಮ್ಮ ವರಗಳನ್ನು ಉಪಯೋಗಿಸುವಾಗ ದೇವರು ನಿಮ್ಮನ್ನು ಆಶೀರ್ವದಿಸಲು ಮತ್ತು ನೀವು ಹೊರಟು ಹೋಗಿ ಶಿಷ್ಯರನ್ನಾಗಿ ಮಾಡಿರಿ ಎನ್ನುವ ಯೇಸುವಿನ ಮಾತನ್ನು ನೆರವೇರಿಸಿರಿ.

# ಶಿಷ್ಯತ್ವದ ಪ್ರಶ್ನೆಗಳು ಮತ್ತು ಪ್ರಶ್ನೆಗಳೊಂದಿಗೆ ಉಪಯೋಗಿಸಬೇಕಾದ ಬೈಬಲ್ ವಚನಗಳು

1. ಸುವಾರ್ತಾಸೇವೆ, ಶಿಷ್ಯತ್ವ, ಮತ್ತು ಪಾಪದಲ್ಲಿ ಜೀವಿಸುವವರ ಮಧ್ಯದಲ್ಲಿ ಸೇವೆಮಾಡುವುದಕ್ಕಾಗಿ ನಾವು ಸಿದ್ಧಮಾಡುವ ತಂಡಗಳನ್ನು ಹೇಗೆ ಕಟ್ಟುತ್ತೇವೆ ಎನ್ನುವ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ. ನೀವು ನಿಮ್ಮ ವರಗಳನ್ನು ಉಪಯೋಗಿಸಿ ಸುವಾರ್ತೆಯನ್ನು ಕೇಳಿಸಿಕೊಂಡವರ ಜೊತೆ ಫಾಲೊ-ಅಪ್ ಕೆಲಸ ಮಾಡುವುದಾದರೆ ನೀವು ಅವರನ್ನು ದೇವರ ರಾಜ್ಯಕ್ಕೆ ಸೇರಿಸುವುದಲ್ಲದೆ ಅವರನ್ನು ಬೇಗನೆ ಪ್ರವೀಣರನ್ನಾಗಿ ಮಾಡಲು ಶಕ್ತರಾಗುತ್ತೀರಿ. ಈ ಕೆಳಗಿನ ಪ್ರಶ್ನೆಗಳ ಮಾಲೆಯನ್ನು ನೀವು ನಿಮ್ಮ ಸಭೆಯ ಇತರ ಸದಸ್ಯರಿಗೆ ಕೊಡಿರಿ. ಅನಂತರ ತಂಡವನ್ನು ಸಜ್ಜಗೊಳಿಸಿರಿ.

ನಾನು ಈ ಚಟುವಟಿಕೆಯಲ್ಲಿ ಪಾಲು ತೆಗೆದುಕೊಳ್ಳುತ್ತೇನೆ (ಒಂದು ಅಥವ ಒಂದಕ್ಕಿಂತ ಹೆಚ್ಚಿನವುಗಳನ್ನು ಗುರುತಿಸಬಹುದು)

____________ ಜನರನ್ನು ಭೇಟಿ ಮಾಡುವುದು

____________ ಮಧ್ಯಸ್ಥಿಕೆ ಪ್ರಾರ್ಥನೆ: ನಾಶವಾಗುತ್ತಿರುವವರಿಗಾಗಿ ಮತ್ತು ಶಿಷ್ಯತ್ವದ ತಂಡಕ್ಕಾಗಿ ಪ್ರಾರ್ಥಿಸುವುದು

____________ ಕಷ್ಟದಲ್ಲಿರುವವರ ಅಗತ್ಯಗಳನ್ನು ಪೂರೈಸುವುದು

____________ ಇತರರನ್ನು ಫೋನ್ ಮೂಲಕ ಸಂಪರ್ಕಿಸುವುದು ಅಥವ ಭೇಟಿಮಾಡುವುದು

____________ಕರುಣೆಯುಳ್ಳವರಾಗಿರುವುದು: ಇತರರಿಗಾಗಿ ಅಡುಗೆ ಮಾಡಿಕೊಡುವುದು, ಯಾವುದೇ ಸಹಾಯ ಮಾಡುವುದು

____________ ಒಬ್ಬೊಂಟಿಗರಾದ ತಾಯಂದಿರು ಮತ್ತು ಅವರ ಮಕ್ಕಳಿಗೆ ಆಸರೆಯಾಗುವುದು

____________ ಅವರಿಗೆ ಸಭೆಗೆ ಹೋಗಲು ವಾಹನ ಸೌಕರ್ಯ ಮಾಡಿ ಕೊಡುವುದು

____________ ಇತರೆ: ನಾನು ____________ ಸಹಾಯ ಮಾಡುತ್ತೇನೆ

2. ಶಿಷ್ಯತ್ವದ ಪಾಠ ಮುಗಿಸಿದ ನಂತರ ಅದರ ಮುಂದುವರಿದ ಭಾಗವಾಗಿ ತುಂಬಬೇಕಾದ ಫಾರಂನ ಮಾದರಿ. ಈ ಫಾರಂ ಮೂಲಕವಾಗಿ ಸಭಾಪಾಲಕರು ಅಥವ ಮೇಲ್ವಿಚಾರಕರಿಗೆ ಎಷ್ಟು ಪಾಠಗಳು ಬೋಧಿಸಲ್ಪಟ್ಟಿವೆ ಮತ್ತು ಅದರ ಫಲಿತಾಂಶವೇನಾಗಿದೆ ಎಂದು ತಿಳಿಯಬಹುದು.

## ಶಿಷ್ಯತ್ವದ ಫಾಲೊ–ಅಪ್ ಫಲಿತಾಂಶದ ಫಾರಂ

ಭೇಟಿಯ ದಿನಾಂಕ/ಪಾಠ :

ಪಾಠ ಮಾಡಿದವರ ಹೆಸರು:

ಪಾಠ ಹೇಳಿಸಿಕೊಂಡವರ ಹೆಸರು/ಗಳು:

ಸ್ಥಳ:

ಪಾಠದ ವಿಷಯ:

ಅಂದಿನ ತರಗತಿ ಹೇಗೆ ನಡೆಯಿತು?

3. ಯಾಕೋಬನು 1:22 ಓದಿರಿ. ನಾವು ವಾಕ್ಯವನ್ನು ಕೇಳುವವರು ಮಾತ್ರವೇ ಆಗಿದ್ದು ಅದರ ಪ್ರಕಾರ ನಡೆಯದಿದ್ದರೆ ಏನು ಮಾಡಿದಂತೆ ಆಗುತ್ತದೆ?

***ಯಾಕೋಬನು 1:22*** *– ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ.*

4. ಮತ್ತಾಯ 7:24–27 ಓದಿರಿ. ಬುದ್ಧಿಯುಳ್ಳ ಮನುಷ್ಯನಾಗ ಬೇಕಾದಲ್ಲಿ, ನಾವು ಯೇಸುವಿನ ಮಾತನ್ನು ಕೇಳುವವರು ಮಾತ್ರವೇ ಆಗಿರದೆ, ಏನು ಮಾಡಬೇಕಾಗಿದೆ?

***ಮತ್ತಾಯ 7: 24–27*** *– ಆದದರಿಂದ, ಈ ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು. ಕಟ್ಟಿದ ಮೇಲೆ ಮಳೆ ಸುರಿಯಿತು; [25] ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಬಡಿಯಿತು. ಆದಾಗ್ಯೂ ಅದರ ಅಸ್ತಿವಾರವು ಬಂಡೆಯ ಮೇಲಿದ್ದದರಿಂದ ಅದು ಬೀಳಲಿಲ್ಲ. [26] ಆದರೆ ಈ ನನ್ನ ಮಾತುಗಳನ್ನು ಕೇಳಿಯೂ ಅವುಗಳಂತೆ ನಡೆಯದ ಪ್ರತಿಯೊಬ್ಬನು ಉಸುಬಿನ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಹೀನ ಮನುಷ್ಯನನ್ನು ಹೋಲುವನು. [27] ಕಟ್ಟಿದ*

*ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಹೊಡೆಯಿತು. ಆಗ ಧಡಮ್ಮನೆ ಕಡುಕೊಂಡು ಬಿತ್ತು.*

5. ಎಫೆಸದವರಿಗೆ 4:11–12 ಓದಿರಿ. ದೇವರ ಸೇವೆಯನ್ನು ಯಾರು ಮಾಡಬೇಕು?

***ಎಫೆಸದವರಿಗೆ 4:11–12*** *– ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. [12] ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.*

6. ಅಪೊಸ್ತಲರ ಕೃತ್ಯಗಳು 8:1 ಮತ್ತು 4 ಓದಿರಿ. ಯಾರು ಅಲ್ಲಲ್ಲಿ ಸುವಾರ್ತೆ ಸಾರುತ್ತಿದ್ದರು?

***ಅಪೊಸ್ತಲರ ಕೃತ್ಯಗಳು 8:1*** *– ಆ ದಿವಸದಲ್ಲಿ ಯೆರೂಸಲೇಮಿನಲ್ಲಿದ್ದ ಸಭೆಗೆ ದೊಡ್ಡ ಹಿಂಸೆ ಉಂಟಾಯಿತು. ಅಪೊಸ್ತಲರು ಹೊರತಾಗಿ ಎಲ್ಲರು ಯೂದಾಯ ಸಮಾರ್ಯ ಸೀಮೆಗಳಲ್ಲಿ ಚದರಿ ಹೋದರು.*

7. ಅಪೊಸ್ತಲರ ಕೃತ್ಯಗಳು 8:1 ಮತ್ತು 4 ಓದಿರಿ. ಯಾರು ಸುವಾರ್ತೆ ಸಾರಲು ಎಲ್ಲಕಡೆಗೆ ಹೋಗಲಿಲ್ಲ?

***ಅಪೊಸ್ತಲರ ಕೃತ್ಯಗಳು 8:4*** *– ಚದರಿಹೋದವರು ಅಲ್ಲಲ್ಲಿ ಹೋಗಿ ಸುವಾರ್ತಾ ವಾಕ್ಯವನ್ನು ಸಾರುತ್ತಿದ್ದರು.*

8. ಅಪೊಸ್ತಲರ ಕೃತ್ಯಗಳು 11:19–22 ಓದಿರಿ. ಹೊಸ ಒಡಂಬಡಿಕೆಯ ಆದಿಸಭೆಯಲ್ಲಿ, ವಿಶ್ವಾಸಿಗಳು ಸುವಾರ್ತಾಸೇವೆ ಮಾಡಿದರು ಮತ್ತು ಅದು ಅಪೊಸ್ತಲರ ನಾಯಕತ್ವ ಮತ್ತು ಮಾರ್ಗದರ್ಶನದ ಅಡಿಯಲ್ಲಿ ಮುಂದುವರೆಯಿತು. ನಮ್ಮ ಇಂದಿನ ಸಭೆಗಳಲ್ಲಿ ನಾಯಕತ್ವವು ಎಲ್ಲವನ್ನು ಪ್ರಾರಂಭಿಸುತ್ತದೆ ಮತ್ತು ವಿಶ್ವಾಸಿಗಳು ಅದನ್ನು ಮುಂದುವರಿಸುತ್ತಾರೆ. ಅಪೊಸ್ತಲರ ಕೃತ್ಯಗಳು 11:19–22 ಈ ಮಾತನ್ನು ಹೇಗೆ ಸಮರ್ಥಿಸುತ್ತದೆ?

***ಅಪೊಸ್ತಲರ ಕೃತ್ಯಗಳು 11:19–22*** *– ಸ್ತೆಫನನ ವಿಷಯದಲ್ಲಿ ಉಂಟಾದ ಹಿಂಸೆಯಿಂದ ಚದರಿಹೋದವರು ಯೆಹೂದ್ಯರಿಗೇ ಹೊರತು ಮತ್ತಾರಿಗೂ ದೇವರ ವಾಕ್ಯವನ್ನು*

*ಹೇಳದೆ ಫೊಯಿನಿಕೆ ಕುಪ್ರ ಅಂತಿಯೋಕ್ಯ ಪ್ರಾಂತ್ಯಗಳವರೆಗೂ ಸಂಚರಿಸಿದರು. [20] ಅವರಲ್ಲಿ ಕುಪ್ರದ್ವೀಪದವರು ಕೆಲವರೂ ಕುರೇನ್ಯದವರು ಕೆಲವರೂ ಅಂತಿಯೋಕ್ಯಕ್ಕೆ ಬಂದು ಗ್ರೀಕರ ಸಂಗಡಲೂ ಮಾತಾಡಿ ಕರ್ತನಾದ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದರು. [21] ಕರ್ತನ ಹಸ್ತವು ಅವರಿಗೆ ಸಹಾಯವಾದ್ದರಿಂದ ಬಹು ಜನರು ನಂಬಿ ಕರ್ತನ ಕಡೆಗೆ ತಿರುಗಿಕೊಂಡರು. [22] ಇವರ ವಿಷಯವಾದ ವರ್ತಮಾನವು ಯೆರೂಸಲೇಮಿನಲ್ಲಿದ್ದ ಸಭೆಯವರ ಕಿವಿಗೆ ಬಿದ್ದಾಗ ಅವರು ಬಾರ್ನಬನನ್ನು ಅಂತಿಯೋಕ್ಯಕ್ಕೆ ಕಳುಹಿಸಿದರು.*

9. 1 ಕೊರಿಂಥದವರಿಗೆ 12:14–18 ಓದಿರಿ. ಕ್ರಿಸ್ತನ ದೇಹದ ಪ್ರತಿಯೊಂದು ಅಂಗವು ಬಹಳ ಮುಖ್ಯವಾಗಿದೆ. ನಾವು ನಮ್ಮನಮ್ಮಲ್ಲಿಯೆ ಒಬ್ಬರೊಂದಿಗೆ ಒಬ್ಬರು ಹೋಲಿಸಿಕೊಳ್ಳಬಾರದು. ಕ್ರಿಸ್ತನಿಗೆ ಸಂಪೂರ್ಣ ಸಮರ್ಪಣೆ ಮಾಡಿಕೊಂಡವರು ಎಲ್ಲವನ್ನು ಮಾಡಬೇಕಾಗಿಲ್ಲ ಆದರೆ ದೇವರು ನಿಮಗೆ ಯಾವ ಸಾಮರ್ಥ್ಯವನ್ನು ಕೊಟ್ಟಿದ್ದಾನೋ ಅದನ್ನು ಮಾಡಿದರೆ ಸಾಕು. ಈ ಪಾಠದಲ್ಲಿ ನಿಮಗೆ ದೊರೆತ ಮಾಹಿತಿಯನ್ನು ತಕ್ಕೊಂಡು ನೀವು ಏನು ಮಾಡುತ್ತೀರಿ?

***1 ಕೊರಿಂಥ 12:14–18*** *– ದೇಹವು ಒಂದೇ ಅಂಗವಲ್ಲ, ಅನೇಕ ಅಂಗಗಳುಳ್ಳದ್ದಾಗಿದೆ. [15] ಕಾಲು – ನಾನು ಕೈಯಲ್ಲದ ಕಾರಣ ದೇಹಕ್ಕೆ ಸೇರಿದ್ದಲ್ಲವೆಂದು ಹೇಳಿದರೂ ಅದು ದೇಹಕ್ಕೆ ಸೇರದೆ ಇರುವದೋ? [16] ಕಿವಿ – ನಾನು ಕಣ್ಣಲ್ಲದ ಕಾರಣ ನಾನು ದೇಹಕ್ಕೆ ಸೇರಿದ್ದಲ್ಲವೆಂದು ಹೇಳಿದರೂ ಅದು ದೇಹಕ್ಕೆ ಸೇರದೆ ಇರುವದೋ? [17] ದೇಹವೆಲ್ಲಾ ಕಣ್ಣಾದರೆ ಕಿವಿಯೆಲ್ಲಿ? ಅದೆಲ್ಲಾ ಕಿವಿಯಾದರೆ ಮೂಗೆಲ್ಲಿ? [18] ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ.*

## ಉತ್ತರಗಳು

1. ಸುವಾರ್ತಾಸೇವೆ, ಶಿಷ್ಯತ್ವ, ಮತ್ತು ಪಾಪದಲ್ಲಿ ಜೀವಿಸುವವರ ಮಧ್ಯದಲ್ಲಿ ಸೇವೆಮಾಡುವುದಕ್ಕಾಗಿ ನಾವು ಸಿದ್ಧಮಾಡುವ ತಂಡಗಳನ್ನು ಹೇಗೆ ಕಟ್ಟುತ್ತೇವೆ ಎನ್ನುವ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ನೀಡಲಾಗಿದೆ. ನೀವು ನಿಮ್ಮ ವರಗಳನ್ನು ಉಪಯೋಗಿಸಿ ಸುವಾರ್ತೆಯನ್ನು ಕೇಳಿಸಿಕೊಂಡವರ ಜೊತೆ ಫಾಲೊ–ಅಪ್ ಕೆಲಸ ಮಾಡುವುದಾದರೆ ನೀವು ಅವರನ್ನು ದೇವರ ರಾಜ್ಯಕ್ಕೆ ಸೇರಿಸುವುದಲ್ಲದೆ ಅವರನ್ನು ಬೇಗನೆ ಪ್ರವೀಣರನ್ನಾಗಿ ಮಾಡಲು ಶಕ್ತರಾಗುತ್ತೀರಿ. ಈ ಕೆಳಗಿನ ಪ್ರಶ್ನೆಗಳ ಮಾಲೆಯನ್ನು ನೀವು ನಿಮ್ಮ ಸಭೆಯ ಇತರ ಸದಸ್ಯರಿಗೆ ಕೊಡಿರಿ. ಅನಂತರ ತಂಡವನ್ನು ಸಜ್ಜಗೊಳಿಸಿರಿ.

ನಾನು ಈ ಚಟುವಟಿಕೆಯಲ್ಲಿ ಪಾಲು ತೆಗೆದುಕೊಳ್ಳುತ್ತೇನೆ (ಒಂದು ಅಥವ ಒಂದಕ್ಕಿಂತ ಹೆಚ್ಚಿನವುಗಳನ್ನು ಗುರುತಿಸಬಹುದು)

____________ ಜನರನ್ನು ಭೇಟಿ ಮಾಡುವುದು

____________ ಮಧ್ಯಸ್ಥಿಕೆ ಪ್ರಾರ್ಥನೆ: ನಾಶವಾಗುತ್ತಿರುವವರಿಗಾಗಿ ಮತ್ತು ಶಿಷ್ಯತ್ವದ ತಂಡಕ್ಕಾಗಿ ಪ್ರಾರ್ಥಿಸುವುದು

____________ ಕಷ್ಟದಲ್ಲಿರುವವರ ಅಗತ್ಯಗಳನ್ನು ಪೂರೈಸುವುದು

____________ ಇತರರನ್ನು ಫೋನ್ ಮೂಲಕ ಸಂಪರ್ಕಿಸುವುದು ಅಥವ ಭೇಟಿಮಾಡುವುದು

____________ಕರುಣೆಯುಳ್ಳವರಾಗಿರುವುದು: ಇತರರಿಗಾಗಿ ಅಡುಗೆ ಮಾಡಿಕೊಡುವುದು, ಯಾವುದೇ ಸಹಾಯ ಮಾಡುವುದು

____________ ಒಬ್ಬೊಂಟಿಗರಾದ ತಾಯಂದಿರು ಮತ್ತು ಅವರ ಮಕ್ಕಳಿಗೆ ಆಸರೆಯಾಗುವುದು

____________ ಅವರಿಗೆ ಸಭೆಗೆ ಹೋಗಲು ವಾಹನ ಸೌಕರ್ಯ ಮಾಡಿ ಕೊಡುವುದು

____________ ಇತರೆ: ನಾನು ____________ ಸಹಾಯ ಮಾಡುತ್ತೇನೆ

2. ಶಿಷ್ಯತ್ವದ ಪಾಠ ಮುಗಿಸಿದ ನಂತರ ಅದರ ಮುಂದುವರಿದ ಭಾಗವಾಗಿ ತುಂಬಬೇಕಾದ ಫಾರಂನ ಮಾದರಿ. ಈ ಫಾರಂ ಮೂಲಕವಾಗಿ ಸಭಾಪಾಲಕರು ಅಥವ ಮೇಲ್ವಿಚಾರಕರಿಗೆ ಎಷ್ಟು ಪಾಠಗಳು ಬೋಧಿಸಲ್ಪಟ್ಟಿವೆ ಮತ್ತು ಅದರ ಫಲಿತಾಂಶವೇನಾಗಿದೆ ಎಂದು ತಿಳಿಯಬಹುದು.

## ಶಿಷ್ಯತ್ವದ ಫಾಲೊ–ಅಪ್ ಫಲಿತಾಂಶದ ಫಾರಂ

ಭೇಟಿಯ ದಿನಾಂಕ/ಪಾಠ :

ಪಾಠ ಮಾಡಿದವರ ಹೆಸರು:

ಪಾಠ ಹೇಳಿಸಿಕೊಂಡವರ ಹೆಸರು/ಗಳು:

ಸ್ಥಳ:

ಪಾಠದ ವಿಷಯ:

ಅಂದಿನ ತರಗತಿ ಹೇಗೆ ನಡೆಯಿತು?

3. ಯಾಕೋಬನು 1:22 ಓದಿರಿ. ನಾವು ವಾಕ್ಯವನ್ನು ಕೇಳುವವರು ಮಾತ್ರವೇ ಆಗಿದ್ದು ಅದರ ಪ್ರಕಾರ ನಡೆಯದಿದ್ದರೆ ಏನು ಮಾಡಿದಂತೆ ಆಗುತ್ತದೆ?

***ನಮ್ಮನ್ನೇ ಮೋಸಪಡಿಸಿಕೊಂಡಂತಾಗುತ್ತದೆ***

4. ಮತ್ತಾಯ 7:24–27 ಓದಿರಿ. ಬುದ್ಧಿಯುಳ್ಳ ಮನುಷ್ಯನಾಗ ಬೇಕಾದಲ್ಲಿ, ನಾವು ಯೇಸುವಿನ ಮಾತನ್ನು ಕೇಳುವವರು ಮಾತ್ರವೇ ಆಗಿರದೆ, ಏನನ್ನು ಮಾಡಬೇಕಾಗಿದೆ?

***ನಾವು ಅದರಂತೆ ನಡೆಯಬೇಕು***

5. ಎಫೆಸದವರಿಗೆ 4:11–12 ಓದಿರಿ. ದೇವರ ಸೇವೆಯನ್ನು ಯಾರು ಮಾಡಬೇಕು?

***ಕೇವಲ ಸಭಾಪಾಲಕರೆಂದು ಹೆಸರುಗೊಂಡ ಒಂದು ಗುಂಪಿನ ಜನರಲ್ಲ, ದೇವಜನರೆಲ್ಲರು ಮಾಡಬೇಕು***

6. ಅಪೊಸ್ತಲರ ಕೃತ್ಯಗಳು 8:1 ಮತ್ತು 4 ಓದಿರಿ. ಯಾರು ಅಲ್ಲಲ್ಲಿ ಸುವಾರ್ತೆ ಸಾರುತ್ತಿದ್ದರು?

*ಅಲ್ಲಲ್ಲಿ ಚದುರಿಹೋದ ವಿಶ್ವಾಸಿಗಳು*

7. ಅಪೊಸ್ತಲರ ಕೃತ್ಯಗಳು 8:1 ಮತ್ತು 4 ಓದಿರಿ. ಯಾರು ಸುವಾರ್ತೆ ಸಾರಲು ಎಲ್ಲಕಡೆಗೆ ಹೋಗಲಿಲ್ಲ?

*ಅಪೊಸ್ತಲರು. ಇದರಿಂದ ನಾವು, ಹೊಸ ಒಡಂಬಡಿಕೆಯ ಆದಿಸಭೆಯ ವಿಶ್ವಾಸಿಗಳು ಜನರಿಗೆ ಸುವಾರ್ತೆಸಾರಲು ಮತ್ತು ಶಿಷ್ಯರನ್ನಾಗಿ ಮಾಡಲು ಕಾರಣರಾದರು ಎಂದು ತಿಳಿದುಕೊಳ್ಳುತ್ತೇವೆ*

8. ಅಪೊಸ್ತಲರ ಕೃತ್ಯಗಳು 11:19–22 ಓದಿರಿ. ಹೊಸ ಒಡಂಬಡಿಕೆಯ ಆದಿಸಭೆಯಲ್ಲಿ, ವಿಶ್ವಾಸಿಗಳು ಸುವಾರ್ತಾಸೇವೆ ಮಾಡಿದರು ಮತ್ತು ಅದು ಅಪೊಸ್ತಲರ ನಾಯಕತ್ವ ಮತ್ತು ಮಾರ್ಗದರ್ಶನದ ಅಡಿಯಲ್ಲಿ ಮುಂದುವರೆಯಿತು. ನಮ್ಮ ಇಂದಿನ ಸಭೆಗಳಲ್ಲಿ ನಾಯಕತ್ವವು ಎಲ್ಲವನ್ನು ಪ್ರಾರಂಭಿಸುತ್ತದೆ ಮತ್ತು ವಿಶ್ವಾಸಿಗಳು ಅದನ್ನು ಮುಂದುವರಿಸುತ್ತಾರೆ. ಅಪೊಸ್ತಲರ ಕೃತ್ಯಗಳು 11:19–22 ಈ ಮಾತನ್ನು ಹೇಗೆ ಸಮರ್ಥಿಸುತ್ತದೆ?

*ಜನರು ರಕ್ಷಣೆ ಹೊಂದಿ ವಿಶ್ವಾಸಕ್ಕೆ ಬಂದರೆಂದು ಸಭೆಯು ತಿಳಿದು ಅವರಿಗೆ ಸಹಾಯ ಮಾಡಲು ಬಾರ್ನಬನನ್ನು ಕಳುಹಿಸಿದರು (ವಚನ 22)*

9. 1 ಕೊರಿಂಥದವರಿಗೆ 12:14–18 ಓದಿರಿ. ಕ್ರಿಸ್ತನ ದೇಹದ ಪ್ರತಿಯೊಂದು ಅಂಗವು ಬಹಳ ಮುಖ್ಯವಾಗಿದೆ. ನಾವು ನಮ್ಮನಮ್ಮಲ್ಲಿ ಪರಸ್ಪರರೊಂದಿಗೆ ಹೋಲಿಸಿಕೊಳ್ಳಬಾರದು. ಕ್ರಿಸ್ತನಿಗೆ ಸಂಪೂರ್ಣ ಸಮರ್ಪಣೆ ಮಾಡಿಕೊಂಡವರಲ್ಲಿ ಒಬ್ಬರೇ ಎಲ್ಲವನ್ನು ಮಾಡಬೇಕಾಗಿಲ್ಲ ಬದಲಿಗೆ ದೇವರು ನಿಮಗೆ ಯಾವ ಸಾಮರ್ಥ್ಯವನ್ನು ಕೊಟ್ಟಿದ್ದಾನೋ ಅದನ್ನು ಮಾಡಿದರೆ ಸಾಕು. ಈ ಪಾಠದಲ್ಲಿ ನಿಮಗೆ ದೊರೆತ ಮಾಹಿತಿಯನ್ನು ತಕ್ಕೊಂಡು ನೀವು ಏನು ಮಾಡುತ್ತೀರಿ?

*ನನ್ನ ವರಗಳನ್ನು ಇತರರಿಗೆ ಸಹಾಯ ಮಾಡಲು ಉಪಯೋಗಿಸುವ ಬಯಕೆ ಇದೆ*

# CONTACT DETAILS

## INDIA

www.awmindia.net        info@awmindia.net

**Locations:**

**Hyderabad**

42-343/1/188, Near Flora Hotel, Maruthi Nagar

A S Rao Nagar, Hyderabad 500 040, INDIA.

Ph: (040) 4028 0718

**Chennai**

72-D, Nandhini Mahal, I Floor, Velachery Main Road

Velachery, Chennai  600 042, INDIA.

Ph: (044) 4202 1820

**Mumbai**

Bethel, Plot No 305/E, Mith Chowky, Near Girdhar Park

Malad (W), Mumbai  400 064, INDIA.

Ph: +91 8976549515

**Delhi**

Phone: +91 9560591787

**USA**

Andrew Wommack Ministries Inc.

PO Box 3333, Colorado Springs CO 80934-3333

www.awmi.net

**UK**

Andrew Wommack Ministries - Europe

PO Box 4392, Walsall, WS1 9AR, ENGLAND

www.awme.net

# Charis Bible Colleges

And the things that thou hast heard of me among many witnesses, the same commit thou to faithful men, who shall be able to teach others also. 2 Tim 2:2




The Lord led Andrew to start Charis Bible College (CBC) to equip the saints for the work of ministry with a profound message emphasizing God's Unconditional Love and the balance of Grace and Faith. CBC equips the students giving them rich teaching of God's Word as well as practical hands-on ministry experience.
CBC is not just another bible college, it's a school for life! It is for people from all walks of life whether you are a preacher, businessman, mum, dad or grandparent.
There are three course options to match your own schedule: Full Time, Part Time and Correspondence. In Full Time, you can fully immerse yourself in the Word for 8 months in a grace-filled family atmosphere, or join Part Time on weekends, or study the CBC material at home through Correspondence!
*We invite you to take the step of faith and join our CBC family !*

Contact us for further information:
**Chennai:** Ph: (044)-4202 1820

**Hyderabad:** Ph: (040)- 40280718

**Mumbai:** Ph: +91 8976549515

**Delhi:** Ph: +91 9560591787

info@awmindia.net www. charisbiblecollegeindia.org